# ಹಕ್ಕು – ಹಂಗು

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ - ಕನ್ನಡಿಗ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡದ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು

ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳೆವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಪ್ರಸ್ತುತ ಕೃತಿಯಲ್ಲಿ ಟಿ.ಆರ್. ಚಂದ್ರಶೇಖರ ಅವರು ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಸೈದ್ಧಾಂತಿಕ ಸಂಗತಿಗಳನ್ನು ಚರ್ಚಿಸಿದ್ದಾರೆ. ತಮ್ಮ ಚರ್ಚೆಗೆ ಕರ್ನಾಟಕದ ಅಭಿವೃದ್ಧಿ ಅನುಭವಗಳನ್ನು ಬಳಸಿಕೊಂಡಿದ್ದಾರೆ. ಅಭಿವೃದ್ಧಿಯ ವಿದ್ಯಾರ್ಥಿಗಳಿಗೆ ಈ ಕೃತಿಯು ತುಂಬಾ ಉಪಯುಕ್ತವಾಗುತ್ತಿದೆಯೆಂದು ಭಾವಿಸಲಾಗಿದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ, ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

# ಕೃತಜ್ಞತೆ

ಈ ಕೃತಿಯ ಸಿದ್ಧತೆಯಲ್ಲಿ ಅನೇಕರು ನೆರವು ನೀಡಿದ್ದಾರೆ. ಕೆಲವರು ಪರೋಕ್ಷವಾಗಿ ಕಾರಣಕರ್ತರಾಗಿದ್ದಾರೆ. ಮೊದಲನೆಯದಾಗಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ವಾತಾವರಣವಿದೆ. ಅದಿಲ್ಲದಿದ್ದರೆ ನನಗೆ ಇದನ್ನು ಸಿದ್ಧಪಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ವಿವಿಗೆ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಎರಡನೆಯದಾಗಿ ನನ್ನ ವಿಭಾಗದ ಸಹೋದ್ಯೋಗಿಗಳು ನೇರವಾಗಿಯಲ್ಲದಿದ್ದರೂ ಕಮ್ಮಟಗಳಲ್ಲಿ, ವಿಭಾಗದ ಸಭೆಗಳಲ್ಲಿ, ಅನೌಪಚಾರಿಕವಾಗಿ ಒಟ್ಟಿಗೆ ಕೂಡಿದಾಗ ಚರ್ಚೆ ಮಾಡುವುದರ ಮೂಲಕ ನನ್ನ ತಿಳುವಳಿಕೆ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ. ಅದರಿಂದ ನಾನು ಅನೇಕ ಪಾಠ ಕಲಿತ್ತಿದ್ದೇನೆ. ಅವರೆಲ್ಲರಿಗೂ ನನ್ನ ನಮನಗಳನ್ನು ಅರ್ಪಿಸುತ್ತೇನೆ. ಮೂರನೆಯದಾಗಿ ನನ್ನ ಸಹೋದ್ಯೋಗಿಯೂ ಮತ್ತು ಪಿಎಚ್.ಡಿ. ವಿದ್ಯಾರ್ಥಿಯೂ ಆದ ಶ್ರೀ ಜನಾರ್ಧನ ಅವರು ಬೇರೆ ಬೇರೆ ರೀತಿಯಲ್ಲಿ ಇಲ್ಲಿನ ಪ್ರಬಂಧಗಳ ಸಿದ್ಧತೆಯಲ್ಲಿ ಕಾಣಿಕೆ ನೀಡಿದ್ದಾರೆ. ನನಗೆ ಅಗತ್ಯವಾದ ಮಾಹಿತಿಯನ್ನು ಕಲೆಹಾಕಿ ಕೊಟ್ಟಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ನಾಲ್ಕನೆಯದಾಗಿ ಇಲ್ಲಿನ ಪ್ರಬಂಧಗಳು ಬೇರೆ ಬೇರೆ ಸಂದರ್ಭಗಳಲ್ಲಿ ವಿಭಾಗದ ಯೋಜನೆಗಳಿಗಾಗಿ, ವಿಚಾರ ಸಂಕಿರಣಗಳಿಗಾಗಿ, ಕಮ್ಮಟಗಳಿಗಾಗಿ, ನಿಯತ ಕಾಲಿಕೆಗಳಿಗಾಗಿ ಬರೆಯಲಾಗಿದೆ. ಆದರೆ ಅವು ಮುಂದೆ ಅನೇಕ ತಿದ್ದುಪಡಿಗೆ, ಪರಿಷ್ಕಾರಕ್ಕೆ ಒಳಗಾಗಿವೆ. ಈ ರೀತಿಯಲ್ಲಿ ಅಧ್ಯಯನ ಕೈಗೊಳ್ಳಲು ಅನುವು ಮಾಡಿಕೊಟ್ಟ ನಮ್ಮ ವಿಶ್ವವಿದ್ಯಾಲಯಕ್ಕೆ, ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿನ ವಿದ್ವಾಂಸರಿಗೆ, ನಿಯತಕಾಲಿಕೆಗಳ ಸಂಪಾದಕರಿಗೆ, ಸಂಶೋಧನಾ ಸಂಸ್ಥೆಗಳಿಗೆ ನನ್ನ ನಮನಗಳು.

ಐದನೆಯದಾಗಿ ನನ್ನ ಕೃತಿಗಳಿಗೆ ಅಗತ್ಯವಾದ ಮೌಲ್ಯಮಾಪನ ವರದಿಗಳನ್ನು ಸಮಯಕ್ಕೆ ಸರಿಯಾಗಿ ನೀಡಿದ ಮೌಲ್ಯಮಾಪಕ ವಿದ್ವಾಂಸರಿಗೆ ನನ್ನ ವಂದನೆಗಳು ಸಲ್ಲಬೇಕು. ಈ ಕೃತಿಯನ್ನು ಅಂದವಾಗಿ ಮುದ್ರಿಸಿ ಪ್ರಕಟಿಸುತ್ತಿರುವ ನಮ್ಮ ಪ್ರಸಾರಾಂಗದ ನಿರ್ದೇಶಕರಿಗೆ, ಪುಸ್ತಕ ವಿನ್ಯಾಸ ಮಾಡಿಕೊಟ್ಟ ಸುಜ್ಞಾನಮೂರ್ತಿ ಅವರಿಗೆ, ಮುಖಪುಟ ಮಾಡಿಕೊಟ್ಟ ಕಲಾವಿದ ಕೆ.ಕೆ. ಮಕಾಳಿ ಅವರಿಗೆ, ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀಮತಿ ಎ. ನಾಗವೇಣಿ, ಪುಟವಿನ್ಯಾಸ ಮಾಡಿಕೊಟ್ಟ ಶ್ರೀ ಜೆ. ಶಿವಕುಮಾರ್ ಅವರಿಗೆಲ್ಲ ನಾನು ಆಭಾರಿಯಾಗಿದ್ದೇನೆ.

ನನ್ನ ಅಧ್ಯಯನ ಕಾರ್ಯದ ಹಿಂದೆ ಸದಾ ಶಕ್ತಿಯಾಗಿ ನಿಂತು ಪ್ರೋತ್ಸಾಹ ಮತ್ತು ಪ್ರಶಂಸೆ ನೀಡುತ್ತಿರುವ ಮಾನ್ಯ ಕುಲಪತಿ ಅವರಿಗೆ ಮತ್ತು ಮಾನ್ಯ ಕುಲಸಚಿವರಿಗೆ ನಾನು ನನ್ನ ನಮನಗಳನ್ನು ಸಲ್ಲಿಸುತ್ತೇನೆ.

**ಟಿ.ಆರ್. ಚಂದ್ರಶೇಖರ**

ಸಂಕ್ರಾಂತಿ

ವಿದ್ಯಾರಣ್ಯ

# ಪ್ರಸ್ತಾವನೆ

ಅಭಿವೃದ್ಧಿ ಅಧ್ಯಯನ ಪ್ರಬಂಧಗಳ ಪ್ರಸ್ತುತ ಸಂಕಲನ 'ಹಕ್ಕು ಮತ್ತು ಹಂಗು' ನಲ್ಲಿ ಒಟ್ಟು ಹತ್ತು ಪ್ರಬಂಧಗಳಿವೆ. ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಸೈದ್ಧಾಂತಿಕ ಸಂಗತಿಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ. ಈ ಕೃತಿಯ ಶೀರ್ಷಿಕೆ ಬಗ್ಗೆ ಎರಡು ಮಾತುಗಳನ್ನು ಇಲ್ಲಿಯೇ ಹೇಳಿಬಿಡಬಹುದೆಂದು ಕಾಣುತ್ತದೆ. ಇಲ್ಲಿನ ಎಲ್ಲ ಪ್ರಬಂಧಗಳ ಹಿಂದಿರುವ ಸೈದ್ಧಾಂತಿಕ ಚೌಕಟ್ಟನ್ನು ಅದು ನಿರ್ದೇಶಿಸುತ್ತದೆ. ನಮ್ಮ ಸಮಾಜದ ಸಂದರ್ಭದಲ್ಲಿ ಹಕ್ಕಿನ ಪರಿಭಾಷೆಗಿಂತ ಹಂಗಿನ ಪರಿಭಾಷೆಗೆ ಹೆಚ್ಚಿನ ಮನ್ನಣೆಯಿದೆ. ಇದಕ್ಕೆ ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ, ಚಾರಿತ್ರಿಕ ಕಾರಣಗಳಿರಬಹುದು. ಆದರೆ ಇದಕ್ಕೆ ಕಾರಣವಾಗಿರುವ ಬಹು ಮುಖ್ಯ ಸಂಗತಿಯೆಂದರೆ ನಮ್ಮ ಪರಂಪರೆ. ಪರಂಪರೆಯು ಕೇವಲ ಅನುಕರಣೀಯ ಮತ್ತು ಉನ್ನತವಾದ ಸಂಗತಿಗಳನ್ನು ಮಾತ್ರ ಒಳಗೊಂಡಿಲ್ಲ. ಅದರಲ್ಲಿ ಅನೇಕ ಅನಿಷ್ಟಕಾರಿ ಮತ್ತು ಅಪಾಯಕಾರಿಯಾದ ಆಚರಣೆಗಳೂ ಇರಲು ಸಾಧ್ಯ. ಅಂತಹ ಒಂದು ಅನಿಷ್ಟಕಾರಿ ಸಂಗತಿಯೆಂದರೆ ಹಂಗಿನ ಸಂಸ್ಕೃತಿ, ದಾನ, ದಕ್ಷಿಣೆ, ದತ್ತಿ, ಉಂಬಳಿ ಮುಂತಾದವುಗಳನ್ನು ನಮ್ಮ ಸಮಾಜದಲ್ಲಿ ವೈಭವೀಕರಿಸಿಕೊಂಡು ಬರಲಾಗಿದೆ. ಅಭಿವೃದ್ಧಿಯೆನ್ನುವುದನ್ನು ಹಂಗಿನ ಸಂಗತಿಯನ್ನಾಗಿ ಪರಿಭಾವಿಸಿಕೊಂಡಿರುವುದಕ್ಕೆ ನಮಗೆ ಪುರಾವೆಗಳು ದೊರೆಯುತ್ತವೆ. ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮವೆಂದು ಹೇಳಿಕೊಂಡು ಅವರಿಗೆ ಉಚಿತವಾಗಿ ಸೀರೆ ಕೊಡುವ ಸರ್ಕಾರದ ಕ್ರಮವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಉಚಿತ ವೈದ್ಯಕೀಯ ಶಿಬಿರವೆಂದು ಹೇಳಿಕೊಂಡು ಸರ್ಕಾರದ ಕಾರ್ಯಕ್ರಮವನ್ನು ದತ್ತಿ - ಧರ್ಮದ ಕಾರ್ಯಕ್ರಮವನ್ನಾಗಿ, ಸ್ವಂತದ ಕಾರ್ಯಕ್ರಮಗಳನ್ನಾಗಿ ಎತ್ತಾಕಿಕೊಳ್ಳುವ ಜನಪ್ರತಿನಿಧಿಗಳ ಕ್ರಮಗಳನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಮಳೆಯು ಅಭಾವವಾದಾಗ, ಅದು ಕಾಲಕ್ಕೆ ಸರಿಯಾಗಿ ಬಾರದಿದ್ದಾಗ ಗುಡಿ - ಗುಂಡಾರಗಳಲ್ಲಿ ಸರ್ಕಾರವು ಪೂಜೆ - ಆರಾಧನೆ - ಅಭಿಷೇಕ ಮಾಡಿಸಿದರೆ ಅದನ್ನು ಹೇಗೆ ವಿವರಿಸುವುದು? ದೇವಾಲಯಗಳಿಗೆ ಭೇಟಿಕೊಡುವುದು, ಯಜ್ಞ - ಯಾಗ, ಹೋಮ - ಹವನ ಮಾಡುವುದೇ ಸರ್ಕಾರದ ಮುಂದಾಳುಗಳಿಗೆ ಕೆಲಸವಾಗಿ ಬಿಟ್ಟರೆ ಆಡಳಿತ - ಅಭಿವೃದ್ಧಿಯ ಕಥೆಯೇನು? ಅದು ಯಾವ ಬಗೆಯ ಸಂದೇಶವನ್ನು ಜನತೆಗೆ ನೀಡುತ್ತದೆ ಎಂಬುದರ ಬಗ್ಗೆ ನಾವು ಯೋಚಿಸಬೇಕಲ್ಲವೆ? ವೈಯಕ್ತಿಕ ನಂಬಿಕೆಗಳು ಬೇರೆ. ಸಾರ್ವಜನಿಕ ಜವಾಬುದಾರಿಯ ನಿರ್ವಹಣೆ ಬೇರೆ. ವಾಸ್ತವವಾಗಿ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ 'ಕಲ್ಯಾಣವಾದಿ' ದೃಷ್ಟಿಕೋನವನ್ನು ಬಿಟ್ಟು ಅನೇಕ ದಶಕಗಳೇ ಆಗಿವೆ. ಆದರೂ ಸರ್ಕಾರಗಳು ಮತ್ತು ಜನಪ್ರತಿನಿಧಿಗಳು ಅಂತಹ ನೆಲೆಯಲ್ಲಿ ಅಭಿವೃದ್ಧಿಯನ್ನು ನಿರ್ವಹಿಸಲು ಉತ್ಸುಕರಾಗಿರುವುದು ಕಂಡುಬರುತ್ತದೆ. ಎರಡನೆಯದಾಗಿ ಅಭಿವೃದ್ಧಿಯನ್ನು ಪರಮಾರ್ಥದ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವೂ ವ್ಯಾಪಕವಾಗಿದೆ. ಹಂಗಿನ ಸಂಸ್ಕೃತಿಯ ಮೆರೆದಾಟಕ್ಕೆ ಇದು ಮತ್ತೊಂದು ಕಾರಣವಾಗಿದೆ. ಈ ಬಗೆಯ ಪರಮಾರ್ಥದ ಮೆರೆದಾಟ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಅತಿಯಾಗಿದೆ. ಅಭಿವೃದ್ಧಿಯು ಮೂಲತಃ ಪದಾರ್ಥವಾದಿಯಾದುದು ಮತ್ತು ಅದು ಜನರ ಹಕ್ಕೇ ವಿನಾ ದತ್ತಿ ಅಥವಾ ಉಂಬಳಿಯಲ್ಲ. ಪದಾರ್ಥವಾದಿತ್ವದ ಮಿತಿಗಳ ಬಗ್ಗೆ ನನಗೆ ಅರಿವಿದೆ. ಅದರಿಂದ ಮಾತ್ರವೇ ಜನರಿಗೆ ಸುಖಮಯ ಬದುಕು ಸಾಧ್ಯವಿಲ್ಲ. ಆದರೆ ಪರಮಾರ್ಥವಾದಿತ್ವಕ್ಕೆ ಯಾವುದೇ ಸಮರ್ಥನೆ ಸಾಧ್ಯವಿಲ್ಲ. ಪ್ರಸ್ತುತ ಕೃತಿಯಲ್ಲಿನ ಪ್ರಧಾನ ಸೈದ್ಧಾಂತಿಕ ನೆಲೆಗಟ್ಟೆಂದರೆ ಅಭಿವೃದ್ಧಿಯನ್ನು ಹಕ್ಕುಗಳ ಪರಿಭಾಷೆಯಲ್ಲಿ

ಪರಿಭಾವಿಸಿಕೊಂಡಿರುವುದು. ಈ ಕಾರಣದಿಂದ ಈ ಕೃತಿಯ ಶೀರ್ಷಿಕೆಯನ್ನು 'ಹಕ್ಕು - ಹಂಗು' ಎಂದು ಕರೆಯಲಾಗಿದೆ. ಹಂಗಿನ ಸಂಸ್ಕೃತಿಯು ಹಕ್ಕಿನ ಸಂಸ್ಕೃತಿಯಾಗಿ ಪರಿವರ್ತನೆಯಾಗುವ ಪ್ರಕ್ರಿಯೆಯೇ ಅಭಿವೃದ್ಧಿ.

ಈ ವಿಷಯ ಕುರಿತಂತೆ ಅಲ್ಲಪ್ರಭುವಿನ ವಚನವೊಂದು ನಮಗೆ ಹೊಸ ಬೆಳಕನ್ನು ನೀಡಬಲ್ಲದು.

*ಅಂಗವಿಡಿದು ಅರಿವ ಅರಿವು ಅರಿವಲ್ಲದೆ*
*ಗುರುವಿಡಿದು ಅರಿವ ಅರಿವು ಅರಿವಲ್ಲ.*
*ಗುರುವಿಡಿದು ಲಿಂಗವುಂಟೆಂಬುದು ಕಲ್ಪಿತ*
*ತನ್ನಿಂದ ತಾನಹುದಲ್ಲದೆ*
*ಗುಹೇಶ್ವರ ಲಿಂಗದಲ್ಲಿ ಹಂಗು ಹರಿಯದನ್ನಕ್ಕರ*
*ತಾನಾಗಬಾರದ ಕಾಣಾ.* (ಸ.ವ. ಸಂ: ೭೧೯).

ಅಲ್ಲಮನ ಪ್ರಕಾರ ಹಂಗಿನ ಬದುಕಿನಲ್ಲಿ ದೇವರ ಅನುಗ್ರಹ ಸಿಗುವುದಿಲ್ಲ. ತನ್ನಿಂದ ತಾನಾದಾಗ ಮಾತ್ರ ಗುಹೆಶ್ವರ ಕೃಪೆ ಸಾಧ್ಯ. ಅದೇ ರೀತಿಯಲ್ಲಿ ಹಂಗಿನ ಬದುಕಿನಿಂದ ಮುಕ್ತಿ ಪಡೆಯದ ಹೊರತು ಬದುಕು ಸಮೃದ್ಧವಾಗುವುದಿಲ್ಲ. ವಚನದ 'ಹಂಗು ಹರಿಯದನ್ನಕ್ಕರ' ಎಂಬ ನುಡಿಯಲ್ಲಿ ಈ ಅರ್ಥವನ್ನು ಗುರುತಿಸಿಕೊಳ್ಳಬಹುದು. ಈ ವಚನವು ಪರಮಾರ್ಥವನ್ನು ನಿರಾಕರಿಸುತ್ತಿದೆ. ಏಕೆಂದರೆ ಇಲ್ಲಿ ಲೌಕಿಕವಾದ ಸಂಗತಿಗಳ ಮೂಲಕವೇ ಅರಿವನ್ನು ಪಡೆಯಬೇಕು. ಪರಮಾರ್ಥದಿಂದ ಅದು ದೊರೆಯುವುದಿಲ್ಲ. ಗುರುವಿನ ಪಾತ್ರವನ್ನೇ ಲ್ಲಿ ತಿರಸ್ಕರಿಸಲಾಗಿದೆ. ಸ್ವಂತದ ಪರಿಶ್ರಮಕ್ಕೆ ಇಲ್ಲಿ ಆದ್ಯತೆಯನ್ನು ನೀಡಲಾಗಿದೆ. ಈ ಅರ್ಥ ವಚನದ 'ಅಂಗವಿಡಿದು' ಎಂಬ ನುಡಿಯಲ್ಲಿ ಸ್ಪಷ್ಟವಾಗಿದೆ. ಅಭಿವೃದ್ಧಿಯನ್ನು ಹಕ್ಕಿನ ಪರಿಭಾಷೆಯಲ್ಲಿ ಪರಿಭಾವಿಸಿಕೊಳ್ಳಬೇಕೆಂದು ಪ್ರತಿಪಾದಿಸಿದಾಗ ಅದಕ್ಕೆ ಶಾಸನದ ಅಧಿಕೃತವಾದ ಮನ್ನಣೆಯು ಇರಲೇಬೇಕೆಂಬುದೇನಿಲ್ಲ.

ಇದೇ ಅರ್ಥ ಬರುವ ಬಸವಣ್ಣನ ವಚನವೊಂದು ನಮಗೆ ನಿಗಿನಿಗಿಯಾದ ಸ್ವಾವಲಂಬಿ ಬದುಕಿಗೆ ಉದಾಹರಣೆಯಾಗಬಹುದು.

*ಕಾಯುದ ಕಳವಳಕ್ಕಂಜಿ 'ಕಾಯಯ್ಯಾ', ಎನ್ನೆನು*
*ಜೀವನೋಪಾಯಕ್ಕಾಗಿ 'ಈಯಯ್ಯಾ', ಎನ್ನೆನು.*
*ಉರಿ ಬರಲಿ, ಸಿರಿ ಬರಲಿ, ಬೇಕು ಬೇಡೆನ್ನನಯ್ಯಾ*
*ಆ ನಿಮ್ಮ ಹಾರೆನು: ಮಾನವರ ಬೇಡೆನು*
*ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ.*

ಯಾವ ಕಾರಣಕ್ಕೂ ಬೇಡಿ ಬದುಕುವುದಿಲ್ಲ. ಇದು ಬಸವನ ನಿರ್ಧಾರ. ಇದು ನಮಗೆ ದಾರಿದೀಪ. ಇದು ನಮ್ಮ ಹಕ್ಕು.

ಶಾಸನಾತ್ಮಕವಾದುದು ಮಾತ್ರ ಹಕ್ಕು ಎಂಬ ವಾದವನ್ನು ಒಪ್ಪುವ ಅಗತ್ಯವೇನಿಲ್ಲ. ಶಾಸನದ ಬೆಂಬಲವಿಲ್ಲದ್ದು ಹಕ್ಕಾಗಬಹುದು. ಈ ನೆಲೆಯಲ್ಲಿನ ಇಲ್ಲಿನ ಪ್ರಬಂಧಗಳನ್ನು ರೂಪಿಸಲಾಗಿದೆ. ಹಕ್ಕು ಎಂಬುದು ನೈತಿಕ ನಂಬಿಕೆ. ಅದೊಂದು ನೈತಿಕ ಪ್ರಣಾಳಿಕೆ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಗೌರವ ನೀಡಬೇಕೆಂಬುದಕ್ಕೆ ಯಾವ ಶಾಸನ ಬೇಕು?

ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳ ಬಗ್ಗೆ ಇಲ್ಲಿ ಟೀಕೆಯಿದೆ. ಅದಕ್ಕೆ ಪರ್ಯಾಯವಲ್ಲದಿದ್ದರೂ ಅದರ ಮಿತಿಗಳನ್ನು ಭರಿಸಬಲ್ಲ ಮಾನವ ಅಭಿವೃದ್ಧಿ ಪ್ರಣಾಳಿಕೆಯನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ಚರ್ಚೆಯನ್ನು ಬೆಳೆಸಲಾಗಿದೆ. ಇಲ್ಲಿ ಮೌಲ್ಯ ನಿರಪೇಕ್ಷತೆಯನ್ನು

ಪ್ರಜ್ಞಾಪೂರ್ವಕವಾಗಿ ತಿರಸ್ಕರಿಸಲಾಗಿದೆ. ಆದ್ದರಿಂದ ಸಹಜವಾಗಿ ಇಲ್ಲಿನ ಪ್ರಬಂಧಗಳು ಲಿಂಗ ಸಾಪೇಕ್ಷವಾಗಿವೆ - ಲಿಂಗ ಸ್ಪಂದಿಯಾಗಿವೆ. 'ಅಭಿವೃದ್ಧಿ ಮೀಮಾಂಸೆ' ಎಂಬ ಮೊದಲನೆಯ ಪ್ರಬಂಧದಲ್ಲಿ ಈ ಬಗೆಯ ಚರ್ಚೆಯನ್ನು ಕಾಣಬಹುದು.

ಎರಡನೆಯ ಅಧ್ಯಯನ ಪ್ರಬಂಧದಲ್ಲಿ ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕವು ಸಾಧಿಸಿರುವ ಸಾಧನೆ - ವೈಫಲ್ಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಇಲ್ಲಿನ ಎಲ್ಲ ಪ್ರಬಂಧಗಳೂ ಪ್ರಾದೇಶಿಕತೆಯ ಹರವನ್ನು ಹೊಂದಿದ್ದಾನೆ. ವರಮಾನ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧಿಸಿಕೊಂಡ ಸಾಧನೆಯು ಯಾಕೆ ಜನರ ಬದುಕನ್ನು ಸಮೃದ್ಧಿಗೊಳಿಸಲು ಸಾಧ್ಯವಿಲ್ಲ ಮತ್ತು ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ಅಭಿವೃದ್ಧಿಯು ಯಾಕೆ ಜನರ ಬದುಕನ್ನು ಸಮೃದ್ಧಗೊಳಿಸುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಕರ್ನಾಟಕವು ಮಾನವ ಅಭಿವೃದ್ಧಿಯಲ್ಲಿ ಸಾಧಿಸಿಕೊಂಡಿರುವ ಸಾಧನೆಯನ್ನು ಜಿಲ್ಲಾವಾರು ಇಲ್ಲಿ ಚರ್ಚಿಸಲಾಗಿದೆ.

ಕರ್ನಾಟಕವು ಅಸ್ತಿತ್ವಕ್ಕೆ ಬಂದು ೨೦೦೬ ಕ್ಕೆ ಐವತ್ತು ವರ್ಷಗಳು ತುಂಬಿದವು. ಆ ಸಂದರ್ಭದಲ್ಲಿ ಸರ್ಕಾರವು ಏಕೀಕರಣದ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಆದರೆ ಅದನ್ನು ಅಲ್ಲಿ ಕೇವಲ ಭಾಷೆಗೆ ಸೀಮಿತಗೊಳಿಸಿಕೊಂಡಿದ್ದು ಮಾತ್ರ ವಿಚಿತ್ರವಾಗಿ ಕಂಡು ಬಂತು. ಕರ್ನಾಟಕದ ಸಾಧನೆಯನ್ನು ಅರ್ಥ, ಸಮಾಜ ಮತ್ತು ರಾಜಕಾರಣಗಳ ನೆಲೆಯಿಂದ ಮೌಲ್ಯಮಾಪನ ಮಾಡಬಹುದಾಗಿದ್ದ ಒಂದು ಸಂದರ್ಭವನ್ನು ರಾಜ್ಯ ಕಳೆದುಕೊಂಡಿತು. ಈ ಸಂಕಲನದ ಮೂರನೆಯ ಪ್ರಬಂಧದಲ್ಲಿ ಕರ್ನಾಟಕವು ೧೯೫೬ ರಿಂದ ೨೦೦೬ ರವರೆಗೆ ಸಾಧಿಸಿಕೊಂಡಿರುವ ಯಶಸ್ಸನ್ನು ದಾಖಲಿಸಲು ಪ್ರಯತ್ನಿಸಲಾಗಿದೆ.

ಇಲ್ಲಿನ ನಾಲ್ಕನೆಯ ಪ್ರಬಂಧದಲ್ಲಿ ಬುಡಕಟ್ಟು ಅಭಿವೃದ್ಧಿಯ ವಿವಿಧ ಮುಖಗಳನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಬುಡಕಟ್ಟು ಸಮುದಾಯದ ಅಭಿವೃದ್ಧಿ ಕುರಿತಂತೆ ಇರುವ ಒಂದು ಬಹುಮುಖ್ಯವಾದ ಸಮಸ್ಯೆಯೆಂದರೆ ಅವರನ್ನು ಸಮಾಜದ ಅಭಿವೃದ್ಧಿಯ ಪ್ರಧಾನಧಾರೆಯಲ್ಲಿ ವಿಲೀನಗೊಳಿಸಬೇಕೋ ಅಥವಾ ಅವರ ಅನನ್ಯತೆಯನ್ನು, ಸಾಂಸ್ಕೃತಿಕ ವಿಭಿನ್ನತೆಯನ್ನು ರವಷ್ಟೂ ಮುಕ್ಕಾದದಂತೆ ಕಾಯ್ದು ಕೊಳ್ಳಬೇಕೋ ಎಂಬುದಾಗಿದೆ. ಮತ್ತೊಂದು ಸಮಸ್ಯೆಯೆಂದರೆ ಅವರ ಸಾಮುದಾಯಿಕ ವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕೋ ಅಥವಾ ಅವರನ್ನು ನಮ್ಮ ಸಂವಿಧಾನಿಕ ವ್ಯವಸ್ಥೆಯೊಳಗೆ ವೈಯುಕ್ತಿಕ ಸ್ವಾತಂತ್ರ್ಯ - ಸಮಾನತೆ - ಸ್ವಾಯತ್ತತೆಯ ಚೌಕಟ್ಟಿನಲ್ಲಿ ಸಮ್ಮಿಳನ ಗೊಳಿಸಬೇಕೋ ಎಂಬುದಾಗಿದೆ. ಮೊದಲನೆಯದಕ್ಕೆ ಸಂಬಂಧಿಸಿದಂತೆ ಇದು ಬೇಕು ಅದು ಬೇಡ ಎಂಬ ಸಂಗತಿಯನ್ನು ಬಿಟ್ಟು ಇವೆರಡನ್ನೂ ಸಂಯೋಜಿಸುವ ಬಗ್ಗೆ ಯೋಚಿಸುವ ಅಗತ್ಯವನ್ನು ಇಲ್ಲಿನ ಟಿಪ್ಪಣಿಗಳಲ್ಲಿ ಪ್ರತಿಪಾದಿಸಲಾಗಿದೆ. ಎರಡನೆಯ ಪ್ರಶ್ನೆಯ ಬಗ್ಗೆಯೂ ಅಷ್ಟೇ. ಸಾಮುದಾಯಿಕ ಸೂತ್ರಗಳು ಸಂವಿಧಾನಿಕ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ದಕ್ಕೆಯೊದಗಿಸಿದಂತೆ ಇದ್ದರೆ ಅದನ್ನು ಉಳಿಸಿಕೊಂಡು, ಸ್ವಾಯತ್ತತೆಯನ್ನು ಕಾಪಾಡಿಕೊಂಡು ಅವರ ಅಭಿವೃದ್ಧಿಯನ್ನು ನಿರ್ವಹಿಸಬಹುದು. ಆದರೆ ಸಮಸ್ಯೆಯೆಲ್ಲಿದೆಯೆಂದರೆ ಬುಡಕಟ್ಟು ಸಮುದಾಯವನ್ನು ಅಭಿವೃದ್ಧಿಯ ದೃಷ್ಟಿಯಿಂದ ಮೂಲೆಗುಂಪು ಮಾಡಿರುವುದರಲ್ಲಿದೆ. ಅವರನ್ನು ಅಭಿವೃದ್ಧಿಯ ದೃಷ್ಟಿಯಿಂದ ಮೂಲೆಗುಂಪು ಮಾಡಿರುವುದರಲ್ಲಿದೆ. ಅವರನ್ನು ಅಭಿವೃದ್ಧಿಯ ಪ್ರಧಾನ ಧಾರೆಯಲ್ಲಿ ಸಂಯೋಜಿಸುವ ಹೆಸರಿನಲ್ಲಿ ಅವರ ಜಮೀನನ್ನು ಉಳಿದವರು ಲಪಟಾಯಿಸುವ ದಂದೆಯಲ್ಲಿ, ಅವರ ಅರಣ್ಯಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಕಬಳಿಸುತ್ತಿರುವುದರಲ್ಲಿ ಸಮಸ್ಯೆಯಿದೆ. ಈ ಎಲ್ಲ ಸಂಗತಿಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಇಲ್ಲಿನ ಐದನೆಯ ಪ್ರಬಂಧದಲ್ಲಿ 'ಕರ್ನಾಟಕತ್ವ' ಮೀಮಾಂಸೆಯನ್ನು ಪ್ರತಿಪಾದಿಸಿದ್ದ ಆಲೂರು ವೆಂಕಟರಾಯರ ವಿಚಾರಗಳನ್ನು ಒಂದು ಸೈದ್ಧಾಂತಿಕ ನೆಲೆಯಲ್ಲಿ ಮಂಡಿಸಲಾಗಿದೆ. ಆಲೂರು ವೆಂಕಟರಾಯರ ಕರ್ನಾಟಕತ್ವ ಮೀಮಾಂಸೆಯ ವಿಶಿಷ್ಟತೆಯೆಂದರೆ ಅವರು ಅದನ್ನು ಜಾಗತಿಕ ಮಟ್ಟದಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಿದ್ದು. ಬಹಳ ಮುಖ್ಯವಾಗಿ ಇಲ್ಲಿ ನಾವು ಪರಿಗಣಿಸಬೇಕಾದ ಸಂಗತಿಯೆಂದರೆ ಅವರ ವಿಚಾರವು ಪ್ರಾಂತೀಯತೆಯ ಪೂರ್ವಗ್ರಹವನ್ನು ಮೀರಿದುದಾಗಿತ್ತು. ಕರ್ನಾಟಕತ್ವವೆಂಬುದು ಕೇವಲ ಭಾವನಾತ್ಮಕ ಅಥವಾ ಭಾಷೆಗೆ ಸಂಬಂಧಿಸಿದ ಸಂಗತಿಯಲ್ಲ. ಕರ್ನಾಟಕ ಏಕೀಕರಣವೆಂಬುದು ಮೂಲಭೂತವಾಗಿ ಅಭಿವೃದ್ಧಿಯ ಸಂಗತಿಯಾಗಿತ್ತು. ಆಧುನಿಕತೆಯನ್ನು ಒಪ್ಪಿಕೊಂಡಿದ್ದ ಆಲೂರರು ಅಖಿಲ ಭಾರತ ಮಟ್ಟದಲ್ಲಿ, ಜಾಗತಿಕ ಮಟ್ಟದಲ್ಲಿ ಕರ್ನಾಟಕದ ಅಸ್ತಿತ್ವವನ್ನು ಪ್ರತಿಪಾದಿಸಲು ಪ್ರಯತ್ನಿಸಿದರು.

ಆಲೂರರ ವಿಚಾರಗಳನ್ನು ಇಂದು ಚರ್ಚಿಸುವುದಕ್ಕೆ ಒಂದು ಕಾರಣವಿದೆ. ಅವರು ಕನ್ನಡದ ಪ್ರಾಚೀನ ಕೃತಿಯಾದ ಕವಿರಾಜಮಾರ್ಗದಲ್ಲಿ ಕನ್ನಡ ನಾಡನ್ನು ಹೇಗೆ ಸ್ವತಂತ್ರ ನಾಡನ್ನಾಗಿ ಪರಿಭಾವಿಸಿ ಕೊಳ್ಳಲಾಗಿತ್ತೋ ಅದೇ ರೀತಿಯಲ್ಲಿ ಅವರು ಪರಿಭಾವಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅದನ್ನು ಡಾ. ಡಿ.ಆರ್.ನಾಗರಾಜ್‌ಅವರು ಗುರುತಿಸಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಕರ್ನಾಟಕವು ಹೇಗೆ ತನ್ನ ಅಸ್ತಿತ್ವವನ್ನು ನಾಶ ಮಾಡಿಕೊಳ್ಳದೆ ಭಾರತ ನಾಡಿನ ಭಾಗವಾಗಿ ಹೇಗೆ ಉಳಿದುಕೊಂಡಿದೆ ಮತ್ತು ಅದನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ನಮ್ಮದು ಮೂಲಭೂತವಾಗಿ ಶ್ರೇಣೀಕೃತ ಸಮಾಜ. ಇಲ್ಲಿ ಅಭಿವೃದ್ಧಿಯು ಶ್ರೇಣೀಕರಣಕ್ಕೆ ತಕ್ಕಂತೆ ಸಂಭವಿಸುತ್ತಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಈ ಬಗೆಯ ಶ್ರೇಣೀಕೃತ ಅಭಿವೃದ್ಧಿಯು ಸಂಭವಿಸುತ್ತಿರುವುದಕ್ಕೆ ಮುಖ್ಯ ಕಾರಣವನ್ನು ಇಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಅಸ್ಪೃಶ್ಯತೆಯು ಕಾರಣ ಎಂಬುದನ್ನು ಪ್ರಸಕ್ತ ಕೃತಿಯ ಆರನೆಯ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಅಸ್ಪೃಶ್ಯತೆಯಂತಹ ಆಚರಣೆಯಿಂದಾಗಿ ನಮ್ಮಲ್ಲಿ ಅಭಿವೃದ್ಧಿಯು ದಲಿತರಿಗೆ ಅನುಕೂಲವನ್ನು ಒದಗಿಸುತ್ತಿಲ್ಲ. ಬಹಳ ವಿಚಿತ್ರವಾದ ಸಂಗತಿಯೆಂದರೆ ಇಂದು ಇಂತಹ ಅನಿಷ್ಟಕಾರಿ ಆಚರಣೆಯನ್ನು ತಮ್ಮ ಮಠಕ್ಕೆ ಸಂಬಂಧಿಸಿದಂತೆ ತೊರೆಯುವುದು (ಬಿಟ್ಟುಕೊಡುವುದು) ಸಂಪ್ರದಾಯಕ್ಕೆ ವಿರೋಧವಾಗುತ್ತದೆ ಎಂದು ಹೇಳುತ್ತಾ ಅದನ್ನು ಅಲ್ಲಿ ಆಚರಿಸುತ್ತಿರುವವರೇ ಮತ್ತು ಅದನ್ನು ಮುಗುಮ್ಮಾಗಿ ಸಮರ್ಥಿಸುತ್ತಿರುವವರೇ ಅದರ ವಿರುದ್ಧ ಪಾದಯಾತ್ರೆಯನ್ನು ನಡೆಸುತ್ತಿದ್ದಾರೆ. ಅಂದರೆ ಅಸ್ಪೃಶ್ಯತೆಯಂತಹ ಆಚರಣೆಯನ್ನು ಬಿಡಲಾರದ ಸ್ವಾಮಿಯೊಬ್ಬರು ಅದರ ವಿರುದ್ಧ ಉಪದೇಶ ನೀಡಲು ಹೇಗಾದರೂ ಮುಂದಾದರು ಎಂಬುದು ಅಚ್ಚರಿ ಮೂಡಿಸುತ್ತದೆ. ಆಷಾಡಭೂತಿತನಕ್ಕೆ ಮೇರೆಯೇ ಇಲ್ಲದಂತಾಗಿದೆ. ಈ ಆಚರಣೆಯು ಹೇಗೆ ಅಭಿವೃದ್ಧಿಗೆ ಅಡ್ಡಿಯುಂಟು ಮಾಡಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಅಭಿವೃದ್ಧಿಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಮುಂದಿನ ಏಳನೆಯ ಮತ್ತು ಎಂಟನೆಯ ಪ್ರಬಂಧಗಳಲ್ಲಿ ಕರ್ನಾಟಕವನ್ನು ಕಾಡುತ್ತಿರುವ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ವಿವಿಧ ನೆಲೆಗಳನ್ನು ಅನಾವರಣ ಮಾಡಲಾಗಿದೆ. ಏಳನೆಯ ಪ್ರಬಂಧದಲ್ಲಿ ಅದರ ಚಾರಿತ್ರಿಕ ನೆಲೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಎಂಟನೆಯ ಪ್ರಬಂಧದಲ್ಲಿ ಅದನ್ನು ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು ಹೇಗೆ ಪರಿಭಾವಿಸಿಕೊಂಡಿದೆ ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ. ಇಂದು ಕರ್ನಾಟಕವು ಎದುರಿಸುತ್ತಿರುವ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಗೆ ಚಾರಿತ್ರಿಕ ನೆಲೆಯಿದೆ ಎಂಬುದನ್ನು ತೋರಿಸಲು ಏಳನೆಯ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಸಾಮಾಜಿಕವಾಗಿ ಕಳೆದ ಐವತ್ತು ವರ್ಷಗಳಲ್ಲಿ ಬಂಡವಾಳಶಾಯಿ ವ್ಯವಸ್ಥೆಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಬೇರೂರುವುದರಲ್ಲಿ ಯಶಸ್ವಿಯಾದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಜಮೀನ್ದಾರಿ ಪಾಳೆಗಾರಿಕೆಯು ಗಟ್ಟಿಯಾಗಿ ಮುಂದುವರಿಯುತ್ತಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿನ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿ ಹೈದರಾಬಾದ್ ನಿಜಾಮನ ಸಂಸ್ಥಾನವನ್ನು ಮೂರು ಭಾಷಾ ಪ್ರಾಂತಗಳಲ್ಲಿ ಹಂಚಿದ ಕ್ರಮದಲ್ಲಿದೆ ಎಂಬುದು ಇಲ್ಲಿನ ಪ್ರಮುಖ ಪ್ರತಿಪಾದನೆಯಾಗಿದೆ.

ಪ್ರಾದೇಶಿಕ ಅಸಮಾನತೆಯ ಅಧ್ಯಯನಕ್ಕಾಗಿ ಸರ್ಕಾರವು ನೇಮಿಸಿದ್ದ ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯ ಪ್ರಮಾಣವನ್ನು ಮಾಪನ ಮಾಡಲು ಪ್ರಯತ್ನಿಸಿತು. ಅದಕ್ಕಾಗಿ ಅದು ಹೊಸ ಮಾಪನಗಳನ್ನು ಆವಿಷ್ಕರಿಸಿತು. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಅದು ಅನೇಕ ಶಿಫಾರಸ್ಸುಗಳನ್ನು ನೀಡಿದೆ. ಅವುಗಳ ಸ್ಥೂಲ ವಿವರಗಳನ್ನು ಕೃತಿಯ ಎಂಟನೆಯ ಪ್ರಬಂಧದಲ್ಲಿ ನೀಡಲಾಗಿದೆ.

ಯುಎನ್‌ಡಿಪಿಯು ತನ್ನ ಮಾನವ ಅಭಿವೃದ್ಧಿ ವರದಿಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಮಾಪನ ಮಾಡಿ ಪ್ರಕಟಿಸುತ್ತಿದೆ. ಅದರಲ್ಲಿ ಮೂರು ಸೂಚಿಗಳಿರುತ್ತವೆ. ಮೊದಲನೆಯದು ಆರೋಗ್ಯವಾದರೆ ಎರಡನೆಯದು ಸಾಕ್ಷರತೆ ಮತ್ತು ಶಾಲಾ ದಾಖಲಾತಿಗಳನ್ನೊಳಗೊಂಡ ಶೈಕ್ಷಣಿಕ ಸಾಧನಾ ಸಂಯುಕ್ತ ಸೂಚ್ಯಂಕ. ಅಂದರೆ ಮಾನವ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಸಾಕ್ಷರತೆ ಮತ್ತು

ಶಿಕ್ಷಣವು ಅಭಿವೃದ್ಧಿಯನ್ನು ನಿರ್ಧರಿಸುವ ಸೂಚಿಗಳೂ ಹೌದು, ಅವು ಅಭಿವೃದ್ಧಿಯು ಒಳಗೊಳ್ಳುವ ಸಂಗತಿಗಳೂ ಹೌದು. ಇದಲ್ಲದೆ ಅವು ಅಭಿವೃದ್ಧಿಯ ಮೌಲ್ಯಮಾಪನ ಸೂಚಿಗಳೂ ಹೌದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯ ಒಂಬತ್ತನೆಯ ಪ್ರಬಂಧದಲ್ಲಿ ಕರ್ನಾಟಕವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿಕೊಂಡಿರುವ ಸಂಗತಿಗಳನ್ನು ದಾಖಲಿಸಲು ಪ್ರಯತ್ನಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಗುರುತಿಸಲಾಗಿದೆ. ಅದರ ಪ್ರಾದೇಶಿಕ ನೆಲೆಗಳನ್ನು ಪರಿಶೋಧಿಸಲಾಗಿದೆ. ಈ ಅಧ್ಯಯನದಲ್ಲಿ ಶಿಕ್ಷಣ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಚರ್ಚೆಗೆ ಒಳಪಡಿಸಲಾಗಿದೆ.

ಹತ್ತನೆಯ ಪ್ರಬಂಧದಲ್ಲಿ ಕರ್ನಾಟಕವು ಪಂಚವಾರ್ಷಿಕ ಯೋಜನೆಗಳ (೧೯೫೧ - ೨೦೦೭) ಅವಧಿಯಲ್ಲಿ ಸಾಧಿಸಿಕೊಂಡಿರುವ ಸಾಧನೆಯ ಸಮೀಕ್ಷೆ ಮಾಡಲಾಗಿದೆ. ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಕೃಷಿ, ಕೈಗಾರಿಕೆ, ಸೇವಾ ವಲಯ, ಶಿಕ್ಷಣ, ಆರೋಗ್ಯ, ಮೂಲಭೂತ ಸೌಲಭ್ಯ ಮುಂತಾದ ಸಂಗತಿಗಳಲ್ಲಿ ರಾಜ್ಯವು ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿಕೊಂಡಿದೆ. ವಿಕೇಂದ್ರೀಕೃತ ಯೋಜನೆಗೆ ಸ್ಪಷ್ಟ ರೂಪವನ್ನು ನೀಡಲಾಗಿದೆ. ವರಮಾನ ಸೂಚಿಯಲ್ಲಿ ಮತ್ತು ಮಾನವ ಅಭಿವೃದ್ಧಿ ಸೂಚಿಯಲ್ಲಿ ರಾಜ್ಯವು ಪ್ರಗತಿಯನ್ನು ಅನುಭವಿಸಿದೆ. ಇಲ್ಲಿನ ಸಮಸ್ಯೆಗಳಿವೆ. ನಾವು ಸಾಧಿಸಿಕೊಂಡಿರುವ ಅಭಿವೃದ್ಧಿಯಲ್ಲಿ ಅನೇಕ ಮಿತಿಗಳಿವೆ. ಅದರ ವ್ಯಾಪ್ತಿಯು ಸೀಮಿತವಾದುದು. ಅದರ ವ್ಯಾಪ್ತಿಯನ್ನು ಹೇಗೆ ವಿಸ್ತರಿಸುವುದು? ಅದು ಜನರನ್ನು ಒಳಗೊಳ್ಳುವಂತೆ ಮಾಡುವುದು ಹೇಗೆ? ಇವು ಪರಿಹರಿಸಿಕೊಳ್ಳಲು ಸಾಧ್ಯವಿಲ್ಲದ ಸಮಸ್ಯೆಗಳಲ್ಲ. ಈ ಬಗ್ಗೆ ನಮ್ಮ ಯೋಜನೆಗಳ ವೈಫಲ್ಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆ ಪ್ರಸ್ತುತ ಕೃತಿಯಲ್ಲಿನ ಪ್ರಬಂಧಗಳು ಕರ್ನಾಟಕದ ಅಭಿವೃದ್ಧಿ ಕುರಿತಂತೆ ಒಂದು ವಿರಾಟ್ ಚಿತ್ರವನ್ನು ನೀಡುತ್ತವೆ. ಇಲ್ಲಿ ಚರ್ಚೆಯನ್ನು ಕೇವಲ ಆರ್ಥಿಕ ಸಂಗತಿಗಳಿಗೆ ಸೀಮಿತಗೊಳಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಅಭಿವೃದ್ಧಿಯ ಸಾಮಾಜಿಕ ಮತ್ತು ರಾಜಕೀಯ ನೆಲೆಗಳನ್ನು ಪರಿಶೋಧಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಅನಾವರಣ ಮಾಡಲಾಗಿದೆ. ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮಗಳನ್ನು ಇಲ್ಲಿ ಚರ್ಚೆಯ ಮುಂಚೂಣಿಗೆ ತರಲಾಗಿದೆ. ವರಮಾನ ವರ್ಧನಾ ಪ್ರಣಾಳಿಕೆಯನ್ನು ತೀವ್ರ ವಿಮರ್ಶೆಗೆ ಇಲ್ಲಿ ಒಳಪಡಿಸಲಾಗಿದೆ. ಮಾನವ ಅಭಿವೃದ್ಧಿ ಪ್ರಣಾಳಿಕೆಯ ವಿವಿಧ ನೆಲೆಗಳನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ.

# ೧. ಅಭಿವೃದ್ಧಿ ಮೀಮಾಂಸೆ

ಅಭಿವೃದ್ಧಿ ಎನ್ನುವುದು ಇಂದು ಅತ್ಯಂತ ಜನಜನಿತವಾದ ಒಂದು ಪರಿಭಾವನೆಯಾಗಿದೆ. ವಿಶ್ವಾದ್ಯಂತ ಸರ್ಕಾರಗಳು ಅದಕ್ಕೆ ಮುಗಿಬಿದ್ದಿದ್ದಾವೆ. ಅದಕ್ಕೆ ಸಂಬಂಧಿಸಿದಂತೆ ವಿದ್ವಾಂಸರು ದಂಡಿಯಾಗಿ ಸಿದ್ಧಾಂತಗಳನ್ನು, ಸಮೀಕರಣಗಳನ್ನು, ಸೂತ್ರಗಳನ್ನು ಮಂಡಿಸುತ್ತಿದ್ದಾರೆ. ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು, ಅಂತಾರಾಷ್ಟ್ರೀಯ ಸಂಸ್ಥೆಗಳು, ಸರ್ಕಾರಗಳು, ವಿಶ್ವವಿದ್ಯಾಲಯಗಳು ಅದನ್ನು ಕುರಿತಂತೆ ಚರ್ಚೆ ಮಾಡುತ್ತಿವೆ. ಇತ್ತೀಚೆಗೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ತಮ್ಮನ್ನು ತಾವು 'ಅಭಿವೃದ್ಧಿ ರಂಗ'ವೆಂದು ಬಿಂಬಿಸಿಕೊಳ್ಳುತ್ತಿವೆ (೨೦೦೪). ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಮ್ ಅವರು 'ತನ್ನ ಮುಖ್ಯ ಧ್ಯೇಯವೆಂದರೆ ಭಾರತದ ಅಭಿವೃದ್ಧಿಯನ್ನು ಶೇ. ೮ ರಷ್ಟಕ್ಕೆ ಏರಿಸುವುದು' ಎಂದು ಹೇಳಿದ್ದಾರೆ (ದಿ ಹಿಂದೂ: ೧೧.೦೯.೦೪). ಮುಂದುವರಿದು 'ಈ ಸಾಧನೆಯ ಹಾದಿಯಲ್ಲಿ ಯಾವುದೇ ಭಿನ್ನಮತ ಬಂದರೂ ಅದನ್ನು ನಾನು ಎದುರಿಸುತ್ತೇನೆ' ಎಂದು ಎಚ್ಚರಿಸಿದ್ದಾರೆ. ನಮ್ಮ ಪ್ರಧಾನಮಂತ್ರಿಗಳೂ ಕೂಡ ಅಭಿವೃದ್ಧಿಯ ಗತಿಯನ್ನು ಶೇ. ೮ ಕ್ಕಿಂತ ಅಧಿಕಗೊಳಿಸುವ ಬಗ್ಗೆ ಒತ್ತಾಯಿಸುತ್ತಿದ್ದಾರೆ. ಹತ್ತನೆಯ ಪಂಚವಾರ್ಷಿಕ (೨೦೦೨ - ೨೦೦೭) ಯೋಜನೆಯ ಕರಡನ್ನು ಬಿಡುಗಡೆ ಮಾಡುತ್ತಾ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಶೇ. ೮ರ ಅಭಿವೃದ್ಧಿ ಗತಿ ಬಗ್ಗೆ ಮಾತನಾಡಿದ್ದರು. ನಮ್ಮ ರಾಷ್ಟ್ರಪತಿಗಳು ೨೦೨೦ - ೨೦೨೫ ರೊಳಗೆ 'ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರ'ವಾಗಬೇಕು ಎಂದು ಕರೆ ನೀಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿ ಅವರು 'ಒಂದೆರಡು ವರ್ಷಗಳಲ್ಲಿ ನಮ್ಮ ಬಜೆಟ್ಟಿನ ಗಾತ್ರವನ್ನು ಒಂದು ಲಕ್ಷ ಕೋಟಿಗೇರಿಸಲಾಗುವುದು' ಎಂದು ಹೇಳುತ್ತಿದ್ದಾರೆ. ಒಟ್ಟಾರೆ ಒಂದು ಬಗೆಯ ವ್ಯಸನದಂತೆ ಅಭಿವೃದ್ಧಿಯನ್ನು,

ಅದರ ಗತಿಯನ್ನು ಜನರು, ಸರ್ಕಾರಗಳು, ರಾಜಕೀಯ ಪಕ್ಷಗಳು, ನಾಯಕರು ಹಚ್ಚಿಕೊಂಡಂತೆ ಕಾಣುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ಅಭಿವೃದ್ಧಿಯನ್ನು ಕುರಿತಂತೆ ರೂಪುಗೊಂಡಿರುವ ವಿವಿಧ ಸೈದ್ಧಾಂತಿಕ ಧಾರೆಗಳನ್ನು ಕುರಿತಂತೆ ಚರ್ಚಿಸಲಾಗುವುದು. ಅಮರ್ತ್ಯಸೇನ್ ರೂಪಿಸಿರುವ ಮಾನವ ಅಭಿವೃದ್ಧಿಯ ತಾತ್ವಿಕ ನೆಲೆಗಳನ್ನು ಪರಿಚಯಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

**ವರಮಾನದ ವರ್ಧನೆ**

ಸಾಂಪ್ರದಾಯಿಕವಾಗಿ ದೇಶ/ಪ್ರದೇಶವೊಂದರ ವರಮಾನದಲ್ಲಿನ (ಜಿಡಿಪಿ/ಎಸ್‌ಡಿಪಿ) ವಾರ್ಷಿಕ ಏರಿಕೆಯನ್ನು ಅಭಿವೃದ್ಧಿಯೆಂದು ಗುರುತಿಸುತ್ತಾ ಬರಲಾಗಿದೆ. ಸಮಾಜದಲ್ಲಿ ಜನರು ಎದುರಿಸುವ ಎಲ್ಲ ಸಮಸ್ಯೆಗಳಿಗೂ ಅದು ಸಿದ್ಧೌಷದವೆನ್ನುವಂತೆ ಅದನ್ನು ನೆಮ್ಮಿಕೊಳ್ಳಲಾಗಿದೆ. ಜನರ ದುಸ್ಥಿತಿ - ದುಮ್ಮಾನಗಳಿಗೆ ಪರಿಹಾರವನ್ನು ವರಮಾನ ವರ್ಧನೆಯಲ್ಲಿ ಕಂಡುಕೊಳ್ಳಲಾಗಿದೆ. ಏರಿಕೆಯಾದ ವರಮಾನದ ಫಲಗಳು ಸಮಾಜದಲ್ಲಿ ಎಲ್ಲ ವರ್ಗ - ಜಾತಿ - ವೃತ್ತಿ - ಪ್ರದೇಶ - ಲಿಂಗಗಳಿಗೂ ಸಾವಕಾಶವಾಗಿ ಮತ್ತು ಸಮಾನವಾಗಿ ಒದಗುತ್ತವೆ ಎಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಅಭಿವೃದ್ಧಿಯನ್ನು ಒಂದು ಅಖಂಡ ಪ್ರಕ್ರಿಯೆಗಾಗಿ ಪರಿಭಾವಿಸಿಕೊಂಡು ಬರಲಾಗಿದೆ. ಸಾಂಪ್ರದಾಯಿಕ - ಪ್ರಾಥಮಿಕವೆನ್ನಬಹುದಾದ ಚಟುವಟಿಕೆಗಳಾದ ಕೃಷಿ, ಗಣಿಗಾರಿಕೆ, ಅರಣ್ಯಗಾರಿಕೆ, ಮೀನುಗಾರಿಕೆ ಮುಂತಾದವುಗಳ ಮೇಲಿನ ದುಡಿಮೆಗಾರರ ಅವಲಂಬನೆ ಕಡಿಮೆಯಾಗಿ ಕೈಗಾರಿಕೆ - ಉದ್ದಿಮೆ, ವ್ಯಾಪಾರ, ಸಾರಿಗೆ, ಬ್ಯಾಂಕಿಂಗ್ ಮುಂತಾದ ಚಟುವಟಿಕೆಗಳ ಮೇಲಿನ ದುಡಿಮೆಗಾರರ ಅವಲಂಬನೆಯು ಅಧಿಕಗೊಳ್ಳುವ ಪ್ರಕ್ರಿಯೆಯನ್ನು ಅಭಿವೃದ್ಧಿಯೆಂದು ನಿರ್ವಚಿಸಿಕೊಂಡು ಬರಲಾಗಿದೆ. ಇದನ್ನು ನಗರೀಕರಣ, ಕೈಗಾರಿಕೀಕರಣ, ಆಧುನೀಕರಣ ಮುಂತಾದ ಪ್ರಕ್ರಿಯೆಗಳಲ್ಲಿ ಹಿಡಿದಿಡಲಾಗಿದೆ. ಒಟ್ಟಂದದಲ್ಲಿ ಅಭಿವೃದ್ಧಿಯನ್ನು ಉತ್ಪನ್ನ, ಉದ್ಯೋಗ, ವರಮಾನಗಳ ವರ್ಧನೆಯಲ್ಲಿ ಗುರುತಿಸುವುದು ವಾಡಿಕೆಯಲ್ಲಿದೆ. ಆಹಾರೋತ್ಪಾದನೆಯಲ್ಲಿ ಸಾಧಿಸಿಕೊಂಡ ಸ್ವಾವಲಂಬನೆಯನ್ನು, ಆ ಮೂಲಕ ನನಸಾಗಿಸಿಕೊಂಡ ರಾಷ್ಟ್ರದ 'ಆಹಾರ ಭದ್ರತೆ'ಯನ್ನು ಅಭಿವೃದ್ಧಿ ಎಂದು ಕರೆಯಲಾಗಿದೆ.

**ವರಮಾನದ ಕೊರತೆಯೇ ಬಡತನ!**

ಈ ಪ್ರಧಾನಧಾರೆ ವಿಚಾರ ಪ್ರಣಾಳಿಕೆಯಲ್ಲಿ ಬಡತನ - ದುಸ್ಥಿತಿಯನ್ನು 'ವರಮಾನದ ಕೊರತೆ'ಯಲ್ಲಿ ಕಂಡುಕೊಳ್ಳಲಾಗಿದೆ. ಒಬ್ಬ ವ್ಯಕ್ತಿ ಗೌರವಯುತವಾಗಿ ಬದುಕಲು ಎಷ್ಟು ವರಮಾನ ಅಗತ್ಯವೆಂದು ನಿಗದಿಪಡಿಸಲಾಗಿದೆಯೋ ಅದಕ್ಕಿಂತ ಯಾರ ವರಮಾನವು ಕಡಿಮೆಯಿರುತ್ತದೋ ಅವರನ್ನು ಬಡವರೆಂದು ಪರಿಗಣಿಸಲಾಗುತ್ತದೆ (ಬಡತನದ ರೇಖೆ). ಸ್ಥೂಲವಾಗಿ ವರಮಾನದ ವರ್ಧನೆಯು ಅಭಿವೃದ್ಧಿಯೆನಿಸಿಕೊಂಡರೆ 'ವರಮಾನದ ಕೊರತೆ'ಯು ದುಸ್ಥಿತಿ - ಬಡತನವೆನಿಸಿಕೊಳ್ಳುತ್ತದೆ. ಇವುಗಳನ್ನು ಅನುಕ್ರಮವಾಗಿ 'ವರಮಾನದ ಅಭಿವೃದ್ಧಿ'ಯೆಂದು ಮತ್ತು 'ವರಮಾನ ಬಡತನ'ವೆಂದೂ ಯುಎನ್‌ಡಿಪಿಯು ತನ್ನ ಮಾನವ ಅಭಿವೃದ್ಧಿ ವರದಿಗಳಲ್ಲಿ ಗುರುತಿಸಿದೆ. ವರಮಾನವೆನ್ನುವುದು ವಾಸ್ತವವಾಗಿ 'ಉತ್ಪನ್ನ'ದ (ಸರಕು ಮತ್ತು ಸೇವೆಗಳು) ಹಣರೂಪಿ ಮೌಲ್ಯವಾಗಿದೆ. ಈ ಕಾರಣದಿಂದಾಗಿಯೇ ದೇಶವೊಂದರ ವರಮಾನವನ್ನು 'ಒಟ್ಟು ರಾಷ್ಟ್ರೀಯ ಉತ್ಪನ್ನ, (ಜಿಎನ್‌ಪಿ) ಅಥವಾ 'ಒಟ್ಟು ದೇಶೀಯ ಉತ್ಪನ್ನ' (ಜಿಡಿಪಿ)ವೆಂದು ಕರೆಯಲಾಗಿದೆ. ಈ ಬಗೆಯ ವಿಚಾರ ಪ್ರಣಾಳಿಕೆಯಲ್ಲಿ ಸುಖಮಯ ಬದುಕು ಅಥವಾ ಜೀವನಮಟ್ಟ ಎಂಬುದನ್ನು ಉತ್ಪನ್ನಗಳ ಅನುಭೋಗದಿಂದ ಜನರು ಪಡೆದುಕೊಂಡು 'ಒಟ್ಟು ತೃಪ್ತಿ'ಯ ಗರಿಷ್ಟ ಪ್ರಮಾಣದಿಂದ ಅಳೆಯಲಾಗುತ್ತದೆ. ಈ ವಿಚಾರ ಪ್ರಣಾಳಿಕೆಯನ್ನು 'ಉತ್ಪನ್ನವಾದಿ ಮೀಮಾಂಸೆ'ಯೆಂದು ಕರೆಯಬಹುದು. ಈ ಮೀಮಾಂಸೆಯಲ್ಲಿ ಉತ್ಪನ್ನವೇ ಪ್ರಧಾನ ಮತ್ತು ಪ್ರಥಮ.

**ಭಿನ್ನಮತ**

ಆದರೆ ಮೆಹಬೂಬ್ ಉಲ್ ಹಕ್ (೧೯೯೦), ಅಮರ್ತ್ಯಸೇನ್ (೧೯೯೯) ಮಾರ್ತ ನುಸ್‌ಬಾಮ್ (೨೦೦೦) ಜೀನ್‌ಡ್ರೀಜ್ (೨೦೦೨), ಸುಧೀರ್ ಆನಂದ್ (೧೯೯೪) ನೈಲಾ ಕಬೀರ್ (೧೯೯೪) ಮುಂತಾದವರು ವಾದಿಸುವಂತೆ ವರಮಾನವು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ಒಂದು ಸಾಧನವೇ ವಿನಾ ಅದು ಅದರ 'ಸಾಧ್ಯ'ವಲ್ಲ. ಬದುಕನ್ನು ಉತ್ತಮಪಡಿಸಿಕೊಳ್ಳಲು - ಸುಖಮಯವನ್ನಾಗಿ ಮಾಡಿಕೊಳ್ಳಲು ಅಗತ್ಯವಾದ ಅನೇಕ ಸಂಗತಿಗಳಲ್ಲಿ ವರಮಾನವು ಒಂದಾಗಿದೆ. ವರಮಾನದ ಮೊತ್ತವೇ ಜನರ ಬದುಕಲ್ಲ. ಉತ್ಪನ್ನದ ಮೇಲಿನ ಹಕ್ಕುದಾರಿಕೆ - ಮಾಲೀಕತ್ವ - ಪರಮಾಧಿಕಾರ ವೊಂದರಿಂದಲೇ ಜನರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಿಲ್ಲ. ವರಮಾನದ ದೃಷ್ಟಿಯಿಂದ ನಮ್ಮ ರಾಜ್ಯದ ೨೭ ಜಿಲ್ಲೆಗಳ ಪೈಕಿ ಕೊಪ್ಪಳ ಮತ್ತು ಮೈಸೂರು ಜಿಲ್ಲೆಗಳ ಸ್ಥಾನ ಕ್ರಮವಾಗಿ ಹದಿನಾಲ್ಕು ಮತ್ತು ಏಳನೆಯದಾಗಿದೆ (೨೦೦೧). ಆದರೆ ಆರೋಗ್ಯ ಮತ್ತು ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದಂತೆ ಅವುಗಳ ಸ್ಥಾನ ಅನುಕ್ರಮವಾಗಿ ೧೭ ಮತ್ತು ೨೪ ಹಾಗೂ ೧೧ ಮತ್ತು ೧೯. ವರಮಾನದ ಮಟ್ಟವು ಇಲ್ಲಿ ಉತ್ತಮವಾಗಿದ್ದರೂ ಜನರ ಬದುಕು ಸುಖಮಯವಾಗಿಲ್ಲ. ಇಲ್ಲಿ ವರಮಾನದ ವರ್ಧನೆಯು ಜನರ ಆರೋಗ್ಯವಾಗಿ, ಅಕ್ಷರ ಭಾಗ್ಯವಾಗಿ ಪರಿವರ್ತನೆಯಾಗಿಲ್ಲ. ಜನರ ಬದುಕನ್ನು ವರಮಾನದ ಮೊತ್ತಕ್ಕೆ ಸಂವಾದಿಯನ್ನಾಗಿ ಮಾಡುವುದು ಸರಿಯಲ್ಲ.

### ಮಾನವ ಅಭಿವೃದ್ಧಿ

ಸರೀಕರ ಮುಂದೆ ತಲೆ ಎತ್ತಿ ನಿಲ್ಲುವ, ಮೈತುಂಬಾ ಬಟ್ಟೆ ಧರಿಸುವ, ಓದಲು ಬರೆಯಲು ಬರುವ, ಅಂಕಿ - ಸಂಖ್ಯೆಗಳ ಜ್ಞಾನವುಳ್ಳ, ದೀರ್ಘಕಾಲ ಆರೋಗ್ಯಕಾಯರಾಗಿ ಬದುಕುವ ಜನರ ಸಾಮರ್ಥ್ಯವನ್ನು ಅಮರ್ತ್ಯಸೇನ್ ಅಭಿವೃದ್ಧಿಯೆಂದು ಕರೆದಿದ್ದಾರೆ. ಮಾನವ ಹಕ್ಕುಗಳು, ಜನರ ಸ್ವಾತಂತ್ರ್ಯ, ಜನರ ಕರ್ತೃತ್ವ ಸಾಮರ್ಥ್ಯಗಳನ್ನು ಜನರ ಬದುಕು ಒಳಗೊಳ್ಳಬೇಕಾಗುತ್ತದೆ. ಉತ್ಪನ್ನದ ಅನುಭೋಗದಿಂದ ಪಡೆದ ಗರಿಷ್ಟ ತೃಪ್ತಿಯೇ ಜನರ ಸುಖಮಯ ಬದುಕಿಗೆ ಪುರಾವೆಯಾಗುವುದಿಲ್ಲ. ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳಲ್ಲಿ ಜನರು ತಮಗೆ ಅಗತ್ಯವೆನಿಸಿದ್ದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಯೆಂದು ನಿರ್ವಚಿಸಬಹುದು. ಬದುಕನ್ನು ಉತ್ತಮಪಡಿಸಿಕೊಳ್ಳಲು ಅವಕಾಶಗಳು ಹರಿದು ಬರುತ್ತಿರುತ್ತವೆ. ಹೀಗೆ ಹರಿದು ಬರುತ್ತಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವನ್ನು ಅಭಿವೃದ್ಧಿಯೆಂದು ಕರೆಯಬಹುದು. ಜನರ ಆಯ್ಕೆಯ ವ್ಯಾಪ್ತಿಯ ವರ್ಧನೆಯೇ ಅಭಿವೃದ್ಧಿ. ಅದನ್ನು ಉತ್ಪನ್ನಕ್ಕೆ - ವರಮಾನಕ್ಕೆ ಮಾತ್ರ ಸೀಮಿತಗೊಳಿಸುವ ಅಗತ್ಯವಿಲ್ಲ. ಇದನ್ನು ನಮ್ಮ ಸಮಾಜದ ಸಂದರ್ಭದಲ್ಲಿನ ಒಂದು ನಿದರ್ಶನದಿಂದ ಸ್ಪಷ್ಟಪಡಿಸಬಹುದು.

ನಮ್ಮ ಗ್ರಾಮೀಣ ಪ್ರದೇಶದಲ್ಲಿನ ಹೋಟೇಲ್‌ಗಳಲ್ಲಿ ಕೆಲವು ನಿರ್ದಿಷ್ಟ ಸಮಾಜಿಕ ಗುಂಪಿನ ಜನರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಹಾಗೂ ತಿಂಡಿ - ಪಾನೀಯ ಸರಬರಾಜು ವ್ಯವಸ್ಥೆಯಿರುತ್ತದೆ. ಗ್ರಾಮದಲ್ಲಿನ ಇತರೆ ಜನವರ್ಗಗಳಿಗೆ ಒಂದು ವ್ಯವಸ್ಥೆಯಿದ್ದರೆ ಇವರಿಗೆ ಮತ್ತೊಂದು ವ್ಯವಸ್ಥೆ. ಈ ಬಗೆಯ ತಾರತಮ್ಯ - ಅವಮಾನಗಳನ್ನು ಶಾಸನಾತ್ಮಕವಾಗಿ ನಿಷೇಧಿಸಲಾಗಿದೆ. ಆದರೆ ಅವು ಇಂದಿಗೂ ಆಚರಣೆಯಲ್ಲಿವೆ. ಇದಕ್ಕೆ ಅಪವಾದಗಳಿರಬಹುದು. ಈ ಬಗೆಯ ತಾರತಮ್ಯ ಭಾವನೆ, ಪಕ್ಷಪಾತ ಧೋರಣೆ, ಅಮಾನವೀಯ ನಡವಳಿಕೆಗಳಿಗೂ ವರಮಾನದ ಮಟ್ಟಕ್ಕೂ ಸಂಬಂಧವಿಲ್ಲ. ಉತ್ತಮ ಬದುಕು ಅಥವಾ ಸುಖಮಯ ಬದುಕು ಎಂದು ಯಾವುದನ್ನು ಗುರುತಿಸಲಾಗಿದೆಯೋ ಅದು ಮೇಲಿನ ಸಂಗತಿಯನ್ನು ಒಳಗೊಳ್ಳಬೇಕಾಗುತ್ತದೆ. ಸರೀಕರ ಮುಂದೆ ಅವಮಾನವನ್ನು ಅನುಭವಿಸಬೇಕಾದ ಸಂಗತಿಯಿಂದಾಗಿ ಅದನ್ನು ಎದುರಿಸುವ ಜನರ ಬದುಕು ವರಮಾನವೆಷ್ಟೇಯಿರಲಿ ಸುಖಮಯವಾಗಿರಲು ಸಾಧ್ಯವಿಲ್ಲ. ಸರೀಕರ ಮುಂದೆ ಸಮಾನವಾಗಿ ನಿಲ್ಲುವ ಸ್ವಾತಂತ್ರ್ಯದಿಂದ ಜನರು ಇಲ್ಲಿ ವಂಚಿತರಾಗಿದ್ದಾರೆ. ನಾಲ್ಕು ಜನರಿಗೆ ಸರಿಸಮನಾಗಿ ಊರ ಮುಂದಿನ ದೇವಾಲಯದ ಕಟ್ಟೆಯ ಮೇಲೆ ಕೂರುವ ಅವಕಾಶದಿಂದ ವಂಚಿತರಾದ ಜನರ ಬದುಕು ವರಮಾನ ಎಷ್ಟೇ ಇದ್ದರೂ ಗೌರವಯುತವಾಗಿರಲು ಸಾಧ್ಯವಿಲ್ಲ. ಇವರು ಸ್ವಾತಂತ್ರ್ಯದಿಂದ ವಂಚಿತರಾಗಿದ್ದಾರೆ. ಸ್ವಾತಂತ್ರ್ಯವನ್ನು ಜನರು 'ಏನಾಗಿದ್ದಾರೆ' ಮತ್ತು ಅವರು ಏನು 'ಮಾಡಬಲ್ಲರು' ಎಂಬ ನೆಲೆಯಿಂದ ಪರಿಭಾವಿಸಿಕೊಳ್ಳುವ ಕ್ರಮವನ್ನು ಸೇನ್ ಪ್ರತಿಪಾದಿಸುತ್ತಿದ್ದಾರೆ. ನಿಯಂತ್ರಣಗಳಿಲ್ಲದ ಮುಕ್ತವಾದ ಸ್ಥಿತಿಯನ್ನು ಸ್ವಾತಂತ್ರ್ಯವೆಂದು

ಸಾಮಾನ್ಯವಾಗಿ ನಿರ್ವಚಿಸಿಕೊಳ್ಳಲಾಗಿದೆ. ಇದು ನೇತ್ಯಾತ್ಮಕ ಸ್ವಾತಂತ್ರ್ಯ, ಅಭಿವೃದ್ಧಿಯ ದೃಷ್ಟಿಯಿಂದ ಇತ್ಯಾತ್ಮಕ ಸ್ವಾತಂತ್ರ್ಯವು ಬಹಳ ಮುಖ್ಯವಾಗುತ್ತದೆ. ಹಸಿವಿನಿಂದ ಬಿಡುಗಡೆ ಪಡೆಯಲು ಜನರು ಸಮರ್ಥರಾಗಿದ್ದಾರೆಯೆ? ರೋಗರುಜಿನಗಳಿಂದ ಮುಕ್ತರಾಗಿ ದೀರ್ಘಕಾಲ ಮತ್ತು ಆರೋಗ್ಯಕಾಯರಾಗಿ ಬದುಕುವ ಸಾಮರ್ಥ್ಯ ಜನರಿಗಿದೆಯೆ? ಮನೆಗೆಲಸವನ್ನು ಗಂಡನ ಜೊತೆ ಹಂಚಿಕೊಂಡು ಬದುಕು ಮಾಡುವ ಸಾಮರ್ಥ್ಯ ಹೆಂಡತಿಗಿದೆಯೆ? ಸಾರ್ವಜನಿಕ ಸ್ಥಾನಗಳಿಗೆ - ಸ್ಥಳಗಳಿಗೆ ಪ್ರವೇಶ ಪಡೆಯಲು ಜನರು ಸ್ವಾತಂತ್ರ್ಯ ಪಡೆದಿದ್ದಾರೆಯೆ? ಸ್ವಾತಂತ್ರ್ಯವನ್ನು ಅಭಿವೃದ್ಧಿಯೆಂದು (೧೯೯೯) ಸೆನ್ ನಿರ್ವಚಿಸಿದಾಗ ಮೇಲಿನ ಅರ್ಥದಲ್ಲಿ ಅವನು ಅದನ್ನು ಪರಿಭಾವಿಸಿಕೊಂಡಿದ್ದನೆ.

**ಜನರ ಕರ್ತೃತ್ವದ ಪಾತ್ರ**

ಜನರನ್ನು ಮತ್ತು ಅವರ ಬೌದ್ಧಿಕ ಹಾಗೂ ದೈಹಿಕ ಶಕ್ತಿ - ಸಾಮರ್ಥ್ಯಗಳನ್ನು ಕೇವಲ ಸಂಪನ್ಮೂಲವನ್ನಾಗಿ ನೋಡುವ ಕ್ರಮವೊಂದಿದೆ. ಮಾನವ ಸಂಪನ್ಮೂಲವೆಂಬ ನುಡಿ ಇದನ್ನು ಸರಿಯಾಗಿ ಸೂಚಿಸುತ್ತದೆ. ಜನರನ್ನು ಕೇವಲ ಫಲಾನುಭವಿಗಳನ್ನಾಗಿ ನೋಡುವ ಮಾದರಿಯೂ ಇದೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ 'ಮಾನವ ಸಂಪನ್ಮೂಲ' - 'ಮಾನವ ಬಂಡವಾಳ'ವೆಂಬ ನುಡಿಗಟ್ಟುಗಳು ಪ್ರಚಲಿತದಲ್ಲಿವೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಂಪನ್ಮೂಲ - ಬಂಡವಾಳದ ಪಾತ್ರ ನಿರ್ಣಾಯಕವಾದುದಾಗಿದೆ. ಅಕ್ಷರ ಸಂಪತ್ತು, ಆರೋಗ್ಯ ಭಾಗ್ಯ, ಆಹಾರ ಭದ್ರತೆ, ಆಶ್ರಯ ಮುಂತಾದವುಗಳನ್ನು ಅಭಿವೃದ್ಧಿಯ ಸಂಪನ್ಮೂಲಗಳೆಂದು ಗುರುತಿಸುವುದು ರೂಢಿಯಲ್ಲಿದೆ. ಈ ಸಂಪನ್ಮೂಲ - ಬಂಡವಾಳದ ಮೇಲೆ ಅಧಿಕಾರವನ್ನು - ಹಕ್ಕುದಾರಿಕೆಯನ್ನು ಸಾಧಿಸಿಕೊಳ್ಳುವುದರಿಂದ ಜನರ ಬದುಕು ಉತ್ತಮಗೊಳ್ಳುತ್ತದೆ. ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಈ ಬಗೆಯಲ್ಲಿ ಸಂಪನ್ಮೂಲ - ಬಂಡವಾಳವನ್ನು ಹೊಂದುವುದರಿಂದ ಜನರ ಉತ್ಪಾದನಾ ಕ್ಷಮತೆ ಉತ್ತಮಗೊಳ್ಳುತ್ತದೆ.

ಜನರನ್ನು ಹೀಗೆ ಸಂಪನ್ಮೂಲ - ಬಂಡವಾಳವನ್ನಾಗಿ ನೋಡುವುದರ ಜೊತೆಗೆ ಅವರನ್ನು ಬದಲಾವಣೆಯ ಕರ್ತೃಗಳನ್ನಾಗಿ ನೋಡುವ ಕ್ರಮವನ್ನು ಅಮರ್ತ್ಯಸೆನ್ ಒತ್ತಿ ಹೇಳುತ್ತಿದ್ದಾರೆ. ಜನರ ಕರ್ತೃತ್ವದ ಪಾತ್ರವನ್ನು ಅಭಿವೃದ್ಧಿಯು ಒಳಗೊಳ್ಳಬೇಕು ಎಂಬುದು ಸೆನ್‌ರ ಅಭಿಮತವಾಗಿದೆ. ಜನರ ಉತ್ಪಾದನಾ ಕ್ಷಮತೆ ಉತ್ತಮಗೊಂಡಿರುವುದೇ ಸುಖಮಯ ಬದುಕಿನ ಸೂಚಿಯಾಗುವುದಿಲ್ಲ. ಸುಖಮಯ ಬದುಕು ಎಂಬುದು ಉತ್ಪನ್ನವಾದಿ ನೆಲೆಗಿಂತ ವಿಸ್ತೃತವಾದುದಾಗಿದೆ. ಸಮಾನತೆ, ಸ್ವಾತಂತ್ರ್ಯ, ಹಕ್ಕುಗಳು ಇಲ್ಲಿ ಮುಖ್ಯವಾಗುತ್ತವೆ. ಈ ಹಕ್ಕುಗಳನ್ನು - ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು, ಸಮಾನತೆಯನ್ನು ಸಾಧಿಸಿಕೊಳ್ಳಲು ಜನರು ನಡೆಸುವ ಪ್ರಯತ್ನಗಳು ಇಲ್ಲಿ ಮುಖ್ಯವಾಗುತ್ತವೆ. ಈ ಬಗೆಯ ಪ್ರಯತ್ನಗಳು ವ್ಯಕ್ತಿಗತವಾಗಿರಬಹುದು ಅಥವಾ ಸಂಘಟಿತ ಸ್ವರೂಪದಲ್ಲಿರಬಹುದು. ಜನರ ಬದುಕಿನ ಸ್ಥಿತಿಗತಿ ಉತ್ತಮವಾಗುವ ಪರಿ ಒಂದಾದರೆ ಜನರು ತಮ್ಮ ಬದುಕಿನ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವ ದಿಶೆಯಲ್ಲಿ ಪ್ರಯತ್ನಿಸ ಬಲ್ಲರು ಎಂಬುದು ಇನ್ನೊಂದು ಬಗೆ. ಜನರು ತಮ್ಮ ಬದುಕಿನ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವ, ಅಸ್ತಿತ್ವದಲ್ಲಿರುವ ಸ್ಥಿತಿಗತಿಗಳನ್ನು ಬದಲಾವಣೆ ಮಾಡಲು ಏನು ಮಾಡಬೇಕು ಎಂಬುದನ್ನು ಅರಿತುಕೊಳ್ಳಲು ಪ್ರಯತ್ನಿಸುವ, ತಮ್ಮ ಹಿತಾಸಕ್ತಿಗಳು ಯಾವುವು ಎಂಬುದನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುವ ಪರಿಯನ್ನು ಸೆನ್'ಕರ್ತೃತ್ವ'ವೆಂದು ಕರೆದಿದ್ದಾರೆ. ನಾವೇಕೆ ಬಡವರಾಗಿದ್ದೇವೆ? ನಾವೇಕೆ ಅನಕ್ಷರಸ್ಥರಾಗಿದ್ದೇವೆ? ನಮಗೇಕೆ ಸಮಾಜದಲ್ಲಿ ಎಲ್ಲ ಕಡೆ ಮುಕ್ತ ಪ್ರವೇಶವಿಲ್ಲ? ನಮ್ಮ ಕಾರ್ಯಕ್ಷೇತ್ರವೇಕೆ ಗೃಹವಾರ್ತೆಗೆ ಮಾತ್ರ ಸೀಮಿತವಾಗಿರಬೇಕು? ನಮಗೇಕೆ ಆಸ್ತಿಪಾಸ್ತಿಯಿಲ್ಲ? – ಮುಂತಾದ ಪ್ರಶ್ನೆಗಳನ್ನು ರೂಪಿಸಿಕೊಳ್ಳುವ, ಕೇಳಿಕೊಳ್ಳುವ ಹಾಗೂ ಕೇಳುವ ಸ್ವಾತಂತ್ರ್ಯ ಹಾಗೂ ಆ ದಿಶೆಯಲ್ಲಿ ನಡೆಸುವ ಪ್ರಯತ್ನಗಳು ಸಾಮಾಜಿಕ ಬದಲಾವಣೆ ದೃಷ್ಟಿಯಿಂದ ತುಂಬಾ ಮುಖ್ಯವಾಗಿರುತ್ತದೆ ಜನರ ಕರ್ತೃತ್ವದ ಪಾತ್ರವು ಅಭಿವೃದ್ಧಿಯಲ್ಲಿ ನಿರ್ಣಾಯಕವಾದುದಾಗಿದೆ.

ಸಾಕ್ಷರತೆ - ಶಿಕ್ಷಣದಿಂದ ಜನನ ಪ್ರಮಾಣವನ್ನು, ಶಿಶುಮರಣ ಪ್ರಮಾಣವನ್ನು ಕಡಿಮೆ ಮಾಡಬಹುದೆಂಬುದು ಅಧ್ಯಯನಗಳಿಂದ ದೃಢಪಟ್ಟಿದೆ. ಆದರೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆಯರ ಸಾಕ್ಷರತೆ - ಶಿಕ್ಷಣದ ಸುಧಾರಣೆಯಿಂದ ಜನನ ಪ್ರಮಾಣವನ್ನು ಹಾಗೂ ಶಿಶುಮರಣ ಪ್ರಮಾಣವನ್ನು ತೀವ್ರವಾಗಿ ಕಡಿಮೆ ಮಾಡಬಹುದು ಎಂಬುದು ಜೀನ್ ಡ್ರೀಜ್ ಅಧ್ಯಯನದಿಂದ ತಿಳಿದುಬಂದಿದೆ.

ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದರಿಂದ ಹಾಗೂ ಅವರ ಧಾರಣಾ ಸಾಮರ್ಥ್ಯವನ್ನು ವರ್ಧಿಸುವುದರಿಂದ ಉಂಟಾಗುವ ಸುಧಾರಣೆಯು ಆರ್ಥಿಕ ಅಭಿವೃದ್ಧಿಯಿಂದ ಉಂಟಾಗುವ ಸುಧಾರಣೆಗಿಂತ ಅಧಿಕತಮವಾಗಿರುತ್ತದೆ. ಹೀಗೆ ಮಹಿಳೆಯರ - ಒಟ್ಟಾರೆ ಜನರ ಕರ್ತೃತ್ವ ಸಾಮರ್ಥ್ಯದ ವರ್ಧನೆ, ಕರ್ತೃತ್ವದ ಸ್ವಾತಂತ್ರ್ಯ ಅಭಿವೃದ್ಧಿಯಲ್ಲಿ ಹಾಗೂ ಸಾಮಾಜಿಕ ಬದಲಾವಣೆ ಪ್ರಕ್ರಿಯೆಯಲ್ಲಿ ಮಹತ್ತರ ಪಾತ್ರವಹಿಸುತ್ತವೆ.

**ಧಾರಣಾ ಸಾಮರ್ಥ್ಯ**

ಈಗಾಗಲೆ ತಿಳಿಸಿರುವಂತೆ ವರಮಾನದ ಕೊರತೆಯಿಂದ ಬಡತನವನ್ನು ನೋಡುವ ಬಗೆಯು ಒಂದಾದರೆ ಅದನ್ನು ಧಾರಣಾ ಸಾಮರ್ಥ್ಯದ ಕೊರತೆಯ ನೆಲೆಯಿಂದ ನೋಡುವುದು ಇನ್ನೊಂದು ಬಗೆ. ಎರಡನೆಯ ದೃಷ್ಟಿಕೋನವು ಮೊದಲನೆಯ ದೃಷ್ಟಿಕೋನಕ್ಕಿಂತ ಹೆಚ್ಚು ಉಪಯುಕ್ತವಾದುದು. ಹೀಗೆ ಧಾರಣಾ ಸಾಮರ್ಥ್ಯದ ಕೊರತೆಯ ನೆಲೆಯಿಂದ ಬಡತನವನ್ನು ಪರಿಭಾವಿಸಿಕೊಳ್ಳುವುದರಿಂದ ಮೊದಲನೆಯದಾಗಿ ಇದರಿಂದ ಬಡತನದ ಪ್ರಮಾಣ ಹಾಗೂ ತೀವ್ರತೆಯನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಎರಡನೆಯದಾಗಿ ಬಡತನಕ್ಕೆ ಕಾರಣವಾದ ಪ್ರಕ್ರಿಯೆಯನ್ನು ಅರಿತುಕೊಳ್ಳಬಹುದು. ನೀತಿ - ನಿರೂಪಣೆ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದುದಾಗಿದೆ. ಬಡತನವನ್ನು ವರಮಾನಕ್ಕೆ ಅಂದರೆ ಆರ್ಥಿಕ ಸಂಗತಿಗೆ ಮಾತ್ರ ಮೊದಲನೆಯ ಧಾರೆಯಲ್ಲಿ ಸೀಮಿತಗೊಳಿಸಿದ್ದರೆ ಎರಡನೆಯ ಧಾರೆಯಲ್ಲಿ ಅದನ್ನು ಸಾಮಾಜಿಕ ನ್ಯಾಯದ ನೆಲೆಯಿಂದ ವಿಸ್ತೃತವಾದ ರೀತಿಯಲ್ಲಿ ಪರಿಭಾವಿಸಿಕೊಳ್ಳಲಾಗಿದೆ.

ವರಮಾನದ ವರ್ಧನೆಯಿಂದ ಉತ್ಪಾದನಾ ಕ್ಷಮತೆಯು ಉತ್ತಮಗೊಳ್ಳುತ್ತದೆ ಎಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಆದರೆ ಧಾರಣಾ ಸಾಮರ್ಥ್ಯದ ವರ್ಧನೆಯಿಂದ ಜನರ ಉತ್ಪಾದನಾ ಕ್ಷಮತೆಯು ವರ್ಧಿಸುತ್ತದೆ ಮತ್ತು ಜನರ ವರಮಾನ ಸಂಪಾದಿಸುವ ಸಾಮರ್ಥ್ಯವೂ ಅಧಿಕಗೊಳ್ಳುತ್ತದೆ. ಹೀಗೆ ಧಾರಣಾ ಸಾಮರ್ಥ್ಯದ ವರ್ಧನೆಯಿಂದ ವರಮಾನದ ಸಂಬಂಧಿ ಬಡತನವನ್ನು ನಿವಾರಿಸಿಕೊಳ್ಳಬಹುದು. ಅಕ್ಷರ ಸಂಪತ್ತು, ಆರೋಗ್ಯ ಭಾಗ್ಯ, ಶಿಕ್ಷಣ, ಆಹಾರ ಭದ್ರೆ, ತಾಂತ್ರಿಕ ತರಬೇತಿ ಮುಂತಾದವು ಜನರ ಬದುಕನ್ನು ಉತ್ತಮಪಡಿಸುತ್ತವೆ ಮತ್ತು ಅದಕ್ಕಿಂತ ಮುಖ್ಯವಾಗಿ ಜನರ ವರಮಾನ ಗಳಿಸುವ ಸಾಮರ್ಥ್ಯವನ್ನು ಅವು ವರ್ಧಿಸುತ್ತವೆ ಹಾಗೂ ಲಭ್ಯವಿರುವ ಅವಕಾಶಗಳಲ್ಲಿ ಬಯಸಿದ್ದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಅವು ವಿಸ್ತರಿಸುತ್ತವೆ.

ಹೀಗೆ ಅಭಿವೃದ್ಧಿಯನ್ನು, ಬಡತನವನ್ನು ಭಿನ್ನ ನೆಲೆಯಿಂದ ನೋಡುವ ಕ್ರಮವೊಂದನ್ನು ಮೆಹಬೂಬ್ ಉಲ್ ಹಕ್ ಹಾಗೂ ಅಮರ್ತ್ಯಸೇನ್ ರೂಪಿಸಿದ್ದಾರೆ. ಈ ಬಗೆಯ ವಿಚಾರ ಪ್ರಣಾಳಿಕೆಯನ್ನು 'ಮಾನವ ಅಭಿವೃದ್ಧಿ'ಯೆಂದು ಕರೆಯಲಾಗಿದೆ. ಅಕ್ಷರ, ಆರೋಗ್ಯ, ಆಹಾರ, ಆಶ್ರಯ ಮುಂತಾದ ಸಂಗತಿಗಳನ್ನು ಎರಡು ವಿಭಿನ್ನ ನೆಲೆಗಳಿಂದ ನೋಡುವ ಪರಿಯನ್ನು ಇವರಿಬ್ಬರೂ ಒತ್ತಿ ಹೇಳುತ್ತಿದ್ದಾರೆ. ಇವೆಲ್ಲವೂ ಜನರ ಉತ್ಪಾದನಾ ಕ್ಷಮತೆಯನ್ನು, ಗಳಿಕೆಯ ಸಾಮರ್ಥ್ಯವನ್ನು ಹಾಗೂ ಸಂಪನ್ಮೂಲಗಳ ಮೇಲಿನ ಹಕ್ಕುದಾರಿಕೆಯನ್ನು ವರ್ಧಿಸುತ್ತವೆ. ಇದು ಒಂದು ನೆಲೆ. ಇದಕ್ಕಿಂತ ಮುಖ್ಯವಾಗಿ ಅವುಗಳಿಗೆ ತಮ್ಮದೇ ಆದ ಮಹತ್ವವಿದೆ. ಅವು ಜನರಿಗೆ ವ್ಯಕ್ತಿತ್ವವನ್ನು, ಅನನ್ಯತೆಯನ್ನು ಒದಗಿಸುತ್ತವೆ. ಅವುಗಳನ್ನು ಸಾಧನಗಳನ್ನಾಗಿ ನೋಡುವುದರ ಜೊತೆಗೆ ಅಭಿವೃದ್ಧಿಯ ಅಂತಸ್ಥಗುಣಗಳನ್ನಾಗಿ ನೋಡುವ ವಿಚಾರವನ್ನು ಇಲ್ಲಿ ಹೇಳಲಾಗಿದೆ. ಕುಟುಂಬವೊಂದರ ವರಮಾನದ ಮಟ್ಟವು ಆ ಕುಟುಂಬದ ಮಹಿಳೆಯೊಬ್ಬಳು ಮನೆಯ ಹೊರಗೆ ದುಡಿಮೆ ಮಾಡುವುದರಿಂದ ಉತ್ತಮಗೊಳ್ಳುತ್ತದೆ. ವರಮಾನದ ವರ್ಧನೆಗೆ ಮಹಿಳೆಯ ಮನೆಯ ಹೊರಗಿನ ದುಡಿಮೆಯು ಒಂದು ಸಾಧನ. ಇದಕ್ಕಿಂತ ಮುಖ್ಯವಾಗಿ ಮನೆಯ ಹೊರಗೆ ಹೆಣ್ಣು ದುಡಿಯುವುದರ ಮಹತ್ವವೆಲ್ಲಿದೆಯೆಂದರೆ ಅದು ಆಕೆಗೆ ವ್ಯಕ್ತಿತ್ವವೊಂದನ್ನು ನೀಡುತ್ತದೆ. ಅದು ಅವಳ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಆಕೆಯ ಅರಿವಿನ ಪರಿಧಿಯನ್ನು ಅದು ವಿಸ್ತರಿಸುತ್ತದೆ. ತನ್ನ ದುಡಿಮೆಯ ಮಹತ್ವದ ಅರಿವು ಅವಳಿಗುಂಟಾಗುತ್ತದೆ.

ಸಾಂಪ್ರದಾಯಿಕ ವಿಚಾರ ಪ್ರಣಾಳಿಕೆಯಲ್ಲಿನ ‘ಸಾಧನವಾದಿ’ ನೆಲೆಯನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೆ ಎರಡನೆಯ ದೃಷ್ಟಿಕೋನವೂ ತುಂಬಾ ಮಹತ್ವವಾದುದಾಗಿದೆ. ಮಹಿಳೆಯರ ಮನೆಯೊಳಗಿನ ಹಾಗೂ ಮನೆಯ ಹೊರಗಿನ ದುಡಿಮೆಯು ಆಕೆಯ ಮಕ್ಕಳ, ಗಂಡನ, ಕುಟುಂಬದ ಔನ್ನತ್ಯದಲ್ಲಿ ಲೀನವಾಗಿ ಹೋಗಿಬಿಡಬಾರದು. ಅದು ಮಹಿಳೆಗೆ ಒಂದು ವ್ಯಕ್ತಿತ್ವವನ್ನು ನೀಡುತ್ತದೆ. ಅದು ಮಹಿಳೆಯ ಕರ್ತೃತ್ವ ಪಾತ್ರದ ನಿರ್ವಹಣೆಗೆ ಅವಕಾಶ ಮಾಡಿಕೊಡುತ್ತದೆ. ಹೀಗೆ ಅಭಿವೃದ್ಧಿಯನ್ನು ಕುರಿತ ಧಾರಣಾ ಸಾಮರ್ಥ್ಯ ಸಂಬಂಧಿ ದೃಷ್ಟಿಕೋನವು ಸಾಂಪ್ರದಾಯಿಕ ವರಮಾನ ಸಂಬಂಧಿ ದೃಷ್ಟಿಕೋನಕ್ಕಿಂತ ವಿಸ್ತೃತವಾದುದಾಗಿದೆ ಮತ್ತು ನೀತಿ - ನಿರೂಪಣೆಯ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾದುದಾಗಿದೆ.

**ಲಿಂಗ ನಿರಪೇಕ್ಷತೆ**

ಸಾಂಪ್ರದಾಯಿಕ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಲಿಂಗ ನಿರಪೇಕ್ಷವಾದುದಾಗಿದೆ. ಅಲ್ಲಿ ಲಿಂಗ ಸಂಬಂಧಿ ನೆಲೆಗಳಿಗೆ ಅವಕಾಶವಿಲ್ಲವಾಗಿದೆ. ಆರ್ಥಿಕ ಅಭಿವೃದ್ಧಿ ಕುರಿತ ಅಧಿಕೃತ ಸಿದ್ಧಾಂತಗಳಲ್ಲಿ ಮಹಿಳೆಯರ ಸ್ಥಾನಮಾನವನ್ನು ಒಂದು ಪ್ರಮುಖ ಸಂಗತಿಯನ್ನಾಗಿ ಪ್ರತ್ಯೇಕವಾಗಿ ಪರಿಗಣಿಸುವುದರ ಬಗ್ಗೆ ತೀವ್ರ ಹಿಂಜರಿಕೆಯಿದೆಯೆಂದು ಅಮರ್ತ್ಯಸೇನ್ ತಮ್ಮ ಒಂದು ಪ್ರಸಿದ್ಧ ಪ್ರಬಂಧದಲ್ಲಿ ಬರೆದಿದ್ದಾರೆ (೧೯೯೦). ಸಮಾಜದಲ್ಲಿ ಅನೇಕ ಬಗೆಯ ಅಸಮಾನತೆಗಳಿರುತ್ತವೆ. ಆದರೆ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಅವುಗಳನ್ನು ಕೇವಲ ವರಮಾನದ - ವರ್ಗದ ನೆಲೆಗೆ ಸೀಮಿತಗೊಳಿಸಿರುವುದು ಕಂಡುಬರುತ್ತದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಲಿಂಗ ಸಂಬಂಧಗಳನ್ನು ಕುರಿತ ಚರ್ಚೆಯನ್ನು ‘ವಿಘಟನಾಕಾರಿ’ಯೆಂದು ಟೀಕಿಸುವುದು ಕಂಡುಬರುತ್ತದೆ. ವಾಸ್ತವವಾಗಿ ವರ್ಗ - ಜಾತಿ - ವೃತ್ತಿ ಮುಂತಾದ ಸಂಗತಿಗಳಿಗೆ ಸಂಬಂಧಿಸಿದ ಅಸಮಾನತೆ ಕುರಿತ ಚರ್ಚೆಗೆ ಲಿಂಗ ಸಂಬಂಧಿ ಅಸಮಾನತೆ ಕುರಿತ ಚರ್ಚೆಯು ಪೂರಕವಾಗಿರುತ್ತದೆ ವಿನಾ ಪರ್ಯಾಯವಾಗಿರುವುದಿಲ್ಲವೆಂಬುದನ್ನು ಸೇನ್ ತೋರಿಸಿಕೊಟ್ಟಿದ್ದಾರೆ. ಅಸಮಾನತೆಯ ಬಹುರೂಪಿ ನೆಲೆಗಳ ಬಗ್ಗೆ ಸೇನ್‌ತುಂಬಾ ಬರೆದಿದ್ದಾರೆ.

ಅಭಿವೃದ್ಧಿ ಕುರಿತ ಚರ್ಚೆಗಳಲ್ಲಿ ಲಿಂಗ ಸಂಬಂಧಗಳಿಗೆ ಪ್ರಮುಖ ಸ್ಥಾನ ನೀಡಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸೇನ್ ಒಂದು ಮುಖ್ಯ ಪ್ರಶ್ನೆ ಎತ್ತಿದ್ದಾರೆ. ವೈದ್ಯ ಶಾಸ್ತ್ರದ ಪ್ರಕಾರ ಹಾಗೂ ಅದಕ್ಕೆ ಸಂಬಂಧಿಸಿದ ಪುರಾವೆಗಳು ತೋರಿಸುತ್ತಿರುವಂತೆ ಸಮಾಜದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಅವಕಾಶಗಳು ಸಮಾನವಾಗಿದ್ದ ಪಕ್ಷದಲ್ಲಿ ಮಹಿಳೆಯರ ಬದುಕುಳಿಯುವ ಸಾಧ್ಯತೆ ಹಾಗೂ ಜೀವನಾಯುಷ್ಯಗಳು ಪುರುಷರಿಗಿಂತ ಅಧಿಕವಾಗಿರುತ್ತದೆ. ಆದರೆ ವಾಸ್ತವ ಸ್ಥಿತಿ ಭಾರತದಲ್ಲಿ, ಅದರಂತೆ ಕರ್ನಾಟಕದಲ್ಲಿ ಅದಕ್ಕಿಂತ ಭಿನ್ನವಾಗಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ೩೫ನೆಯ ವರ್ಷದವರೆಗೆ ಮಹಿಳೆಯರ ಮರಣ ಪ್ರಮಾಣವು ಪುರುಷರ ಮರಣ ಪ್ರಮಾಣಕ್ಕಿಂತ ಅಧಿಕವಿದೆ. ಶಿಶುಮರಣ ಹಾಗೂ ಮಕ್ಕಳ ಮರಣಗಳಿಗೆ ಸಂಬಂಧಿಸಿದಂತೆಯೂ ಲಿಂಗತಾರತಮ್ಯ ಕಂಡುಬರುತ್ತದೆ. ಇದರ ಪರಿಣಾಮವಾಗಿ ಲಿಂಗ ಅನುಪಾತವು ಮಹಿಳೆಯರಿಗೆ ಪ್ರತಿಕೂಲವಾಗಿ ಪರಿಣಮಿಸಿದೆ. ಭಾರತದಲ್ಲಿ ಲಿಂಗ ಅನುಪಾತವು ೯೩೩ ರಷ್ಟಿದ್ದರೆ ಕರ್ನಾಟಕದಲ್ಲಿ ಅದು ೯೬೪ ರಷ್ಟಿದೆ. ಅಂದರೆ ೨೦೦೧ ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ೩೫೫.೩೯ ಲಕ್ಷ ಮಹಿಳೆಯರು ಕಾಣೆಯಾಗಿದ್ದರೆ ಕರ್ನಾಟಕದಲ್ಲಿ ೯.೭೯ ಲಕ್ಷ ಮಹಿಳೆಯರು ಕಾಣೆಯಾಗಿದ್ದಾರೆ. ಇದಕ್ಕಿಂತ ಆತಂಕಕಾಗಿ ಸಂಗತಿಯೆಂದರೆ ೦ - ೬ ವಯೋಮಾನದ ಮಕ್ಕಳಿಗೆ ಸಂಬಂಧಿಸಿದಂತೆ ಲಿಂಗ ಅನುಪಾತವು ೧೯೯೧ ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ೯೪೫ ರಷ್ಟಿದ್ದುದು ೨೦೦೧ ರಲ್ಲಿ ೯೨೭ ಕ್ಕೆ ಕುಸಿದಿದೆ. ಕರ್ನಾಟಕದಲ್ಲಿ ಅದು ೯೬೦ ರಿಂದ ೯೪೯ ಕ್ಕೆ ಇಳಿದಿದೆ. ಇದನ್ನು ಸೇನ್ ಲಿಂಗತಾರತಮ್ಯದ ಸೂಚಿಯನ್ನಾಗಿ ಬಳಸುತ್ತಾರೆ. ಲಿಂಗ ಅನುಪಾತದಲ್ಲಿನ ಕೊರತೆಯನ್ನು ಅವರು ‘ಕಾಣೆಯಾದ ಮಹಿಳೆಯರು’ ಎಂದು ಕರೆದಿದ್ದಾರೆ. ಇಂತಹ ವಿಕೃತಿಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಸರಿಪಡಿಸಲು ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮಗಳನ್ನು ಕುರಿತಂತೆ ಚರ್ಚಿಸಬೇಕಾಗುತ್ತದೆ.

**ಮಹಿಳಾ ದುಡಿಮೆಗಾರರು**

ಕರ್ನಾಟಕದಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ದುಡಿಮೆಗಾರರ ಸಂಖ್ಯೆ ೨೩೫.೨೨ ಲಕ್ಷ. ಇವರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ. ೩೫.೦೭. ಆದರೆ ರಾಜ್ಯದಲ್ಲಿರುವ ಒಟ್ಟು ದಿನಗೂಲಿ ದುಡಿಮೆಗಾರರ ಸಂಖ್ಯೆ ೬೨.೦೯ ಲಕ್ಷ. ಇವರಲ್ಲಿ ಮಹಿಳಾ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ. ೫೮.೧೯. ಕರ್ನಾಟಕದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಸಂಖ್ಯೆ ೧೩೧.೪೪ ಲಕ್ಷ. ಅವರಲ್ಲಿ ಮಹಿಳೆಯರ ಪ್ರಮಾಣ ಶೇ. ೪೩. ಆದರೆ ಕೃಷಿಯೇತರ ಚಟುವಟಿಕೆಗಳನ್ನು ತೆಗೆದುಕೊಂಡರೆ ಮಹಿಳಾ ದುಡಿಮೆಗಾರರ ಪ್ರಮಾಣ ಕೇವಲ ಶೇ. ೨೪.೨೭ ರಷ್ಟಿದೆ.

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಸಮಾಜದಲ್ಲಿ ಯಾವುದಕ್ಕೆ ಕಡಿಮೆ ಕೂಲಿಯಿದೆಯೋ ಮತ್ತು ಯಾವುದು ಕೆಳಮಟ್ಟದ ಸ್ಥಾನಮಾನ ಹೊಂದಿದೆಯೋ ಅಂತಹ ದುಡಿಮೆಯಲ್ಲಿ ಮಹಿಳೆಯರ ಪ್ರಮಾಣವು ಪುರುಷರ ಪ್ರಮಾಣಕ್ಕಿಂತ ಅಧಿಕವಾಗಿದೆ. ಇದಕ್ಕಿಂತ ಮುಖ್ಯವಾಗಿ ಮಹಿಳೆಯರು ಮನೆಯೊಳಗಿನ ಮತ್ತು ಮನೆಯ ಹೊರಗಿನ ದುಡಿಮೆಗಳೆರಡನ್ನು ನಿಭಾಯಿಸಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ಸಾಮಾನ್ಯವಾಗಿ ಗೃಹವಾರ್ತೆ ದುಡಿಮೆಯಿಂದ ಪುರುಷರಿಗೆ ವಿನಾಯಿತಿಯಿದೆ. ನಮ್ಮ ಸಂದರ್ಭದಲ್ಲಿ ಮನೆಯ ಹೊರಗೆ ದುಡಿಯುವ ಮಹಿಳೆಯರು ಇಬ್ಬಗೆಯ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾದ ಸ್ಥಿತಿ ಎದುರಿಸುತ್ತಿದ್ದಾರೆ. ಮಹಿಳೆಯರು ಮನೆಯೊಳಗೆ ನಿರ್ವಹಿಸುವ ಸಂತಾನೋತ್ಪತ್ತಿ ಹಾಗೂ ಸಂಗೋಪನಾ ದುಡಿಮೆಯನ್ನು ಜೈವಿಕವೆಂದು ವರ್ಗೀಕರಿಸಲಾಗಿದೆ. ಅವುಗಳನ್ನು ಉತ್ಪಾದನಾ ಚಟುವಟಿಕೆಗಳ ಚೌಕಟ್ಟಿಗೆ ಸೇರಿಸುವುದಿಲ್ಲ.

**ಸಾಮಾಜಿಕ ತಂತ್ರಜ್ಞಾನ**

ಮಹಿಳೆಯರ ಮನೆಯೊಳಗಿನ ಹಾಗೂ ಸಂಭಾವನಾರಹಿತ ದುಡಿಮೆಯು ಉತ್ಪಾದನಾ ದುಡಿಮೆಯೋ ಅಥವಾ ಅನುತ್ಪಾದಕವೋ ಎಂಬುದರ ಬಗ್ಗೆ ಸೆನ್ ತಮ್ಮ ಪ್ರಸಿದ್ಧ (ಜೆಂಡರ್ ಆಂಡ್ ಕೋಆಪರೇಟಿವ್ ಕಾನ್ಫ್ಲಿಕ್ಟ್ಸ್: ೧೯೯೦) ಪ್ರಬಂಧದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ನಿಜಕ್ಕೂ ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ಮಹಿಳೆಯರ ದುಡಿಮೆಯನ್ನು ಬಿಟ್ಟು ಸಮಾಜದಲ್ಲಿ ಉತ್ಪಾದನಾ ಚಟುವಟಿಕೆಗಳೆಂದು ಯಾವುದನ್ನು ಕರೆಯಲಾಗುತ್ತಿದೆಯೋ ಅದು ನಡೆಯಲು ಸಾಧ್ಯವೇ? ಇವೆರಡೂ ಪರಸ್ಪರಾವಲಂಬನೆಯ ಸಂಗತಿಗಳಾಗಿವೆ.

ಉತ್ಪಾದನೆಯೆಂಬುದು ಕೇವಲ ಕಚ್ಚಾ ಸರಕು ಮತ್ತು ಸಿದ್ಧಸರಕುಗಳ ನಡುವಣ ಸಂಬಂಧಕ್ಕೆ ಮಾತ್ರ ಸೀಮಿತವಾದ ಸಂಗತಿಯಲ್ಲ. ಏಕೆಂದರೆ ಅದು ಸಾಮಾಜಿಕ ವ್ಯವಸ್ಥೆಯೊಂದರ ನಡುವೆ ನಡೆಯಬೇಕಾಗುತ್ತದೆ. ಆದ್ದರಿಂದ ಕಾರ್ಖಾನೆ, ಉದ್ದಿಮೆ, ಕೃಷಿ – ಯಾವುದೇ ಚಟುವಟಿಕೆಯಾದರೂ ಅವು ಸಾಮಾಜಿಕ ವ್ಯವಸ್ಥೆಯ ಭಾಗವಾಗಿ ಜರುಗಬೇಕು.

ಉತ್ಪಾದನಾ ದುಡಿಮೆಯೆಂಬುದು ಇತರೆ ಅನೇಕ ಬಗೆಯ, ಅಂದರೆ ಗೃಹವಾರ್ತೆ, ಸಂಗೋಪನೆ, ಸಂತಾನೋತ್ಪತ್ತಿ, ಸಾಂತ್ವನ, ಹೊಲಗದ್ದೆಗಳಿಗೆ ಊಟ ಒಯ್ಯುವುದು ಮುಂತಾದವುಗಳನ್ನು ಅವಲಂಬಿಸಿಕೊಂಡಿದೆ. ತಂತ್ರಜ್ಞಾನವೆಂಬುದು ಕೇವಲ ಉಪಕರಣ, ಯಂತ್ರ – ತಂತ್ರಗಳಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಅದು ಸಾಮಾಜಿಕ ವ್ಯವಸ್ಥಾಪನೆಯ ಚೌಕಟ್ಟಿನಲ್ಲಿ ನಡೆಯುವ ಒಂದು ಚಟುವಟಿಕೆಯಾಗಿದೆ.

ಗೃಹವಾರ್ತೆಯನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. ಸಂಗೋಪನೆ, ಸಂತಾನೋತ್ಪತ್ತಿ, ಗೃಹವಾರ್ತೆ ಮುಂತಾದವುಗಳ ಮಹತ್ವವನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಉತ್ಪಾದನಾ ಚಟುವಟಿಕೆಗಳಿಗೆ ಅವುಗಳ ಕಾಣಿಕೆಯಿದೆ ಎಂಬುದನ್ನು ಮಾತ್ರ ಒಪ್ಪಲು ಸಮಾಜ ಸಿದ್ಧವಿಲ್ಲ. ಆದ್ದರಿಂದ ಅಂತಹ ಚಟುವಟಿಕೆಗಳನ್ನು ಅನುತ್ಪಾದಕನೆಂದು ವರ್ಗೀಕರಿಸಲಾಗಿದೆ. ಆದರೆ ಮನೆಯೊಳಗಿನ ಹಾಗೂ ಮನೆಯ ಹೊರಗಿನ ಚಟುವಟಿಕೆಗಳನ್ನು ಸಂಯುಕ್ತವಾಗಿ ಉತ್ಪಾದನಾ ಚಟುವಟಿಕೆಗಳೆಂದು ಪರಿಗಣಿಸುವ ಅಗತ್ಯವನ್ನು ಸೆನ್ ಒತ್ತಾಯಿಸುತ್ತಿದ್ದಾರೆ.

ಕುಟುಂಬವೊಂದರ ಅಭ್ಯುದಯವು ಇವೆರಡೂ ಬಗೆಯ ಚಟುವಟಿಕೆಗಳ - ಅಂದರೆ ವರಮಾನ ಗಳಿಸುವ, ಸರಕುಗಳನ್ನು ಉತ್ಪಾದಿಸುವ, ಖರೀದಿಸುವ, ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ಮುಂತಾದವುಗಳ ಒಟ್ಟು ಪರಿಣಾಮವನ್ನು ಅವಲಂಬಿಸಿದೆ. ಒಟ್ಟು ಕುಟುಂಬವೊಂದರ ಪ್ರಗತಿಯು ದುಡಿಮೆಯ ಲಿಂಗ ಸಂಬಂಧಿ ವರ್ಗೀಕರಣವನ್ನು ಅವಲಂಬಿಸಿದೆ. ಕುಟುಂಬ ವ್ಯವಸ್ಥೆಯಲ್ಲಿ ಅದರ ಸದಸ್ಯರು ಎರಡು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಮೊದಲನೆಯದು ಕುಟುಂಬದ ಸಂಪತ್ತಿಗೆ ಕೊಡುಗೆ ನೀಡುವುದು. ಇದು ಸಹಕಾರವನ್ನು ಬಯಸುತ್ತದೆ. ಎರಡನೆಯದು ಕುಟುಂಬದ ಸಂಪತ್ತನ್ನು ಸದಸ್ಯರೆಲ್ಲರೂ ಹಂಚಿಕೊಳ್ಳುವುದು. ಇದು ಸಂಘರ್ಷದ ಸಂಗತಿಯಾಗಿದೆ. ಯಾರು ಯಾವ ಚಟುವಟಿಕೆ ಮಾಡಬೇಕು, ಯಾರು ಯಾವುದನ್ನು ಬಳಸಬೇಕು, ಯಾರು ತೀರ್ಮಾನ ತೆಗೆದುಕೊಳ್ಳಬೇಕು ಮುಂತಾದವುಗಳ ನ್ನೊಳಗೊಂಡ ಸಾಮಾಜಿಕ ವ್ಯವಸ್ಥೆಯು ಲಿಂಗ ಸಂಬಂಧಿ ಶ್ರಮವಿಭಜನೆಯನ್ನು ಅವಲಂಬಿಸಿದೆ. ಲಿಂಗ ಸಂಬಂಧಿ ಶ್ರಮ ವಿಭಜನೆಯೆಂಬುದು ಅಂತಹ ಒಂದು ಸಾಮಾಜಿಕ ವ್ಯವಸ್ಥೆಯಾಗಿದೆ.

ಸಾಮಾಜಿಕ ವ್ಯವಸ್ಥೆಯನ್ನು ವಿಶಾಲವಾದ ನೆಲೆಯಲ್ಲಿ ತಂತ್ರಜ್ಞಾನವೆಂದೂ, ಉತ್ಪಾದನೆಯೆಂದು ಪರಿಗಣಿಸುವುದರಿಂದ ಅನೇಕ ಉಪಯೋಗಗಳಿವೆ. ಮೊದಲನೆಯದಾಗಿ ಯಾವುದನ್ನು ಇದುವರೆವಿಗೂ 'ಸಾಂಸ್ಕೃತಿಕ'ವೆಂದು ವರ್ಗೀಕರಿಸಿಕೊಂಡು ಬರಲಾಗಿದೆಯೋ ಅದನ್ನು ಉತ್ಪಾದನಾ ನೆಲೆಯಿಂದ ಪರಿಭಾವಿಸಿಕೊಳ್ಳಬೇಕಾದ ಅಗತ್ಯವನ್ನು ಅದು ತೋರಿಸುತ್ತದೆ. ಇದುವರೆವಿಗೂ ಯಾವುದನ್ನು ಉತ್ಪಾದನಾ ಚೌಕಟ್ಟಿನೊಳಗೆ ಸೇರಿಸಿರಲಿಲ್ಲವೋ ಅವುಗಳನ್ನು ಉತ್ಪಾದನಾ ಚಟುವಟಿಕೆಗಳೆಂದು ಈಗ ಗುರುತಿಸುವುದು ಸಾಧ್ಯವಾಗುತ್ತದೆ. ಎರಡನೆಯದಾಗಿ ತೀವ್ರ ಅಸಮಾನತೆಯಿಂದ ಕೂಡಿರುವ ಲಿಂಗ ಸಂಬಂಧಿ ವರ್ಗೀಕರಣದ ನೆಲೆಗಳನ್ನು ಇದು ಅನಾವರಣ ಮಾಡುತ್ತದೆ. ಮೂರನೆಯದಾಗಿ ಸಂಭಾವನಾ ಸಹಿತ ಮತ್ತು ಸಂಭಾವನಾ ರಹಿತವೆಂಬ ವರ್ಗೀಕರಣವು ಉಂಟು ಮಾಡುತ್ತಿರುವ ತಾರತಮ್ಯವಾದಿ ಪರಿಣಾಮಗಳನ್ನು ಇದು ತೋರಿಸುತ್ತದೆ.

**ಹಿತಾಸಕ್ತಿಗಳ ರಾಜಕಾರಣ**

ಮಹಿಳೆಯರಿಗೆ ಅವರದೇ ಆದ 'ಹಿತಾಸಕ್ತಿ'ಗಳಿರುವುದು ಸಾಧ್ಯವಿಲ್ಲವೆಂಬ ಸಂಗತಿಯು ವ್ಯಾಪಕವಾಗಿ ನೆಲೆಯೂರಿದೆ. ಹೀಗೆ 'ಹಿತಾಸಕ್ತಿ'ಗಳ ಬಗ್ಗೆ ಯೋಚಿಸುವುದು 'ಮಹಿಳೆಗೆ' ತಕ್ಕುದಲ್ಲವೆಂಬ ನಂಬಿಕೆಯನ್ನು ಸಮಾಜದಲ್ಲಿ ಬಿತ್ತಲಾಗಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯೊಬ್ಬಳನ್ನು 'ನಿನಗೇನು ಬೇಕು' ಎಂಬ ಪ್ರಶ್ನೆ ಕೇಳಿದರೆ ಸಹಜವಾಗಿ ಆಕೆಯ ಗಂಡನ, ಮಕ್ಕಳ, ಕುಟುಂಬದ ಕ್ಷೇಮಾಭ್ಯುದಯವನ್ನು ಹಾರೈಸುತ್ತಾಳೆ ವಿನಾ 'ತನಗೆ' ಏನು ಬೇಕು, ತನ್ನ ಹಿತಾಸಕ್ತಿಗಳೇನು ಎಂಬುದನ್ನು ಹೇಳುವುದಿಲ್ಲ. ತನಗೂ ಹಿತಾಸಕ್ತಿಗಳಿವೆ, ಹಿತಾಸಕ್ತಿಗಳಿರಬಹುದು, ಅವುಗಳ ಬಗ್ಗೆ ಯೋಜಿಸಬೇಕು ಎಂಬ ವಿಚಾರಗಳು ಮಹಿಳೆಯರ ಮನಸ್ಸಿನಲ್ಲಿ ಮೂಡದಂತೆ ಅವರನ್ನು ಬೆಳಸಲಾಗಿರುತ್ತದೆ. ಮಹಿಳೆಯರು ತಮ್ಮ ಹಿತಾಸಕ್ತಿಗಳೇನು ಎಂಬುದನ್ನು ಪರಿಭಾವಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿರುವ ಸಂಗತಿಯ ಆಧಾರದ ಮೇಲೆ ಅವರಿಗೆ ಹಿತಾಸಕ್ತಿಗಳೇ ಇಲ್ಲವೆಂದು ಹೇಳುವುದು ಸರಿಯಾಗುವುದಿಲ್ಲ. ಅವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಬಗ್ಗೆ, ತಮ್ಮ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ, ತಮ್ಮ ಹಿತಾಸಕ್ತಿಗಳನ್ನು ಗುರುತಿಸಿಕೊಳ್ಳುವ ಬಗ್ಗೆ ಯೋಜಿಸುವಂತಾಗಬೇಕು. ಈ ನೆಲೆಯಿಂದ ಹುಟ್ಟಿಕೊಂಡ ಚರ್ಚೆಯ ಫಲವೇ 'ಸಶಕ್ತೀಕರಣ ಸಿದ್ಧಾಂತ'. ಸಶಕ್ತೀಕರಣವೆಂದರೆ ಸ್ವಂತ ಕಾಲ ಮೇಲೆ ನಿಲ್ಲುವುದು, ಲಿಂಗ ಸಮಾನತೆ, ಸ್ವತಂತ್ರ ವರಮಾನದ ಮೂಲವನ್ನು ಹೊಂದುವುದು ಮುಂತಾದ ರೀತಿಯಲ್ಲಿ ನಿರ್ವಚಿಸಲಾಗುತ್ತಿದೆ. ಆದರೆ ಸಶಕ್ತೀಕರಣವನ್ನು ತುಂಬಾ ವ್ಯಾಪಕವಾದ ಹಾಗೂ ನಿರ್ದಿಷ್ಟವಾದ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಅದೊಂದು ರಾಜಕೀಯ ಪರಿಭಾವನೆ. ಅದು ಅಧಿಕಾರ ಹಂಚಿಕೆಗೆ ಸಂಬಂಧಿಸಿದ ಸಂಗತಿ. ಮಹಿಳೆಯರ ಆಸ್ತಿ ಹಕ್ಕು, ಗೃಹವಾರ್ತೆಯನ್ನು ಗಂಡನೊಂದಿಗೆ ಹಂಚಿಕೊಳ್ಳುವುದು, ಕೌಟುಂಬಿಕ ಸಂಗತಿಗಳಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವುದು ಮುಂತಾದ ಸಂಗತಿಗಳನ್ನು ಸಶಕ್ತೀಕರಣ ಒಳಗೊಂಡಿದೆ. ತನ್ನ ವ್ಯಕ್ತಿತ್ವ - ಬದುಕು - ದೈಹಿಕ ಭದ್ರತೆಗಳಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಮಹಿಳೆಗಿರಬೇಕು. ಹೀಗೆ ಇಂತಹ ಹಕ್ಕುಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಯೇ ಸಶಕ್ತೀಕರಣ. ಅಮರ್ತ್ಯಸೇನ್

ಹೇಳುವ ಧಾರಣಾ ಸಾಮರ್ಥ್ಯ, ಕರ್ತೃತ್ವ, ಸಶಕ್ತೀಕರಣ, ಸಂಘರ್ಷ ಮುಂತಾದ ಸಂಗತಿಗಳು ಸ್ತ್ರೀವಾದಿ ಅರ್ಥಶಾಸ್ತ್ರದ ಬೆಳವಣಿಗೆಗೆ ಕಾರಣವಾಗಿವೆ. ಅಮರ್ತ್ಯಸೆನ್ ತನ್ನನ್ನು ತಾನು 'ಸ್ತ್ರೀವಾದಿ ಅರ್ಥಶಾಸ್ತ್ರಜ್ಞ'ನೆಂದು ಕರೆದುಕೊಂಡಿದ್ದಾನೆ.

ಅಭಿವೃದ್ಧಿ ಕುರಿತಂತೆ ಚರ್ಚಿಸುವಾಗ, ಯೋಜನೆ ರೂಪಿಸುವಾಗ ನಾಡಿನ ಸರಿ ಸುಮಾರು ಅರ್ಧದಷ್ಟಿರುವ ಮಹಿಳೆಯರನ್ನು 'ಅಯ್ಯೋ ಪಾಪ' ಎನ್ನುವ ನೆಲೆಗೆ ಪ್ರತಿಯಾಗಿ ಹಕ್ಕಿನ ಸಂಗತಿಯಾಗಿ ಪರಿಗಣಿಸಬೇಕು ಎಂಬುದು ಇಂದು ನಿರ್ವಿವಾದದ ಸಂಗತಿಯಾಗಿದೆ.

**ಸಂಗ್ರಹ**

ಅಭಿವೃದ್ಧಿಯನ್ನು ಕುರಿತಂತೆ ಎರಡು ತಾತ್ವಿಕ ಧಾರೆಗಳು ಇಂದು ಪ್ರಚಲಿತದಲ್ಲಿನ ಮೊದಲನೆಯದು ವರಮಾನ ಅಭಿವೃದ್ಧಿ ವಿಚಾರಧಾರೆ ಮತ್ತು ಎರಡನೆಯದು ಮಾನವ ಅಭಿವೃದ್ಧಿ ವಿಚಾರಧಾರೆ. ವರಮಾನ ಅಭಿವೃದ್ಧಿ ವಿಚಾರಧಾರೆಯ ಮಿತಿಗಳನ್ನು ಅದು ಉಂಟು ಮಾಡಿರುವ ವಿಕಾರಗಳನ್ನು ಕುರಿತಂತೆ ಅಮರ್ತ್ಯಸೇನ್, ಮೆಹಬೂಬ್ ಉಲ್‌ಹಕ್, ಮಾರ್ತನುಸ್‌ಬಾಮ್, ಜೀನ್ ಡ್ರೀಜ್ ಮುಂತಾದವರು ಚರ್ಚೆ ಮಾಡಿದ್ದಾರೆ. ಈ ಬಗೆಯ ವಿಚಾರಧಾರೆಗೆ ಪ್ರತಿಯಾಗಿ ಮಾನವ ಅಭಿವೃದ್ಧಿ ವಿಚಾರಧಾರೆಯನ್ನು ರೂಪಿಸಲಾಗಿದೆ.

ಜನರ ಬದುಕು ಅನ್ನೋದು ವರಮಾನ, ಉತ್ಪನ್ನ, ಉದ್ಯೋಗಗಳನ್ನು ಮೀರಿ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಕರ್ತೃತ್ವಗಳನ್ನು ಒಳಗೊಳ್ಳಬೇಕು ಎಂಬುದು ಸೆನ್ ಮತ್ತು ಹಕ್ ಅವರ ಪ್ರತಿಪಾದನೆ. ಅಭಿವೃದ್ಧಿಯು ಮಹಿಳೆಯರ ಬದುಕನ್ನು ಒಳಗೊಳ್ಳಬೇಕಾಗುತ್ತದೆ. ಲಿಂಗ ನಿರಪೇಕ್ಷತೆಯೆಂಬುದು ಲಿಂಗ ತಾರತಮ್ಯಕ್ಕೆ ಒಂದು ಸಾಧನವಾಗಿ ಬಿಟ್ಟಿದೆ. ಜನರು ಏನಾಗಿದ್ದಾರೆ ಮತ್ತು ಅವರು ಏನು ಮಾಡಬಲ್ಲರು ಎಂಬುದು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವಾಗಬೇಕು.

ಅಕ್ಷರ, ಆರೋಗ್ಯ, ಆಹಾರ, ಆದಾಯ ಮತ್ತು ಆಸರೆಗಳನ್ನು ಒಳಗೊಂಡಂತೆ ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕಾಗಿದೆ. ಅಕ್ಷರ, ಆರೋಗ್ಯ, ಆಹಾರ, ಮುಂತಾದವು ಕೇವಲ ಅಭಿವೃದ್ಧಿಯ ಸಾಧನಗಳು ಮಾತ್ರವಲ್ಲ. ಅವು ಅಭಿವೃದ್ಧಿಯ ಅಂತರ್ಗತ ಸಂಗತಿಗಳಾಗಿವೆ. ಲಿಂಗ ಸಂಬಂಧಗಳಿಗೆ ಅತೀತವಾದ ನೆಲೆಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವುದು ಸರಿಯಲ್ಲ. ಮಹಿಳೆಯರ ಅಭಿವೃದ್ಧಿ ಮತ್ತು ಲಿಂಗ ಸಮಾನತೆ ಎಂಬ ಸಂಗತಿಗಳು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಷಯಗಳಲ್ಲ. ಅವು ಸಮಾಜದ, ಅಭಿವೃದ್ಧಿಯ ಸಂಗತಿಗಳು. ಮಹಿಳೆಯರ ನಿರ್ವಹಿಸುವ ಗೃಹವಾರ್ತೆ, ಸಂಗೋಪನೆ, ಸಂತಾನೋತ್ಪತ್ತಿಗಳನ್ನು ಉತ್ಪಾದನಾ ದುಡಿಮೆಯೆಂದು ಪರಿಗಣಿಸುವ ಸಂಗತಿಯನ್ನು ಸೆನ್ ಒತ್ತಾಯಿಸುತ್ತಿದ್ದಾರೆ. ಅಭಿವೃದ್ಧಿಯೆನ್ನುವುದು ದತ್ತಿ ಅಥವಾ ಉಂಬಳಿಯಲ್ಲ. ಅದು ಜನರ ಹಕ್ಕು. ಅದನ್ನು ದಕ್ಕಿಸಿ ಕೊಳ್ಳುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು. ಇಂತಹ ಸಾಮರ್ಥ್ಯದ ವರ್ಧನೆಯೇ ಅಭಿವೃದ್ಧಿ.

**ಪರಾಮರ್ಶನ ಸೂಚಿ**

ಮೆಹಬೂಬ್‌ಉಲ್ ಹಕ್, ೧೯೯೬, **ರಿಫ್ಲೆಕ್ಷನ್ಸ್ ಆನ್ ಹೂಮನ್ ಡೆವಲಪ್‌ಮೆಂಟ್,** ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಮೆಹಬೂಬ್ ಉಲ್ ಹಕ್, ೧೯೯೦, **ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್**, ಯುಎನ್‌ಡಿಪಿ, ನವದೆಹಲಿ.

ಅಮರ್ತ್ಯಸೆನ್, ೧೯೯೯, **ಫ್ರೀಡಮ್ ಆಸ್ ಡೆವಲಪ್‌ಮೆಂಟ್**, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಮಾರ್ಥ ಸಿ. ನುಸ್‌ಬೌಮ್, ೨೦೦೦, **ವುಮೆನ್ ಆಂಡ್ ಹೂಮನ್ ಡೆವಲಪ್‌ಮೆಂಟ್ : ದಿ ಕೆಫಬಲಿಟೀಸ್ ಅಪ್ರೋಚ್,** ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್

ಜೀನ್‌ಡ್ರೀಜ್, ಅಮರ್ತ್ಯಸೇನ್, ೨೦೦೨, **ಇಂಡಿಯಾ : ಡೆವಲಪ್‌ಮೆಂಟ್ ಆಂಡ್ ಪಾರ್ಟಿಸಿಪೇಶನ್,** ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಸುಧೀರ್ ಆನಂದ್, ೧೯೯೪, ಡೆವಲಪ್‌ಮೆಂಟ್ ಆಂಡ್ ಫ್ರೀಡಮ್,
ಇಲ್ಲಿ **ಪಾಪ್ಯೂ ಲೇಶನ್‌ಪಾಲಿಸೀಸ್ ರಿಕನ್ಸಿಡರ್ಡ್: ಹೆಲ್ಥ್, ಎಂಪವರ್‌ಮೆಂಟ್, ಆಂಡ್ ರೈಟ್ಸ್(ಸಂ.)** ಗೀತಾ ಸೇನ್ ಮತ್ತು ಇತರರು (ಹಾರ್ ವರ್ಡ್ ಸಿರೀಸ್ ಆನ್ ಪಾಪ್ಯೂಲೇಶನ್ ಆಂಡ್ ಇಂಟರ್ ನ್ಯಾಷನಲ್ ಹೆಲ್ಥ್)

ನೈಲಾ ಕಬೀರ್, ೧೯೯೪, **ರಿವರ್ಸಡ್ ರಿಯಾಯಸಲಿಟೀಸ್ : ಹೈರಾರ್ಕೀಸ್ ಇನ್ ಡೆವಲಪ್‌ಮೆಂಟ್ ಥಾಟ್**, ಕಾಳಿ ಫಾರ್ ವುಮೆನ್, ನವದೆಹಲಿ.

ಅಮರ್ತ್ಯಸೇನ್, ೧೯೯೦, 'ಜೆಂಡರ್ ಆಂಡ್ ಕೋಆಪರೇಟಿವ್ ಕಾನ್ಫಿಕ್ಟ್ಸ್' ಇಲ್ಲಿ ಐರನಿ ಟಿಂಕರ್ (ಸಂ) **ಪರ್‌ಸಿಸ್ಟಿಂಗ್ ಇನಿಕ್ವಾಲಿಟೀಸ್,** ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಕರ್ನಾಟಕ ಸರ್ಕಾರ ೨೦೦೧, ಸೆನ್ಸಸ್ ಆಫ್ ಇಂಡಿಯಾ, ೨೦೦೧, **ಪ್ರೈಮರಿ ಸೆನ್ಸ್‌ಸ್ ಅಬ್‌ಸ್ಟ್ರಾಕ್ಟ್.**

# ೨. ಮಾನವ ಅಭಿವೃದ್ಧಿ : ಕರ್ನಾಟಕದ ಸಾಧನೆ (೧)

**ಪ್ರಸ್ತಾವನೆ**

ಅಭಿವೃದ್ಧಿಯನ್ನು ಕುರಿತಂತೆ ಸೈದ್ಧಾಂತಿಕ ಚರ್ಚೆಗಳು ಇಂದಿಗೂ ನಡೆಯುತ್ತಿವೆ. ಅದೊಂದು ವಿಕಾಸ - ವಿಸ್ತ್ರುತಗೊಳ್ಳುತ್ತಿರುವ ವಿಚಾರ ಪ್ರಣಾಳಿಕೆಯಾಗಿದೆ. 'ವರಮಾನ ವರ್ಧನಾ ಅಭಿವೃದ್ಧಿ ಸಿದ್ಧಾಂತ'ಕ್ಕೆ ಪರ್ಯಾಯವಾಗಿ 'ಜನರ ಧಾರಣಾ ಸಾಮರ್ಥ್ಯ ವರ್ಧನಾ ಅಭಿವೃದ್ಧಿ ಸಿದ್ಧಾಂತ'ವನ್ನು ರೂಪಿಸಿದ ಅಮರ್ತ್ಯಸೇನ್ ಆರಂಭದಲ್ಲಿ ಜನರ ಧಾರಣಾ ಸಾಮರ್ಥ್ಯ ಮತ್ತು ಹಕ್ಕುದಾರಿಕೆ ನೆಲೆಗಳಲ್ಲಿ ಅಭಿವೃದ್ಧಿಯನ್ನು ನಿರ್ವಚಿಸುತ್ತಿದ್ದರು. ಮುಂದೆ ಅವರೇ ಅಭಿವೃದ್ಧಿಯನ್ನು 'ಸ್ವಾತಂತ್ರ್ಯ'ದ ಪರಿಭಾಷೆಯಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಿದರು. ಈಗ ಅವರು ಮಾನವ ಹಕ್ಕುಗಳ ಪರಿಭಾಷೆಯಲ್ಲಿ ಅಭಿವೃದ್ಧಿಯನ್ನು ಹಿಡಿದಿಡಲು ಪ್ರಯತ್ನಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ 'ಮಾನವ ಅಭಿವೃದ್ಧಿ' ವಿಚಾರ ಪ್ರಣಾಳಿಕೆಯ ವಿವಿಧ ನೆಲೆಗಳನ್ನು ಕುರಿತಂತೆ ಚರ್ಚಿಸಲಾಗುವುದು. ಈ ದಿಶೆಯಲ್ಲಿ ಕರ್ನಾಟಕದ ಸಿದ್ಧಿ - ಸಾಧನೆಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಯುಎನ್‌ಡಿಪಿಯು ೧೯೯೦ ರಿಂದಲೂ ಪ್ರತಿ ವರ್ಷವೂ ಪ್ರಕಟಿಸಿಕೊಂಡು ಬರುತ್ತಿರುವ 'ಮಾನವ ಅಭಿವೃದ್ಧಿ ವರದಿ'ಗಳ ಮಾದರಿಯಲ್ಲಿ ಕರ್ನಾಟಕ ಸರ್ಕಾರವು ಮಾನವ ಅಭಿವೃದ್ಧಿ ಕುರಿತ ಮೊದಲ ವರದಿಯನ್ನು ೧೯೯೯ ರಲ್ಲಿಯೂ, ಎರಡನೆಯ ವರದಿಯನ್ನು ೨೦೦೫ ರಲ್ಲೂ ಪ್ರಕಟಿಸಿದೆ. ಈ ವರದಿಗಳಲ್ಲಿ ಕರ್ನಾಟಕದ ಜಿಲ್ಲೆಗಳ ಮಟ್ಟದಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಗತಿಗಳನ್ನು ಹಿಡಿದಿಡಲಾಗಿದೆ. ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಲಿಂಗ ಸಂಬಂಧಿ ಆಯಾಮವನ್ನು ಒಳಗೊಂಡಿದೆ ಕರ್ನಾಟಕದಲ್ಲಿ ಮಹಿಳೆಯರ ಅಭಿವೃದ್ಧಿ ಸ್ಥಿತಿಗತಿಯನ್ನು ವಿವರವಾಗಿ ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಪ್ರಸ್ತಾವನೆಯ ಭಾಗವನ್ನು ಬಿಟ್ಟು ಪ್ರಬಂಧದಲ್ಲಿ ಐದು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಾನವ ಅಭಿವೃದ್ಧಿಯ ಅರ್ಥವ್ಯಾಪ್ತಿಯನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ವರಮಾನ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಮೂರನೆಯ ಭಾಗದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದ ಬಗ್ಗೆ ವಿವರಣೆ ನೀಡಲಾಗಿದೆ. ನಾಲ್ಕನೆಯ ಭಾಗದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯನ್ನು ೧೯೯೧ ಮತ್ತು ೨೦೦೧ ಎರಡು ಕಾಲಘಟ್ಟಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿದೆ ಮತ್ತು ಕರ್ನಾಟಕದ ಜಿಲ್ಲೆಗಳನ್ನು ವವಿಧ ಪ್ರಕಾರಗಳಲ್ಲಿ ವರ್ಗೀಕರಿಸಿ ಅವುಗಳು ಅಭಿವೃದ್ಧಿಯ

ತುಲನಾತ್ಮಕ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ. ಕೊನೆಯ ಐದನೆಯ ಭಾಗದಲ್ಲಿ ಅಧ್ಯಯನದ ಮುಖ್ಯ ತಥ್ಯಗಳನ್ನು ಸಂಗ್ರಹ ರೂಪದಲ್ಲಿ ನೀಡಲಾಗಿದೆ.

<u>ಭಾಗ – ೧</u>

**ಮಾನವ ಅಭಿವೃದ್ಧಿ ನಿರ್ವಚನ**

ಪ್ರಖ್ಯಾತ ಅರ್ಥವಿಜ್ಞಾನಿ ದೀಪಕ್ ನಯ್ಯಾರ್ ತಮ್ಮ ಇತ್ತೀಚಿಗಿನ (೨೦೦೬) ಪ್ರಸಿದ್ಧ ಪ್ರಬಂಧವೊಂದರಲ್ಲಿ 'ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ (೧೯೫೦ರ ನಂತರದ) ಭಾರತವು ಅನುಭವಿಸಿದ ದೊಡ್ಡ ವೈಫಲ್ಯವೆಂದರೆ ವರ್ಧನೆಯಾದ ವರಮಾನವನ್ನು ಅಭಿವೃದ್ಧಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳದಿರುವುದು' ಎಂಬ ಮಾತು ಹೇಳಿದ್ದಾರೆ. ಯುಎನ್‌ಡಿಪಿಯು ಪ್ರಕಟಿಸಿರುವ ೨೦೦೭ರ ಮಾನವ ಅಭಿವೃದ್ಧಿ ವರದಿಯನ್ನು ಕುರಿತಂತೆ ಚರ್ಚಿಸುತ್ತ ಪಿ.ಸಾಯಿನಾಥ್‌ತಮ್ಮ 'ದಿ ಹಿಂದು' ಪತ್ರಿಕೆಯ ಅಂಕಣದಲ್ಲಿ ಭಾರತವನ್ನು 'ವರಮಾನದಲ್ಲಿ ಉನ್ನತ ಮಟ್ಟವನ್ನು - ಅಭಿವೃದ್ಧಿಯಲ್ಲಿ ಕೆಳಮಟ್ಟವನ್ನು ಸಾಧಿಸಿಕೊಂಡಿರುವ ದೇಶ'ವೆಂದು ಬಣ್ಣಿಸಿದ್ದಾರೆ (ದಿ ಹಿಂದೂ, ಡಿಸೆಂಬರ್ ೨೪, ೨೦೦೭). 'ವರಮಾನದ ಮೊತ್ತವೇ ಜನರ ಬದುಕಲ್ಲ' ಎಂಬ ಮಾತನ್ನು ಮೆಹಬೂಬ್ ಉಲ್ ಹಕ್ ಹೇಳುತ್ತಾರೆ (೧೯೯೬).

ಅತ್ಯಂತ ಕುತೂಹಲದ ಸಂಗತಿಯೆಂದರೆ ವರಮಾನ ವರ್ಧನಾ ಅಭಿವೃದ್ಧಿ ಸಿದ್ಧಾಂತದ ಇತಿಮಿತಿಗಳನ್ನು ಇನ್ನಿಲ್ಲದಂತೆ ಅಮರ್ತ್ಯಸೇನ್, ಮೆಹಬೂಬ್ ಉಲ್‌ಹಕ್, ಜೀನ್ ಡ್ರೀಜ್, ಮಾರ್ಥ ನುಸ್‌ಬಾಮ್ ಮುಂತಾದವರು ಮತ್ತು ಯುಎನ್‌ಡಿಪಿ ಯಂತಹ ಸಂಸ್ಥೆ ತಿಳಿ ಹೇಳುತ್ತಿದ್ದರೂ ಸರ್ಕಾರಗಳು ವಿಶ್ವಾದ್ಯಂತ 'ವರಮಾನದ ವರ್ಧನೆಯೇ ಅಭಿವೃದ್ಧಿ' ಎಂಬ ಪ್ರಮೇಯಕ್ಕೆ ಗಂಟು ಬಿದ್ದಿರುವುದು ಕಂಡುಬರುತ್ತದೆ. ಭಾರತದ ಹನ್ನೊಂದನೆಯ ಪಂಚವಾರ್ಷಿಕ ಯೋಜನೆ ಕುರಿತಂತೆ ೨೦೦೭ ರಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅನುಮೋದನೆಯನ್ನು ಪಡೆದುಕೊಂಡಿದೆ. ಆದರೆ ಅಲ್ಲಿ ಆದ್ಯತೆ ದೊರಕಿರುವುದು ವರಮಾನ ವರ್ಧನೆಯ ಪ್ರಮಾಣ ವಾರ್ಷಿಕ ಶೇ.೯ ಇರಬೇಕೋ ಅಥವಾ ಶೇ.೧೦ ಇರಬೇಕೋ ಎಂಬುದಾಗಿದೆ. ಹನ್ನೊಂದನೆಯ ಯೋಜನೆಯ 'ಆಶಯಪತ್ರ'ವನ್ನು ಪ್ರಕಟಿಸಿರುವ ಯೋಜನಾ ಆಯೋಗವು ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯದ ಮಹತ್ವವನ್ನು ಒತ್ತಿ ಹೇಳಿದೆ. 'ಜನರನ್ನು ಒಳಗೊಳ್ಳುವ ಅಭಿವೃದ್ಧಿ' ಎಂಬ ಹೊಸ ಮಂತ್ರವನ್ನು ಜಪಿಸಲಾಗುತ್ತಿದೆ. ಆದರೂ ಮಾನವ ಅಭಿವೃದ್ಧಿಗೆ ಆದ್ಯತೆ ನೀಡುವಲ್ಲಿ ರಾಷ್ಟ್ರಗಳು ಹಿಂಜರಿಯುತ್ತಿವೆ.

ವಾಸ್ತವಿಕವಾಗಿ ವರಮಾನ ವರ್ಧನಾ ಅಭಿವೃದ್ಧಿ ಮಾದರಿಯ ವೈಫಲ್ಯವೇ ಮಾನವ ಅಭಿವೃದ್ಧಿ ಮಾದರಿಯ ಹುಟ್ಟಿಗೆ ಕಾರಣವಾಗಿದೆ. ಜನರ ಸುಖ - ಸಮೃದ್ಧಿಯನ್ನು ನಲಿವು - ನೆಮ್ಮದಿಯನ್ನು ವರಮಾನದಿಂದ ಸಾಧಿಸಿಕೊಳ್ಳುತ್ತೇವೆ ಎಂಬುದು, ಅಭಿವೃದ್ಧಿಯನ್ನು ವರಮಾನದ ವರ್ಧನೆಯ ಮೂಲಕ ಮಾಪನ ಮಾಡುತ್ತೇವೆ ಎಂಬುದು ಸರಿಯಲ್ಲ. ವರಮಾನವೆಂಬುದು ಅಭಿವೃದ್ಧಿಯ ಸಾಧನವೇ ವಿನಾ ಅದೇ ಅಭಿವೃದ್ಧಿಯಲ್ಲ. ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ವರಮಾನವು ತುಂಬಾ ಅಗತ್ಯ. ಅದೊಂದು ಬಹುಮಹತ್ವದ ಆಯ್ಕೆಯಾಗಿದೆ. ಆದರೆ ಅದೊಂದೆ ಅಭಿವೃದ್ಧಿಯನ್ನು ಒಳಗೊಳ್ಳುವುದು ಸಾಧ್ಯವಿಲ್ಲ. ಅಭಿವೃದ್ಧಿಯೆಂಬುದು ವರಮಾನದ ವಿತರಣೆಗೆ ಸಂಬಂಧಿಸಿದ ಸಮಸ್ಯೆ ಇದು ಜನರ ಹಕ್ಕುದಾರಿಕೆಗೆ - ಜನರ ಧಾರಣ ಸಾಮರ್ಥ್ಯಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ಅಭಿವೃದ್ಧಿಯೆಂಬುದು ದಾನ - ದತ್ತಿ - ಉಂಬಳಿ ಅಲ್ಲ. ಅದು ಹಕ್ಕು. ಹಂಗಿನ ಬದುಕು ಅಭಿವೃದ್ಧಿಯೆನಿಸಿಕೊಳ್ಳಲಾರದು. ಹಂಗಿನ ಬದುಕನ್ನು ಹಕ್ಕಿನ ಬದುಕನ್ನಾಗಿ ಪರಿವರ್ತಿಸಿಕೊಳ್ಳಬೇಕಾಗುತ್ತದೆ.

ಹಾಗಾದರೆ ಮಾನವ ಅಭಿವೃದ್ಧಿಯೆಂದರೇನು?

ಯುಎನ್‌ಡಿಪಿಯು ೧೯೯೦ ರಲ್ಲಿ ಪ್ರಕಟಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ ಅದನ್ನು ಹೀಗೆ ನಿರ್ವಚಿಸಲಾಗಿದೆ.

*“ಜನರ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದೇ ಮಾನವ ಅಭಿವೃದ್ಧಿ. ಅತ್ಯಂತ ಮುಖ್ಯವಾದ ಮತ್ತು ವಿಸ್ತೃತವಾದ ಆಯ್ಕೆಗಳಾವುವೆಂದರೆ ಆರೋಗ್ಯಕಾಯರಾಗಿ ಮತ್ತು ಸುದೀರ್ಘ ಕಾಲ ಜನರು ಬದುಕುವುದು, ವಿದ್ಯಾ ಸಂಪನ್ನರಾಗುವುದು ಮತ್ತು ಗೌರವಯುತ ಬದುಕಿಗೆ ಅಗತ್ಯವಾದ ಸಂಪನ್ಮೂಲಗಳ ಮೇಲೆ ಹಕ್ಕುದಾರಿಕೆ ಸಾಧಿಸುವುದು”*

ಮುಂದುವರಿದು

*“ರಾಷ್ಟ್ರವೊಂದರ ನಿಜವಾದ ಸಂಪತ್ತೆಂದರೆ ಅಲ್ಲಿನ ಮಹಿಳೆಯರು ಹಾಗೂ ಪುರುಷರನ್ನು ಒಳಗೊಂಡ ಜನಸಮೂಹ.”*

ಯುಎನ್‌ಡಿಪಿಯು ೧೯೯೫ ರಲ್ಲಿ ಪ್ರಕಟಿಸಿದ ಮಾನವ ಅಭಿವೃದ್ಧಿ ವರದಿಯಲ್ಲಿ ಮಾನವ ಅಭಿವೃದ್ಧಿಯನ್ನು ಹೀಗೆ ಗುರುತಿಸಿದೆ.

*“ಎಲ್ಲ ಜನರ – ಅಂದರೆ ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡಂತೆ –*
*ಆಯ್ಕೆಗಳನ್ನು ವಿಸ್ತರಿಸುವುದೇ ಮಾನವ ಅಭಿವೃದ್ಧಿ. ಸಮಾಜದ ಒಂದು ಜನವರ್ಗದ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತೃತ ಗೊಳಿಸುವುದು ಮಾನವ ಅಭಿವೃದ್ಧಿಯಲ್ಲ. ವಿಸ್ತೃತಗೊಳ್ಳುವ ಆಯ್ಕೆಗಳ ವ್ಯಾಪ್ತಿಯಿಂದ ಮಹಿಳೆಯರನ್ನು ಒಂದು ವೇಳೆ ಹೊರಗಿಟ್ಟರೆ ಅದು ಅನ್ಯಾಯಯುತವಾದ ಮತ್ತು ತಾರತಮ್ಯವಾದಿಯಾದ ಪ್ರಕ್ರಿಯೆಯಾಗುತ್ತದೆ.”*

ಅತ್ಯಂತ ಸರಳವಾಗಿ ಹೇಳುವುದಾದರೆ ಜನರ ಬದುಕು ಉತ್ತಮಗೊಳ್ಳುವ ಪ್ರಕ್ರಿಯೆಯನ್ನು ಮಾನವ ಅಭಿವೃದ್ಧಿಯೆಂದು ಹೇಳಬಹುದು. ‘ಜನರು’ ಎಂಬುದು ಮಹಿಳೆಯರನ್ನು ಒಳಗೊಂಡಂತೆ ಎಂದು ಪರಿಭಾವಿಸಿಕೊಳ್ಳಬೇಕು. ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಜನರು ಆರ್ಥಿಕ - ಅಮೂರ್ತ ಸಂಗತಿಗಳಾಗುವುದಕ್ಕೆ ಪ್ರತಿಯಾಗಿ ಜೀವಂತ - ಕ್ರಿಯಾಶೀಲ ಕರ್ತೃಗಳಾಗಿರುತ್ತಾರೆ. ಅವರು ಅಭಿವೃದ್ಧಿಯ ಬಲಿಪಶುಗಳಾಗುವುದಕ್ಕೆ ಪ್ರತಿಯಾಗಿ ಅಭಿವೃದ್ಧಿಯ ಪ್ರಭುಗಳಾಗಿರುತ್ತಾರೆ.

ಈ ವಿಚಾರ ಪ್ರಣಾಳಿಕೆಯ ಬಹುಮುಖ್ಯ ಸಂದೇಶವೆಂದರೆ ‘ಜನರಿಗಾಗಿ ಅಭಿವೃದ್ಧಿಯೇ ವಿನಾ ಅಭಿವೃದ್ಧಿಗಾಗಿ ಜನರಲ್ಲ’. ಜನರು ಅಭಿವೃದ್ಧಿಯ ‘ಸಾಧನ’ವೂ ಹೌದು ಮತ್ತು ಅದರ ‘ಸಾಧ್ಯ’ವೂ ಹೌದು.

ಈ ವಿಚಾರ ಪ್ರಣಾಳಿಕೆ ಪ್ರಕಾರ ಅಭಿವೃದ್ಧಿಯು ಎರಡು ಪ್ರಕ್ರಿಯೆಗಳನ್ನು ಒಳಗೊಂಡ ಒಂದು ಸಂಗತಿಯಾಗಿದೆ. ಮೊದಲನೆಯದಾಗಿ ಜನರು ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳ ಮತ್ತು ಅವಕಾಶಗಳಲ್ಲಿ ಆಯ್ಕೆಗಳ ವ್ಯಾಪ್ತಿಯನ್ನು ಅಭಿವೃದ್ಧಿಯು ವಿಸ್ತೃತಗೊಳಿಸಬೇಕು. ಎರಡನೆಯದಾಗಿ ವಿಸ್ತೃತಗೊಂಡ ಅವಕಾಶ ಮತ್ತು ಅವುಗಳಲ್ಲಿನ ವ್ಯಾಪ್ತಿಯ ವಿಸ್ತೃತತೆಯನ್ನು ತಮ್ಮದಾಗಿಸಿಕೊಳ್ಳಲು ಅಗತ್ಯವಾದ ಜನರ ಧಾರಣ ಸಾಮರ್ಥ್ಯವನ್ನು ವರ್ಧಿಸಬೇಕು.

ಅವಕಾಶಗಳ ವರ್ಧನೆ ಹಾಗೂ ಧಾರಣ ಸಾಮರ್ಥ್ಯದ ವರ್ಧನೆಗಳು ಅಭಿವೃದ್ಧಿಯಲ್ಲಿ ಏಕಕಾಲದಲ್ಲಿ ನಡೆಯಬೇಕು.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆ ಕುರಿತಂತೆ ಮೆಹಬೂಬ್ ಉಲ್‌ಹಕ್ (೧೯೯೭) ಹೀಗೆ ಬರೆದಿದ್ದಾರೆ.

*“ಅಭಿವೃದ್ಧಿಯ ಉದ್ದೇಶ ಕೇವಲ ವರಮಾನದ ವರ್ಧನೆಯಲ್ಲ. ಅಭಿವೃದ್ಧಿಯೆಂದರೆ ಜನರ ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳ ವರ್ಧನೆ. ಈ ಅವಕಾಶಗಳ ವರ್ಧನೆಯಲ್ಲಿ ಶಿಕ್ಷಣ, ಒಳ್ಳೆಯ ಆರೋಗ್ಯ, ರಾಜಕೀಯ ಸ್ವಾತಂತ್ರ್ಯ, ಸಾಂಸ್ಕೃತಿಕ ಅನನ್ಯತೆ, ಸಾ*

*ಮುದಾಯಕ ಸಹಭಾಗಿತ್ವ, ಪರಿಸರ ಸಂಬಂಧಿ ಭದ್ರತೆ ಮುಂತಾದವುಗಳು ಸೇರಿಕೊಂಡಿವೆ. ಅಭಿವೃದ್ಧಿಯೆಂಬುದು ಇಡೀ ಸಮಾಜವನ್ನು ಒಳಗೊಳ್ಳಬೇಕು. ಅದು ಕೇವಲ ಆರ್ಥಿಕತೆಗೆ ಸಂಬಂಧಿಸಿದ ಸಂಗತಿಯಲ್ಲ. ಅಲ್ಲಿ ಜನರು ಪ್ರಧಾನ ಧಾತು."*

ಅಮರ್ತ್ಯಸೇನ್ ಅವರು ರಾಷ್ಟ್ರೀಯ ವರಮಾನವೆಂಬ ಸೀಮಿತ ಚೌಕಟ್ಟನ್ನು ಮೀರಿ ಅಭಿವೃದ್ಧಿಯನ್ನು ಸ್ವಾತಂತ್ರ್ಯಕ್ಕೆ ಸಂವಾದಿಯಾಗಿ ನಿರ್ವಚಿಸಿದ್ದಾರೆ. ಈ ಬಗೆಯ ಚರ್ಚೆಯನ್ನು ಅವರ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' (೧೯೯೯) ಎಂಬ ಕೃತಿಯಲ್ಲಿ ನೋಡಬಹುದಾಗಿದೆ. ಸ್ವಾತಂತ್ರ್ಯವನ್ನು ಮೂಲಧಾತುವನ್ನಾಗಿ ಮಾಡಿಕೊಂಡಿರುವ ಅವರ ಅಭಿವೃದ್ಧಿ ಕುರಿತ ನಿರ್ವಚನವು ಅದನ್ನು ಸಾಂಪ್ರದಾಯಿಕವಾಗಿ ವರಮಾನದ ವರ್ಧನೆಗೆ, ವ್ಯಕ್ತಿಗತ ಆದಾಯದ ಏರಿಕೆಗೆ, ಕೈಗಾರಿಕೀಕರಣಕ್ಕೆ, ತಾಂತ್ರಿಕ ಪ್ರಗತಿಗೆ, ಆಧುನೀಕರಣಕ್ಕೆ ಸಂವಾದಿಯಾಗಿ ಮಾಡಿಕೊಂಡು ಬಂದಿರುವ ವೈಚಾರಿಕ ಆಕೃತಿಗೆ ಸಂಪೂರ್ಣ ಭಿನ್ನವಾಗಿದೆ.

ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಅಭಿವೃದ್ಧಿಯ ಸಾಧನಗಳಿಗೆ ಮಹತ್ವವನ್ನು ನೀಡಲಾಗಿತ್ತು. ಅಮರ್ತ್ಯಸೆ ಮತ್ತು ಮೆಹಬೂಬ್ ಉಲ್ ಹಕ್ ಅವರ ಬಹುದೊಡ್ಡ ಕೊಡುಗೆಯೆಂದರೆ ಅಭಿವೃದ್ಧಿ ಕುರಿತ ಸೈದ್ಧಾಂತಿಕ ಚರ್ಚೆಗಳಲ್ಲಿ ಗಮನವನ್ನು 'ಸಾಧನ'ಗಳಿಂದ 'ಸಾಧ್ಯ'ದ ಕಡೆಗೆ ಪಲ್ಲಟಗೊಳಿಸಿದ್ದಾಗಿದೆ.

'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಎಂದಾಗ ಸ್ವಾತಂತ್ರ್ಯವನ್ನು ಅಮರ್ತ್ಯಸೇನ್ ನಿರ್ದಿಷ್ಟವಾದ ಅರ್ಥದಲ್ಲಿ ಬಳಸುತ್ತಾರೆ. ಸಾಮಾನ್ಯವಾಗಿ ಸ್ವಾತಂತ್ರ್ಯವನ್ನು 'ನಿಯಂತ್ರಣ' 'ಹತೋಟಿ' - 'ಬಂಧನ'ಗಳಿಲ್ಲದ ಸ್ಥಿತಿಯೆಂದು ತಿಳಿದುಕೊಳ್ಳಲಾಗುತ್ತದೆ. ಇದು ಸರಿಯಿರಬಹುದು. ಆದರೆ ಇದು ಸ್ವಾತಂತ್ರ್ಯದ ಒಂದು ಮುಖ ಮಾತ್ರವಾಗಿದೆ. ಇದನ್ನು ಸೆನ್ 'ನೇತ್ಯಾತ್ಮಕ ಸ್ವಾತಂತ್ರ್ಯ'ವೆಂದು ಕರೆದಿದ್ದಾರೆ. ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಅಮರ್ತ್ಯಸೇನ್ ಸ್ವಾತಂತ್ರ್ಯವನ್ನು ಜನರು ಏನು ಮಾಡಬಲ್ಲರು - ಏನು ಮಾಡಲಾರರು ಎಂಬ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತಾರೆ (ವಿವರಗಳಿಗೆ ನೋಡಿ : ಅಮರ್ತ್ಯಸೇನ್‌ರ 'ಆಹಾರ ಮತ್ತು ಸ್ವಾತಂತ್ರ್ಯ', ಅನು : ಟಿ.ಆರ್.ಚಂದ್ರಶೇಖರ, ೨೦೦೩).

ನಾಗರಿಕರ ಬದುಕು ಎಂಬುದು ವ್ಯಕ್ತಿಗಳ, ಸಂಸ್ಥೆಗಳ, ಸರ್ಕಾರದ ಹಸ್ತಕ್ಷೇಪದಿಂದ ಮುಕ್ತವಾಗಿರುವ ಸ್ಥಿತಿಯನ್ನು ನೇತ್ಯಾತ್ಮಕ ಸ್ವಾತಂತ್ರ್ಯವೆಂದು ಕರೆಯಬಹುದು. ಆದರೆ ಇತ್ಯಾತ್ಮಕ ಸ್ವಾತಂತ್ರ್ಯದಲ್ಲಿ 'ಹಸ್ತಕ್ಷೇಪ' ಮುಖ್ಯವಾಗಿರುವುದಿಲ್ಲ. ನಾಗರಿಕರು ಏನನ್ನು ಮಾಡಬಲ್ಲರು ಅಥವಾ ಮಾಡಲಾರರು ಎಂಬ ಜನರ ಸಾಮರ್ಥ್ಯವನ್ನು ಇತ್ಯಾತ್ಮಕ ಸ್ವಾತಂತ್ರ್ಯವೆಂದು ಕರೆಯಬಹುದು. ಎರಡೊತ್ತಿನ ಕೂಳು ದೊರೆಯದ ನಾಗರಿಕರು ಹಸಿವಿನಿಂದ ನರಳುತ್ತಿದ್ದರೆ ಅದು ಇತ್ಯಾತ್ಮಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ನೇತ್ಯಾತ್ಮಕ ಸ್ವಾತಂತ್ರ್ಯ ನಾಗರಿಕರಿಗಿರಬಹುದು. ಅದು ಇದ್ದೂ ಕೂಡ ಜನರು ಇತ್ಯಾತ್ಮಕ ಸ್ವಾತಂತ್ರ್ಯದಿಂದ ವಂಚಿತರಾಗಿರಬಹುದು. ವೈಚಾರಿಕ ಇತಿಹಾಸವನ್ನು ಒಮ್ಮೆ ಪರಿಶೀಲಿಸಿದರೆ ಅಲ್ಲಿ ಬೇರೆ ಬೇರೆ ಚಿಂತರು ಇವೆರಡೂ ಬಗೆಯ ಸ್ವಾತಂತ್ರ್ಯ ಪ್ರಕಾರಗಳಲ್ಲಿ ಒಂದರ ಪರ ನಿಲ್ಲುವುದು ಕಂಡುಬರುತ್ತದೆ. ಮಿಲ್ಟನ್‌ಫ್ರಿಡ್‌ಮನ್ ಮತ್ತು ಜೇಮ್ಸ್‌ಬುಕಾನನ್ ಅವರು ಸ್ವಾತಂತ್ರ್ಯದ ನೇತ್ಯಾತ್ಮಕ ದೃಷ್ಟಿಕೋನದ ಪ್ರತಿಪಾದಕರಾಗಿದ್ದಾರೆ ಮತ್ತು ಸರ್ಕಾರ, ಸಂಸ್ಥೆಗಳು, ಸರ್ಕಾರಗಳ ಹಸ್ತಕ್ಷೇಪದಿಂದ ಮುಕ್ತವಾದ ಸ್ವಾತಂತ್ರ್ಯದ ಬಗ್ಗೆ ಅವರು ಮಾತನಾಡುತ್ತಾರೆ. ಇದಕ್ಕೆ ಪ್ರತಿಯಾಗಿ ಬೆಂಥಮ್ ಮತ್ತು ಮಾರ್ಕ್ಸ್ ಅವರು ಇತ್ಯಾತ್ಮಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾರೆ. ಸ್ವಾತಂತ್ರ್ಯವೆಂಬುದು ಸರಳವಾದ ಸಂಗತಿಯಲ್ಲ. ಅದನ್ನು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಸೆನ್ ನಿರ್ದಿಷ್ಟ ನೆಲೆಯಲ್ಲಿ ಬಳಸುತ್ತಾರೆ. ಸೆನ್, ಹಕ್ ಅವರು ಮುಖ್ಯವಾಗಿ ಪ್ರತಿಪಾದಿಸುತ್ತಿರುವ ಸಂಗತಿಯೆಂದರೆ ವರಮಾನದ ವರ್ಧನೆಗೂ ಮತ್ತು ಅಭಿವೃದ್ಧಿಗೂ ನಡುವೆ ನೇರ ಸಂಬಂಧದ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾರೆ. ಇವೆರಡರ ನಡುವೆ ಅವರು ನಾಲ್ಕು ಬಗೆಯ ಸಂಬಂಧಗಳನ್ನು ಗುರುತಿಸಿದ್ದಾರೆ.

೧. ವರಮಾನ ವರ್ಧನೆ ಹಾಗೂ ಅಭಿವೃದ್ಧಿಯ ಮಟ್ಟ ಎರಡೂ ಉನ್ನತವಾಗಿರುವ ದೇಶಗಳೂ ಇವೆ.

೨. ವರಮಾನ ವರ್ಧನೆ ಹಾಗೂ ಅಭಿವೃದ್ಧಿಯ ಮಟ್ಟಗಳು ಎರಡೂ ಕೆಳಸ್ಥಿತಿಯಲ್ಲಿರುವ ದೇಶಗಳೂ ಇವೆ.

ಇವೆರಡೂ ಸೈದ್ಧಾಂತಿಕವಾಗಿ ನಿರೀಕ್ಷಿಸಿದ ರೀತಿಯಲ್ಲಿವೆ. ವರಮಾನ ವರ್ಧನೆಯು ಅಭಿವೃದ್ಧಿಯನ್ನು ಉನ್ನತ ಮಟ್ಟಕ್ಕೇರಿಸಿರುವುದು ಮೊದಲನೆಯ ಮಾದರಿಯಲ್ಲಿ ಕಂಡುಬಂದರೆ ಕೆಳಮಟ್ಟದಲ್ಲಿರುವ ವರಮಾನವು ಅಭಿವೃದ್ಧಿಯನ್ನು ಕೆಳಮಟ್ಟದಲ್ಲಿಟ್ಟಿರುವುದು ಎರಡನೆಯ ಮಾದರಿಯಿಂದ ತಿಳಿದುಬರುತ್ತದೆ.

೩. ವರಮಾನದ ಮಟ್ಟವು ಉನ್ನತವಾಗಿದ್ದು ಅಭಿವೃದ್ಧಿಯು ಕೆಳಮಟ್ಟದಲ್ಲಿರುವ ದೇಶಗಳೂ ಇವೆ.

೪. ವರಮಾನದ ಮಟ್ಟವು ಕಡಿಮೆಯಿದ್ದು ಅಭಿವೃದ್ಧಿಯ ಮಟ್ಟವು ಉನ್ನತವಾಗಿರುವ ದೇಶಗಳೂ ಇವೆ.

ಮೊದಲ ಎರಡು ಬಗೆಗಳು ನಿರೀಕ್ಷಿಸಿದ ರೀತಿಯಲ್ಲಿವೆ. ಆದರೆ ಕೊನೆಯ ಎರಡು ಬಗೆಗಳು ಅಪವಾದದಂತೆ ಕಾಣುತ್ತವೆ. ಈ ಬಗೆಯ ಸಂಬಂಧಗಳಿಂದ ವರಮಾನ ವರ್ಧನೆ ಮತ್ತು ಅಭಿವೃದ್ಧಿಗಳ ನಡುವೆ ನೇರ ಸಂಬಂಧ ಸಾಧ್ಯವಿಲ್ಲವೆಂಬುದು ತಿಳಿದುಬರುತ್ತದೆ.

ಈ ಬಗ್ಗೆ ಸೆನ್‌ನೀಡಿರುವ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

- ತಲಾವರಮಾನದ ದೃಷ್ಟಿಯಿಂದ ದಕ್ಷಿಣ ಆಫ್ರಿಕಾ, ಬ್ರೆಜಿಲ್, ಗಬಾನ್ ಮತ್ತು ಒಮೆನ್ ದೇಶಗಳ ಸ್ಥಿತಿಯು ಚೀನಾ ಮತ್ತು ಶ್ರೀಲಂಕಾ ದೇಶಗಳ ತಲಾ ವರಮಾನಕ್ಕಿಂತ ಆರುಪಟ್ಟು ಅಧಿಕವಾಗಿದೆ. ಆದರೆ ಸಾಪೇಕ್ಷವಾಗಿ ಶ್ರೀಮಂತವಾದ ದೇಶಗಳಲ್ಲಿ ಜನರ ಆಯುಷ್ಯವು ಉಳಿದೆರಡು ದೇಶಗಳ ಆಯುಷ್ಯಕ್ಕಿಂತ ತುಂಬಾ ಕೆಳಮಟ್ಟದಲ್ಲಿದೆ.
- ದಕ್ಷಿಣ ಆಫ್ರಿಕಾ, ಬ್ರೆಜಿಲ್, ಗಬಾನ್ ಮತ್ತು ಒಮೆನ್‌ಗಳಿಗಿಂತ ತೀವ್ರ ಬಡತನ ಎದುರಿಸುತ್ತಿರುವ ಕೊಸ್ಟರಿಕಾದಲ್ಲಿ ಜನರ ಆಯುಷ್ಯವು ಈ ನಾಲ್ಕು ದೇಶಗಳಲ್ಲಿನ ಆಯುಷ್ಯಕ್ಕಿಂತ ಅಧಿಕವಾಗಿದೆ.
- ಭಾರತಕ್ಕೆ ಸಂಬಂಧಿಸಿದಂತೆ ವರಮಾನದ ಪ್ರಮಾಣ ಹಾಗೂ ವರ್ಧನೆಯಲ್ಲಿ ಕೇರಳದ ಸಾಧನೆ ಹೇಳಿಕೊಳ್ಳುವಂತಿಲ್ಲ. ಆದರೆ ಅದು ಅಭಿವೃದ್ಧಿಯಲ್ಲಿ ಉನ್ನತ ಮಟ್ಟವನ್ನು ಸಾಧಿಸಿಕೊಂಡಿದೆ. ಅಲ್ಲಿ ಜನರ ಆಯುಷ್ಯ ಉತ್ತಮವಾಗಿದೆ. ಶಿಶು ಮರಣ ಪ್ರಮಾಣ ಕೆಳಮಟ್ಟದಲ್ಲಿದೆ. ಸಾಕ್ಷರತೆ - ಮಹಿಳಾ ಸಾಕ್ಷರತೆ ಅತ್ಯಂತ ಉನ್ನತ ಮಟ್ಟದಲ್ಲಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಕೆಲವು ಜಿಲ್ಲೆಗಳ ಉದಾಹರಣೆ ನೀಡಬಹುದಾಗಿದೆ.

ರಾಜ್ಯದ ೨೭ ಜಿಲ್ಲೆಗಳ ಪೈಕಿ ತಲಾವರಮಾನದಲ್ಲಿ (೨೦೦೩ - ೦೪) ಬಳ್ಳಾರಿ ಮೂರನೆಯ, ಮೈಸೂರು ಒಂಬತ್ತನೆಯ ಮತ್ತು ಕೊಪ್ಪಳ ಹತ್ತನೆಯ ಸ್ಥಾನದಲ್ಲಿವೆ. ಆದರೆ ಅವು ಅಭಿವೃದ್ಧಿಯಲ್ಲಿ ಕ್ರಮವಾಗಿ ಹದಿನೆಂಟನೆಯ, ಹದಿನಾಲ್ಕನೆಯ ಮತ್ತು ಇಪ್ಪತ್ನಾಲ್ಕನೆಯ ಸ್ಥಾನದಲ್ಲಿವೆ. ಇಲ್ಲಿ ವರ್ಧನೆಯಾದ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗಿಲ್ಲ. ಇದಕ್ಕೆ ಪ್ರತಿಯಾಗಿ ತಲಾವರಮಾನದ ದೃಷ್ಟಿಯಿಂದ ರಾಜ್ಯದ ೨೭ ಜಿಲ್ಲೆಗಳ ಪೈಕಿ ಉತ್ತರ ಕನ್ನಡ ಹನ್ನೆರಡನೆಯ ಸ್ಥಾನದಲ್ಲಿ, ಹಾಸನವು ಹದಿಮೂರನೆಯ ಸ್ಥಾನದಲ್ಲೂ ಮತ್ತು ದಾವಣಗೆರೆ ಹದಿನಾರನೆಯ ಸ್ಥಾನದಲ್ಲಿವೆ. ಆದರೆ ಅಭಿವೃದ್ಧಿಯಲ್ಲಿ ಅವು ಕ್ರಮವಾಗಿ ಏಳನೆಯ, ಹನ್ನೊಂದನೆಯ ಹಾಗೂ ಹನ್ನೆರಡನೆಯ ಸ್ಥಾನದಲ್ಲಿವೆ.

ಈ ಎಲ್ಲ ನಿರ್ದಶನಗಳಿಂದ ತಿಳಿದುಬರುವುದೇನೆಂದರೆ ವರಮಾನ ವರ್ಧನೆಯು ತನ್ನಷ್ಟಕ್ಕೆ ತಾನೆ, ಸಹಜವಾಗಿ ಏಕಾಏಕಿ ಜನರ ಬದುಕಾಗಿ ಪರಿವರ್ತನೆಗೊಳ್ಳುವುದಿಲ್ಲ. ಈ ಬಗೆಯ ಪರಿವರ್ತನೆಯನ್ನು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾಗುತ್ತದೆ.

**ವರಮಾನ ವರ್ಧನೆಯನ್ನು ಅಭಿವೃದ್ಧಿಯನ್ನಾಗಿಸಲು ಏನು ಮಾಡಬೇಕು.**

ಈ ಪರಿವರ್ತನೆಯನ್ನು ಸಾಧಿಸಿಕೊಳ್ಳಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

೧. ಅಭಿವೃದ್ಧಿಯ ಮೂಲಧಾತು ಜನರು ಎಂಬುದನ್ನು ಗುರುತಿಸಬೇಕು. ಅಭಿವೃದ್ಧಿಯನ್ನು ಜನರ ಬದುಕಿನ ನೆಲೆಯಿಂದ ಪರಿಭಾವಿಸಿಕೊಳ್ಳಬೇಕು. ಅಭಿವೃದ್ಧಿ ನೀತಿಯ ಯಶಸ್ಸಿನ ಅಳತೆಗೋಲು ಜನರ ಬದುಕು ಎಷ್ಟರಮಟ್ಟಿಗೆ ಉತ್ತಮಗೊಂಡಿದೆ ಎಂಬುದಾಗಬೇಕೆ ವಿನಾ ಉತ್ಪಾದನೆಯಲ್ಲಿ, ವರಮಾನದಲ್ಲಿ ಎಷ್ಟರಮಟ್ಟಿಗೆ ವರ್ಧನೆಯಾಗಿದೆ ಎಂಬುದಲ್ಲ.

೨. ಅವಕಾಶಗಳ ವರ್ಧನೆ, ಅವಕಾಶಗಳಲ್ಲಿ ಆಯ್ಕೆಯ ವ್ಯಾಪ್ತಿಯ ವಿಸ್ತೃತತೆಯನ್ನು ಮತ್ತು ಜನರ ಧಾರಣಾ ಸಾಮರ್ಥ್ಯದ ವರ್ಧನೆ ಎಲ್ಲವನ್ನು ಏಕಕಾಲದಲ್ಲಿ ಸಾಧಿಸಿಕೊಳ್ಳಬೇಕು.

೩. ಅಭಿವೃದ್ಧಿಯ ಸಾಧನೆ ಮತ್ತು ಸಾಧ್ಯಗಳ ನಡುವೆ ಸೂಕ್ಷ್ಮವಾಗಿ ಭಿನ್ನತೆಯನ್ನು ಗುರುತಿಸಿಕೊಳ್ಳಬೇಕು. ಜನರು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಅದರ ಸಾಧ್ಯವೂ ಹೌದು. ವರಮಾನದ ವರ್ಧನೆಯು ಅವಕಾಶಗಳ ವರ್ಧನೆಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತದೆ. ಆದರೆ ವರ್ಧನೆಯಾದ ವರಮಾನವು ಜನರ ಬದುಕನ್ನು ಎಷ್ಟರಮಟ್ಟಿಗೆ ಉತ್ತಮಪಡಿಸಿದೆ ಎಂಬುದು ಅಭಿವೃದ್ಧಿಯ ಮೌಲ್ಯಮಾಪನದ ಮಾನದಂಡವಾಗಬೇಕು.

೪. ಅಭಿವೃದ್ಧಿಯು ಕೇವಲ ಆರ್ಥಿಕತೆಗೆ ಮಾತ್ರ ಸೀಮಿತಗೊಳ್ಳದೆ ಇಡೀ ಸಮಾಜವನ್ನು ಒಳಗೊಳ್ಳುವಂತಾಗಬೇಕು.

ಈ ಹಿನ್ನೆಲೆಯಲ್ಲಿ ೧೯೯೪ರ ಮಾನವ ಅಭಿವೃದ್ಧಿ ವರದಿಯಲ್ಲಿನ ವ್ಯಾಖ್ಯೆಯನ್ನು ಪರಿಗಣಿಸಬೇಕು.

“ವರಮಾನದ ವರ್ಧನೆಯ ಜೊತೆ ಅದರ ಸಮಾನ ವಿತರಣೆಯು ಮಾನವ ಅಭಿವೃದ್ಧಿ ಎನಿಸಿಕೊಳ್ಳುತ್ತದೆ. ಅದು ಪರಿಸರವನ್ನು ರಕ್ಷಿಸುತ್ತದೆ ವಿನಾ ನಾಶ ಮಾಡುವುದಿಲ್ಲ. ಅದು ಜನರನ್ನು ಸಶಕ್ತರನ್ನಾಗಿಸುತ್ತದೆ ವಿನಾ ಅಶಕ್ತರನ್ನಾಗಿ ಮಾಡುವುದಿಲ್ಲ. ಅಲ್ಲಿ ಬಡವರು ಅಭಿವೃದ್ಧಿಯ ಮೂಲಧಾತುವಾಗಿರುತ್ತಾರೆ. ಅವರ ಆಯ್ಕೆಯ ವ್ಯಾಪ್ತಿ ವಿಸ್ತರಣೆಯಾಗುತ್ತದೆ, ಅವಕಾಶಗಳ ವರ್ಧನೆಯಾಗುತ್ತದೆ ಮತ್ತು ನೀತಿ - ನಿರೂಪಣೆ ಚಟುವಟಿಕೆಗಳಲ್ಲಿ ಜನರು ಭಾಗವಹಿಸಲು ಅವಕಾಶವಿರುತ್ತದೆ. ಅದು ಜನರಿಗೆ ಅಭಿಮುಖವಾಗಿರುತ್ತದೆ, ಪರಿಸರಕ್ಕೆ ಪೂರಕವಾಗಿರುತ್ತದೆ, ದುಡಿಮೆಗೆ ಸಹಾಯಕವಾಗಿರುತ್ತದೆ ಮತ್ತು ಲಿಂಗ ಸ್ಪಂದಿಯಾಗಿರುತ್ತದೆ.”

**ಸ್ವಾತಂತ್ರ್ಯ – ಸಾಕ್ಷರತೆ ಮತ್ತು ಅಭಿವೃದ್ಧಿ**

ಸ್ವಾತಂತ್ರ್ಯವನ್ನಾಗಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ, ನಿರ್ವಚಿಸುವ ಕ್ರಮವೊಂದು ಇಂದು ರೂಢಿಗೆ ಬಂದಿದೆ. ಇದಕ್ಕೆ ಸಂಬಂಧಿಸಿದ ಚರ್ಚೆಯನ್ನು ಸೆನ್ ಅವರ ‘ಸ್ವಾತಂತ್ರ್ಯವಾಗಿ ಅಭಿವೃದ್ಧಿ’ (೧೯೯೯) ಎಂಬ ಕೃತಿಯಲ್ಲಿ ನೋಡಬಹುದು. ಈ ವಿಷಯ ಕುರಿತಂತೆ ಮೆಹಬೂಬ್ ಉಲ್ ಹಕ್ ಕೂಡ ಕಾಣಿಕೆ ನೀಡಿದ್ದಾರೆ (೧೯೯೬). ಸ್ವಾತಂತ್ರ್ಯವನ್ನು ‘ಬಂಧನವಿಲ್ಲದ ಸ್ಥಿತಿ’ ಎಂಬುದಕ್ಕಿಂತ ಭಿನ್ನವಾದ ‘ಜನರು ಏನು ಮಾಡಬಲ್ಲರು’, ‘ಅವರು ಏನಾಗಿದ್ದಾರೆ’ ಎಂಬ ಅರ್ಥದಲ್ಲಿ ಅವರು ಪರಿಭಾವಿಸಿಕೊಂಡಿದ್ದಾರೆ. ಇದನ್ನು ಸೆನ್ ‘ಇತ್ಯಾತ್ಮಕ ಸ್ವಾತಂತ್ರ್ಯ’ವೆಂದು ಕರೆದಿದ್ದಾರೆ. ಬಂಧನ - ನಿಯಂತ್ರಣಗಳಿಲ್ಲದ ಸ್ಥಿತಿಯನ್ನು ‘ನೇತ್ಯಾತ್ಮಕ ಸ್ವಾತಂತ್ರ್ಯ’ವೆಂದು ಕರೆಯಲಾಗಿದೆ. ಜನರು ಏನು ಮಾಡಬಲ್ಲರು - ಅವರು ಏನಾಗಿದ್ದಾರೆ ಎಂಬುದು ವರಮಾನಕ್ಕಿಂತ ಮಿಗಿಲಾಗಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಸಾಮಾಜಿಕ ಸ್ಥಾನಮಾನ ಮುಂತಾದವುಗಳನ್ನು ಅವಲಂಬಿಸಿದೆ. ಜನರು ಏನಾಗಿದ್ದಾರೆ ಮತ್ತು ಅವರು ಏನು ಮಾಡಬಲ್ಲರು ಎಂಬುದು ಬಹಳ ಮುಖ್ಯವಾಗಿ ಸಾಕ್ಷರತೆಯನ್ನು ಅವಲಂಬಿಸಿದೆ.

ಅನಕ್ಷರತೆಯ ಸಂಕೋಲೆಯಿಂದ ಜನರು ಮುಕ್ತರಾಗಿದ್ದಾರಾ ಎಂಬುದು ಒಂದು ಬಗೆಯ ಪ್ರಶ್ನೆಯಾದರೆ ಜನರು 'ಓದುವ - ಬರೆಯುವ' ಸಾಮರ್ಥ್ಯ ಪಡೆದಿದ್ದಾರೆಯೆ ಎಂಬುದು ಇನ್ನೊಂದು ಬಗೆಯ ಪ್ರಶ್ನೆಯಾಗಿದೆ. ಅನಕ್ಷರತೆಯನ್ನು ಅಮರ್ತ್ಯಸೇನ್ 'ಸಾಮಾಜಿಕ ಸಂಕೋಲೆ'ಯೆಂದು ಕರೆದಿದ್ದಾರೆ. ಸಾಕ್ಷರತೆಯನ್ನು ಸಾಮಾನ್ಯವಾಗಿ ಅಭಿವೃದ್ಧಿಯ ಸಾಧನವನ್ನಾಗಿ ಪರಿಭಾವಿಸಿಕೊಂಡು ಬರಲಾಗಿದೆ. ಇದು ಒಂದು ಮಟ್ಟದವರೆಗೆ ಸರಿಯಿರಬಹುದು. ಆದರೆ ಅದು ಅಭಿವೃದ್ಧಿಯ ಅಂತರ್ಗತ - ಅವಿಭಾಜ್ಯ ಅಂಗವೆಂಬುದನ್ನು ನಾವು ಪರಿಗಣಿಸಬೇಕಾಗುತ್ತದೆ. ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡುವ ಒಂದು ಮಾನದಂಡ ಸಾಕ್ಷರತೆ.

ಸಾಮಾಜಿಕ ಬದುಕನ್ನು ಅರ್ಥ ಮಾಡಿಕೊಳ್ಳಲು ತುಂಬಾ ಅಗತ್ಯವಾದ ಒಂದು ಸಾಮರ್ಥ್ಯವೆಂದರೆ ಬರಹದ ಕುಶಲತೆ. ಜನರು ತಮ್ಮ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು - ವಿಶ್ಲೇಷಣೆ ಮಾಡಲು ಅಕ್ಷರ ಜ್ಞಾನ ತುಂಬಾ ಅಗತ್ಯ. ಸಾಮಾಜಿಕ ಬದಲಾವಣೆಯ ದಿಶೆಯಲ್ಲಿ ಸಾಕ್ಷರತೆಯ ಪಾತ್ರವು ತುಂಬಾ ಮಹತ್ವದ್ದಾಗಿದೆ. ಸಾಕ್ಷರತೆಯಿಲ್ಲದಿದ್ದರೆ ಸ್ವಾತಂತ್ರ್ಯಕ್ಕೆ ಯಾವುದೇ ಅರ್ಥವಿರುವುದಿಲ್ಲ. ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳನ್ನು ಸಮರ್ಥವಾಗಿ ಧಾರಣೆ ಮಾಡಿಕೊಳ್ಳಲು ಅಕ್ಷರಜ್ಞಾನವು ತುಂಬಾ ಅಗತ್ಯವಾಗಿದೆ. ಈ ಬಗೆಯ ಧಾರಣಾ ಸಾಮರ್ಥ್ಯದ ಕೊರತೆಯನ್ನೇ ಅಮರ್ತ್ಯಸೇನ್ ಬಡತನವೆಂದು ಕರೆದಿದ್ದಾರೆ.

ಸಾಕ್ಷರತೆಯು ಹೀಗೆ ಅಭಿವೃದ್ಧಿಯ ಸಾಧನವಾಗಿ ಹಾಗೂ ಅದರ ಸಾಧ್ಯವಾಗಿ ಕೆಲಸ ಮಾಡುತ್ತದೆ. ಅದು ಜನರಿಗೆ ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಜನರು ಸಂದರ್ಭ - ಸನ್ನಿವೇಶದ ಬಂಧಿಗಳಾಗಿದ್ದಾರೋ ಅಥವಾ ಅವುಗಳ ಪ್ರಭುಗಳಾಗಿದ್ದಾರೋ ಎಂಬುದು ಜನರ ಅಕ್ಷರ ಸಂಪತ್ತನ್ನು ಅವಲಂಬಿಸಿದೆ. ಸಂದರ್ಭ - ಸನ್ನಿವೇಶದ ಮೇಲೆ ಜನರ ನಿಯಂತ್ರಣ ಸಾಧಿಸಬೇಕೇ ವಿನಾ ಅವರು ಅವುಗಳ ನಿಯಂತ್ರಣಕ್ಕೆ ನಿಲುಕಬಾರದು. ಈ ಬಗೆಯ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಲು ಅಕ್ಷರ ಸಂಸ್ಕೃತಿಯ ಅಗತ್ಯವಿದೆ.

ದುರದೃಷ್ಟದ ಸಂಗತಿಯೆಂದರೆ ನಮ್ಮ ಸಮಾಜ ಮತ್ತು ಸರ್ಕಾರಗಳು ಸಾಕ್ಷರತೆಯ ಮಹತ್ವವನ್ನು ಗುರುತಿಸಿದಂತೆ ಕಾಣಲಿಲ್ಲ. ಏಕೆಂದರೆ ಅದು ಬಡವರ, ವಂಚಿತರ, ಹಸಿದವರ ಪ್ರಶ್ನೆಯಾಗಿದೆ. ಜನರ ಧಾರಣಾ ಸಾಮರ್ಥ್ಯದ ವರ್ಧನೆಯೇ ಅಭಿವೃದ್ಧಿ ಎಂಬುದಾದರೆ ಅಂತಹ ಧಾರಣಾ ಸಾಮಾರ್ಥ್ಯವನ್ನು ನಿರ್ಧರಿಸುವ ಬಹುಮುಖ್ಯ ಸಂಗತಿ ಸಾಕ್ಷರತೆ. ಸಾಕ್ಷರತೆ ಜನರಿಗೆ ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲಾವಧಿಯಲ್ಲಿ ಇದು ದೃಢಪಟ್ಟಿದೆ. ಬ್ರಿಟಿಷರು ಇಲ್ಲಿ ಅಭಿವೃದ್ಧಿಪಡಿಸಿದ ಶಿಕ್ಷಣ ವ್ಯವಸ್ಥೆಯಿಂದಾಗಿ ಜನರಿಗೆ ಸ್ವಾತಂತ್ರ್ಯದ ಮಹತ್ವ ಅರಿವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮೂರು ಮುಕ್ಕಾಲು ಮೀಸೆ ಪಾಲು ಜನರು ಬ್ರಿಟಿಷರು ಆರಂಭಿಸಿದ ಶಿಕ್ಷಣ ವ್ಯವಸ್ಥೆಯ ಫಲವಾಗಿದ್ದರು ಎಂಬುದನ್ನು ನಾವು ಮರೆಯಬಾರದು. ಬಡತನದ ನಿವಾರಣೆಗೆ ಅಭಿವೃದ್ಧಿ ಕಾರ್ಯಕ್ರಮಗಳು ಬೇಕು, ನಿಜ. ಆದರೆ ಜನರಿಗೆ ತಾವು ಬಡವರಾಗಿ ಏಕೆ ಉಳಿದಿದ್ದಾರೆ ಎಂಬುದು ಅರ್ಥವಾಗಬೇಕು. ಬಡತನದ ಮೂಲದಲ್ಲಿನ ಸಾಮಾಜಿಕ - ರಾಜಕೀಯ ನೆಲೆಗಳನ್ನು ಬಡವರಿಗೆ ಗುರುತಿಸುವುದು ಸಾಧ್ಯವಾಗಬೇಕು. ಬಡತನ ಕುರಿತ ಮೀಮಾಂಸೆಯ ಪಾಠ ಮೊದಲು ಬಡವರಿಗಾಗಬೇಕು.

ಅಭಿವೃದ್ಧಿಯೆಂಬುದು, ಸಾಕ್ಷರತೆ - ಶಿಕ್ಷಣ ಎಂಬ ಸಂಗತಿಗಳು ಭಿಕ್ಷೆಯಲ್ಲ. ಅವು ನಮ್ಮ ಹಕ್ಕುಗಳು ಎಂಬುದನ್ನು ಜನರು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಜನರು ಸಾಕ್ಷರರಾಗಬೇಕು. ಅಕ್ಷರಸ್ಥರಾಗಿ ಬಿಟ್ಟರೆ ಇವೆಲ್ಲ ಜನರಿಗೆ ಅರ್ಥವಾಗಿ ಬಿಡುತ್ತವೆ ಎಂದು ಹೇಳಲು ಬರುವುದಿಲ್ಲ, ನಿಜ. ಆದರೆ ಇಂತಹ ಕೊರತೆಯ ಹಿನ್ನೆಲೆಯಲ್ಲಿ ಸಾಕ್ಷರತೆಯ ಅಗತ್ಯವನ್ನೇ ಪ್ರಶ್ನೆ ಮಾಡಲು ಸಾಧ್ಯವಿಲ್ಲ. ಹಂಗಿನ ಬದುಕನ್ನು ಹಕ್ಕಿನ ಬದುಕನ್ನಾಗಿ ಪರಿವರ್ತಿಸಿಕೊಳ್ಳುವ ಕ್ರಮವನ್ನು ಅಭಿವೃದ್ಧಿ ಎಂದು ಹೇಳಬಹುದು.

ಭಾಗ – ೨

**ಮಾನವ ಅಭಿವೃದ್ಧಿ – ವರಮಾನ ಅಭಿವೃದ್ಧಿಗಳ ನಡುವೆ ವ್ಯತ್ಯಾಸಗಳು**

ಮೆಹಬೂಬ್ ಉಲ್ ಹಕ್ ಸ್ಪಷ್ಟವಾಗಿ ವಾದಿಸಿರುವಂತೆ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಹೊಸ ಸಂಶೋಧನೆಯೇನಲ್ಲ. ಅನೇಕ ಚಿಂತಕರು ಬಹಳ ಹಿಂದಿನ ಕಾಲದಿಂದಲೂ ಇದನ್ನು ಗುರುತಿಸಿಕೊಂಡು ಬಂದಿದ್ದಾರೆ. ಸಾಮಾಜಿಕ ವ್ಯವಸ್ಥೆಯು ಎಷ್ಟರ ಮಟ್ಟಿಗೆ ಜನರ ಬದುಕನ್ನು ಉತ್ತಮಪಡಿಸುವಲ್ಲಿ ಸಮರ್ಥವಾಗಿದೆ ಮತ್ತು ತಕ್ಕುದಾಗಿದೆ ಎಂಬುದೇ ಅದರ ಮೌಲ್ಯಮಾಪನದ ಅಳತೆಗೋಲಾಗಬೇಕು ಎಂಬ ವಿಚಾರವನ್ನು ಅರಿಸ್ಟಾಟಲ್‌ನ ಬರಹಗಳಲ್ಲಿ ಗುರುತಿಸಬಹುದಾಗಿದೆ. ಯಾವಾಗಲೂ ಜನರನ್ನು ಅಭಿವೃದ್ಧಿಯ 'ಸಾಧ್ಯ'ವೆಂದು ಪರಿಗಣಿಸಬೇಕೇ ವಿನಾ 'ಸಾಧನ'ವಾಗಿಯಲ್ಲ ಎಂಬ ವಿಚಾರವನ್ನು ಕಾಂಟ್ ಮಂಡಿಸಿದ್ದಾರೆ. ಇದೇ ಬಗೆಯ ವಿಚಾರಗಳನ್ನು ಆಡಂಸ್ಮಿತ್, ಮಾಲ್ಥಸ್, ಕಾರ್ಲ್‌ಮಾರ್ಕ್ಸ್, ಜೆ.ಎಸ್. ಮಿಲ್ ಮುಂತಾದವರ ಬರಹಗಳಲ್ಲಿ ಕಾಣಬಹುದು. ಜನರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅಮೂರ್ತ - ನಿರ್ಜೀವಿ ಸಂಗತಿಗಳಲ್ಲ. ಅವರು ಅದರ ಜೀವಂತ - ಮೂರ್ತ ಕರ್ತೃಗಳಾಗಿದ್ದಾರೆ. ಜನರು ಅಭಿವೃದ್ಧಿಯ ಗುಲಾಮರೂ ಅಲ್ಲ ಅಥವಾ ಅದರ ಬಲಿಪಶುಗಳೂ ಅಲ್ಲ. ಅವರು ಅದರ ಹರಿಕಾರರು ಕರ್ತೃಗಳು.

ವರಮಾನ ವರ್ಧನಾ ಅಭಿವೃದ್ಧಿ ಮಾದರಿ ಮತ್ತು ಮಾನವ ಅಭಿವೃದ್ಧಿ ಮಾದರಿಗಳ ನಡುವಿನ ಭಿನ್ನತೆಗಳನ್ನು ಕೆಳಗೆ ಗುರುತಿಸಲಾಗಿದೆ.

೧. ಮೊದಲನೆಯ ಮಾದರಿಯಲ್ಲಿ ವರಮಾನವು ಅಭಿವೃದ್ಧಿಯ ಅಂತಿಮ ಹಾಗೂ ಅಂತರ್ಗತ ಗುರಿಯಾಗಿದೆ.

ಆದರೆ ಎರಡನೆಯ ಮಾದರಿಯಲ್ಲಿ ವರಮಾನವು ಅಭಿವೃದ್ಧಿಯ ಸಾಧನವೇ ವಿನಾ ಅದು ಅಭಿವೃದ್ಧಿಯ ಸಾಧ್ಯವಲ್ಲ.

೨. ಮೊದಲನೆಯ ಮಾದರಿಯಲ್ಲಿ ವರಮಾನವು ವರ್ಧನೆಯೇ ಅಭಿವೃದ್ಧಿ. ಎರಡನೆಯ ಮಾದರಿಯಲ್ಲಿ ಜನರ ಬದುಕು ಉತ್ತಮಗೊಳ್ಳುವ ಪರಿಯೇ ಮಾನವ ಅಭಿವೃದ್ಧಿ.

೩. ಇದು ಸಾರಾಸಗಟಾಗಿ ಆರ್ಥಿಕ ರಂಗಕ್ಕೆ ಸೇರಿದ ಪ್ರಕ್ರಿಯೆಯಾಗಿದೆ. ಅದೊಂದು ಆರ್ಥಿಕ ಪ್ರಕ್ರಿಯೆಯಾಗಿದೆ.

ಆದರೆ ಎರಡನೆಯ ಮಾದರಿಯಲ್ಲಿ ಅಭಿವೃದ್ಧಿಯು ಇಡೀ ಸಮಾಜವನ್ನು ಒಳಗೊಳ್ಳುವ ಪ್ರಕ್ರಿಯೆಯಾಗಿದೆ. ಅದು ಸಾಮಾಜಿಕ, ರಾಜಕೀಯ, ಆರ್ಥಿಕ ಸಂಗತಿಗಳನ್ನು ಒಳಗೊಂಡ ಪ್ರಕ್ರಿಯೆಯಾಗಿದೆ.

೪. ಮೊದಲನೆಯ ಮಾದರಿಯಲ್ಲಿ ಅಭಿವೃದ್ಧಿಯು ಏಕರೂಪಿ - ಏಕಮುಖಿ ಪ್ರಕ್ರಿಯೆಯಾಗಿದೆ. ಎರಡನೆಯದರಲ್ಲಿ ಅದನ್ನು ಬಹುರೂಪಿ - ಬಹುಮುಖಿ ಪ್ರಕ್ರಿಯೆಯಾಗಿ ಪರಿಭಾವಿಸಿಕೊಳ್ಳಲಾಗಿದೆ.

೫. ವರಮಾನ ವರ್ಧನಾ ಸಿದ್ಧಾಂತವು ಲಿಂಗ ನಿರಪೇಕ್ಷವಾದುದಾಗಿದೆ. ಅದು ಲಿಂಗ ಸಂಬಂಧಗಳಿಗೆ ಅತೀತವಾದ ಸಿದ್ಧಾಂತವಾಗಿದೆ.

ಮಾನವ ಅಭಿವೃದ್ಧಿಯು ಲಿಂಗ ಸಂಬಂಧಗಳನ್ನು ಒಳಗೊಂಡ ವಿಚಾರ ಪ್ರಣಾಳಿಕೆಯಾಗಿದೆ.

೬. ವರ್ಧನೆಯಾದ ವರಮಾನದ ಮೊತ್ತವೇ ಜನರ ಬದುಕಲ್ಲ. ಎರಡನೆಯ ಮಾದರಿಯಲ್ಲಿ ಅಭಿವೃದ್ಧಿಯು ವರಮಾನದ ಜೊತೆಗೆ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ ಮುಂತಾದವುಗಳನ್ನು ಒಳಗೊಂಡ ಸಂಯುಕ್ತ ಪ್ರಕ್ರಿಯೆಯಾಗಿದೆ.

೭. ವರಮಾನವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಂದು ಚಾಲಕ ಶಕ್ತಿಯಾಗಿದೆ. ಅದೇ ಅಭಿವೃದ್ಧಿಯಲ್ಲ. ಮಾನವ ಅಭಿವೃದ್ಧಿಯು ವರಮಾನದ ಜೊತೆಗೆ ಅನೇಕ ಸಾಮಾಜಿಕ - ರಾಜಕೀಯ ಸಂಗತಿಗಳನ್ನು ಒಳಗೊಂಡಿದೆ.

೮. ವರಮಾನ ವರ್ಧನೆ ಸಿದ್ಧಾಂತವು ಜನರ ಬದುಕನ್ನು ಉತ್ತಮಗೊಳಿಸವ ಪ್ರಕ್ರಿಯೆಗೆ ಸಂಬಂಧಿಸಿದಂತೆ 'ಅವಕಾಶ'ಗಳನ್ನು ಮಾತ್ರ ವರ್ಧಿಸುವ ಸಂಗತಿಯನ್ನು ಒಳಗೊಂಡಿದೆ. ಆದರೆ ಮಾನವ ಅಭಿವೃದ್ಧಿಯು ಜನರ ವರಮಾನ ವರ್ಧನೆಯ ಜೊತೆಗೆ, ಅವರ ಧಾರಣಾ ಸಾಮರ್ಥ್ಯ ವರ್ಧನೆಯನ್ನು ಒಳಗೊಂಡಿದೆ. ಎರಡೂ ಕ್ರಿಯೆಗಳು ಏಕಕಾಲದಲ್ಲಿ ನಡೆಯಬೇಕು.

೯. ವರಮಾನ ವರ್ಧನೆಯ ಅಭಿವೃದ್ಧಿಯಲ್ಲಿ ಜನರು ಅಭಿವೃದ್ಧಿಯ ಸಾಧನ ಮಾತ್ರ. ಜನರನ್ನು ಇಲ್ಲಿ ಕೇವಲ ಫಲಾನುಭವಿಗಳಾಗಿ ಮಾತ್ರ ಪರಿಗಣಿಸಲಾಗುತ್ತದೆ. ಆದರೆ ಮಾನವ ಅಭಿವೃದ್ಧಿ ಮಾದರಿಯಲ್ಲಿ ಜನರು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಅದರ ಗುರಿಯೂ ಹೌದು.

೧೦. ವರಮಾನದ ವರ್ಧನಾ ಅಭಿವೃದ್ಧಿ ಸಿದ್ಧಾಂತದಲ್ಲಿ ಅಭಿವೃದ್ಧಿಯು 'ಜನರಿಗಾಗಿ ಇರುತ್ತದೆ. ಆದರೆ ಮಾನವ ಅಭಿವೃದ್ಧಿ ಮೀಮಾಂಸೆಯಲ್ಲಿ ಅಭಿವೃದ್ಧಿಯು 'ಜನರಿಂದ' - 'ಜನರಿಗಾಗಿ' ಇರುತ್ತದೆ.

೧೧. ಮೊದಲನೆಯದರಲ್ಲಿ ಜನರು ಅಭಿವೃದ್ಧಿಯ ಫಲಾನುಭವಿಗಳು ಎರಡನೆಯದರಲ್ಲಿ ಜನರು ಅಭಿವೃದ್ಧಿಯ ಕರ್ತೃಗಳು.

೧೨. ಸುಖಮಯ ಬದುಕು ಎಂದರೆ ಸರಕು ಮತ್ತು ಸೇವೆಗಳ ಅನುಭೋಗದಿಂದ ಜನರು ಪಡೆಯುವ ಗರಿಷ್ಟ ತುಷ್ಟಿಗುಣವಾಗಿದೆ. ಆದರೆ ಅಮರ್ತ್ಯಸೇನ್ ಪ್ರಕಾರ ಸುಖಮಯ ಬದುಕು ಎನ್ನುವುದು ಗರಿಷ್ಟ ತುಷ್ಟಿಗುಣದ ಜೊತೆ ಸ್ವಾತಂತ್ರ್ಯವನ್ನು, ಹಕ್ಕುಗಳನ್ನು, ಜನರ ಕರ್ತೃತ್ವವನ್ನು ಒಳಗೊಂಡಿರುತ್ತದೆ. ಹಂಗಿನ ಬದುಕು ಅಭಿವೃದ್ಧಿಯಲ್ಲ. ಹಕ್ಕಿನ ಬದುಕು ಅಭಿವೃದ್ಧಿ.

೧೩. ವರ್ಧನೆಯಾದ ವರಮಾನವು ಜನರು ಎದುರಿಸುವ ಇತರೆ ಸಮಸ್ಯೆಗಳಾದ ಹಸಿವು, ಅಸಮಾನತೆ, ಲಿಂಗ ತಾರತಮ್ಯ, ಆಹಾರ ಅಭದ್ರತೆ ಮುಂತಾದವುಗಳನ್ನು ಪರಿಹರಿಸುತ್ತದೆ ಎಂದು ಪ್ರತಿಪಾದಿಸುತ್ತಾರೆ. ಆದರೆ ಎರಡನೆಯ ಮಾದರಿಯಲ್ಲಿ ವರ್ಧನೆಯಾದ ವರಮಾನವನ್ನು ಪ್ರಜ್ಞಾಪೂರ್ವಕವಾಗಿ ಜನರ ಬದುಕಾಗಿ ಪರಿವರ್ತಿಸಿಕೊಳ್ಳಬೇಕಾಗುತ್ತದೆ. ವರಮಾನವು ತನ್ನಷ್ಟಕ್ಕೆ ತಾನೆ ಜನರ ಬದುಕಾಗಿ, ಜನರ ಅಕ್ಷರವಾಗಿ, ಜನರ ಆರೋಗ್ಯವಾಗಿ, ಜನರ ಆಹಾರವಾಗಿ ಪರಿವರ್ತನೆಯಾಗುವುದಿಲ್ಲ. ಈ ಪರಿವರ್ತನೆಯನ್ನು ಉದ್ದೇಶಪೂರ್ವಕವಾಗಿ ಸಾಧಿಸಿಕೊಳ್ಳ ಬೇಕಾಗುತ್ತದೆ.

೧೪. ಮೊದಲನೆಯದರಲ್ಲಿ ಅಭಿವೃದ್ಧಿಯನ್ನು 'ಜಿಡಿಪಿ/ಜಿಎನ್‌ಪಿ' ಮೂಲಕ ಅಳತೆ ಮಾಡಲಾಗುತ್ತದೆ. ಇದು ವರಮಾನವನ್ನು ಮಾತ್ರ ಒಳಗೊಂಡ ಸೂಚಿಯಾಗಿದೆ. ಆದರೆ ಎರಡನೆಯದರಲ್ಲಿ ಅಭಿವೃದ್ಧಿಯನ್ನು 'ಎಚ್‌ಡಿಐ'ನಿಂದ ಅಳತೆ ಮಾಡಲಾಗುತ್ತದೆ. ಅದು ಆರೋಗ್ಯ, ಶಿಕ್ಷಣ ಮತ್ತು ವರಮಾನ - ಹೀಗೆ ಮೂರು ಸೂಚಿಗಳನ್ನು ಒಳಗೊಂಡ ಸಂಯುಕ್ತ ಸೂಚ್ಯಂಕವಾಗಿದೆ.

# ೨. ಮಾನವ ಅಭಿವೃದ್ಧಿ : ಕರ್ನಾಟಕದ ಸಾಧನೆ (೨)

ಭಾಗ – ೩

**ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ)**

ಮಾನವ ಅಭಿವೃದ್ಧಿಯನ್ನು ಪರಿಮಾಣಾತ್ಮಕವಾಗಿ ಮಾಪನ ಮಾಡಲು ಯುಎನ್‌ಡಿಪಿಯು ರೂಪಿಸಿರುವ ಸೂತ್ರವೇ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ). ಇದೊಂದು ಸಂಯುಕ್ತ ಸೂಚ್ಯಂಕವಾಗಿದೆ. ಅಂದರೆ ಇದು ಮೂರು ಸೂಚಿಗಳನ್ನು ಒಳಗೊಂಡ ಮಾಪನವಾಗಿದೆ. ಎಚ್.ಡಿ.ಐ. ಒಳಗೊಳ್ಳುವ ಮೂರು ಸೂಚಿಗಳು :

೧. ಜನನ ಕಾಲದಿಂದ ಎಷ್ಟು ವರ್ಷ ಬದುಕುತ್ತಾರೆ ಎಂಬುದರ ಆಧಾರದ ಮೇಲೆ ಲೆಕ್ಕ ಹಾಕುವ ಜನರ ಜೀವನಾಯುಷ್ಯ.

೨. ಜನರ ಸಾಕ್ಷರತಾ ಪ್ರಮಾಣ ಹಾಗೂ ದಾಖಲಾತಿ ಪ್ರಮಾಣಗಳನ್ನು ಒಳಗೊಂಡ ಶೈಕ್ಷಣಿಕ ಸಾಧನೆಯ ಸೂಚಿ. ಇಲ್ಲಿ ಸಾಕ್ಷರತಾ ಪ್ರಮಾಣಕ್ಕೆ ೨/೩ ರಷ್ಟು ತೂಕವನ್ನು ಮತ್ತು ದಾಖಲಾತಿಗೆ ೧/೩ ರಷ್ಟು ತೂಕನೀಡಲಾಗುತ್ತದೆ.

೩. ಡಾಲರ್‌ನ ಕೊಳ್ಳುವ ಶಕ್ತಿಯ ಆಧಾರದ ಮೇಲೆ ಲೆಕ್ಕ ಹಾಕುವ ಜನರ ತಲಾ ಜಿ.ಡಿ.ಪಿ. ಅಥವಾ ತಲಾ ವರಮಾನ.

ಈ ಮೂರು ಸೂಚಿಗಳ ಸರಾಸರಿ ಮೌಲ್ಯವೇ ಮಾನವ ಅಭಿವೃದ್ಧಿ ಸೂಚ್ಯಂಕ. ಎಚ್‌ಡಿಐ = (ಆಯುರ್ಮಾನ ಸೂಚಿ + ಶೈಕ್ಷಣಿಕ ಸಾಧನೆ ಸೂಚಿ + ತಲಾ ವರಮಾನ ಸೂಚಿ) / ೩

ಪ್ರತಿಯೊಂದು ಸೂಚಿಯನ್ನು ಲೆಕ್ಕ ಹಾಕಲು ಕೆಳಗಿನ ಸೂತ್ರವನ್ನು ಬಳಸಬಹುದಾಗಿದೆ.

= ಸೂಚಿಯ ವಾಸ್ತವ ಮೌಲ್ಯ - ಸೂಚಿಯ ಕನಿಷ್ಟ ಮೌಲ್ಯ / ಸೂಚಿಯ ಗರಿಷ್ಠ ಮೌಲ್ಯ - ಸೂಚಿಯ ಕನಿಷ್ಟ ಮೌಲ್ಯ

**ಕರ್ನಾಟಕದ ೨೦೦೧ರ ಮಾನವ ಅಭಿವೃದ್ಧಿ ಸೂಚ್ಯಂಕದ ಲೆಕ್ಕಾಚಾರ**

ಸೂಚಿಗಳ ವಿವರ

೧. ಜನನ ಕಾಲದಲ್ಲಿ ಜೀವನಾಯುಷ್ಯ - ೬೫.೮೦ ವರ್ಷಗಳು

೨. ಸಾಕ್ಷರತಾ ಪ್ರಮಾಣ (೨೦೦೧) - ಶೇ. ೬೬.೬೪

೩. ದಾಖಲಾತಿ ಪ್ರಮಾಣ – ಶೇ. ೮೦.೨೮

೪. ಪಿಪಿಪಿ ಡಾಲರ್‌ನಲ್ಲಿ ನೈಜ ತಲಾವರಮಾನ $ ೨,೮೫೪.೦೦

ಕನಿಷ್ಟ ಮತ್ತು ಗರಿಷ್ಠ ಮೌಲ್ಯಗಳು

೧. ಜನನ ಕಾಲದಲ್ಲಿ ಆಯಸ್ಸು : ಕನಿಷ್ಟ : ೨೫ ವರ್ಷಗಳು, ಗರಿಷ್ಟ : ೮೫ ವರ್ಷಗಳು.

೨. ಸಾಕ್ಷರತಾ ಪ್ರಮಾಣ : ಕನಿಷ್ಟ : ಶೇ. ೦. ಗರಿಷ್ಟ : ಶೇ. ೧೦೦.

೩. ದಾಖಲಾತಿ ಪ್ರಮಾಣ : ಕನಿಷ್ಟ : ಶೇ. ೦, ಗರಿಷ್ಟ : ಶೇ. ೧೦೦.

೪. ತಲಾ ವರಮಾನ (ಪಿಪಿಪಿ ಡಾಲರ್‌ನಲ್ಲಿ) : ಕನಿಷ್ಟ : ಡಾಲರ್ ೧೦೦. ಗರಿಷ್ಟ : ಡಾಲರ್೪೦,೦೦೦.

ಮೇಲಿನ ಎಲ್ಲ ವಿವರಗಳನ್ನು ಆಧರಿಸಿ ಕರ್ನಾಟಕದ ೨೦೦೧ರ ಎಚ್‌ಡಿಐ ಲೆಕ್ಕ ಹಾಕಬಹುದಾಗಿದೆ.

<u>ಸೂಚಿಗಳ ಲೆಕ್ಕಾಚಾರ</u>

೧. ಆಯುರ್ಮಾನ ಸೂಚಿ = ೫.೮೦ – ೨೫ / ೮೫ – ೨೫ = ೦.೬೮೦

೨. ಸಾಕ್ಷರತಾ ಸೂಚಿ = ೬೬.೬೪ – ೦ / ೧೦೦ – ೦ = ೦.೬೭೦

೩. ದಾಖಲಾತಿ ಸೂಚಿ = ೮೦.೨೮ – ೦ / ೧೦೦ – ೦ = ೦.೮೦೩

೪. ಶೈಕ್ಷಣಿಕ ಸಾಧನೆ ಸೂಚಿ = ೨/೩ (ಸಾಕ್ಷರತಾ ಸೂಚಿ) + ೧/೩ (ದಾಖಲಾತಿ ಸೂಚಿ) = ೨/೩ (೦.೬೭೦) + ೧/೩ (೦.೮೦೩) = ೦.೭೧೨

೫. ನೈಜತಲಾ ಜಿಡಿಪಿ ಸೂಚಿ = ಲಾಗ್ ೨೮೫೪ – ಲಾಗ್ ೧೦೦ = ೦.೫೫೯ / ಲಾಗ್೪೦೦೦೦ – ಲಾಗ್ ೧೦೦

ಮಾನವ ಅಭಿವೃದ್ಧಿ ಸೂಚ್ಯಂಕ = (೦.೬೮೦+೦.೭೧೨+೦.೫೫೯)/೩ = ೦.೬೫೦

ಇದೇ ರೀತಿ ಕರ್ನಾಟಕದ ಜಿಲ್ಲೆಗಳಿಗೂ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕ ಹಾಕಬಹುದಾಗಿದೆ.

## <u>ಭಾಗ – ೪</u>
## ಮಾನವ ಅಭಿವೃದ್ಧಿ ಸೂಚ್ಯಂಕ : ಕರ್ನಾಟಕದ ಸಾಧನೆ

ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯನ್ನುಎರಡು ನೆಲೆಗಳಲ್ಲಿ ಚರ್ಚಿಸಬಹುದಾಗಿದೆ. ಮೊದಲನೆಯದಾಗಿ ಅಖಿಲ ಭಾರತ ಮಟ್ಟದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯನ್ನು ಗುರುತಿಸಬಹುದಾಗಿದೆ. ಎರಡನೆಯದಾಗಿ ಕರ್ನಾಟಕದ ಜಿಲ್ಲೆಗಳು ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧಿಸಿದ ಸಾಧನೆಗಳನ್ನು ಗುರುತಿಸಬಹುದಾಗಿದೆ.

### ಅ: ಅಖಿಲ ಭಾರತ ಮಟ್ಟದಲ್ಲಿ ಕರ್ನಾಟಕದ ಸಾಧನೆ

ಕೋಷ್ಟಕ ೧ ರಲ್ಲಿ ದೇಶದ ೧೫ ಪ್ರಧಾನ ರಾಜ್ಯಗಳ ೨೦೦೧ ಮತ್ತು ೨೦೦೬ರ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ನೀಡಲಾಗಿದೆ. ಇಲ್ಲಿ ಎಚ್.ಡಿ.ಐ.ಯನ್ನು ಯುಎನ್‌ಡಿಪಿ ಮಾದರಿಯಲ್ಲಿ ಮಾಪನ ಮಾಡಲಾಗಿದೆ. ಬಹಳ ಸರಳವಾಗಿ ಗಮನಿಸಬಹುದಾದ

ಸಂಗತಿಯೆಂದರೆ ಕರ್ನಾಟಕದ ಎಚ್‌ಡಿಐ (೦.೬೫೦)ಯು ಅಖಿಲ ಭಾರತ ಎಚ್.ಡಿ.ಐ. (೦.೬೨೧) ಗಿಂತ ಅಧಿಕ ಮಟ್ಟದಲ್ಲಿದೆ. ಅಖಿಲ ಭಾರತ ಮಟ್ಟದ ೧೫ ಪ್ರಧಾನ ರಾಜ್ಯಗಳ ಪೈಕಿ ಕರ್ನಾಟಕವು ಎಚ್‌ಡಿಐನಲ್ಲಿ ಏಳನೆಯ ಸ್ಥಾನ ಪಡೆದುಕೊಂಡಿದೆ. ಇಲ್ಲಿ ಕರ್ನಾಟಕವು ತನ್ನ ಮಧ್ಯಮಗತಿ ಸ್ಥಾನವನ್ನು ಕಾಯ್ದುಕೊಂಡಿರುವುದು ಕಂಡುಬರುತ್ತದೆ.

ಇಲ್ಲಿ ಆತಂಕಪಡುವ ಸಂಗತಿಯೆಂದರೆ ದಕ್ಷಿಣ ಭಾರತದಲ್ಲಿನ ಕೇರಳ ಮತ್ತು ತಮಿಳುನಾಡು ರಾಜಯಗಳು ಎಚ್‌ಡಿಐನಲ್ಲಿ ಕ್ರಮವಾಗಿ ಮೊದಲನೆಯ ಹಾಗೂ ಮೂರನೆಯ ಸ್ಥಾನ ಪಡೆದುಕೊಂಡಿದೆ. ಇವೆರಡೂ ರಾಜ್ಯಗಳ ಮುಂದೆ ಕರ್ನಾಟಕದ ಸಾಧನೆಯು ದುರ್ಬಲವಾಗಿದೆ.

ಕೇರಳ ರಾಜ್ಯದ ಎಚ್‌ಡಿಐಗೆ ಹೋಲಿಸಿದರೆ ಕರ್ನಾಟಕದ ಎಚ್‌ಡಿಐಯು ಅದರ ಶೇ. ೮೭.೧೩ ರಷ್ಟಿದೆ. ಈ ದಿಶೆಯಲ್ಲಿ ಕರ್ನಾಟಕವು ಸಾಗಬೇಕಾದ ದಾರಿ ದೂರಿವಿದೆ. ಮಾನವ ಅಭಿವೃದ್ಧಿ ವಿಷಯದಲ್ಲಿ ರಾಜ್ಯವು ಹೆಚ್ಚು ಬಂಡವಾಳ ಹೂಡುವ ಅಗತ್ಯವಿದೆ.

ಕರ್ನಾಟಕದ ಎಚ್‌ಡಿಐಯು ೧೯೯೧ರಲ್ಲಿ ೦.೫೪೧ ರಷ್ಟಿತ್ತು. ಅದು ೨೦೦೧ರಲ್ಲಿ ೦.೬೫೦ ಕ್ಕೇರಿದೆ. ಆದರೆ ಮುಂದೆ ೨೦೦೬ರಲ್ಲಿ ಅದು ಕೇವಲ ೦.೬೫೮ ಕ್ಕೇರಿದೆ. ಇಲ್ಲಿನ ಏರಿಕೆಯು ಅತ್ಯಂತ ಮಂದಗತಿಯದ್ದಾಗಿದೆ. ಇದರಿಂದಾಗಿ ಕರ್ನಾಟಕದ ಎಚ್‌ಡಿಐನ ಸ್ಥಾನ ೨೦೦೧ ರಲ್ಲಿ ೭ ಇದ್ದುದು ೨೦೦೬ ರಲ್ಲಿ ೮ ಕ್ಕಿಳಿದಿದೆ. ಇದಕ್ಕೆ ಅನೇಕ ಕಾರಣಗಳನ್ನು ನೀಡಬಹುದು. ಒಟ್ಟು ಸೂಚ್ಯಂಕದಲ್ಲಿ ಉಂಟಾಗಿರುವ ಏರಿಕೆಯೂ ಸಾಪೇಕ್ಷವಾಗಿ ಕೆಳಮಟ್ಟದ್ದಾಗಿದೆ (ಶೇ.೧.೨೩) ಆದರೆ ಕೇರಳ ರಾಜ್ಯದಲ್ಲಿ ಅದು ಶೇ. ೩.೮೯ ರಷ್ಟು ಏರಿಕೆಯಾಗಿದ್ದರೆ ತಮಿಳುನಾಡಿನಲ್ಲಿ ಅದು ಶೇ. ೧.೦೨ ರಷ್ಟು ಏರಿಕೆಯಾಗಿದೆ. ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕದ ಸಾಧನೆಯು ಹೇಳಿಕೊಳ್ಳುವಂತಹ ರೀತಿಯಲ್ಲಿಲ್ಲ.

**ಮಾನವ ಅಭಿವೃದ್ಧಿ ಸೂಚ್ಯಂಕಗಳು : ೨೦೦೧ ಮತ್ತು ೨೦೦೬**

**ಕೋಷ್ಟಕ – ೧**

| **ಕ್ರ.ಸಂ.** | **ರಾಜ್ಯಗಳು** | **ಎಚ್‌ಡಿಐ (೨೦೦೧)** | **ಸ್ಥಾನ** | **ಎಚ್‌ಡಿಐ (೨೦೦೬)** | **ಸ್ಥಾನ** |
|---|---|---|---|---|---|
| ೧. | ಆಂಧ್ರಪ್ರದೇಶ | ೦.೬೦೯ | ೦೯ | ೦.೬೨೭ | ೧೦ |
| ೨. | ಅಸ್ಸಾಂ | ೦.೫೭೮ | ೧೧ | ೦.೬೪೫ | ೦೯ |
| ೩. | ಬಿಹಾರ | ೦.೪೯೫ | ೧೫ | ೦.೫೫೨ | ೧೫ |
| ೪. | ಗುಜರಾತ್ | ೦.೬೫೫ | ೫ | ೦.೬೭೪ | ೦೬ |
| ೫. | ಹರಿಯಾಣ | ೦.೬೫೩ | ೬ | ೦.೬೮೬ | ೦೫ |
| ೬. | ಕರ್ನಾಟಕ | ೦.೬೫೦ | ೭ | ೦.೬೫೮ | ೦೮ |

| | | | | | |
|---|---|---|---|---|---|
| ೭. | ಕೇರಳ | ೦.೭೪೬ | ೧ | ೦.೭೭೫ | ೦೧ |
| ೮. | ಮಧ್ಯಪ್ರದೇಶ | ೦.೫೭೧ | ೧೨ | ೦.೫೮೫ | ೧೩ |
| ೯. | ಮಹಾರಾಷ್ಟ್ರ | ೦.೭೦೬ | ೦೨ | ೦.೭೧೬ | ೦೨ |
| ೧೦. | ಒರಿಸ್ಸಾ | ೦.೫೬೯ | ೧೩ | ೦.೫೯೨ | ೧೧ |
| ೧೧. | ಪಂಜಾಬ | ೦.೬೭೯ | ೦೪ | ೦.೭೦೧ | ೦೩ |
| ೧೨. | ರಾಜಸ್ಥಾನ | ೦.೫೯೬ | ೧೦ | ೦.೫೯೧ | ೧೨ |
| ೧೩. | ತಮಿಳುನಾಡು | ೦.೬೮೭ | ೦೩ | ೦.೬೯೪ | ೦೪ |
| ೧೪. | ಉತ್ತರ ಪ್ರದೇಶ | ೦.೫೩೫ | ೧೪ | ೦.೫೮೨ | ೧೪ |
| ೧೫. | ಪಶ್ಚಿಮ ಬಂಗಾಳ | ೦.೬೪೭ | ೦೮ | ೦.೬೭೧ | ೦೭ |

*ಮೂಲ : ೧. ಕರ್ನಾಟಕದ ಮಾನವ ಅಭಿವೃದ್ಧಿ ವರದಿ : ೨೦೦೫, ಪು. ೩೫೩*

*೨. ಭಾರತ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.*

**ಆ : ಕರ್ನಾಟಕದ ಜಿಲ್ಲೆಗಳ ಮಾನವ ಅಭಿವೃದ್ಧಿ**

ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ಸಿದ್ಧಪಡಿಸಿರುವ 'ಕರ್ನಾಟಕ ಮಾನವ ಅಭಿವೃದ್ಧಿ ವರದಿ - ೨೦೦೫' ರಲ್ಲಿ ಕರ್ನಾಟಕದ ೨೭ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ೧೯೯೧ ಮತ್ತು ೨೦೦೧ ಕಾಲಘಟ್ಟಗಳಿಗೆ ಮಾಪನ ಮಾಡಿ ನೀಡಲಾಗಿದೆ. ಇದರ ವಿವರಗಳನ್ನು ಕೋಷ್ಟಕ - ೨ ರಲ್ಲಿ ನೀಡಿದೆ.

**ಮಾನವ ಅಭಿವೃದ್ಧಿ ಸೂಚ್ಯಂಕ : ೧೯೯೧ ಮತ್ತು ೨೦೦೧, ಜಿಲ್ಲಾವಾರು**

**ಕೋಷ್ಟಕ – ೨**

| **ಕ್ರ.ಸಂ** | **ಜಿಲ್ಲೆಗಳು** | **ಮಾನವ ಅಭಿವೃದ್ಧಿ ೧೯೯೧** | | **ಮಾನವ ಅಭಿವೃದ್ಧಿ ೨೦೦೧** | |
|---|---|---|---|---|---|
| | | **ಸೂಚ್ಯಂಕ** | **ಸ್ಥಾನ** | **ಸೂಚ್ಯಂಕ** | **ಸ್ಥಾನ** |
| ೧. | ಬಾಗಲಕೋಟೆ | ೦.೫೦೫ | ೨೦ | ೦.೫೯೧ | ೨೨ |
| ೨. | ಬೆಂಗಳೂರು ಗ್ರಾಮೀಣ | ೦.೫೩೯ | ೧೧ | ೦.೬೫೩ | ೦೬ |
| ೩. | ಬೆಂಗಳೂರು ನಗರ | ೦.೬೨೩ | ೦೪ | ೦.೭೫೩ | ೦೧ |

| | | | | | |
|---|---|---|---|---|---|
| ೪. | ಬೆಳಗಾವಿ | ೦.೫೪೫ | ೦೯ | ೦.೬೪೮ | ೦೮ |
| ೫. | ಬಳ್ಳಾರಿ | ೦.೫೧೨ | ೧೮ | ೦.೬೧೭ | ೧೮ |
| ೬. | ಬೀದರ್ | ೦.೪೯೬ | ೨೩ | ೦.೫೯೯ | ೨೧ |
| ೭. | ವಿಜಾಪುರ | ೦.೫೦೪ | ೨೧ | ೦.೫೮೯ | ೨೩ |
| ೮. | ಚಾಮರಾಜನಗರ | ೦.೪೮೮ | ೨೪ | ೦.೫೭೬ | ೨೫ |
| ೯. | ಚಿಕ್ಕಮಗಳೂರು | ೦.೫೫೯ | ೦೭ | ೦.೬೪೭ | ೦೯ |
| ೧೦. | ಚಿತ್ರದುರ್ಗ | ೦.೫೩೫ | ೧೩ | ೦.೬೨೭ | ೧೬ |
| ೧೧. | ದಕ್ಷಿಣ ಕನ್ನಡ | ೦.೬೬೧ | ೦೧ | ೦.೭೨೨ | ೦೨ |
| ೧೨. | ದಾವಣಗೆರೆ | ೦೫೪೮ | ೦೮ | ೦.೬೩೫ | ೧೨ |
| ೧೩. | ಧಾರವಾಡ | ೦.೫೩೯ | ೧೦ | ೦.೬೪೨ | ೧೦ |
| ೧೪. | ಗದಗ | ೦.೫೧೬ | ೧೭ | ೦.೬೩೪ | ೧೩ |
| ೧೫. | ಗುಲಬರ್ಗಾ | ೦.೪೫೩ | ೨೫ | ೦.೫೬೪ | ೨೬ |
| ೧೬. | ಹಾಸನ | ೦.೫೧೯ | ೧೬ | ೦.೬೩೯ | ೧೧ |
| ೧೭. | ಹಾವೇರಿ | ೦.೪೯೬ | ೨೨ | ೦.೬೦೩ | ೨೦ |
| ೧೮. | ಕೊಡಗು | ೦.೬೨೩ | ೦೩ | ೦.೬೯೭ | ೦೪ |
| ೧೯. | ಕೋಲಾರ | ೦.೫೨೨ | ೧೫ | ೦.೬೨೫ | ೧೭ |
| ೨೦. | ಕೊಪ್ಪಳ | ೦.೪೪೬ | ೨೬ | ೦.೫೮೨ | ೨೪ |
| ೨೧. | ಮಂಡ್ಯ | ೦.೫೧೧ | ೧೯ | ೦.೬೦೯ | ೧೯ |
| ೨೨. | ಮೈಸೂರು | ೦.೫೨೪ | ೧೪ | ೦.೬೩೧ | ೧೪ |
| ೨೩. | ರಾಯಚೂರು | ೦.೪೪೩ | ೨೭ | ೦.೫೪೭ | ೨೭ |
| ೨೪. | ಶಿವಮೊಗ್ಗ | ೦.೫೮೪ | ೦೫ | ೦.೬೭೩ | ೦೫ |

| | | | | | |
|---|---|---|---|---|---|
| ೨೫. | ತುಮಕೂರು | ೦.೫೩೯ | ೧೨ | ೦.೬೩೦ | ೧೫ |
| ೨೬. | ಉಡುಪಿ | ೦.೬೫೯ | ೦೨ | ೦.೭೧೪ | ೦೩ |
| ೨೭. | ಉತ್ತರ ಕನ್ನಡ | ೦.೫೬೭ | ೦೬ | ೦.೬೫೩ | ೦೭ |
| ೨೮. | ಕರ್ನಾಟಕ ರಾಜ್ಯ | ೦.೫೪೧ | ... | ೦.೬೫೦ | ... |

***ಮೂಲ:*** *ಕರ್ನಾಟಕದ ಮಾನವ ಅಭಿವೃದ್ಧಿ ವರದಿ: ೨೦೦೫, ಪು. ೧೯*

ಕೋಷ್ಟಕ - ೨ ರಲ್ಲಿ ತೋರಿಸಿರುವಂತೆ ಕರ್ನಾಟಕದ ಮಾನವ ಅಭಿವೃದ್ಧಿ ಸೂಚ್ಯಂಕವು ೧೯೯೧ ರಲ್ಲಿ ೦.೫೪೧ ರಷ್ಟಿದ್ದುದು ೨೦೦೧ ರಲ್ಲಿ ೦.೬೫೦ ಕ್ಕೇರಿದೆ. ಇದೊಂದು ಮೆಚ್ಚತಕ್ಕ ಸಾಧನೆಯಾಗಿದೆ. ರಾಜ್ಯದಲ್ಲಿ ೧೯೯೧ರಲ್ಲಿ ರಾಜ್ಯ ಮಟ್ಟದ ಸೂಚ್ಯಂಕಕ್ಕಿಂತ ೯ ಜಿಲ್ಲೆಗಳಲ್ಲಿ ಸೂಚ್ಯಂಕವು ಅಧಿಕವಾಗಿದ್ದರೆ ೨೦೦೧ರಲ್ಲಿ ರಾಜ್ಯ ಮಟ್ಟದ ಸೂಚ್ಯಂಕಕ್ಕಿಂತ ಕೇವಲ ೭ ಜಿಲ್ಲೆಗಳಲ್ಲಿ ಮಾತ್ರ ಎಚ್‌ಡಿಐ ಮೌಲ್ಯ ಅಧಿಕವಾಗಿದೆ. ರಾಜ್ಯದಲ್ಲಿ ೧೯೯೧ರಲ್ಲಿ ಸೂಚ್ಯಂಕ ೦.೫೦೦ ಕ್ಕಿಂತ ಕಡಿಮೆ ಸೂಚ್ಯಂಕ ಹೊಂದಿದ್ದ ಜಿಲ್ಲೆಗಳ ಸಂಖ್ಯೆ ಆರು. ಆದರೆ ೨೦೦೧ರಲ್ಲಿ ೦.೬೦೦ ಕ್ಕಿಂತ ಕಡಿಮೆ ಸೂಚ್ಯಂಕ ಪಡೆದ ಜಿಲ್ಲೆಗಳ ಸಂಖ್ಯೆ ಆರು.

ಅತ್ಯಂತ ಕುತೂಹಲದ ಸಂಗತಿಯೆಂದರೆ ೧೯೯೧ರಲ್ಲಿ ಕನಿಷ್ಟ ಸೂಚ್ಯಂಕ ೦.೪೪೩ ರಾಯಚೂರು ಜಿಲ್ಲೆಯಲ್ಲಿತ್ತು. ಅದರ ಸ್ಥಾನ ಕಟ್ಟಕಡೆಯ ೨೭ನೆಯದಾಗಿತ್ತು. ಈಗ ೨೦೦೧ರಲ್ಲಿ ಅದು ಕನಿಷ್ಟ ಸೂಚ್ಯಂಕ ೦.೫೪೭ ರೊಂದಿಗೆ ೨೭ನೆಯ ಸ್ಥಾನದಲ್ಲೇ ಮುಂದುವರಿದಿದೆ.

ಕೋಷ್ಟಕ - ೩ರಲ್ಲಿ ಕರ್ನಾಟಕದ ಜಿಲ್ಲೆಗಳನ್ನು ವರಮಾನ ಮತ್ತು ಅಭಿವೃದ್ಧಿಗಳ ನಡುವಣ ಸಂಬಂಧವನ್ನು ಅವಲಂಬಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

ಮೊದಲನೆಯ ಗುಂಪಿನಲ್ಲಿ ಆರು ಜಿಲ್ಲೆಗಳಿವೆ. ಇವು ವರಮಾನದಲ್ಲಿ ಉನ್ನತಮಟ್ಟ ತಲುಪಿವೆ ಹಾಗೂ ಮಾನವ ಅಭಿವೃದ್ಧಿಯಲ್ಲೂ ಉತ್ತಮ ಸಾಧನೆ ಸಾಧಿಸಿಕೊಂಡಿವೆ. ಈ ಜಿಲ್ಲೆಗಳಲ್ಲಿ ವರ್ಧನೆಯಾದ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಉತ್ತಮ ಸ್ಥಿತಿಯಲ್ಲಿರುವ ಜಿಲ್ಲೆಗಳು ಆರು.

ಈ ಜಿಲ್ಲೆಗಳ ಗುಂಪಿಗೆ ಸಂಪೂರ್ಣವಾಗಿ ವಿರುದ್ಧವಾಗಿರುವ ಎರಡನೆಯ ಗುಂಪಿನಲ್ಲಿ ನಾಲ್ಕು ಜಿಲ್ಲೆಗಳಿವೆ. ಈ ನಾಲ್ಕು ಜಿಲ್ಲೆಗಳು ಅಭಿವೃದ್ಧಿಯ ದೃಷ್ಟಿಯಿಂದ ಸಂಕೀರ್ಣ ಸಮಸ್ಯೆ ಎದುರಿಸುತ್ತಿವೆ. ಏಕೆಂದರೆ ವರಮಾನ ಹಾಗೂ ಮಾನವ ಅಭಿವೃದ್ಧಿ ಎರಡೂ ನೆಲೆಗಳಿಂದಲೂ ಇವು ತೀವ್ರ ಹಿಂದುಳಿದಿರುವ ಸ್ಥಿತಿಯಲ್ಲಿವೆ. ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಗಳು ಇವಾಗಿವೆ. ಪ್ರಾದೇಸಿಕವಾಗಿ ಈ ಗುಂಪಿನ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಗುಲಬರ್ಗಾ ವಿಭಾಗಕ್ಕೆ ಸೇರಿದರೆ ವಿಜಾಪುರವು ಬೆಳಗಾವಿ ವಿಭಾಗಕ್ಕೆ ಸೇರುತ್ತದೆ.

ಮೂರನೆಯ ಗುಂಪಿನಲ್ಲಿ ಏಳು ಜಿಲ್ಲೆಗಳಿವೆ. ಈ ಜಿಲ್ಲೆಗಳು ರಾಜ್ಯದಲ್ಲಿ ವರಮಾನದ ದೃಷ್ಟಿಯಿಂದ ಉತ್ತಮ ಸ್ಥಾನದಲ್ಲಿವೆ. ಕೊಪ್ಪಳದಂತಹ ಹಿಂದುಳಿದ ಜಿಲ್ಲೆಯು ರಾಜ್ಯದಲ್ಲಿ ವರಮಾನ ವರ್ಧನೆಯ ದೃಷ್ಟಿಯಿಂದ ೧೪ನೆಯ ಸ್ಥಾನದಲ್ಲಿವೆ. ಆದರೆ ಈ ಜಿಲ್ಲೆಗಳು ತಾವು ಸಾಧಿಸಿಕೊಂಡ ವರಮಾನ ವರ್ಧನೆಯನ್ನು ಅಭಿವೃದ್ಧಿಯನ್ನಾಗಿ ಪರಿವರ್ತಿಸಿಕೊಳ್ಳುವಲ್ಲಿ ವಿಫಲವಾಗಿವೆ. ಕೊಪ್ಪಳ ಜಿಲ್ಲೆಯು ವರಮಾನದ ದೃಷ್ಟಿಯಿಂದ ತುಮಕೂರು, ದಾವಣಗೆರೆ ಮತ್ತು ಹಾಸನ ಜಿಲ್ಲೆಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಆದರೆ ಮಾನವ ಅಭಿವೃದ್ಧಿಯಲ್ಲಿ ಅದರ

ಸ್ಥಾನ ೨೪. ಈ ಗುಂಪಿನ ಜಿಲ್ಲೆಗಳಲ್ಲಿ ವರಮಾನವನ್ನು ಜನರ ಬದುಕನ್ನಾಗಿ ಪರಿವರ್ತಿಸುವ ಅಗತ್ಯವಿದೆ. ವರ್ಧನೆಯಾದ ವರಮಾನವು ಜನರ ಆರೋಗ್ಯ, ಅಕ್ಷರ, ಆಹಾರವಾಗಿ ಪರಿವರ್ತನೆ ಆಗಬೇಕು. ಈ ಬಗ್ಗೆ ಅಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

**ಕರ್ನಾಟಕದ ಮಾನವ ಅಭಿವೃದ್ಧಿ : ೨೦೦೧**

**ಕೋಷ್ಟಕ – ೩**

| **ಕ್ರ.ಸಂ.** | **ಜಿಲ್ಲೆಗಳು** | **ವರಮಾನ ಸ್ಥಾನ** | **ಮಾನವ ಅಭಿವೃದ್ಧಿ ಸ್ಥಾನ** |
|---|---|---|---|
| (ವರಮಾನ ಅಧಿಕ: ಮಾನವ ಅಭಿವೃದ್ಧಿಯು ಅಧಿಕವಿರುವ ಜಿಲ್ಲೆಗಳು) | | | |
| ೦೧. | ಬೆಂಗಳೂರು ಗ್ರಾಮೀಣ | ೦೪ | ೦೬ |
| ೦೨. | ಬೆಂಗಳೂರು ನಗರ | ೦೧ | ೦೧ |
| ೦೩. | ಚಿಕ್ಕಮಗಳೂರು | ೦೬ | ೦೯ |
| ೦೪. | ದಕ್ಷಿಣ ಕನ್ನಡ | ೦೨ | ೦೨ |
| ೦೫. | ಕೊಡಗು | ೦೩ | ೦೪ |
| ೦೬. | ಉಡುಪಿ | ೦೫ | ೦೩ |
| (ವರಮಾನ ಕಡಿಮೆ: ಮಾನವ ಅಭಿವೃದ್ಧಿಯೂ ಕಡಿಮೆಯಿರುವ ಜಿಲ್ಲೆಗಳು) | | | |
| ೦೭. | ಬೀದರ್ | ೨೬ | ೨೧ |
| ೦೮. | ಗುಲಬರ್ಗಾ | ೨೫ | ೨೬ |
| ೦೯. | ವಿಜಾಪುರ | ೨೩ | ೨೩ |
| ೧೦. | ರಾಯಚೂರು | ೨೭ | ೨೭ |
| (ವರಮಾನ ಅಧಿಕ: ಮಾನವ ಅಭಿವೃದ್ಧಿ ಕೆಳಮಟ್ಟದಲ್ಲಿರುವ ಜಿಲ್ಲೆಗಳು) | | | |
| ೧೧. | ಬಾಗಲಕೋಟೆ | ೧೨ | ೨೨ |
| ೧೨. | ಬಳ್ಳಾರಿ | ೦೯ | ೧೮ |
| ೧೩. | ಧಾರವಾಡ | ೦೮ | ೧೦ |

| | | | |
|---|---|---|---|
| ೧೪. | ಕೊಪ್ಪಳ | ೧೪ | ೨೪ |
| ೧೫. | ಮೈಸೂರು | ೦೭ | ೧೪ |
| ೧೬. | ಚಾಮರಾಜನಗರ | ೧೭ | ೨೫ |
| ೧೭. | ಧಾರವಾಡ | ೦೮ | ೧೦ |
| (ವರಮಾನ ಕಡಿಮೆ: ಮಾನವ ಅಭಿವೃದ್ಧಿ ಅಧಿಕ ಮಟ್ಟದಲ್ಲಿರುವ ಜಿಲ್ಲೆಗಳು) | | | |
| ೧೮. | ಬೆಳಗಾವಿ | ೧೩ | ೦೮ |
| ೧೯. | ದಾವಣಗೆರೆ | ೧೯ | ೧೨ |
| ೨೦. | ಹಾಸನ | ೧೬ | ೧೧ |
| ೨೧. | ಹಾವೇರಿ | ೨೪ | ೨೦ |
| ೨೨. | ಕೋಲಾರ | ೨೧ | ೧೭ |
| ೨೩. | ತುಮಕೂರು | ೨೨ | ೧೫ |
| ೨೪. | ಶಿವಮೊಗ್ಗ | ೧೦ | ೦೫ |
| ೨೫. | ಉತ್ತರ ಕನ್ನಡ | ೧೧ | ೦೭ |
| ೨೬. | ಚಿತ್ರದುರ್ಗ | ೧೮ | ೧೬ |
| ೨೭. | ಗದಗ | ೧೫ | ೧೩ |

***ಮೂಲ:*** *ಕರ್ನಾಟಕದ ಮಾನವ ಅಭಿವೃದ್ಧಿ ವರದಿ: ೨೦೦೫, ಪು. ೧೮ (೨೦೦೬)*

ಕೊನೆಯ ಗುಂಪಿನಲ್ಲಿ ೧೦ ಜಿಲ್ಲಗಳಿವೆ. ಇವು ಸಾಧಿಸಿಕೊಂಡಿರುವ ಸಾಧನೆಯ ಕುತೂಹಲಕಾರಿಯಾಗಿದೆ. ಏಕೆಂದರೆ ಇವೆಲ್ಲವೂ ವರಮಾನದ ದೃಷ್ಟಿಯಿಂದ ಬಡ ಜಿಲ್ಲೆಗಳಾಗಿವೆ. ಉದಾಹರಣೆಗೆ ತುಮಕೂರು ಜಿಲ್ಲೆ ರಾಜ್ಯದಲ್ಲಿ ವರಮಾನದಲ್ಲಿ ೨೨ನೆಯ ಸ್ಥಾನದಲ್ಲಿದೆ. ದಾವಣಗೆರೆಯು ೧೯ನೆಯ ಸ್ಥಾನದಲ್ಲಿದೆ. ಶಿವಮೊಗ್ಗವು ೧೦ನೆಯ ಸ್ಥಾನದಲ್ಲಿದೆ. ಆದರೆ ಈ ಜಿಲ್ಲೆಗಳು ವರ್ಧನೆಯಾದ ವರಮಾನವನ್ನು ಜನರ ಬದುಕನ್ನಾಗಿ ಪರಿವರ್ತಿಸಿಕೊಳ್ಳುವಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿಕೊಂಡಿವೆ. ವರಮಾನ ಕಡಿಮೆಯಿದ್ದರೂ ಕೂಡ ಅವು ಶಿಕ್ಷಣ, ಸಾಕ್ಷರತೆ, ಆರೋಗ್ಯಗಳಲ್ಲಿ ಉನ್ನತ ಸ್ಥಾನ ಪಡೆದುಕೊಂಡಿವೆ. ವರಮಾನದಲ್ಲಿ ೨೨ನೆಯ ಸ್ಥಾನದಲ್ಲಿರುವ ತುಮಕೂರು ಮಾನವ ಅಭಿವೃದ್ಧಿಯಲ್ಲಿ ೧೫ನೆಯ ಸ್ಥಾನ ಪಡೆದಿದೆ. ವರಮಾನದಲ್ಲಿ ೧೦ನೆಯ ಸ್ಥಾನ ಪಡೆದಿರುವ ಶಿವಮೊಗ್ಗವು ಮಾನವ ಅಭಿವೃದ್ಧಿಯಲ್ಲಿ ರಾಜ್ಯದಲ್ಲಿ ೫ನೆಯ ಸ್ಥಾನ ಪಡೆದಿದೆ. ಈ ಬಗೆಯ ವರ್ಗೀಕರಣದಿಂದ ಹಾಗೂ ವಿಶ್ಲೇಷಣೆಯಿಂದ ತಿಳಿದುಬರುವ ಸಂಗತಿಯೆಂದರೆ ವರಮಾನ ಏರಿಕೆಯು ತನ್ನಷ್ಟಕ್ಕೆ ತಾನೆ, ಸಹಜವಾಗಿ, ಏಕಾಏಕಿ ಜನರ ಬದುಕಾಗಿ, ಜನರ ಆರೋಗ್ಯವಾಗಿ, ಜನರ ಅಕ್ಷರವಾಗಿ

ಪರಿವರ್ತನೆಯಾಗುವುದಿಲ್ಲ. ಮೇಲೆ ತಿಳಿಸಿರುವ ನಾಲ್ಕು ಗುಂಪುಗಳಲ್ಲಿ ಕೊನೆಯ ಗುಂಪಿನ ಜಿಲ್ಲೆಗಳು ನೇರವಾಗಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿಉನ್ನತ ಬದುಕನ್ನು ಸಾಧಿಸಿಕೊಂಡಿವೆ. ಆದರೆ ಮೂರನೆಯ ಗುಂಪಿನ ಜಿಲ್ಲೆಗಳು ವರಮಾನದಲ್ಲಿ ತೀವ್ರ ವರ್ಧನೆ ಕಂಡಿದ್ದರೂ ಅಲ್ಲಿ ಜನರ ಬದುಕು ಹಸನಾಗಿಲ್ಲ. ಈ ದಿಶೆಯಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ವಿಶೇಷ ಪ್ರಯತ್ನ ಮಾಡಬೇಕಾದ ಅಗತ್ಯವಿದೆ.

ವರಮಾನದ ವರ್ಧನೆಯೇ ಅಭಿವೃದ್ಧಿಯಲ್ಲವೆಂಬುದು ಮೇಲಿನ ಚರ್ಚೆಯಿಂದ ತಿಳಿದುಬರುತ್ತದೆ. ಮಾನವ ಅಭಿವೃದ್ಧಿಗೆ ಪೂರಕವಾದ ನೀತಿ - ನಿರೂಪಣೆಗಳಿದ್ದರೆ ಕೆಳಮಟ್ಟದ ವರಮಾನದ ಸ್ಥಿತಿಯಿದ್ದರೂ ಜನರ ಉತ್ತಮ ಬದುಕನ್ನು ಸಾಧಿಸಿಕೊಳ್ಳುವುದು ಸಾಧ್ಯ. ಅಂತಹ ನೀತಿ - ಕಾರ್ಯಕ್ರಮಗಳನ್ನು ಕೈಗೊಳ್ಳುವ ಅಗತ್ಯವನ್ನು ಇಲ್ಲಿನ ಚರ್ಚೆಯು ತಿಳಿಸುತ್ತದೆ.

## <u>ಭಾಗ – ೫</u>

## ಅಧ್ಯಯನ ಪ್ರಬಂಧದ ತಥ್ಯಗಳು

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಸೈದ್ಧಾಂತಿಕ ನೆಲೆಗಳನ್ನು ವಿವರವಾಗಿ ಇಲ್ಲಿ ಚರ್ಚಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ೧೯೯೦ರಲ್ಲಿ ಆರಂಭವಾದ ಮಾನವ ಅಭಿವೃದ್ಧಿ ವರದಿಗಳ ಪರಕಟಣೆಯು ಇಂದು ದೇಶ - ರಾಜ್ಯಗಳ ಮಟ್ಟಕ್ಕೆ ಬೆಳೆದುಬಂದಿದೆ. ಕರ್ನಾಟಕವು ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಎರಡು ವರದಿಗಳನ್ನು ಪ್ರಕಟಿಸಿದೆ. ಈಗ ಜಿಲ್ಲಾ ಮಟ್ಟದಲ್ಲಿ ಅದನ್ನು ಸಿದ್ಧಪಡಿಸುವ ಕಾರ್ಯವೂ ಆರಂಭವಾಗಿದೆ. ಮಾವನ ಅಭಿವೃದ್ಧಿಯನ್ನು ಪರಿಮಾಣಾತ್ಮಕವಾಗಿ ಅಳೆಯಲು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ (ಜಿಡಿಐ) ಎಂಬ ಮಾಪನವನ್ನು ಯುಎನ್‌ಡಿಪಿಯು ರೂಪಿಸಿದೆ. ಅಭಿವೃದ್ಧಿಯು ಕೇವಲ ವರಮಾನ ವರ್ಧನೆಗೆ ಸೀಮಿತವಾದಾಗ ಮತ್ತು ಅದು ಲಿಂಗ ನಿರಪೇಕ್ಷವಾದ ಅದು ಹೇಗೆ ಮಹಿಳೆಯರಿಗೆ ಅಭಿಶಾಪವಾಗುತ್ತದೆ ಎಂಬುದನ್ನು ಸದರಿ ವಿಚಾರಪ್ರಣಾಳಿಕೆಯು ನಮಗೆ ಮನದಟ್ಟು ಮಾಡಿಕೊಟ್ಟಿದೆ.

ಈ ಪ್ರಬಂಧದಲ್ಲಿ ಪ್ರತಿಪಾದಿಸಿರುವ ಬಹುಮುಖ್ಯ ಸಂಗತಿಯೆಂದರೆ ವರಮಾನ ವರ್ಧನೆಯೆಂಬುದು ತನ್ನಷ್ಟಕ್ಕೆ ತಾನೆ ಸಹಜವಾಗಿ ಜನರ ಬದುಕಾಗಿ ಪರಿವರ್ತನೆಯಾಗುವುದಿಲ್ಲ. ಅದಕ್ಕಾಗಿ ವಿಶೇಷ ಪ್ರಯತ್ನ ನಡೆಸಬೇಕಾಗುತ್ತದೆ ಎಂಬುದಾಗಿದೆ. ಎರಡನೆಯದಾಗಿ ಸಾಕ್ಷರತೆ, ಶಿಕ್ಷಣ, ಆರೋಗ್ಯ ಮುಂತಾದವುಗಳನ್ನು ಅಭಿವೃದ್ಧಿಯ ಸಾಧನವೆಂದು ನೋಡುವುದರ ಜೊತೆಗೆ ಅವುಗಳನ್ನು ಅಭಿವೃದ್ಧಿಯ ಅಂತರ್ಗತ ಅಂಶಗಳನ್ನಾಗಿ ನೋಡುವ ಕ್ರಮವನ್ನು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ನಮಗೆ ತೋರಿಸಿಕೊಟ್ಟಿದೆ. ಮೂರನೆಯದಾಗಿ ಅಭಿವೃದ್ಧಿಯನ್ನು ಸಾಕ್ಷರತೆ, ಸ್ವಾತಂತ್ರ್ಯ, ಧಾರಣಾ ಸಾಮರ್ಥ್ಯಗಳ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ತರ್ಕಪ್ರಮಾಣವನ್ನು ಇಲ್ಲಿ ಮಂಡಿಸಲಾಗಿದೆ.

ಅಖಿಲ ಭಾರತ ಮಟ್ಟದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯು ಮಹತ್ವದ್ದಾಗಿದೆ. ಆದರೆ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದಲ್ಲಿವೆ. ಈ ದಿಶೆಯಲ್ಲಿ ಕರ್ನಾಟಕವು ಇನ್ನೂ ಸಾಗಬೇಕಾದ ದಾರಿ ಬಹಳ ದೂರವಿದೆ.

## <u>ಪರಾಮರ್ಶನ ಸೂಚಿ</u>

ಕರ್ನಾಟಕ ಸರ್ಕಾರ ೧೯೯೯, **ಕರ್ನಾಟಕ ಮಾನವ ಅಭಿವೃದ್ಧಿ ವರದಿ,** ಯೋಜನಾ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ ೨೦೦೬, **ಕರ್ನಾಟಕ ಮಾನವ ಅಭಿವೃದ್ಧಿ ವರದಿ –** ೨೦೦೫, ಯೋಜನಾ ಇಲಾಖೆ, ಬೆಂಗಳೂರು.

ದೀಪಕ್ ನಯ್ಯಾರ್, ೨೦೦೬, **ಇಕಾನಾಮಿಕ್ ಗ್ರೋಥ್ ಇನ್ ಇಂಡಿಯಾ: ರನ್ನಿಂಗ್ ಹಾರ್ಸ್ ಆರ್ ಲಂಬರಿಂಗ್ ಎಲಿಫೆಂಟ್,** ಎಕಾನಿಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ. ಮೆಹಬೂಬ್ ಉಲ್ ಹಕ್, ೧೯೯೬, **ರಿಫ್ಲೆಕ್ಷನ್ಸ್ ಆನ್ ಹೂಮನ್ ಡೆವಲಪ್‌ಮೆಂಟ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಅಮರ್ತ್ಯಸೇನ್, ೧೯೯೯, **ಫ್ರೀಡಮ್ ಆಸ್ ಡೆವಲಪ್‌ಮೆಂಟ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಮಾರ್ಥ ಸಿ. ನುಸ್‌ಬೌಮ್,
೨೦೦೦, **ವುಮೆನ್ ಆಂಡ್ ಹೂಮನ್ ಡೆವಲಪ್‌ಮೆಂಟ್: ದಿ ಕೆಫಬಲಿಟೀಸ್ ಅಪ್ರೋಚ್,** ಕೇಂಬ್ರಿಡ್ಜ್‌ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್‌ಯುಎನ್‌ಡಿಪಿ, ೧೯೯೦, **ಹೂಮನ್ ಡೆವಲಪ್‌ಮೆಂಟ್ ರಿಪೋರ್ಟ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಯುಎನ್‌ಡಿಪಿ, ೧೯೯೫, **ಹೂಮನ್ ಡೆವಲಪ್‌ಮೆಂಟ್ ರಿಪೋರ್ಟ್,** ಆಕ್ಸಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಕರ್ನಾಟಕ ಸರ್ಕಾರ ೨೦೦೮, **ವಿಜಾಪುರ ಜಿಲ್ಲಾ ಮಾನವ ಅಭಿವೃದ್ಧಿ ವರದಿ –** ೨೦೦೮ ಯೋಜನಾ ಇಲಾಖೆ, ಬೆಂಗಳೂರು.

# ೩. ಕರ್ನಾಟಕದ ಅಭಿವೃದ್ಧಿ : ೫೦ ವರ್ಷಗಳ ಹಾಡು - ಪಾಡು

## ಪ್ರಸ್ತಾವನೆ

ಒಂದು ನಾಡಿಗೆ ಸಂಬಂಧಿಸಿದಂತೆ ೫೦ ವರ್ಷವು ದೀರ್ಘಾವಧಿಯೂ ಅಲ್ಲಿ ಅಲ್ಪಾವಧಿಯೂ ಅಲ್ಲ. ಅದೊಂದು ಸಂಧಿಕಾಲ. ಸಾಮಾಜಿಕವಾಗಿ ದೀರ್ಘ ಮತ್ತು ಅಲ್ಪಕಾಲವೆಂಬ ಸಂಗತಿಗಳು ಸಾಪೇಕ್ಷ. ಕಾಲದ ಹರವಿನ ವರ್ಗೀಕರಣವು ಸಂದರ್ಭವನ್ನು ಅವಲಂಬಿಸಿಕೊಂಡಿರುತ್ತದೆ. ಕರ್ನಾಟಕದ ಸಂದಭ್ದಲ್ಲಿ ಕಳೆದ ೫೦ ವರ್ಷ ತುಂಬಾ ಮುಖ್ಯವಾದ ಕಾಲಘಟ್ಟವಾಗಿದೆ. ಏಕೆಂದರೆ ನಾಡು ಉದಯವಾದ ೧೯೫೬ರಲ್ಲಿ ನಮ್ಮ ಎದುರಿಗೆ ಯಾವ ಪ್ರಶ್ನೆಗಳಿದ್ದವೋ ಅದಕ್ಕಿಂತ ಭಿನ್ನವಾದ ಪ್ರಶ್ನೆಗಳು ಇಂದು ನಮ್ಮನ್ನು ಕಾಡುತ್ತಿವೆ. ಏಕೀಕರಣದ ಆಶಯವು ಇಂದು ಪ್ರಶ್ನೆಗೆ ಒಳಗಾಗುತ್ತಿದೆ. ಆದ್ದರಿಂದ ೫೦ ವರ್ಷಗಳು ನಾಡಿಗೆ ತುಂಬುತ್ತಿರುವ ಕಾಲಘಟ್ಟವು ತುಂಬಾ ಮುಖ್ಯವಾಗಿದೆ.

ಸಾಮಾನ್ಯವಾಗಿ ಇಂತಹ ಸಂದರ್ಭವನ್ನು ಸಂಭ್ರಮ - ವೈಭವದಿಂದ ಆಚರಿಸುವುದು ವಾಡಿಕೆಯಲ್ಲಿದೆ. ನಾಡಿನ ಸಿದ್ಧಿ - ಸಾಧನೆಗಳನ್ನು ಗುಡ್ಡೆ ಹಾಕುವ, ಹಾಡಿ - ಹೊಗಳವು ಪರಿ ಕಂಡುಬರುತ್ತದೆ. ಹಾರ - ತುರಾಯಿಗಳು ಮತ್ತು ಬಾಜಾ - ಭಜಂತ್ರಿಗಳು ಮೆರೆದಾಡುತ್ತವೆ. ಸನ್ಮಾನ - ಸಮಾವೇಶ, ಅಭಿನಂದನೆ - ಅಭಿವಂದನೆಗಳು ಸಾಕುಬೇಕೆನ್ನಿಸುವಷ್ಟಿರುತ್ತದೆ. ಇದು ಉತ್ಸವದ ಸ್ವರೂಪ.

ಇದಕ್ಕೆ ಭಿನ್ನವಾದ ಬಗೆಯೊಂದಿದೆ. ಈ ೫೦ ವರ್ಷಗಳ ಅಭಿವೃದ್ಧಿಯನ್ನು ಆತ್ಮವಲೋಕನದ ಪರಿಯಲ್ಲಿ ಪರಿಭಾವಿಸಿಕೊಳ್ಳುವ ಬಗೆ ಇದು. ನಾಡಿನ ಮುತ್ಸದ್ದಿಗಳಿಗೆ, ವಿದ್ವಾಂಸರಿಗೆ, ಸಾಹಿತಿಗಳಿಗೆ, ಸಾಮಾಜಿಕರಿಗೆ ಇದೊಂದು ಆತ್ಮ ನಿರೀಕ್ಷಣೆಯ ಸಂದರ್ಭ. ಉತ್ಸವ - ದಿಬ್ಬಣ - ಭಾವಾವೇಸಗಳು ಬೇಕು ನಿಜ. ಆದರೆ ಉತ್ತರದಾಯಿತ್ವದ ಬಗ್ಗೆಯೂ ಯೋಚಿಸುವ ಅಗತ್ಯವಿದೆ. ಮೊದಲನೆಯ ಬಗೆಯು ಸುಲಭದ ದಾರಿ. ಎರಡನೆಯದು ಕಷ್ಟದ ದಾರಿ. ನಮ್ಮನ್ನು ನಾವು ಎದುರಿಗಿಟ್ಟುಕೊಂಡು ಪರೀಕ್ಷೆಗೆ - ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವುದಿದೆಯಲ್ಲಾ ಅದು ತಿಳಿದುಕೊಂಡಿರುವಷ್ಟು ಸರಳವಾದ ಸಂಗತಿಯಲ್ಲ.

ಪ್ರಸ್ತುತ ಅಧ್ಯಯನ ಪ್ರಬಂಧದಲ್ಲಿ ಕರ್ನಾಟಕವು ಕಳೆದ ೫೦ ವರ್ಷಗಳ ಕಾಲಾವಧಿಯಲ್ಲಿ ಅನುಭವಿಸಿದ ಸೋಲು - ಗೆಲುವುಗಳು ಮತ್ತು ಎದುರಿಸಿದ ಏಳು - ಬೀಳುಗಳನ್ನು ಆತ್ಮಾವಲೋಕನ ಪರಿಯಲ್ಲಿ ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಅಂಕಿ - ಅಂಶಗಳೇ ನಿಕಷವಲ್ಲ. ಅವುಗಳ ಅಡಿಯಲ್ಲಿ ಪ್ರಚಛನ್ನವಾಗಿ ಅಡಗಿರುವ ರಾಜಕೀಯ - ಸಾಮಾಜಿಕ ಸಂಗತಿಗಳನ್ನು ಚರ್ಚೆಯ ಮುಂಚೂಣಿಗೆ ತರುವ ಉದ್ದೇಶವಿದೆ.

ಈ ಪ್ರಬಂಧವನ್ನು ರೂಪಿಸಿರುವ ಸೈದ್ಧಾಂತಿಕ ಸಂಗತಿಗಳನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯ. ಅಭಿವೃದ್ಧಿಯನ್ನು ಇಲ್ಲಿ ಅಖಂಡ ಪ್ರಕ್ರಿಯೆಯಾಗಿ ಪರಿಭಾವಿಸಿಕೊಂಡಿಲ್ಲ. ಆದ್ದರಿಂದ ಕರ್ನಾಟಕದ ಅಭಿವೃದ್ಧಿಯ ಖಂಡ ಸ್ವರೂಪಿ ನೆಲೆಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಜಾತಿಭೇದದ ನೆಲೆಯಿಂದ ಅಭಿವೃದ್ಧಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಲಿಂಗ ಸಂಬಂಧಗಳ ಚೌಕಟ್ಟಿನಲ್ಲಿ ನಾಡಿನ ಅಭಿವೃದ್ಧಿಯನ್ನು ಇಲ್ಲಿ ಪೃಥಕ್ಕರಿಸಲಾಗಿದೆ. ಪ್ರಾದೇಶಿಕವಾಗಿ ಅಭಿವೃದ್ಧಿಯ ಹರವನ್ನು ಪರಾಮರ್ಶೆಗೆ ಒಳಪಡಿಸಲಾಗಿದೆ. ವರಮಾನ ವರ್ಧನೆ ಹಾಗೂ ಜನರ ಧಾರಣಶಕ್ತಿಯ ಸಂವರ್ಧನೆಗಳನ್ನು ಇಲ್ಲಿ ಮುಖಾಮುಖಿಯಾಗಿಸಲಾಗಿದೆ. ಕೃಷಿ, ಉದ್ದಿಮೆ, ಸಾರಿಗೆ, ವ್ಯಾಪಾರ, ವಾಣಿಜ್ಯ ಮುಂತಾದ ಸಂಗತಿಗಳು ಅಭಿವೃದ್ಧಿಗೆ ಎಷ್ಟು ಮುಖ್ಯವೋ ಅಷ್ಟೇ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ ಮುಂತಾದವುಗಳು ಮುಖ್ಯವೆಂದು ಇಲ್ಲಿ ಪ್ರತಿಪಾದಿಸಲಾಗಿದೆ. ಅಭಿವೃದ್ಧಿಯೆನ್ನುವುದು ಕೇವಲ ಬಂಡವಾಳಕ್ಕೆ ಸೀಮಿತವಾದ ಸಂಗತಿಯಲ್ಲ.

ಕಳೆದ ೫೦ ವರ್ಷಗಳ ಕಾಲಖಂಡದಲ್ಲಿ ಅಭಿವೃದ್ಧಿಯು ಮಹಿಳೆಯರು ಮತ್ತು ದಲಿತರನ್ನು ಒಳಗೊಂಡಂತೆ ಜನರಿಗೆ ಅಭಿಮುಖವಾಗಿದೆಯೋ ಅಥವಾ ವಿಮುಖವಾಗಿದೆಯೋ ಎಂಬುದನ್ನು ಇಲ್ಲಿ ಮುಖ್ಯ ಪ್ರಶ್ನೆಯನ್ನಾಗಿ ಪರಿಗಣಿಸಲಾಗಿದೆ.

ಅಭಿವೃದ್ಧಿಯು ಜನರಿಗೆ ಆಹಾರವಾಗಿ, ಆರೋಗ್ಯವಾಗಿ, ಆಶ್ರಯವಾಗಿ, ಅಕ್ಷರವಾಗಿ ಒದಗುತ್ತಿದೆಯೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಕರ್ನಾಟಕದ ೫.೨೭ ಕೋಟಿ ಜನರನ್ನು ಅಭಿವೃದ್ಧಿ ಒಳಗೊಂಡಿದೆಯೆ ಎಂಬ ಪ್ರಶ್ನೆ ಇಲ್ಲಿ ತುಂಬಾ ಮುಖ್ಯವಾಗುತ್ತದೆ.

ಪ್ರಸ್ತಾವನೆಯನ್ನು ಸೇರಿಸಿಕೊಂಡು ಐದು ಭಾಗಗಳಲ್ಲಿ ಪ್ರಸ್ತುತ ಪ್ರಬಂಧವನ್ನು ಕಟ್ಟಲಾಗಿದೆ. ಪ್ರಸ್ತಾವನೆ ನಂತರ ಬರುವ ಎರಡನೆಯ ಭಾಗದಲ್ಲಿ ಅಭಿವೃದ್ಧಿಯ ಎತ್ತರ - ಭಿತ್ತರಗಳನ್ನು ವಿವಿಧ ಮಾನದಂಡಗಳ ಮೂಲಕ ಗುರುತಿಸಲಾಗಿದೆ. ಅಂಕಿ - ಅಂಶಗಳು ೧೯೬೧ರಿಂದ ೨೦೦೧ ರ ಅವಧಿಗೆ ದೊರೆಯುತ್ತವೆ. ಈ ಕಾಲಘಟ್ಟಗಳಿಗೆ ಸಂಬಂಧಿಸಿದಂತೆ ಅಂಕಿ - ಅಂಶಗಳನ್ನು ಇಲ್ಲಿ ಬಳಸಲಾಗಿದೆ.

ಮೂರನೆಯ ಪ್ರಧಾನ ಭಾಗದಲ್ಲಿ ಅಭಿವೃದ್ಧಿಯ ಖಂಡರೂಪಿ ನೆಲೆಗಳನ್ನು ಜಾತಿಭೇದ, ಲಿಂಗ ಸಂಬಂಧಗಳು ಮತ್ತು ಪ್ರಾದೇಶಿಕ ವಿಸ್ತೃತತೆ ಚೌಕಟ್ಟಿನಲ್ಲಿ ವಿಶ್ಲೇಷಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಎಂಬ ಅಮರ್ತ್ಯಸೇನ್ ಅವರ ವಿಚಾರಗಳನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಕೊನೆಯ ಭಾಗದಲ್ಲಿ ಅಧ್ಯಯನದ ಸಾರಾಂಶವನ್ನು ನೀಡುವುದರ ಜೊತೆಗೆ ಕರ್ನಾಟಕದ ಅಭಿವೃದ್ಧಿಯ ಪಥ ಮುಂದಿನ ವರ್ಷಗಳಲ್ಲಿ ಯಾವುದಿರಬಹುದು ಎಂಬುದನ್ನು ಹಾಗೂ ನಾಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಬೇಕು ಎಂಬ ಸಂಗತಿಯನ್ನು ನೀಡಲಾಗಿದೆ.

ಭಾಗ – ೨

**ಅಭಿವೃದ್ಧಿಯ ಚಾಚು ಮತ್ತು ಹರವು**

ಪ್ರಸ್ತುತ ಭಾಗದಲ್ಲಿ ಕರ್ನಾಟಕವು ಕಳೆದ ೫೦ ವರ್ಷಗಳಲ್ಲಿ ಸಾಧಿಸಿಕೊಂಡಿರುವ ಅಭಿವೃದ್ಧಿಯ ಎತ್ತರ - ಬಿತ್ತರಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸಾಧಿಸಿಕೊಂಡಿರುವ ಅಭಿವೃದ್ಧಿಯಲ್ಲಿ ಸಮಾಜ ವಿಜ್ಞಾನಿಗಳು 'ಮಾದರಿ'ಯನ್ನು ಕಂಡುಕೊಂಡಿದ್ದಾರೆ.

ಕರ್ನಾಟಕವು ಸಾಧಿಸಿಕೊಂಡಿರುವ ಅಭಿವೃದ್ಧಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಲ್ಲಿ ನಮಗೆ 'ಮಾದರಿ'ಯೊಂದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕವನ್ನು 'ಮಧ್ಯಮಗತಿ ಸಮಾಜ'ವೆಂದೂ, 'ಮಧ್ಯಗತಿ ಆರ್ಥಿಕತೆ'ಯೆಂದೂ ವಿವರಿಸಬಹುದಾಗಿದೆ. ಪ್ರಖ್ಯಾತ ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಸ್, ಕರ್ನಾಟಕ ಅಧ್ಯಯನದಲ್ಲಿ ಕಳೆದ ಮೂರ್‍ನಾಕು ದಶಕಗಳಿಂದ ತೊಡಗಿರುವ ಕರ್ನಾಟಕ ತಜ್ಞ ಜೇಮ್ಸ್‌ಮೇನರ್, ವಿನೋದ್ ವ್ಯಾಸುಲು ಮತ್ತು ಆರ್.ಎಲ್.ಎಮ್. ಪಾಟೀಲ್ ಮುಂತಾದವರು ಕರ್ನಾಟಕವನ್ನು ಮಧ್ಯಮಗತಿ ಸಮಾಜವೆಂದು ಕರೆದಿದ್ದಾರೆ. ಈ ಮಧ್ಯಮಗತಿ ಸಮಾಜವೆಂದು ಕರೆದಿದ್ದಾರೆ. ಈ ಮಧ್ಯಮ ಗತಿಯು ಆರ್ಥಿಕತೆ ಮತ್ತು ರಾಜಕಾರಣಕ್ಕೂ ಅನ್ವಯವಾಗುವ ಸಂಗತಿಯಾಗಿದೆ.

ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ (ಬಿಮಾರು) ರಾಜ್ಯಗಳಂತೆ ಕರ್ನಾಟಕವು ದುಸ್ಥಿತಿಯನ್ನು ಎದುರಿಸುತ್ತಿಲ್ಲ. ಹಾಗೆಯೇ ಪಂಜಾಬ್, ಹರಿಯಾಣ, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಂತೆ ಅಭಿವೃದ್ಧಿಯು ಔನ್ನತ್ಯವನ್ನು ಮೆರೆಯುತ್ತಿಲ್ಲ. ಇವೆರಡೂ ಗುಂಪುಗಳ ಅಭಿವೃದ್ಧಿಯ ಅನುಭವಗಳಿಗಿಂತ ಕರ್ನಾಟಕದ ಅಭಿವೃದ್ಧಿ ಸ್ವರೂಪ ಭಿನ್ನವಾಗಿದೆ. ರಾಜ್ಯದ ಅಭಿವೃದ್ಧಿಯ ಸ್ವರೂಪದಲ್ಲಿ ಅದ್ಭುತವಾದುದೇನಲ್ಲ. ಅದೇ ರೀತಿ ಅದರ ಸಾಧನೆಯು ಅಲ್ಲಗಳೆಯುವಂತಹದ್ದೇನಲ್ಲ. ಉಗ್ರ, ತೀವ್ರ ಎಂಬ ವಿಶೇಷಣಗಳನ್ನು ಇಲ್ಲಿ ಬಳಸಲು ಅವಕಾಶವಿಲ್ಲ. ಅದೇ ರೀತಿ ಅದನ್ನು ಯಥಾಸ್ಥಿತಿವಾದಿಯೆಂದೂ ಹೇಳಲು ಸಾಧ್ಯವಿಲ್ಲ. ನಮ್ಮ ಸಮಾಜ, ಆರ್ಥಿಕತೆ, ರಾಜಕಾರಣದ ಮೂಲಗುಣವೆಂದರೆ ಬದಲಾವಣೆ - ಅಭಿವೃದ್ಧಿಗಳನ್ನು ಸಾವಕಾಶವಾಗಿ ಮತ್ತು ಸತತವಾಗಿ ಧಾರಣೆ ಮಾಡಿಕೊಳ್ಳುವಂತಹದ್ದಾಗಿದೆ.

ಕೃಷಿಯಲ್ಲಿ ತಮಿಳುನಾಡು, ಆಂಧ್ರ, ಪಂಜಾಬುಗಳಂತೆ ಕರ್ನಾಟಕವು ತೀವ್ರಗತಿಯ 'ಹಸಿರುಕ್ರಾಂತಿ'ಯನ್ನೇನು ಸಾಧಿಸಿಕೊಂಡಿಲ್ಲ. ಆದರೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಬೆಂಬಲದಿಂದ ಹಾಗೂ ಜನರ ಕರ್ತೃತ್ವ ಶಕ್ತಿಯಿಂದ ಒಣಭೂಮಿ ಬೇಸಾಯದಲ್ಲಿ ಕರ್ನಾಟಕವು ಸಾಕಷ್ಟು ಅಭಿವೃದ್ಧಿ ಸಾಧಿಸಿಕೊಂಡಿದೆ.

ಇಂದಿಗೂ ರಾಜ್ಯವು ಉದಯವಾಗಿ ೫೦ ವರ್ಷಗಳ ನಂತರವೂ ನೀರಾವರಿ ಪ್ರದೇಶದ ಪ್ರಮಾಣ ಶೇ. ೭೦ರಷ್ಟು ಒಣಬೇಸಾಯವಿದೆ. ರಾಷ್ಟ್ರದಲ್ಲಿ ಒಣಬೇಸಾಯದ ವಿಸ್ತೀರ್ಣದಲ್ಲಿ ಮೂರನೆಯ ಸ್ಥಾನದಲ್ಲಿ ರಾಜ್ಯವಿದೆ. ಈ ಎಲ್ಲ ಇತಿಮಿತಿಗಳನಡುವೆ ಅದು ಆಹಾರದಲ್ಲಿ ಸ್ವಾವಲಂಬಿಯಾಗಿದೆ. ಸತತವಾಗಿ ಮೂರು - ನಾಲ್ಕು ವರ್ಷಗಳು ಸಂಭವಿಸಿದ ಬರಗಾಲವನ್ನು ಸಮರ್ಥವಾಗಿ ರಾಜ್ಯ ಎದುರಿಸಿದೆ. ಕೃಷಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಯು ನಿಜಕ್ಕೂ ಅದ್ಭುತವಾದುದು. ಇದರ ಕೀರ್ತಿ ನಾಡಿನ ಸರಿಸುಮಾರು ೧೩೦ ಲಕ್ಷ ಕೃಷಿ ದುಡಿಮೆಗಾರರಿಗೆ ಸಲ್ಲಬೇಕು.

ಉದ್ದಿಮೆಗಳಿಗೆ ಸಂಬಂಧಿಸಿದಂತೆ ಒಂದು ಕಾಲಕ್ಕೆ ರಾಷ್ಟ್ರದಲ್ಲಿ ರಾಜ್ಯಕ್ಕೆ ಉನ್ನತ ಸ್ಥಾನವಿತ್ತು. ರಾಜ್ಯದ ಉದ್ದಿಮೆ ವಲಯದ ಬೆಳವಣಿಗೆಯು ಸರಿಸುಮಾರು ೧೯೮೫ರಿಂದೀಚೆಗೆ ಸ್ಥಗಿತ ಗತಿಯಲ್ಲಿ ನಡೆದಿದೆ. ಅದನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣ ಹಾಗೂ ಅದರಿಂದ ಪ್ರಾಪ್ತವಾಗುತ್ತಿರುವ ಉತ್ಪತ್ತಿ ಪ್ರಮಾಣವು ಕಳೆದ ೨೦ ವರ್ಷಗಳಿಂದ ಸ್ಥಿರವಾಗಿ ಬಿಟ್ಟಿದೆ. ಇದೀಗ ತೃತೀಯ ವಲಯದ ಸೇವಾ

ಚಟುವಟಿಕೆಗಳು ಅಸ್ಫೋಟಕಾರಿ ಗತಿಯಲ್ಲಿ ಬೆಳೆಯುತ್ತಿವೆ. ಮಾಹಿತಿ ತಂತ್ರಜ್ಞಾನ, ಜೈವಿಕ ವಿಜ್ಞಾನ, ವಿದ್ಯುನ್ಮಾನ ಮಾಧ್ಯಮ ಮುಂತಾದ ಸೇವಾ ಚಟುವಟಿಕೆಗಳಲ್ಲಿ ನಾಗಾಲೋಟದ ಪ್ರಗತಿ ಕಂಡುಬಂದಿದೆ.

**ಅಭಿವೃದ್ಧಿಯ ಸೀಮಿತ ವ್ಯಾಪ್ತಿ**

ಕೊಲಿನ್ ಕ್ಲಾರ್ಕ್, ಸೈಮನ್ ಕುಜ್ನೆಟ್ಸ್ ಮುಂತಾದ ತಜ್ಞರು ಅಭಿವೃದ್ಧಿಯನ್ನು ವರಮಾನ ಹಾಗೂ ದುಡಿಮೆಗಾರರ ವಲಯವಾರು ಸಂರಚನೆಯಲ್ಲಿ ಉಂಟಾಗುವ ಬದಲಾವಣೆಗಳಲ್ಲಿ ಪರಿಭಾವಿಸಿಕೊಳ್ಳುತ್ತಾರೆ. ಮೂರು ವಲಯಗಳ ನಡುವೆ ರಾಜ್ಯದ ವರಮಾನ ಹಾಗೂ ದುಡಿಮೆಗಾರರ ಹಂಚಿಕೆಯ ಸಾಪೇಕ್ಷ ಪ್ರಮಾನಗಳಲ್ಲಿನ ಬದಲಾವಣೆಯಲ್ಲಿ ಅಭಿವೃದ್ಧಿಯನ್ನು ಗುರುತಿಸಲಾಗುತ್ತದೆ. ಪ್ರಾಥಮಿಕ ವಲಯದಿಂದ ಪ್ರಾಪ್ತವಾಗುವ ವರಮಾನದ ಪ್ರಮಾಣ ಹಾಗೂ ಅದನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಕಡಿಮೆಯಾಗುತ್ತಾ ನಡೆದು ದ್ವಿತೀಯ ವಲಯ, ತದನಂತರ ತೃತೀಯ ವಲಯಗಳು ಕ್ರಮವಾಗಿ ಪ್ರಾಧಾನ್ಯತೆ ಪಡೆಯುವ ಕ್ರಮವನ್ನು ಅಭಿವೃದ್ಧಿಯೆಂದು ಹೇಳಬಹುದು. ಕರ್ನಾಟಕ ರಾಜ್ಯದ ರಾಚನಿಕ ಸ್ವರೂಪದಲ್ಲಿ ಉಂಟಾದ ಬದಲಾವಣೆಗಳನ್ನು ಕೋಷ್ಟಕ - ೧ರಲ್ಲಿ ತೋರಿಸಲಾಗಿದೆ. ಇದು ಅನೇಕ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ವರಮಾನದ ರಚನೆಯಲ್ಲಿ ಅರ್ಥಶಾಸ್ತ್ರರು ಸೈದ್ಧಾಂತಿಕವಾಗಿ ಏನನ್ನು ನಿರೀಕ್ಷಿಸುತ್ತಿದ್ದಾರೋ ಅಂತಹ ಬದಲಾವಣೆ ಕಳೆದ ೫೦ ವರ್ಷಗಳ ಕಾಲಾವಧಿಯಲ್ಲಿ ಉಂಟಾಗಿದೆ. ಪ್ರಾಥಮಿಕ ವಲಯ (ಪ್ರಾ.ವ.)ದಿಂದ ಪ್ರಾಪ್ತವಾಗುವ ವರಮಾನದ ಪ್ರಮಾಣವು ೧೯೬೦ - ೬೧ರಲ್ಲಿ ಶೇ. ೬೭.೫೬ ರಷ್ಟಿದ್ದುದು ೨೦೦೦ - ೦೧ ರಲ್ಲಿ ಶೇ. ೨೭.೯೭ಕ್ಕೆ ಇಳಿದಿದೆ. ತೃತೀಯ ವಲಯದ ಕಾಣಿಕೆಯು ಇದೇ ಅವಧಿಯಲ್ಲಿ ಶೇ. ೨೬.೦೮ ಶೇ. ೪೯.೯೧ ಕ್ಕೆ ಏರಿಕೆಯಾಗಿದೆ. ಇದು ಅಭಿವೃದ್ಧಿ. ಅದು ಸಮೀಕರಣವಾದಿ ನಿಯಮಕ್ಕೆ ಅನುಗುಣವಾಗಿ ನಡೆದಿದೆ. ಕುತೂಹಲದ ಸಂಗತಿಯೆಂದರೆ ಇಂತಹ ಬದಲಾವಣೆಯು ದುಡಿಮೆಗಾರರ ಸಂರಚನೆಯಲ್ಲಿ ಉಂಟಾಗಿಲ್ಲ. ಇಂದಿಗೂ ಕನಾರ್ಟಕವು ದುಡಿಮೆಗಾರರ ಅವಲಂಬನೆ ದೃಷ್ಟಿಯಿಂದ ಪ್ರಾಥಮಿಕ ವಲಯ ಪ್ರಧಾನ ಆರ್ಥಿಕತೆಯಾಗಿದೆ. ರಾಜ್ಯದಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇ. ೭೫ರಷ್ಟು ಮಂದಿ ೧೯೬೧ರಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿದ್ದರು. ಅವರ ಪ್ರಮಾಣ ೧೯೯೧ ರಲ್ಲಿ ಶೇ. ೬೭ ಕ್ಕೆ ಇಳಿದಿದೆ. ತೃತೀಯ ವಲಯವನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಇದೇ ಅವಧಿಯಲ್ಲಿ ಶೇ. ೧೪.೧೩ರಿಂದ ಶೇ. ೨೧.೯೩ ಕ್ಕೆ ಏರಿದೆ. ವರಮಾನಕ್ಕೆ ಸಂಬಂಧಿಸಿದಂತೆ ರಾಚನಿಕ ಬದಲಾವಣೆ ನಡೆದಿದೆ. ಆದರೆ ದುಡಿಮೆಗಾರರಿಗೆ ಸಂಬಂಧಿಸಿದಂತೆ ಬದಲಾವಣೆ ತುಂಬಾ ಮಂದಗತಿಯಲ್ಲಿ ನಡೆದಿದೆ. ಪ್ರಾಥಮಿಕ ವಲಯದಲ್ಲಿ ಉತ್ಪತ್ತಿಯಾಗುವ ವರಮಾನದ ಪ್ರಮಾಣ ಕಡಿಮೆಯಾಗಿದೆ. ಆದರೆ ಅದನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾನವು ಇನ್ನೂ ಅಗಾಧವಾಗಿದೆ. ಇದರಿಂದ ಉಂಟಾಗಿರುವ ವಿಕೃತಿಯನ್ನು ಗುರುತಿಸುವ ಅಗತ್ಯವಿದೆ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಬಹುಮುಖ್ಯ ವಿಕೃತಿಯನ್ನು ಕುರಿತಂತೆ ಚರ್ಚಿಸುವುದು ಅಪೇಕ್ಷಣೀಯ.

**ವರಮಾನ ಮತ್ತು ದುಡಿಮೆಗಾರರ ರಾಚನಿಕ ಸ್ವರೂಪ : ಕರ್ನಾಟಕ**

**ಕೋಷ್ಟಕ – ೧ (ಶೇಕಡ)**

| ವಲಯಗಳು | ೧೯೬೦/೧ | ೧೯೭೦/೧ | ೧೯೮೦/೧ | ೧೯೯೦/೯೧ | ೨೦೦೦/೦೧ |
|---|---|---|---|---|---|
| ಪ್ರಾಥಮಿಕ (ವ) | ೬೧.೫೬ | ೫೨.೭೨ | ೪೫.೮೧ | ೩೪.೯೫ | ೨೭.೯೭ |
| ವಲಯ (ದು) | ೭೫.೧೪ | ೭೧.೩೪ | ೭೧.೦೮ | ೬೭.೩೭ | |
| ದ್ವಿತೀಯ (ವ) | ೧೨.೩೬ | ೨೦.೭೩ | ೨೧.೧೨ | ೨೫.೨೮ | ೨೫.೦೬ |
| ವಲಯ (ದು) | ೧೦.೭೩ | ೧೧.೯೯ | ೧೩.೫೨ | ೧೦.೭೦ | |

| | | | | | |
|---|---|---|---|---|---|
| ತೃತೀಯ (ವ) | ೨೬.೦೮ | ೨೬.೫೫ | ೩೩.೦೭ | ೩೯.೭೭ | ೪೯.೯೭ |
| ವಲಯ (ದು) | ೧೪.೧೩ | ೧೬.೬೭ | ೧೫.೪೦ | ೨೧.೯೩ | |

***ಆಕರ :*** *೧. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ವಿವಿಧ ವರ್ಷದ ಪ್ರಕಟಣೆಗಳು.*

*೨. ಜನಗಣತಿ ವರದಿಗಳು (ವಿವಿಧ ವರ್ಷದ ವರದಿಗಳು) ವ = ರಾಜ್ಯ ನಿವ್ವಳ ದೇಶೀಯ ಉತ್ಪನ್ನ. ದು = ದುಡಿಮೆಗಾರರು.*

**ಆರೋಹಣವಾದಿ ಅಸಮಾನತೆ**

ಜೆನ್‌ಬ್ರಮೆನ್‌ರ ಪರಿಭಾಷೆಯಲ್ಲಿ ಹೇಳುವುದಾದರೆ ಕರ್ನಾಟಕದ ಅಭಿವೃದ್ಧಿಯು ಆರೋಹಣವಾದಿ ಅಸಮಾನತೆಯನ್ನು ಅನುಭವಿಸುತ್ತಿದೆ. ನಾಡು ಉದಯವಾದ ಸಂದರ್ಭದಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇ. ೭೫ ರಷ್ಟು ಮಂದಿ ರಾಜ್ಯದ ವರಮಾನದ ಶೇ. ೬೧.೫೬ ರಷ್ಟನ್ನು ಅನುಭವಿಸುತ್ತಿದ್ದರು. ಆದರೆ ಇಂದು ಶೇ. ೬೭ ರಷ್ಟು ದುಡಿಮೆ ಗಾರರು ಕೇವಲ ಶೇ. ೩೫ ರಷ್ಟು ವರಮಾನವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಪ್ರತಿಯಾಗ ತೃತೀಯ ವಲಯದಲ್ಲಿ ೧೯೬೧ ರಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇ. ೧೪ ರಷ್ಟು ಮಂದಿ ರಾಜ್ಯದ ಒಟ್ಟು ವರಮಾನದ ಶೇ. ೨೬ ರಷ್ಟು ದುಡಿಮೆಗಾರರು ರಾಜ್ಯದ ವರಮಾನದ ಶೇ. ೪೦ ರಷ್ಟನ್ನು ನುಂಗಿ ನೊನೆಯುತ್ತಿದ್ದಾರೆ. ಪಿರಮಿಡ್ಡಿನೋಪಾದಿಯಲ್ಲಿರುವ ಸಾಮಾಜಿಕ ರಚನೆಯ ತುದಿಯಲ್ಲಿರುವ ಜನರ ವರಮಾನವು ಯಾವ ಗತಿಯಲ್ಲಿ ಬೆಳೆಯುತ್ತಿದೆಯೋ ಅದೇ ವೇಗದಲ್ಲಿ ಸಾಮಾಜಿಕ ರಚನೆಯ ಅಡಿಪಾಯದಲ್ಲಿರುವ ಜನರ ಬಡತನವು ಕಡಿಮೆಯಾಗುತ್ತಿಲ್ಲ. ಇದನ್ನು ಜೆನ್‌ಬ್ರಮೆನ್‘ಆರೋಹಣ ವಾದಿ ಅಸಮಾನತೆ’ ಎಂದು ಕರೆದಿದ್ದಾರೆ.

ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನದ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿರುತ್ತದೆ. ಕಾರಣಗಳನ್ನು ವಿವರಿಸುವ ಅಗತ್ಯವಿಲ್ಲ. ಈ ವಲಯದಲ್ಲಿ ವರಮಾನದ ಗಾತ್ರ ಕಡಿಮೆ. ಆದರೆ ಅದನ್ನು ಹಂಚಿಕೊಳ್ಳಬೇಕಾದವರ ಸಂಖ್ಯೆ ಅಗಾಧ. ಸಹಜವಾಗಿ ತಲಾ ಉತ್ಪನ್ನ ಕೆಳಮಟ್ಟದಲ್ಲಿರುತ್ತದೆ. ಆದರೆ ತೃತೀಯ ವಲಯದಲ್ಲಿ ಪ್ರಾಪ್ತವಾಗುವ ವರಮಾನದ ಗಾತ್ರ ಬೃಹತ್ತಾಗಿರುತ್ತದೆ. ಅದನ್ನು ಹಂಚಿಕೊಳ್ಳಬೇಕಾದ ದುಡಿಮೆಗಾರರ ಸಂಖ್ಯೆ ಕಡಿಮೆಯಿರುತ್ತದೆ. ಇದರಿಂದಾಗಿ ಇಲ್ಲಿ ತಲಾ ಉತ್ಪನ್ನವು ಉನ್ನತ ಮಟ್ಟದಲ್ಲಿರುತ್ತದೆ.

ಈ ಬಗೆಯ ರಾಚನಿಕ ವಿಕೃತಿಯ ಮೂಲದಲ್ಲಿರುವ ಇನ್ನೊಂದು ಕುತೂಹಲಕಾರಿ ಸಂಗತಿಯನ್ನು ಪ್ರಸ್ತಾಪಿಸಬೇಕಾಗುತ್ತದೆ. ಪ್ರಾಥಮಿಕ ವಲಯವನ್ನು ಅವಲಂಬಿಸಿ ಕೊಂಡಿರುವ ದುಡಿಮೆಗಾರರಲ್ಲಿ ಸಾಪೇಕ್ಷವಾಗಿ ಪ.ಜಾ, ಪ.ಪಂ.ಗಳಿಗೆ ಸೇರಿದವರ ಪ್ರಮಾಣ ಅಧಿಕವಾಗಿರುತ್ತದೆ. ಹಿಂದುಳಿದ ಪ್ರದೇಶಕ್ಕೆ ಸೇರಿದ ದುಡಿಮೆಗಾರರ ಪ್ರಮಾಣವು ಸಾಪೇಕ್ಷವಾಗಿ ಅಧಿಕವಾಗಿರುತ್ತದೆ. ಲಿಂಗ ದೃಷ್ಟಿಯಿಂದ ಇಲ್ಲಿ ಮಹಿಳೆಯರ ಪ್ರಮಾಣವು ಸಾಕಷ್ಟಿರುತ್ತದೆ.

ಜಾತಿ, ವರ್ಗ, ಲಿಂಗ ಮತ್ತು ಪ್ರದೇಶದ ದೃಷ್ಟಿಯಿಂದ ಯಾರು ವಂಚಿತರಾಗಿದ್ದಾರೋ, ಯಾರು ಸಮಾಜದ ಅಂಚಿನಲ್ಲಿದ್ದಾರೋ, ಯಾರೂ ಅಧೀನ ಸ್ಥಿತಿಯಲ್ಲಿದ್ದಾರೋ ಅವರು ಹೆಚ್ಚಿನ ಪ್ರಮಾಣದಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿ ಕೊಂಡಿರುವ ಸ್ಥಿತಿಯಿದೆ. ಉದಾಹರಣೆಗೆ ೧೯೯೧ ರಲ್ಲಿ ರಾಜ್ಯದ ಪ್ರಾಥಮಿಕ ವಲಯದಲ್ಲಿದ್ದ ಒಟ್ಟು ದುಡಿಮೆಗಾರರ ಸಂಖ್ಯೆ ೧೧೬.೪೮ ಲಕ್ಷ. ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಪ.ಜಾ. ಮತ್ತು ಪ.ಪಂ.ಗಳಿಗೆ ಸೇರಿದ ದುಡಿಮೆಗಾರರ ಪ್ರಮಾಣ ಶೇ. ೨೨.೪೬. ಆದರೆ ಪ್ರಾಥಮಿಕ ವಲಯದಲ್ಲಿನ ದುಡಿಮೆಗಾರರಲ್ಲಿ ಇವರ ಪ್ರಮಾಣ ಶೇ. ೨೬.೭೩ ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಹೈದರಾಬಾದ್ - ಕರ್ನಾಟಕ ಪ್ರದೇಶದ ದುಡಿಮೆಗಾರರ ಪ್ರಮಾಣ ಶೇ. ೧೯. ಆದರೆ ಪ್ರಾಥಮಿಕ ವಲಯದಲ್ಲಿರುವ ದುಡಿಮೆಗಾರರಲ್ಲಿ ಹೈದರಾಬಾದ್ - ಕರ್ನಾಟಕ ಪ್ರದೇಶದ ದುಡಿಮೆಗಾರರ ಪ್ರಮಾಣ ಶೇ. ೨೨.೫೬. ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಕೇವ. ಶೇ. ೨೮.೯೫. ಆದರೆ ಪ್ರಾಥಮಿಕ ವಲಯದ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಶೇ. ೩೩.೯೦. ಇದರ ತಥ್ಯ ಇಷ್ಟು. ಪ್ರಾಥಮಿಕ ವಲಯದ ಒಟ್ಟು

ದುಡಿಮೆ ಗಾರರಲ್ಲಿ ವಂಚಿತರ, ದಲಿತರ, ಮಹಿಳೆಯರ, ಅಂಚಿನಲ್ಲಿರುವವರ ಪ್ರಮಾಣ ಅಧಿಕವಾಗಿದೆ. ತೃತೀಯ ವಲಯದಲ್ಲಿ ಉಳ್ಳವರ ಪ್ರಮಾಣ ಅಧಿಕವಾಗಿದೆ. ಉನ್ನತ ಜಾತಿಗಳ ಪ್ರಾತಿನಿಧ್ಯ ಪ್ರಧಾನವಾಗಿದೆ. ಅದು ಪುರುಷಶಾಹಿಯಿಂದ ಮೆರೆಯುತ್ತಿದೆ.

ಕಳೆದ ೫೦ ವರ್ಷಗಳಲ್ಲಿ ಕರ್ನಾಟಕವು ಅನುಭವಿಸಿದ ಮಧ್ಯಮಗತಿ ಅಭಿವೃದ್ಧಿಯು ಸಮಾಜದಲ್ಲಿ ಬೇರು ಬಿಟ್ಟಿರುವ ಸಾಮಾಜಿಕ ಅಸಮಾನತೆಯನ್ನು ಊರ್ಜಿತಗೊಳಿಸುವಂತೆ ಕಾಣುತ್ತಿದೆ. ಸಮಸ್ಯೆಗಳನ್ನು ಅಭಿವೃದ್ಧಿಯ ನೆಲೆಯಿಂದ ನೋಡಲಾಗುತ್ತಿದೆಯೆ ವಿನಾ ದುಸ್ಥಿತಿಯ ನೆಲೆಯಿಂದ ನೋಡುತ್ತಿಲ್ಲ. ಸಮಾಜದ ಅಂಚಿನಲ್ಲಿರುವ ವಂಚಿತರ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಪ್ರಯತ್ನ ಕಾಣುತ್ತಿಲ್ಲ. ದಲಿತರನ್ನು, ಮಹಿಳೆಯರನ್ನು, ಹಿಂದುಳಿದ ವರ್ಗವನ್ನು ಎಲ್ಲಿಯವರೆಗೆ ಫಲಾನುಭವಿಗಳು - ಪರಾವಲಂಬಿಗಳೆಂದು ಪರಿಗಣಿಸಲಾಗುತ್ತದೋ ಮತ್ತು ಅವರನ್ನು ಎಲ್ಲಿಯವರೆಗೆ ಅಭಿವೃದ್ಧಿಯ ಕರ್ತೃಗಳೆಂದು ಪರಿಗಣಿಸಲಾಗುವುದಿಲ್ಲವೋ ಅಲ್ಲಿಯವರೆಗೆ ನಾಡು ಅಭಿವೃದ್ಧಿಯಾಗುತ್ತಿರುತ್ತದೆ. ಆದರೆ ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರನ್ನು ಒಳಗೊಂಡ ನಾಡವರು ದುಸ್ಥಿತಿಯಿಂದ ನರಳುತ್ತಿರುತ್ತಾರೆ.

<u>ಭಾಗ – ೩</u>

**ಅಭಿವೃದ್ಧಿಯ ಖಂಡರೂಪಿ ದರ್ಶನ**

ಅರ್ಥಶಾಸ್ತ್ರದಲ್ಲಿ ಅಭಿವೃದ್ಧಿಯನ್ನು ಅಖಂಡ ಪ್ರಕ್ರಿಯೆಯಾಗಿ ಪರಿಭಾವಿಸಿಕೊಂಡು ಬರಲಾಗಿದೆ. ಇವತ್ತಿಗೂ ಅದೇ ನಂಬಿಕೆ ಮುಂದುವರಿದಿದೆ. ಅಭಿವೃದ್ಧಿಯೆನ್ನುವುದು, ಅಂದರೆ ವರಮಾನ, ಉತ್ಪನ್ನದ ವರ್ಧನೆಯು ತನ್ನಷ್ಟಕ್ಕೆ ತಾನೆ ಸಮಾಜದಲ್ಲಿ ಎಲ್ಲರನ್ನೂ ಒಳಗೊಳ್ಳುತ್ತದೆ ಎಂದು ಭಾವಿಸಲಾಗಿದೆ. ಆದ್ದರಿಂದ ಅಭಿವೃದ್ಧಿಯೆಂದರೆ ಜನರ ಕಲ್ಯಾಣವೆಂದರೆ ವರಮಾನದ ವರ್ಧನೆ. ಅದು ಜಾತಿ, ವರ್ಗ, ಲಿಂಗ ಮತ್ತು ಪ್ರದೇಶ ಸಂಬಂಧಿ ತಾರತಮ್ಯ ಮಾಡುವುದಿಲ್ಲವೆಂದು ಪ್ರತಿಪಾದಿಸಲಾಗಿದೆ. ಒಂದು ವೇಳೆ ತಾರತಮ್ಯಗಳು ಕಂಡುಬಂದರೆ ಅವು ತಾತ್ಪೂರ್ತಿಕವಾದ ವಿಕಾರಗಳು ಅಂತಿಮವಾಗಿ ಅವು ಎಲ್ಲರನ್ನೂ ತಲುಪುತ್ತವೆ ಮತ್ತು ಅದು ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತದೆ ಎಂದು ನಂಬಲಾಗಿದೆ. ಎಲ್ಲರನ್ನು ಒಳಗೊಳ್ಳುವ ಪ್ರಕ್ರಿಯೆಯು ಕೇವಲ ಕಾಲಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ಇದನ್ನು ಅರ್ಥವಿಜ್ಞಾನಿಗಳು 'ಟ್ರಿಕಲ್ ಡೌನ್ ಥಿಯರಿ' ಎಂದು ಕರೆದಿದ್ದಾರೆ. ಹರ್ಬರ್ಟ್‌ಸ್ಪೆನ್ಸರ್‌ನ ಸಾಮಾಜಿಕ ಡಾರ್ವಿನ್‌ವಾದವನ್ನು ಆಧರಿಸಿ ಅಭಿವೃದ್ಧಿ ಸಿದ್ಧಾಂತಗಳನ್ನು ಕಟ್ಟಿಕೊಂಡು ಬರಲಾಗಿದೆ. ಹಾಗೆ ನೋಡಿದರೆ ಸಮಾಜ ವಿಜ್ಞಾನಗಳಿಗೆ ಅಧ್ಯಯನ ಮಾದರಿಗಳು ಎಲ್ಲಿಂದ ಬಂದವೆಂದರೆ ಅವು ಭೌತವಿಜ್ಞಾನದಿಂದ - ಜೈವಿಕ ವಿಜ್ಞಾನದಿಂದ ಬಂದಿದ್ದಾವೆ. ಇಲ್ಲಿ ಮಾಹಿತಿ, ಪರಿವೀಕ್ಷಣೆ, ಪ್ರಯೋಗ, ವಸ್ತುನಿಷ್ಟತೆ, ಸಮೀಕರಣ, ಕಾರಣ - ಪರಿಣಾಮ ಸಂಬಂಧ ಮುಂತಾದ ಉಪಾದಿಗಳು ಮುಖ್ಯವಾಗಿವೆ. ಸಾಮಾಜಿಕ ಸಂಗತಿಗಳಾದ ಜಾತಿ, ವರ್ಗ, ಲಿಂಗ, ಪ್ರದೇಶ, ಅಲ್ಪಸಂಖ್ಯಾತರು ಮುಖ್ಯ ಸಂಗತಿಗಳಾಗುವುದಿಲ್ಲ. ಬಂಡವಾಳ ಹೂಡಿಕೆಯನ್ನು ಅಧಿಕಗೊಳಿಸುವುದರ ಮೂಲಕ ಬಡತನವನ್ನು ನಿವಾರಿಸಬಹುದು. ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬಹುದು ಎಂಬ ಸಮೀಕರಣ ರೀತಿಯ ಸಿದ್ಧಾಂತಗಳು ಅರ್ಥಶಾಸ್ತ್ರದಲ್ಲಿ ರೂಪುಗೊಂಡಿದ್ದಾವೆ. ಬರಗಾಲ, ಹಸಿವು, ಆಹಾರ ಅಭದ್ರತೆ ಮುಂತಾದವುಗಳನ್ನು ನೀರಾವರಿ ಯೋಜನೆಗಳ ಮೂಲಕ, ಹಸಿರುಕ್ರಾಂತಿ ಮೂಲಕ ನಿವಾರಿಸಬಹುದು ಎಂಬುದು ಇಲ್ಲಿನ ಬಲವಾದ ನಂಬಿಕೆಯಾಗಿದೆ. ಪ್ರಯೋಗಾಲಯಗಳಲ್ಲಿ ಪ್ರಯೋಗಗಳ ಮೂಲಕ ಕಾರ್ಯಾಚರಣೆಯಲ್ಲಿ ಭಾಗವಹಿಸುವ ಸಂಗತಿಗಳನ್ನು ನಿಯಂತ್ರಿಸುವುದರ ಮೂಲಕ ನಿಶ್ಚಿತ ಫಲಿತಾಂಶ ಪಡೆಯುವ ಕ್ರಮದಂತೆ ಅಭಿವೃದ್ಧಿಯನ್ನು ನಿರ್ಧರಿಸುವ ಸಂಗತಿಗಳನ್ನು ಅಗತ್ಯಕ್ಕೆ ತಕ್ಕಂತೆ ನಿಯಂತ್ರಿಸುವ - ನಿರ್ವಹಿಸುವ ಮೂಲಕ ನಿಶ್ಚಿತ ಪರಿಣಾಮಗಳನ್ನು ಪಡೆಯಲು ಸಾಧ್ಯ ಎಂಬ ನಂಬಿಕೆ ನೆಲೆಗೊಂಡಿತು.

ಕರ್ನಾಟಕದ ಅಭಿವೃದ್ಧಿಯ ಅನುಭವವು ಮೇಲೆ ವಿವರಿಸಿ ಕ್ರಮಕ್ಕಿಂತ ಭಿನ್ನವಾಗಿಲ್ಲ. ಉತ್ಪಾದನೆ - ವರಮಾನಗಳ ಪ್ರಮಾಣವನ್ನು ಹೆಚ್ಚಿಸಿಬಿಟ್ಟರೆ ಬಡತನ, ನಿರುದ್ಯೋಗ ನಿವಾರಣೆಯಾಗಿ ಬಿಡುತ್ತವೆ ಎಂಬ ನಂಬಿಕೆಯ ಮೇಲೆ ಕರ್ನಾಟಕವು ಕಳೆದ ೫೦ ವರ್ಷಗಳಿಂದ ಅಭಿವೃದ್ಧಿಯನ್ನು ನಿರ್ವಹಿಸಿಕೊಂಡು ಬಂದಿದೆ. ಅನಕ್ಷರತೆಯನ್ನು ಹೋಗಲಾಡಿಸುವುದು ಹೇಗೆ? ಹೇಗೆ ಅಂದರೆ ಶಾಲೆಗಳನ್ನು

ತೆರೆಯುವುದರ ಮೂಲಕ, ಶಿಕ್ಷಕರನ್ನು ನೇಮಿಸುವುದರ ಮೂಲಕ, ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಎಂದು ಕರ್ನಾಟಕ ಅನುಸರಿಸಿಕೊಂಡು ಬಂದಿರುವ ಅಭಿವೃದ್ಧಿ ವಿಚಾರ ಪ್ರಣಾಳಿಕೆ ಹೇಳೀತು! ಇದೊಂದು ಮುಗ್ಧ - ಸರಳೀಕೃತ ನಂಬಿಕೆ ಎಂಬುದನ್ನು ಮುಂದಿನ ಚರ್ಚೆಯಲ್ಲಿ ತೋರಿಸಲಾಗಿದೆ.

ಅಭಿವೃದ್ಧಿಯ ಖಂಡರೂಪಿ ನೆಲೆಗಳನ್ನು ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಇಲ್ಲಿ ಚರ್ಚಿಸಲಾಗಿದೆ. ಜಾತಿ ಸಂಬಂಧಗಳನ್ನು ಕುರಿತಂತೆ ಅಭಿವೃದ್ಧಿಯು ಹೇಗೆ ಶಿಷ್ಟಕ್ಕೆ ಅಭಿಮುಖವಾಗಿ ಮತ್ತು ಪರಿಶಿಷ್ಟಕ್ಕೆ ವಿಮುಖವಾಗಿ ಪ್ರವಹಿಸುತ್ತಿದೆ ಎಂಬುದನ್ನು, ಲಿಂಗ ಸಂಬಂಧಗಳನ್ನು ಪುರುಷರನ್ನು ಪ್ರಧಾನರನ್ನಾಗಿ ಮಹಿಳೆಯರನ್ನು ಅಧೀನರನ್ನಾಗಿ ಮಾಡಿರುವ ಪರಿಯನ್ನು ಮತ್ತು ಪ್ರದೇಶಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಹಾಗೂ ಚಾರಿತ್ರಿಕವಾಗಿ ಪ್ರಶಸ್ತವಾದ ಪ್ರದೇಶಗಳಲ್ಲಿ ಮಡುಗಟ್ಟಿ ಕೊಂಡಿರುವ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

**ಅಭಿವೃದ್ಧಿಯ ಶಿಷ್ಟ – ಪರಿಶಿಷ್ಟ ನೆಲೆಗಳು**

ಶಿಷ್ಟ - ಪರಿಶಿಷ್ಟ ಎಂಬ ವರ್ಗೀಕರಣ ಕುರಿತ ಚರ್ಚೆಗಳು ಕೇವಲ ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗೆ ಮೀಸಲಾಗಿಬಿಟ್ಟಿವೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಸ್ತುತ ಭಾಗದಲ್ಲಿ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಚರ್ಚಿಸಲಾಗಿದೆ.

ಅಕ್ಷರ ಸಂಸ್ಕೃತಿಯನ್ನು ಅಖಂಡ ನೆಲೆಯಲ್ಲಿ ಚರ್ಚಿಸಿದರೆ ಅದಕ್ಕೆ ಸಂಬಂಧಿಸಿದ ಶಿಷ್ಟ - ಪರಿಶಿಷ್ಟ ನೆಲೆಗಳು ಗೋಚರಿಸುವುದಿಲ್ಲ. ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತೆ ೨೦೦೧ ರಲ್ಲಿ ಶೇ. ೬೭.೦೪ ಇತ್ತು. ಆದರೆ ಪರಿಶಿಷ್ಟರ (ಪ.ಜಾ.+ಪ.ಪಂ) ಸಾಕ್ಷರತೆಯ ಶೇ. ೫೧.೫೫ ಮತ್ತು ಶಿಷ್ಟರ ಸಾಕ್ಷರತೆ ಶೇ. ೭೧.೪೫. ಇಲ್ಲಿ ಶಿಷ್ಟ ಮತ್ತು ಪರಿಶಿಷ್ಟರ ನಡುವಿನ ಸಾಕ್ಷರತಾ ಅಂತರ ಶೇ. ೧೯.೯೦ ಅಂತರಗಳಷ್ಟಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ೧೯೬೦ - ೬೧ ರಲ್ಲಿ ಶೇ. ೧೪.೦೩. ಇಂದು ೨೦೦೧ ರಲ್ಲಿ ಅವರ ಪ್ರಮಾಣ ಶೇ. ೨೨.೮೧. ಆದರೆ ೨೦೦೧ ರಲ್ಲಿ ರಾಜ್ಯದ ಒಟ್ಟು ಅಕ್ಷರಸ್ಥ ಎಲ್ಲ ಪರಿಶಿಷ್ಟರ ಪ್ರಮಾಣ ಕೇವಲ ಶೇ. ೧೭.೦೬. ಅನಕ್ಷರಸ್ಥರಲ್ಲಿ ಮಾತ್ರ ಅವರ ಪ್ರಮಾಣ ಶೇ. ೩೨.೬೦. ಇಂದು ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಎಷ್ಟಿದೆಯೋ ಅದಕ್ಕಿಂತ ಹೆಚ್ಚು ಅನಕ್ಷರಸ್ಥರಿಗೆ ಸಂಬಂಧಿಸಿದಂತೆ ಇದೆ. ಕುತೂಹಲದ ಸಂಗತಿಯೆಂದರೆ ಅನಕ್ಷರಸ್ಥರಲ್ಲಿ ಪರಿಶಿಷ್ಟರ ಪಾಲು ೧೯೯೧ ರಲ್ಲಿ ಶೇ. ೨೮.೩೮ ರಷ್ಟಿದ್ದುದು ೨೦೦೧ ರಲ್ಲಿ ಶೇ. ೩೨.೬ಕ್ಕೇರಿದೆ. ಇದೇ ಅವಧಿಯಲ್ಲಿ ಅನಕ್ಷರಸ್ಥರಲ್ಲಿ ಶಿಷ್ಟರ ಪಾಲು ಶೇ. ೭೧.೬೨ ರಿಂದ ೬೭.೪೦ ಕ್ಕೆ ಇಳಿದಿದೆ.

ಸಾಕ್ಷರತೆಯನ್ನು ಅಮರ್ತ್ಯಸೇನ್‌ರ ಪರಿಭಾಷೆ ಪ್ರಕಾರ ಅಭಿವೃದ್ಧಿಯ ಸೂಚಿಯನ್ನಾಗಿ ಮತ್ತು ಅನಕ್ಷರತೆಯನ್ನು ದುಸ್ಥಿತಿಯ ಸೂಚಿಯನ್ನಾಗಿ ಪರಿಭಾವಿಸಿಕೊಂಡರೆ ಕರ್ನಾಟಕದಲ್ಲಿ ಪರಿಶಿಷ್ಟರು ತಾರತಮ್ಯ - ದುಸ್ಥಿತಿಯಿಂದ ನರಳುತ್ತಿರುವುದು ಮತ್ತು ಶಿಷ್ಟರು ಅಕ್ಷರ ಸಂಪತ್ತನ್ನು ಗುತ್ತಿಗೆ ಹಿಡಿದಿರುವುದು ಸ್ಪಷ್ಟವಾಗುತ್ತದೆ.

ದುಡಿಮೆಗೆ ಸಂಬಂಧಿಸಿದಂತೆಯೂ ಶಿಷ್ಟ - ಪರಿಶಿಷ್ಟರ ನಡುವೆ ತೀವ್ರ ಅಂತರವಿರುವುದನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ೧೯೯೧ ರಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿದ್ದ ಶಿಷ್ಯ ದುಡಿಮೆಗಾರರ ಪ್ರಮಾಣ ಶೇ. ೬೨.೬೪ ರಷ್ಟಿದ್ದರೆ ಪರಿಶಿಷ್ಟರಲ್ಲಿ ಅವಲಂಬನೆ ಶೇ. ೮೦.೨೨ ರಷ್ಟಿತ್ತು. ಆದರೆ ತೃತೀಯ ವಲಯವನ್ನು ಅವಲಂಬಿಸಿಕೊಂಡಿರುವ ಶಿಷ್ಟರ ಪ್ರಮಾಣ ಶೇ. ೨೨.೧೪ ರಷ್ಟಿದ್ದರೆ ಪರಿಶಿಷ್ಟರಲ್ಲಿ ಅದು ಕೇವಲ ಶೇ. ೧೦.೨೦, ಇದೇ ರೀತಿ ರಾಜ್ಯದ ಒಟ್ಟು ದಿನಗೂಲಿ ದುಡಿಮೆಗಾರರಲ್ಲಿ ಶಿಷ್ಟರ ಪ್ರಮಾಣ ೨೦೦೧ ರಲ್ಲಿ ಶೇ. ೬೦.೨೪ ರಷ್ಟಿದ್ದರೆ ಪರಿಶಿಷ್ಟರ ಪ್ರಮಾಣ ಶೇ. ೩೯.೭೬. ರಾಜ್ಯದ ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಎಷ್ಟಿದೆಯೋ ಅದಕ್ಕಿಂತ ಹೆಚ್ಚಿನ ಪ್ರಮಾಣ ದಿನಗೂಲಿ ದುಡಿಮೆಗಾರರಿಗೆ ಸಂಬಂಧಿಸಿದಂತೆ ಇದೆ. ದಿನಗೂಲಿ ದುಡಿಮೆಗಾರರಿಗೆ ಸಂಬಂಧಿಸಿದಂತೆ ಆಯ್ಕೆಗಳಿಲ್ಲ. ಆಯ್ಕೆಗಳಿಲ್ಲದ ಬದುಕನ್ನು ಪರಿಶಿಷ್ಟ ದುಡಿಮೆಗಾರರು ಬದುಕುತ್ತಿದ್ದಾರೆ.

ರಾಜ್ಯವು ಉದಯವಾಗುವ ಸಂದರ್ಭದಲ್ಲಿ ಏಕೀಕರಣದ ಬಗ್ಗೆ ಮಾತನಾಡಲಾಗುತ್ತಿತ್ತು. ಅದಕ್ಕಾಗಿ ಹೋರಾಟ ನಡೆಸಲಾಯಿತು.ಆದರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ೫೦ ವರ್ಷಗಳಲ್ಲಿ ವಿಷಮತೆಯನ್ನು ಹೋಗಲಾಡಿಸುವುದು ಸಾಧ್ಯವಾಗಿಲ್ಲ. ಇಂದು ಪರಿಶಿಷ್ಟರ ಜನಸಂಖ್ಯೆ ೧೨೦ ಲಕ್ಷವನ್ನು ಮೀರಿದೆ. ಇಷ್ಟೊಂದು ದೊಡ್ಡ ಸಮುದಾಯವನ್ನು ಅರ್ಥಪೂರ್ಣವಾಗಿ ಅಭಿವೃದ್ಧಿಯ ವ್ಯಾಪ್ತಿಯಲ್ಲಿ ತರಲು ನಾಡಿಗೆ ಸಾಧ್ಯವಾಗಿಲ್ಲ. ಇದರ ಬಗ್ಗೆ ಮುಂದೆ ಹೆಚ್ಚಿನ ಚರ್ಚೆಯಿದೆ.

**ಆರೋಗ್ಯ ಸಂಬಂಧಿ ಜಾತಿವಾರು ಅಸಮಾನತೆ**

ಆರೋಗ್ಯ ಸೂಚಿಗಳಿಗೆ ಸಂಬಂಧಿಸಿದಂತೆ ವಿವಿಧ ಜಾತಿ ವರ್ಗಗಳ ನಡುವೆ ಅಸಮಾನತೆಯಿರುವುದನ್ನು ಕೋಷ್ಟಕ - ೨ ರಲ್ಲಿ ತೋರಿಸಿದೆ. ಅಭಿವೃದ್ಧಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಆರೋಗ್ಯವಾಗಿ ಪರಿವರ್ತನೆಯಾಗದಿರುವ ಸ್ಥಿತಿಯನ್ನು ಕೋಷ್ಟಕವು ತೋರಿಸುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡವಾದ ೨ ಎಸ್.ಡಿ. ಅಪೌಷ್ಟಿಕತೆ ಮಾಪನದಲ್ಲಿ ಶೇ. ೫೫ ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಕ್ಕಳು ಕರ್ನಾಟಕದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿದ್ದರೆ ಶಿಷ್ಟರಿಗೆ ಸಂಬಂಧಿಸಿದಂತೆ ಅಪೌಷ್ಟಿಕತೆ ಎದುರಿಸುತ್ತಿರುವ ಮಕ್ಕಳ ಪ್ರಮಾಣ ಕೇವಲ ಶೇ.೪೦.

**ಆರೋಗ್ಯ ಸಂಬಂಧಿ ಅಸಮಾನತೆ : ಕರ್ನಾಟಕ : ೧೯೯೮ – ೯೯**

**ಕೋಷ್ಟಕ – ೨**

| **ಜಾತಿವಾರು ವರ್ಗೀಕರಣ** | **ವಯೋಮಾನುವಾರು ತೂಕ೨ ಎಸ್.ಡಿ.ಗಿಂತ ಕೆಳಮಟ್ಟ (ಶೇಕಡ)** | **ಶಿಶುಮರಣ ಪ್ರಮಾಣ (ಪ್ರತಿ ಸಾವಿರ ಜನನಕ್ಕೆ)** | **೫ ವರ್ಷ ವಯಸ್ಸಿನೊಳಗಣ ಮಕ್ಕಳ ಮರಣ ಪ್ರಮಾಣ (ಪ್ರತಿ ಸಾವಿರ ಜನನಕ್ಕೆ)** |
|---|---|---|---|
| ಪ.ಜಾ. | ೫೫.೮೦ | ೭೦ | ೧೦೫ |
| ಪ.ಪಂ. | ೫೫.೭೦ | ೮೫ | ೧೨೦ |
| ಒಬಿಸಿ | ೪೦.೦೦ | ೬೦ | ೭೮ |
| ಇತರೆ | ೪೧.೩೦ | ೫೬ | ೭೦ |

**ಟಿಪ್ಪಣಿ :** ವಿಶ್ವ ಆರೋಗ್ಯ ಸಂಸ್ತೆಯು ನಿಗದಿಪಡಿಸಿರುವ ಆದರ್ಶ ಎರಡು ಸ್ಟಾಂಡರ್ಡ್ ಡಿವಿ ಯೇಷನಗಿಂತ ಕಡಿಮೆ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳನ್ನು ಇಲ್ಲಿ ತೋರಿಸಲಾಗಿದೆ.

**ಆಕರ :** ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ೨ ರಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಅದೇ ರೀತಿ ಶಿಶುಮರಣ ಹಾಗೂ ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣಕ್ಕೆ ಸಂಬಂಧಿಸಿದಂತೆಯೂ ಶಿಷ್ಟ ಮತ್ತು ಪರಿಶಿಷ್ಟರ ನಡುವೆ ತೀವ್ರ ಅಂತರವಿರುವುದು ತಿಳಿಯುತ್ತದೆ. ಅಭಿವೃದ್ಧಿ ಕುರಿತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಶಿಷ್ಟ ಮತ್ತು ಪರಿಶಿಷ್ಟರ ನಡುವಿನ ಅಸಮಾನತೆಯ ಇಂಪ್ಲಿಕೇಶನ್ ಏನು? ಈ ಬಗ್ಗೆ ಮುಂದೆ ಚರ್ಚಿಸಲಾಗಿದೆ.

**ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮಗಳು**

ಅಭಿವೃದ್ಧಿಯನ್ನು ಕುರಿತ ಪಠ್ಯಗಳಲ್ಲಿ ಲಿಂಗ ಸಂಬಂಧಿಗಳನ್ನು ಕುರಿತಂತೆ ಚರ್ಚೆ ಕಂಡುಬರುವುದಿಲ್ಲ. ನಮ್ಮ ದೇಶದ, ಕರ್ನಾಟಕದ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಸಂಬಂಧಿ ಪಠ್ಯಕ್ರಮದಲ್ಲೂ ಲಿಂಗ ಸಂಬಂಧಗಳನ್ನು ಕುರಿತ ಚರ್ಚೆಗೆ ಅವಕಾಶಗಳಿಲ್ಲ. ಏಕೆಂದರೆ

ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳನ್ನು ಲಿಂಗ ನಿರಪೇಕ್ಷ ನೆಲೆಯಲ್ಲಿ ಕಟ್ಟಿಕೊಂಡು ಬರಲಾಗಿದೆ. ಲಿಂಗ ನಿರಪೇಕ್ಷತೆಯು ಅಭಿವೃದ್ಧಿ ಸಿದ್ಧಾಂತಗಳ ಅವಿಭಾಜ್ಯ - ಅಂತರ್ಗತ ಭಾಗವೇ ಆಗಿಬಿಟ್ಟಿದೆ. ಸರ್ಕಾರದ ಬಜೆಟ್‌ಗಳಲ್ಲಿ, ಅವು ವಾರ್ಷಿಕವಾಗಿ ಮಂಡಿಸುವ ಆರ್ಥಿಕ ಸಮೀಕ್ಷೆಗಳಲ್ಲಿ, ಅಭಿವೃದ್ಧಿ ಯೋಜನೆಗಳಲ್ಲಿ ಲಿಂಗ ಸಂಬಂಧಗಳು ಪ್ರಧಾನ ಸಂಗತಿಗಳಾಗುವುದಿಲ್ಲ. ಕರ್ನಾಟಕದ ಅಭಿವೃದ್ಧಿಯ ಅನುಭವಗಳು ಮೇಲೆ ವಿವರಿಸಿದ ಪರಿಗಿಂತ ಭಿನ್ನವಾಗಿರಲು ಸಾಧ್ಯವಿಲ್ಲ.

ಇಂದು ಅಭಿವೃದ್ಧಿಯ ಅಖಂಡ - ಲಿಂಗ ನಿರಪೇಕ್ಷ ಪ್ರತಿಪಾದನೆಗಳು ಸ್ತ್ರೀವಾದಿಗಳಿಂದ ತೀವ್ರ ಟೀಕೆಗೆ ಗುರಿಯಾಗಿವೆ. ಮಹಿಳೆಯರನ್ನು ಅನುಬಂಧದಂತೆ, ಜನಸಂಖ್ಯಾವಾಚಿ ಯಾಗಿ, ಫಲಾನುಭವಿಯಾಗಿ ಪರಿಭಾವಿಸಿಕೊಳ್ಳುವ ಅಭಿವೃದ್ಧಿ ಸಿದ್ಧಾಂತಗಳನ್ನು ಸ್ತ್ರೀವಾದಿಗಳು ಪ್ರಶ್ನಿಸುತ್ತಿದ್ದಾರೆ. ಲಿಂಗ ಸಂಬಂಧಗಳ ಪ್ರಶ್ನೆಯನ್ನು ಇಂದು ಸುಲಭವಾಗಿ ಅಭಿವೃದ್ಧಿ ಸಿದ್ಧಾಂತಗಳು ತಳ್ಳಿ ಹಾಕಲು ಸಾಧ್ಯವಿಲ್ಲ. ಆದರೆ ಸರ್ಕಾರಗಳು ಇಂದು ಸ್ತ್ರೀವಾದಿ ಅಜೆಂಡಾವನ್ನು ಎತ್ತಿ ಹಾಕಿಕೊಂಡು ಬಿಟ್ಟಿವೆ. ಕರ್ನಾಟಕದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಸ್ತ್ರೀ ಶಕ್ತಿ, ಮಹಿಳೆಯರ ಸ್ವಸಹಾಯ ಗುಂಪುಗಳು, ಮಹಿಳೆಯರ ಅಭಿವೃದ್ಧಿ ಮುಂತಾದ ಸಂಗತಿಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಾ ಬಂದಿವೆ. ಸ್ತ್ರೀವಾದವನ್ನು ಸರ್ಕಾರವು ಎತ್ತಿ ಹಾಕಿಕೊಂಡ ಪರಿಣಾಮವಾಗಿ ಸಶಕ್ತೀಕರಣವೆಂಬ ಸಿದ್ಧಾಂತವು ನಿಸ್ಸಾರಗೊಂಡುಬಿಟ್ಟಿದೆ. ಮಹಿಳೆಯರ ಅಭಿವೃದ್ಧಿಯನ್ನು ಸರ್ಕಾರವು ತನ್ನ ಅಭಿವೃದ್ಧಿ ಕಾರ್ಯಕ್ರಮದ ಪುರವಣಿಯನ್ನಾಗಿ ಮಾಡಿಕೊಂಡು ಬಿಟ್ಟಿದೆ. ಅದು ಸ್ತ್ರೀಶಕ್ತಿಯ ಬಗ್ಗೆ ಮಹಿಳೆಯರ ಸ್ವಸಹಾಯ ಗುಂಪುಗಳ ಬಗ್ಗೆ ಮಾತನಾಡುತ್ತದೆ ವಿನಾ ಮಹಿಳೆಯರ ಆಸ್ತಿ ಹಕ್ಕಿನ ಬಗ್ಗೆ, ಲಿಂಗ ಸಂಬಂಧಿ ಶ್ರಮವಿಭಜನೆ ಬಗ್ಗೆ, ಗೃಹವಾರ್ತೆಯನ್ನು ಪುರುಷರ ಜೊತೆ ಹಂಚಿಕೊಳ್ಳುವ ಬಗ್ಗೆ, ಕೌಟುಂಬಿಕ ಹಿಂಸೆಯ ಬಗ್ಗೆ, ಸಾಮಾಜಿಕ ತಾರತಮ್ಯದ ಬಗ್ಗೆ ಅದು ಚಕಾರವೆತ್ತುವುದಿಲ್ಲ.

ಕಳೆದ ೫೦ ವರ್ಷಗಳ ಕರ್ನಾಟಕದ ಅಭಿವೃದ್ಧಿಯನ್ನು ಲಿಂಗ ಸಂಬಂಧಿ ನೆಲೆಯಿಂದ ಪೃಥಕ್ಕರಿಸಿದಾಗ ನಮಗೆ ಪ್ರೋತ್ಸಾಹದಾಯಕ ಚಿತ್ರವೇನೂ ದೊರೆಯುವುದಿಲ್ಲ. ಉದಾಹರಣೆಗೆ ೨೦೦೧ ರಲ್ಲಿ ಕಾಣೆಯಾದ ಮಹಿಳೆಯರ ಸಂಖ್ಯೆ ಸುಮಾರು ೯.೭೯ ಲಕ್ಷ. ಲಿಂಗ ಅನುಪಾತವು ಕ್ರಮಬದ್ಧವಾಗಿ ಎಷ್ಟಿರಬೇಕಿತ್ತೋ ಅಷ್ಟಿದ್ದಿದ್ದರೆ ಕರ್ನಾಟಕದ ಮಹಿಳೆಯರ ಸಂಖ್ಯೆ ೨೦೦೧ ರಲ್ಲಿ ೨೫೮.೭೭ ಲಕ್ಷ ಇರುವುದಕ್ಕೆ ಪ್ರತಿಯಾಗಿ ೨೬೮.೫೬ ಲಕ್ಷ ಇರಬೇಕಾಗಿತ್ತು. ಲಿಂಗ ಅನುಪಾತವು ಸಾವಿರಕ್ಕಿಂತ ಕಡಿಮೆಯಿರುವುದನ್ನು ಅಮರ್ತ್ಯಸೇನ್‌ಲಿಂಗ ಅಸಮಾನತೆಯ ಸೂಚಿಯಾಗಿ ಬಳಸುತ್ತಾರೆ. ಕರ್ನಾಟಕದಲ್ಲಿ ೦ - ೬ ವರ್ಷ ವಯೋಮಾನದ ಮಕ್ಕಳ ಲಿಂಗ ಅನುಪಾತವು ೧೯೯೧ ರಲ್ಲಿ ೯೬೦ ಇದ್ದುದು ೨೦೦೧ ರಲ್ಲಿ ೯೪೬ ಕ್ಕೆ ಕುಸಿದಿದೆ. ಇದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ. ಲಿಂಗ ತಾರತಮ್ಯವೆಂಬುದು ಇಂದು ಹೆಣ್ಣು ಭ್ರೂಣ ಹತ್ಯೆಯವರೆಗೆ ಹಬ್ಬಿಬಿಟ್ಟಿದೆ. ಹೆಣ್ಣು ಭ್ರೂಣ ಹತ್ಯೆಯ ಮತ್ತು ಹೆಣ್ಣು ಶಿಶುಗಳ ಪರಿಪಾಲನೆಯಲ್ಲಿನ ಅಲಕ್ಷ್ಯದಿಂದಾಗಿ ಜನಸಂಖ್ಯೆಯಲ್ಲಿ ಅವರ ಪ್ರಮಾಣ ಕಡಿಮೆಯಾಗುತ್ತಾ ನಡೆದಿದೆ.

**ಅಭಿವೃದ್ಧಿಯ ಪ್ರಾದೇಶಿಕ ವಿಸ್ತೃತತೆ**

ಕರ್ನಾಟಕವು ತನ್ನ ಏಕೀಕರಣದ ಸುವರ್ಣ ವರ್ಷವನ್ನು ಆಚರಿಸಿಕೊಂಡ ಸಂದರ್ಭದಲ್ಲಿ ನಾವು ಚರ್ಚೆ ಮಾಡಲೇಬೇಕಾದ ಸಂಗತಿಯೆಂದರೆ ಅದು ಕಳೆದ ೫ ದಶಕಗಳ ಕಾಲಾವಧಿಯಲ್ಲಿ ಸಾಧಿಸಿಕೊಂಡ ಅಭಿವೃದ್ಧಿಯ ಪ್ರಾದೇಶಿಕ ವ್ಯಾಪ್ತಿ. ಏಕೆಂದರೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯು ಭೂತಾಕಾರದಂತೆ ಇಂದು ಕರ್ನಾಟಕವನ್ನು ಕಾಡುತ್ತಿದೆ. ನಮ್ಮ ನಾಡು ಉದಯವಾದ ೧೯೫೬ ರಲ್ಲಿ ಕರ್ನಾಟಕದ ಬಗ್ಗೆ ಕೃಷ್ಣಕುಮಾರ ಕಲ್ಲೂರ ಎಂಬ ವಿದ್ವಾಂಸರು ಬರೆದಿರುವ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ಅತ್ಯಂತ ಸೂಕ್ತ.

*“..... ಸಂಯುಕ್ತ ಕರ್ನಾಟಕದ ಬೇಡಿಕೆ ಹೊರಹೊರಗೆ ಭಾಷಾತ್ಮಕವಾಗಿದ್ದರೂ, ನಿಜವಾಗಿ ಅದು ಆರ್ಥಿಕ ದೃಷ್ಟಿಯಲ್ಲಿ ಹಿಂದುಳಿದವರ ಕೂಗಾಗಿತ್ತು. ಆದುದರಿಂದ ಈಗ ಒಂದಾಗಿರುವ ಸಂಯುಕ್ತ ಕರ್ನಾಟಕ ಹಿಂದುಳಿದ ಪ್ರದೇಶಗಳದೇ ಒಂದು ಸಂಯುಕ್ತ ರಾಜ್ಯವೆಂತಲೂ, ಭಾಷೆ ಒಂ*

*ದಾಗಿರುವುದು ಒಂದು ಹೆಚ್ಚಿನ ಅನುಕೂಲವೆಂದೂ ಭಾವಿಸಿಕೊಳ್ಳಬೇಕು. ಆದುದರಿಂದ ಭಾಷೆ, ಸಾಹಿತ್ಯಗಳ ಬೆಳವಣಿಗೆಗಿಂತಲೂ, ಹಿಂದುಳಿದ ಪ್ರದೇಶಗಳ ಆರ್ಥಿಕ ಬೆಳವಣಿಗೆಯೇ ಕರ್ನಾಟಕ ರಾಜ್ಯದ ಗುರಿ ಎಂದು ಬಗೆಯಬೇಕು. ಈ ವಿಷಯದಲ್ಲಿ ಮೈಸೂರು ಸಂಸ್ಥಾನದಲ್ಲೂ, ಬೆಂಗಳೂರು, ಮೈಸೂರು ಪರಿಸರದಲ್ಲಿ ಮಾತ್ರ ಸಾಕಷ್ಟು ಬೆಳವಣಿಗೆಯಾಗಿದೆಯೇ ಹೊರತು, ಮಿಕ್ಕ ಹಲಭಾಗ ಸಾಕಷ್ಟು ಹಿಂದುಳಿದಿದೆ. ಇದನ್ನೆಲ್ಲಾ ಬಗೆದರೆ, ನಿಜ ಕರ್ನಾಟಕ ಕೊಡಗು, ಕನ್ನಡ ಜಿಲ್ಲೆ, ಶಿವಮೊಗ್ಗ, ಚಿತ್ರದುರ್ಗ, ಬಿಜಾಪುರ, ಗುಲಬರ್ಗಾ ಪ್ರದೇಶದಲ್ಲಿರುವುದಲ್ಲದೆ ಬೆಂಗಳೂರು – ಮಂಗಳೂರು –*

*ಮೈಸೂರು ನಗರಗಳಲ್ಲಿಲ್ಲ. ಇದನ್ನು ಮನದಟ್ಟಾಗುವಂತೆ ಅರಿತಾಗ ಮಾತ್ರ ನಾವು ನಮ್ಮ ನಾಡಿಗೆ ………………”*(ಮೈಸೂರು ರಾಜ್ಯ ೧೯೫೬, ಕರ್ನಾಟಕ ಸರ್ಕಾರ.)

ಕೃಷ್ಣಕುಮಾರ ಕಲ್ಲೂರ ಅವರು ೧೯೫೬ ರಲ್ಲಿ ಬರೆದ ಮಾತುಗಳನ್ನು ೨೦೦೬ರಲ್ಲೂ ನಾವು ಮಾತನಾಡಬೇಕಾದ ಪ್ರಮೇಯ ಉಂಟಾಗಿದೆ. ಕಳೆದ ೫೦ ವರ್ಷಗಳಲ್ಲಿ ಏನೂ ಆಗಲಿಲ್ಲವೆ ಎಂದರೆ ಬಹಳಷ್ಟೂ ಆಗಿದೆ. ಆದರೆ ಇಡೀ ನಾಡನ್ನು, ನಾಡವರನ್ನು ಒಳಗೊಳ್ಳುವಂತೆ, ೫.೨೭ ಕೋಟಿ ಜನರಿಗೆ ಅಭಿಮುಖವಾಗುವಂತೆ ಕರ್ನಾಟಕದ ಅಭಿವೃದ್ಧಿ ನಡೆಯಲಿಲ್ಲ ಎಂಬುದನ್ನು ಅತ್ಯಂತ ವಿಷಾದದಿಂದ ಹೇಳಬೇಕಾಗುತ್ತದೆ. ಕಲ್ಲೂರ ಅವರು ವ್ಯಕ್ತಪಡಿಸಿರುವ ಅಪಾಯ ಇಂದು ಸಂಭವಿಸಿಬಿಟ್ಟಿದೆ. ನಾಡು ಬೆಂಗಳೂರು – ಮೈಸೂರುಗಳಿಗೆ ಅಭಿಮುಖವಾಗಿ ಬೆಳೆಯುತ್ತಿದೆಯೆ ವಿನಾ ಜೇವರ್ಗಿಗೆ, ದೇವದುರ್ಗಕ್ಕೆ, ಯಲಬುರ್ಗಾಕ್ಕೆ, ಶಿರಗುಪ್ಪಾಕ್ಕೆ, ಸಿಂದಗಿಗೆ ಅಭಿಮುಖವಾಗಿ ಬೆಳೆಯುತ್ತಿಲ್ಲ. ನಾಡಿನ ಅನೇಕ ಭಾಗಗಳು ೧೯೫೬ ಕ್ಕೆ ಪೂರ್ವದಲ್ಲಿ ಬೊಂಬಾಯಿ ಕಡೆಗೆ, ಮದರಾಸಿನ ಕಡೆಗೆ, ಹೈದರಾಬಾದಿನ ಕಡೆಗೆ ಮುಖ ಮಾಡಿಕೊಂಡಿದ್ದನ್ನು ಸರಿಪಡಿಸುವ ಸಲುವಾಗಿ ಏಕೀಕರಣ ಹೋರಾಟ ನಡೆಸಲಾಯಿತು. ಆದರೆ ಇಂದು ಏನಾಗಿದೆ? ಬೆಂಗಳೂರು ನಾಡಿ – ನಾಡವರಿಗೆ ಅಭಿಮುಖವಾಗುವುದಕ್ಕೆ ಪ್ರತಿಯಾಗಿ ಸಿಂಗಪುರದ ಕಡೆಗೆ, ಬಿಲ್‌ಗೇಡ್ಸ್‌ಕಡೆಗೆ, ಯುರೋಪಿನ ಕಡೆಗೆ ಮುಖ ಮಾಡಿಕೊಂಡಿದೆ.

ಪ್ರಾದೇಶಿಕ ಅಸಮಾನತೆ ಎಂಬುದು ಕೇವಲ ಹೈದರಾಬಾದ್ – ಕರ್ನಾಟಕ ಪ್ರದೇಶದವರ, ಉತ್ತರ ಕರ್ನಾಟಕದವರ ಕುಗಲ್ಲ. ಅದು ೫.೨೭ ಕೋಟಿ ಜನರ ಕೂಗಾಗಬೇಕಾದ ಅಗತ್ಯವಾಗಿದೆ. ಕರ್ನಾಟಕದಲ್ಲಿರುವ ಒಟ್ಟು ೧೫೧ ಲಕ್ಷ ಅನಕ್ಷರಸ್ಥರಲ್ಲಿ ಶೇ. ೨೪ ರಷ್ಟು ಹೈದರಾಬಾದ್ – ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿದ್ದಾರೆ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಉತ್ತರ ಕರ್ನಾಟಕದ ಪಾಲು ಶೇ. ೩೭.೯೨. ಆದರೆ ಅನಕ್ಷರಸ್ಥರಲ್ಲಿ ಅದರ ಪಾಲು ಶೇ.೫೦.

**ಆಯ್ದ ಸೂಚಿಗಳು**

- ಕರ್ನಾಟಕ ರಾಜ್ಯದ ಒಟ್ಟು ವರಮಾನದಲ್ಲಿ (ರೂ. ೫೬೧೧.೪೮ ಕೋಟಿ) ಹೈದರಾಬಾದ್ – ಕನಾಟಕ ಪ್ರದೇಶದ ಪಾಲು ೧೯೮೦ – ೮೧ ರಲ್ಲಿ ಶೇ. ೧೬.೧೫ ರಷ್ಟಿತ್ತು. ಆದರೆ ೧೯೯೩ – ೯೪ ರಲ್ಲಿ ಶೇ. ೧೩.೭೯ಕ್ಕೆ ಮತ್ತು ೧೯೯೯ – ೨೦೦೦ ದಲ್ಲಿ ಶೇ. ೧೧.೫೦ ಕ್ಕೆ ಕುಸಿದಿದೆ. ಈ ಪ್ರದೇಶದ ಪಾಲು ೨೦೦೭ – ೦೮ ರಲ್ಲಿ ಶೇ. ೧೨.೮೨ ರಷ್ಟಾಗಿದೆ. ಪ್ರಾದೇಶಿಕ ಅಸಮಾನತೆಯ ತೀವ್ರಗೊಳ್ಳುತ್ತ ನಡೆದಿರುವುದನ್ನು ಇದು ಸೂಚಿಸುತ್ತದೆ.
- ‘ಕೂಲಿಯಿದ್ದರೆ ಕೂಳು’ ಎಂಬ ಸ್ಥಿತಿಯಲ್ಲಿರುವ ದಿನಗೂಲಿ ದುಡಿಮೆಗಾರರು ರಾಜ್ಯದಲ್ಲಿ ೨೦೦೧ ರಲ್ಲಿ ೬೦.೪೧ ಲಕ್ಷ ಇದ್ದಾರೆ. ಇವರಲ್ಲಿ ಶೇ.೫೯ ರಷ್ಟು ಪಾಲು ಉತ್ತರ ಕರ್ನಾಟಕ ಪ್ರದೇಶದ್ದಾಗಿದೆ. ಜನಸಂಖ್ಯೆಯಲ್ಲಿ ಉತ್ತರ ಕರ್ನಾಟಕದ ಪಾಲು ಕೇವಲ ಶೇ. ೪೩. ಆದರೆ ದಿನಗೂಲಿ ದುಡಿಮೆಗಾರರಲ್ಲಿ ಮಾತ್ರ ಇದರ ಪಾಲು ಶೇ. ೫೯.
- ರಾಜ್ಯ ಮಟ್ಟದಲ್ಲಿ ಒಟ್ಟು ದುಡಿಮೆಗಾರರಲ್ಲಿ ದಿನಗೂಲಿ ದುಡಿಮೆಗಾರರ ಪ್ರಮಾಣ ಕೇವಲ ಶೇ. ೨೬.೭೯. ದಕ್ಷಿಣ ಕರ್ನಾಟಕದಲ್ಲಿ ಇವರ ಪ್ರಮಾಣ ಶೇ. ೧೯.೩೭. ಆದರೆ ಹೈದರಾಬಾದ್ – ಕರ್ನಾಟಕ ಪ್ರದೇಶದಲ್ಲಿ ಇವರ ಪ್ರಮಾಣ ಶೇ. ೪೦.೫೯.

- ಡಿ.ಎಂ. ನಂಜುಂಡಪ್ಪ ವರದಿಯ ಪ್ರಕಾರ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ೩೯ ತಾಲ್ಲೂಕುಗಳ ಪೈಕಿ ಹೈದರಾಬಾದ್ - ಕರ್ನಾಟಕ ಪ್ರದೇಶದ ಪಾಲು ಶೇ. ೫೩.೮೫ (೨೧ ತಾಲ್ಲೂಕುಗಳು). ಆದರೆ ರಾಜ್ಯದ ಮುಂದುವರಿದ ೬೧ ತಾಲ್ಲೂಕುಗಳ ಪೈಕಿ ಹೈದರಾಬಾದ್ - ಕರ್ನಾಟಕ ಪಾಲು ಶೇ.೫.
- ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿನ ಒಟ್ಟು ತಾಲ್ಲೂಕುಗಳ ಸಂಖ್ಯೆ ೩೧. ಅವುಗಳಲ್ಲಿ ಮುಂದುವರಿದ ತಾಲ್ಲೂಕುಗಳ ಸಂಖ್ಯೆ ಕೇವಲ ೩ (ಶೇ.೯.೬೮) ಆದರೆ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ೨೮ (ಶೇ. ೯೦.೩೨). ಇಡೀ ರಾಜ್ಯದ ಒಟ್ಟು ತಾಲ್ಲೂಕುಗಳಾದ ೧೭೫ ರಲ್ಲಿ ಮುಂದುವರಿದ ತಾಲ್ಲೂಕುಗಳ ಪ್ರಮಾಣ ಶೇ. ೬೫.೧೪ ಮತ್ತು ಹಿಂದುಳಿದ ತಾಲ್ಲೂಕುಗಳ ಪ್ರಮಾಣ ಶೇ. ೩೪.೮೬.
- ಕರ್ನಾಟಕದಲ್ಲಿ ೧೯೫೭ - ೫೮ ರಲ್ಲಿ ನೀರಾವರಿ ಪ್ರದೇಶದ ವಿಸ್ತೀರ್ಣ ೭.೫೯ ಲಕ್ಷ ಹೆಕ್ಟೇರುಗಳು. ಇದರಲ್ಲಿ ಉತ್ತರ ಕರ್ನಾಟಕದ ಪಾಲು ಶೇ. ೨೯ ರಷ್ಟಿದ್ದರೆ ದಕ್ಷಿಣ ಕರ್ನಾಟಕದ ಪಾಲು ಶೇ.೭೧ ರಷ್ಟಿತ್ತು. ಆದರೆ ೨೦೦೨ - ೦೩ ರಲ್ಲಿ ಒಟ್ಟು ನೀರಾವರಿ ಪ್ರದೇಶ ರಾಜ್ಯದಲ್ಲಿ ೨೫.೫೦ ಲಕ್ಷ ಹೆಕ್ಟೇರ್‌ನಷ್ಟಿದೆ. ಇದರಲ್ಲಿ ಉತ್ತರ ಕರ್ನಾಟಕದ ಪಾಲು ಶೇ. ೫೫.೭೧ ರಷ್ಟಿದ್ದರೆ ದಕ್ಷಿಣ ಕರ್ನಾಟಕದ ಪಾಲು ಶೇ. ೪೪.೨೯ ರಷ್ಟಿದೆ. ಇದು ಆರೋಗ್ಯಕರ ಬೆಳವಣಿಗೆಯಾಗಿದೆ. ಆದರೆ ನಾವು ಗಮನಿಸಬೇಕಾದ ಸಂಗತಿಯೆಂದರೆ ಇಷ್ಟಾದರೂ ಇಂದು ದಕ್ಷಿಣ ಕರ್ನಾಟಕದಲ್ಲಿ ಒಟ್ಟು ಸಾಗುವಳಿ ಪ್ರದೇಶದಲ್ಲಿ ಶೇ. ೨೮.೦೫ ರಷ್ಟು ನೀರಾವರಿ ಸೌಲಭ್ಯ ಪಡೆಯುತ್ತಿದ್ದರೆ ಉತ್ತರ ಕರ್ನಾಟಕದಲ್ಲಿ ನೀರಾವರಿ ಸೌಲಭ್ಯ ಪಡೆಯುತ್ತಿರುವ ಪ್ರದೇಶದ ಪ್ರಮಾಣ ಕೇವಲ ಶೇ. ೨೨.೮೮.

ಅಭಿವೃದ್ಧಿ ಸಂಬಂಧಿಸಿದ ಇಂತಹ ಪ್ರಾದೇಶಿಕ ಅಸಮಾನತೆಯ ಗತಿ ಮತ್ತು ಗಾತ್ರವನ್ನು ಗುರುತಿಸುವುದಕ್ಕಿಂತ ಅದರ ಹಿಂದಿನ ಕಾರಣಗಳನ್ನು ಹಿಡಿದಿಡುವುದು ತುಂಬಾ ಮುಖ್ಯ. ರಾಜ್ಯ ಸರ್ಕಾರದ ಮಲತಾಯಿ ಧೋರಣೆಯನ್ನು ಇದಕ್ಕೆ ಕಾರಣ ಮಾಡುವ ಒಂದು ಜನಪ್ರಿಯ ವಾದವಿದೆ. ಇದು ಸ್ವಲ್ಪಮಟ್ಟಿಗೆ ನಿಜವಿರಬಹುದು. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಬಗ್ಗೆ ಮಲತಾಯಿ ಧೋರಣೆ ತಳೆದು ರಾಜ್ಯ ಸರ್ಕಾರವು ಬದುಕಿದ್ದಾದರೂ ಹೇಗೆ? ಈ ಜಿಲ್ಲೆಗಳ ಉತ್ಪಾದನಾ ಸಂಬಂಧ, ಸಾಮಾಜಿಕ ಸ್ವರೂಪ ಹಾಗೂ ರಾಜಕಾರಣಗಳಲ್ಲಿ ನಾವು ಅದರ ಹಿಂದುಳಿದಿರುವಿಕೆಯ ನೆಲೆಯನ್ನು ಗುರುತಿಸುವ ಅಗತ್ಯವಿದೆ. ಈ ಜಿಲ್ಲೆಗಳಿಗೆ ವಿಶಿಷ್ಟವಾದ ಸಂಗತಿಗಳಲ್ಲಿ ಅವುಗಳ ಹಿಂದುಳಿದಿರುವಿಕೆಯ ಸಂಕೀರ್ಣತೆಯನ್ನು ಹಿಡಿದಿಡಬೇಕಾಗಿದೆ. ಯಾಕೆ ಈ ಜಿಲ್ಲೆಗಳಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ ಅಪಾರವಾಗಿದೆ? ಈ ಜಿಲ್ಲೆಗಳಲ್ಲಿ ಮಾತ್ರ ಯಾಕೆ ನಮಗೆ ದುಡಿಮೆಗಾರರ ವಲಸೆ ಪ್ರವೃತ್ತಿ ಕಂಡುಬರುತ್ತದೆ? ಯಾಕೆ ಈ ಜಿಲ್ಲೆಗಳಲ್ಲಿ ಮಾತ್ರ ಸಾಕ್ಷರತೆ ಪ್ರಮಾಣ ಕೆಳಮಟ್ಟದಲ್ಲಿದೆ? ಇವುಗಳಿಗೆ ಉತ್ತರ ಕಂಡುಕೊಂಡರೆ ನಮಗೆ ಪ್ರಾದೇಶಿಕ ಅಸಮಾನತೆಯ ತಳಬುಡ ಅರ್ಥವಾಗುತ್ತದೆ. ಈ ಜಿಲ್ಲೆಗಳ ಯಾವ ಪ್ರತಿನಿಧಿಯೂ ದುಡಿಮೆಗಾರರ ವಲಸೆ ಬಗ್ಗೆ ಮಾತನಾಡುವುದಿಲ್ಲ. ಜೇವರ್ಗಿ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಯಾಕೆ ಇಡೀ ರಾಜ್ಯದಲ್ಲಿ ಕಡಿಮೆಯಿದೆ ಎಂಬುದರ ಬಗ್ಗೆ ಆ ತಾಲ್ಲೂಕಿನ ಶಾಸಕರು ತಲೆಕೆಡಿಸಿಕೊಂಡಿಲ್ಲ. ಈ ಸಮಸ್ಯೆಗಳ ಬಗ್ಗೆ, ಸಂಗತಿಗಳ ಮಾತನಾಡದೆಯೂ ಅಲ್ಲಿನ ಶಾಸಕರಾಗುವುದು ಅವರಿಗೆ ಸಾಧ್ಯವಾಗಿದೆ. ಇದು ಎಲ್ಲಿಯವರೆಗೆ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಸಮಸ್ಯೆ ಬಗೆಹರಿಯುವುದಿಲ್ಲ. ಮಲತಾಯಿ ಧೋರಣೆ ಬಗ್ಗೆ ಆಕ್ರೋಶ ವ್ಯಕ್ತಪಡಿಸುವುದಕ್ಕೆ ಪ್ರತಿಯಾಗಿ ಸರ್ಕಾರಕ್ಕೆ ಮಲತಾಯಿ ಧೋರಣೆ ತಳೆಯುವುದು ಹೇಗೆ ಸಾಧ್ಯವಾಯಿತು ಎಂಬುದನ್ನು ನಾವು ಇಂದು ಅರ್ಥಮಾಡಿಕೊಳ್ಳಬೇಕಾಗಿದೆ.

ಡಿ.ಎಂ. ನಂಜುಂಡಪ್ಪ ವರದಿಯ ರೂ.೧೬,೦೦೦ ಕೋಟಿ ವಿಶೇಷ ಅಭಿವೃದ್ಧಿ ಯೋಜನೆ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಸಮಸ್ಯೆಯು ಬಂಡವಾಳದಲ್ಲ ಎಂಬುದನ್ನು ಇನ್ನಾದರೂ ನಾವು ಅರ್ಥಮಾಡಿಕೊಳ್ಳಬೇಕು. ಉತ್ಪಾದನಾ ಸಂಬಂಧಗಳ ನೆಲೆಯಿಂದ, ಜಾತಿ ರಚನೆಯ

ನೆಲೆಯಿಂದ, ಲಿಂಗ ಸಂಬಂಧಗಳ ನೆಲೆಯಿಂದ ಅಭಿವೃದ್ಧಿಯನ್ನು, ಪ್ರಾದೇಶಿಕ ಅಸಮಾನತೆಯನ್ನು ಪರಿಶೀಲಿಸಬೇಕಾಗುತ್ತದೆ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಯ ವಸ್ತುಸ್ಥಿತಿಯನ್ನು ತಿಳಿಯುವ ಅಗತ್ಯವಿದೆ.

## ಭಾಗ ೪

## ಸ್ವಾತಂತ್ರ್ಯವಾಗಿ ಅಭಿವೃದ್ಧಿ

ಅಮರ್ತ್ಯಸೆನ್ ಅವರು ಅಭಿವೃದ್ಧಿಯನ್ನು ಸ್ವಾತಂತ್ರ್ಯದ ಪರಿಭಾಷೆಯಲ್ಲಿ ಮಾನವ ಹಕ್ಕುಗಳ ಚೌಕಟ್ಟಿನಲ್ಲಿ ನಿರ್ವಚಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ಇತ್ತೀಚಿಗಿನ ಗ್ರಂಥದ ಹೆಸರು 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' (ಡೆವಲಪ್‌ಮೆಂಟ್ ಆಸ್ ಫ್ರೀಡಮ್). ಆಡಂಸ್ಮಿತ್‌ನ ಕಾಲದಿಂದಲೂ ಅಭಿವೃದ್ಧಿಯನ್ನು ವರಮಾನದ ವರ್ಧನೆಯೆಂದೂ, ಕೈಗಾರಿಕೀಕರಣವೆಂದೂ, ಸಾಮಾಜಿಕ ಆಧುನಿಕೀಕರಣವೆಂದೂ ನಿರ್ವಚಿಸಿಕೊಂಡು ಬರಲಾಗಿದೆ. ಸೆನ್‌ಪ್ರಕಾರ ಇವೆಲ್ಲವೂ ಅಭಿವೃದ್ಧಿಯ ಸಾಧನೆಗಳು ಮಾತ್ರ. ಆದರೆ ಅದರ ಸಾಧ್ಯ ಜನರ ಧಾರಣಶಕ್ತಿಯ ಸಂವರ್ಧನೆ. ಬದುಕನ್ನು ತಮ್ಮ ಅಪೇಕ್ಷೆಗೆ ಅನುಗುಣವಾಗಿ ಕಟ್ಟಿಕೊಳ್ಳಲು ಜನರಿಗೆ ಅವಕಾಶವಿರಬೇಕು. ಈ ಅವಕಾಶಗಳ ಕೊರತೆಯನ್ನು ಸೆನ್‌ದುಸ್ಥಿತಿಯೆಂದು ಕರೆಯುತ್ತಾರೆ. ಅವಕಾಶಗಳಲ್ಲಿ ಆಯ್ಕೆಯ ಸ್ವಾತಂತ್ರ್ಯ ಇಲ್ಲದಿದ್ದರೆ ಅದು ದುಸ್ಥಿತಿ. ಮಾಹಿತಿ ಕ್ರಾಂತಿ ಕರ್ನಾಟಕದಲ್ಲಿ ನಡೆಯುತ್ತಿದೆ. ಆದರೆ ಜೇವರ್ಗಿಯ, ಶಿರಗುಪ್ಪದ, ದೇವದುರ್ಗದ ನಿರಕ್ಷರಕುಕ್ಷಿಗಳಿಗೆ ಮಾಹಿತಿಕ್ರಾಂತಿಯ ಅವಕಾಶವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಿಂದುಳಿದ ಜಿಲ್ಲೆಗಳ ಲಕ್ಷಾಂತರ ದುಡಿಯುವ ಮಹಿಳೆಯರಿಗೆ ಸ್ಥಳೀಯವಾಗಿ ದೊರೆಯುವ ದಿನಗೂಲಿ ರೂ. ೧೦೦ ರಿಂದ ೧೨೦. ಅದನ್ನು ಅವರು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಉಪವಾಸ. ಇಲ್ಲಿ ವಿಕಲ್ಪಗಳೇ ಇಲ್ಲ. ಇದು ದುಸ್ಥಿತಿ. ಗಂಡನು ಕುಡುಕನಾಗಿರಲಿ, ರೋಗಿಷ್ಠನಾಗಿರಲಿ, ಹೆಂಡತಿಯನ್ನು ಹಿಂಸಿಸಲಿ, ಅವನ ಹೆಂಡತಿಯಾದವಳು ಅವನನ್ನು ಗಂಡನೆಂದು, ಪರದೈವವೆಂದೂ ನಂಬಿ ಬದುಕಬೇಕು. ಅವಳಿಗೆ ವಿಕಲ್ಪಗಳಿಲ್ಲ. ಇದು ದುಸ್ಥಿತಿ. ಬಡತನದಿಂದ, ಹಸಿವಿನಿಂದ, ಅನಕ್ಷರತೆಯಿಂದ, ಅಸ್ವಸ್ಥತೆಯಿಂದ, ಹಿಂಸೆಯಿಂದ ಬಿಡುಗಡೆ ಪಡೆಯುವುದು ಅಭಿವೃದ್ಧಿ. ಇದು ಸಶಕ್ತೀಕರಣ. ಅಭಿವೃದ್ಧಿಯನ್ನು ಸಾಧನಗಳ ನೆಲೆಯಿಂದ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಅಮರ್ತ್ಯಸೆನ್‌ಅದರ ಸಾಧ್ಯಗಳ ನೆಲೆಯಿಂದ ಪರಿಭಾವಿಸಿಕೊಳ್ಳುತ್ತಾರೆ. ವರಮಾನ, ಉತ್ಪನ್ನ, ಬಂಡವಾಳಗಳು ಆರೋಗ್ಯವಾಗಿ, ಅಕ್ಷರವಾಗಿ, ಆಶ್ರಯವಾಗಿ, ಆಹಾರವಾಗಿ ಒದಗುವುದನ್ನು ಅಭಿವೃದ್ಧಿಯೆಂದು ಕರೆಯುತ್ತಾರೆ. ಸ್ವಾತಂತ್ರ್ಯವೆಂಬುದು ಅಭಿವೃದ್ಧಿಯೂ ಹೌದು ಮತ್ತು ಅದನ್ನು ಮಾಪನ ಮಾಡುವ ಮಾನದಂಡವೂ ಹೌದು. ಸ್ವಾತಂತ್ರ್ಯವನ್ನು ಸೆನ್ ನಿರ್ಬಂಧ - ನಿಯಂತ್ರಣಗಳಲ್ಲಿನ ಸ್ಥಿತಿಯೆಂದು ಪರಿಭಾವಿಸುವುದಕ್ಕೆ ಪ್ರತಿಯಾಗಿ ಸಾಧಿಸಿಕೊಳ್ಳಲು ಅಗತ್ಯವಾದ ಸಾಮರ್ಥ್ಯವಾಗಿ ಪರಿಭಾವಿಸಿಕೊಳ್ಳುತ್ತಾರೆ. ನಿರ್ಬಂಧಗಳು - ನಿಯಂತ್ರಣಗಳೂ ಇಲ್ಲದ ಸ್ಥಿತಿಯನ್ನು ಉದಾರವಾದವೆಂದು, ಜಾಗತೀಕರಣವೆಂದೂ ಕರೆಯಲಾಗುತ್ತಿದೆ. ಇವೆಲ್ಲವೂ ಅಭಿವೃದ್ಧಿಗೆ ಅಗತ್ಯ. ಆದರೆ ಅವೇ ಅಭಿವೃದ್ಧಿಯಲ್ಲ. ತಮಗೆ ಅಗತ್ಯವಿರುವುದನ್ನು ಸಾಧಿಸಿಕೊಳ್ಳಲು ಜನರಲ್ಲಿರುವ ಸಾಮರ್ಥ್ಯವನ್ನು ಅಮರ್ತ್ಯಸೆನ್‌ಸ್ವಾತಂತ್ರ್ಯವೆನ್ನುತ್ತಾನೆ. ಈ ಸಾಮರ್ಥ್ಯ ಮತ್ತು ಸ್ವಾತಂತ್ರ್ಯಗಳನ್ನು ಕೂಡಿಸಿ ಅವರು ಧಾರಣಶಕ್ತಿ (ಕೆಫಬಲಿಟಿ) ಎಂದು ಕರೆಯುತ್ತಾರೆ. ಈ ಧಾರಣಶಕ್ತಿಯ ಸಂವರ್ಧನೆಯೇ ಅಭಿವೃದ್ದಿ. ಅದರ ಕೊರತೆಯೇ ದುಸ್ಥಿತಿ. ಅದರಿಂದ ವಂಚಿತರಾದವರೆ ಬಡವರು. ಕಳೆದ ೫೦ ವರ್ಷಗಳ ಕಾಲಾವಧಿಯಲ್ಲಿ ಧಾರಣಶಕ್ತಿಯಿಂದ ವಂಚಿತರಾದವರು ಯಾರು ಮತ್ತು ಅದರಿಂದ ಧನ್ಯರಾದವರು ಯಾರು ಎಂಬುದನ್ನು ನಾವು ವಿಶ್ಲೇಷಿಸಬಹುದು. ಸ್ವಾತಂತ್ರ್ಯವೆಂಬುದು ಅಖಂಡವಾದ ಸಂಗತಿಯೇನಲ್ಲ. ಮಹಿಳೆಯೊಬ್ಬಳಿಗೆ ತನ್ನ ಊರು ಬಿಟ್ಟು ಬೇರೊಂದು ಊರಿಗೆ ದುಡಿಯಲು ಹೋದರೆ ಕೂಲಿ ರೂ. ೧೦೦ ಕ್ರಕೆ ಪ್ರತಿಯಾಗಿ ರೂ.೧೫೦ ದೊರೆಯುತ್ತದೆ. ಆದರೆ ಸಂಚಾರ ಸಂಬಂಧಿ ಸಂಕೋಲೆಯಿಂದಾಗಿ, ಗೃಹವಾರ್ತೆಯ ಜವಾಬುದರಿಯಿಂದಾಗಿ, ಅನಕ್ಷರತೆಯಿಂದಾಗಿ ಅದನ್ನು ಪಡೆಯಲು ಮಹಿಳೆಯೊಬ್ಬಳಿಗೆ ಸಾಧ್ಯವಿಲ್ಲವಾದರೆ ಅದು ದುಸ್ಥಿತಿ. ಅಲ್ಲಿ ಸ್ವಾತಂತ್ರ್ಯವಿಲ್ಲ. ಈ ಬಗೆಯಲ್ಲಿ ಕರ್ನಾಟಕದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಪರಿ ಕಂಡುಬರುತ್ತಿಲ್ಲ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅಭಿವೃದ್ಧಿಯನ್ನು ನಾವು ಪರಿಭಾವಿಸಿಕೊಳ್ಳುವ ಕ್ರಮದಲ್ಲಿ ಬದಲಾವಣೆ ತರಬೇಕಾಗಿದೆ. ಬದುಕನ್ನು ಕಟ್ಟಿಕೊಳ್ಳಲು ಅಗತ್ಯವಾದ ಅವಕಾಶಗಳ ವ್ಯಾಪ್ತಿ ವರ್ಧಿಸಬೇಕು. ವರ್ಧನೆಯಾದ ಅವಕಾಶಗಳಲ್ಲಿ ವಿಕಲ್ಪಗಳಿಗೆ ಎಡೆಯಿರಬೇಕು. ಇಂದಿಗೂ ಕರ್ನಾಟಕದಲ್ಲಿ ಯಾಕೆ ಲಕ್ಷಾಂತರ ದಲಿತರು

ಗ್ರಾಮಗಳ ರಾಡಿ ನೀರು ಹರಿದುಹೋಗಿ ನಿಲ್ಲುವ ಊರಾಚೆಯಲ್ಲಿ, ಜನರು ಕಸ, ಗೊಬ್ಬರ ಹಾಕುವ ಸ್ಥಳಗಳಲ್ಲಿ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಏಕೆ? ಇಲ್ಲಿ ಸ್ವಾತಂತ್ರ್ಯದ ದಮನವಾಗಿದೆ. ಇಲ್ಲಿ ಅಭಿವೃದ್ಧಿಗೆ ಅವಕಾಶವಿಲ್ಲವಾಗಿದೆ. ಈ ಹಿಂದೆ ಹೇಳಿರುವ ಕರ್ನಾಟಕದ ಹಿಂದುಳಿದ ಏಳು ಜಿಲ್ಲೆಗಳಲ್ಲಿ ನೀವು ಯಾವ ಪ್ರಾಥಮಿಕ ಶಾಲೆಗಳಿಗೆ ಭೇಟಿ ಕೊಟ್ಟರೂ, ಮೊದಲನೆಯ ತರಗತಿಯಲ್ಲಿ ನೂರು ಮಕ್ಕಳಿದ್ದರೆ ಏಳನೆಯ ತರಗತಿಯಲ್ಲಿ ೫೦ ಕ್ಕಿಂತ ಕಡಿಮೆ ಮಕ್ಕಳಿರುತ್ತಾರೆ. ಹಾಗಾದರೆ ಉಳಿದ ೫೦ ಮಕ್ಕಳು ಎಲ್ಲಿ ಹೋದರು? ಅವರಲ್ಲಿ ಬಹುಪಾಲು ಮಕ್ಕಳು ಪ.ಜಾ., ಪ.ಪಂ., ಒಬಿಸಿ, ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದವರಾಗಿರುತ್ತಾರೆ. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳಲ್ಲಿ ಶೇ.೫೦ ರಷ್ಟು ಬಾಲಕಿಯರಿರುತ್ತಾರೆ. ಇಲ್ಲಿ ಪ್ರಾಥಮಿಕ ಶಾಲೆಯ ಶ್ರೇಣಿಯಲ್ಲಿ ಮೇಲೆ ಹೋದಂತೆ ಉನ್ನತ ಶಾಲೆ - ವರ್ಗದವರ ಪ್ರಮಾಣ ಅಧಿಕವಿರುತ್ತದೆ. ಕೆಳಗಡೆ ವಂಚಿತರ, ಪರಿಶಿಷ್ಟರ, ಬಾಲಕಿಯರ ಪ್ರಮಾಣ ಅಧಿಕವಿರುತ್ತದೆ. ಈ ಶ್ರೇಣೀಕರಣದಲ್ಲಿ ತುದಿ ಸೀಮಿತವಾಗಿರುತ್ತದೆ. ಬುಡ ವಿಸ್ತೃತವಾಗಿರುತ್ತದೆ. ತುದಿಯಲ್ಲಿ ಉನ್ನತ ಜಾತಿ, ವರ್ಗದವರಿದ್ದರೆ ಬುಡದಲ್ಲಿ ವಂಚಿತರು ಇರುತ್ತಾರೆ. ಇದನ್ನೇ ಜೆನ್ ಬ್ರಮೆನ್‌ಅವರು 'ಆರೋಹಣವಾದಿ ಅಸಮಾನತೆ'ಯೆಂದು ಕರೆದಿದ್ದಾರೆ. ಪಿರಮಿಡ್ಡಿನ ತುದಿಯಲ್ಲಿ ಸ್ವಾತಂತ್ರ್ಯವಿದ್ದರೆ ಬುಡದಲ್ಲಿ ದುಸ್ಥಿತಿಯಿದೆ. ಸ್ವಾತಂತ್ರ್ಯವು ತುದಿಯಲ್ಲಿ ಯಾವ ಗತಿಯಲ್ಲಿ ವರ್ಧನೆಯಾಗುತ್ತಿದೆಯೋ ಅದೇ ಗತಿಯಲ್ಲಿ ಬುಡದಲ್ಲಿ ಬಡತನವು ಕಡಿಮೆಯಾಗುತ್ತಿಲ್ಲ. ಕಳೆದ ೫೦ ವರ್ಷಗಳಲ್ಲಿ ಕರ್ನಾಟಕವು ಸಾಧಿಸಿಕೊಂಡಿದ್ದು ಆರೋಹಣವಾದಿ ಅಸಮಾನತೆ, ಇದನ್ನು ಸರಿಪಡಿಸುವ ಬಗ್ಗೆ ಇಂದು ಚರ್ಚೆಯಾಗಬೇಕು. ಸುವರ್ಣ ಮಹೋತ್ಸವದ ಸುವರ್ಣ ಶಪಥವು ಇದಾಗಬೇಕು.

## <u>ಭಾಗ</u> <u>೫</u>

ಕಳೆದ ೫೦ ವರ್ಷಗಳ ಕಾಲಾವಧಿಯಲ್ಲಿ ವರಮಾನದ ವರ್ಧನೆಯ ದೃಷ್ಟಿಯಿಂದ ಅಭಿವೃದ್ಧಿಯಾಗಿದೆ. ಕೈಗಾರಿಕೀಕರಣವಾಗಿದೆ. ಸಮಾಜವು ಆಧುನೀಕರಣಗೊಳ್ಳುತ್ತಿದೆ. ಉತ್ಪಾದನೆ ಏರುಮುಖಿಯಾಗಿದೆ. ರಾಜ್ಯವು ಆಹಾರ ಭದ್ರತೆಯನ್ನು ಸಾಧಿಸಿಕೊಂಡಿದೆ. ರಾಷ್ಟ್ರಮಟ್ಟದ ಸಾಕ್ಷರತೆ ಪ್ರಮಾಣಕ್ಕಿಂತ ತುಸು ಹೆಚ್ಚಿನ ಸಾಕ್ಷರತೆಯನ್ನು ರಾಜ್ಯ ಸಾಧಿಸಿಕೊಂಡಿದೆ. ಕೃಷಿಯ ಅವಲಂಬನೆಯು ವರಮಾನದ ದೃಷ್ಟಿಯಿಂದ ಕಡಿಮೆಯಾಗಿದೆ. ರಸ್ತೆಗಳ ಉದ್ದ ಹಾಗೂ ಗುಣಮಟ್ಟ ಉತ್ತಮವಾಗಿದೆ. ಬ್ಯಾಂಕುಗಳು ಎಲ್ಲ ಕಡೆ ಕಾರ್ಯಾರಂಭ ಮಾಡಿವೆ. ಶಾಲಾ - ಕಾಲೇಜುಗಳು ನಗರಗಳಲ್ಲಿ ಜಗಮಗಿಸುತ್ತಿವೆ. ಬೆಂಗಳೂರು ಸಿಂಗಪುರವಾಗುತ್ತಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಿದ್ಧವಾಗುತ್ತಿದೆ. ಗುಲಬರ್ಗಾದಲ್ಲೂ ವಿಮಾನ ನಿಲ್ದಾಣ ಬೇಕೆಂದು ಶಾಸಕರು ಒತ್ತಾಯಿಸುತ್ತಿದ್ದಾರೆ. ಇವೆಲ್ಲ ಅಭಿವೃದ್ಧಿಯೆನ್ನುವುದಾದರೆ ಅದು ಅಭಿವೃದ್ಧಿ. ಅದರ ಮೆರೆದಾಟವೇ ಸುವರ್ಣ ಮಹೋತ್ಸವವೆನ್ನುವುದಾದರೆ ಅದು ಅಭಿವೃದ್ಧಿ. ಅದರ ಮೆರೆದಾಟವೇ ಸುವರ್ಣ ಮಹೋತ್ಸವವೆನ್ನುವುದಾದರೆ ಇನ್ನು ಒಂದು ವರ್ಷ ಕರ್ನಾಟಕದಲ್ಲಿ ಬಾಜಾ - ಭಜಂತ್ರಿಗೆ, ಹಾರ - ತುರಾಯಿಗಳಿಗೆ ಬರವಿಲ್ಲ.

ಒಣಭೂಮಿ ಬೇಸಾಯದ ರೈತ ಸಮುದಯದ ಅಳಲು ಮುಗಿಲು ಮುಟ್ಟುತ್ತಿದೆ. ಶಾಲೆ ಸೇರದ ಮಕ್ಕಳ ಪ್ರಮಾಣ ಹಿಂದುಳಿದ ಜಿಲ್ಲೆಗಳಲ್ಲಿ ಅಧಿಕವಾಗಿದೆ. ಸುಮಾರು ೯ ಲಕ್ಷ ಹೆಣ್ಣು ಮಕ್ಕಳು ಕಾಣೆಯಾಗಿದ್ದಾರೆ. ಹೆಣ್ಣು ಮಕ್ಕಳು ಹುಟ್ಟುವುದೇ ಇಂದು ದುರ್ಲಭವಾಗುತ್ತಿದೆ. ರಾಜ್ಯದಲ್ಲಿ ೧೫೧ ಲಕ್ಷ ಅನಕ್ಷರಸ್ಥರಿದ್ದಾರೆ. ಸುಮಾರು ೭೦ ಲಕ್ಷ ದಿನಗೂಲಿ ದುಡಿಮೆಗಾರರು 'ಕೂಲಿಯದ್ದರೆ ಕೂಳು' ಎನ್ನುವ ಬದುಕು ದೂಡುತ್ತಿದ್ದಾರೆ. ಅಭಿವೃದ್ಧಿಗೆ ಪರಿಶಿಷ್ಟರ ಕಾಣಿಕೆ ಅಪಾರವಾಗಿದೆ. ಆದರೆ ಅದರಿಂದ ಪರಿಶಿಷ್ಟರಿಗೆ ದೊರಕುತ್ತಿರುವ ಫಲ ನಿಕೃಷ್ಟವಾಗಿದೆ. ಸಮಾಜ ವಿಜ್ಞಾನಿಗಳು ಗುರುತಿಸುವಂತೆ ಇಲ್ಲಿ ಬದಲಾವಣೆಗಳಾಗುತ್ತಿವೆ. ರಾಜ್ಯದಲ್ಲಿ ಅಭಿವೃದ್ಧಿಯಾಗುತ್ತಿದೆ. ಅದು ಪಿರಮಿಡ್ಡಿನ ಮೇಲು ಭಾಗದಲ್ಲಿ ಮಡುಗಟ್ಟಿಕೊಳ್ಳುತ್ತಿದೆ. ವಿಶಾಲವಾದ ಬುಡಮಟ್ಟದಲ್ಲಿ ದುಸ್ಥಿತಿ ತೀವ್ರವಾಗಿದೆ. ಇದೇ 'ಆರೋಹಣವಾದಿ ಅಸಮಾನತೆ.'

ಈ ಪ್ರಬಂಧದಲ್ಲಿ ನಮ್ಮ ಅಭಿವೃದ್ಧಿ ಕಾರ್ಯತಂತ್ರ ಇನ್ನು ಮುಂದೆ ಯಾವುದಿರಬೇಕು ಎಂಬುದರ ಬಗ್ಗೆ ನೇರವಾಗಿ ಏನನ್ನು ಹೇಳಿಲ್ಲ. ಆದರೆ ಅದು ಪ್ರಚ್ಛನ್ನವಾಗಿ ಇಲ್ಲಿ ಕೆಲಸ ಮಾಡಿದೆ. ಸಮಾಜದಲ್ಲಿ ವಂಚಿತರಾಗಿದ್ದಾರೆ. ಅಲಕ್ಷಿತರಾರಿದ್ದಾರೆ, ಅಂಚಿನಲ್ಲಿರುವವರು ಯಾರಿದ್ದಾರೆ ಅವರ ಪದತಲದಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ. ರಾಜ್ಯವು ಆಹಾರ ಭದ್ರತೆಯಿಂದ ಕಂಗೊಳಿಸುತ್ತಿರಬಹುದು.

ಅದು ಜನರ ಆಹಾರ ಭದ್ರತೆಯಾಗಿ ಪರಿವರ್ತನೆಯಾಗುವ ಅಗತ್ಯವಿದೆ. ಇನ್ನು ಮುಂದೆ ನಮ್ಮ ಅಭಿವೃದ್ಧಿ ಕಾರ್ಯತಂತ್ರವು ಅದರ ವ್ಯಾಪ್ತಿ ಮತ್ತು ಹರವನ್ನು ವಿಸ್ತೃತಗೊಳಿಸುವ ಸ್ವರೂಪದಲ್ಲಿರಬೇಕು. ಅಭಿವೃದ್ಧಿಯ ಮೂಲ ದ್ರವ್ಯ ಹಾಗೂ ಅದರ ಗುರಿ ಜನರ ಧಾರಣಶಕ್ತಿಯ ವರ್ಧನೆಯಾಗಿರಬೇಕು. ಅಭಿವೃದ್ಧಿಯ ಕಾರ್ಯತಂತ್ರ ಲಿಂಗಸ್ಪಂದಿಯಾಗಬೇಕಾಗುತ್ತದೆ. ಹಿಂದುಳಿದ ಪ್ರದೇಶಗಳಲ್ಲಿನ ಹಿಂದುಳಿದ ಜನರ ಬಗ್ಗೆ ಗಮನಹರಿಸ ಬೇಕಾಗುತ್ತದೆ.

ನೀರಾವರಿ ಬಗ್ಗೆ, ನೀರಾವರಿ ಯೋಜನೆಗಳ ಬಗ್ಗೆ ಕಳೆದ ೫೦ ವರ್ಷಗಳಿಂದ ನಾವು ಹೆಣಗಾಡಿದ್ದೇವೆ. ಅದು ಇನ್ನು ಸಾಕು. ಒಣಭೂಮಿ ಬೇಸಾಯದಲ್ಲಿ ನಿರತರಾಗಿರುವ ರೈತಾಪಿಗಳು ಇನ್ನು ಮುಂದೆ ನಮ್ಮ ಅಭಿವೃದ್ಧಿ ಕಾರ್ಯತಂತ್ರದ ಗುರಿಯಾಗಬೇಕು. ಇಂಗ್ಲಿಷ್ ಅನ್ನು ನಮ್ಮ ಮಕ್ಕಳು ಯಾವ ತರಗತಿಯಿಂದ ಕಲಿಯಬೇಕು ಎಂಬುದಕ್ಕಿಂತ ನಮ್ಮ ಗಮನ ಇನ್ನು ಮುಂದೆ ಪ್ರಾಥಮಿಕ ಶಾಲೆಗಳ, ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳ ಗುಣಮಟ್ಟದ ಬಗ್ಗೆ ಹೆಚ್ಚು ಗಮನಹರಿಸಬೇಕಾಗಿದೆ. 'ಎಲ್ಲರಿಗೂ ಆರೋಗ್ಯ' ಎಂಬ ಘೋಷಣೆ ಸರಿಯಿರಬಹುದು. ಆದರೆ ಆರೋಗ್ಯ ಭಾಗ್ಯದಿಂದ ವಂಚಿತರಾಗಿರುವ ಜನರು ನಮ್ಮ ಆರೋಗ್ಯ ನೀತಿಯ ಮೂಲದ್ರವ್ಯವಾಗಬೇಕು. ಕಳೆದ ೫೦ ವರ್ಷಗಳ ನಮ್ಮ ಅಭಿವೃದ್ಧಿಯ ಅನುಭವಗಳ ಮೌಲ್ಯಮಾಪನಕ್ಕೆ ಮತ್ತು ಅದರ ಆಧಾರದ ಮೇಲೆ ಮುಂದಿನ ಅಭಿವೃದ್ಧಿಯ ಕಾರ್ಯತಂತ್ರ ಯಾವುದರಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಲು ಸುವರ್ಣ ಮಹೋತ್ಸವವು ಅನುವು ಮಾಡಿಕೊಡಬೇಕು. ಅಭಿವೃದ್ಧಿ ಕುರಿತಂತೆ ಆತ್ಮಾವಲೋಕನ ನಡೆಯಬೇಕು. ಅದರ ಆಧಾರದ ಮೇಲೆ ಮುಂದಿನ ಅಭಿವೃದ್ಧಿಯ ಕಾರ್ಯತಂತ್ರ ರೂಪುಗೊಳ್ಳಬೇಕು. ಮಧ್ಯಮಗತಿ ಅಭಿವೃದ್ಧಿಯನ್ನು ನಾವು ಮುಂದೆ ದೃತಗತಿ ಮಾಡುತ್ತೇವೆಯೋ ಇಲ್ಲವೋ ಅದು ಮುಖ್ಯವಲ್ಲ. ಆದರೆ ಅದು ಜನಮುಖಿಯಾಗುತ್ತದೆಯೋ - ಸಮಾಜಮುಖಿಯಾಗುತ್ತಿದೋ ಇಲ್ಲವೋ ಎಂಬುದು ಮುಖ್ಯವಾಗಬೇಕು.

## ೪. ಬುಡಕಟ್ಟು ಅಭಿವೃದ್ಧಿ: ಕೆಲವು ಟಿಪ್ಪಣಿಗಳು

೧. ಭಾರತದ ಸಂದರ್ಭದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕಾರ್ಯ ಕ್ರಮಗಳಿವೆ ವಿನಾ ಬುಡಕಟ್ಟು ಅಭಿವೃದ್ಧಿ ನೀತಿ ಎಂಬುದೇನೂ ಇಲ್ಲ. 'ನೀತಿ' ಬೇರೆ 'ಕಾರ್ಯಕ್ರಮ' ಬೇರೆ. 'ನೀತಿ' ಅಂದರೆ ಪ್ರಜ್ಞಾಪೂರ್ವಕವಾಗಿ ರೂಪಿಸಿದ ಉದ್ದೇಶಗಳನ್ನು ಒಳಗೊಂಡ ಒಂದು ಕಾಯಕಲ್ಪ. ಈ ಕಾಯಕಲ್ಪದ ಉದ್ದೇಶಗಳನ್ನು ಈಡೇರಿಸಲು ಇರುವ ಚಟುವಟಿಕೆಗಳೇ 'ಕಾರ್ಯಕ್ರಮ'. ಬುಡಕಟ್ಟು ಜನರನ್ನು ಗಮನದಲ್ಲಿಟ್ಟುಕೊಂಡು ಅವರ ಸಾಂಸ್ಕೃತಿಕ ಭಿನ್ನತೆ - ಅನನ್ಯತೆ, ಅವರ ಕಾರ್ಯಕ್ಷೇತ್ರ, ಅವರ ಕಸಬು ಇವುಗಳ ಹಿನ್ನೆಲೆಯಲ್ಲಿ ಅವರ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮ ಅಭಿವೃದ್ಧಿ ಮೀಮಾಂಸೆಯಲ್ಲಿ ಇಲ್ಲ. ಅಭಿವೃದ್ಧಿಯನ್ನು ಕುರಿತಂತೆ 'ನೀತಿ'ಯಿದೆ. ಬುಡಕಟ್ಟು ಅಭಿವೃದ್ಧಿಯೆನ್ನುವುದು ಅಭಿವೃದ್ಧಿ ನೀತಿಯ ಒಂದು ಭಾಗವೇ ವಿನಾ ಅದೇ ನೀತಿಯಲ್ಲ. ಈ ಕಾರಣಕ್ಕೆ ಬುಡಕಟ್ಟು ಅಭಿವೃದ್ಧಿಯೆನ್ನುವುದು ಕೇವಲ ಕಾರ್ಯಕ್ರಮವೇ ವಿನಾ ಅದೇನೂ 'ನೀತಿ'ಯಲ್ಲವೆಂದು ಹೇಳಬೇಕಾಗಿದೆ.

ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಿರುವ ಕ್ರಮವನ್ನು ನೋಡಿದರೆ ಅಲ್ಲಿ ಸೈದ್ಧಾಂತಿಕ ವಾಗಿಯೇ ಬುಡಕಟ್ಟು ಅಭಿವೃದ್ಧಿ ನೀತಿಯೆಂಬುದು ಸಾಧ್ಯವಿಲ್ಲವಾಗಿದೆ. ಇಡೀ ರಾಷ್ಟ್ರದ ಅಭಿವೃದ್ಧಿಯಲ್ಲಿ ಬುಡಕಟ್ಟುಗಳು ಅಂತರ್ಗತ ಭಾಗವೇ ಆಗಿರುವಾಗ ಅವುಗಳ ಅಭಿವೃದ್ಧಿಯನ್ನು ಪ್ರತ್ಯೇಕವಾಗಿ ಪರಿಭಾವಿಸಿಕೊಳ್ಳುವ ಪ್ರಮೇಯ ಉದ್ಭವಿಸುವುದೇ ಇಲ್ಲ. ಇಡೀ ರಾಷ್ಟ್ರದ ಅಭಿವೃದ್ಧಿಯಲ್ಲಿ ಬುಡಕಟ್ಟುಗಳು 'ಲೀನ'ವಾಗಿ ಹೋಗಬೇಕಾಗಿರುವುದರಿಂದ ಅವುಗಳ ಪ್ರತ್ಯೇಕ ಅಸ್ತಿತ್ವವನ್ನು ಒಪ್ಪಿಕೊಳ್ಳುವುದೇ ಅಲ್ಲಿ ಸಾಧ್ಯವಿಲ್ಲ.

೨. ನಾಗರಿಕ ಸಮಾಜ - ಬುಡಕಟ್ಟು ಸಮಾಜ ಎಂಬ ನುಡಿಗಳನ್ನು ಬಳಸಲಾಗುತ್ತಿದೆ. ಇವೆರಡರ ನಡುವಿನ ಸಂಬಂಧವು ಶ್ರೇಣೀಕೃತವಾದುದಾಗಿದೆ. ನಾಗರಿಕ ಸಮಾಜದ ಸಾಧನೆಯು ಉನ್ನತ ಮಟ್ಟದ್ದಾದರೆ ಬುಡಕಟ್ಟು ಸಮಾಜದ ಸಾಧನೆ ಕೆಳಕಮಟ್ಟದ್ದಾಗಿದೆ. 'ನಾಗರಿಕ' ಮತ್ತು 'ಪ್ರಜೆ' ಎಂಬ ನುಡಿಗಳನ್ನು ಒಂದೇ ಅರ್ಥದಲ್ಲಿ ಬಳಸುವುದು ರೂಢಿಯಲ್ಲಿದೆ. ಇವು ರಾಜಕೀಯ ಪ್ರಭುತ್ವಕ್ಕೆ ಸಂಬಂಧಿಸಿದ ಪರಿಭಾವನೆಗಳಾಗಿವೆ. 'ನಾಗರಿಕ'ದ ಅರ್ಥವ್ಯಾಪ್ತಿಯು 'ಪ್ರಜೆ'ಯ ಅರ್ಥವ್ಯಾಪ್ತಿಗಿಂತ ವಿಶಾಲವಾದುದಾಗಿದೆ. ಒಂದು ನಿರ್ದಿಷ್ಟ ಭೌಗೋಳಿಕ ಗಡಿಯಲ್ಲಿ ಸ್ಥಾಪಿತವಾದ ರಾಷ್ಟ್ರಪ್ರಭುತ್ವವೊಂದರ ಸದಸ್ಯರನ್ನು ಪ್ರಜೆಗಳು ಎಂದು ಕರೆಯಲಾಗುತ್ತದೆ. ರಾಷ್ಟ್ರ ಪ್ರಭುತ್ವವಿಲ್ಲದೆ ಪ್ರಜೆಗಳಿರಲು ಸಾಧ್ಯವಿಲ್ಲ. 'ನಾಗರಿಕ' ಎಂಬುದು ಪ್ರಜೆ ಎಂಬುದರ ಅರ್ಥವನ್ನು ಹೊಂದಿದ. ಆದರೆ ಈ ನುಡಿಯು ಪ್ರಜೆಯಲ್ಲದೆ ಅನ್ಯ ಅರ್ಥಗಳನ್ನು ಹೊಂದಿದೆ. ಅದೊಂದು ಮೌಲ್ಯ ನಿರ್ದಿಷ್ಟ ನುಡಿಯಾಗಿದೆ. ಅದೊಂದು ಗುಣ. ವಾಸ್ತವವಾಗಿ 'ನಾಗರಿಕ' ಎಂಬುದು ಬುಡಕಟ್ಟಿನ ವಿರುದ್ಧವಾಗಿ ಬಳಸಲಾಗುತ್ತಿದೆ. ಏಕೆಂದರೆ 'ನಾಗರಿಕ' ಎಂಬುದು ನಾಗರಿಕತೆ ಎಂಬ ಸಂಗತಿಯ ಜೊತೆ ಸಂಬಂಧ ಹೊಂದಿದೆ.

ನಾಗರಿಕರು ಎಂದರೆ ಅವರು ಅಕ್ಷರಸ್ಥರಾಗಿರುತ್ತಾರೆ, ಶಿಕ್ಷಿತರಾಗಿರುತ್ತಾರೆ. ಒಂದು ವೃತ್ತಿಯಲ್ಲಿ ಪರಿಣತರಾಗಿರುತ್ತಾರೆ. ಅವರೆಲ್ಲ ಒಂದು ಸಾಮಾಜಿಕ ಗುಂಪಿಗೆ ಸೇರಿರುತ್ತಾರೆ. ಅವರು ಬಹುಭಾಷಿಕರಾಗಿರುತ್ತಾರೆ. ರಾಷ್ಟ್ರಪ್ರಭುತ್ವವು ಕೊಡಮಾಡಿದ ಹಕ್ಕುಗಳು ಹಾಗೂ ಅದು ನಿಯಮಿಸಿದ ಕರ್ತವ್ಯಗಳೂ ಅವರಿಗೆ ಇರುತ್ತವೆ. 'ನಾಗರಿಕ'ದ ಒಂದು ಬಹುಮುಖ್ಯ ಲಕ್ಷಣವೆಂದರೆ ನಾಗರಿಕನು 'ವ್ಯಕ್ತಿ'ಯಾಗಿರುತ್ತಾನೆ.

ಈ ಎಲ್ಲ ಗುಣಗಳಿಗೆ ವಿರುದ್ಧವಾದುದೇ ಬುಡಕಟ್ಟು ಅದೊಂದು ಕುಲಸಂಬಂಧಿ ಸಂಗತಿಯಾಗಿದೆ. ಅಲ್ಲಿ ಒಂದು ಭಾಷೆ ಮಾತ್ರ ಇರಬಲ್ಲುದಾಗಿದೆ. ಅಲ್ಲಿ 'ಸಮುದಾಯ' ಮುಖ್ಯವಾಗಿರುತ್ತದೆ. ವ್ಯಕ್ತಿಯು ಸಮುದಾಯಕ್ಕೆ ನಿಷ್ಠನಾಗಿರಬೇಕಾಗುತ್ತದೆ. ಸಮುದಾಯ ನಿಯಮಿಸುವ ಕಟ್ಟಳೆಗಳಿಗೆ ವ್ಯಕ್ತಿ ಬದ್ಧನಾಗಿರಬೇಕಾಗುತ್ತದೆ.

೩. ಬುಡಕಟ್ಟು ಜನಾಂಗವೆಂದರೆ ಯಾರು? ಇದು ಸರಳವಾದ ಪ್ರಶ್ನೆಯಲ್ಲ. ಭಾರತದಲ್ಲಿ ಬುಡಕಟ್ಟುಗಳೇ ಇಲ್ಲ ಎಂಬ ವಾದದಿಂದ ಹಿಡಿದು ಅನೇಕ ಬುಡಕಟ್ಟುಗಳ ವಾಸಸ್ಥಾನ ಭಾರತ ಎನ್ನುವವರೆಗೆ ಬುಡಕಟ್ಟು ಜನಾಂಗದ ನಿರ್ವಚನದ ವ್ಯಾಪ್ತಿ ಹರಡಿದೆ. ಬುಡಕಟ್ಟುತನವೆನ್ನುವುದು ಆಧುನಿಕಪೂರ್ವ ಸ್ಥಿತಿ. ಬುಡಕಟ್ಟುಗಳು ತಮ್ಮ ಆಧುನಿಕಪೂರ್ವ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ ವಿಕಾಸ ಹೊಂದಲೇ ಬೇಕಾಗುತ್ತದೆ. ಬುಡಕಟ್ಟುತನವೆನ್ನುವುದು ನಾಗರಿಕತೆಯ ವಿಕಾಸದಲ್ಲಿ ಒಂದು ಹಂತವಾಗಿದೆ.

ಬುಡಕಟ್ಟುತನವೆನ್ನುವುದು ಆಧುನಿಕಪೂರ್ವ ಸ್ಥಿತಿಯೆ? ಬುಡಕಟ್ಟುತನ ಹಾಗೂ ಆಧುನಿಕತೆಗಳು ಒಟ್ಟಿಗೆ ಇರಲು ಸಾಧ್ಯವಿಲ್ಲವೆ? ಆಧುನಿಕತೆಯ ಪ್ರಕ್ರಿಯೆಯಲ್ಲಿ ಬುಡಕಟ್ಟುಗಳ ಅಸ್ತಿತ್ವ ಇಲ್ಲವಾಗುತ್ತದೆಯೆ? ಇಂತಹ ಪ್ರಶ್ನೆಗಳನ್ನು ಕೇಳಿಕೊಂಡಾಗ ಉತ್ತರ ಸರಳವಾಗಿರುವುದಿಲ್ಲ. ಆಧುನಿಕತೆ ಹಾಗೂ ಬುಡಕಟ್ಟುಗಳು ಒಟ್ಟಿಗೆ ಬದುಕುತ್ತಿರುವ ಸ್ಥಿತಿಯನ್ನು ಇಂದು ನಾವು ನೋಡಬಹುದಾಗಿದೆ. ಆಧುನಿಕತೆ ಹಾಗೂ ಬುಡಕಟ್ಟುಗಳು ಪರಸ್ಪರ ವಿರುದ್ಧವಾದ ಸಂಗತಿಗಳಾಗಬೇಕಾಗಿಲ್ಲ. ನಾಗರಿಕತೆಯನ್ನು ರೇಖಾತ್ಮಕವಾಗಿ ಪರಿಭಾವಿಸಿಕೊಳ್ಳುವವರು ಮಾತ್ರ ಆಧುನಿಕಪೂರ್ವ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ ಪರಿವರ್ತನೆಯಾದಾಗ ಬುಡಕಟ್ಟುತನವು ಇಲ್ಲವಾಗುತ್ತದೆ ಅಥವಾ ನಶಿಸುತ್ತದೆ ಎಂದು ವಾದಿಸಬಲ್ಲರು. ಬುಡಕಟ್ಟುಗಳು ಆಧುನಿಕತೆಯೊಂದಿಗೆ ಸಹ ಜೀವನ ನಡೆಸುತ್ತಿರುವ ಸಂಗತಿಯು ನಮ್ಮ ಮುಂದಿದೆ.

೪. ಅಭಿವೃದ್ಧಿಯನ್ನು ಚಾರ್ಲ್ಸ್‌ಡಾರ್ವಿನ್ನನ ವಿಕಾಸವಾದದ ಹಿನ್ನೆಲೆಯಲ್ಲಿ ರೇಖಾತ್ಮಕವಾಗಿ ಪರಿಭಾವಿಸಿಕೊಂಡು ಬರಲಾಗಿದೆ. ಅಭಿವೃದ್ಧಿಯನ್ನು ರಾಷ್ಟ್ರಪ್ರಭುತ್ವದ ಒಂದು ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ವಾಸ್ತವವಾಗಿ ರಾಷ್ಟ್ರಪ್ರಭುತ್ವ ಮತ್ತು ಅಭಿವೃದ್ಧಿ ಮೀಮಾಂಸೆಗಳು ಜೊತೆಜೊತೆಯಾಗಿ ರೂಪುಗೊಂಡ ಸಂಗತಿಗಳಾಗಿವೆ. ಇದಿಷ್ಟೇ ಅಲ್ಲ, ಆಧುನಿಕತೆಯೆಂಬ ವಿಚಾರ ಪ್ರಣಾಳಿಕೆಯೂ ಕೂಡ ರಾಷ್ಟ್ರಪ್ರಭುತ್ವ ಮತ್ತು ಅಭಿವೃದ್ಧಿ ಮೀಮಾಂಸೆಗಳ ಜೊತೆ ಬೆಳೆದ ಸಿದ್ಧಾಂತವಾಗಿದೆ. ಇವು ಮೂರು ಕಳೆದ ೫೦ - ೬೦ ವರ್ಷಗಳ

ಕಾಲ ವಿಶ್ವದ ರಾಜಕೀಯ - ಆರ್ಥಿಕ - ಸಾಮಾಜಿಕ - ಸಾಂಸ್ಕೃತಿಕ ಸಂಗತಿಗಳನ್ನು ನಿಯಂತ್ರಿಸುತ್ತಾ, ಪ್ರಭಾವಿಸುತ್ತಾ, ರೂಪಿಸುತ್ತಾ ಬಂದ ಮಹಾಸಂಕಥನಗಳಾಗಿವೆ. ರಾಷ್ಟ್ರಪ್ರಭುತ್ವವೆನ್ನುವುದು ರಾಜಕೀಯ ಪರಿಭಾಷೆಗೆ ಸೇರಿದ ಸಂಗತಿಯಾದರೆ ಅಭಿವೃದ್ಧಿ ಮೀಮಾಂಸೆಯು ಆರ್ಥಿಕ ಜಗತ್ತಿಗೆ ಸೇರಿದ ಸಂಗತಿಯಾಗಿದೆ. ಆಧುನಿಕತೆಯೆಂಬುದು ಸಮಾಜಶಾಸ್ತ್ರದ ವಿಷಯವ್ಯಾಪ್ತಿಯಲ್ಲಿ ಒಂದು ವಿಚಾರ ಪ್ರಣಾಳಿಕೆಯಲ್ಲಿ ರೂಪುತಳೆದ ಸಂಕಥನವಾಗಿದೆ. ಈ ಮೂರು ಮಹಾಸಂಕಥನಗಳ ಚೌಕಟ್ಟಿನಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕಾಗಿದೆ. ಈ ಮೂರು ಮಹಾಸಂಕಥನಗಳು ತಾತ್ವಿಕವಾಗಿ ಅಖಂಡವಾದಿ - ಅಭಿನ್ನವಾದಿ - ವಿಶ್ವಾತ್ಮಕ ವಿಚಾರ ಪ್ರಣಾಳಿಕೆಗಳಾಗಿವೆ. ಈ ಸಂಕಥನಗಳ ಅಖಂಡ ಸ್ವರೂಪವು ನಮಗೆ ಬಹಳ ಮುಖ್ಯವಾಗಿದೆ. ಈ ಮೂರು ಸಂಕಥನಗಳು ಪರಸ್ಪರವಾಗಿ ರೂಪ ಪಡೆಯುತ್ತಾ ಬಂದಿವೆ.

ಆರಂಭದಿಂದಲೂ ಅಭಿವೃದ್ಧಿಯನ್ನು ವರಮಾನದ ಚೌಕಟ್ಟಿನಲ್ಲಿ ಪರಿಭಾವಿಸಿಕೊಂಡು ಬರಲಾಗಿದೆ. ಒಂದು ದೇಶ/ರಾಷ್ಟ್ರದ ವರಮಾನದ ವರ್ಧನೆಯೇ ಅಭಿವೃದ್ಧಿ. ಭಾರತದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ನೀತಿ - ನಿರೂಪಣೆ - ನಿರ್ಣಯಿಸುವ ಎರಡೂ ಸಂಸ್ಥೆಗಳು ರಾಷ್ಟ್ರ ಮಟ್ಟದ ಸಂಸ್ಥೆಗಳಾಗಿವೆ. ಮೊದಲನೆಯದು ರಾಷ್ಟ್ರೀಯ ಯೋಜನಾ ಆಯೋಗ, ಎರಡನೆಯದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ. ಇವೆರಡೂ ಸಂಸ್ಥೆಗಳ ಹೆಸರುಗಳಲ್ಲಿರುವ ರಾಷ್ಟ್ರೀಯ ಎನ್ನುವುದು ಅಭಿವೃದ್ಧಿಯ ಅಖಂಡ ಸ್ವರೂಪವನ್ನು ಸೂಚಿಸುತ್ತದೆ. ಇದೇ ರೀತಿ ಅಭಿವೃದ್ಧಿಯ ಮಾಪನವಾದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿ.ಎನ್.ಪಿ.) ದಲ್ಲಿನ ರಾಷ್ಟ್ರೀಯ ಕೂಡ ಅಭಿವೃದ್ಧಿ ಮೀಮಾಂಸೆಯ ಅಖಂಡ ಸ್ವರೂಪವನ್ನು ಸೂಚಿಸುತ್ತದೆ. ಹೀಗೆ ಪರಿಭಾವಿಸಿಕೊಂಡ ಅಭಿವೃದ್ಧಿ ಮೀಮಾಂಸೆಯಲ್ಲಿ, ಅಭಿವೃದ್ಧಿ ನೀತಿಯಲ್ಲಿ 'ಬುಡಕಟ್ಟು ಅಭಿವೃದ್ಧಿ' ಎಂಬುದಕ್ಕೆ ಯಾವುದೇ ಅರ್ಥವೂ ಇಲ್ಲವಾಗಿದೆ.

೫. ಅಭಿವೃದ್ಧಿ ಮೀಮಾಂಸೆಯು ಎರಡು ಮುಖ್ಯಧಾರೆಗಳಲ್ಲಿ ಬೆಳೆದುಕೊಂಡು ಬಂದಿದೆ. ಮೊದಲನೆಯದು ಬಂಡವಾಳಶಾಹಿ ವಿಚಾರ ಪ್ರಣಾಳಿಕೆ ಮತ್ತು ಎರಡನೆಯದು ಮಾರ್ಕ್ಸ್‌ವಾದಿ ವಿಚಾರ ಪ್ರಣಾಳಿಕೆ ಇವೆರಡೂ ಧಾರೆಗಳೂ ಮೂಲತಃ ಅಖಂಡವಾದಿ ಧಾರೆಗಳಾಗಿವೆ. ಇವೆರಡೂ ರಾಷ್ಟ್ರೀಯವಾದಿ ವಿಚಾರಧಾರೆಗಳಾಗಿವೆ. ರಾಷ್ಟ್ರಪ್ರಭುತ್ವದ ನೆಲೆಯಲ್ಲಿ ಎರಡೂ ವಿಚಾರಧಾರೆಗಳು ಬೆಳೆದುಕೊಂಡು ಬಂದಿವೆ. ಈ ಕಾರಣದಿಂದಾಗಿ ಅಲ್ಲಿ ಬುಡಕಟ್ಟುಗಳ ಕುಲಸಂಬಂಧಗಳಿಗೆ ಅವಕಾಶವಿಲ್ಲವಾಗಿದೆ. ಇವೆರೆಡೂ ವಿಚಾರ ಧಾರೆಗಳಲ್ಲಿ ಬುಡಕಟ್ಟುಗಳನ್ನು 'ಆಧುನಿಕಪೂರ್ವ' ಹಂತವೆಂದು ಪರಿಗಣಿಸಲಾಗಿದೆ. ಮಾರ್ಕ್ಸ್‌ವಾದಿಗಳಿಗೆ 'ಸಾಮಾಜಿಕ ವರ್ಗ' ಮುಖ್ಯವಾಗಿದ್ದರೆ, ಬಂಡವಾಳಶಾಹಿ ವ್ಯವಸ್ಥೆಗೆ 'ಶ್ರಮ' ಮತ್ತು 'ಬಂಡವಾಳ' ಮುಖ್ಯವಾಗಿವೆ. ಅಲ್ಲಿ ಬುಡಕಟ್ಟುಗಳಿಗೆ ಅಸ್ತಿತ್ವವೇ ಇಲ್ಲವಾಗಿದೆ.

ಅಭಿವೃದ್ಧಿ ಮೀಮಾಂಸೆಯು ಕಳೆದ ೫ - ೬ ದಶಕಗಳಲ್ಲಿ ಅನೇಕ ಪಲ್ಲಟ - ಪರಿವರ್ತನೆಗಳನ್ನು ಕಂಡಿದೆ. ಪರ್ಯಾಯ ಸಂಕಥನಗಳು ಹುಟ್ಟಿವೆ. ಈ ಬಗೆಯ ವಿಚಾರ ಪ್ರಣಾಳಿಕೆಯಲ್ಲಿ ಒಮ್ಮೆ 'ಮೂರನೆಯ ವಿಶ್ವ' ಕೇಂದ್ರಬಿಂದುವಾದರೆ, 'ಪರಿಸರ' ಇನ್ನೊಮ್ಮೆ ಪ್ರಧಾನ ವಿಷಯ ವಸ್ತುವಾಗಿದೆ. 'ಜನಸಂಖ್ಯೆ'ಯು ಮಗದೊಮ್ಮೆ ಚರ್ಚೆಯ ಮುಂಚೂಣಿಗೆ ಬಂದಿದೆ. 'ಸುಸ್ಥಿರಗತಿ ಬೆಳವಣಿಗೆ' ಬಗ್ಗೆ ಒಮ್ಮೆ ಆಸಕ್ತಿ ಸ್ಫೋಟವಾದರೆ ಮತ್ತೊಮ್ಮೆ 'ಲಿಂಗ ಸಂಬಂಧಗಳು' ಅಧ್ಯಯನದ ಆದ್ಯತಾ ವಿಷಯಗಳಾಗಿ ಬಿಟ್ಟಿವೆ. ಆದರೆ ಈ ಯಾವುದೇ ಪಲ್ಲಟ - ಪರಿವರ್ತನೆ - ಪರ್ಯಾಯಗಳಲ್ಲಿ ಬುಡಕಟ್ಟುಗಳು ಕೇಂದ್ರ ಸ್ಥಾನಕ್ಕೆ ಬಂದುದಿಲ್ಲ. ಎಲ್ಲ ಧಾರೆಗಳಲ್ಲೂ, ಎಲ್ಲ ವಿಚಾರ ಪ್ರಣಾಳಿಕೆಗಳಲ್ಲೂ, ಪರ್ಯಾಯ ಚಿಂತನೆಗಳಲ್ಲೂ ಬುಡಕಟ್ಟುಗಳನ್ನು ಪ್ರಧಾನಧಾರೆಯಲ್ಲಿ 'ಲೀನ'ಗೊಳಿಸುವ 'ವಿಲೀನ'ಗೊಳಿಸುವ ಸಂಗತಿಗಳಿಗೆ ಮನ್ನಣೆ ನೀಡಲಾಗಿದೆ.

**೬. ಎತ್ನೋಸೈಡ್ ಮತ್ತು ಎತ್ನೋಡೆವಲಪ್‌ಮೆಂಟ್**

ಬುಡಕಟ್ಟುಗಳ ದೃಷ್ಟಿಯಿಂದ ಅಭಿವೃದ್ಧಿ ಎನ್ನುವುದು ಅಮೃತಸೇಚನವಾಗುವುದಕ್ಕೆ ಪ್ರತಿಯಾಗಿ ವಿಷಪ್ರಾಶನವಾಗಿಬಿಟ್ಟಿದೆ. ಬುಡಕಟ್ಟುತನವನ್ನು ಇಲ್ಲವಾಗಿಸುವುದೇ ಅಭಿವೃದ್ಧಿಯ ಕಾರ್ಯತಂತ್ರವಾಗಿ ಬಿಟ್ಟಿದೆ. ಜಗತ್ತಿನ ಚರಿತ್ರೆಯಲ್ಲಿ ರಾಷ್ಟ್ರೀಯತೆಯ ಹೆಸರಿನಲ್ಲಿ

ಜನಸಮೂಹವನ್ನು ನಾಶ ಮಾಡಿದ ಉದಾಹರಣೆಗಳು ದೊರೆಯುತ್ತವೆ. ಅದನ್ನು 'ಜಿನೋಸೈಡ್' ಎಂದು ಕರೆಯುತ್ತಾರೆ. ಅದೊಂದು ಹತ್ಯಾಕಾಂಡ. ಇಂತಹ ಜೀವವಿರೋಧಿ ಸಂಗತಿ ಬಗ್ಗೆ ಜನರ ವಿರೋಧ ಪ್ರಕಟಗೊಂಡಿದೆ. ಇದನ್ನು ಅಂತಾ ರಾಷ್ಟ್ರೀಯ ಮಟ್ಟದಲ್ಲಿ 'ಅಪರಾಧ'ವೆಂದು ಘೋಷಿಸಲಾಗಿದೆ. ಆದರೆ ಬುಡಕಟ್ಟುಗಳ ಸಾಂಸ್ಕೃತಿಕ ಅನನ್ಯತೆ - ಸ್ವಾಯತ್ತತೆಯ ನಾಶವನ್ನು ಅಪರಾಧವೆಂದು ಪರಿಗಣಿಸಲ್ಲ. ಇದನ್ನೇ ಇಲ್ಲಿ 'ಎತ್ನೋಸೈಡ್' ಎಂದು ಕರೆಯಲಾಗಿದೆ. ಏಕತೆ - ಐಕ್ಯತೆ - ಏಕರೂಪಗಳ ಹೆಸರಿನಲ್ಲಿ ರಾಷ್ಟ್ರಪ್ರಭುತ್ವಗಳು ಬುಡಕಟ್ಟುಗಳ ಬುಡಕಟ್ಟುತನವನ್ನು ನಾಸಮಾಡುವ ಕ್ರಿಯೆಯಲ್ಲಿ ತೊಡಗಿವೆ. ಯುರೂಪಿನ ಅನೇಕ ದೇಶಗಳಲ್ಲಿ ಹೀಗೆ ಬುಡಕಟ್ಟುಗಳನ್ನು ರಾಷ್ಟ್ರೀಯತೆ ಹೆಸರಿನಲ್ಲಿ ನಾಶ ಮಾಡಿರುವುದಕ್ಕೆ ದಂಡಿಯಾಗಿ ಉದಾಹರಣೆಗಳು ದೊರೆಯುತ್ತವೆ. ಇಂಗ್ಲೆಂಡ್‌ನಂತಹ ಪ್ರೌಢ ಜನತಂತ್ರ ವ್ಯವಸ್ಥೆಗೆ ಬುಡಕಟ್ಟು ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಇಂದಿಗೂ ಸಾಧ್ಯವಾಗಿಲ್ಲ.

ಈ ಬಗೆಯ ಎತ್ನೋಸೈಡ್‌ಗೆ ಪ್ರತಿಯಾಗಿ ಎತ್ನೋಡೆವಲಪ್‌ಮೆಂಟ್ ನುಡಿಯನ್ನು ಬಳಸಲಾಗುತ್ತಿದೆ. ಬುಡಕಟ್ಟು ಅಭಿವೃದ್ಧಿಯನ್ನು ಒಂದು ರಾಷ್ಟ್ರಪ್ರಭುತ್ವದೊಳಗಿರುವ ಬುಡಕಟ್ಟು ಜನರ ಸ್ವಾಯತ್ತವಾದಿ ಅಭಿವೃದ್ಧಿ ಎಂದು ನಿರ್ವಚಿಸಬಹುದಾಗಿದೆ. ಬುಡಕಟ್ಟು ಅಭಿವೃದ್ಧಿಯು ರೇಖಾತ್ಮಕ - ಅಖಂಡವಾದಿ - ಅಭಿನ್ನವಾದಿ - ಏಕರೂಪ ವಿಚಾರ ಪ್ರಣಾಳಿಕೆಗೆ ವಿರುದ್ಧವಾದ ಒಂದು ವಿಚಾರಧಾರೆಯಾಗಿದೆ. ಅಲ್ಲಿ ಅಭಿವೃದ್ಧಿ ಅನ್ನೋದು ಬಹುರೂಪಿಯೂ, ಬಹುಮುಖಿಯೂ ಆದುದಾಗಿರುತ್ತದೆ. ಆಧುನಿಕ ಪೂರ್ವ, ಆಧುನಿಕ ಮತ್ತು ಆಧುನಿಕೋತ್ತರ - ಇವು ಮೂರು ಏಕಕಾಲದಲ್ಲಿ ಒಂದು ರಾಷ್ಟ್ರ ಪ್ರಭುತ್ವದೊಳಗೆ ಅಸ್ತಿತ್ವದಲ್ಲಿರಲು ಸಾಧ್ಯ.

ಸಮಾಜ, ಆರ್ಥಿಕತೆ, ರಾಕಾರಣಗಳು ಮತ್ತು ಜ್ಞಾನಶಿಸ್ತುಗಳು ಬುಡಕಟ್ಟುಗಳನ್ನು ಅಧ್ಯಯನ ಮತ್ತು ವಿಷಯ ವಸ್ತುವನ್ನಾಗಿ ಮಾಡಿಕೊಳ್ಳುವುದರಲ್ಲಿ ವಿಫಲವಾಗಿವೆ. ಅಭಿವೃದ್ಧಿ ಮೀಮಾಂಸೆಯಲ್ಲಿ ಅಧ್ಯನದ ಮೂಲಮಾನ 'ವ್ಯಕ್ತಿ'ಯೇ ವಿನಾ ಸಮುದಾಯವಲ್ಲ. ಸಮುದಾಯವಾದಿ ಸಂಬಂಧಗಳು ಅಥವಾ ಕುಲಸಂಬಂಧಗಳು ಆಧುನಿಕಪೂರ್ವ ಸ್ಥಿತಿಯನ್ನು ಸೂಚಿಸುತ್ತವೆ. ಇದೊದು ನಾಗರಿಕತೆಯಲ್ಲಿನ - ವಿಕಾಸ ಪಥದಲ್ಲಿನ ಹಂತ ಅದು ಪಲ್ಲಟಗೊಳ್ಳಲೇಬೇಕು. ಈ ಕಾರಣಕ್ಕೆ ಸಮಾಜ ವಿಜ್ಞಾನಗಳು ಬುಡಕಟ್ಟುಗಳನ್ನು ಅಧ್ಯಯನದ ವಿಷಯವನ್ನಾಗಿ ಮಾಡಿಕೊಳ್ಳಲಿಲ್ಲ. ಸಮಾಜ ವಿಜ್ಞಾನಗಳು ಬುಡಕಟ್ಟುಗಳಿಗೆ ಸಂಬಂಧಿಸಿದ ಸಂಗತಿಗಳನ್ನು ತಮ್ಮ ಸಿದ್ಧಾಂತಗಳಲ್ಲಿ ಅಂತರ್ಗತ ಮಾಡಿಕೊಳ್ಳಲಿಲ್ಲ. ಎಲ್ಲ ಬಗೆಯ ಸಮಾಜವಿಜ್ಞಾನಗಳೂ ಸಾಂಸ್ಕೃತಿಕ ಸಂಗತಿಗಳು ಮೂಲತಃ ಸಾಮುದಾಯಿಕವಾಗಿದ್ದವು. ಅಲ್ಲಿ ವ್ಯಕ್ತಿಗಿಂತ ಸಮುದಾಯವು ಕೇಂದ್ರಬಿಂದುವಾಗಿತ್ತು. ವ್ಯಕ್ತಿಯನ್ನು ಮೂಲಘಟಕವನ್ನಾಗಿ ಮಾಡಿಕೊಂಡ ಸಮಾಜ ವಿಜ್ಞಾನಗಳು ಸಮುದಾಯವಾದಿ ಬುಡಕಟ್ಟುಗಳನ್ನು ಸೈದ್ಧಾಂತಿಕವಾಗಿ ಪರಿಗಣಿಸುವುದು ಸಾಧ್ಯವಿರಲಿಲ್ಲ.

೭. ಬುಡಕಟ್ಟುತನವನ್ನು ಹಿಂದುಳಿದಿರುವಿಕೆಯ ಸೂಚಿಯಾಗಿ ಬಳಸುವುದು ರೂಢಿಯಲ್ಲಿದೆ. ಆದರೆ ಆಧುನಿಕಪೂರ್ವ ಸ್ಥಿತಿಯೇ ಅದರ ಹಿಂದುಳಿದಿರುವಿಕೆಯನ್ನು ಸೂಚಿಸುತ್ತದೆ ಎನ್ನಲಾಗಿದೆ. ಕುಲ ಸಂಬಂಧಗಳಿಗೆ ಅಂಟಿಕೊಂಡ ಒಂದು ವ್ಯವಸ್ಥೆ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂದು ಭಾವಿಸಲಾಗಿದೆ. ಬುಡಕಟ್ಟುಗಳು ಅಭಿವೃದ್ಧಿಗಿರುವ ಬಹುದೊಡ್ಡ ಕಂಟಕವೆಂದು ಹೇಳಲಾಗಿದೆ. ಅಲ್ಲಿ ಜನತಾಂತ್ರಿಕ ವ್ಯಕ್ತಿವಾದಿ ಸಂಸ್ಥೆಗಳಿಗೆ ಅವಕಾಶ ಇರುವುದಿಲ್ಲ. ಅಲ್ಲಿಯ ಬದುಕು ಮೂಲತಃ ಜೈವಿಕ ಸ್ವರೂಪದ್ದಾಗಿರುತ್ತದೆ ವಿನಾಃ ವಾಣಿಜ್ಯಿಕವಾಗಿರುವುದಿಲ್ಲ. ಬುಡಕಟ್ಟುತನ ಹಾಗೂ ಜೈವಿಕ ಸ್ವರೂಪ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ವಾಣಿಜ್ಯಿಕ ಮನೋಭಾವವನ್ನು ಮೈಗೂಡಿಸಿಕೊಳ್ಳದೆ ಅಭಿವೃದ್ಧಿ ಸಾಧ್ಯವಿಲ್ಲ. ಈ ಬಗೆಯ ಮನೋಭಾವವೇ ಅಭಿವೃದ್ಧಿಗೆ ಕಂಟಕವಾದುದಾಗಿದೆ. ಬುಡಕಟ್ಟು ಸಮಾಜವು ಸಂಪರ್ಕರಹಿತ ದ್ವೀಪದಂತಹ ಬದುಕನ್ನು ಬಯಸುತ್ತದೆ. ಆದರೆ ಅಭಿವೃದ್ದಿಗೆ ಸಂಪರ್ಕ ಸಂಚಲನೆ ತುಂಬಾ ಮುಖ್ಯ ಆಧುನಿಕ ಯುಗದ ಅಭಿವೃದ್ಧಿಯ ಬಹು ಮುಖ್ಯ ಲಕ್ಷಣವೆಂದರೆ ಚಲನೆ. ಇಡೀ ಸಮಾಜ - ಜನಸ್ತೋಮವೇ ಚಲನೆಯಲ್ಲಿರಬೇಕು. ಆದರೆ ಬುಡಕಟ್ಟುಗಳಲ್ಲಿ ಚಲನೆಗೆ ಅವಕಾಶ ಕಡಿಮೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಬುಡಕಟ್ಟು ಮತ್ತು ಪರಿಸರಗಳ ನಡುವಿನ ಸಂಬಂಧವು ಜೈವಿಕವಾದುದು ಮತ್ತು ಸಾವಯವವಾದುದು. ಆದರೆ ಅಭಿವೃದ್ಧಿ ಮತ್ತು ಪರಿಸರಗಳ ನಡುವಿನ ಸಂಬಂಧ ಆಕ್ರಮಣಕಾರಿಯಾದುದಾಗಿದೆ. ಪ್ರಕೃತಿ ಪರಿಸರ ಇಲ್ಲಿ ಬದುಕಿನ ಅವಿಭಾಜ್ಯ ಅಂಗ.

ಜನರು ಮತ್ತು ಪರಿಸರ ಬೇರೆ ಬೇರೆ ಅಲ್ಲ. ಇವೆರಡರ ನಡುವೆ ಹೊಕ್ಕಳುಬಳ್ಳಿ ಸಂಬಂಧ ಅಲ್ಲಿರುತ್ತದೆ. ಆಧುನಿಕತೆ - ಅಭಿವೃದ್ಧಿ ರಾಷ್ಟ್ರಪ್ರಭುತ್ವಗಳಿಗೆ 'ಬುಡಕಟ್ಟುಗಳು' ನಿವಾರಿಸಿಕೊಳ್ಳಬೇಕಾದ ಒಂದು ಸಂಗತಿಯಾಗಿದೆ. ಆಧುನಿಕತೆಯ ದೃಷ್ಟಿಯಿಂದ ಅವು ಜೈವಿಕವಾಗಿಯೂ - ಅವಾಣಿಜ್ಯೀಕವೂ ಆಗಿವೆ. ರಾಷ್ಟ್ರಪ್ರಭುತ್ವಕ್ಕೆ ಅವು ಏಕತೆಗೆ ಭಿನ್ನವಾದ ಸಂಗತಿಗಳಾಗಿವೆ. ಹೀಗೆ ಕಳೆದ ೧೦೦ ವರ್ಷಗಳಿಂದ ಬೆಳೆದುಕೊಂಡು ಬಂದ ಜ್ಞಾನಶಿಸ್ತುಗಳು ಅಲ್ಲಿ ರೂಪಿತವಾದ ಸಿದ್ಧಾಂತಗಳು ಬುಡಕಟ್ಟುಗಳನ್ನು, ಬುಡಕಟ್ಟು ಸಮಾಜವನ್ನು, ಬುಡಕಟ್ಟು ಸಂಸ್ಕೃತಿಯನ್ನು ಆಧುನಿಕತೆಗೆ ಸವಾಲೆಂಬಂತೆ, ಅಭಿವೃದ್ಧಿಗೆ ಕಂಟಕವೆಂಬಂತೆ, ರಾಷ್ಟ್ರಪ್ರಭುತ್ವಕ್ಕೆ ವಿರುದ್ಧವಾದ ಸಂಗತಿಯೆಂಬಂತೆ ಪರಿಭಾವಿಸಿಕೊಂಡು ಬಂದಿವೆ. ಇಲ್ಲಿ ಬುಡಕಟ್ಟುತನವೆಂಬುದು ಬಿಟ್ಟುಕೊಡಬೇಕಾದ ಒಂದು ಸಂಗತಿಯಾಗಿದೆ.

೮. ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವು ಸಂಘರ್ಷಣಾತ್ಮಕವಾದುದಾಗಿದೆ. ಇವೆರಡರ ನಡುವೆ ಘರ್ಷಣೆಗೆ ಕಾರಣವಾಗಿರುವ ಅನೇಕ ಸಂಗತಿಗಳಿವೆ. ಮೊದಲನೆಯದು ರಾಷ್ಟ್ರ ಪ್ರಭುತ್ವದ 'ಜೀರ್ಣೋಭವ' ಸ್ವರೂಪ. ಅಲ್ಲಿ ಭಿನ್ನತೆಗೆ, ಭಿನ್ನ ಸಂಸ್ಕೃತಿಗಳ ಸಹಜೀವನಕ್ಕೆ ಅವಕಾಶವಿಲ್ಲ. ಅಲ್ಲಿ ಭಿನ್ನತೆಯನ್ನು ವಿಶಿಷ್ಟತೆಯನ್ನು ವಿಚ್ಛಿದ್ರಕಾರಿ ಶಕ್ತಿಯೆಂದು ಪರಿಗಣಿಸಲಾಗುತ್ತದೆ. ರಾಷ್ಟ್ರಪ್ರಭುತ್ವವು ಬುಡಕಟ್ಟುಗಳೆಲ್ಲವೂ ತನ್ನಲ್ಲಿ 'ಜೀರ್ಣ'ವಾಗಿ ಬಿಡಬೇಕು, 'ಲೀನ'ವಾಗಿ ಬಿಡಬೇಕು ಎಂದು ಬಯಸುತ್ತದೆ.

ಇವೆರಡರ ನಡುವೆ ಘರ್ಷಣೆಗೆ ಕಾರಣವಾಗಿರುವ ಎರಡನೆಯ ಸಂಗತಿಯೆಂದರೆ ಅಭಿವೃದ್ಧಿಯ 'ಏಕರೂಪೀಕರಣ' ಸ್ವರೂಪ. ಇದು ರಾಷ್ಟ್ರಪ್ರಭುತ್ವದ ಬಹುಮುಖ್ಯ ಲಕ್ಷಣವಾಗಿದೆ. ಒಂದು ರಾಷ್ಟ್ರ. ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಧರ್ಮ. ಒಂದು ಚರಿತ್ರೆ ಮುಂತಾದ ಸಂಗತಿಗಳ ಮೇಲೆ ರಾಷ್ಟ್ರಪ್ರಭುತ್ವವು ನಿಂತಿರುತ್ತದೆ. ಬುಡಕಟ್ಟುಗಳ 'ಅನೇಕತನ'ವು ರಾಷ್ಟ್ರೀಯತೆಗೆ ಮಾರಕವೆಂದು ಭಾವಿಸಲಾಗಿದೆ. ಅಭಿವೃದ್ಧಿಯ ಸಾಧನಗಳಾದ ನಗರೀಕರಣ. ಕೈಗಾರಿಕೀಕರಣ, ಶ್ರಮವಿಭಜನೆ, ವಾಣಿಜ್ಯೀಕರಣ, ಆಡಳಿತೀಕರಣಗಳ ಪ್ರಕ್ರಿಯೆಯಿಂದಾಗಿ ಬುಡಕಟ್ಟೊಂದು ಬುಡಕಟ್ಟಾಗಿ ಉಳಿಯಲು ಸಾಧ್ಯವಿಲ್ಲ.

ಘರ್ಷಣೆಗೆ ಕಾರಣವಾಗಿರುವ ಮೂರನೆಯ ಸಂಗತಿಯೆಂದರೆ ಆಧುನಿಕವಿಜ್ಞಾನ ಶಿಸ್ತುಗಳ 'ಯಾಜಮಾನ್ಯ' ಪ್ರವೃತ್ತಿ. ಆಧುನೀಕರಣ, ಅಭಿವೃದ್ಧಿ, ರಾಷ್ಟ್ರಪ್ರಭುತ್ವ ಇವೆಲ್ಲವೂ ಯಜಮಾನವಾದಿ ಮಹಾಸಂಕಥನಗಳಾಗಿವೆ. ಇದರಿಂದಾಗಿ ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವು 'ಶ್ರೇಣೀಕೃತ'ವಾಗಿ ಬಿಡುತ್ತದೆ.

೯. 'ಬುಡಕಟ್ಟು ಅಭಿವೃದ್ಧಿ'ಯೆನ್ನುವ ಸೈದ್ಧಾಂತಿಕ ರಚನೆಯೊಂದು ಇನ್ನೂ ರೂಪಿತವಾಗಿಲ್ಲ. ಆಧುನಿಕ ಜ್ಞಾನಶಿಸ್ತುಗಳು ಬುಡಕಟ್ಟು ಸಮಾಜ - ಬುಡಕಟ್ಟು ಸಂಸ್ಕೃತಿಯೆನ್ನುವುದೊಂದು ಅಧ್ಯಯನ ಶಿಸ್ತು ಎಂದು ಆಧುನಿಕ ಜ್ಞಾನಶಿಸ್ತುಗಳು ಪರಿಗಣಿಸಿಲ್ಲ. 'ಬುಡಕಟ್ಟು - ಅಭಿವೃದ್ಧಿ', 'ಬುಡಕಟ್ಟು - ರಾಷ್ಟ್ರಪ್ರಭುತ್ವ', 'ಬುಡಕಟ್ಟು - ಆಧುನಿಕತೆಗಳ' ನಡುವಿನ ಸಂಬಂಧವನ್ನು ಅಧ್ಯಯನಕ್ಕೆ ಒಳಪಡಿಸುವ, ಈ ಸಂಬಂಧಗಳನ್ನು ಸೈದ್ಧಾಂತಿಕಗೊಳಿಸುವ ಕೆಲಸವಿನ್ನು ಪ್ರಾರಂಭವಾಗಿಲ್ಲ. ಬುಡಕಟ್ಟುಗಳ ಬಗೆಗಿನ ಪೂರ್ವಗ್ರಹಗಳಿಂದ ಆಧುನಿಕ ಜ್ಞಾನಶಿಸ್ತುಗಳು ಹೊರಬರಬೇಕಾಗಿದೆ. ಅಭಿವೃದ್ಧಿ ಮೀಮಾಂಸೆಯಲ್ಲಿ, ಆಧುನೀಕರಣದ ಚರ್ಚೆಯಲ್ಲಿ ಮತ್ತು ರಾಷ್ಟ್ರ ಪ್ರಭುತ್ವದ ಅಧಿಕಾರದಲ್ಲಿ ಬುಡಕಟ್ಟುಗಳಿಗೆ ಸ್ಥಾನ - ಅವಕಾಶವಿಲ್ಲವೆಂಬುದು ಇಲ್ಲಿನವರೆಗಿನ ಚರ್ಚೆಯಿಂದ ಸ್ಪಷ್ಟವಾಗಿದೆ. ಆದರೆ ನಮ್ಮ ಎದುರಿಗಿರುವ ವಾಸ್ತವವೆಂದರೆ ರಾಷ್ಟ್ರಪ್ರಭುತ್ವಗಳಿಗೆ ಬುಡಕಟ್ಟುಗಳನ್ನು ಜೀರ್ಣಿಸಿಕೊಳ್ಳುವುದು ಸಾಧ್ಯವಾಗಿಲ್ಲ. ರಾಷ್ಟ್ರೀಯ ಪ್ರಧಾನಧಾರೆಯಲ್ಲಿ ಬುಡಕಟ್ಟುಗಳು ವಿಲೀನಗೊಂಡಿಲ್ಲ. ಆಧುನೀಕರಣವು ಆಧುನಿಕ ಪೂರ್ವಸ್ಥಿತಿಯಿಂದ ಬುಡಕಟ್ಟುಗಳನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗಿಲ್ಲ. ಅಭಿವೃದ್ಧಿ ಪ್ರಕ್ರಿಯೆಗೆ ಬುಡಕಟ್ಟುಗಳ ವಿಶಿಷ್ಟತೆಯನ್ನು ಅಳಿಸಿಹಾಕಿ ಅವುಗಳಿಗೆ ವಿಶ್ವಾತ್ಮಕ ರೂಪನೀಡುವುದು ಸಾಧ್ಯವಾಗಿಲ್ಲ. ಇಂದು ವಿಶ್ವದ ಎಲ್ಲ ದೇಶಗಳಲ್ಲೂ ಬುಡಕಟ್ಟುಗಳು ತಮ್ಮ ಅನನ್ಯತೆ, ವಿಶಿಷ್ಟತೆಗಳನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿವೆ. ಈ ಬಗೆಯ ಸಂಗತಿಗಳನ್ನು ಚರ್ಚೆಯ - ಅನುಸಂಧಾನದ ಚೌಕಟ್ಟಿಗೆ ತರುವುದರ ಮೂಲಕ ಅಭಿವೃದ್ಧಿ ಮತ್ತು ಬುಡಕಟ್ಟುಗಳ ನಡುವಿನ ಘರ್ಷಣೆಯ ನೆಲೆಗಳನ್ನು ಸರಿಪಡಿಸಬಹುದು. ವ್ಯಕ್ತಿಗತ ಮೌಲ್ಯಗಳನ್ನು ತಿರಸ್ಕರಿಸುವ ಅಗತ್ಯವಿಲ್ಲ. ಅದೇ ರೀತಿ ಸಮುದಾಯಗಳ ಸ್ವಾಯತ್ತತೆ - ವಿಭಿನ್ನತೆ - ವಿಶಿಷ್ಟತೆಗಳನ್ನು ವೈಭವೀಕರಿಸಿ ಸ್ವಾತಂತ್ರ್ಯ - ಸಮಾನತೆಗಳನ್ನು ತಿರಸ್ಕರಿಸುವ ಅಗತ್ಯವಿಲ್ಲ. ಇವೆರಡನ್ನೂ ಎಲ್ಲೋ ಒಂದು

ಕಡೆ ಒಂದಾಗುವಂತೆ ಮಾಡಬೇಕಾಗುತ್ತದೆ. ಈ ಕಾರಣಕ್ಕೆ ಇಂತಹ ಸಂಗತಿಗಳು ನಮ್ಮ ಅಧ್ಯಯನಗಳ ಭಾಗವಾಗಬೇಕು. ಜನತಂತ್ರ ವ್ಯವಸ್ಥೆಯಲ್ಲಿ ಉಂಟಾಗುವ ಘರ್ಷಣೆಗಳನ್ನು ಪರಿಹರಿಸಿಕೊಳ್ಳುವ ಮಾರ್ಗಗಳನ್ನು ರೂಪಿಸಿಕೊಳ್ಳುತ್ತಿರಬೇಕಾಗುತ್ತದೆ. ಈ ಮೂರು ಸಂಕಥನಗಳು ತಮ್ಮ ಉದ್ದೇಶವನ್ನು ತೀರಿಸಿಕೊಳ್ಳುವಲ್ಲಿ ವಿಫಲವಾಗಿದ್ದಾವೆಯೆಂದು ಇದರ ಅರ್ಥವಲ್ಲ. ಮಹಾ ಸಂಕಥನಗಳು ತಮ್ಮ ಕೈಂಕರ್ಯವನ್ನು ಮುಂದುವರಿಸಿವೆ. ಅದೇ ರೀತಿ ಬುಡಕಟ್ಟುಗಳು ರಾಷ್ಟ್ರಪ್ರಭುತ್ವದೊಳಗೆ, ಆಧುನೀಕರಣದ ಮಹಾಪ್ರವಾಹದಲ್ಲಿ ಹಾಗೂ ಅಭಿವೃದ್ಧಿಯ ಪ್ರಕ್ರಿಯೆಯ ಮಧ್ಯ ತಮ್ಮ ಅಸ್ತಿತ್ವವನ್ನು ಬಹಳ ಗಟ್ಟಿಯಾಗಿ ಉಳಿಸಿಕೊಂಡಿವೆ.

ಅಂದ ಮೇಲೆ ಬುಡಕಟ್ಟುಗಳನ್ನು ಬುಡಕಟ್ಟು ಸಂಸ್ಕೃತಿಯನ್ನು ಸುಲಭವಾಗಿ ಸರಳವಾಗಿ ನಿರ್ಲಕ್ಷಿಸಲು ಬರುವುದಿಲ್ಲ. ರಾಷ್ಟ್ರೀಯಧಾರೆ ಹಾಗೂ ಬುಡಕಟ್ಟುಗಳ ಧಾರೆ, ಆಧುನೀಕರಣ ಹಾಗೂ ಆಧುನಿಕಪೂರ್ವ ಸ್ಥಿತಿ ಮತ್ತು ಅಭಿವೃದ್ಧಿ ಹಾಗೂ ಹೊಟ್ಟೆಬಟ್ಟೆ ಸ್ಥಿತಿಗಳು ಒಟ್ಟೊಟ್ಟಿಗೆ ಇಂದು ಮುಂದುವರಿದಿರುವುದನ್ನು ಕಾಣಬಹುದಾಗಿದೆ.

ಭಾರತದ ಸಂದರ್ಭದಲ್ಲಿ ಬುಡಕಟ್ಟುಗಳು ರಾಜಕೀಯ ಸಂಘಟನೆಯಲ್ಲಿ ತೊಡಗಿವೆ. ರಾಷ್ಟ್ರಪಭುತ್ವದಲ್ಲಿ ಪಾಲು ಪಡೆಯಲು ಅವು ಹವಣಿಸುತ್ತಿವೆ. ಬುಡಕಟ್ಟುಗಳ ರಾಜಕೀಯ ಸಂಘಟನೆಯನ್ನು ಅವುಗಳ ಸಾಂಸ್ಕೃತಿಕ ಅಗತ್ಯತೆಯ ಹೋರಾಟದ ಭಾಗವಾಗಿ ನೋಡುವ ಕ್ರಮವೊಂದಿದೆ ಮತ್ತು ಅದನ್ನು ಅಭಿವೃದ್ಧಿಯತ್ತ ಪಾಲು ಪಡೆದುಕೊಳ್ಳುವ ರಾಜಕಾರಣದ ಒಂದು ಭಾಗವಾಗಿ ನೋಡುವ ಕ್ರಮವೂ ಇದೆ. ಇವೆರಡರಲ್ಲೂ ಎರಡನೆಯ ಕ್ರಮವೇ ಸರಿಯೆಂದು ಕಾಣುತ್ತದೆ. ಬುಡಕಟ್ಟುಗಳು ಒಂದು ಕಡೆ ತಮ್ಮ ಸಾಂಸ್ಕೃತಿಕ ಸ್ವಾಯತ್ತತೆ ಹಾಗೂ ಸಾಮುದಾಯಿಕ ಸ್ವರೂಪವನ್ನು ಕಾಯ್ದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಅದೇ ರೀತಿ ಇನ್ನೊಂದು ಕಡೆ ರಾಷ್ಟ್ರೀಯ ಧಾರೆಯಲ್ಲಿ ಬೆರೆತು ರಾಜಕೀಯ ಅಧಿಕಾರಿದಲ್ಲಿ ಪಾಲನ್ನೂ ಪಡೆಯುವ ಪ್ರಯತ್ನವನ್ನು ಮುಂದುವರಿಸಿವೆ.

ಈಗ ನಮ್ಮ ಮುಂದಿರುವ ಸಮಸ್ಯೆ, ಸವಾಲು ಎಂದರೆ, ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಹೇಗೆ ಪರಿಭಾವಿಸಿಕೊಳ್ಳುವುದು? ಲಿಬರಲ್ ರಾಜಕಾರಣವು ಏಕ ಸಂಸ್ಕೃತಿಯ ಚೌಕಟ್ಟಿನಲ್ಲಿ ವ್ಯಕ್ತಿಗತ ಸ್ವಾತಂತ್ರ್ಯ, ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಕುರಿತ ಸಂಕಥನವನ್ನು ಕಟ್ಟುತ್ತಿದ್ದರೆ, ಸಾಮುದಾಯಿಕವಾದಿಗಳು ಬುಡಕಟ್ಟು ಸಂಸ್ಕೃತಿಗಳ ಅನನ್ಯತೆ, ವಿಶಿಷ್ಟತೆಯನ್ನು ರಕ್ಷಿಸುವ ರಾಜಕಾರಣದಲ್ಲಿ ತೊಡಗಿದ್ದಾರೆ. ಒಂದು ಏಕರೂಪೀಕರಣದ ಮಾತನಾಡುತ್ತಿದ್ದರೆ, ಇನ್ನೊಂದು ಬಹುರುಪೀಕರಣದ ಮಾತನಾಡುತ್ತಿದೆ. ವ್ಯಕ್ತಿಗತ ಸ್ವಾತಂತ್ರ್ಯ - ಸಮಾನತೆಗಳು - ಸಾಮುದಾಯಿಕತೆಗಳು ಮುಖಾಮುಖಿಯಾಗಿವೆ. ಇಂತಹ ಸ್ಥಿತಿಯಲ್ಲಿ ಅಭಿವೃದ್ಧಿಯನ್ನು ಬಹುಸಂಸ್ಕೃತಿಗಳ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುವುದು ಸೂಕ್ತ. ಇಲ್ಲಿ ಹೇಳಿರುವ ಮಹಾಸಂಕಥನಗಳು ಇಂದು ಎದುರಿಸುತ್ತಿರುವ ಒಂದು ದೊಡ್ಡ ಸಮಸ್ಯೆಯೆಂದರೆ ಬುಡಕಟ್ಟುಗಳ ಅನನ್ಯತೆ - ವಿಶಿಷ್ಟತೆಗಳನ್ನು ಸೈದ್ಧಾಂತಿಕವಾಗಿ ಅಂತರ್ಗತ ಮಾಡಿಕೊಳ್ಳುವುದು ಹೇಗೆ ಎಂಬುದಾಗಿದೆ. ಇದನ್ನು ಬಹುಸಂಸ್ಕೃತಿವಾದದ ಚೌಕಟ್ಟಿನಲ್ಲಿ ಬಗೆಹರಿಸಿಕೊಳ್ಳಬಹುದಾಗಿದೆ. ಅಭಿವೃದ್ಧಿಯ ದೃಷ್ಟಿಯಿಂದ ಬಹುಸಂಸ್ಕೃತಿವಾದವು ಅನೇಕ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ಒಂದು ರಾಷ್ಟ್ರಪ್ರಭುತ್ವದೊಳಗೆ ೫೦ - ೬೦ ಬುಡಕಟ್ಟುಗಳಿದ್ದರೆ, ಅವುಗಳೆಲ್ಲವನ್ನು ಪ್ರತ್ಯೇಕ ಘಟಕಗಳೆಂದು ಪರಿಗಣಿಸಲು ಸಾಧ್ಯವೆ? ಪ್ರತಿಯೊಂದು ಬುಡಕಟ್ಟುಗಳ ಸಾಮುದಾಯಿಕ ಹಕ್ಕುಗಳನ್ನು ಪ್ರಭುತ್ವವು ಮನ್ನಿಸಬೇಕೇ ಹೇಗೆ? ಮನ್ನಿಸಿದರೆ ಅವುಗಳ ನಿರ್ವಹಣೆ ಹೇಗೆ? ಪ್ರತಿಯೊಂದು ಬುಡಕಟ್ಟು ಸಮುದಾಯದ ಶಿಕ್ಷಣವೂ ಅವರವರ ಭಾಷೆಯಲ್ಲಿ ನಡೆಯಬೇಕೆ? ಪ್ರತಿಯೊಂದು ಬುಡಕಟ್ಟುವಿಗೂ ಪ್ರತ್ಯೇಕ ಅಭಿವೃದ್ಧಿ ಕಾರ್ಯನೀತಿ - ಕಾರ್ಯತಂತ್ರವನ್ನು ರೂಪಿಸಲು ಸಾಧ್ಯವೆ?

ಬುಡಕಟ್ಟುತನವು ಅನೇಕ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಬುಡಕಟ್ಟುಗಳು ಸಾಮುದಾಯಿಕ ಮೌಲ್ಯಗಳಿಗೆ ಹೆಚ್ಚಿನ ಮನ್ನಣೆ ನೀಡುವುದರಿಂದ ಅಲ್ಲಿ ಜನರ ವೈಯಕ್ತಿಕ ಹಕ್ಕು ಸ್ವಾತಂತ್ರ್ಯಗಳಿಗೆ ದಕ್ಕೆ ಉಂಟಾಗುತ್ತದೆ. ಬುಡಕಟ್ಟುತನವು ಅನೇಕ ವೇಳೆ ಬುಡಕಟ್ಟುಗಳ ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಬಹುದು. ಬುಡಕಟ್ಟುತನವು ತುಂಬಾ 'ಅತಿ'ಯಾದರೆ, ಅವು ಸ್ವಾಯತ್ತತೆಯನ್ನು ತೀವ್ರವಾಗಿ ಒತ್ತಾಯಿಸಿಬಿಟ್ಟರೆ ಅದು ವಿಚ್ಛಿದ್ರಕಾರಿಯಾಗಿ ಬಿಡಬಹುದು - ಪ್ರತ್ಯೇಕವಾದಿಯಾಗಿ ಬಿಡಬಹುದು. ಬುಡಕಟ್ಟುಗಳು ಇಂದು

ರಾಷ್ಟ್ರಪ್ರಭುತ್ವದೊಳಗೆ ಜೀವಿಸಬೇಕೆಂಬುದನ್ನು ಮರೆಯಬಾರದು. ಇದಕ್ಕೆ ರಾಷ್ಟ್ರಪಭುತ್ವ ಮತ್ತು ಬುಡಕಟ್ಟುಗಳ ನಡುವೆ ಸಂಧಾನ - ಸಂವಾದ ಸಾಧ್ಯವಾಗಬೇಕು. ಈ ಬಗೆಯ ಒಡಂಬಡಿಕೆಯ ಮೂಲಕ ಇವೆರಡೂ ಒಟ್ಟಿಗೆ ಸೌಹಾರ್ದತೆಯಿಂದ ಬದುಕುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕು. ಬುಡಕಟ್ಟುಗಳು ಆಧುನಿಕಪೂರ್ವ ಸ್ಥಿತಿಯಲ್ಲೇ ಇರಲು ಸಾಧ್ಯವಿಲ್ಲ. ಆಧುನೀಕರಣ ಪ್ರವಾಹದಿಂದ ಅವು ಅಲಾಯದವಾಗಿರಲು ಸಾಧ್ಯವಿಲ್ಲ. ಬುಡಕಟ್ಟುಗಳ ಅಭಿವೃದ್ಧಿಯನ್ನು ಪುನರ್ ನಿರ್ವಚಿಸುವ ಅಗತ್ಯವಿದೆ. ಬುಡಕಟ್ಟುತನವನ್ನೇ ಹಿಂದುಳಿದಿರುವಿಕೆಯೆಂದು ಪರಿಗಣಿಸುವುದರಲ್ಲಿ ಅರ್ಥವಿಲ್ಲ. ಬುಡಕಟ್ಟುತನವನ್ನು ಬುಡಕಟ್ಟುಗಳು ಬಿಟ್ಟುಕೊಡುವುದೇ ಅಭಿವೃದ್ಧಿ ಎಂಬ ನಿರ್ವಚನವನ್ನು ಮರುಪರಿಶೀಲಿಸುವ ಅಗತ್ಯವಿದೆ. ಸಮುದಾಯ ವಾದಿಗಳು ಪ್ರತಿಪಾದಿಸುತ್ತಿರುವ ಬುಡಕಟ್ಟುಗಳ ಸಾಂಸ್ಕೃತಿಕ ಅನನ್ಯತೆಯ ಅತಿಯಾದ ಒತ್ತಾಯವನ್ನು ಹಾಗೂ ಅಭಿವೃದ್ಧಿ ಮೀಮಾಂಸಕರು ಆಧುನೀಕರಣ ಪ್ರತಿಪಾದಕರು ರಾಷ್ಟ್ರಪ್ರಭುತ್ವವಾದಿಗಳು ಪ್ರತಿಪಾದಿಸುತ್ತಿರುವ ಬುಡಕಟ್ಟುಗಳನ್ನು ಜೀರ್ಣಿಸಿಕೊಳ್ಳುವ ಸಂಗತಿಯನ್ನು ಕೈಬಿಟ್ಟು ಇವೆರಡನ್ನು ಹೊಂದಾಣಿಕೆ ಮಾಡಿಕೊಂಡು ಒಂದು ರಾಜಕೀಯ ವ್ಯವಸ್ಥೆಯನ್ನು ರೂಪಿಸುವ ಅಗತ್ಯವಿದೆ. ಇದನ್ನು ಖ್ಯಾತ ರಾಜ್ಯಶಾಸ್ತ್ರಜ್ಞ ರಾಜೀವ್‌ಭಾರ್ಗವ ಅವರು 'ಜನತಾಂತ್ರಿಕ ಬಹುಸಂಸ್ಕೃತಿವಾದ'ವೆಂದು ಕರೆದಿದ್ದಾರೆ. ಅವರ ಪ್ರಕಾರ ಜನತಾಂತ್ರಿಕ ಬಹುಸಂಸ್ಕೃತಿಕ ವಾದವು ಮಾತ್ರವೇ ಸಾಂಸ್ಕೃತಿಕ ಅನನ್ಯತೆ ಹಾಗೂ ವ್ಯಕ್ತಿಗತ ಸ್ವಾತಂತ್ರ್ಯ ಹಕ್ಕುಗಳ ನಡುವಿನ ಘರ್ಷಣೆಗಳನ್ನು ರಾಜಕೀಯ ಪ್ರಕ್ರಿಯೆಗೆ ಒಳಪಡಿಸಿ ಅವುಗಳನ್ನು ಪರಿಹರಿಸುವ ಸಾಮರ್ಥ್ಯ ಪಡೆದಿದೆ. ಭಾರತದಂತಹ ಸಂದರ್ಭದಲ್ಲಿ ಜನತಾಂತ್ರಿಕ ಬಹುಸಂಸ್ಕೃತಿವಾದ ಅತ್ಯಂತ ಸೂಕ್ತವಾದುದಾಗಿದೆ. ಬುಡಕಟ್ಟುಗಳಿಗೆ ಸಂಬಂಧಿಸಿದ ಅನೇಕ ಬಗೆಯ ಹಿಂಸೆಯ - ಕ್ರೂರತನದ ಸಂಗತಿಗಳನ್ನು ನಿವಾರಿಸಿಕೊಳ್ಳಲು ಜನತಾಂತ್ರಿಕ ಪ್ರಭುತ್ವವೊಂದರ ಅಗತ್ಯವಿದೆ. ಅದೇ ರೀತಿ ಸಾಂಸ್ಕೃತಿಕ ಅನನ್ಯತೆಯನ್ನು ವಿಶಿಷ್ಟತೆಯನ್ನು ಕಾಯ್ದುಕೊಳ್ಳಲು ಪ್ರಭುತ್ವಕ್ಕೆ ಹೊರಾದ ಅನೇಕ ಸಂಸ್ಥೆ - ಆಚರಣೆಗಳನ್ನು ಪ್ರಭುತ್ವವು ಬಳಸಿಕೊಳ್ಳಬೇಕಾಗುತ್ತದೆ. ಈ ಬಗೆಯ ಚೌಕಟ್ಟಿನಲ್ಲಿ, ಅಂದರೆ ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಸೂಕ್ತವಾಗಿ ನಿರ್ವಹಿಸಬಹುದಾಗಿದೆ.

ಬುಡಕಟ್ಟು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳವಾಗ ನಾವು ಎರಡು ಸಂಗತಿಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

೧. ಬುಡಕಟ್ಟುಗಳು ಒಂದು ಸಮಾಜದಲ್ಲಿ ಇತರರ ಜೊತೆ ಶಾಂತಿ ಸೌಹಾರ್ದತೆಯಿಂದ ಬದುಕಲು ಪರಿಣಾಮಕಾರಿಯಾದ ಪ್ರಭುತ್ವವೊಂದು ಅತ್ಯಂತ ಅಗತ್ಯ.

೨. ಜನತಾಂತ್ರಿಕ ವ್ಯವಸ್ಥೆಯಲ್ಲಿ ಮಾತ್ರ ಸಾಂಸ್ಕೃತಿಕ ಘರ್ಷಣೆಗಳಿಗೆ ಪರಿಹಾರಗಳನ್ನು ರೂಪಿಸಿಕೊಳ್ಳಬಹುದು.

ಒಟ್ಟಂದದಲ್ಲಿ ಬುಡಕಟ್ಟುತನವನ್ನು, ಸಾಂಸ್ಕೃತಿಕ ಅನನ್ಯತೆಯನ್ನು ಬಿಟ್ಟುಕೊಡದೆ, ವ್ಯಕ್ತಿಗತ ಸ್ವಾತಂತ್ರ್ಯ ಸಮಾನತೆಗಳನ್ನು ಊರ್ಜಿತಗೊಳಿಸುತ್ತ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಅದು ಜನತಾಂತ್ರಿಕ ಬಹುಸಂಸ್ಕೃತಿ ಚೌಕಟ್ಟಿನಲ್ಲಿ ಮಾತ್ರ ಸಾಧ್ಯ.

೧೦. ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯು ರೂಪಿಸಿರುವ ಅಘಾತಕಾರಿ ಸಂಗತಿಯೆಂದರೆ 'ಬುಡಕಟ್ಟುಗಳು ಇಂದು ಹಿಂದುಳಿದಿದ್ದರೆ, ಅವು ಆಧುನಿಕಪೂರ್ವ ಸ್ಥಿತಿಯಲ್ಲಿದ್ದರೆ, ಅವು ಅಭಿವೃದ್ಧಿಯ ಪ್ರವಾಹದಲ್ಲಿ ಬೆರೆಯದಿದ್ದರೆ ಅದಕ್ಕೆ ಬುಡಕಟ್ಟುಗಳೇ ಕಾರಣ' ಎಂಬುದಾಗಿದೆ. ಅಭಿವೃದ್ಧಿ ಮೀಮಾಂಸೆಯು ಅಭಿವೃದ್ಧಿಯ ಸಾಮರ್ಥ್ಯವಿರುವ ಪ್ರದೇಶ ಹಾಗೂ ವರ್ಗಗಳಲ್ಲಿ ಹೆಚ್ಚು ವಿಶ್ವಾಸವನ್ನು ತೋರಿಸಿತು. ಈ ಬಗೆಯ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಅಭಿವೃದ್ಧಿ ಕಾರ್ಯಕ್ರಮಗಳು ಅಭಿವೃದ್ಧಿ ಯಶಸ್ವಿಯಾಗಬಹುದಾದ ಸ್ಥಾನಗಳನ್ನು ಆಯ್ಕೆ ಮಾಡಿಕೊಂಡು ಕ್ರಿಯಾಶೀಲವಾಗಿದ್ದವು. ಈಬಗೆಯ ಕಾರ್ಯಕ್ರಮಗಳಿಗೆ 'ಪ್ರಗತಿಪರ' ರೈತನಂತಹ ಸಾಧನ ಬೇಕಾಗಿತ್ತು. ಬುಡಕಟ್ಟುಗಳ ಅಭಿವೃದ್ಧಿ ಸಾಮರ್ಥ್ಯವನ್ನು ಗುರುತಿಸುವುದು ಸರ್ಕಾರಗಳಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಸರ್ಕಾರವು ಅಭಿವೃದ್ಧಿಯನ್ನು ಗುರುತಿಸಲಿಕ್ಕೆ ಬಳಸುತ್ತಿದ್ದ ಸಾಧನಗಳು ಬುಡಕಟ್ಟು ಸಮಾಜಕ್ಕೆ ಸೂಕ್ತವಾಗಿರಲಿಲ್ಲ. ಏಕೆಂದರೆ ಆಧುನಿಕಪೂರ್ವ ಸ್ಥಿತಿಯಲ್ಲಿದ್ದ ಬುಡಕಟ್ಟುಗಳ ಅಭೀವೃದ್ಧಿ ಸಾಮರ್ಥ್ಯವು ಕನಿಷ್ಟತಮವಾಗಿದ್ದರೆ ಅದರಲ್ಲಿ ಆಶ್ಚರ್ಯಪಡುವಂತಹದೇನೂ ಇರಲಿಲ್ಲ. ಬುಡಕಟ್ಟುಗಳಾಗಿ ಅಭಿವೃದ್ಧಿ ಹೊಂದುವುದು

ಸಾಧ್ಯವೇ ಇಲ್ಲವೆಂದು ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆ ಪ್ರತಿಪಾದಿಸಿತು. ಈ ಕಾರಣದಿಂದಾಗಿಯೆ ಬುಡಕಟ್ಟುಗಳ ಬುಡಕಟ್ಟುತನವನ್ನು ಅಳಿಸಿ ಹಾಕುವಂತಹ ದಿಶೆಯಲ್ಲಿ ಅಭಿವೃದ್ಧಿ ಮೀಮಾಂಸೆಯು ತನ್ನ ಸಂಕಥನವನ್ನು ಬೆಳೆಸಿತು.

ಬುಡಕಟ್ಟುಗಳ ಹಿಂದುಳಿದಿರುವಿಕೆಗೆ ಬುಡಕಟ್ಟುಗಳನ್ನೇ ಕಾರಣವನ್ನಾಗಿಸುವ ಅಭಿವೃದ್ಧಿ ಮೀಮಾಂಸೆಯ ತರ್ಕವು ಇಂದು ಯಾವುದೇ ಅರ್ಥವನ್ನು ಪಡೆದಿಲ್ಲ. ಬುಡಕಟ್ಟುಗಳ ಅಭಿವೃದ್ಧಿಯನ್ನು ಬುಡಕಟ್ಟುಗಳ ಸಾಂಸ್ಕೃತಿಕ ಅಗತ್ಯತೆಯ ನೆಲೆಯಿಂದ ಅಭಿವೃದ್ಧಿ ಮೀಮಾಂಸೆಯನ್ನು ಪರಿಭಾವಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಅಭಿವೃದ್ಧಿಯನ್ನು ಆಧುನೀಕರಣ ವಿಚಾರ ಪ್ರಣಾಳಿಕೆಯ ನೆಲೆಯಿಂದ ಪರಿಭಾವಿಸಿಕೊಂಡಿರುವುದರಿಂದ ಅಭಿವೃದ್ಧಿ ಮೀಮಾಂಸೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಯಾವುದೇ ಸ್ಥಾನವಿಲ್ಲದಂತಾಗಿದೆ. ಬುಡಕಟ್ಟುಗಳ ನೆಲೆಯಿಂದ ಅವುಗಳ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಇಂದು ಬುಡಕಟ್ಟುಗಳ ಅಭಿವೃದ್ಧಿ ಅನ್ನುವುದು ಪ್ರಧಾನಧಾರೆಯ ಜ್ಞಾನಶಿಸ್ತುಗಳ ಭಾಗವಾಗದಿದ್ದರೆ ಅದು ಬುಡಕಟ್ಟುಗಳ ತಪ್ಪಲ್ಲ. ಬುಡಕಟ್ಟುಗಳನ್ನು ಬುಡಕಟ್ಟುಗಳ ಜಗತ್ತಿನ ಹೊರಗೆ ನಿಂತು ಪರಿಭಾವಿಸಿಕೊಂಡ ಕಾರಣದಿಂದಾಗಿ ಅಭಿವೃದ್ಧಿ ಮೀಮಾಂಸೆಯು ಬುಡಕಟ್ಟುಗಳ ಅಭಿವೃದ್ಧಿ ಅನ್ನುವುದಿದ್ದರೆ ಬುಡಕಟ್ಟುಗಳ ಅಭಿವೃದ್ಧಿಯೇ ವಿನಾ ಬುಡಕಟ್ಟೇತರರ ಅಭಿವೃದ್ಧಿಯಲ್ಲ. ನಾಗರಿಕನೆಂದು ತನ್ನನ್ನು ಕರೆದುಕೊಳ್ಳುವ ಸಮಾಜವು ತನ್ನದೇ ಆದ ಮೌಲ್ಯ, ನಂಬಿಕೆ ಆಚರಣೆಗಳ ನೆಲೆಯಿಂದ ಬುಡಕಟ್ಟುಗಳು 'ಅನಾಗರಿಕ'ವಾಗಿ ಕಂಡುಬರುವುದು ಸಾಧ್ಯವಿಲ್ಲ. ಬುಡಕಟ್ಟುಗಳ ಅಭಿವೃದ್ಧಿಗೆ ಮಾನದಂಡ ಬುಡಕಟ್ಟು ಸಮಾಜದೊಳಗಿನಿಂದಲೇ ಮೂಡಿಬರಬೇಕಾಗುತ್ತದೆ. ಬುಡಕಟ್ಟುಗಳದ್ದೇ ಆದ ಮಾನದಂಡಗಳಿಂದ ಬುಡಕಟ್ಟುಗಳನ್ನು ಪರಿಭಾವಿಸಿಕೊಳ್ಳಬೇಕಾಗುತ್ತದೆ.

ಈಗಾಗಲೇ ಎಚ್ಚರಿಸಿರುವಂತೆ ಬುಡಕಟ್ಟುಗಳನ್ನು ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಬುಡಕಟ್ಟುಗಳು ಜನತಾಂತ್ರಿಕ ಪ್ರಭುತ್ವ ದೊಳಗೆ ಬದುಕಬೇಕು. ಅದನ್ನು ಬಿಟ್ಟು ತಮ್ಮ ವಿಶಿಷ್ಟತೆ - ಅನನ್ಯತೆಯನ್ನು ಅತಿಗೆ ಒಯ್ದು ಬುಡಕಟ್ಟುಗಳು ಪ್ರತ್ಯೇಕವಾಗಿ ಬದುಕು ಕಟ್ಟಿಕೊಳ್ಳುವುದು ಇಂದು ಸಾಧ್ಯವಿಲ್ಲ. ಇದೇ ರೀತಿ ಜನತಾಂತ್ರಿಕ ವ್ಯವಸ್ಥೆಯು ಬುಡಕಟ್ಟುಗಳ ಅನನ್ಯತೆಯನ್ನು ಮನ್ನಿಸಬೇಕು.

೧೧. ಇಂದು ಪ್ರಪಂಚವು ವಿಚಿತ್ರ ಸನ್ನಿವೇಶದಲ್ಲಿ ಬದುಕುತ್ತಿದೆ. ಒಂದು ದಿಶೆಯಲ್ಲಿ ಜಾಗತೀಕರಣವು ಸಣ್ಣಪುಟ್ಟ ಸಮುದಾಯಗಳ ಚಹರೆಯನ್ನು ಅಳಿಸಿಹಾಕಿ ಏಕರೂಪ ಜಗತ್ತನ್ನು ಕಟ್ಟುವ ಕೈಂಕರ್ಯದಲ್ಲಿ ತೊಡಗಿದೆ. ಇನ್ನೊಂದು ದಿಕ್ಕಿನಲ್ಲಿ ಆಧುನಿಕೋತ್ತರವಾದಿಗಳು ಬುಡಕಟ್ಟುಗಳು - ಸಣ್ಣಪುಟ್ಟ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯ ವಿಷಯವನ್ನು ತುಂಬಾ 'ಅತಿ'ಗೆ ಒಯ್ದು 'ವಿಶಿಷ್ಟತೆ'ಯ ಆರಾಧನೆಯಲ್ಲಿ, ಭಿನ್ನತೆಯ ರಾಜಕಾರಣದ ಅಲೆಯಲ್ಲಿ ತೇಲುತ್ತಿದ್ದಾರೆ. ಏಕರೂಪೀಕರಣ ಮತ್ತು ಬಹುರೂಪೀಕರಣಗಳು ಮುಖಾಮುಖಿಯಾಗಿವೆ. ಇವೆರಡೂ ಅತಿಯಾದ ಪ್ರಕ್ರಿಯೆಗಳ ನಡುವೆ ನಾವು ಅಭಿವೃದ್ಧಿಯನ್ನು ಗುರುತಿಸಿಕೊಳ್ಳಬೇಕಾಗಿದೆ.

ಜಾಗತೀಕರಣ ಪ್ರವಾಹದಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಅಳಿಸಿ ಹೋಗಬಾರದು ಎಂಬುದು ಎಷ್ಟು ಮುಖ್ಯವೋ, ಅವುಗಳು ರಾಷ್ಟ್ರಪ್ರಭುತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾದುದಾಗಿದೆ. ಬುಡಕಟ್ಟುಗಳು ರಾಷ್ಟ್ರೀಯ ಪ್ರವಾಹದಲ್ಲಿ ಮುಳುಗಿ ಹೋಗಬೇಕು ಎಂಬುದೇ ಅಭಿವೃದ್ಧಿಯಲ್ಲ. ಅವುಗಳ ಅನನ್ಯತೆಯ ಒಡಲಲ್ಲೆ ಅವರ ಬದುಕು ಉತ್ತಮವಾಗುವಂತೆ ಮಾಡುವುದೇ ಅಭಿವೃದ್ಧಿ. ಬುಡಕಟ್ಟುಗಳ ಅನನ್ಯತೆಯನ್ನು ಜನತಂತ್ರದ ಪ್ರಕ್ರಿಯೆಗೆ ಮತ್ತು ಜನತಂತ್ರವನ್ನು ಸಾಂಸ್ಕೃತಿಕ ಪ್ರಕ್ರಿಯೆಗೆ ಒಳಪಡಿಸುವ ಅಗತ್ಯವಿದೆ. ಜನತಂತ್ರವಿಲ್ಲದೆ ಬಹುಸಂಸ್ಕೃತಿವಾದ ಉಳಿಯುವುದು ಸಾಧ್ಯವಿಲ್ಲ. ಬಹುಸಂಸ್ಕೃತಿಯಿಲ್ಲದೆ ಬುಡಕಟ್ಟುಗಳ ಅನನ್ಯತೆಯನ್ನು ಜನತಂತ್ರ ಒಪ್ಪಿಕೊಳ್ಳಬೇಕು. ಅಭಿವೃದ್ಧಿ ಮೀಮಾಂಸೆಯು ಜನತಂತ್ರ ಹಾಗೂ ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಬೇಕಾಗಿದೆ.

೧೨. ಜನತಾಂತ್ರಿಕ ಬಹುಸಂಸ್ಕೃತಿವಾದದ ಚೌಕಟ್ಟಿನಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿ ಕೊಳ್ಳಬೇಕಾಗಿದೆ. ಇದು ಇಂದು ನಡೆಯಬೇಕಾದ ಒಂದು ಕಾರ್ಯವಾಗಿದೆ. ಹೀಗೆ ಪರಿಭಾವಿಸಿಕೊಂಡಾಗ ಬುಡಕಟ್ಟುಗಳ ಅಭಿವೃದ್ಧಿ ಅನ್ನುವುದಕ್ಕೆ ಅರ್ಥ ಬರುತ್ತದೆ, ಮಹತ್ವ ಪ್ರಾಪ್ತವಾಗುತ್ತದೆ. ಬುಡಕಟ್ಟುಗಳನ್ನು ಬುಡಕಟ್ಟುಗಳಾಗಿ ಅಭಿವೃದ್ಧಿಪಡಿಸುವುದು ಹೇಗೆ? ಬುಡಕಟ್ಟುಗಳನ್ನು ಜನತಂತ್ರ ಪ್ರಕ್ರಿಯೆಗೆ ಒಳಪಡಿಸುವುದು ಹೇಗೆ? ಅಭಿವೃದ್ಧಿ ಮೀಮಾಂಸೆಯಲ್ಲಿ ಸಾಂಸ್ಕೃತಿಕ ಹಾಗೂ ರಾಜಕಾರಣದ ಸಂಗತಿಗಳನ್ನು ಅಂತರ್ಗತ ಮಾಡುವುದು ಹೇಗೆ? ವ್ಯಷ್ಟಿ ಹಾಗೂ ಸಮಷ್ಟಿ ಮೌಲ್ಯಗಳಿಗೆ ಸರಿಸಮವಾದ ಸ್ಥಾನಮಾನ ಕಲ್ಪಿಸುವುದು ಹೇಗೆ? ಸಮುದಾಯವಾದಿ ಅನನ್ಯತೆಯು ವ್ಯಕ್ತಿಗತ ಸ್ವಾತಂತ್ರ್ಯ ಸ್ವಾಯತ್ತತೆಗೆ ಮಾರಕವಾಗದಂತೆ ಮಾಡುವುದು ಹೇಗೆ? ಇಂತಹ ಇನ್ನೂ ಹಲವಾರು ಪ್ರಶ್ನೆಗಳನ್ನು ಅಭಿವೃದ್ಧಿಯು ಅಂತರ್ಗತ ಮಾಡಿಕೊಳ್ಳದೆ ಅಭಿವೃದ್ಧಿ ಮೀಮಾಂಸೆ ಅರ್ಥಪೂರ್ಣವೂ, ಉಪಯುಕ್ತವೂ ಆಗುವುದು ಸಾಧ್ಯವಿಲ್ಲ. ಅಭಿವೃದ್ಧಿ ಮೀಮಾಂಸೆಯು ಇಂತಹ ಸವಾಲುಗಳನ್ನು ಹೇಗೆ ಎದುರಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

# ೫. ಆಲೂರರ ಕರ್ನಾಟಕತ್ವ ಮೀಮಾಂಸೆ

### ಪ್ರಸ್ತಾವನೆ

ಕರ್ನಾಟಕವು ತನ್ನ ಉದಯದ ೫೦ನೆಯ ವರ್ಷವನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ (೨೦೦೬) ಕರ್ನಾಟಕತ್ವೆಂಬ ಕುತೂಹಲಕಾರಿಯೂ, ರಾಜಕೀಯವಾಗಿ ಆಸ್ಫೋಟಕಾರಿಯೂ ಮತ್ತು ಸಾಮಾಜಿಕವಾಗಿ ವಿಸ್ತೃತ ವ್ಯಾಪ್ತಿ ಹೊಂದಿದ್ದ ಮೀಮಾಂಸೆಯೊಂದನ್ನು ರೂಪಿಸಲು ಪ್ರಯತ್ನಿಸಿದ ಹಾಗೂ ಕರ್ನಾಟಕ ಏಕೀಕರಣ ಹೋರಾಟವನ್ನು ಹುಟ್ಟುಹಾಕಿ ಅದಕ್ಕಾಗಿ ಅಹರ್ನಿಶಿ ದುಡಿದ ಆಲೂರು ವೆಂಕಟರಾಯರನ್ನು (೧೮೮೦ - ೧೯೬೪) ಹಾಗೂ ಅವರ ವಿಚಾರಗಳನ್ನು - ಹೋರಾಟವನ್ನು ಇಂದು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅವರು ರೂಪಿಸಿದ್ದ ಕರ್ನಾಟಕತ್ವ ಮೀಮಾಂಸೆಯ ವಿವಿಧ ಆಯಾಮಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಅವರ ೧೯೫೭ರಲ್ಲಿ ಪ್ರಕಟವಾದ ೨೫೨ ಪುಟಗಳ 'ಕರ್ನಾಟಕತ್ವದ ವಿಕಾಸ' ಕೃತಿಯು ರಾಜಕೀಯ - ಸಾಮಾಜಿಕ ಸಂಗತಿಗಳನ್ನು ಕುರಿತ ಸೈದ್ಧಾಂತಿಕ ಚರ್ಚೆಯನ್ನು ಒಳಗೊಂಡಿದೆ. ಅವರು ತಮ್ಮ ಕೃತಿಯಲ್ಲಿ ಮತ್ತೆ ಮತ್ತೆ ಸ್ಪಷ್ಟಪಡಿಸಿರುವಂತೆ ಅವರ ಕರ್ನಾಟಕತ್ವು ಪ್ರಾಂತೀಯತೆ - ಪ್ರಾದೇಶಿಕತೆಗಳೆಂಬ ಸಂಕುಚಿತ ಸಂಗತಿಗಳಿಗೆ ಸಂಬಂಧಿಸಿದುದಲ್ಲ. ಅದು ಕೇವಲ ಭಾಷೆ - ಸಾಹಿತ್ಯಕ್ಕೆ ಸಂಬಂಧಿಸಿದ ಸಂವಾದವೂ ಅಲ್ಲ. ಅದೊಂದು ರಾಜಕೀಯ - ಸಾಮಾಜಿಕ ಸಿದ್ಧಾಂತ. ಆಲೂರರ ಕರ್ನಾಟಕತ್ವದ ವಿವಿಧ ಆಯಾಮಗಳನ್ನು ಕುರಿತಂತೆ ನಮ್ಮ ವಿದ್ವಾಂಸರು ಹೆಚ್ಚು ಚರ್ಚೆ ಮಾಡಿದಂತೆ ಕಾಣಲಿಲ್ಲ. ಅವರ ವಿಚಾರಗಳನ್ನು ಕುರಿತಂತೆ ಅನುಸಂಧಾನ ಹೆಚ್ಚು ನಡೆಯಲಿಲ್ಲ. ಡಾ. ಡಿ.ಆರ್. ನಾಗರಾಜ್ (೧೯೯೬) ಮತ್ತು ಡಾ.ಕೆ. ರಾಘವೇಂದ್ರರಾವ್ (೨೦೦೦) ಅವರು ಮಾತ್ರ ಆಲೂರರ ಕರ್ನಾಟಕತ್ವದ ಸೈದ್ಧಾಂತಿಕ ನೆಲೆಗಳನ್ನು ಹಿಡಿದಿಡಲು ಪ್ರಯತ್ನಿಸಿದರು. ಉಳಿದಂತೆ ಅದರ ಬಗ್ಗೆ ಚರ್ಚೆ ನಡೆದಂತೆ ಕಾಣಲಿಲ್ಲ. ಸಮಾಜ ವಿಜ್ಞಾನಿಗಳಿಗೆ ಅವರ ಕೃತಿಯು ವಿಚಾರಗಳ ನಿಕ್ಷೇಪದಂತಿದೆ. ದುರದೃಷ್ಟದ ಸಂಗತಿಯೆಂದರೆ ಕರ್ನಾಟಕದಲ್ಲಿ ಸಮಾಜ ವಿಜ್ಞಾನಿಗಳು ಅವರ ಕೃತಿಯನ್ನು ಕುರಿತು ಅಧ್ಯಯನ ನಡೆಸಲಿಲ್ಲ (ಡಾ. ರಾಘವೇಂದ್ರರಾವ್ ಮಾತ್ರ ಇದಕ್ಕೆ ಅಪವಾದ).

**ಅಬ್ಬರ – ಆರ್ಭಟ**

ಸುವರ್ಣ ವರ್ಷಾಚರಣೆಯ ಅಬ್ಬರ - ಆರ್ಭಟದಲ್ಲಿ ಆಲೂರರನ್ನು ನೆನಪಿಸಿಕೊಳ್ಳುವ ಪ್ರಯತ್ನವನ್ನು ಕರ್ನಾಟಕ ಮಾಡದಿರುವುದು ತುಂಬಾ ದುರದೃಷ್ಟಕರ. ಕರ್ನಾಟಕ ಏಕೀಕರಣವನ್ನು ತಪಸ್ಸಿನಂತೆ ಧ್ಯಾನಿಸಿದವರು ಅವರು. ಅತ್ಯಂತ ಸುಲಭವಾಗಿ ಪಡೆದುಕೊಳ್ಳಬಹುದಾಗಿದ್ದ ರಾಷ್ಟ್ರೀಯ ವೇದಿಕೆಯನ್ನು ಅಲ್ಲಿನ ನಾಯಕತ್ವವನ್ನು ಅವರು ಕರ್ನಾಟಕತ್ವಕ್ಕಾಗಿ ಅಂದು ಬಿಟ್ಟುಕೊಟ್ಟರು. 'ಕರ್ನಾಟಕ ಚಳುವಳಿಯೆಂದರೂ ನಾನೇ, ನಾನು ಎಂದರೇನೆ ಕರ್ನಾಟಕ ಚಳುವಳಿ' ಎಂಬ ಮಾತುಗಳನ್ನು ಅವರು 'ಕರ್ನಾಟಕತ್ವದ ವಿಕಾಸ'ದ ಮುನ್ನುಡಿಯಲ್ಲಿ ಬರೆದಿದ್ದಾರೆ. ಇನ್ನೊಂದು ಕಡೆ 'ಕರ್ನಾಟಕವೆಂಬುದು ನನ್ನ ವಿಶಿಷ್ಟ ವಿಚಾರ. ಆ ಶಬ್ಧವೂ ಕೂಡ ನನ್ನ ಟಂಕಸಾಲೆಯಲ್ಲಿ ಹುಟ್ಟಿದ್ದು' (ಪು.೯) ಎಂಬ ಮಾತುಗಳನ್ನು ಅವರು ಬರೆದಿದ್ದಾರೆ. ಅವರ ಸ್ವಾಭಿಮಾನ ಮತ್ತು ಆತ್ಮಸ್ಥೈರ್ಯವು ಅನುಕರಣೀಯವಾದುದಾಗಿದೆ. ಕರ್ನಾಟಕ ಏಕೀಕರಣಕ್ಕೆ ೫೦ ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅದರ ಆದ್ಯ ಪ್ರವರ್ತಕರಾದ ಆಲೂರು ವೆಂಕಟರಾಯರನ್ನು ನೆನೆಯುವುದು ಅತ್ಯಂತ ಪ್ರಸ್ತುತವೆಂದು ನಾನು ಭಾವಿಸಿದ್ದೇನೆ (ಅವರ 'ಕರ್ನಾಟಕತ್ವದ ವಿಕಾಸ' ಕೃತಿಗೂ ೨೦೦೭ಕ್ಕೆ ೫೦ ವರ್ಷ ತುಂಬುತ್ತದೆ). ವಾಸ್ತವವಾಗಿ ಕರ್ನಾಟಕದ ಏಕೀಕರಣಕ್ಕೆ ಒಂದು ಶತಮಾನಕ್ಕೂ ಮಿಕ್ಕಿದ ಇತಿಹಾಸವಿದೆ. ಆದರೆ ಈ ಇತಿಹಾಸದ ಬೇರುಗಳಿರುವುದು. ಉತ್ತರ ಕರ್ನಾಟಕದಲ್ಲಿಮತ್ತು ಮುಖ್ಯವಾಗಿ ಧಾರವಾಡದಲ್ಲಿ. ಇದಕ್ಕೆ ಸಂಬಂಧಿಸಿದ ಪ್ರಯತ್ನಗಳು ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲೇ ಆರಂಭವಾಗಿರುವುದನ್ನು ಗುರುತಿಸಬಹುದು. ಅದು ಮುಖ್ಯವಾಗಿ ಹಿಂದುಳಿದವರ, ಬಡವರ, ವಂಚಿತರ ಒಂದು ಪ್ರಯತ್ನವಾಗಿತ್ತು.

**ಕರ್ನಾಟಕತ್ವವು ಭಾಷಾ ರಾಜಕಾರಣವಲ್ಲ**

ಕರ್ನಾಟಕತ್ವವೆಂಬುದು ಅವರು ರೂಪಿಸಿದ ವಿಚಾರ ಪ್ರಣಾಳಿಕೆಯಾಗಿದೆ. ಭಾಷಾ ರಾಜಕಾರಣದ ಭಾಗವಾಗಿ ಅವರು ಅದನ್ನು ಪರಿಭಾವಿಸಿಕೊಂಡಿರಲಿಲ್ಲ. ಅವರು ಅದನ್ನು ಸಾಮಾಜಿಕ - ಆರ್ಥಿಕ - ರಾಜಕಾರಣದ ಒಂದು ಸಿದ್ಧಾಂತವನ್ನಾಗಿ ರೂಪಿಸಿದರು. ಅದು ಭಾಷೆ - ಸಾಹಿತ್ಯಕ್ಕೆ ಮಾತ್ರ ಸೀಮಿತಗೊಂಡ ಸಂಗತಿಯಾಗಿರಲಿಲ್ಲ. ಏಕೀಕರಣ ಪೂರ್ವದಲ್ಲಿ ಚಳುವಳಿ ನಡೆಸುತ್ತಿದ್ದ ಆಲೂರರಿಗೆ ಮತ್ತು ಅವರ ಸಮಕಾಲೀನರಿಗೆ ಕರ್ನಾಟಕತ್ವದ ಬಗ್ಗೆ ಖಚಿತವಾದ ವಿಚಾರಗಳಿದ್ದವು. ಕರ್ನಾಟಕ ಏಕೀಕರಣ ಏಕೆಬೇಕು ಎಂಬುದರ ಬಗ್ಗೆ ಅವರಿಗೆ ಅರಿವಿತ್ತು ಮತ್ತು ಅದನ್ನು ಕುರಿತಂತೆ ಅವರು ಚಿಂತನೆ ಮಾಡಿದ್ದರು. ಸಾಮಾಜಿಕ - ರಾಜಕೀಯ ನೆಲೆಯಲ್ಲಿ ಅದನ್ನು ಕಟ್ಟಲು ಅವರು ಪ್ರಯತ್ನಿಸಿದರು.

ಆಲೂರರು ೧೯೨೦ರಲ್ಲಿ ಧಾರವಾಡದಲ್ಲಿ ಸಂಘಟಿಸಿದ್ದ ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತಿನ ಅಧಿವೇಶನದಲ್ಲಿ ಚರ್ಚಿಸಿದ ವಿಷಯಗಳ ಪಟ್ಟಿಯನ್ನು ತಮ್ಮ ಕೃತಿಯಲ್ಲಿ ನೀಡಿದ್ದಾರೆ (ಪು.೮೪). ರಾಜಕಾರಣ, ವಾಙ್ಮಯ, ವ್ಯಾಪಾರ, ವೃತ್ತಪತ್ರಿಕೆ ಬೆಳವಣಿಗೆ, ಕರ್ನಾಟಕದಲ್ಲಿ ರೈಲ್ವೇ ತೊಂದರೆ, ಪೋಸ್ಟುಗಳ ತೊಂದರೆ, ಬಂದರು, ನೀರು ಕಾಲುವೆ, ಹೈಕೋರ್ಟ್, ವಿಶ್ವವಿದ್ಯಾಲಯ, ಮೋಟಾರಿನ ಅನನುಕೂಲತೆ, ರಸ್ತೆಗಳು, ಸೇತುವೆಗಳು, ಕನ್ನಡ ಶಾಲೆ ಮುಂತಾದ ಸಂಗತಿಗಳ ಬಗ್ಗೆ ಅಲ್ಲಿ ಚರ್ಚೆ ನಡೆಸಲಾಗಿದೆ.

ಮತ್ತೊಂದು ಕಡೆ ಇದನ್ನು ಅವರು ಇನ್ನಷ್ಟು ಸ್ಪಷ್ಟವಾಗಿ ಹೀಗೆ ನುಡಿದಿದ್ದಾರೆ. 'ಕರ್ನಾಟಕತ್ವವೆಂದರೆ ಕನ್ನಡ ವಾಙ್ಮಯವಲ್ಲ. ಕನ್ನಡ ನುಡಿಯೆಂದರೆ ಕರ್ನಾಟಕದ ಸರ್ವಸ್ವವೆಂದು ತಿಳಿಯುವುದೊಂದು ವರ್ಗವಿದೆ. ಅದು ಅಷ್ಟು ಸರಿಯಲ್ಲ. ಕರ್ನಾಟಕತ್ವವು ವ್ಯಾಪಾರ, ಕಲೆ, ಭೂಸುಧಾರಣೆ, ಬಂದರು ಸುಧಾರಣೆ, ಆಯುರ್ವೇದ ಮುಂತಾದ ಸಂಗತಿಗಳನ್ನು ಒಳಗೊಂಡಿದೆ' (ಪು. ೧೪೭).

ಅವರು ಬಳಸಿರುವ ಭೂಸುಧಾರಣೆ, ಬಂದರು ಅಭಿವೃದ್ಧಿ, ಶಾಲೆಗಳು ಮುಂತಾದ ಸಂಗತಿಗಳಿಂದ ಅವರ ವಿಚಾರ ಪ್ರಣಾಳಿಕೆಯ ವ್ಯಾಪ್ತಿ ಎಷ್ಟು ವಿಸ್ತೃತವಾಗಿತ್ತು ಎಂಬುದು ತಿಳಿಯುತ್ತದೆ. ದ್ವಿಭಾಷಾ ವಲಯದಲ್ಲಿದ್ದ ಕನ್ನಡ ಮಾತನಾಡುತ್ತಿದ್ದ ಪ್ರದೇಶಗಳನ್ನು ಕರ್ನಾಟಕದಲ್ಲಿ ವಿಲೀನಗೊಳಿಸುವ ಗುರಿಯ ಹಿನ್ನೆಲೆಯಲ್ಲಿ ಆಲೂರರ ಮೇಲ್ಕಂಡ ವಿಚಾರಧಾರೆಯು ತುಂಬಾ ಉಪಯುಕ್ತವಾದುದಾಗಿತ್ತು. ಅದು ಜನರನ್ನು

ಒಳಗೊಳ್ಳುವ ಪರಿಯದಾಗಿತ್ತು. ಆಲೂರರರಂತೆಯೇ ಕರ್ನಾಟಕತ್ವದ ವ್ರತ ಕೈಗೊಂಡಿದ್ದ ಅಂದಿನ ಖ್ಯಾತ ಕಥೆಗಾರ ಕೃಷ್ಣಕುಮಾರ ಕಲ್ಲೂರ ಏಕೀಕರಣ ಕುರಿತಂತೆ ಹೀಗೆ ಬರೆದಿದ್ದಾರೆ.

'....ಸಂಯುಕ್ತ ಕರ್ನಾಟಕದ ಬೇಡಿಕೆ ಹೊರ ಹೊರಗೆ ಭಾಷಾತ್ಮಕವಾಗಿದ್ದರೂ ನಿಜವಾಗಿ ಅದು ಆರ್ಥಿಕ ದೃಷ್ಟಿಯಲ್ಲಿ ಹಿಂದುಳಿದವರ ಕೂಗಾಗಿತ್ತು. ಆದುದರಿಂದ ಈಗ ಒಂದಾಗಿರುವ ಸಂಯುಕ್ತ ಕರ್ನಾಟಕ ಹಿಂದುಳಿದ ಪ್ರದೇಶಗಳದೇ ಒಂದು ಸಂಯುಕ್ತ ರಾಜ್ಯವೆಂತಲೂ, ಭಾಷೆ ಒಂದಾಗಿರುವುದು ಒಂದು ಹೆಚ್ಚಿನ ಅನುಕೂಲವೆಂದೂ ಭಾವಿಸಿಕೊಳ್ಳಬೇಕು. ಆದುದರಿಂದ ಭಾಷೆ ಸಾಹಿತ್ಯಗಳ ಬೆಳವಣಿಗೆಗಿಂತಲೂ ಹಿಂದುಳಿದ ಪ್ರದೇಶಗಳ ಆರ್ಥಿಕ ಬೆಳವಣಿಗೆಯೇ ಕರ್ನಾಟಕ ರಾಜ್ಯದ ಗುರಿ ಎಂದು ಬಗೆಗೆ ಬೇಕು' (ಮೈಸೂರು ರಾಜ್ಯ ೧೯೫೬ ಕರ್ನಾಟಕ ಸರ್ಕಾರ, ಬೆಂಗಳೂರು). ಇದು ತುಂಬಾ ಮಹತ್ವದ ವಿಚಾರವಾಗಿದೆ. ಅಭಿವೃದ್ಧಿಯೇ ಏಕೀಕರಣದ ಮುಖ್ಯ ಗುರಿಯೆಂಬುದನ್ನು ಇವರು ಸ್ಪಷ್ಟವಾಗಿ ಗುರುತಿಸಿದ್ದಾರೆ.

ಕರ್ನಾಟಕ, ಏಕೀಕರಣ ಮತ್ತು ರಾಜ್ಯೋತ್ಸವಗಳು ಕೇವಲ ಭಾಷೆ - ಸಾಹಿತ್ಯಕ್ಕೆ ಮೀಸಲಾಗಿರುವ ಇಂದಿನ ದಿನಮಾನಗಳಲ್ಲಿ ಕಲ್ಲೂರರ ವಿಚಾರಗಳು, ಆಲೂರರ ಸಿದ್ಧಾಂತ ನಮ್ಮ ಕಣ್ಣು ತೆರೆಸಬೇಕಾಗಿದೆ. ಇಂದು ನಾವು ಯಾವುದನ್ನು ಪ್ರಾದೇಶಿಕ ಅಸಮಾನತೆಯೆಂದು ಗುರುತಿಸುತ್ತಿದ್ದೇವೆಯೋ ಅದರ ಬಗ್ಗೆ ೧೯೫೬ರಲ್ಲಿ ಕಲ್ಲೂರರು ಬರೆದಿರುವ ಮಾತುಗಳು ನಿಜಕ್ಕೂ ದಂಗುಬಡಿಸುತ್ತವೆ.

*"....ನಿಜ ಕರ್ನಾಟಕ ಕೊಡಗು, ಕನ್ನಡ ಜಿಲ್ಲೆ, ಶಿವಮೊಗ್ಗ, ಚಿತ್ರದುರ್ಗ, ಬಿಜಾಪುರ, ಗುಲಬರ್ಗಾಗಳ ಪ್ರದೇಶದಲ್ಲಿರುವುದಲ್ಲದೆ ಬೆಂಗಳೂರು – ಮಂಗಳೂರು – ಮೈಸೂರು ನಗರಗಳಲ್ಲಿಲ್ಲ. ಇದನ್ನು ಮನದಟ್ಟಾಗುವಂತೆ ಅರಿತಾಗ ಮಾತ್ರ ನಾವು ನಮ್ಮ ನಾಡಿಗೆ ಸಮರ್ಪಕವಾದ ಸಂಚಾರ ಸಂಪರ್ಕಗಳ ಸಾಧನಗಳನ್ನು ಸಂಯೋಜಿಸಿಕೊಳ್ಳಬಲ್ಲೆವು. ಕರ್ನಾಟಕದ ಬಹು ಭಾಗ ನಾಡಿನ ಪಶ್ಚಿಮ ಹಾಗೂ ಉತ್ತರ ನಿಟ್ಟಿನಲ್ಲಿರುವುದರಿಂದಲೂ ಅದರಲ್ಲಿ ಕೆಲಭಾಗ ರಾಜಧಾನಿಯಿಂದ ಅತಿದೂರದಲ್ಲಿರುವುದರಿಂದಲೂ, ಬೆಂಗಳೂರು ಇನ್ನು ಮುಂದೆ ಉತ್ತರಾಭಿಮುಖವಾಗಬೇಕು. ಸಂಸಾರಿಯಾದವನಿಗೆ ಹೊರಗಿನ ದೊಡ್ಡಸ್ಥಿಕೆ ಎಷ್ಟೇ ಇದ್ದರೂ, ತನ್ನ ಕುಟುಂಬದ ಹೊಣೆ ಹೇಗೆ ಆದ್ಯ ಕರ್ತವ್ಯವೋ ಹಾಗೆ ಬೆಂಗಳೂರು ತನ್ನ ಅಂತಾ ಭಾರತೀಯ – ಅಂತಾರಾಷ್ಟ್ರೀಯ ಹಿರಿಮೆ ಎಷ್ಟೇ ಇದ್ದರೂ ಕರ್ನಾಟಕದ ಆರ್ಥಿಕ ಅಂತರ್ವ್ಯವಸ್ಥೆ ಹೆಚ್ಚು ಕೀಳಾಗಿರುವಲ್ಲಿ ತನ್ನ ಹೊಣೆ ಹೆಚ್ಚಿದೆಯೆಂದು ಬಗೆದುಕೊಳ್ಳಬೇಕು".*

ದಾರ್ಶನಿಕರಂತೆ ೨೦೦೬ರಲ್ಲಿ ಉದ್ಭವಿಸಿರುವ ಸಮಸ್ಯೆಗಳನ್ನು ೧೯೫೬ರಲ್ಲಿ ಮುಂಗಂಡು ಕಲ್ಲೂರ ಅವರು ಕರ್ನಾಟಕದ ಅಭಿವೃದ್ಧಿ ಕುರಿತಂತೆ ಚರ್ಚೆಮಾಡಿದ್ದಾರೆ. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಬಗ್ಗೆ ಅವರು ಅಲ್ಲಿ ಮಾತನಾಡಿದ್ದಾರೆ. ಕಲ್ಲೂರರ ಪ್ರಕಾರ ೧೯೫೬ರಲ್ಲಿ ಕರ್ನಾಟಕದಲ್ಲಿ ವಿಲೀನವಾದ ಮತ್ತು ಅಲ್ಲಿಯವರೆಗೆ ಬೇರೆ ಪ್ರಾಂತ - ಸರ್ಕಾರಗಳ ಆಡಳಿತದಲ್ಲಿದ್ದ ಭಾಗಗಳು ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದಿದ್ದವು. ಈ ಎಲ್ಲ ಭಾಗ - ಪ್ರದೇಶಗಳನ್ನು ಕರ್ನಾಟಕದಲ್ಲಿ ವಿಲೀನಗೊಳಿಸಬೇಕೆಂಬ ಏಕೀಕರಣದ ಹಿಂದಿನ ಉದ್ದೇಶವು ಮುಖ್ಯವಾಗಿ ಅಭಿವೃದ್ಧಿಗೆ ಸಂಬಂಧಿಸಿದ್ದುದಾಗಿತ್ತು. ನಿಜ, ಭಾಷೆಯು ಒಂದು ಮುಖ್ಯ ಸಂಗತಿಯಾಗಿತ್ತು. ಏಕೀಕರಣಕ್ಕೆ ಜನರನ್ನು ಸಂಘಟಿಸಲು ಭಾಷೆಯನ್ನು ಒಂದು ಅಸ್ತ್ರವನ್ನಾಗಿ ಬಳಸಲಾಗಿತ್ತು. ಆದರೆ ಈ ವಿಷಯದಲ್ಲಿ ನಿರ್ಣಾಯಕ ಸಂಗತಿ ಅಭಿವೃದ್ಧಿಯದಾಗಿತ್ತು. ನೆರೆ ಪ್ರಾಂತರಾಜ್ಯಗಳ ಭಾಗಗಳು ಸಂಬಂಧಿಸಿದ ಆಡಳಿತದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದವು. ಇಂದಿಗೂ ಗಡಿಭಾಗದ ದ್ವಿಭಾಷಾ ಪ್ರದೇಶಗಳ ಸ್ಥಿತಿ ಹಿಂದಿನದಕ್ಕಿಂತಲೂ ಭಿನ್ನವಾಗಿಲ್ಲ. ಏಕೀಕರಣದ ವೈಫಲ್ಯವನ್ನು ಭಾಷೆಯ ನೆಲೆಯಿಂದ ನೋಡುವುದಕ್ಕೆ ಪ್ರತಿಯಾಗಿ ನಾವು ಅಭಿವೃದ್ಧಿಯ ನೆಲೆಯಿಂದ ಅದನ್ನು ನೋಡುವುದು ಅಗತ್ಯ ಒಟ್ಟಂದದಲ್ಲಿ ಕರ್ನಾಟಕ, ಏಕೀಕರಣವೆಂಬ ಸಂಗತಿಗಳು ಭಾಷೆಗೆ, ಸಾಹಿತ್ಯಕ್ಕೆ ಮಾತ್ರ ಸಂಬಂಧಿಸಿದ ಸಂಗತಿಗಳಾಗಿರಲಿಲ್ಲ. ಈ ಬಗೆಯ ವಿಕೃತಿ ೧೯೫೬ರ ನಂತರ ಉಂಟಾಗಿದೆ. ಏಕೀಕರಣದ ಕನಸು ಕಂಡವರು, ಅದನ್ನು ಉಪಾಸನೆ ಮಾಡಿರುವರು, ಅದನ್ನು ವಿಶಾಲವಾದ ಚೌಕಟ್ಟಿನಲ್ಲಿ ಪರಿಭಾವಿಸಿಕೊಂಡಿದ್ದರು.

**ಕರ್ನಾಟಕ ರಾಷ್ಟ್ರೀಯತೆ**

ಡಾ. ಕೆ.ರಾಘವೇಂದ್ರರಾವ್ ಅವರು ಏಕೀಕರಣದ ದುರೀಣರ ಬಗ್ಗೆ ಬರೆದ ಮಹತ್ವದ ಕೃತಿಯಲ್ಲಿ (೨೦೦೦) ಸರಿಯಾಗಿ ಗುರುತಿಸಿರುವಂತೆ ನಿರ್ಧಿಷ್ಟವಾದ ಹಾಗೂ ಖಚಿತವಾದ ಐತಿಹಾಸಿ, ಸಾಮಾಜಿಕ, ಪ್ರಾದೇಶಿಕ ಹಾಗೂ ರಾಜಕೀಯ ವ್ಯಕ್ತಿತ್ವವನ್ನು ಪಡೆದ ನಾಡು ಕರ್ನಾಟಕ. ಈ ಬಗೆಯ ಅದರ ನಿರ್ದಿಷ್ಟ ವ್ಯಕ್ತಿತ್ವ - ವಿಶಿಷ್ಟತೆಗೆ ಸರಿಸುಮಾರು ಸಾವಿರ ವರ್ಷಗಳ ಇತಿಹಾಸವಿದೆ. ಈ ಬಗೆಯ ವಿಚಾರಗಳ ಹಿನ್ನೆಲೆಯಲ್ಲಿ ಆಲೂರರು 'ಕರ್ನಾಟಕ ರಾಷ್ಟ್ರೀಯತೆ' ಎಂಬ ನುಡಿ ಬಳಸಿದ್ದಾರೆ (ಪು.೮೩). ಈ ಕುರಿತಂತೆ ಅವರ ಮಾತುಗಳು ಅರ್ಥಗರ್ಭಿತವಾಗಿವೆ. 'ರಾಷ್ಟ್ರೀಯತ್ವಕ್ಕೂ ಕರ್ನಾಟಕಕ್ಕೂ ನನಗೆ ವಿಶೇಷ ಬೇಧವೇ ತೋರುವುದಿಲ್ಲ. ಕರ್ನಾಟಕತ್ವವನ್ನಷ್ಟೇ ಕಾರ್ಯಕ್ಷೇತ್ರವನ್ನಾಗಿ ತಕ್ಕೊಂಡು ರಾಷ್ಟ್ರೀಯತ್ವದಲ್ಲಿ ಕೆಲಸ ಮಾಡಿದೆನು. ಇದಕ್ಕೆ ಪ್ರಾದೇಶಿಕ ರಾಷ್ಟ್ರೀಯತ್ವ ಅಥವಾಕರ್ನಾಟಕ ರಾಷ್ಟ್ರೀಯತ್ವವೆಂದು ಕರೆಯಬಹುದು' (ಪು.೭೫). ಕರ್ನಾಟಕ ರಾಷ್ಟ್ರೀಯತೆ ಎಂಬ ನುಡಿಯನ್ನು ಅದರ ಸೈದ್ಧಾಂತಿಕ ನೆಲೆಯಲ್ಲಿ ಮೊದಲು ಬಳಸಿದವರೇ ಆಲೂರರು. ಕರ್ನಾಟಕವೆಂಬುದು ಅವರಿಗೆ ಕೇವಲ ಭಾರತೀಯ ಒಕ್ಕೂಟದೊಳಗಿನ ಒಂದು ಘಟಕವಾಗಿರಲಿಲ್ಲ. ಪರಿಪೂರ್ಣವಾದ ರಾಷ್ಟ್ರೀಯತೆಯ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದ ನಾಡು ಕರ್ನಾಟಕ. ಈಬಗ್ಗೆ ಅವರು ಕರ್ನಾಟಕತ್ವವನ್ನು ಪರಿಭಾವಿಸಿಕೊಂಡು ಬಗೆಯನ್ನು ಪರಿಶೀಲಿಸಿದರೆ ಅವರ ಕರ್ನಾಟಕ ರಾಷ್ಟ್ರೀಯತೆಯ ಅರ್ಥ ತಿಳಿಯುತ್ತದೆ. ಅವರು ಈ ಬಗ್ಗೆ ಹೀಗೆ ಬರೆಯುತ್ತಾರೆ.

'ಕರ್ನಾಟಕತ್ವದ ನನ್ನ ಕಲ್ಪನೆಯು ಸರ್ವವ್ಯಾಪ್ತಿಯಾಗಿದೆ. ಹಲವರು ತಿಳಿಯುವಂತೆ ಅದು ಸಂಕುಚಿತವಾಗಿಲ್ಲ. ನಮ್ಮ ಕರ್ನಾಟಕವು ಭರತ ಖಂಡಕ್ಕಿಂತಲೂ ದೊಡ್ಡದಾಗಿದೆ. ಏಷ್ಯಾ ಖಂಡವನ್ನು ಮಿಕ್ಕಿದೆ, ವಿಶ್ವವನ್ನು ವ್ಯಾಪಿಸಿದೆ. ಇದನ್ನು ಕೇಳಿ ಅನೇಕರು ಆಶ್ಚರ್ಯಗೊಳ್ಳಬಹುದು. ಭರತ ಖಂಡದ ಭಾವೈಕ್ಯ ಮಾತ್ರವಾದ ಕರ್ನಾಟಕವು ಭರತ ಖಂಡಕ್ಕಿಂತಲೂ ದೊಡ್ಡದಿರುವುದು ಎಂದಿಗಾದರೂ ಸಂಭವನೀಯವೇ ಎಂದು ಅವರು ಶಂಕಿಸಬಹುದು. ಅಹುದು, ಅದು ನಿಜವಾಗಿಯೂ ದೊಡ್ಡದಾಗಿದೆ. ಏಕೆಂದರೆ ಕರ್ನಾಟಕದ ಸ್ಥೂಲ ಶರೀರವು ಸಂಕುಚಿತವಾಗಿದ್ದರೂ ಸೂಕ್ಷ್ಮ ಶರೀರವು ಅತಿ ವಿಸ್ತಾರವಾದುದಾಗಿದೆ. ಕರ್ನಾಟಕದಿಂದ ಪ್ರಸ್ತುತವಾದ ವಿಚಾರಗಳು ಇಂದಿಗೆ ಇಡೀ ಪ್ರಪಂಚದಲ್ಲಿ ಹರಡಿಕೊಂಡಿವೆ. ಕರ್ನಾಟಕ ಸಂಸ್ಕೃತಿಯು ಇಡೀ ಪ್ರಪಂಚವನ್ನು ಕೈವಶ ಮಾಡಿಕೊಂಡಿದೆ.... ಕರ್ನಾಟಕವು ಭರತಖಂಡದ ಸಂಸ್ಕೃತಿಯನ್ನೆಲ್ಲ ಪಚನ ಮಾಡಿಕೊಂಡಿರುವುದಲ್ಲದೆ, ತನ್ನ ವಿಶಿಷ್ಟ ಸಂಸ್ಕೃತಿಯನ್ನು ಅದರಲ್ಲಿ ಬೆರಸಿ ಅದನ್ನು ಮತ್ತಷ್ಟು ಪುಷ್ಟಿಯನ್ನಾಗಿಯೂ, ವ್ಯಾಪಕವನ್ನಾಗಿಯೂ ಮಾಡಿರುವುದು' (ಪು. ೧೬೯). ಆಲೂರರ ಕರ್ನಾಟಕತ್ವದ ವಿಚಾರಗಳನ್ನು ಇಷ್ಟೊಂದು ದೀರ್ಘವಾಗಿ ಉಲ್ಲೇಖಿಸಿರುವುದಕ್ಕೆ ಕಾರಣವಿದೆ. ಇವೆಲ್ಲವೂ ಅವರ ಬೀಜ ನುಡಿಗಳು. ಕರ್ನಾಟಕವನ್ನು ಅಖಿಲ ಭಾರತ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುವುದಕ್ಕಷ್ಟೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಆಲೂರರು ಅದನ್ನು ಜಾಗತಿಕ ಮಟ್ಟದಲ್ಲಿ ನಿಲ್ಲಿಸಲು ಪ್ರಯತ್ನಿಸಿದರು. ಸ್ಥೂಲ - ಸೂಕ್ಷ್ಮ - ಕಾರಣವೆಂಬ ಶರೀರಕ್ಕೆ ಸಂಬಂಧಿಸಿದ ಆಧ್ಯಾತ್ಮಿಕ ತತ್ವವನ್ನು ಆಲೂರರು ರಾಷ್ಟ್ರಕ್ಕೆ ಅಂದರೆ ಕರ್ನಾಟಕಕ್ಕೆ ಅನ್ವಯಿಸಿ ತಮ್ಮ ವಿಚಾರ ಬೆಳೆಸಿದ್ದಾರೆ.

**ಭಾರತೀಯ ಸಂಸ್ಕೃತಿ – ಕರ್ನಾಟಕ ಸಂಸ್ಕೃತಿ**

ಆಲೂರರು ಕರ್ನಾಟಕ ಸಂಸ್ಕೃತಿಯನ್ನು ಕಲ್ಪಿಸಿಕೊಂಡಿರುವ ಬಗೆಯು ವಿನೂತನವಾದುದಾಗಿದೆ ವಿಶಿಷ್ಟವಾದುದಾಗಿದೆ. ಭಾರತೀಯ ಮತ್ತು ಕರ್ನಾಟಕ ಸಂಸ್ಕೃತಿಗಳ ಸಂಬಂಧವನ್ನು ಸಾಮಾನ್ಯವಾಗಿ ನಾವು ತಿಳಿದುಕೊಂಡಿರುವುದಕ್ಕಿಂತ ಭಿನ್ನವಾದ ನೆಲೆಯಲ್ಲಿ ಅವರು ಅದನ್ನು ಪರಿಭಾವಿಸಿಕೊಂಡಿದ್ದಾರೆ. ಇವೆರಡರ ಸಂಬಂಧವನ್ನು ತಿರುವು ಮುರುವು ಮಾಡಿ ಅವರು ತಮ್ಮ ಕರ್ನಾಟಕತ್ವದ ವಿಚಾರವನ್ನು ಬೆಳೆಸಿದ್ದಾರೆ.

ಈ ಬಗ್ಗೆ ಅವರ ವಿಚಾರ ಹೀಗೆ.

*"ಕರ್ನಾಟಕ ಸಂಸ್ಕೃತಿಯೆಂಬುದು ಬೇರೆ ಸಂಸ್ಕೃತಿಯೇ ಅಲ್ಲ. ಇಡಿ ಭಾರತಕ್ಕೆಲ್ಲ ಒಂದೇ ಸಂಸ್ಕೃತಿ ಅದೆ. ಅದೆಂದರೆ ಆಧ್ಯಾತ್ಮಸಂಸ್ಕೃತಿ ಎಂದು ಹಲವರ ಕಲ್ಪನೆ. ಅದು ಅಷ್ಟು ಸರಿಯಲ್ಲ. ಏಕೆಂದರೆ ಭಾರತೀಯ ಸಂಸ್ಕೃತಿಯೆಂಬುದು ಇಡೀ ಭಾರತ ಖಂಡಕ್ಕೇನೆ ಒಂದೇ ಇರುತ್ತದೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಆ ಸಂಸ್ಕೃತಿಗೆ ಕರ್ನಾಟಕವು ತನ್ನ ವಿಶಿಷ್ಟ ಸಂಸ್ಕೃತಿಯನ್ನು ಬೆರೆಸಿ ಅದನ್ನು ಪುಷ್ಟಿಗೊಳಿಸುತ್ತದೆಂಬುದನ್ನೂ ವಿಶಿಷ್ಟ ಸ್ವರೂಪವನ್ನು ಕೊಡುತ್ತಿದೆಂಬುದನ್ನೂ ಯಾರೂ ಮರೆಯಬಾರದು".*

ಮುಂದುವರಿದು "ಕರ್ನಾಟಕ ಸಂಸ್ಕೃತಿಯೆಂಬುದು ಭಾರತ ಸಂಸ್ಕೃತಿಯನ್ನು ಒಳಗೊಂಡಿರುವುದಲ್ಲದೆ ಅದನ್ನು ತನ್ನ ವಿಶಿಷ್ಟ ಸಂಸ್ಕೃತಿಯಿಂದ ಪುಷ್ಟಿಗೊಳಿಸಿದೆ" (ಪು.೧೧).

ಇಂದಿಗೂ ಅಸ್ಫೋಟಿಕಾರಿಯೆನ್ನಬಹುದಾದ ಅವರ ಕರ್ನಾಟಕತ್ವ, ಕರ್ನಾಟಕ ಸಂಸ್ಕೃತಿ ಕುರಿತ ವಿಚಾರಗಳ ತಾತ್ವಿಕ - ದಾರ್ಶನಿಕ ಮೇರೆಗಳನ್ನು ಹಿಡಿದಿಡುವುದು ನಮಗೆ ಇನ್ನೂ ಸಾಧ್ಯವಾಗಿಲ್ಲ. ಭಾರತೀಯವೆನ್ನುವುದು ಕರ್ನಾಟಕತ್ವವನ್ನು ಒಳಗೊಂಡಿದೆಯೆಂಬ ಜನಪ್ರಿಯ ವ್ಯಾಪಕ ನಂಬಿಕೆಗೆ ಭಿನ್ನವಾದ ರೀತಿಯಲ್ಲಿ ಕರ್ನಾಟಕತ್ವವೆನ್ನುವುದು ಭಾರತೀಯತೆಯನ್ನು ಒಳಗೊಂಡಿದೆಯೆಂಬ ಅವರ ವಿಚಾರವು ಬೀಜ ಸದೃಶ್ಯವಾದ ನುಡಿಯಾಗಿದೆ. ರಾಜಕೀಯವಾಗಿ ಒಕ್ಕೂಟ ವ್ಯವಸ್ಥೆಗೆ ಹೊಸವ್ಯಾಖ್ಯೆಯನ್ನು ನೀಡುವಷ್ಟು ಅವರ ವಿಚಾರಗಳು ಸೃಜನಶೀಲವಾಗಿವೆ. ಕೇಂದ್ರ ರಾಜ್ಯ ಸಂಬಂಧದ ಬಗ್ಗೆ ಆಲೂರರ ವಿಚಾರಗಳ ಹಿನ್ನೆಲೆಯಲ್ಲಿ ಹೆಚ್ಚಿನ ಅಧ್ಯಯನ ನಡೆಯುವ ಅಗತ್ಯವಿದೆ.

**ಕರ್ನಾಟಕತ್ವ – ಕೃಷ್ಣಕುಮಾರ್ ಕಲ್ಲೂರರ ವಿಚಾರಗಳು (೧೯೦೯ – ೧೯೮೨)**

ಆಲೂರು ವೆಂಕಟರಾಯರ ಗರಡಿಯಲ್ಲಿ ಬೆಳೆದ ಕೃಷ್ಣಕುಮಾರ ಕಲ್ಲೂರ ಅವರು ಕರ್ನಾಟಕತ್ವದ ಉಗ್ರ ಪ್ರತಿಪಾದಕರಾಗಿದ್ದರು. ಏಕೀಕರಣದ ಸಂದರ್ಭದಲ್ಲಿ( ೧೯೫೬) ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಿಗೆ ಪ್ರತಿಯಾಗಿ 'ಮೈಸೂರು' ಎಂಬ ಹೆಸರು ಘೋಷಿತವಾದಾಗ ಕಲ್ಲೂರ ಅವರು 'ಲೇಖನಿ ಸಂನ್ಯಾಸ' ಕೈಗೊಂಡರು. ಕನ್ನಡದಲ್ಲಿ ಬರೆಯುವುದನ್ನೇ ಅವರು ನಿಲ್ಲಿಸಿದರು. ಅವರೊಬ್ಬ ಉಗ್ರ ಕರ್ನಾಟಕತ್ವದ ಉಪಾಸಕರಾಗಿದ್ದರು. ಕರ್ನಾಟಕದ ಕುರಿತು ಕನ್ನಡದಲ್ಲಿ ಬರೆಯುವುದಿಲ್ಲವೆಂಬ ಪ್ರತಿಜ್ಞೆಯನ್ನು ಅವರು ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಬಂದ ೧೯೭೩ರಲ್ಲಿ ಮುರಿದರು.

ಕರ್ನಾಟಕವು ನುಡಿ, ನಾಡು ಮತ್ತು ನಾಡವರು - ಮೂರನ್ನು ಪ್ರತಿನಿಧಿಸುವ ಪರಿಭಾವನೆಯೆಂಬುದು ಕಲ್ಲೂರರ ಅಭಿಮತ. ನುಡಿಗಿಂತ ನಾಡು ಹೆಚ್ಚು. ನಾಡಿಗಿಂತ ನಾಡವರು ಹೆಚ್ಚು ಎಂಬುದು ಅವರ ಮೀಮಾಂಸೆಯಾಗಿತ್ತು. ಅವರ ಪ್ರಕಾರ 'ಕನ್ನಡಗಿ' ಎಂಬುದಕ್ಕಿಂತ 'ಕರ್ನಾಟಕಸ್ಥ' ಎಂಬುದು ಹೆಚ್ಚು ವ್ಯಾಪಕವೆಂಬುದು ಅವರ ವಾದವಾಗಿತ್ತು. ಕನ್ನಡಿಗ ಕನ್ನಡಕ್ಕೆ ಅಂಟಿಕೊಂಡವ; ಕರ್ನಾಟಕಸ್ಥ ಎಲ್ಲ ಸ್ವತ್ತುಗಳಿಗೂ ಹಕ್ಕುದಾರ. ಕನ್ನಡ, ಕನ್ನಡಿಗ, ಕನ್ನಡನಾಡು - ಇವು ಎಂದೆಂದಿಗೂ 'ಕರ್ನಾಟಕಾಂರ್ಗತ' ಎಂಬುದು ಕಲ್ಲೂರ ಗಟ್ಟಿ ನಂಬಿಕೆಯಾಗಿತ್ತು (ಇವರ ವಿಚಾರಗಳ ವಿವರಕ್ಕೆ ನೋಡಿ 'ಕೃಷ್ಣಕುಮಾರ ಕಲ್ಲೂರ: ಸಾಹಿತ್ಯ ವಾಚಿಕೆ,ಸಂ: ಕೃಷ್ಣ ಕೊಲ್ಲಾರ ಕುಲಕರ್ಣಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು: ೧೯೯೪).

**ಕನ್ನಡ ಸಾಹಿತ್ಯ ಪರಿಷತ್ತು/ಕರ್ನಾಟಕ ಸಾಹಿತ್ಯ ಪರಿಷತ್ತು**

ಈ ಸಂಸ್ಥೆಯ ಉಗಮದ ಬಗ್ಗೆ ಅವರು ಹೀಗೆ ಬರೆದಿದ್ದಾರೆ.

*"ಕರ್ನಾಟಕ ಸಾಹಿತ್ಯ ಪರಿಷತ್ತಿನ ಮೂಲ ಸಂಸ್ಥಾಪಕನು ನಾನು. ನಾನೊಬ್ಬನೆ ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ. ಏಕೆಂದರೆ ಅದನ್ನು ಸ್ಥಾಪಿಸುವುದಕ್ಕೆ ೮ – ೧೦ ವರ್ಷ ಎಡೆಬಿಡದೆ ಸ್ವಂತ ಖರ್ಚಿ ನಿಂದ ಬೆಂಗಳೂರು – ಮೈಸೂರುಗಳಿಗೆ ಎಡತಾಕಿದ್ದೇನೆ"(ಪು. ೧೫೫).*

ಇದು ಉಗಮವಾದಾಗ(೧೯೧೫) ಅದರ ಹೆಸರು ಕರ್ನಾಟಕ ಸಾಹಿತ್ಯ ಪರಿಷತ್ತು ಎಂದೇ ಇತ್ತು. ಆದರೆ ಇದಕ್ಕೆ ಮೈಸೂರಿನವರ (ಮುಖ್ಯವಾಗಿ ಬಿ.ಎಂ.ಶ್ರೀ) ವಿರೋಧವಿತ್ತು. ಅವರು ಅದನ್ನು ಕನ್ನಡ ಸಾಹಿತ್ಯ ಪರಿಷತ್ತನ್ನಾಗಿ ಮಾಡಿದರು. ಇದರಿಂದ ಬೇಸತ್ತು ಆಲೂರರು ೧೯೩೮ರಲ್ಲಿ ತಾವೇ ಹುಟ್ಟು ಹಾಕಿದ್ದ ಸಂಸ್ಥೆಯಿಂದ ಹೊರಬರುತ್ತಾರೆ. ಆಲೂರರ ಕರ್ನಾಟಕತ್ವವು ಎಷ್ಟೊಂದು ವಿಸ್ತೃತವಾಗಿತ್ತು ಎಂಬುದು (ಪು.೧೫೭) ಇದರಿಂದ ತಿಳಿದುಬರುತ್ತದೆ. ಅವರು ಭಾಷಾವಾರು ಪ್ರಾಂತಗಳ ಬಗ್ಗೆ ಚಿಂತಿಸುತ್ತಿದ್ದ ರೀತಿಯ ನಿಜಕ್ಕೂ ಕುತೂಹಲಕಾರಿಯಾಗಿತ್ತು. ಕರ್ನಾಟಕಕ್ಕೆ ಕನ್ನಡವೆಂಬ ಅರ್ಥ ಕೊಡುವುದಕ್ಕೆ ಅವರು ವಿರೋಧಿಯಾಗಿದ್ದರು. ಅವರ ಕರ್ನಾಟಕತ್ವವು ಸಾರ್ವತ್ರಿಕ - ಸಾರ್ವಜನಿಕವಾದ ಒಂದು ವಿಚಾರಕಲ್ಪವಾಗಿತ್ತು.

ಅವರ ಕೆಥೋಲಿಕ್ ಗುಣಗಳ ಬಗ್ಗೆ ದಂಡಿಯಾಗಿ ನಮಗೆ ನಿದರ್ಶನಗಳು ದೊರೆಯುತ್ತವೆ. ಅವರು ಕರ್ನಾಟಕವು ಉದಯವಾದ ೦೧.೧೦.೧೯೫೬ರಂದು ನೀಡಿದ ಸಂದೇಶದಲ್ಲಿ ಕೆಳಗಿನ ಮಾತುಗಳಿವೆ.

*"ರಾಜ್ಯವು ಸುಪ್ರಜಾರಾಜ್ಯವೆನಿಸುವುದಕ್ಕೆ ಬಹುಸಂಖ್ಯಾತರ ತುಷ್ಟಿ ಪುಷ್ಟಿಗಳಿಗಿಂತಲೂ ಅಲ್ಪಸಂಖ್ಯಾತರ ತುಷ್ಟಪುಷ್ಟಿಗಳೇ ಹೆಚ್ಚಿನ ಮಾಪಕಗಳು"(ಪು. )*

ಅತ್ಯಂತ ಕುತೂಹಲಕಾರಿಯಾದ ಮೇಲಿನ ಮಾತುಗಳನ್ನು ೨೦೦೬ರಲ್ಲಿ ಯಾರಾದರೂ ನುಡಿದಿದ್ದರೆ ಆಶ್ಚರ್ಯವುಂಟಾಗುತ್ತಿರಲಿಲ್ಲ. ಆದರೆ ಆಲೂರರು ೨೦೦೬ರ ಪರಿಭಾಷೆಯನ್ನು ೧೯೫೬ರಲ್ಲಿ ನುಡಿದಿದ್ದಾರೆ. ಆಲೂರರ ವಿಚಾರಗಳಲ್ಲಿನ ಕೆಥೋಲಿಕ್ ಗುಣಗಳು ನಿಜಕ್ಕೂ ಅಚ್ಚರಿ ಮೂಡಿಸುತ್ತವೆ. ಏಕೆಂದರೆ ಅವರು ಮೂಲತಃ ಧಾರ್ಮಿಕ ವ್ಯಕ್ತಿಗಳು. ಅವರು ಆಧ್ಯಾತ್ಮವಾದಿಗಳು. ತಮ್ಮ ಕೃತಿಯ ಮುನ್ನುಡಿಯಲ್ಲಿ ತನ್ನ ಆಯುಷ್ಯದ ಮುಖ್ಯ ಧ್ಯೇಯಗಳು ಸ್ವಾತಂತ್ರ್ಯ, ಅಖಂಡ ಕರ್ನಾಟಕ ಮತ್ತು ಆಧ್ಯಾತ್ಮ ಸಾಧನೆ (ಪು. ) ಎಂದು ಘೋಷಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಮೇಲಿನ ಮಾತುಗಳನ್ನು ಗಮನಿಸಿದಾಗ ಅವರ ಪ್ರಜಾಪ್ರಭುತ್ವವಾದಿ ಧೋರಣೆಯು ತಿಳಿಯುತ್ತದೆ. ಎಲ್ಲರನ್ನು ಒಳಗೊಳ್ಳುವ ಅವರ ಪ್ರಜಾಪ್ರಭುತ್ವವಾದಿ ಧೋರಣೆಯು ತಿಳಿಯುತ್ತದೆ. ಎಲ್ಲರನ್ನು ಒಳಗೊಳ್ಳುವ ಅವರ ಕರ್ನಾಟಕತ್ವ ಮೀಮಾಂಸೆಯ ಚೌಕಟ್ಟಿನಲ್ಲಿ ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಅಲ್ಪಸಂಖ್ಯಾತರ ಬಗ್ಗೆ ಅವರ ಮೀಮಾಂಸೆಯು 'ಒಳಗಣ'ತನದಿಂದ ಕೂಡಿತ್ತೆ ವಿನಾ ಹೊರಗಣತನದಿಂದ ಕೂಡಿರಲಿಲ್ಲ.

**ವಿಚಾರ – ವಿಮರ್ಶೆ**

ಈ ಭಾಗದಲ್ಲಿ ಆಲೂರ ವೆಂಕಟರಾಯರ ಕರ್ನಾಟಕತ್ವದ ಮೂಲದಲ್ಲಿರುವ ಸೈದ್ಧಾಂತಿಕ ಸಂಗತಿಗಳನ್ನು ಚರ್ಚಿಸಲಾಗಿದೆ ಮತ್ತು ಅದರ ಇತಿಮಿತಿ ಹಾಗೂ ಮಹತ್ವವನ್ನು ವಿಶ್ಲೇಷಿಸಲಾಗಿದೆ. ಆಲೂರರು ತಮ್ಮ ರಾಷ್ಟ್ರೀಯತೆ (ಭಾರತೀಯ - ಕರ್ನಾಟಕ)ಯ ಸಿದ್ಧಾಂತವನ್ನು ಧಾರ್ಮಿಕ ಅಂದರೆ ಸನಾತನ ಧರ್ಮದ ನೆಲೆಗಟ್ಟಿನಲ್ಲಿ ಕಟ್ಟಿದ್ದಾರೆ. ಇದನ್ನು ಧಾರ್ಮಿಕ ರಾಷ್ಟ್ರೀಯತೆಯೆಂದು ಕರೆಯಬಹುದು (ಡಾ. ಡಿ.ಆರ್. ನಾಗರಾಜ್ ಇದನ್ನು ಆಧ್ಯಾತ್ಮಿಕ ರಾಷ್ಟ್ರೀಯತೆ ಎಂದು ಕರೆದಿದ್ದಾರೆ). ಇದರಲ್ಲಿ ಅವರು ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು

ಹಾಗೂ ಗೀತೆಯ ಸಾರವನ್ನು ಸಂಪನ್ಮೂಲವನ್ನಾಗಿ ಬಳಸಿಕೊಂಡಿದ್ದಾರೆ. ಡಾ. ಡಿ. ಆರ್. ನಾಗರಾಜ್ ಮತ್ತು ಡಾ. ಕೆ. ರಾಘವೇಂದ್ರರಾವ್ ಅವರು ಸರಿಯಾಗಿ ಗುರುತಿಸಿರುವಂತೆ ಆಲೂರರ ಧಾರ್ಮಿಕ - ಆಧ್ಯಾತ್ಮಿಕ ರಾಷ್ಟ್ರಿಯತೆಯನ್ನು ಬಹಳ ಎಚ್ಚರಿಕೆಯಿಂದ ಪರಿಗಣಿಸಬೇಕಾಗಿದೆ.

ಇಂದು ವ್ಯಾಪಕವಾಗಿ ಕೇಳಿಬರುತ್ತಿರುವ ಸಾಂಸ್ಕೃತಿಕ ರಾಷ್ಟ್ರೀಯತೆಗಿಂತ ತೀವ್ರ ಭಿನ್ನವಾದ ವಿಚಾರ ಪ್ರಣಾಳಿಕೆ ಅವರದಾಗಿತ್ತು. ಅವರ ರಾಷ್ಟ್ರೀಯತೆಯು ಯಾವುದೋ ಒಂದು ಧಾರ್ಮಿಕ ಸೂತ್ರದ ಚೌಕಟ್ಟಿಗೆ ಕಟ್ಟಿದ ವಿಚಾರ ಪ್ರಣಾಳಿಕೆಯಾಗಿರಲಿಲ್ಲ. ಇದಕ್ಕಿಂತ ಭಿನ್ನವಾಗಿ ಅವರ ರಾಷ್ಟ್ರೀಯತೆಯು ಆಧುನಿಕತೆ ಹಾಗೂ ಸನಾತನಗಳೆರಡನ್ನು ಒಳಗೊಂಡ ಒಂದು ಸೂತ್ರವಾಗಿತ್ತು. (ಡಾ. ಡಿ.ಆರ್. ನಾಗರಾಜ್, ಸಾಹಿತ್ಯ ಕಥನ, ೧೯೯೭,ಪು.೨೭೯) ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಅವರ ರಾಷ್ಟ್ರೀಯತೆಯು ಉದಾರವಾದಿ ಪ್ರಜಾಪ್ರಭುತ್ವ ಚೌಕಟ್ಟನ್ನು ಹೊಂದಿತ್ತು. ಆಲೂರರ ವಿಚಾರ ಪ್ರಣಾಳಿಕಯ ಎರಡು ಪ್ರಮುಖ ಲಕ್ಷಣಗಳನ್ನು ಕೆ. ರಾಘವೇಂದ್ರರಾವ್ ಗುರುತಿಸಿದ್ದಾರೆ.

ಮೊದಲನೆಯದು ಅದರ ಸಂಬಂಧವಾದಿ ನೆಲೆ. ಕರ್ನಾಟಕತ್ವ, ಭಾರತೀಯತೆ, ಜಾಗತಿಕತೆ, ಧಾರ್ಮಿಕತೆ ಮುಂತಾದವು ಪರಸ್ಪರ ಅವಲಂಬಿತವಾದ ಮತ್ತು ಪರಸ್ಪರ ಸಂಬಂಧವುಳ್ಳ ಸಂಗತಿಗಳನ್ನಾಗಿ ಅವರು ಪರಿಭಾವಿಸಿಕೊಂಡಿದ್ದರು. ಇವುಗಳಲ್ಲಿ ಯಾವುದಕ್ಕೂ ಪ್ರತ್ಯೇಕವಾದ ನಿರಂಕುಶವಾದ ಸ್ಥಾನವಿರಲು ಅವರ ವೈಚಾರಿಕತೆಯಲ್ಲಿ ಅವಕಾಶವಿರಲಿಲ್ಲ. ಸಂಬಂಧವಾದಿತ್ವವು ಅವರ ವಿಚಾರ ಪ್ರಣಾಳಿಕೆಯ ಒಂದು ಪ್ರಮುಖ ಲಕ್ಷಣವಾಗಿತ್ತು. ತಮ್ಮ 'ಕರ್ನಾಟಕತ್ವದ ವಿಕಾಸ' ಕೃತಿಯ 'ಸಮರ್ಪಣ'ದಲ್ಲಿ ಹೀಗೆ ಅವರು ಬರೆದುಕೊಂಡಿದ್ದಾರೆ.

*"ಕರ್ನಾಟಕಾಂತರ್ಯಾಮಿಯಾದ ಭಾರತೀದೇವಿಗೆ*
*ಭಾರತಾಂತಾರ್ಯಾಮಿಯಾದ ಭೂದೇವಿಗೆ*
*ಭಕ್ತಪೂರ್ವಕ ಸಮರ್ಪಣ" – ಕರ್ನಾಟಕ 'ಸುಧಾಮ' ಆಲೂರು ವೆಂಕಟರಾಯ.*

ಎರಡನೆಯದಾಗಿ ಎಲ್ಲರನ್ನೂ ಒಳಗೊಳ್ಳುವಂತಹ ಕೆಥೋಲಿಕ್ ಗುಣ. ಅವರದು ಸಂಘರ್ಷವಾದಿ ವಿಚಾರ ಪ್ರಣಾಳಿಕೆಯಾಗಿರಲಿಲ್ಲ. ಅವರದು ಹೊರಗಣತನದ ರಾಷ್ಟ್ರೀಯತೆಯಾಗಿರಲಿಲ್ಲ. ಅದು ಬಹುತ್ವದಿಂದ ಕೂಡಿದ ಸಿದ್ಧಾಂತವಾಗಿತ್ತು. ಎಲ್ಲರನ್ನೂ - ಎಲ್ಲವನ್ನೂ ಒಳಗೊಳ್ಳುವ ಗುಣ ಅದಕ್ಕಿತ್ತು.

ಈಗಾಗಲೇ ತಿಳಿಸಿರುವಂತೆ ದ್ವೈತ ಸಿದ್ಧಾಂತವನ್ನು ತಮ್ಮ ಆಧ್ಯಾತ್ಮ ಸಾಧನೆಯ ಮಾರ್ಗವನ್ನಾಗಿ ಆಲೂರರು ಮಾಡಿಕೊಂಡಿದ್ದರು. ಅವರು ರೂಪಿಸಿದ್ದ ಕನಾಟಕತ್ವವೆಂಬ ರಾಜಕೀಯ ವಿಚಾರ ಪ್ರಣಾಳಿಕೆಗೂ ಮತ್ತು ದ್ವೈತ ಸಿದ್ಧಾಂತಕ್ಕೂ ನಡುವೆ ಸಂಬಂಧವನ್ನು ಗುರುತಿಸಬಹುದು.

ಕೇಂದ್ರ - ರಾಜ್ಯಗಳ ನಡುವಣ ಸಂಬಂಧದ ಬಗ್ಗೆ ಅವರ ವಿಚಾರಗಳು ಇಂದಿಗೂ ಕ್ರಾಂತಿಕಾರಕವಾಗಿ ಕಾಣುತ್ತವೆ. ಒಕ್ಕೂಟ ವ್ಯವಸ್ಥೆಯನ್ನು - ಕೇಂದ್ರ - ಭಾಷಾವಾರು ಪ್ರಾಂತಗಳ ನಡುವಣ ಸಂಬಂಧವನ್ನು ಅವರು ಪರಿಭಾವಿಸಿಕೊಂಡಿದ್ದ ರೀತಿಗೂ ಮತ್ತು ಆತ್ಮ - ಪರಮಾತ್ಮಗಳ ಭಿನ್ನ ಅಸ್ತಿತ್ವವನ್ನು ಮನ್ನಿಸಿದ ದ್ವೈತ ಸಿದ್ಧಾಂತಗಳ ನಡುವೆ ಸಂಬಂಧವನ್ನು ಗುರುತಿಸಲು ಸಾಧ್ಯ. ಅವರ ವಿಚಾರ ಪ್ರಣಾಳಿಕೆಯಲ್ಲಿ ಪ್ರಾಂತಕ್ಕೆ ಸ್ವತಂತ್ರ ಸ್ವಾಯತ್ತ ಸ್ಥಾನ - ಅಧಿಕಾರವಿತ್ತು ಅದು ಕೇಂದ್ರದ ಬಾಲಂಗೋಚಿಯಲ್ಲ. ಅಭಿನ್ನತೆಯೊಳಗೆ ಭಿನ್ನತೆಯನ್ನು ತುಂಬಾ ಆರೋಗ್ಯಕಾರಿ ನೆಲೆಯಲ್ಲಿ ಪರಿಭಾವಿಸಿ ಕೊಳ್ಳುವುದ ಆಲೂರರಿಗೆ ಸಾಧ್ಯವಾಗಿತ್ತು. ಈ ಒಂದು ಶಕ್ತಿ - ಪ್ರೇರಣೆ ದಿಶೆಯು ದ್ವೈತ ಸಿದ್ಧಾಂತದಿಂದ ಅವರಿಗೆ ಬಂದಂತೆ ಕಾಣುತ್ತದೆ.

## ಅನನ್ಯತೆಯ ರಾಜಕಾರಣ

ಆಲೂರರ ಕರ್ನಾಟಕತ್ವ ವಿಚಾರ ಪ್ರಣಾಳಿಕೆಯನ್ನು ಅನನ್ಯತೆಯ ರಾಜಕಾರಣದ ಚೌಕಟ್ಟಿನಲ್ಲಿಯು ಅಧ್ಯಯನ ಮಾಡಬಹುದು. ಈಗಾಗಲೇ ತಿಳಿಸಿರುವಂತೆ ಅವರ ವಿಚಾರ ಪ್ರಣಾಳಿಕೆಯಲ್ಲಿ ಕರ್ನಾಟಕಕ್ಕೆ ಭಾರತೀಯತೆಯ ಒಂದು ನೆಲೆಯೂ ಇದೆ ಮತ್ತು ತನ್ನ ವಿಶಿಷ್ಟತೆಯ ನೆಲೆಯೂ ಇದೆ. ಅದೇ ರೀತಿ ಭಾರತೀಯತೆಗೆ ಜಾಗತಿಕವಾದ ಒಂದು ನೆಲೆಯಿದೆ ಹಾಗೂ ಅದಕ್ಕೆ ಕರ್ನಾಟಕತ್ವದ ಒಂದು ನೆಲೆಯಿದೆ. ಆಲೂರರ ರಾಷ್ಟ್ರೀಯತೆ ಸಿದ್ಧಾಂತದಲ್ಲಿ ಕರ್ನಾಟಕತ್ವವಿಲ್ಲದೆ ಭಾರತೀಯತೆಗೆ ಅಸ್ತಿತ್ವವಿಲ್ಲ. ಆಲೂರರ ಕರ್ನಾಟಕತ್ವವು ಭಾರತೀಯತೆಯು ತಿಂದು ತೇಗಿ ಅರಗಿಸಿಕೊಂಡು ಬಿಡುವ ಸ್ವರೂಪದ್ದಾಗಿರಲಿಲ್ಲ. ಕರ್ನಾಟಕತ್ವದಿಂದ ಭಾರತೀಯತೆಯು ಭಾರತೀಯತೆಯಿಂದ ಕರ್ನಾಟಕತ್ವವು ಅಸ್ತಿತ್ವವನ್ನು ಪಡೆದುಕೊಂಡ ಸಂಗತಿಗಳನ್ನಾಗಿ ಅವರು ಅವುಗಳನ್ನು ಪರಿಭಾವಿಸಿ ಕೊಂಡಿದ್ದಾರೆ. ಇದನ್ನು ಏಕತೆ - ಅನೇಕತೆಯೆಂಬ ಕ್ಲಿಷೆಯ ಚೌಕಟ್ಟಿನಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಭಾರತೀಯ ಸಂಸ್ಕೃತಿಯ ಏಕತೆ - ಅನೇಕತೆಗಳ ನಡುವಣ ಸಂಬಂಧವನ್ನು ಅವರು ಮರು ಪರಿಶೋಧಕ್ಕೆ ಒಳಪಡಿಸಿದರು. ಇವೆರಡರ ನಡುವಣ ಸಂಬಂಧವನ್ನು ಅವರು ಚಲನಶೀಲವಾದ ಹಾಗೂ ಸಂಕೀರ್ಣವಾದ ನೆಲೆಯಲ್ಲಿ ಪರಿಭಾವಿಸಿಕೊಂಡಿದ್ದರು. ಇವೆರಡೂ ಪರಸ್ಪರ ಪೂರಕವಾದ ಸಂಗತಿಗಳಾಗಿವೆಯೆ ವಿನಾ ಪರಸ್ಪರ ಪರ್ಯಾಯವಾದ ಸಂಗತಿಗಳಲ್ಲ. ಈ ಬಗೆಯ ಚಿಂತನೆಯ ಕಾರಣದಿಂದಾಗಿಯೇ ಅವರಿಗೆ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಹೋರಾಟಗಳ ನಡುವೆ ವೈರುಧ್ಯ ಕಾಣಲಿಲ್ಲ. ಭಾರತೀಯ ಸ್ವಾತಂತ್ರ್ಯ ಅಥವಾ ಕರ್ನಾಟಕ ಏಕೀಕರಣಯೆಂಬುದು ಅವರ ಮುಂದಿದ್ದ ಗುರಿಯಲ್ಲ. ಅವರ ಮುಂದಿದ್ದ ಗುರಿ 'ಸ್ವಾತಂತ್ರ್ಯ' ಹಾಗೂ 'ಏಕೀಕರಣ'. ಆಲೂರಿರಿಗೆ ಇವೆರಡೂ ಸಾಯವವಾಗಿ ಪರಸ್ಪರ ಬೆಸೆದುಕೊಂಡು ಸಂಗತಿಗಳಾಗಿದ್ದವು.

ಆಲೂರರು ತಮ್ಮ ವಿಚಾರ ಪ್ರಣಾಳಿಕೆಯನ್ನು ಕಟ್ಟುವ ದಿಶೆಯಲ್ಲಿ ಅನೇಕ ಸಮಸ್ಯೆಗಳನ್ನು ಹಾಗೂ ಪ್ರಶ್ನೆಗಳನ್ನು ಎದುರಿಸಿದಂತೆ ಕಾಣುತ್ತದೆ. ಏಕೆಂದರೆ ವಸಾಹತುಶಾಹಿ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು ಅಥವಾ ಕರ್ನಾಟಕ ಏಕೀಕರಣ ವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಅತೀತವಾದ ನೆಲೆಯಲ್ಲಿ ಊಹಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದರೆ ಅವರಿಗೆ ಇವೆರಡನ್ನು ಸಂಯೋಜಿಸುವಂತಹ ಸಿದ್ಧಾಂತವೊಂದರ ಅಗತ್ಯವಿತ್ತು. ಇದರಿಂದಾಗಿ ಅವರಿಗೆ ಭಾರತೀಯ ರಾಷ್ಟ್ರೀಯತೆಯನ್ನು ಅಥವಾ ಭಾರತೀಯ ಸಂಸ್ಕೃತಿಯನ್ನು ಪುನರ್ ಪರಿಶೋಧಿಸುವ ಪ್ರಮೇಯ ಉಂಟಾಯಿತು.

ಇದಕ್ಕೆ ಅವರು ಕಂಡುಕೊಂಡ ಪರಿಹಾರವು ತುಂಬಾ ಕುತೂಹಲಕಾರಿಯಾಗಿದೆ. ಅವರ ಮೀಮಾಂಸೆಯಲ್ಲಿ ಭಾರತೀಯತೆ ಹಾಗೂ ಕರ್ನಾಟಕತ್ವ ಇವೆರಡನ್ನೂ ಅವರು ಜಾಗತಿಕತೆಯ ಚೌಕಟ್ಟಿನಲ್ಲಿ ಅಸ್ತಿತ್ವ ಪಡೆದ ಸಂಗತಿಗಳನ್ನಾಗಿ ಪರಿಭಾವಿಸಿಕೊಂಡರು. ಭಾರತೀಯತೆ - ಕರ್ನಾಟಕತ್ವ, ಜಾಗತಿಕತೆ - ಸನಾತನತೆ ಇವುಗಳ ಸಂಬಂಧವನ್ನು ಅವರು ಪುನರ್ ವ್ಯಾಖ್ಯಾನಕ್ಕೆ ಒಳಪಡಿಸಿದರು. ಕರ್ನಾಟಕತ್ವದ ಹಾಗೂ ಭಾರತೀಯತೆಗಳ ಪ್ರತ್ಯೇಕ ಅಸ್ತಿತ್ವವನ್ನು ಒಪ್ಪುತ್ತಲೇ ಅವುಗಳ ನಡುವಣ ಸಂಬಂಧವನ್ನು ಅವರು ಹೊಸ ರೀತಿಯಲ್ಲಿ ಕಟ್ಟಿಕೊಳ್ಳಲು ಪ್ರಯತ್ನಿಸಿದರು. ಅವರ ಮೀಮಾಂಸೆಯಲ್ಲಿ ಕರ್ನಾಟಕತ್ವವು ಒಂದು ಪ್ರತ್ಯೇಕವಾದ ಅನನ್ಯತೆ. ಆದರೆ ಅದು ಪ್ರತ್ಯೇಕವಾದ ಒಂದು ಸಂಗತಿಯಾದರೂ ಅವರ ಮೀಮಾಂಸೆಯಲ್ಲಿ ಇತರೆ ಅನನ್ಯತೆಗಳಿಗೂ ಅವಕಾಶವಿತ್ತು. ಕನ್ನಡಿಗ, ಕರ್ನಾಟಕಸ್ಥ, ಭಾರತೀಯ ಹಾಗೂ ಜಾಗತಿಕ ನಾಗರಿಕ ಹೀಗೆ ಎಲ್ಲವೂ ಏಕಕಾಲದಲ್ಲಿ ಅಸ್ತಿತ್ವದಲ್ಲಿರ ಬಲ್ಲವು ಮತ್ತು ಇರಬೇಕು ಹಾಗೂ ಇರುತ್ತವೆ ಎಂಬುದು ಆಲೂರರ ಸಿದ್ಧಾಂತವಾಗಿತ್ತು. ಇವೆಲ್ಲವೂ ಏಕಕಾಲದಲ್ಲಿ ಅಸ್ತಿತ್ವದಲ್ಲಿರಲು ಸಾಧ್ಯವೆಂಬ ಸಂಗತಿಯನ್ನು ಅವರು ಪ್ರತಿಪಾದಿಸಿದರು.

ಪಶ್ಚಿಮದಲ್ಲಿ ದೈತ್ಯರೂಪದಲ್ಲಿ ಬೆಳೆಯುತ್ತಿದ್ದ ಸಾಮ್ರಾಜ್ಯಶಾಹಿ ರಾಷ್ಟ್ರೀಯತೆಯನ್ನು ಅವರು ತಿರಸ್ಕರಿಸಿದರು. ಅವರದು ಎಲ್ಲರನ್ನೂ ಒಳಗೊಳ್ಳುವ ಮೀಮಾಂಸೆಯಾಗಿತ್ತು. ಈಗಾಗಲೇ ತಿಳಿಸಿರುವಂತೆ ಹೊರಗಣತನ ಅಥವಾ ತಿರಸ್ಕಾರವಾದಿ ವಿಚಾರ ಪ್ರಣಾಳಿಕೆ ಅದಾಗಿರಲಿಲ್ಲ. ಕರ್ನಾಟಕತ್ವದ ಬಗ್ಗೆ ಅವರು ಮಾತನಾಡುತ್ತಿದ್ದರೂ ಅವರ ವಿಚಾರಗಳು ಕರ್ನಾಟಕತ್ವದ ವ್ಯಾಪ್ತಿಯನ್ನು ಮೀರಿದ ನೆಲೆಯನ್ನು ಪಡೆದುಕೊಂಡಿದ್ದವು. ಅವರ ಪ್ರಾದೇಶಿಕ ರಾಜಕಾರಣ ಸಿದ್ಧಾಂತವು ಕರ್ನಾಟಕವನ್ನು ಬಿಟ್ಟು ಉಳಿದ ಪ್ರಾಂತಗಳಿಗೂ

ಅನ್ವಯವಾಗುವ ಸೈದ್ಧಾಂತಿಕ ಗುಣವನ್ನು ಪಡೆದಿತ್ತು. ತಾವು ರಚಿಸಿದ ಕರ್ನಾಟಕತ್ವದ ಸೂತ್ರಗಳ ಬಗ್ಗೆ ಬರೆಯುತ್ತಾ ಅವರು 'ಈ ಸೂತ್ರಗಳು ಕರ್ನಾಟಕಕ್ಕೆ ಮಾತ್ರ ಅನ್ವಯಿಸದೆ, ತಕ್ಕ ಅದಲು ಬದಲುಗಳಿಂದ ಮಿಕ್ಕ ಪ್ರಾಂತಗಳಿಗೂ ಅನ್ವಯಿಸುವವು. ಎಲ್ಲ ಪ್ರಾಂತಗಳು ಕೂಡಿ ಒಟ್ಟಾರೆ ಪ್ರಯತ್ನಿಸಬೇಕೆಂಬುದೇ ನನ್ನ ಉದ್ದೇಶ' ಎಂಬ ವಿಚಾರವನ್ನು ಮಂಡಿಸುತ್ತಾರೆ (ಪು. ೧೮೯). ಬಹುರೂಪಿ ಅಸ್ತಿತ್ವಕ್ಕೆ ಸಂಬಂಧಿಸಿದ ಘರ್ಷಣೆಗಳಿಗೆ ಆಲೂರರು ತಮ್ಮಮೀಮಾಂಸೆಯಲ್ಲಿ ಪರಿಹಾರದ ಮಾರ್ಗಗಳನ್ನು ರೂಪಿಸಿದ್ದರು. ಈ ಬಗೆಯ ಕಾರ್ಯತಂತ್ರವನ್ನು ಕೆ.ರಾಘವೇಂದ್ರರಾವ್ 'ಬಹುರೂಪಿ ಅಸ್ತಿತ್ವದ ನಿರ್ವಹಣೆ ಕಾರ್ಯತಂತ್ರ'ವೆಂದು ಕರೆದಿದ್ದಾರೆ. ಭಾರತೀಯ ರಾಷ್ಟ್ರೀಯತೆ - ಕರ್ನಾಟಕತ್ವಗಳ ಸಂಬಂಧ ಕುರಿತಂತೆ ಬರೆಯುವಾಗ ಆಲೂರರು ತಮ್ಮನ್ನು ತಾವು ಕನ್ನಡಿಗನನ್ನಾಗಿ, ಕರ್ನಾಟಕಸ್ಥನನ್ನಾಗಿ, ಭಾರತೀಯನನ್ನಾಗಿ, ಜಾಗತಿಕ ನಾಗರಿಕನನ್ನಾಗಿ ಪರಿಭಾವಿಸಿಕೊಳ್ಳುತ್ತಾರೆ. ಇವೆಲ್ಲ ಅಸ್ತಿತ್ವಗಳ ಜೊತೆಯಲ್ಲಿ ಅವರು ಆಧುನಿಕ ನಾಗರಿಕನ ವ್ಯಕ್ತಿತ್ವವನ್ನು ತಬ್ಬಿಕೊಳ್ಳಲು ಪ್ರಯತ್ನಿಸುತ್ತಾರೆ.

**ಅಭಿನ್ನ ಕರ್ನಾಟಕ**

ಆಲೂರರ ಕರ್ನಾಟಕತ್ವವು ಅಭಿನ್ನವಾದ - ಅಖಂಡವಾದ ವಿಚಾರ ಪ್ರಣಾಳಿಕೆಯಾಗಿರಲಿಲ್ಲ. ಇದಕ್ಕೆ ಪ್ರತಿಯಾಗಿ ಭಿನ್ನತೆಯನ್ನು ಒಳಗೊಂಡೂ ಅಭೀನ್ನವಾಗುವ, ಏಕಭಾಷೆಯನ್ನು ಮೀರಿಯೂ ಭಾಷಾ ಪ್ರಾಂತವಾದ, ಅಂದರೆ ಭಿನ್ನ ಧರ್ಮಗಳು, ಜಾತಿಗಳು, ಭಾಷೆಗಳ ಜನರನ್ನು ಒಟ್ಟಿಗೆ ಒಳಗೊಳ್ಳುವ ಒಂದು ರಾಜಕೀಯ ಚಿಂತನೆ ಅದಾಗಿತ್ತು. ಕರಾವಳಿ ಕರ್ನಾಟಕ, ಕೊಡಗು ಕರ್ನಾಟಕ, ಹೈದರಾಬಾದ್ - ಕರ್ನಾಟಕ, ಮಲೆಗಳ ಕರ್ನಾಟಕ, ದಕ್ಷಿಣ ಕರ್ನಾಟಕ, ಮುಂಬೈ ಕರ್ನಾಟಕ - ಹೀಗೆ ಹಲವು ಕರ್ನಾಟಕಗಳ ಸಂಯೋಜಿತ ಪ್ರಾಂತ ಕರ್ನಾಟಕ. ಈ ಬಗೆಯ ಭಿನ್ನತೆಗಳನ್ನು ಒಪ್ಪಿಕೊಳ್ಳದೆ - ಮನ್ನಿಸದೆ ಬೇರೆ ಮಾರ್ಗವಿರಲಿಲ್ಲ. ಇಡೀ ಕರ್ನಾಟಕವನ್ನು ಗ್ರಹಿಸುವ ಮಾರ್ಗವೆಂದರೆ ಅದರ ಭಿನ್ನತೆಯನ್ನು ಮನ್ನಿಸುವುದೇ ಆಗಿತ್ತು. ತಮ್ಮ ಕರ್ನಾಟಕತ್ವ ಮೀಮಾಂಸೆಯು ಕರ್ನಾಕಟವನ್ನೂ, ಭಾರತವನ್ನೂ ಮೀರಿದ ಜಾಗತಿಕ ವಿಚಾರ ಪ್ರಣಾಳಿಕೆಯೆಂದು ಆಲೂರರು ಪ್ರತಿಪಾದಿಸಿದಾಗ ಇದೇ ಅರ್ಥದಲ್ಲಿ ಎಂಬುದನ್ನು ನಾವು ಗಮನಿಸಬೇಕು. ಇದೊಂದು ತಾತ್ವಿಕ ಪ್ರಣಾಳಿಕೆ. ಅದೊಂದು ಮೀಮಾಂಸೆ. ಭಾರತದ ಒಕ್ಕೂಟ ವ್ಯವಸ್ಥೆಯ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು, ಭಾರತೀಯತೆಯನ್ನು ಪರಿಭಾವಿಸಿಕೊಳ್ಳಲು ಅಗತ್ಯವಾದ ಸೈದ್ಧಾಂತಿಕ ಕ್ರಮವೊಂದನ್ನು ಆಲೂರರು ತಮ್ಮ ಕನಾಟಕತ್ವ ಮೀಮಾಂಸೆಯಲ್ಲಿ ಪ್ರತಿಪಾದಿಸಿದ್ದಾರೆ. ಭಾಷಾವಾರು ಪ್ರಾಂತ ಕುರಿತಂತೆ ಪ್ರಬಲ ಹೋರಾಟವನ್ನು ಸಂಘಟಿಸುತ್ತಲೇ, ಅಂತಹ ವಿಚಾರವನ್ನು ಪ್ರತಿಪಾದಿಸುತ್ತಲೇ ಅವರು ಅದನ್ನು ಮೀರುವ ದಾರಿಗಳನ್ನು ಕಂಡುಕೊಂಡಿದ್ದರು.

**ಪದಾರ್ಥ ಮತ್ತು ಪರಮಾರ್ಥ**

ಈ ಹಿಂದೆ ನೋಡಿದಂತೆ ಆಲೂರರು ಮೂಲತಃ ಧಾರ್ಮಿಕ ವ್ಯಕ್ತಿ. ತಮ್ಮ ಬದುಕಿನ ಮೂರು ಧ್ಯೇಯಗಳಲ್ಲಿ ಆಧ್ಯಾತ್ಮ ಸಾಧನೆಯನ್ನು ಅವರು ಸೇರಿಸುತ್ತಾರೆ. ಆದರೆ ಅವರ ಬದುಕನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವರು ಲೌಕಿಕವನ್ನು ಹೇಗೆ ತಬ್ಬಿಕೊಂಡಿದ್ದರು. ಎಂಬುದು ತಿಳಿಯುತ್ತದೆ. ರಾಷ್ಟ್ರೀಯತೆ - ಪ್ರಾದೇಶಿಕತೆ, ಆಧುನಿಕತೆ - ಸನಾತನಗಳನ್ನು ಹೇಗೆ ಸಂಯೋಜಿಸಲು ಅವರು ಪ್ರಯತ್ನಿಸಿದರೋ ಅದೇ ರೀತಿ ಅವರು ಪದಾರ್ಥ ಮತ್ತು ಪರಮಾರ್ಥಗಳನ್ನು ಸಂಯೋಜಿಸಲು ಪ್ರಯತ್ನಿಸಿದರು. ಅವರು ಬೆಂಕಿಪೊಟ್ಟಣ ಕಾರ್ಖಾನೆ, ಸೀಸದಕಡ್ಡಿ ಕಾರ್ಖಾನೆ, ಬಟ್ಟೆ ಕಾರ್ಖಾನೆಗಳನ್ನು ಆರಂಭಿಸುತ್ತಾರೆ. ಚಿತ್ರಕಲಾ ಶಾಲೆ ತೆರೆಯುತ್ತಾರೆ. ಸಕ್ಕರೆ ಕಾರ್ಖಾನೆ, ಬಟ್ಟೆ ಕಾರ್ಖಾನೆಗಳನ್ನು ಆರಂಭಿಸುತ್ತಾರೆ. ಚಿತ್ರಕಲಾ ಶಾಲೆ ತೆರೆಯುತ್ತಾರೆ. ಸಕ್ಕರೆ ಕಾರ್ಖಾನೆ ಶುರು ಮಾಡುತ್ತಾರೆ. ಮಂಗಳೂರು ಹೆಂಚಿನ ಕಾರ್ಖಾನೆ ತೆಗೆಯುತ್ತಾರೆ. ಹತ್ತಿ ನೂಲಿನ ಗಿರಣಿ ಸ್ಥಾಪಿಸುತ್ತಾರೆ. ಜವಳಿ ಅಂಗಡಿ ಪ್ರಾರಂಭಿಸುತ್ತಾರೆ. ಪರಸ್ಪರ ಸ್ವಸಹಾಯ ಹಣಕಾಸು ಸೊಸೈಟಿಯನ್ನು ತೆರೆಯುತ್ತಾರೆ. ಅವರು ಹತ್ತಾರು ವ್ಯಾಪಾರ - ವಾಣಿಜ್ಯ ಸಾಹಸಗಳಿಗೆ ಕೈ ಹಾಕುತ್ತಾರೆ. ಅವುಗಳಲ್ಲಿ ಅವರು ಯಶಸ್ವಿಯಾಗಲಿಲ್ಲವೆಂಬುದು ಬೇರೆ ಮಾತು. ಈ ಎಲ್ಲ ಪ್ರಯತ್ನ - ಪ್ರಯೋಗಗಳನ್ನು ಕೇವಲ ಸಂಪತ್ತಿನ ಸಂಗ್ರಹದ ಸಂಗತಿಯಾಗಿ ನೋಡಲು ಸಾಧ್ಯವಿಲ್ಲ. ಆಧುನಿಕತೆ - ಕೈಗಾರಿಕೆ - ವಾಣಿಜ್ಯ ಮನೋಭಾವವನ್ನು ಬೆಳೆಸಿಕೊಳ್ಳಲು ಮತ್ತು ಅಂತಹ ಸಂಗತಿಗಳಿಗೆ ನಾಡು

ತೆರೆದುಕೊಳ್ಳಬೇಕು ಎಂಬುದನ್ನು ತೋರಿಸಿಕೊಡಲು ಅವರು ಇಂತಹ ಸಾಹಸಗಳನ್ನು ಕೈಗೊಂಡಂತೆ ಕಾಣುತ್ತದೆ. ಈ ಎಲ್ಲ ಪ್ರಯತ್ನಗಳ ಮೂಲಕ ಅವರು ಕಂಡುಕೊಂಡ ತಥ್ಯವೆಂದರೆ ಕರ್ನಾಟಕ ಏಕೀಕರಣವಿಲ್ಲದೆ ಅದರ ಅಭಿವೃದ್ಧಿ, ಕೈಗಾರಿಕಾ ಪ್ರಗತಿ ಸಾಧ್ಯವಿಲ್ಲವೆಂಬುದಾಗಿತ್ತು. ಆಲೂರರು ಆಧುನಿಕತೆಯನ್ನು ಸೈದ್ಧಾಂತಿಕ ಹಾಗೂ ಆಚರಣೆ ಮಟ್ಟದಲ್ಲಿ ಮೈಗೂಡಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ವಿಚಾರಗಳ ಮೂಲಬೇರು ಧಾರ್ಮಿಕ ನಂಬಿಕೆಯಲ್ಲಿತ್ತು ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆಲೂರರು ಕರ್ನಾಟಕತ್ವವನ್ನು ಭಾಷೆಗಿಂತ ಮಿಗಿಲಾಗಿ ಜನರ ಬದುಕಿನ ನೆಲೆಯಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಿದ್ದರು. ಆಧುನಿಕತೆ ಹಾಗೂ ಆಧ್ಯಾತ್ಮಿಕತೆಗಳ ನಡುವೆ ಒಂದು ಬಗೆಯ ಸಮತೋಲನ ಸಾಧಿಸಿಕೊಳ್ಳುವ ಪ್ರಯತ್ನ ಅವರದಾಗಿತ್ತು.

**ಕವಿರಾಜಮಾರ್ಗಕಾರನ ಕನ್ನಡ ಜಗತ್ತು ಮತ್ತು ಆಲೂರರ ಕರ್ನಾಟಕತ್ವ**

ಆಲೂರರ ಕರ್ನಾಟಕತ್ವ ಹಾಗೂ ಕವಿರಾಜಮಾರ್ಗಕಾರನ ಕನ್ನಡ ಜಗತ್ತುಗಳ ನಡುವೆ ಸಂಬಂಧವನ್ನು ಕಲ್ಪಿಸುವುದು ಅರ್ಥರಹಿತವಾದ ಪ್ರಯತ್ನವಾದರೂ ತುಂಬಾ ಕುತೂಹಲಕರ ಸಂಗತಿಯಾಗಿದೆ. ಕವಿರಾಜಮಾರ್ಗಕಾರನು ಕನ್ನಡವನ್ನು, ಕನ್ನಡ ಜಗತ್ತನ್ನು ವಸುಧೆಯೊಳಗೆ ಒಂದು ಸ್ವಾಯತ್ತ ಘಟಕವಾಗಿ ಕಲ್ಪಿಸಿಕೊಂಡಿರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ಈ ಬಗ್ಗೆ ಕೆ.ವಿ. ಸುಬ್ಬಣ್ಣ ಹೀಗೆ ಬರೆಯುತ್ತಾರೆ. (೨೦೦೦).

'ಕವಿರಾಜಮಾರ್ಗವೆಂಬ ಈ ಗ್ರಂಥವು, ತನ್ನ ಕಿರು ಭಾಷೆಯ ಅಂಗೈನೆಲದಲ್ಲಿ ಪ್ರಪಂಚ ಜಗತ್ತನ್ನು ಆವಾಹಿಸಿ ಅರಗಿಸಿಕೊಂಡು ಕನ್ನಡವೆಂಬ ನಿಸ್ಸೀಮೆಯ ಪ್ರತಿ ಜಗತ್ತನ್ನು ಹೇಗೆ ಸೃಷ್ಟಿಸಿಕೊಳ್ಳಬೇಕೆಂಬುದನ್ನು ಕುರಿತು ಚಿಂತಿಸುತ್ತದೆ. ಕವಿರಾಜಮಾರ್ಗದಲ್ಲಿನ ಒಂದು ಕಿರು ಕಂದ ಪದ್ಯವು ಅದನ್ನು ಮನೋಜ್ಞಾನವಾಗಿ ಬಣ್ಣಿಸುತ್ತದೆ'.

ಆ ಕಂದ ಪದ್ಯ ಇದು

*"ಕಾವೇರಿಯಿಂದ ಮಾ ಗೋ*
*ದಾವರಿವರಮಿರ್ಪ ನಾಡದಾ ಕನ್ನಡದೊಳ್*
*ಭಾವಿಸಿದ ಜನಪದಂ ವಸು*
*ಧಾವಳಯ ವಿಲೀನ ವಿಶದ ವಿಷಯ ವಿಶೇಷಂ"*

ಕೆ.ವಿ. ಸುಬ್ಬಣ್ಣ ಪ್ರಸ್ತುತ ಪದ್ಯವನ್ನು ಹೀಗೆ ವಿವರಿಸಿದ್ದಾರೆ. "ಈ ನಾಡು ಮತ್ತು ಜನಪದವು ತತ್ಕಾಲದಲ್ಲಿ ಕಾಣಿಸುತ್ತಿದ್ದ ಭೌಗೋಳಿಕ ಘಟಕವಷ್ಟೇ ಅಲ್ಲ, ಅದು ಭಾವಿತವಾದದ್ದು. ಅಂದರೆ 'ಕನ್ನಡ'ವೆಂಬುದು ಒಂದು ಚಿತ್ ಜಗತ್ತು, ಒಂದು ಕಣಸು, ದರ್ಶನ ಮತ್ತು ಇದು ವಸುಧಾ - ವಲಯ - ವಿಲೀನ - ವಿಶದ - ವಿಷಯ - ವಿಶೇಷಂ".

"ವಸುಧಾ(ಭೂಮಿ) ಎನ್ನುವುದು ಅನಂತ ಬ್ರಹ್ಮಾಂಡದೊಳಗಿನ ಒಂದು 'ವಲಯ' ಅಷ್ಟೇ: ಮತ್ತು 'ಕನ್ನಡ'ವೆಂಬ 'ವಿಷಯ'(ನಾಡು)ವು ಆ ವಸುಧಾ ವಲಯದಲ್ಲಿ 'ವಿಲೀನ'ವಾಗಿದೆ. ಸಮರಸವಾಗಿ ಬೆರೆತುಕೊಂಡಿದೆ. ಹಾಗೆಂದು ಮಾತ್ರಕ್ಕೆ ಇದು ಸ್ವಂತಿಕೆಯ ಚಹರೆಯಿಲ್ಲದೆ ವಸುಧೆಯಲ್ಲಿ ಗುರುತು ಸಿಗದಂತೆ ಮುಳಿಗಿ ಹೋದುದ್ದಲ್ಲ; ತನ್ನದೇ 'ವಿಶೇಷಂ' (ವೈಶಿಷ್ಟ್ಯ) ಇರುವ ನಾಡು. ಅಷ್ಟೇ ಅಲ್ಲ - ಇದು 'ವಿಶದ' ವಾದದ್ದು; ವಸುಧೆ ಅಥವಾ ಬ್ರಹ್ಮಾಂಡದಷ್ಟೇ ವ್ಯಾಪಕವಾದದ್ದು. ವಸುಧೆಯೊಳಗಿನ ಒಂದು ಕಿರು ಬಿಂದುವಾಗಿದ್ದೂ ತನ್ನೊಳಗೆ ಆ ವಸುಧೆಯನ್ನೇ ಅರಗಿಸಿಕೊಂಡಿರುವ 'ಕನ್ನಡ'ದ ಇಂಥ ಪ್ರತಿಮೆಯನ್ನು 'ಕವಿರಾಜಮಾರ್ಗವು' ಕಂಡಿರಿಸಿದೆ". ಕನ್ನಡದೊಳಗೆ ವಸುಧೆಯು

ವಿಲೀನವಾಗಿರುವ ಸಂಗತಿಯನ್ನು ಕವಿರಾಜ ಮಾರ್ಗಕಾರ ಹೇಳಿದ್ದರೆ ಆಲೂರರು 'ಕರ್ನಾಟಕ ಸಂಸ್ಕೃತಿಯು ಇಡೀ ಪ್ರಪಂಚವನ್ನು ಕೈವಶಮಾಡಿಕೊಂಡಿದೆ' ಎಂದೂ 'ಕರ್ನಾಟಕವೂ ಭರತ ಖಂಡದ ಸಂಸ್ಕೃತಿಯನ್ನೆಲ್ಲ ಪಚನ ಮಾಡಿಕೊಂಡಿದೆ' ಎಂದು ಹೇಳುತ್ತಾರೆ.

ಸರಿಸುಮಾರು ಸಾವಿರ ವರ್ಷಗಳ ಹಿಂದೆ ಕನ್ನಡವನ್ನು, ಕನ್ನಡವನ್ನಾಡುತ್ತಿದ್ದ ಪ್ರದೇಶವನ್ನು ಸ್ವಾಯತ್ತವಾಗಿ ಪರಿಭಾವಿಸಿಕೊಳ್ಳುವ ಚಿಂತನೆ ಇಲ್ಲಿನ ನೆಲದಲ್ಲಿ ನಡೆದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. 'ಕವಿರಾಜಮಾರ್ಗ'ದಲ್ಲಿನ ವಿಚಾರ ಮತ್ತು ಅದನ್ನು ಕೆ.ವಿ.ಸುಬ್ಬಣ್ಣ ಪರಿಭಾವಿಸಿಕೊಂಡಿರುವ ಬಗೆಗಳನ್ನು ಹಾಗೂ ಆಲೂರು ವೆಂಕಟರಾಯರು ಕನಾರ್ಟಕತ್ವ ಹಾಗೂ ಕರ್ನಾಟಕ ಸಂಸ್ಕೃತಿ ಬಗ್ಗೆ ಆಡಿರುವ ಮಾತುಗಳ ನಡುವಿನ ಸಾದೃಶ್ಯವು ನನಗೆ ಕುತೂಹಲಕಾರಿಯಾಗಿ ಕಾಣುತ್ತದೆ. ಕರ್ನಾಟಕ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗಳ ನಡುವಣ ಸಂಬಂಧ ಕುರಿತಂತೆ ಆಲೂರರು ಹೇಳುವ ಮಾತು ಹಾಗೂ ಅವರು ಕರ್ನಾಟಕತ್ವವನ್ನು ನಿರ್ವಚಿಸುವ ರೀತಿಯನ್ನು ನಾವು ಇದಕ್ಕೆ ನಿದರ್ಶನವಾಗಿ ನೋಡಬಹುದು. ಭಾರತೀಯ ಸಂಸ್ಕೃತಿಯೆಂಬುದನ್ನು ಒಪ್ಪಿಕೊಳ್ಳುವ ಆಲೂರರು ಅದು ಕರ್ನಾಟಕ ಸಂಸ್ಕೃತಿಯಿಂದ ಪುಷ್ಟಿಗೊಂಡಿದೆಯೆಂದು ತಿಳಿಯುತ್ತಾರೆ. ಅವರ ಮಾತುಗಳು ಹೀಗಿವೆ.

"ಆ(ಭಾರತೀಯ) ಸಂಸ್ಕೃತಿಗೆ ಕರ್ನಾಟಕವು ತನ್ನ 'ವಿಶಿಷ್ಟ' ಸಂಸ್ಕೃತಿಯನ್ನು ಬೆರೆಸಿ ಅದನ್ನು ಪುಷ್ಟಿಗೊಳಿಸುತ್ತದೆಯೆಂಬುದನ್ನೂ 'ವಿಶಿಷ್ಟ' ಸ್ವರೂಪವನ್ನು ಕೊಡುತ್ತದೆಂಬುದನ್ನೂ ಯಾರೂ ಮರೆಯ ಕೂಡದು" (ಪು.೧೧)

ಮುಂದುವರಿದು ಅವರು ಹೀಗೆ ಬರೆಯುತ್ತಾರೆ.

"ಕರ್ನಾಟಕವು ಭರತ ಖಂಡದ ಸಂಸ್ಕೃತಿಯನ್ನೆಲ್ಲ ಪಚನ ಮಾಡಿಕೊಂಡಿರುವುದಲ್ಲದೆ, ತನ್ನ 'ವಿಶಿಷ್ಟ' ಸಂಸ್ಕೃತಿಯನ್ನು ಅದರಲ್ಲಿ ಬೆರೆಸಿ ಅದನ್ನು ಮತ್ತಷ್ಟು ಪುಷ್ಟವನ್ನಾಗಿಯೂ ವ್ಯಾಪಕವನ್ನಾಗಿಯೂ ಮಾಡಿರುವುದು" (ಪು.೧೬೯)

ಆಲೂರರ ಉಲ್ಲೇಖಗಳಲ್ಲಿ ಮತ್ತೆ ಮತ್ತೆ ಬರುವ 'ವಿಶಿಷ್ಟ'ವೆಂಬ ನುಡಿ ಹಾಗೂ ಕವಿರಾಜಮಾರ್ಗದಲ್ಲಿನ ಕಂದಪದ್ಯದಲ್ಲಿನ 'ವಿಶೇಷ'ಗಳು ಒಂದೇ ಅರ್ಥವನ್ನು ಸೂಚಿಸುತ್ತಿರುವಂತೆ ಕಾಣುತ್ತದೆ.

ಕವಿರಾಜಮಾರ್ಗಕಾರನಂತೆ ಆಲೂರರು ಕರ್ನಾಟಕವನ್ನು ವಸುಧೆಯೊಳಗೆ ಗುರುತಿಸಲು ಪ್ರಯತ್ನಿಸುತ್ತಾರೆ. ಏಕೆಂದರೆ ಅವರ ಕರ್ನಾಟಕವು ಭರತಖಂಡವನ್ನೂ ಮತ್ತು ವಿಶ್ವವನ್ನೂ ವ್ಯಾಪಿಸಿಕೊಂಡಿರುವ ಜ್ಞಾನಕಲ್ಪವಾಗಿದೆ. ವಸುಧೆಯೊಳಗೆ ವಿಲೀನವಾಗಿದ್ದು ಕನ್ನಡ - ಕರ್ನಾಟಕವು ತನ್ನ ವಿಶೇಷ ವ್ಯಕ್ತಿತ್ವ - ಅಸ್ತಿತ್ವವನ್ನು ಉಳಿಸಿಕೊಂಡಿರುವುದನ್ನು ಕವಿರಾಜಮಾರ್ಗಕಾರನು ಹೇಳುತ್ತಿದ್ದಾನೆ ಮತ್ತು ಅದನ್ನೇ ಮತ್ತೊಂದು ಬಗೆಯಲ್ಲಿ ಆಲೂರರು ಹೇಳುತ್ತಿದ್ದಾರೆ.

ಕವಿರಾಜಮಾರ್ಗ ಮತ್ತು ಆಲೂರರ ಕರ್ನಾಟಕತ್ವದ ಮೀಮಾಂಸೆಗಳು ಇಂದಿನ ಕೇಂದ್ರ - ರಾಜ್ಯ ಸಂಬಂಧಗಳನ್ನು, ಭಾಷಾವಾರು ಪ್ರಾಂತದ ಪ್ರಶ್ನೆಯನ್ನು ಭಿನ್ನವಾದ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಆಲೂರರಾಗಲಿ ಅಥವಾ ಕವಿರಾಜ ಮಾರ್ಗದಲ್ಲಿನ ಕನ್ನಡ ಜಗತ್ತನ್ನು ಗುರುತಿಸಲು ಪ್ರಯತ್ನಿಸಿದ ಕೆ.ವಿ. ಸುಬ್ಬಣ್ಣ ಅವರಾಗಲಿ ಕವಿರಾಜಮಾರ್ಗಕಾರರಿಬ್ಬರೂ ಕನ್ನಡವನ್ನೂ ಕರ್ನಾಟಕವನ್ನೂ ಭಾರತದ ಒಕ್ಕೂಟ ಹಾಗೂ ಜಾಗತಿಕ ಚೌಕಟ್ಟಿನಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ಇದು ತುಂಬಾ ಮುಖ್ಯ. ಕನ್ನಡ - ಕರ್ನಾಟಕದ ವಿಶಿಷ್ಟತೆ ಬಗ್ಗೆ ಇಬ್ಬರೂ ಮಾತನಾಡುತ್ತಿದ್ದಾರೆ. ಒಂದು ಪ್ರದೇಶದ ಜನ ಜೀವನದ ಅನನ್ಯತೆಯನ್ನು ಹೀಗೆ ರಾಜಕಾರಣದ ಚೌಕಟ್ಟಿನಲ್ಲಿ ನೋಡಿದ ಪ್ರಯತ್ನಗಳು ತುಂಬಾ ಅರ್ಥಪೂರ್ಣವಾಗಿವೆ.

ಆಲೂರರ ಕರ್ನಾಟಕತ್ವದ ಬಗ್ಗೆ ಚರ್ಚಿಸುತ್ತಾ ಡಿ.ಆರ್. ನಾಗರಾಜ್ ಅವರು ಅದರ ಮಹತ್ವವನ್ನು ಗುರುತಿಸಿದ್ದಾರೆ ('ಕನ್ನಡ ರಾಷ್ಟ್ರೀಯತೆಯ ಸ್ವರೂಪ' ಸಾಹಿತ್ಯ ಕಥನ: ೧೯೯೭:೨೭೯ - ೨೮೯). ಈಗಾಗಲೇ ಗುರುತಿಸಿರುವಂತೆ ಕವಿರಾಜಮಾರ್ಗಕಾರ,

ಕೆ.ವಿ.ಸುಬ್ಬಣ್ಣ, ಆಲೂರು ವೆಂಕಟರಾಯರು ಒತ್ತಿ ಹೇಳಿರುವ ಕನ್ನಡ - ಕರ್ನಾಟಕದ ವಿಶಿಷ್ಟತೆಯನ್ನು ನಾಗರಾಜ್ ಅವರೂ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ವಿಶಿಷ್ಟವಾಗುತ್ತಲೇ ವಿಶ್ವಾತ್ಮಕವಾಗುವ ಬಗೆಯನ್ನು ಕುರಿತಂತೆ ಡಿ.ಆರ್. ಬರೆದಿದ್ದಾರೆ. ಅವರ ಲೇಖನದ ಕೊನೆಯ ವಾಕ್ಯ ಹೀಗಿದೆ.

"ವಿಶಿಷ್ಟವಾಗುವ ಮೂಲಕವೇ ವಿಶ್ವಾತ್ಮಕವಾಗುವುದು ಕಷ್ಟದ ದಾರಿ. ಆದರೆ, ತಕ್ಷಣದ ಆರೋಗ್ಯಕಾರಿ ರಾಜಕಾರಣದ ದೃಷ್ಟಿಯಿಂದ ಮಾತ್ರವಲ್ಲ, ನಿಜವಾದ ಮಾನವೀಯ ವಿಕಾಸದ ದೃಷ್ಟಿಯಿಂದ ಕೂಡ ಇದು ಸರಿಯಾದ ದಾರಿ" (೧೯೯೬:೨೮೯) ಇದು ಕೇಂದ್ರ - ರಾಜ್ಯಗಳ ನಡುವಣ ಸಂಬಂಧವನ್ನು ಸರಿಯಾಗಿ ನೋಡುವ ದೃಷ್ಟಿಕೋನ ಎಂಬುದನ್ನು ಡಿ.ಆರ್. ಇಲ್ಲಿ ಸೂಚಿಸುತ್ತಿದ್ದಾರೆ.

ಆಲೂರರ ಕರ್ನಾಟಕತ್ವ ಮೀಮಾಂಸೆಯನ್ನು ಡಿ.ಆರ್. ಆಧ್ಯಾತ್ಮಿಕ ರಾಷ್ಟ್ರೀಯತೆಯೆಂದು ಕರೆದಿದ್ದಾರೆ. ಯಾವುದೇ ಕಾರಣಕ್ಕೂ ಆಲೂರರ ವಿಚಾರಗಳನ್ನು ಹಿಂದೂ ರಾಷ್ಟ್ರೀಯತೆ ಅಥವಾ ಸಾಂಸ್ಕೃತಿಕ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಗುರುತಿಸಲು ಸಾಧ್ಯವಿಲ್ಲ. ಹಿಂದುತ್ವದ ಬಗ್ಗೆ ಆಲೂರರು ಮಾತನಾಡಿದರೂ ಅದು ಅನುಷಂಗಿಕವಾದುದು. ಸಾಮ್ರಾಜ್ಯದ ಹಂಬಲದಲ್ಲಿ ರಾಷ್ಟ್ರೀಯತೆ ಹುಟ್ಟುತ್ತದೆ ಎಂಬ ಡಿ.ಆರ್. ನಾಗಾರಾಜರ ಪ್ರಮೇಯವನ್ನು ಒಪ್ಪಿಕೊಂಡರೂ ಆಲೂರರ ಹಂಪಿಯ ವಿಜಯನಗರದ ಹಂಬಲವು ಸಾಮ್ರಾಜ್ಯಶಾಹಿ ಸ್ವರೂಪದ್ದಲ್ಲವೆಂಬುದು ಅವರ ಕೃತಿಯ ಸೂಕ್ಷ್ಮ ಅಧ್ಯಯನದಿಂದ ತಿಳಿಯುತ್ತದೆ. ಈ ಬಗ್ಗೆ ಡಿ.ಆರ್. ಅವರೇ ಹೇಳುವ ಮಾತುಗಳು ಅರ್ಥಪೂರ್ಣವಾಗಿದೆ. ಅವರು ಹೀಗೆ ಬರೆಯುತ್ತಾರೆ. "..ಆಲೂರರ ಮುಖ್ಯಗುಣವೆಂದರೆ ತಮ್ಮ ಉಳಿದ ವಿಶಾಲ ಹಾಗೂ ಸೂಕ್ಷ್ಮ ಪರಿಕಲ್ಪನೆಗಳ ಮೂಲಕ ಆ ಹಿಂದುತ್ವವನ್ನು ಮುಚ್ಚಲು ಪ್ರಯತ್ನಿಸುತ್ತಾರೆ. ಅವರಲ್ಲಿ ಹಿಂದುತ್ವವೆಂಬುದು ವಿಶಿಷ್ಟ ಅಸ್ತಿತ್ವದ ಒಂದು ರೂಪವೇ ಹೊರತು ಏಕಮಾತ್ರ ರೂಪವಲ್ಲ" (ಪು.೨೮೭) ಏಕೆಂದರೆ ಆಲೂರರು ೧೯೫೬ರಲ್ಲಿ ಕನ್ನಡಿಗರಿಗೆ ನೀಡಿದ ಸಂದೇಶದಲ್ಲಿ ನಾಡಿನ ಅಲ್ಪಸಂಖ್ಯಾತರ ಬಗ್ಗೆ ಮಾತನಾಡುತ್ತಾರೆ. ಇದನ್ನು ಡಿ.ಆರ್. ಸಹ ಗುರುತಿಸಿದ್ದಾರೆ. ಕರ್ನಾಟಕ ಸಂಸ್ಕೃತಿಗೆ ಮುಸ್ಲಿಮರ ಹಾಗೂ ಕ್ರೈಸ್ತ್ರ ಕೊಡುಗೆ ಕುರಿತಂತೆ ಆಲೂರರು ಚರ್ಚಿಸುವುದಿಲ್ಲ ನಿಜ. ಆದರೆ ಅವರ ಕರ್ನಾಟಕತ್ವವು ಅವುಗಳನ್ನು ಒಳಗೊಳ್ಳಬಲ್ಲ ವಿಸ್ತೃತವಾದ ಪರಿಭಾವನೆಯಾಗಿದೆ. ಏಕೆಂದರೆ ಈಗಾಗಲೇ ತಿಳಿಸಿರುವಂತೆ ಅವರ ಕರ್ನಾಟಕತ್ವ ಮೀಮಾಂಸೆಯ ಎರಡು ಪ್ರಮುಖ ಲಕ್ಷಣಗಳೆಂದರೆ ಸಂಬಂಧವಾದಿತ್ವ ಮತ್ತು ಎಲ್ಲರನ್ನೂ ಒಳಗೊಳ್ಳುವ ಗುಣ (ಕೆ. ರಾಘವೇಂದ್ರರಾವ್: ೨೦೦೦ : ಪು. ೧೦೮). ಬಹಳ ಕುತೂಹಲಕಾರಿಯಾದ ಸಂಗತಿಯೆಂದರೆ ಆಲೂರರು ಆ ಕಾಲಕ್ಕೆ ಕರ್ನಾಟಕತ್ವದ ಮೀಮಾಂಸೆಯನ್ನು ಕಟ್ಟುವ ದಿಶೆಯಲ್ಲಿ ಮಹಿಳೆಯರನ್ನು ತೊಡಗಿಸಲು ಪ್ರಯತ್ನಿಸುತ್ತಾರೆ (ನೋಡಿ: ಪು.೧೨೨ - ೧೨೩). ಧಾರವಾಡದಲ್ಲಿ ಕರ್ನಾಟಕತ್ವವನ್ನು ಜನರಲ್ಲಿ ಒಡಮೂಡಿಸುವ ಕಾರ್ಯದಲ್ಲಿ ಮಹಿಳೆಯರನ್ನು ತೊಡಗಿಸುವ ಕೆಲಸವನ್ನು ಆಲೂರರು ೨೦ನೆಯ ಶತಮಾಣದ ಆರಂಭದ ದಶಕಗಳಲ್ಲೇ ಪ್ರಯತ್ನಿಸಿದ್ದು ಕಂಡುಬರುತ್ತದೆ. ಕರ್ನಾಟಕ ಮಹಿಳಾ ವಿದ್ಯಾಲಯವೆಂಬ ಸಂಸ್ಥೆಯನ್ನು ಕಟ್ಟಿ ಅದರ ಕಾರ್ಯಕ್ರಮಗಳಲ್ಲಿ ಅನೇಕ ಮಹಿಳೆಯರನ್ನು ತೊಡಗಿಸಿದ್ದು ಕಂಡುಬರುತ್ತದೆ. ಅದರ ವಾರ್ಷಿಕ ಸಮಾರಂಭಗಳಿಗೆ ಅನೇಕ ಮಹಿಳೆಯರನ್ನು ಕರೆಸಿದ್ದು ಅವರ ಲಿಂಗಸ್ಪಂದಿ ಗುಣವನ್ನು ತೋರಿಸುತ್ತದೆ. ತಮ್ಮ ಕೃತಿಯ ಉಪಸಂಹಾರ ಭಾಗದಲ್ಲಿ ಆಲೂರರು ತಮ್ಮ ಕರ್ನಾಟಕತ್ವ ಕುರಿತ ಚಳವಳಿಯಲ್ಲಿ ತಮ್ಮ ಹೆಂಡತಿ ಲಕ್ಷ್ಮೀಬಾಯಿ ಹೇಗೆ ನೆರವಾದರು ಎಂಬುದನ್ನು ಎರಡು ಪುಟಗಳಲ್ಲಿ ವಿವರಿಸಿದ್ದಾರೆ. ಅವರು ಅಲ್ಲಿ ನುಡಿದಿರುವ 'ಅವಳು ನನ್ನನ್ನು ದೇಶ ಕಾರ್ಯಕ್ಕೆ ಮೀಸಲಾಗಿ ಬಿಟ್ಟು ತಾನೇ ಬಡತನದಿಂದ ಸಂಸಾರ ಸಾಗಿಸುವ ಭಾರ ಹೊತ್ತಳು' (ಪು. ೧೮೨) ಎಂಬ ಮಾತು ತುಂಬಾ ಅರ್ಥಪೂರ್ಣವಾಗಿದೆ. ತಾವು ಕೈಗೊಂಡ ಎಲ್ಲ ಚಟುವಟಿಕೆಗಳ ಹಿಂದಿನ ಶಕ್ತಿಯೆಂದು ಅವರು ತಮ್ಮ ಹೆಂಡತಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ (ಪು. ೧೮೩). ಇದು ತುಂಬಾ ಔಪಚಾರಿಕ ಸಂಗತಿಯಂತೆ ಕಂಡರೂ ಅಂದಿನ ದಿನಮಾನದಲ್ಲಿ ಬಹಳ ಅರ್ಥಪೂರ್ಣ ವಾದ ಸಂಗತಿಯಾಗಿ ಕಂಡುಬರುತ್ತದೆ. 'ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ' ಎಂಬ ರೀತಿಯ ಪರಿಭಾವನೆ ಅದಲ್ಲ. 'ಕರ್ನಾಟಕವೆಂದರೆ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಅಲ್ಪಸಂಖ್ಯಾತರಿದ್ದಾರೆ. ಅವರ ಹಿತರಕ್ಷಣೆಯಲ್ಲೇ ಈ ರಾಜ್ಯದ ಹಿತವಿದೆ' ಎಂಬ ಸಂಗತಿಯನ್ನು ಡಿ.ಆರ್. ಅವರು ಲಂಕೇಶ್‌ರಿಗೆ ಸಂಬಂಧಿಸಿದಂತೆ ಚರ್ಚಿಸುತ್ತಾರೆ. ಆಲೂರರೂ ಇದೆ ನೆಲೆಯಲ್ಲಿ ಕರ್ನಾಟಕತ್ವವನ್ನು ಪರಿಭಾವಿಸಿಕೊಂಡಿದ್ದಾರೆ. ಈ ಕಾರಣಕ್ಕೆ ಅವರು ಅಲ್ಪಸಂಖ್ಯಾತರ ಬಗ್ಗೆ ೧೯೫೬ರಲ್ಲಿ ಮಾತನಾಡುತ್ತಾರೆ.

ನನ್ನ ಈ ಲೇಖನವು ೨೦೦೬ರಲ್ಲಿ ಪ್ರಕಟವಾದಾಗ (ಹೊಸತು) ಬಂದ ಬುಮುಖ್ಯ ಟೀಕೆಯೆಂದರೆ ಅದು 'ವಿಮರ್ಶಾತ್ಮಕವಾಗಿಲ್ಲ' ಎಂಬುದಾಗಿತ್ತು. ಇದು ನಿಜವಿರಬಹುದು. ಆದರೆ ಲೇಖನವು 'ಆರಾಧನಾ' ಮನೋಭಾವದಲ್ಲಿಲ್ಲವೆಂಬುದನ್ನು ಹೇಳಬಹುದು. ಒಂದು ದೃಷ್ಟಿಯಲ್ಲಿ ಆಲೂರರನ್ನು ನೆವ ಮಾಡಿಕೊಂಡು ಇಲ್ಲಿ ಕೇಂದ್ರದ ಅಧಿಕಾರದ ದಬ್ಬಾಳಿಕೆಯನ್ನು ಟೀಕಿಸುವ ಹಾಗೂ ಕರ್ನಾಟಕದ ಸ್ವಾಯತ್ತತೆಯನ್ನು ಪ್ರತಿಪಾದಿಸುವವ ವಿರುದ್ಧವಾಗಿ ಪರಿಭಾವಿಸಿಕೊಳ್ಳುವ ಅಗತ್ಯವಿಲ್ಲವೆಂದು ಇಲ್ಲಿ ಹೇಳಲಾಗಿದೆ.

ಆಲೂರರು ಮಾಧ್ವ ಪಂಥದ ಪ್ರತಿಪಾದಕರಾಗಿದ್ದರು. ಅದೊಂದು ಸಂಕುಚಿತ ವ್ಯಾಪ್ತಿಯ ವಿಚಾರ ಪ್ರಣಾಳಿಕೆ. ಆದರೆ ಆಲೂರರ ವಿಚಾರಗಳು ಮಾಧ್ವ ಪಂಥದ ಸೀಮಿತ ಚೌಕಟ್ಟನ್ನು ಮೀರಿ ಬೆಳೆದಿದ್ದವು. ಆಲೂರರನ್ನು ಆಧ್ಯಾತ್ಮಕವಾದಿಯೆಂದೇ ಪರಿಗಣಿಸಬೇಕಾಗುತ್ತದೆ. ಮಾಧ್ವ ಪಂಥದ ಚೌಕಟ್ಟನ್ನು ಅವರು ಮೀರಿ ಕರ್ನಾಟಕತ್ವವನ್ನು ಪ್ರತಿಪಾದಿಸಿದ್ದಾರೆಂಬುದು ಅವರು ಬರಹ - ವಿಚಾರಗಳಿಂದ ತಿಳಿಯುತ್ತದೆ. ಆಲೂರರ ಮೂಲಕ ಕನಾಟಕತ್ವವನ್ನು ಚಾರಿತ್ರಿಕವಾಗಿ ನೋಡಲು ಇಲ್ಲಿ ಪ್ರಯತ್ನಿಸಲಾಗಿದೆ. ಕರ್ನಾಟಕತ್ವ ವಿಚಾರ ಪ್ರಣಾಳಿಕೆಯು ಸಾಮಾಜಿಕ - ಆರ್ಥಿಕ ಸಂಗತಿಗಳನ್ನು ಒಳಗೊಂಡಿದೆ. ಆಲೂರರ ವ್ಯಕ್ತಿತ್ವವು ಸಂಕೀರ್ಣತೆಯ ಒಂದು ಮೊತ್ತವಾಗಿದೆ. ಏಕೆಂದರೆ ಅವರ ಪರಮಾರ್ಥ ಮತ್ತು ಪದಾರ್ಥವನ್ನು, ಆಧುನಿಕತೆ - ಆಧ್ಯಾತ್ಮಿಕತೆಯನ್ನು ಲೌಕಿಕತೆ - ಧಾರ್ಮಿಕತೆಗಳನ್ನು, ಪ್ರಾದೇಶಿಕತೆ - ರಾಷ್ಟ್ರೀಯತೆಗಳನ್ನು ಸಂಯೋಜಿಸುವ ಪ್ರಯತ್ನ ನಡೆಸಿದ್ದರು. ಏಕಕಾಲದಲ್ಲಿ ಇವೆಲ್ಲವನ್ನೂ ಅವರು ನಿರ್ವಹಿಸಲು ಪ್ರಯತ್ನಿಸಿದರು. ಇವರ ಗರಡಿಯಲ್ಲಿ ಬೆಳೆದ ಕೃಷ್ಣಕುಮಾರ ಕಲ್ಲೂರ ಅವರಿಗೆ 'ನುಡಿಗಿಂತ ನಾಡು ಹೆಚ್ಚು: ನಾಡಿಗಿಂತ ನಾಡವರು ಹೆಚ್ಚು' ಎಂಬ ಘೋಷಣೆ ನೀಡುವುದು ಸಾಧ್ಯವಾಯಿತು.

## ಸಂಗ್ರಹ

ಕರ್ನಾಟಕತ್ವವೆಂಬ ಪರಿಭಾವನೆಯನ್ನು ಹುಟ್ಟುಹಾಕಿ. ಅದಕ್ಕೆ ಸಂಬಂಧಿಸಿದ ಮೀಮಾಂಸೆಯನ್ನು ಕಟ್ಟಿ, ಅದಕ್ಕೆ ಸಂಬಂಧಿಸಿದಂತೆ ಅಕ್ಷರಶಃ ಹತ್ತಾರು ಚಳುವಳಿಗಳನ್ನು ಸಂಘಟಿಸಿ, ಅದರ ಅಮೂರ್ತ ಹಾಗೂ ಮೂರ್ತ ರೂಪವನ್ನು ಕಡೆದಿರಿಸಿ, ಅದನ್ನು ತಪಸ್ಸಿನಂತೆ ಧ್ಯಾನಿಸಿದ ವ್ಯಕ್ತಿ ಆಲೂರು ವೆಂಟರಾಯರು. ಕರ್ನಾಟಕತ್ವದ ವಿವಿಧ ಆಯಾಮಗಳನ್ನು ಕುರಿತಂತೆ ಮೊಟ್ಟ ಮೊದಲ ಬಾರಿಗೆ ಚಿಂತನೆ ನಡೆಸಿದವರು ಅವರು. ಅವರು ತಮ್ಮ ಕೃತಿಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ರಾಜಕಾರಣದಲ್ಲಿ ಕರ್ನಾಟಕತ್ವ, ವಾಙ್ಮಯದಲ್ಲಿ ಕರ್ನಾಟಕತ್ವ, ಧರ್ಮದಲ್ಲಿ ಕರ್ನಾಟಕತ್ವ ಮುಂತಾದ ಶೀರ್ಷಿಕೆಗಳಲ್ಲಿ ಕರ್ನಾಟಕತ್ವವನ್ನು ಒಂದು ಜ್ಞಾನ ಕಲ್ಪವಾಗಿ ಕಟ್ಟುವಲ್ಲಿ ಅವರ ನಡೆಸಿದ ಪ್ರಯತ್ನವನ್ನು ಗುರುತಿಸಬಹುದಾಗಿದೆ. ಕರ್ನಾಟಕವು ತನ್ನ ಏಕೀಕರಣದ ೫೦ನೆಯ ವರ್ಷಾಚರಣೆ ಮಾಡುತ್ತಿರುವ ಸಂದರ್ಭದಲ್ಲಿ ಆಲೂರರ ಕರ್ನಾಟಕತ್ವ ಮೀಮಾಂಸೆಯನ್ನು ಕುರಿತಂತೆ ತುಂಬಾ ವಿಸ್ತೃತವಾಗಿ ಚರ್ಚಿಸುವ ಅಗತ್ಯವಿದೆ. ಅಂತಹ ಚರ್ಚೆಗೆ ಪ್ರಸ್ತುತ ಪ್ರಬಂಧವು ಅನುವು ಮಾಡಿಕೊಡುತ್ತದೆ ಎಂದು ಭಾವಿಸಲಾಗಿದೆ.

## ಆಕರಸೂಚಿ

ಆಲೂರು ವೆಂಕಟರಾಯರು, ೧೯೯೯, (ಮೂಲ : ೧೯೫೭), **ಕರ್ನಾಟಕತ್ವದ ವಿಕಾಸ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೃಷ್ಣಕುಮಾರ್ ಕಲ್ಲೂರು, ೨೦೦೧, (ಮೂಲ:೧೯೫೬), **ಕನ್ನಡ ನಾಡಿನ ಸಂಚಾರ ಸಂಪರ್ಕ** (ಸಂ.ಟಿ.ಆರ್. ಚಂದ್ರಶೇಖರ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ನಾಗರಾಜ್ ಡಿ.ಆರ್., ೧೯೯೬, 'ಕನ್ನಡ ರಾಷ್ಟ್ರೀಯತೆಯ ಸ್ವರೂಪ', **ಸಾಹಿತ್ಯ ಕಥನ,** ೧೯೯೬, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

ರಾಘವೇಂದ್ರರಾವ್ ಕೆ.,೨೦೦೦, **ಇಮ್ಯಾಜಿನಿಂಗ್ ಆನ್ ಇಮ್ಯಾಜಿನಬಲ್ ಕಮ್ಯುನಿಟೀಸ್,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲ, ಹಂಪಿ, ವಿದ್ಯಾರಣ್ಯ

ಸುಬ್ಬಣ್ಣ ಕೆ.ವಿ., ೨೦೦೦, **ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

# ೬. ಅಸ್ಪೃಶ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ (೧)

ಪ್ರಸ್ತಾವನೆ

ಅಸ್ಪೃಶ್ಯತೆ ಆಚರಣೆಯನ್ನು ಸಾಮಾಜಿಕ ಪಿಡುಗು ಎಂಬ ರೀತಿಯಲ್ಲಿ ನೋಡಲಾಗುತ್ತಿದೆ. ಅದನ್ನು ಧಾರ್ಮಿಕ ಸಂಗತಿಯನ್ನಾಗಿಯೂ ನೋಡಲಾಗುತ್ತಿದೆ. ಮಡಿಮೈಲಿಗೆಗಳ ಹಿನ್ನೆಲೆಯಲ್ಲಿ ಅದನ್ನು ಪರಿಭಾವಿಸಿಕೊಳ್ಳುವ ಕ್ರಮವಿದೆ. ಇದೆಲ್ಲ ಸರಿ. ಆದರೆ ಅದನ್ನು ಅಭಿವೃದ್ಧಿಯ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ದೇಶದ ಅಭಿವೃದ್ಧಿಗೆ ಅದು ಕಂಟಕವಾಗಿದೆ ಎನ್ನುವ ನೆಲೆಯಲ್ಲಿ ಅದನ್ನು ಪರಿಭಾವಿಸಿಕೊಳ್ಳಬೇಕಾಗಿದೆ. ಅದನ್ನು ಕೇವಲ ಪರಿಶಿಷ್ಟರ ಸಮಸ್ಯೆಯನ್ನಾಗಿ ಸೀಮಿತಗೊಳಿಸುವುದಕ್ಕೆ ಪ್ರತಿಯಾಗಿ ಅದೊಂದು ದೇಶಕ್ಕೆ - ಸಮಾಜಕ್ಕೆ ಸಂಬಂಧಿಸಿದ ಸಮಸ್ಯೆಯನ್ನಾಗಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ

[1]. ಇದರ ಆಚರಣೆಯಿಂದಾಗಿ ಇಡೀ ಸಮಾಜವು ಅಭಿವೃದ್ಧಿಯಿಂದ ವಂಚಿತವಾಗಿರುವ ಸಂಗತಿಯನ್ನು ಗುರುತಿಸಬೇಕಾಗಿದೆ. ದೇಶದ ಜನಸಂಖ್ಯೆಯ ಸರಿಸುಮಾರು ಶೇ.೨೪ರಷ್ಟಿರುವ ಪರಿಶಿಷ್ಟರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪೂರ್ಣವಾಗಿ ತೊಡಗುವುದು ಸಾಧ್ಯವಾಗಿಲ್ಲ. ಅವರ ಶ್ರಮಶಕ್ತಿ - ಬುದ್ಧಿಶಕ್ತಿ ಪೂರ್ಣವಾಗಿ ಅಭಿವೃದ್ಧಿಗೆ ಸಲ್ಲುತ್ತಿಲ್ಲ. ಪ್ರಸ್ತುತ ಪ್ರಬಂಧದಲ್ಲಿ ಅಸ್ಪೃಶ್ಯತೆಯನ್ನು ಅಭಿವೃದ್ಧಿಯ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅಸ್ಪೃಶ್ಯತೆ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಕುರಿತಂತೆ ಚರ್ಚಿಸಲಾಗಿದೆ.

ಭಾರತದ - ಕರ್ನಾಟಕದ ಅಭಿವೃದ್ಧಿಯ ಪರಿಶಿಷ್ಟ ಮತ್ತು ಶಿಷ್ಟ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.[2] ಇಲ್ಲಿ ಚರ್ಚೆಯನ್ನು ಹಾಗೂ ಅಂಕಿ - ಅಂಶಗಳನ್ನು ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಿ ಕೊಳ್ಳಲಾಗಿದೆ. ನಮ್ಮ ಸಮಾಜ ಸಂದರ್ಭದಲ್ಲಿ ಅಭಿವೃದ್ಧಿಯಿಂದ ವಂಚಿತವಾದ ಮತ್ತು ತೀವ್ರ ದುಸ್ಥಿತಿಯಲ್ಲಿರುವ ಜನ ಸಮುದಾಯವೆಂದರೆ ಪರಿಶಿಷ್ಟರು. ಆದ್ದರಿಂದ ಅಭಿವೃದ್ಧಿಯನ್ನು ಸಮಾಜದಲ್ಲಿ ಅಂಚಿನಲ್ಲಿರುವ ವಂಚಿತರ ನೆಲೆಯಿಂದ ಪರಿಭಾವಿಸಿಕೊಳ್ಳಬೇಕಾದ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಅಭಿವೃದ್ಧಿಯ ಆರಂಭವು ಪರಿಶಿಷ್ಟರ ನೆಲೆಯಿಂದ ಆರಂಭವಾಗಬೇಕಾಗಿದೆ. ಪರಿಶಿಷ್ಟರ ಪದತಲದಿಂದ ಅಭಿವೃದ್ಧಿಯ ಆರಂಭವು ನಡೆಯಬೇಕು. ಸಾಮಾನ್ಯವಾಗಿ ಅಭಿವೃದ್ಧಿಯನ್ನು ಅಖಂಡ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಪರಿಪಾಠವಿದೆ. ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲರಿಗೂ ಕಾಲಾನುಕ್ರಮದಲ್ಲಿ ದೊರೆಯುತ್ತದೆ. ಎಂಬುದು ಇಲ್ಲಿನ ಪ್ರಮೇಯವಾಗಿದೆ. ಅಭಿವೃದ್ಧಿಗೆ ಎಲ್ಲ ಜನರನ್ನು ಒಳಗೊಳ್ಳುವ ಗುಣವಿದೆಯೆಂದು ಹೇಳಲಾಗಿದೆ. ಆದರೆ ವಸ್ತುಸ್ಥಿತಿ ಹೀಗಿಲ್ಲ. ಅಭಿವೃದ್ಧಿಯ ಫಲಗಳು ಮೇಲಿನಿಂದ ಕೆಳಗೆ ಹರಿದು ಸಮಾಜದ ಕಟ್ಟಕಡೆಯ ಬಡವನನ್ನು ತಲುಪುತ್ತವೆ ಎಂಬುದು ಇದರ ಇನ್ನೊಂದು ಪ್ರಮೇಯವಾಗಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿಯು ಅಖಂಡವಾಗಿರಲು ಸಾಧ್ಯವಿಲ್ಲವೆಂಬುದನ್ನು ತೋರಿಸಲು ಪ್ರಸ್ತುತ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಸಮಾಜದ ವಿವಿಧ ಜನಸಮುದಾಯಗಳು ಅಭಿವೃದ್ಧಿಯಲ್ಲಿ ಪಾಲನ್ನು ಹೇಗೆ ಪಡೆಯುತ್ತಿವೆ ಎಂಬುದನ್ನು ಗುರುತಿಸುವುದು ಕುತೂಹಲಕರ ಸಂಗತಿಯಾಗಿದೆ.

ಅಭಿವೃದ್ಧಿಯ ಪರಿಶಿಷ್ಟ ಮತ್ತು ಶಿಷ್ಟ ಸ್ವರೂಪಕ್ಕೆ ಲಿಂಗ ಸಂಬಂಧಿ ಆಯಾಮವಿರುವುದನ್ನು ಇಲ್ಲಿ ಚರ್ಚಿಸಲಾಗಿದೆ. ಈ ದೃಷ್ಟಿಯಿಂದಲೂ ಅಖಂಡವಾದ ವಿಶ್ಲೇಷಣೆ ಸಾಧ್ಯವಿಲ್ಲ. ವಾಸ್ತವವಾಗಿ ಅಭಿವೃದ್ಧಿಯಿಂದ ತೀವ್ರ ವಂಚಿತವಾಗಿರುವ ಹಾಗೂ ತೀವ್ರ ದುಸ್ಥಿತಿಯಲ್ಲಿರುವ ಗುಂಪೆಂದರೆ ಪರಿಶಿಷ್ಟ ಮಹಿಳೆಯರು. ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮವನ್ನು ಅಲಕ್ಷಿಸಲು ಸಾಧ್ಯವಿಲ್ಲ. ಪ್ರಸ್ತುತ ಪ್ರಬಂಧದಲ್ಲಿ ಅಭಿವೃದ್ಧಿಯನ್ನು ವಿವಿಧ ಜನಸಮೂಹಗಳ ನೆಲೆಯಿಂದ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಪರಿಶಿಷ್ಟರು ಅಭಿವೃದ್ಧಿಯಿಂದ ವಂಚಿತರಾಗಿದ್ದರೆ ಅದರ ಮೂಲದಲ್ಲಿ ಅಸ್ಪೃಶ್ಯತೆಯ ಆಚರಣೆ ಕ್ರಿಯಾಶೀಲವಾಗಿರುವುದನ್ನು ನಾವು ಗುರುತಿಸಬೇಕಾಗುತ್ತದೆ. ಪ್ರಸ್ತುತ ಪ್ರಬಂಧವನ್ನು ೧೯೯೧ ಮತ್ತು ೨೦೦೧ರ ಜನಗಣತಿ ವರದಿಗಳಿಂದ ಪಡೆದ ಮಾಹಿತಿಯ ಮೇಲೆ ಕಟ್ಟಲಾಗಿದೆ. ಪ್ರಸ್ತಾವನೆಯನ್ನು ಸೇರಿಸಿಕೊಂಡು ಐದು ಭಾಗಗಳಲ್ಲಿ ಪ್ರಬಂಧವನ್ನು ಕಟ್ಟಲಾಗಿದೆ. ಎರಡನೆಯ ಭಾಗದಲ್ಲಿ ಅಕ್ಷರ ಸಂಸ್ಕೃತಿಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ದುಡುಮೆಗಾರರ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ದುಡುಮೆಗಾರರ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಪರಿಶೋಧಿಸಲಾಗಿದೆ. ಅಸ್ಪೃಶ್ಯತೆಯ ಬದಲಾಗುತ್ತಿರುವ ಸ್ವರೂಪವನ್ನು ನಾಲ್ಕನೆಯ ಭಾಗದಲ್ಲಿ ಚರ್ಚಿಸಲಾಗಿದೆ. ಐದನೆಯ ಭಾಗದಲ್ಲಿ ಶಿಶು ಮರಣ ಪ್ರಮಾಣಕ್ಕೆ ಸಂಬಂಧಿಸಿದ ಜಾತಿ ಸ್ವರೂಪವನ್ನು ಹಿಡಿದಿಡಲಾಗಿದೆ. ಇಡೀ ಚರ್ಚೆಯ ಸಾರಾಂಶವನ್ನು ಕೊನೆಯ ಭಾಗದಲ್ಲಿ ನೀಡಲಾಗಿದೆ. ಚರ್ಚೆಗೆ ಅಗತ್ಯವಾದ ಅಂಕಿ - ಅಂಶಗಳನ್ನು ಕೋಷ್ಟಕಗಳ ರೂಪದಲ್ಲಿ ನೀಡಲಾಗಿದೆ.

ಭಾಗ ೨

**ಅಕ್ಷರ ಸಂಸ್ಕೃತಿ ಮತ್ತು ಅಸ್ಪೃಶ್ಯತೆ**

ಅಕ್ಷರ ಸಂಸ್ಕೃತಿಯನ್ನು ಅಖಂಡವಾದಿ ನೆಲೆಯಲ್ಲಿ ಚರ್ಚಿಸಿದರೆ ನಮಗೆ ಅದರ ಪರಿಶಿಷ್ಟ ಮತ್ತು ಶಿಷ್ಟ ಸ್ವರೂಪವು ಅರಿವಿಗೆ ಬರುವುದಿಲ್ಲ. ಅಖಂಡವಾದಿ ಚರ್ಚೆಗಳು ಅನೇಕ ಸೂಕ್ಷ್ಮ ಸಂಗತಿಗಳನ್ನು ಮುಚ್ಚಿಹಾಕಿ ಬಿಡುತ್ತವೆ. ಸಾಕ್ಷಾರತೆಗೆ ಸಂಬಂಧಿಸಿದಂತೆ ವಿವರಗಳು ಕೆಳಕಂಡಂತೆ ದೊರೆಯುತ್ತವೆ.

**ಸಾಕ್ಷರತೆ : ಜನಗಣತಿ ಮಾಹಿತಿ : ೨೦೦೧**

**ಕೋಷ್ಟಕ ೧**

| **ಕ್ರ.ಸಂ.** | **ವಿವರಗಳು** | **ಒಟ್ಟು** | **ಮಹಿಳೆಯರು** | **ಪುರುಷರು** |
|---|---|---|---|---|
| ೧ | ರಾಜ್ಯದ ಒಟ್ಟು ಜನಸಂಖ್ಯೆ | ಶೇ. ೬೭.೦೪ | ೫೭.೪೫ | ೭೬.೨೯ |
| ೨ | ಪರಿಶಿಷ್ಟ ಜಾತಿ | ಶೇ. ೫೨.೯೦ | ೪೧.೭೦ | ೬೩.೮೦ |
| ೩ | ಪರಿಶಿಷ್ಟ ವರ್ಗ | ಶೇ. ೪೮.೩೦ | ೩೬.೬೦ | ೫೯.೭೦ |
| ೪ | ಅಂತರ : ಪ.ಜಾ(೧ - ೨) | – ೧೪.೧೪ | – ೧೫.೨೫ | – ೧೨.೪೯ |
| ೫. | ಅಂತರ : ಪ.ಪಂ. (೧ - ೩) | – ೧೮.೭೪ | – ೨೦.೮೫ | – ೧೬.೫೯ |

ಈ ಬಗೆಯ ಮಾಪನದಲ್ಲಿ ಸಮಸ್ಯೆಯ ಪೂರ್ಣ ಚಿತ್ರವು ಅನಾವರಣವಾಗುವುದಿಲ್ಲ. ಪರಿಶಿಷ್ಟರ ಸಾಕ್ಷರತೆಯ ಮಟ್ಟವನ್ನೇನೋ ಇದು ಒದಗಿಸುತ್ತದೆ. ಆದರೆ ಶಿಷ್ಟರ ಸಾಕ್ಷರತೆಯ ವಿವರಗಳು ಇಲ್ಲಿ ದೊರೆಯುವುದಿಲ್ಲ. ಶಿಷ್ಟರನ್ನು ಇಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಸೇರಿಸಿ ಬಿಡಲಾಗಿದೆ. ಸಾಕ್ಷರತೆಗೆ ಸಂಬಂಧಿಸಿದ ಅಸಮಾನತೆಯನ್ನು ಇಂತಹ ಮಾನಪನವು ಪೂರ್ಣವಾಗಿ ನೀಡಲು ಸಾಧ್ಯವಿಲ್ಲ.[3]

ಆದ್ದರಿಂದ ಸಾಕ್ಷರತೆಯನ್ನು ಶಿಷ್ಟ ಮತ್ತು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಮಾಪನ ಮಾಡಿದಾಗ ಅದಕ್ಕೆ ಸಂಬಂಧಿಸಿದ ಅಸಮಾನತೆಯ ಆಳ - ಅಗಲಗಳ ಅರಿವು ನಮಗೆ ಉಂತಾಗುತ್ತದೆ. ಇದನ್ನು ಕೆಳಗಿನ ಕೋಷ್ಟಕ - ೨ರಲ್ಲಿ ತೋರಿಸಿದೆ.

**ಸಾಕ್ಷರತೆ: ಶಿಷ್ಟ – ಪರಿಶಿಷ್ಟ ನೆಲೆಗಳು – ೨೦೦೧**

**ಕೋಷ್ಟಕ ೨**

| **ವಿವರಗಳು ಅಂತರ (೪-೩)** | **ರಾಜ್ಯದ ಒಟ್ಟು ಜನಸಂಖ್ಯೆ** | **ಪರಿಶಿಷ್ಟ ಜನಸಂಖ್ಯೆ** | **ಶಿಷ್ಟಜನ ಸಂಖ್ಯೆ** | **ಸಾಕ್ಷರತಾ ಶೇಕಡ ಅಂಶ** |
|---|---|---|---|---|
| ೧ | ೨ | ೩ | ೪ | ೫ |
| ಸಾಕ್ಷರತೆ:ಒಟ್ಟು | ಶೇ ೬೭.೦೪ | ೫೧.೫೫ | ೭೧.೪೫ | –೧೯.೯೦ |
| ಮ. | ಶೇ.೫೭.೪೫ | ೪೦.೨೩ | ೬೩.೩೯ | –೨೩.೧೬ |
| ಪು. | ಶೇ ೭೬.೨೯ | ೬೨.೫೮ | ೮೦.೧೮ | –೧೭.೬೦ |

ಜನಗಣತಿ ವರದಿ ಪ್ರಕಾರ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಸಾಕ್ಷರತಾ ಅಂತರ ಶೇ. ೧೪.೧೪ ಅಂಶಗಳಷ್ಟಿದ್ದರೆ. ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಅಂತರವು ಶೇ.೧೮.೭೪ರಷ್ಟಿದೆ. ಇದನ್ನು ಶಿಷ್ಟ - ಪರಿಶಿಷ್ಟರಿಗೆ ಸಂಬಂಧಿಸಿದಂತೆ ಲೆಕ್ಕ ಹಾಕಿದಾಗ ಅಂತರವು ಅಧಿಕವಾಗಿರುವುದನ್ನು ಕೋಷ್ಟಕ - ೨ರಲ್ಲಿ ನೋಡಬಹುದುದು. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಸಾಕ್ಷರತೆ ಶೇ. ೬೭.೦೪ ಆದರೆ ಶಿಷ್ಟರ ಸಾಕ್ಷರತೆ ಶೇ. ೭೧.೪೫ ಆದರೆ ಪರಿಶಿಷ್ಟ (ಪ.ಜಾ.+ಪ.ಪಂ) ಸಾಕ್ಷರತೆ ಶೇ. ೫೧.೫೫ ಇಲ್ಲಿನ ಶಿಷ್ಟ - ಪರಿಶಿಷ್ಟರ ನಡುವಿನ ಸಾಕ್ಷರತಾ ಅಂತರ ಶೇ. ೧೯.೯೦ ಅಂಶಗಳಷ್ಟಿದೆ. ಇದು ಕೋಷ್ಟಕ - ೧ರಲ್ಲಿ ಅಂತರಗಳಿಗಿಂತ ಇದು ಅಧಿಕವಾಗಿದೆ.

ಸಾಕ್ಷರತೆಗೆ ಸಂಬಂಧಿಸಿದ ಶಿಷ್ಟ - ಪರಿಶಿಷ್ಟರ ನಡುವಿನ ಅಸಮಾನತೆ ಪ್ರಮಾಣವನ್ನು ಇನ್ನೊಂದು ರೀತಿಯಲ್ಲೂ ತೋರಿಸಬಹುದಾಗಿದೆ. ಇದನ್ನು ಕೋಷ್ಟಕ - ೩ರಲ್ಲಿ ನೋಡಬಹುದು. ಅನೇಕ ದೃಷ್ಟಿಯಿಂದ ಸದರಿ ಕೋಷ್ಟಕವು ಮಹತ್ವದ್ದಾಗಿದೆ.

ಮೊದಲನೆಯದಾಗಿ ಅಕ್ಷರ ಸಂಪತ್ತಿನಲ್ಲಿ ಪರಿಶಿಷ್ಟರ ಪಾಲು ಎಷ್ಟು ಎಂಬುದನ್ನು ಇಲ್ಲಿ ದೃಢಪಡಿಸಿಕೊಳ್ಳಬಹುದು. ಬಹಳ ಸ್ಪಷ್ಟವಾಗಿ ಕಂಡಬರುವ ಸಂಗತಿಯೆಂದರೆ ಪರಿಶಿಷ್ಟರು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದ್ದಾರೋ ಅದಕ್ಕಿಂತ ಕಡಿಮೆ ಪಾಲನ್ನು ಅಕ್ಷರಸ್ಥರಿಗೆ ಸಂಬಂಧಿಸಿದಂತೆ ಪಡೆದಿದ್ದಾರೆ.

## ಅಭಿವೃದ್ಧಿಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳು: ಸಾಕ್ಷರತೆ ೧೯೯೧ ಮತ್ತು ೨೦೦೧

**ಕೋಷ್ಟಕ ೩**

| ವಿವರಗಳು | | ರಾಜ್ಯದ ಒಟ್ಟು ಮೊತ್ತ | | ಪರಿಶಿಷ್ಟ / ದಲಿತರು | | ಶಿಷ್ಟ / ದಲಿತೇತರರು | |
|---|---|---|---|---|---|---|---|
| | | ೧೯೯೧ | ೨೦೦೧ | ೧೯೯೧ | ೨೦೦೧ | ೧೯೯೧ | ೨೦೦೧ |
| ೧. ಜನಸಂಖ್ಯೆ (ಲಕ್ಷಗಳಲ್ಲಿ) | ಒಟ್ಟು | ೪೪೯.೭೭ | ೫೨೭.೩೪ | ೯೨.೮೫ (೨೦.೬೪) | ೧೨೦.೨೮ (೨೨.೮೧) | ೩೫೬.೯೨ (೭೯.೩೬) | ೪೦೭.೦೬ (೭೭.೧೯) |
| | ಮ | ೨೨೦.೨೫ | ೨೫೮.೭೭ | ೪೫.೫೨ (೨೦.೬೬) | ೫೯.೩೧ (೨೨.೯೨) | ೧೭೪.೭೩ (೭೯.೩೪) | ೧೯೯.೪೬ (೭೭.೦೮) |
| | ಪು | ೨೨೯.೫೧ | ೨೬೮.೫೬ | ೪೭.೩೩ (೨೦.೬೨) | ೬೦.೯೫ (೨೨.೬೯) | ೧೮೨.೧೮ (೭೯.೩೮) | ೨೦೭.೬೦ (೭೭.೩೧) |
| ೨. ಅಕ್ಷರಸ್ಥರು (ಲಕ್ಷಗಳಲ್ಲಿ) | ಒಟ್ಟು | ೨೧೦.೨೩ | ೩೦೭.೭೫ | ೨೮.೨೨ (೧೩.೪೩) | ೫೨.೪೯ (೧೭.೦೬) | ೧೮೨.೦೧ (೮೬.೫೭) | ೨೫೫.೨೬ (೮೨.೯೪) |
| | ಮ | ೮೧.೧೪ | ೧೨೯.೫೭ | ೯.೩೫ (೧೧.೪೯) | ೨೦.೨೩ (೧೫.೬೧) | ೭೧.೭೯ (೮೮.೫೧) | ೧೦೯.೩೪ (೮೪.೩೯) |
| | ಪು | ೧೨೮.೮೨ | ೧೭೮.೧೮ | ೧೮.೮೭ (೧೪.೬೫) | ೩೨.೨೬ (೧೮.೧೦) | ೧೦೯.೯೨ (೮೫.೩೫) | ೧೪೫.೬೨ (೮೧.೮೯) |
| ೩. ಅನಕ್ಷರಸ್ಥರು (ಲಕ್ಷಗಳಲ್ಲಿ) | ಒಟ್ಟು | ೧೬೪.೮೫ | ೧೫೧.೩೩ | ೪೬.೮೭ (೨೮.೩೮) | ೪೯.೩೩ (೩೧.೬೦) | ೧೧೮.೦೭ (೭೧.೬೨) | ೧೦೧.೯೯ (೬೭.೪೦) |
| | ಮ | ೧೦೨.೨೨ | ೯೫.೯೬ | ೨೭.೪೦ (೨೬.೮೦) | ೩೦.೬೦ (೩೧.೩೦) | ೭೪.೮೨ (೭೩.೨೦) | ೬೫.೯೨ (೬೮.೭೦) |
| | ಪು | ೬೨.೬೩ | ೫೫.೩೭ | ೧೯.೩೮ (೩೦.೯೯) | ೧೯.೨೯ (೩೪.೮೪) | ೪೩.೨೫ (೬೯.೦೧) | ೩೬.೦೮ (೬೫.೧೬) |

**ಟಿಪ್ಪಣಿ:** ಆವರಣದಲ್ಲಿ ಅಂಕಿ ಒಟ್ಟು ಮೊತ್ತ ಶೇಕಡ ಪ್ರಮಾಣವನ್ನು ಪ್ರತಿನಿಧಿಸುತ್ತವೆ.

ಆದರೆ ಅನಕ್ಷಸ್ಥರಿಗೆ ಸಂಬಂಧಿಸಿದಂತೆ ಮಾತ್ರ ಪರಿಶಿಷ್ಟರ ಪಾಲು ಅವರು ಜನಸಂಖ್ಯೆಯಲ್ಲಿ ಪಡೆದಿರುವುದಕ್ಕಿಂತ ಅಧಿಕವಾಗಿದೆ. ಇದು ೧೯೯೧ ಮತ್ತು ೨೦೦೧ ಎರಡೂ ಕಾಲಘಟ್ಟಗಳಿಗೆ ಅನ್ವಯವಾಗುತ್ತದೆ. ಜನಸಂಖ್ಯೆಯಲ್ಲಿ ಪರಿಶಿಷ್ಟರ ಪಾಲು ೧೯೯೧ರಲ್ಲಿ ಶೇ. ೨೦.೬೪ರಷ್ಟಿದ್ದರೆ ೨೦೦೧ರಲ್ಲಿ ಅವರ ಪಾಲು ಶೇ ೨೨.೮೧ಕ್ಕೇರಿದೆ. ಆದರೆ ಅಕ್ಷರಸ್ಥರಲ್ಲಿ ಅವರ ಪಾಲು ೧೯೯೧ರಲ್ಲಿ ಶೇ ೧೩.೪೩ ರಷ್ಟಿದ್ದರೆ ೨೦೦೧ರಲ್ಲಿ ಅವರ ಪಾಲು ಶೇ ೧೭.೦೬ಕ್ಕೇರಿದೆ. ಇದಕ್ಕೆ ಭಿನ್ನವಾಗಿ ಅನಕ್ಷರಸ್ಥ್ಲೂ ಅವರ ಪಾಲು ೧೯೯೧ರಲ್ಲಿ ಶೇ ೨೮.೩೮ರಷ್ಟಿದ್ದರೆ ೨೦೦೧ರಲ್ಲಿ ಅದು ಶೇ ೩೨.೬೦ಕ್ಕೇರಿದೆ. ಆದರೆ ಶಿಷ್ಟರಿಗೆ ಸಂಬಂಧಿಸಿದಂತೆ ಅನಕ್ಷರಸ್ಥರ ಪಾಲು ೧೯೯೧ರಲ್ಲಿ ಶೇ. ೭೧.೬೨ರಷ್ಟಿದ್ದುದು ೨೦೦೧ರಲ್ಲಿ ಶೇ. ೬೭.೪೦ಕ್ಕಿಳಿದಿದೆ. ಇದು ಕುತೂಹಲಕಾರಿ ಸಂಗತಿಯಾಗಿದೆ. ಅಕ್ಷರಸ್ಥರಿಗೆ ಸಂಬಂಧಿಸಿದಂತೆ ಪರಿಶಿಷ್ಟರ ಪಾಲು ಅಧಿಕವಾಗುತ್ತಿದ್ದು ಶಿಷ್ಟರ ಪಾಲು ಅಷ್ಟರಮಟ್ಟಿಗೆ ಕಡಿಮೆಯಾಗುತ್ತಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಆದರೆ ಅನಕ್ಷರಸ್ಥರಲ್ಲಿ ಶಿಷ್ಟರ ಪಾಲು ಕಡಿಮೆಯಾಗುತ್ತಿದ್ದು ಪರಿಶಿಷ್ಟರ ಪಾಲು ಅಧಿಕಗೊಳ್ಳುತ್ತಿದೆ. ಇದರ ಇಂತಾರ್ಥವೇನೆಂದರೆ ಶಿಷ್ಟರ ಸಾಕ್ಷರತೆಯು ಯಾವ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆಯೋ ಅದೇ ಪ್ರಮಾಣದಲ್ಲಿ ಪರಿಶಿಷ್ಟ ಅನಕ್ಷರಸ್ಥತಾ ಪ್ರಮಾಣ ಕಡಿಮೆಯಾಗುತ್ತಿಲ್ಲ. ಈ ಸಂಗತಿಯ ಮತ್ತೊಂದು ಮುಗ್ಗುಲನ್ನು ನಾವು ಪರಿಗಣಿಸಬೇಕಾಗುತ್ತದೆ. ಅದು ಸಾಕ್ಷರತೆಯ ಲಿಂಗ ಸಂಬಂಧಿ ಆಯಾಮ ಹಾಗೂ ಅದರ ಶಿಷ್ಟ - ಪರಿಶಿಷ್ಟ ಆಯಾಮ. ಕೋಷ್ಟಕ - ೧ರಲ್ಲಿ ತೋರಿಸಿರುವಂತೆ ಕನಿಷ್ಟ ಸಾಕ್ಷರತೆ ೨೦೦೧ರಲ್ಲಿ ಪರಿಶಿಷ್ಟ ವರ್ಗದ ಮಹಿಳೆಯರಲ್ಲಿ ಕಾಣಬಹುದು(ಶೇ.೩೬.೬೦). ಅದೇ ರೀತಿ ಕೋಷ್ಟಕ - ೨ರಲ್ಲಿ ತೋರಿಸಿದಂತೆ ಶಿಷ್ಟ ಮತ್ತು ಪರಿಶಿಷ್ಟರ ನಡುವಿನ ಸಾಕ್ಷರತಾ ಅಂತರವು ಪುರುಷರಿಗೆ ಸಂಬಂಧಿಸಿದಂತೆ ಶೇ. ೧೭.೬೦ ಅಂಶಗಳಷ್ಟಿದ್ದರೆ ಮಹಿಳೆಯರಿಗೆ ಸಂಬಂಧಿಸಿದಂತೆ ಅದು ಶೇ ೨೩.೧೬ ಅಂಶಗಳಷ್ಟಿದೆ.

ಶಿಷ್ಟ - ಪರಿಶಿಷ್ಟರಿಗೆ ಸಂಬಂಧಿಸಿದಂತೆ ಸಾಕ್ಷರತೆಯ ಮಟ್ಟ ಪರಿಶಿಷ್ಟರಲ್ಲಿ ಕಡಿಮೆಯಿದೆ. ಆದರೆ ಪರಿಶಿಷ್ಟರನ್ನು ತೆಗೆದುಕೊಂಡಾಗ ಕನಿಷ್ಟ ಸಾಕ್ಷರತೆಯು ಪರಿಶಿಷ್ಟ ಮಹಿಳೆಯರಲ್ಲಿದೆ. ಶಿಷ್ಟ ಮತ್ತು ಪರಿಷ್ಟರ ಸಂಬಂಧಗಳನ್ನು ಅಖಂಡವಾಗಿ ಪರಿಭಾವಿಸಿಕೊಂಡಾಗ ಪರಿಶಿಷ್ಟರ ಸ್ಥಾನ ಅಂಚಿನಲ್ಲಿರುತ್ತದೆ. ಆದರೆ ಅವುಗಳ ಸಂಬಂಧಗಳನ್ನು ಲಿಂಗಸ್ವರೂಪದ ನೆಲೆಯಿಂದ ಪರಿಭಾವಿಸಿಕೊಂಡಾಗ ಪರಿಶಿಷ್ಟ ಮಹಿಳೆಯರ ಸ್ಥಾನವು ಅತ್ಯಂತ ಕನಿಷ್ಟತಮವಿರುವುದು ಕಂಡುಬರುತ್ತದೆ.

ಸಾಕ್ಷರತೆಯನ್ನು ಅಭಿವೃದ್ಧಿಯ ಸೂಚಿಯನ್ನಾಗಿ ಮತ್ತು ಅನಕ್ಷರತೆಯನ್ನು ದುಸ್ಥಿತಿಯ ಸೂಚಿಯಾಗಿ ಪರಿಗಣಿಸಿದರೆ ಕರ್ನಾಟಕದಲ್ಲಿ ಪರಿಶಿಷ್ಟರು ತೀವ್ರ ತಾರತಮ್ಯದಿಂದ ದುಸ್ಥಿತಿಯಿಂದ ನರಳುತ್ತಿರುವುದು ಕಂಡುಬರುತ್ತದೆ. ಅಕ್ಷರ ಸಂಸ್ಕೃತಿಯನ್ನು ಶಿಷ್ಟರು ಸಾಪೇಕ್ಷವಾಗಿ ಗುತ್ತಿಗೆ ಹಿಡಿದುಕೊಂಡುಬಿಟ್ಟಿರುವುದು ತಿಳಿಯುತ್ತದೆ. ಅಕ್ಷರ ಸಂಸ್ಕೃತಿಯ ಮಹತ್ವವನ್ನು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಡಾ. ಬಿ.ಆರ್. ಅಂಬೇಡ್ಕರ್ ಸ್ಪಷ್ಟವಾಗಿ ಗುರುತಿಸಿದ್ದರು. ಲಿಖಿತ ಅಕ್ಷರವನ್ನು ಅವರು ಆರಾಧಿಸುತ್ತಿದ್ದರು. ತಮ್ಮ ಜೀವಮಾನದುದ್ದಕ್ಕೂ ಅವರು ಯಾವುದೇ ಸಮಿತಿ, ಆಯೋಗ ಅಥವಾ ಸರ್ಕಾರದ ಮುಂದೆ ವಾದ ಮಂಡಿಸಬೇಕಾಗಿದ್ದರೆ ಅವರು ಲಿಖಿತ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಿದ್ದರು. ಮೌಖಿಕ ಸಂಪ್ರದಾಯವನ್ನು ತಬ್ಬಿಕೊಂಡಿರುವ ಪರಿಶೀಷ್ಟರಿಗೆ ಸಮಾಜದಲ್ಲಿ, ಅದರಲ್ಲೂ ಪ್ರತಿಷ್ಠಿತ ಸಮಾಜದ ಎದುರಿಗೆ ಗೌರವನ್ನು ದಕ್ಕಿಸಿಕೊಳ್ಳಬೇಕಾದರೆ ಪರಿಶಿಷ್ಟರು ಅಕ್ಷರ ಸಂಸ್ಕೃತಿಯನ್ನು ಮೈಗುಡಿಸಿಕೊಳ್ಳಬೇಕೆಂಬುದು ಅವರ ನಂಬಿಕೆಯಾಗಿತ್ತು. ಅಕ್ಷರ ಸಂಸ್ಕೃತಿಯ ಮೇಲೆ ಬಾಬಾ ಸಾಹೇಬ್ ಪ್ರಭುತ್ವವನ್ನು ಸಾಧಿಸಿಕೊಂಡಿದ್ದರಿಂದ ಭಾರತ ಅಸ್ಪೃಶ್ಯ ಸಮಾಜದ ನೋವನ್ನು ಪ್ರಪಂಚಕ್ಕೆ ತಿಳಿಸುವುದು ಅವರಿಗೆ ಸಾಧ್ಯವಾಯಿತು. ಅಕ್ಷರವು ನೀಡಿದ ಅಧಿಕಾರದಿಂದ ಅವರು ಬ್ರಾಹ್ಮಣಶಾಹಿಯನ್ನು ಎದುರಿಸುವುದು ಸಾಧ್ಯವಾಯಿತು. ಅಕ್ಷರಕ್ಕೂ ಅಧಿಕಾರಕ್ಕೂ ನಡುವೆ ಇರುವ ಸಂಬಂಧವನ್ನು ಇಂದಿಗೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಪರಿಶಿಷ್ಟರಿಗೆ ಅಕ್ಷರವು ತುಂಬಾ ಮಹತ್ವವಾದ ಸಂಗತಿಯಾಗಿದೆ. ಅಕ್ಷರ ಸಂಪತ್ತಿನಿಂದ ವಂಚಿತರಾದ ಪರಿಶಿಷ್ಟರ ಶಿಕ್ಷಣಕ್ಕೆ ವಿಶೇಷ ಗಮನ ನೀಡಬೇಕಾದ ಅಗತ್ಯವಿದೆ.[4] ಶಿಷ್ಟ ಮತ್ತು ಪರಿಶಿಷ್ಟಗಳ ನಡುವಿನ ಭಿನ್ನತೆಯನ್ನು ಸೂಚಿಸುವ ಬಹುಮುಖ್ಯ ಸಂಗತಿಯೆಂದರೆ ಅಕ್ಷರದ ಮೇಲಿನ ಅಧಿಕಾರವಾಗಿದೆ.

ಭಾಗ ೩

**ದುಡಿಮೆ : ಶಿಷ್ಟ – ಪರಿಶಿಷ್ಟ ನೆಲೆಗಳು**

ಕರ್ನಾಟಕಕ್ಕೆ - ಭಾರತಕ್ಕೆ ಸಂಬಂಧಿಸಿದಂತೆ ದುಡಿಮೆಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈ ಬಗೆಯಲ್ಲಿ ದುಡಿಮೆಯನ್ನು, ದುಡಿಮೆಗಾರರನ್ನು ಕುರಿತಂತೆ ಚರ್ಚಿಸದಿದ್ದರೆ ನಮಗೆ ದುಡಿಮೆಗೆ ಸಂಬಂಧಿಸಿದ ಸೂಕ್ಷ್ಮ ಸಂಗತಿಗಳು ಗೋಚರವಾಗುವುದಿಲ್ಲ. ಬಂಡವಾಳ ಸಂಚಯನವು ಶಿಷ್ಟರಿಗೆ ಪೂರಕವಾಗಿರುವುದನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ದುಡಿಮೆಗೆ ಸಂಬಂಧಿಸಿದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಕೂಲಂಕಷವಾಗಿ ಚರ್ಚಿಸಬೇಕಾಗುತ್ತದೆ. ಈ ಬಗೆಯ ವಿಶ್ಲೇಷಣೆಯಿಂದ ಮಾತ್ರ ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿಯು ಶಿಷ್ಟರಿಗೆ ಅಭಿಮುಖಿಯಾಗಿರುವ ಮತ್ತು ಪರಿಶಿಷ್ಟರಿಗೆ ವಿಮುಖಿಯಾಗಿರುವ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು. ದುಡಿಮೆಗೆ ಸಂಬಂಧಿಸಿದ ಒತ್ತಡವನ್ನು ಪರಿಶಿಷ್ಟರು ನಿರ್ವಹಿಸುತ್ತಿದ್ದರೆ ಬಂಡವಾಳ ಸಂಚಯನದ ಅನುಕೂಲಗಳನ್ನು ಶಿಷ್ಟರು ಅನುಭವಿಸುತ್ತಿದ್ದಾರೆ. ಬಂಡವಾಳ ಸಂಚಯನ(ಕ್ಯಾಪಿಟಲ್ ಅಕ್ಯುಮ್ಯುಲೇಶನ್) ಎಂಬುದನ್ನೇ ಅಭಿವೃದ್ಧಿಯೆಂದು ಕರೆಯುವುದಾದರೆ ಅದನ್ನು ಶಿಷ್ಟರು ಗುತ್ತಿಗೆ ಹಿಡಿದಿರುವುದನ್ನು ಗುರುತಿಸಬಹುದಾಗಿದೆ. ಪರಿಶಿಷ್ಟರು ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಿರಲಿ, ದುಸ್ಥಿತಿಯ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುವುದರಲ್ಲಿ ವಿಫಲರಾಗುತ್ತಿದ್ದಾರೆ. ಪ್ರಸ್ತುತ ಪ್ರಬಂಧದ ಭಾಗ - ೨ರಲ್ಲಿ ಇದನ್ನು ಸಾಕ್ಷರತೆ - ಅಕ್ಷರ ಸಂಸ್ಕೃತಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಈ ಭಾಗ - ೩ರಲ್ಲಿ ದುಡಿಮೆಗೆ ಸಂಬಂಧಿಸಿದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಶೋಧಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿ ಮತ್ತು ದುಡಿಮೆಗಳ ನಡುವಿನ ಸಂಬಂಧವನ್ನು ಒತ್ತಿ ಹೇಳುವ ಅಗತ್ಯವಿಲ್ಲ. ದುಡಿಮೆಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಕುರಿತಂತೆ ಚರ್ಚಿಸುವುದರ ಜೊತೆಗೆ ಇಲ್ಲಿ ಅದರ ಲಿಂಗ ಸಂಬಂಧಿ ಸ್ವರೂಪವನ್ನು ಹಿಡಿದಿಡಲಾಇದೆ. ಅಸ್ಪೃಶ್ಯತೆಯ ಆಚರಣೆಯಿಂದ ಹೆಚ್ಚು ದೌರ್ಜನ್ಯಕ್ಕೆ, ಹಿಂಸೆಗೆ ಪರಿಶಿಷ್ಟ ಮಹಿಳೆಯರು ಒಳಗಾಗಿದ್ದಾರೆ. ಭಾಗ - ೩ರಲ್ಲಿ ದುಡಿಮೆಗೆ ಸಂಬಂಧಿಸಿದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಶೋಧಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿ ಮತ್ತು ದುಡಿಮೆಗಳ ನಡುವಿನ ಸಂಬಮಧವನ್ನು ಒತ್ತಿ ಹೇಳುವ ಅಗತ್ಯವಿಲ್ಲ. ದುಡಿಮೆಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಕುರಿತಂತೆ ಚರ್ಚಿಸುವುದರ ಜೊತೆಗೆ ಇಲ್ಲಿ ಅದರ ಲಿಂಗ ಸಂಬಂಧಿ ಸ್ವರೂಪವನ್ನು ಹಿಡಿದಿಡಲಾಗಿದೆ. ಅಸ್ಪೃಶ್ಯತೆಯ ಆಚರಣೆಯಿಂದ ಹೆಚ್ಚು ದೌರ್ಜನ್ಯಕ್ಕೆ, ಹಿಂಸೆಗೆ ಪರಿಶಿಷ್ಟ ಮಹಿಳೆಯರು ಒಳಗಾಗಿದ್ದಾರೆ. ಭಾಗ - ೩ರಲ್ಲಿ ನಾಲ್ಕು ಉಪಭಾಗಗಳಿವೆ. ಮೊದಲನೆಯ ಉಪಭಾಗ (೩.೧)ದಲ್ಲಿ ದುಡಿಮೆಯ ರಾಚನಿಕ ಸ್ವರೂಪವನ್ನು ಶಿಷ್ಟ - ಪರಿಶಿಷ್ಟ ನೆಲೆಯಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ದುಡಿಮೆಯಯ ರಾಚನಿಕ ಸ್ವರೂಪವನ್ನು ಗುರುತಿಸುವುದರ ಮೂಲಕ ನಮ್ಮ ಸಮಾಜದ ಸಂದರ್ಭದಲ್ಲಿ ಪರಿಶಿಷ್ಟರು ಕೃಷಿ, ಗಣಿಗಾರಿಕೆ, ಮೀನುಗಾರಿಕೆ, ಕಲ್ಲು ಒಡೆಯುವುದು ಮುಂತಾದ ಚಟುವಟಿಕೆಗಳನ್ನು ಒಳಗೊಂಡ ಪ್ರಾಥಮಿಕ ವಲಯದಲ್ಲಿ ಮುಗಿಬಿದ್ದಿರುವುದನ್ನು ಮತ್ತು ಶಿಷ್ಟರು ಹೆಚ್ಚು ವರಮಾನ ತರುವ, ಪ್ರವರ್ಧಮಾನಕ್ಕೆ ಬರುತ್ತಿರುವ ಉದ್ದಿಮೆ ಮತ್ತು ಸೇವಾ ವಲಯಗಳಿಗೆ ಲಗ್ಗೆ ಹಾಕಿರುವುದನ್ನು ತೋರಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿಯ ಮುಂಚೂಣಿಯಲ್ಲಿ ಶಿಷ್ಟರಿದ್ದರೆ ಪರಿಶಿಷ್ಟರು ಅದರಿಂದ ವಂಚಿತರಾಗಿ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಭಾಗ - ೩.೨ರಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕೃಷಿ ಅವಲಂಬನೆಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಶೋಧಿಸಲು ಪ್ರಯತ್ನಿಸಲಾಗಿದೆ. ಕೃಷಿ ಅವಲಂಬನೆಯ ಸ್ವರೂಪವನ್ನು ೧೯೯೧ ಮತ್ತು ೨೦೦೧ ಎರಡು ಕಾಲಘಟ್ಟಗಳಿಗೆ ಸಂಬಂಧಿಸಿದಂತೆ ಗುರುತಿಸಲಾಗಿದೆ. ಭಾಗ - ೩.೩ರಲ್ಲಿ ದಿನಗೂಲಿ ದುಡಿಮೆಗಾರರ ಪ್ರಮಾಣವನ್ನು ಶಿಷ್ಟರಿಗೆ ಮತ್ತು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಗುರುತಿಸಲಾಗಿದೆ. ಕೃಷಿ ಅವಲಂನೆಯು ಹಾಗೂ ದಿನಗೂಲಿ ದುಡಿಮೆಗಾರರ ಪ್ರಮಾಣ ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿರುವುದನ್ನು ಮಾಪನ ಮಾಡುವುದರ ಮೂಲಕ ಪರಿಶಿಷ್ಟ ದುಡಿಮೆಗಾರರು ಯಾವ ಬಗೆಯ ಬಡತನವನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಸಾಧಿಸಲು ಪ್ರಯತ್ನಿಸಲಾಗಿದೆ.

ಭಾಗ - ೩.೪ರಲ್ಲಿ ದುಡಿಮೆಯ ಲಿಂಗ ಸಂಬಂಧಿ ನೆಲೆಗಳನ್ನು ವಿಶ್ಲೇಷಿಸಲಾಗಿದೆ.ಇದು ಪ್ರಸ್ತುತ ಪ್ರಬಂಧದ ಮಹತ್ವದ ಭಾಗವೆಂದು ಭಾವಿಸಲಾಗಿದೆ.

**ದುಡಿಮೆಯ ರಾಚನಿಕ ಸ್ವರೂಪ**

ಕೋಷ್ಟಕ - ೪ ರಲ್ಲಿ ೧೯೯೧ಕ್ಕೆ ಸಂಬಂಧಿಸಿದ ದುಡಿಮೆಗಾರರ ರಾಚನಿಕ ಸ್ವರೂಪವನ್ನು ಮಂಡಿಸಲಾಗಿದೆ.

**ಕರ್ನಾಟಕ: ದುಡಿಮೆಯ ರಾಚನಿಕ ಸ್ವರೂಪ : ಶಿಷ್ಟ – ಪರಿಶಿಷ್ಟ ನೆಲೆಗಳು ೧೯೯೧**

**ಕೋಷ್ಟಕ ೪**
(ಸಂಖ್ಯೆ : ಲಕ್ಷಗಳಲ್ಲಿ)

| **ವಿವರಗಳು** | **ಪ್ರಾಥಮಿಕ ವಲಯ** | | **ದ್ವಿತೀಯವಲಯ** | | **ತೃತೀಯ ವಲಯ** | | **ಒಟ್ಟು** | |
|---|---|---|---|---|---|---|---|---|
| | **ಸಂಖ್ಯೆ** | **ಶೇಕಡಾ** | **ಸಂಖ್ಯೆ** | **ಶೇಕಡಾ** | **ಸಂಖ್ಯೆ** | **ಶೇಕಡಾ** | **ಸಂಖ್ಯೆ** | **ಶೇಕಡಾ** |
| **ಪರಿಶಿಷ್ಟರು / ದಲಿತರು** | ೩೧.೧೫ | ೮೦.೨೨ | ೩.೭೩ | ೯.೫೮ | ೩.೯೬ | ೧೦.೨೦ | ೩೮.೮೩ | ೧೦೦.೦೦ |
| **ಶಿಷ್ಟರು** | ೮೫.೩೪ | ೬೩.೬೪ | ೧೯.೦೭ | ೧೪.೨೨ | ೨೯.೬೮ | ೨೨.೧೪ | ೧೩೪.೯ | ೧೦೦.೦೦ |
| **ಒಟ್ಟು** | ೧೧೩.೪೯ | ೬೭.೩೭ | ೨೨.೭೯ | ೧೩.೧೮ | ೩೩.೬೪ | ೧೯.೪೫ | ೧೬೨.೯೧ | ೧೦೦.೦೦ |

*ಟಿಪ್ಪಣಿ : ಈ ವಿವರಗಳನ್ನು ೧೯೯೧ಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ದುಡಿಮೆಗಾರರ ವಲಯವಾರು ಹಂಚಿಕೆಯ ೨೦೦೧ರ ಜನಗಣತಿ ವಿವರಗಳು ಈ ಪ್ರಕಾರದಲ್ಲಿ ದೊರೆಯುತ್ತಿಲ್ಲ.*

ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗುತ್ತಿರುವ ಪ್ರಮೇಯವೆಂದರೆ ಯಾವ ಆರ್ಥಿಕತೆಯಲ್ಲಿ ದುಡಿಮೆಗಾರ ವರ್ಗ ಅಧಿಕವಾಗಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವುದೋ ಅಲ್ಲಿ ಆರ್ಥಿಕ ದುಸ್ಥಿತಿ ತೀವ್ರವಾಗಿರುತ್ತದೆ ಎಂಬುದಾಗಿದೆ.[5] ಇಡೀ ಕರ್ನಾಟಕವನ್ನೇ ತೆಗೆದುಕೊಂಡರೆ ಪ್ರಾಥಮಿಕ ವಲಯದ ಅವಲಂಬನೆ ಅಗಾಧವಾಗಿದೆ. ಆದರೆ ಈ ಅವಲಂಬನೆಯ ಪ್ರಮಾಣವು ಶಿಷ್ಟರು ಮತ್ತು ಪರಿಶಿಷ್ಟರ ನಡುವೆ ಭಿನ್ನವಾಗಿದೆ. ಪರಿಶಿಷ್ಟರಿಗೆ ಸಂಬಂಧಿಸಿದಂತೆ ಪ್ರಾಥಮಿಕ ವಲಯದ ಅವಲಂಬನೆ ಶೇ. ೮೦.೨೨ರಷ್ಟಿದ್ದರೆ ದ್ವಿತೀಯ ಮತ್ತು ತೃತೀಯ ವಲಯಗಳ ಅವಲಂಬನೆ ಕೇವಲ ಶೇ. ೧೯.೭೮ ಆದರೆ ಶಿಷ್ಟರಿಗೆ ಸಂಬಂಧಿಸಿದಂತೆ ದುಡಿಮೆಗಾರರು ಪ್ರಾಥಮಿಕ ವಲಯವನ್ನು ಬಿಟ್ಟು ದ್ವಿತೀಯ ಹಾಗೂ ತೃತೀಯ ವಲಯಗಳಿಗೆ ನುಗ್ಗುತ್ತಿದ್ದಾರೆ. ಇವರಲ್ಲಿ ಪ್ರಾಥಮಿಕಕೇತರ ವಲಯಗಳ ಅವಲಂಬನೆ ಶೇ. ೩೬.೩೬.

ಸರ್ವೇಸಾಮಾನ್ಯವಾಗಿ ತಿಳಿದಿರುವಂತೆ ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನದ ಪ್ರಮಾಣವು ಪ್ರಾಥಮಿಕೇತರ ವಲಯದಲ್ಲಿನ ತಲಾ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ.[6] ಈ ಕಾರಣದಿಂದಾಗಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಜೀವನ ಮಟ್ಟವು ಪ್ರಾಥಮಿಕೇತರ ವಲಯಗಳನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಜೀವನ ಮಟ್ಟಕ್ಕಿಂತ ಕಡಿಮೆಯಿರುತ್ತದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ೧೯೯೫ - ೯೬ರಲ್ಲಿ ಪ್ರಾಥಮಿಕ ವಲದಯಲ್ಲಿನ ತಲಾ ಉತ್ಪನ್ನ (ಚಾಲ್ತಿ ಬೆಲೆಗಳಲ್ಲಿ) ರೂ ೨೭೦೦. ಆದರೆ ಪ್ರಾಥಮಿಕೇತರ ವಲಯದಲ್ಲಿನ ತಲಾ ಉತ್ಪನ್ನ ರೂ. ೧೦,೨೪೭. ದುಡಿಮೆಯ ರಾಚನಿಕ ಸ್ವರೂಪದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಗುರುತಿಸುವುದರ ಮೂಲಕ ಸಮಾಜದ ಯಾವ ವರ್ಗ ಪ್ರಾಥಮಿಕೇತರ ವಲಯವನ್ನು ಪ್ರವೇಶಿಸುತ್ತಿದೆ. ಮತ್ತು ಅಧಿಕ ಪ್ರಮಾಣದ ತಲಾ ಉತ್ಪನ್ನವನ್ನು ಪಡೆಯುತ್ತಿದೆ ಎಂಬುದನ್ನು ಹಿಡಿದಿಡಬಹುದಾಗಿದೆ.

ಅಭಿವೃದ್ಧಿಯನ್ನು ಅಖಂಡವಾದಿ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಬಿಡಿ ಬಿಡಿಯಾಗಿ ಪೃಥಕ್ಕರಿಸಿದಾಗ ನಮಗೆ ಆರ್ಥಿಕತೆಯಲ್ಲಿನ ಅಸಮಾನತೆಯ ಸೂಕ್ಷ್ಮ ನೆಲೆಗಳ ದರ್ಶನವಾಗುತ್ತದೆ. ಅಸ್ಪೃಶ್ಯತೆ, ತಾರತಮ್ಯ, ಮಡಿ - ಮೈಲಿಗೆ, ಶೋಷಣೆಗಳಿಂದ ಪರಿಶಿಷ್ಟರು ಅಕ್ಷರ ಸಂಪತ್ತಿನಿಂದ ವಂಚಿತರಾಗಿದ್ದಾರೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಕಾರಣದಿಂದಾಗಿ ಪ್ರಾಥಮಿಕೇತರ ವಲಯವನ್ನು ಹೆಚ್ಚು ಹೆಚ್ಚಾಗಿ ಪ್ರವೇಶಿಸಲು ಅವರಿಗೆ ಸಾಧ್ಯವಿಲ್ಲವಾಗಿದೆ. ಜಾಗತೀಕರಣವು ಸಮಾಜದಲ್ಲಿ ಆಳವಾಗಿ ಬೇರೂರಿರುವ ತಾರತಮ್ಯ - ಅಸಮಾನತೆಗಳನ್ನು ಮತ್ತಷ್ಟು ತೀವ್ರಗೊಳಿಸುವ ಸಾಧ್ಯತೆಯನ್ನು ಇಲ್ಲಿ ಗುರುತಿಸಬಹುದಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ, ಉದ್ದಿಮೆಗೆ ಸಂಬಂಧಿಸಿದಂತೆ ಸರ್ಕಾರವು ಹಿಂದೆ ಸರಿಯುತ್ತಿರುವುದರಿಂದಾಗಿ ಮತ್ತು ಖಾಸಗಿ ವಲಯದ ವರ್ಧನೆಯಿಂದಾಗಿ, ಮಾರ್ಕೆಟ್ಟೀಕರಣದಿಂದಾಗಿ ಪರಿಶಿಷ್ಟರು ಶಿಕ್ಷಣ ಪಡೆಯುವುದು ದುರ್ಲಬವಾಗುತ್ತಿದೆ. ಶಿಕ್ಷಣದಿಂದ ವಂಚಿತರಾದ ಪರಿಶಿಷ್ಟರು ತೀವ್ರಗತಿಯಲ್ಲಿ ವರ್ಧಿಸುತ್ತಿರುವ ಸೇವಾವಲಯವನ್ನು ಪ್ರವೇಶಿಸುವುದು ಕಷ್ಟವಾಗುತ್ತದೆ. ಜಾಗತೀಕರಣ, ಉದಾರವಾದ, ಖಾಸಗೀಕರಣಗಳು ಸಮಾಜದಲ್ಲಿ ಲಾಗಾಯ್ತಿನಿಂದ ಹರಿದುಕೊಂಡು ಬರುತ್ತಿರುವ ಅಸಮಾನತೆ - ತಾರತಮ್ಯಗಳನ್ನು ಗಟ್ಟಿಗೊಳಿಸುತ್ತವೆ ವಿನಾ ನಾಶಮಾಡುತ್ತಿಲ್ಲ.

ಅಭಿವೃದ್ಧಿಗೆ ಸಂಬಂಧಿಸಿದ ಪರಿಶಿಷ್ಟ ಮತ್ತು ಶಿಷ್ಟರ ನಡುವಿನ ಅಸಮಾನತೆಯನ್ನು ಅಮರ್ತ್ಯಸೇನ್ 'ಅನೂಚಾನವಾಗಿ ಹರಿದುಕೊಂಡು ಬಂದ ಸಂಗತಿಗಳು' ಎಂದು ಗುರುತಿಸುತ್ತಾರೆ (೨೦೦೨:೨೫೮). ಅವರ ಪ್ರಕಾರ ಜನತಾಂತ್ರಿಕ ಸಂಸ್ಥೆಗಳ ಸಾಧನೆಯು ವಿಸ್ತೃತವಾದ ಸಾಮಾಜಿಕ ಸ್ಥಿತಿಗಳನ್ನು ಅವಲಂಬಿಸಿದೆ. ಭಾರತದಲ್ಲಿನ ಪ್ರಜಾಪ್ರಭುತ್ವದ ವೈಫಲ್ಯಕ್ಕೂ ಮತ್ತು ಅನೂಚಾನವಾಗಿ ಹರಿದುಕೊಂಡು ಬಂದಿರುವ ಸಾಮಾಜಿಕ ಅಸಮಾನತೆಗಳಿಗೂ ನಡುವೆ ಸಂಬಂಧವಿದೆ.[7] ದುಡಿಮೆಯ ರಾಚನಿಕ ಸ್ವರೂಪದ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಗತಕಾಲದಿಂದ ಹರಿದುಕೊಂಡು ಬಂದಿರುವ ಸಾಮಾಜಿಕ ಅಸಮಾನತೆಯ ಪರಿಣಾಮವೆಂದು ನೋಡಬೇಕಾಗುತ್ತದೆ.

**ಕೃಷಿ ಅವಲಂಬನೆ: ಶಿಷ್ಟ – ಪರಿಶಿಷ್ಟ ನೆಲೆಗಳು**

ಶ್ರಮ ಮತ್ತು ಭೂಮಿಗಳ ನಡುವಿನ ಸಂಬಂಧವನ್ನು ಗುರುತಿಸದೆ ಕೃಷಿ ಅಭಿವೃದ್ಧಿಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಹಿಡಿದಿರುವುದು ಸಾಧ್ಯವಿಲ್ಲ. ದುಡಿಮೆಯ ಅವಕಾಶ ಬಹಳಷ್ಟುಮಟ್ಟಿಗೆ ಭೂಮಾಲೀಕರ ಸಾಮರ್ಥ್ಯವನ್ನು ಅವಲಂಬಿಸಿದೆ. ಶ್ರಮಶಕ್ತಿಯ ಮೇಲಿನ ಭೂಮಾಲೀಕರ ಅಧಿಕಾರವು ಸಮಾಜದಲ್ಲಿನ ಜಾತಿ ಸಂಬಂಧಿ - ಜಾತಿ ತಾರತಮ್ಯಗಳನ್ನು ಅವಲಂಬಿಸಿದೆ. ದುಡಿಮೆಗಾರರ ಕೃಷಿ ಅವಲಂಬನೆಗೂ ಮತ್ತು ಅಸ್ಪೃಶ್ಯತೆಗೂ ಸಂಬಂಧವನ್ನು ಗುರುತಿಸಬಹುದಾಗಿದೆ. ಈ ಸಂಬಂಧದ ಮೂಲಕ ಬಂಡವಾಳ ಸಂಚಯನು ಹೇಗೆ ಶಿಷ್ಟರ - ಭೂಮಾಲೀಕರ ಪರವಾಗಿ ರೂಪುಗೊಳ್ಳುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಕೋಷ್ಟಕ - ೫ರಲ್ಲಿ ದುಡಿಮೆಗಾರರ ಕೃಷಿ ಅವಲಂಬನೆಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಗುರುತಿಸಲಾಗಿದೆ.

**ಅಭಿವೃದ್ಧಿಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳು : ದುಡಿಮೆಗಾರರ ಸ್ವರೂಪ ೧೯೯೧ ಮತ್ತು ೨೦೦೧**

**ಕೋಷ್ಟಕ ೫**

| ವಿವರಗಳು | | ರಾಜ್ಯದ ಒಟ್ಟು ಮೊತ್ತ | | ಪರಿಶಿಷ್ಟ / ದಲಿತರು | | ಶಿಷ್ಯ/ ದಲಿತೇರರು | |
|---|---|---|---|---|---|---|---|
| | | ೧೯೯೧ | ೨೦೦೧ | ೧೯೯೧ | ೨೦೦೧ | ೧೯೯೧ | ೨೦೦೧ |
| ೧. ಒಟ್ಟು ಪ್ರಧಾನ | ಒಟ್ಟು | ೧೭೨.೯೨ | ೧೯೩.೫೭ | ೩೮.೮೩ | ೪೪.೪೧ | ೧೩೪.೦೯ | ೧೪೯.೧೬ |

| | | | | | | | |
|---|---|---|---|---|---|---|---|
| **ದುಡಿಮೆಗಾರರು** | **ಮ** | ೫೦.೦೮ | ೫೪.೧೩ | ೧೩.೯೮ | ೧೫.೨೧ | ೩೭.೧೦ | ೩೯.೯೨ |
| | **ಪು** | ೧೨೨.೬೫ | ೧೩೯.೪೪ | ೨೪.೬೭ | ೨೪೯.೨೦ | ೯೩.೯೯ | ೧೧೦.೨೪ |
| **೨. ಕೃಷಿ ಅವಲಂಬನೆ ಒಟ್ಟು (ಸಾಗುವಳಿದಾರರು + ದಿನಗೂಲಿ ಕೃಷಿ ದುಡಿಮೆಗಾರರು)** | | ೧೦೯.೧೭ | ೯೯.೮೦ | ೨೯.೦೨ | ೨೬.೨೪ | ೬೦.೧೪ | ೮೧.೪೭ |
| | | (೭೩.೧೩) | (೫೧.೫೧) | (೮೪.೮೪) | (೭೩.೫೯) | (೫೫.೮೮) | (೪೮.೯೧) |
| | **ಮ** | ೩೯.೮೭ | ೩೩.೪೧ | ೧೧.೫೫ | ೧೦.೮೧ | ೨೭.೨೧ | ೨೨.೮೦ |
| | | (೮೫.೪೧) | (೭೧.೮೨) | (೬೨.೭೬) | (೮೦.೪೧) | (೮೨.೭೦) | (೫೬.೩೨) |
| | **ಪು** | ೮೧.೪೦ | ೭೭.೨೯ | ೧೮.೪೮ | ೧೮.೫೩ | ೫೩.೯೩ | ೪೬.೮೭ |
| | | (೫೬.೧೨) | (೪೮.೫೪) | (೮೦.೨೮) | (೭೦.೦೩) | (೫೫.೦೪) | (೪೪.೨೩) |

*ಟಿಪ್ಪಣಿ: ಆವರಣದಲ್ಲಿ ಕೊಟ್ಟಿರುವ ಅಂಕಿಗಳು ಸಂಬಂಧಿಸಿದ ಒಟ್ಟು ಮೊತ್ತದ ಶೇಕಡ ಪ್ರಮಾಣವನ್ನು ಸೂಚಿಸುತ್ತವೆ.*

ಈ ಕೋಷ್ಟಕದಲ್ಲಿ ದುಡಿಮೆಗಾರರ ಕೃಷಿ ಅವಲಂಬನೆ ಪ್ರಮಾಣವನ್ನು ತೋರಿಸಿದೆ. ಕೃಷಿ ಅವಲಂಬನೆಯನ್ನು ಕೋಷ್ಟಕದಲ್ಲಿ ಲಿಂಗವಾರು ಹಾಗೂ ಜಾತಿವಾರು ತೋರಿಸಲಾಗಿದೆ. ಈ ವಿವರಗಳನ್ನು ಎರಡು ಕಾಲಘಟ್ಟಗಳಿಗೆ (೧೯೯೧ ಮತ್ತು ೨೦೦೧) ಸಂಬಂಧಿಸಿದಂತೆ ನೀಡಲಾಗಿದೆ. ಈ ಕೋಷ್ಟಕದ ವಿವರಗಳನ್ನು ಹೀಗೆ ಸಂಕ್ಷಿಪ್ತವಾಗಿ ಸಂಗ್ರಹಿಸಬಹುದಾಗಿದೆ.

- ಕರ್ನಾಟಕದ ಒಟ್ಟು ಪ್ರಧಾನ ದುಡಿಮೆಗಾರರಲ್ಲಿ ಕೃಷಿ ಅವಲಂಬನೆಯು ೧೯೯೧ರಲ್ಲಿ ಶೇ. ೭೩.೧೩ ಇದ್ದುದು ೨೦೦೧ರಲ್ಲಿ ಅದು ಶೇ ೫೧.೫೧ ಕ್ಕಿಳಿದಿದೆ. ಮಹಿಳೆಯರು ಮತ್ತು ಪುರುಷರಿಗೆ ಸಂಬಂಧಿಸಿದಂತೆಯೂ ಇದು ಕುಸಿದಿದೆ.
- ಎರಡೂ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಕೃಷಿ ಅವಲಂಬನೆಯ ಪ್ರಮಾಣವು ಸಾಪೇಕ್ಷವಾಗಿ ಅತ್ಯಧಿಕ ಮಟ್ಟದಲ್ಲಿದೆ.
- ಶಿಷ್ಟ ದುಡಿಮೆಗಾರರ ಕೃಷಿ ಅವಲಂಬನೆಯು ಪರಿಶಿಷ್ಟರಿಗಿಂತ ಕಡಿಮೆಯಿದೆ.
- ಶಿಷ್ಟರು ಮತ್ತು ಪರಿಶಿಷ್ಟರು - ಎರಡೂ ಗುಂಪುಗಳನ್ನು ತೆಗೆದುಕೊಂಡರೆ ಕೃಷಿ ಅವಲಂಬನೆಯು ಪುರುಷರಿಗಿಂತ ಮಹಿಳೆಯರಲ್ಲಿ ಅಧಿಕವಾಗಿದೆ. ಇತ್ತೀಚಿಗಿನ ೨೦೦೧ರ ಜನಗಣತಿಯಂತೆ ಕೃಷಿ ಅವಲಂಬನೆ ಅತ್ಯಧಿಕ ಶೇ ೮೦.೪೧ ಪರಿಶಿಷ್ಟ ಮಹಿಳೆಯರಲ್ಲಿದೆ. ಅತ್ಯಂತ ಕನಿಷ್ಟ ಕೃಷಿ ಅವಲಂಬನೆ ೨೦೦೧ರಲ್ಲಿ ಶೇ ೪೪.೨೩ ಶಿಷ್ಟ ಪುರುಷರಲ್ಲಿ ಕಂಡುಬರುತ್ತದೆ.
- ಕೃಷಿ ಅವಲಂಬನೆ ಪ್ರಮಾಣವು ಶಿಷ್ಟ ಹಾಗೂ ಪರಿಶಿಷ್ಟ ಇಬ್ಬರಿಗೂ ಸಂಬಂಧಿಸಿದಂತೆ ೧೯೯೧ರಿಂದ ೨೦೦೧ರ ಕಾಲಾವಧಿಯಲ್ಲಿ ಕಡಿಮೆಯಾಗುತ್ತ ನಡೆದಿದೆ.
- ಈ ಕೋಷ್ಟಕದಲ್ಲಿ (೫) ಕೃಷಿ ಅವಲಂಬನೆಯನ್ನು ಸಾಗುವಳಿದಾರರು ಮತ್ತು ದಿನಗೂಲಿ ಕೃಷಿ ದುಡಿಮೆಗಾರರನ್ನು ಕೂಡಿಸಿ ಲೆಕ್ಕ ಹಾಕಲಾಗಿದೆ.

ಕೋಷ್ಟಕ - ೭ರಲ್ಲಿ ಕೃಷಿ ಅವಲಂಬನೆಯ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಬೇರೊಂದು ರೂಪದಲ್ಲಿ ನೀಡಲಾಗಿದೆ. ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಪರಿಶಿಷ್ಟರ ಹಾಗೂ ಶಿಷ್ಟ ದುಡಿಮೆಗಾರರ ಪ್ರಮಾಣವನ್ನು ಲೆಕ್ಕ ಹಾಕಲಾಗಿದೆ. ಕೃಷಿ ಅವಲಂಬನೆಯು ಶಿಷ್ಟರಿಗಿಂತ ಸಾಪೇಕ್ಷವಾಗಿ ಪರಿಶಿಷ್ಟರಲ್ಲಿ ಅಧಿಕವಾಗಿದೆ ಎಂಬುದನ್ನು ತೋರಿಸಲು ಪ್ರಸ್ತುತ ಕೋಷ್ಟಕವನ್ನು(೫) ರೂಪಿಸಲಾಗಿದೆ. ಎರಡು ಕಾಲಘಟ್ಟಕ್ಕೆ ಸಂಬಂಧಿಸಿದಂತೆ(೧೯೯೧ ಮತ್ತು ೨೦೦೧) ಕೃಷಿಯನ್ನು ಅವಲಂಬಿಸಿರುವ ದುಡಿಮೆಗಾರರ ಸಂಖ್ಯೆ ಕಡಿಮೆ ಯಾಗುತ್ತಿದೆ. ಇದು

ಶಿಷ್ಟರಲ್ಲೂ ಮತ್ತು ಪರಿಶಿಷ್ಟರಲ್ಲೂ ಕಂಡುಬರುತ್ತದೆ. ಕುತೂಹಲದ ಸಂಗತಿಯೆಂದರೆ ರಾಜ್ಯದ ಒಟ್ಟು ಕೃಷಿ ಅವಲಂಬಿತ ದುಡಿಮೆಗಾರರಲ್ಲಿ ಪರಿಶಿಷ್ಟರ ಶೇಕಡಾ ಪ್ರಮಾಣವು ೧೯೯೧ ರಿಂದ ೨೦೦೧ರ ಅವಧಿಯಲ್ಲಿ ಅಧಿಕಗೊಂಡಿದೆ. ಅದು ೧೯೯೧ರಲ್ಲಿ ಶೇ ೨೬.೫೮ರಷ್ಟಿದ್ದುದು ೨೦೦೧ರಲ್ಲಿ ಶೇ ೨೮.೩೨ಕ್ಕೆರಿದೆ. ಕೃಷಿಯನ್ನು ಅವಲಂಬಿಸಿಕೊಂಡಿರುವ ಪರಿಶಿಷ್ಟರ ಸಂಖ್ಯೆ ೧೯೯೧ರಲ್ಲಿ ೨೯.೦೨ ಲಕ್ಷವಿದ್ದುದು ೨೦೦೧ರಲ್ಲಿ ೨೮.೨೪ ಲಕ್ಷಕ್ಕೆ ಇಳಿದಿದೆ. ಆದರೆ ರಾಜ್ಯದ ಒಟ್ಟು ಅವಲಂಬಿತ ದುಡಿಮೆಗಾರರಲ್ಲಿ ಪರಿಶಿಷ್ಟರ ಪ್ರಮಾಣವು ಶೇ ೨೬.೫೮ರಿಂದ ಶೇ ೨೮.೩೨ಕ್ಕೇರಿದೆ. ಕೃಷಿಯನ್ನು ಅವಲಂಬಿಸಿಕೊಂಡಿರುವ ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ೧೯೯೧ ರಿಂದ ೨೦೦೧ರ ಅವಧಿಯಲ್ಲಿ ಕಡಿಮೆಯಾದದ್ದು ೯.೪೬ ಲಕ್ಷ. ಇದರಲ್ಲಿ ಪರಿಶಿಷ್ಟ ಪಾಲು ಕೇವಲ ೦.೭೮ ಲಕ್ಷವಾದರೆ ಶಿಷ್ಟರ ಪಾಲು ೮.೬೮ಲಕ್ಷ. ಶಿಷ್ಟರಿಗೆ ಸಂಬಂಧಿಸಿದಂತೆ ಕೃಷಿ ಅವಲಂಬನೆಯಲ್ಲಿ ಕಡಿಮೆಯಾಗಿರುವ ಪ್ರಮಾಣವು ಪರಿಶಿಷ್ಟರಲ್ಲಿ ಕಡಿಮೆ ಯಾಗಿರುವ ಪ್ರಮಾಣಕ್ಕಿಂತ ತೀವ್ರ ಅಧಿಕವಾಗಿದೆ.

ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಪರಿಶಿಷ್ಟರ ಪ್ರಮಾಣ ಎರಡೂ ಕಾಲಘಟ್ಟಗಳಲ್ಲಿ ಸರಿಸುಮಾರು ಶೇ ೨೩ರಷ್ಟಿದೆ. ಆದರೆ ಕೃಷಿಯನ್ನು ನಂಬಿಕೊಂಡಿರುವ ದುಡಿಮೆಗಾರರಲ್ಲಿ ಪರಿಶಿಷ್ಟರ ಪ್ರಮಾಣ ೧೯೯೧ರಲ್ಲಿ ಶೇ ೨೬.೫೮ರಷ್ಟಿದ್ದುದು ೨೦೦೧ರಲ್ಲಿ ಶೇ ೨೮.೩೨ರಷ್ಟಾಗಿದೆ. ಒಟ್ಟು ದುಡಿಮೆಗಾರರಲ್ಲಿ ಪರಿಶಿಷ್ಟರು ಪಡೆದಿರುವ ಪಾಲಿಗಿಂತ ಹೆಚ್ಚಿನ ಪಾಲನ್ನು ಅವರು ಕೃಷಿ ಅವಲಂಬನೆಗೆ ಸಂಬಂಧಿಸಿದಂತೆ ಪಡೆದಿದ್ದಾರೆ. ಇದು ಏನನ್ನು ಸೂಚಿಸುತ್ತದೆ?

ಕೋಷ್ಟಕ ೫ ಮತ್ತು ೬ ಕೃಷಿಯ ಅವಲಂಬನೆಯ ಒತ್ತಡ ಪರಿಶಿಷ್ಟರ ಮೇಲೆ ಅಧಿಕವಾಗಿರುವುದನ್ನು ತೋರಿಸಿವೆ. ಕೃಷಿ ಅವಲಂಬನೆಯು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿರುವುದರ ಇಂಗಿತಾರ್ಥವೇನು? ಕೃಷಿ ಸಂಬಂಧಿಸಿದ ದುಡಿಮೆಯ ಸಂಕೋಲೆಯಲ್ಲಿ ಪರಿಶಿಷ್ಟರು ಮುಳಿಗಿರುವುದನ್ನು ಇದು ತೋರಿಸುತ್ತಿದೆ.

ಪರಿಶಿಷ್ಟರ ಕೃಷಿ ಅವಲಂಬನೆಯು ಭೂಮಾಲೀಕತ್ವಕ್ಕಿಂತ ಭಿನ್ನವಾಗಿ ಕೂಲಿ, ಜೀತ ಮುಂತಾದ ರೂಪದಲ್ಲಿರಲು ಸಾಧ್ಯ. ಆದರೆ ಶಿಷ್ಟರಿಗೆ ಸಂಬಂಧಿಸಿದಂತೆ ಕೃಷಿ ಅವಲಂಬನೆಯು ಭೂಮಾಲೀಕತ್ವ ಸ್ವರೂಪದಲ್ಲಿರುತ್ತದೆ. ಕೃಷಿ ಕೂಲಿಯ ಅವಲಂಬನೆಯು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿದೆ. ಏಕೆಂದರೆ ಪರಿಶಿಷ್ಟರಲ್ಲಿ ಕೃಷಿ ಅವಲಂಬಿಸಿಕೊಂಡಿರುವ ದುಡಿಮೆಗಾರರಲ್ಲಿ ಸಾಗುವಳಿದಾರರ ಅಥವಾ ಭೂಮಾಲೀಕರ ಪ್ರಮಾಣವು ಶೇ ೪೩.೨೭ರಷ್ಟಾದರೆ ಶಿಷ್ಟರಲ್ಲಿ ಭೂಮಾಲೀಕರ ಪ್ರಮಾಣ ಶೇ ೯೬.೪೮ ಈ ಚರ್ಚೆಯ ತಥ್ಯವೆಂದರೆ ಕೃಷಿಗೆ ಸಂಬಂಧಿಸಿದಂತೆ ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ದುಡಿಯುವ ಮಂದಿ ಪರಿಶಿಷ್ಟರಾದರೆ ಅದರ ಫಲವನ್ನು ಅಧಿಕವಾಗಿ ಶಿಷ್ಟರು ಅನುಭವಿಸುತ್ತಿದ್ದಾರೆ. ಮುಂದಿನ ಭಾಗದಲ್ಲಿ (೩.೩) ಬಡತನದ ತೀವ್ರತೆ ಹಾಗೂ ಒತ್ತಡವು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿರುವುದನ್ನು ಕುರಿತಂತೆ ಚರ್ಚಿಸಲಾಗಿದೆ.

[1] ಅಸ್ಪೃಶ್ಯತೆ, ಅಂಬೇಡ್ಕರ್, ಸಂವಿಧಾನ, ಅಭಿವೃದ್ಧಿ ಮುಂತಾದ ವಿಷಯಗಳನ್ನು ಕುರಿತ ಚರ್ಚೆಗೆ ನೋಡಿ ವಲೇರಿಯನ್ ರೋಡ್ರಿಗಸ್(ಸಂ), ಬಿ.ಆರ್. ಅಂಬೇಡ್ಕರ್ ಅವರ ಸಾತ್ವಿಕ ಬರಹಗಳು ೨೦೦೨. ಇದರಲ್ಲಿನ ಸಂಪಾದಕರ ಪ್ರಸ್ತಾವನೆ ಭಾಗ ನೋಡಿ. ಮನೋಹರ್ ಯಾದವ್ ೨೦೦೩ ಇವರ ಕೃತಿಯಲ್ಲೂ ಇದರ ಬಗ್ಗೆ ಚರ್ಚೆಗಳಿವೆ.

[2] ಪ್ರಸ್ತುತ ಪ್ರಬಂಧದಲ್ಲಿ 'ಪರಿಶಿಷ್ಟ' ಎಂಬುದನ್ನು ಎರಡು ನೆಲೆಗಳಲ್ಲಿ ಪರಿಭಾವಿಸಿ ಕೊಳ್ಳಲಾಗಿದೆ. ಮೊದಲನೆಯದಾಗಿ ಅದು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಮೊತ್ತವಾಗಿ ಇಲ್ಲಿ ಬಳಸಲಾಗಿದೆ. ಎರಡನೆಯದಾಗಿ ಬಹಳ ಮುಖ್ಯವಾಗಿ ಅದನ್ನು ಸಾಮಾಜಿಕ ರಚನೆಯ ಅಡಿಪಾಯ, ತಳಮಟ್ಟ 'ಬುಡ' ಎಂಬ ಅರ್ಥದಲ್ಲಿ ಬಳಸಲಾಗಿದೆ.

[3] ಕೋಷ್ಟಕ ೧ರಲ್ಲಿ ಮೂರು ಗುಂಪುಗಳಿಗೆ ಸಂಬಂಧಿಸಿದಂತೆ ಸಾಕ್ಷರತೆ ಪ್ರಮಾಣವನ್ನು ನೀಡಲಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆ ಎಂಬುದನ್ನು ಪರಿಶಿಷ್ಟ (ಪ.ಜಾ+ಪ.ವ) ಮತ್ತು ಇತರೆ ಜನಸಮೂಹವನ್ನು ಒಳಗೊಂಡಿದೆ. ಅಂದರೆ ಅದು ಕರ್ನಾಟಕದ ಏಳುವರ್ಷಕ್ಕೆ ಮೇಲ್ಪಟ್ಟ ಜನಸಂಖ್ಯೆಯಾದ ೪೫೯.೦೮ಲಕ್ಷ ಹಾಗೂ ಅದರಲ್ಲಿನ ಅಕ್ಷರಸ್ಥರಾದ ೩೦೭೭೫ ಲಕ್ಷ ಜನರನ್ನು ಪ್ರತಿನಿಧಿಸುತ್ತದೆ. ಇದು ಪರಿಶಿಷ್ಟರನ್ನೂ ಒಳಗೊಂಡಿರುವುದರಿಂದ ಒಟ್ಟು ಸಾಕ್ಷರತೆ ಪ್ರಮಾಣ ಕೆಳಮಟ್ಟದಲ್ಲಿರುವುದು ಸಾಧ್ಯ. ಈ ವೈರುಧ್ಯವನ್ನು ನಿವಾರಿಸಲು ಪ್ರಸ್ತುತ ಪ್ರಬಂಧಕ್ಕಾಗಿಯೇ ಪರಿಶಿಷ್ಟರು ಮತ್ತು ಶಿಷ್ಟರರಿಗೆ ಪ್ರತ್ಯೇಕವಾಗಿ ಸಾಕ್ಷರತೆಯನ್ನು ಕಂಡು ಹಿಡಿಯಲಾಗಿದೆ. (ಕೋಷ್ಟಕ ೨) ಇದರ ಪ್ರಕಾರ ಶಿಷ್ಟರ ಒಟ್ಟು ಸಾಕ್ಷರತೆ ಶೇ ೭೧.೪೫ ಪರಿಶಿಷ್ಟರ ಸಾಕ್ಷರತೆ ಶೇ. ೫೧.೫೫.ಇಲ್ಲಿ ಅಂತರ ಶೇ. ೧೯.೯೦. ಅಂಶಗಳಷ್ಟಾಗಿದೆ. ಕೋಷ್ಟಕ ೧ರಲ್ಲಿ ತೋರಿಸಿರುವ ಅಂತರಕ್ಕಿಂತ ಕೋಷ್ಟಕ ೨ರಲ್ಲಿ ತೋರಿಸಿರುವ ಅಂತರವು ಅಧಿಕವಾಗಿದೆ.

[4] ಪರಿಶಿಷ್ಟರ ಅಗತ್ಯಗಳು, ಅಭಿವೃದ್ಧಿ, ಅಕ್ಷರ ಸಂಪಾದನೆ ಮುಂತಾದ ಸಂಗತಿಗಳ ಸ್ವರೂಪವು ಶಿಷ್ಟರ ಅಗತ್ಯಗಳು ಮತ್ತು ಅಭಿವೃದ್ಧಿ ಸ್ವರೂಪಕ್ಕಿಂತ ಭಿನ್ನವಾಗಿರುತ್ತದೆ. ಕರ್ನಾಟಕದ ಇಡೀ ಜನಸಮೂಹವನ್ನು ಒಂದು ಅಖಂಡ ವರ್ಗವಾಗಿ ಪರಿಭಾವಿಸಿಕೊಳ್ಳುವುದು ಅಭಿವೃದ್ಧಿಯ ದೃಷ್ಟಿಯಿಂದ ತುಂಬಾ ಉಪಯುಕ್ತವಾಗಲಾರದು. ಆದ್ದರಿಂದ ಪರಿಶಿಷ್ಟರ ಶಿಕ್ಷಣ, ಉದ್ಯೋಗ, ಆಹಾರ ಭದ್ರತೆ ಮುಂತಾದವುಗಳನ್ನು ವಿಶೇಷವಾಗಿ ಸರ್ಕಾರವು ಪರಿಗಣಿಸುವ ಅಗತ್ಯವಿದೆ. ಈ ಜನವರ್ಗಕ್ಕೆ ಸಂಬಂಧಿಸಿದಂತೆ ಇಲ್ಲ. ಈ ಕಾರಣಕ್ಕೆ ಬಾಬಾ ಸಾಹೇಬ ಅಂಬೇಡ್ಕರ್ ಅವರು ಪರಿಶಿಷ್ಟರನ್ನು ಕುರಿತ ತಮ್ಮ ಪ್ರಸಿದ್ಧ ಪ್ರಬಂಧದಲ್ಲಿ ಅವರನ್ನು “Outside the Fold” ಅಂತ ಕರೆಯುತ್ತಾರೆ. ಅಸ್ಪೃಶ್ಯತೆಯ ವಿವಿಧ ಆಯಾಮ ಗಳನ್ನು ಅರ್ಥ ಮಾಡಿಕೊಳ್ಳಲು ಅಂಬೇಡ್ಕರ್ ಅವರ ಔಟ್‌ಸೈಡ್ ದಿ ಫೋಲ್ಡ್ (ಪರಿಧಿಯಿಂದಾಚೆಗಿನ) ಪ್ರಬಂಧವನ್ನು ಕಡ್ಡಾಯವಾಗಿ ಓದಬೇಕು (ನೋಡಿ: ವಲೇರಿಯನ್ ರೋಡ್ರಿಗಸ್(ಸಂ) ೨೦೦೨ : ೩೨೨ - .೩೩೨.)

[5] ಶ್ರಮಶಕ್ತಿಯ ಮತ್ತು ವರಮಾನ ಸಂರಚನೆಗಳಿಗೆ ಸಂಬಂಧಿಸಿದ ರಾಚನಿಕ ಪರಿವರ್ತನೆ ಕುರಿತಂತೆ ಅಭಿವೃದ್ಧಿ ಅಧ್ಯಯನದಲ್ಲಿ ವ್ಯಾಪಕ ಅಧ್ಯಯನಗಳಾಗಿವೆ. ಇದಕ್ಕೆ ಸಂಬಂಧಿಸಿದ ತಾತ್ವಿಕ ಹಾಗೂ ಪ್ರಾಯೋಗಿಕ ವಿವರಗಳಿಗೆ ನೋಡಿ ಶೇಷಾದ್ರಿ ಬಿ., ೧೯೯೧: ೨೫ - ೨೬.

[6] ಅಭಿವೃದ್ಧಿಯ ಮಟ್ಟವು ಉನ್ನತಕ್ಕೇರಿದಂತೆ, ರಾಚನಿಕ ಬದಲಾವಣೆ ತೀವ್ರವಾದಂತೆ ಶ್ರಮಶಕ್ತಿಯು ಪ್ರಾಥಮಿಕ ವಲಯದಿಂದ ಪ್ರಾಥಮಿಕೇತರ ವಲಯಗಳಿಗೆ ವರ್ಗಾವಣೆಯಾಗಬೇಕಾಗುತ್ತದೆ. ಆದರೆ ನಮ್ಮ ಸಮಾಜದ ಸಂದರ್ಭದಲ್ಲಿ ಪ್ರಾಥಮಿಕ ವಲಯವು ಶ್ರಮಶಕ್ತಿಯ ಬಾಹುಳ್ಯದಿಂದ ಕೂಡಿದೆ. ಆದರೆ ಅದರಿಂದ ಹರಿದು ಬರುವ ವರಮಾನದ ಪ್ರಮಾಣ ಕಡಿಮೆಯಾಗುತ್ತಿದೆ. ಈ ಕಾರಣದಿಂದ ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನವು ಕಡಿಮೆಯಿರುತ್ತದೆ.

[7] ಪರಿಶಿಷ್ಟರು, ಕರ್ನಾಟಕದ ಸಂದರ್ಭದಲ್ಲಿ ೧೨೦.೨೮ಲಕ್ಷ ಜನವರ್ಗ ಸಮಾಜದ ಅಂಚಿನಲ್ಲಿ ನೆಲೆಗೊಂಡಿದೆ. ಇದನ್ನೇ ಅಂಬೇಡ್ಕರ್ ‘ಔಟ್‌ಸೈಡ್ ದಿ ಫೋಲ್ಡ್’ ಅಂತಾ ಕರೆದಿದ್ದಾರೆ. ಈ ಜನಸಮೂಹವು ಅಕ್ಷರ ಸಂಸ್ಕೃತಿಯಿಂದ, ಆಹಾರ ಭದ್ರತೆಯಿಂದ, ಆರೋಗ್ಯ ಭಾಗ್ಯದಿಂದ ವಂಚಿತವಾಗಿದೆ. ಇವು ಪ್ರಜಾಪ್ರಭುತ್ವವು ಗಟ್ಟಿಯಾಗಿ ಸಮಾಜದಲ್ಲಿ ಬೇರೂರಲು ಸಾಧ್ಯವಾಗದಿರುವುದಕ್ಕೆ ಕಾರಣವಾಗಿವೆ. ಈ ಕುರಿತ ಚರ್ಚೆ ನೋಡಿ ಜೀನ್‌ಡ್ರೀಜ್ ಮತ್ತು ಅಮರ್ತ್ಯಸೇನ್: ೨೦೦೨:೩೫೬, ಮನೋಹರ್ ಯಾದವ್: ೨೦೦೩:೯೪.

# ೬. ಅಸ್ಪೃಶ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ (೨)

**ದಿನಗೂಲಿ ದುಡಿಮೆಗಾರರು**

ಕರ್ನಾಟಕದಲ್ಲಿ ಇಂದು ಸರಿಸುಮಾರು ೩೮ ಲಕ್ಷ ದುಡಿಮೆಗಾರರ ಬದುಕು ದಿನಗೂಲಿಯ ಮೇಲೆ ನಿಂತಿದೆ. ಕೃಷಿಗೆ ಸಂಬಂಧಿಸಿದಂತೆ ದಿನಗೂಲಿಯ ಸ್ವರೂಪವು ಜೀತವಾಗಿರಲೂಬಹುದು. ಜೀತಪದ್ಧತಿಯನ್ನು ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಅದು ಬೇರೊಂದು ರೂಪದಲ್ಲಿ ದುಡಿಮೆಯಗಾರರನ್ನು ಕಾಡುತ್ತಿರಬಹುದು. ಈಗಾಗಲೇ ತಿಳಿಸಿರುವಂತೆ ಕೃಷಿಯನ್ನು ಅವಲಂಬಿಸಿಕೊಂಡಿರುವವರಲ್ಲಿ ಸಾಗುವಳಿಗಾರರ ಪ್ರಮಾಣವು ದಿನಗೂಲಿಗಳ ಪ್ರಮಾಣಕ್ಕಿಂತ ಶಿಷ್ಟರಲ್ಲಿ ಅಧಿಕವಾಗಿದ್ದರೆ ಪರಿಶಿಷ್ಟರಲ್ಲಿ ದಿನಗೂಲಿಗಳ ಪ್ರಮಾಣವು ಸಾಗುವಳಿದಾರರ ಪ್ರಮಾಣಕ್ಕಿಂತ ಅಧಿಕವಾಗಿದೆ. ಕೃಷಿಯನ್ನು ಅವಲಂಬಿಸಿ ಕೊಂಡಿರುವ ಪರಿಶಿಷ್ಟರಲ್ಲಿ ದಿನಗೂಲಿಗಳ ಪ್ರಮಾಣ ಶೇ. ೫೬.೭೩ರಷ್ಟಿದ್ದರೆ ಸಾಗುವಳಿ ದಾರರ ಪ್ರಮಾಣ ಕೇವಲ ಶೇ. ೪೩.೨೭ ಆದರೆ ಕೃಷಿಯನ್ನು ಅವಲಂಬಿಸಿ ಕೊಂಡಿರುವ ಶಿಷ್ಟರಲ್ಲಿ ಸಾಗುವಳಿದಾರರ ಪ್ರಮಾಣ ಶೇ ೬೯.೪೮ರಷ್ಟಿದ್ದರೆ ದಿನಗೂಲಿಗಳ ಪ್ರಮಾಣ ಕೇವಲ ಶೇ೩೦.೫೨.

**ಕೃಷಿ ಅವಲಂಬನೆ: ಏರಿಕೆಯಾಗುತ್ತಿರುವ ಪರಿಶಿಷ್ಟರ ಪ್ರಮಾಣ ೧೯೯೧ ಮತ್ತು ೨೦೦೧**

**ಕೋಷ್ಟಕ ೬**

| ವಿವರಗಳು | | ರಾಜ್ಯದ ಒಟ್ಟು ಮೊತ್ತ | | ಪರಿಶಿಷ್ಟ/ ದಲಿತರು | | ಶಿಷ್ಟ / ದಲಿತೇರರು | |
|---|---|---|---|---|---|---|---|
| | | ೧೯೯೧ | ೨೦೦೧ | ೧೯೯೧ | ೨೦೦೧ | ೧೯೯೧ | ೨೦೦೧ |
| ೧. ಕೃಷಿ ಅವಲಂಬನೆ (ಸಾಗುವಳಿದಾರರು + ದಿನಗೂಲಿ ಕೃಷಿ ದುಡಿಮೆಗಾರರು) | ಒಟ್ಟು | ೧೦೬.೧೬ | ೯೯.೭೦ | ೨೯.೦೨ (೨೬.೫೮) | ೨೮.೨೪ (೨೮.೩೨) | ೮೦.೧೪ (೭೪.೪೨) | ೭೧.೪೬ (೭೧.೬೮) |
| | ಮ | ೩೭.೭೬ | ೩೩.೪೧ | ೧೧.೭೧ (೩೦.೫೯) | ೧೦.೭೧ (೩೨.೦೬) | ೨೬.೨೧ (೬೯.೪೧) | ೨೨.೭೦ (೬೭.೯೪) |
| | ಪು | ೭೧.೪೦ | ೬೬.೨೯ | ೧೭.೫೩ (೨೪.೪೭) | ೧೭.೫೩ (೨೬.೪೪) | ೫೩.೯೩ (೭೫.೫೩) | ೪೮.೭೬ (೭೩.೫೬) |

*ಟಿಪ್ಪಣಿ: ಆವರಣದಲ್ಲಿ ಕೊಟ್ಟಿರುವ ಶೇಕಡ ಪ್ರಮಾಣವು ರಾಜ್ಯದ ಒಟ್ಟು ಮೊತ್ತದಲ್ಲಿನ ಪಾಲನ್ನು ಸೂಚಿಸುತ್ತದೆ.*

ಪರಿಶಿಷ್ಟರಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರಲ್ಲಿ ಸಾಗುವಳಿಗಾರರಿಗಿಂತ ದಿನಗೂಲಿಗಳ ಸಂಖ್ಯೆ ಅಧಿಕವಾಗಿರುವುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಬಾರದು. ದಿನಗೂಲಿಗಳ ಸಂಖ್ಯೆ ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿರುವುದಕ್ಕೂ ಅಸ್ಪೃಶ್ಯತೆಗೂ ಸಂಬಂಧವಿದೆ. ಭೂಮಾಲೀಕತ್ವದಿಂದ ಪರಿಶಿಷ್ಟಜಾತಿಯ ಜನರನ್ನು ಬಹಿಷ್ಕರಿಸಲಾಗಿತ್ತು.

ಗತಕಾಲದ ಆಚರಣೆಯ ಪರಿಣಾಮವನ್ನು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಇಂದಿಗೂ ಕಾಣಬಹುದಾಗಿದೆ. ಒಟ್ಟು ದುಡಿಮೆಗಾರರನ್ನು ತೆಗೆದುಕೊಂಡಾಗ ಮಹಿಳೆಯರ ಪ್ರಮಾಣವು ಕೇವಲ ಶೇ ೨೭.೭೬ ಆದರೆ ದಿನಗೂಲಿಗಳನ್ನು ತೆಗೆದುಕೊಂಡರೆ ಮಹಿಳೆಯರ ಪ್ರಮಾಣ ಶೇ ೪೮.೧೬.

ದಿನಗೂಲಿ ಕೃಷಿ ದುಡಿಮೆಗಾರರ ಶಿಷ್ಟ - ಪರಿಶಿಷ್ಟ ನೆಲೆಗಳನ್ನು ಕೋಷ್ಟಕ - ೭ ರಲ್ಲಿ ನೋಡಬಹುದು.

**ದಿನಗೂಲಿ ದುಡಿಮೆಗಾರರು: ಶಿಷ್ಟ – ಪರಿಶಿಷ್ಟ ನೆಲೆಗಳು – ೧೯೯೧ ಮತ್ತು ೨೦೦೧**

**ಕೋಷ್ಟಕ ೭**

| **ವಿವರಗಳು** | **ಒಟ್ಟು** | | **ಮಹಿಳೆಯರು** | | **ಪುರುಷರು** | |
|---|---|---|---|---|---|---|
| | ೧೯೯೧ | ೨೦೦೧ | ೧೯೯೧ | ೨೦೦೧ | ೧೯೯೧ | ೨೦೦೧ |
| ಒಟ್ಟು ರಾಜ್ಯದ ದಿನಗೂಲಿ ದುಡಿಮೆಗಾರರು | ೫೦.೦೦ | ೩೭.೮೩ | ೨೪.೮೮ | ೧೮.೨೨ | ೨೫.೧೨ | ೧೯.೬೧ |
| ಪರಿಶಿಷ್ಟ ದಿನಗೂಲಿ ದುಡಿಮೆಗಾರರು | ೧೮.೭೯<br>(೩೭.೫೮) | ೧೬.೦೨<br>(೪೨.೩೫) | ೯.೨೫<br>(೩೭.೧೮) | ೭.೬೩<br>(೪೧.೮೮) | ೯.೫೪<br>(೩೭.೯೮) | ೮.೩೯<br>(೪೨.೭೮) |
| ಶಿಷ್ಟ ದಿನಗೂಲಿ ದುಡಿಮೆಗಾರರು | ೩೧.೨೧<br>(೬೨.೪೨) | ೨೧.೮೧<br>(೫೭.೬೫) | ೧೫.೬೩<br>(೬೨.೮೨) | ೧೦.೫೯<br>(೫೮.೧೨) | ೧೫.೫೮<br>(೬೨.೦೨) | ೧೧.೨೨<br>(೫೭.೨೨) |

*ಟಿಪ್ಪಣಿ: ಆವರಣದಲ್ಲಿರುವ ಅಂಕಿಗಳು ಒಟ್ಟು ರಾಜ್ಯ ಮೊತ್ತದ ಶೇಕಡ ಪ್ರಮಾಣವನ್ನು ಸೂಚಿಸುತ್ತವೆ.*

ಪರಿಶಿಷ್ಟರಿಗೆ ಸಂಬಂಧಿಸಿದಂತೆ ದಿನಗೂಲಿಗಳ ಪ್ರಮಾಣವು ಸಾಗುವಳಿದಾರರಿಗಿಂತ ಅಧಿಕವೆಂಬುದು ಸ್ಪಷ್ಟವಾಗಿದೆ. ಶಿಷ್ಟರಿಗೆ ಸಂಬಂಧಿಸಿದಂತೆ ಪ್ರತಿ ಸಾಗುವಳಿದಾರರಿಗೆ ೦.೪೪ರಷ್ಟು ದಿನಗೂಲಿಗಳಿದ್ದರೆ (೨೦೦೧) ಪರಿಶಿಷ್ಟರಲ್ಲಿ ಇದರ ಪ್ರಮಾಣ ೧.೩೨ರಷ್ಟಿದೆ. ಇದು ಪರಿಶಿಷ್ಟರ ಭೂಹೀನತೆಯನ್ನು ತೋರಿಸುತ್ತದೆ.

ಕೋಷ್ಟದ - ೭ ಅನೇಕ ರೀತಿಯಿಂದ ಕುತೂಲಹಕಾರಿಯಾಗಿದೆ. ಕೋಷ್ಟಕದಲ್ಲಿ ಆವರಣದೊಳಗಿನ ಅಂಕಿಗಳು ಒಟ್ಟು ದಿನಗೂಲಿ ದುಡಿಮೆಗಾರರಲ್ಲಿ ಶಿಷ್ಟರ ಮತ್ತು ಪರಿಶಿಷ್ಟರ ಪಾಲನ್ನು ತೋರಿಸುತ್ತವೆ. ರಾಜ್ಯದ ಜನಸಂಖ್ಯೆಯಲ್ಲಿ ಪರಿಶಿಷ್ಟರು ಎಷ್ಟು ಪಾಲು ಪಡೆದಿದ್ದಾರೋ ಅದಕ್ಕಿಂತ ಅಧಿಕವಾದ ಪಾಲನ್ನು ದಿನಗೂಲಿಗಳಿಗೆ ಸಂಬಂಧಿಸಿದಂತೆ ಪಡೆದಿದ್ದಾರೆ. ಆದರೆ ಜನಸಂಖ್ಯೆಯಲ್ಲಿ (೨೦೦೧) ಶೇಕಡ ೭೭.೧೯ರಷ್ಟು ಪಾಲು ಪಡೆದಿರುವ ಶಿಷ್ಟರು ದಿನಗೂಲಿಗಳಲ್ಲಿ ಮಾತ್ರ ಶೇ. ೫೭.೬೫ರಷ್ಟು ಪಾಲು ಪಡೆದಿದ್ದಾರೆ. ದಿನಗೂಲಿ ದುಡಿಮೆ ಮಾಡುವ ಪ್ರಮೇಯ ಶಿಷ್ಟರಿಗೆ ಸಂಬಂಧಿಸಿದಂತೆ ಅಧಿಕವಾಗಿಲ್ಲ. ಆದರೆ ಪರಿಶಿಷ್ಟರಿಗೆ ದಿನಗೂಲಿಯು ಅನಿವಾರ್ಯವಾಗಿದೆ. ಏಕೆಂದರೆ ದುಡಿಮೆಯ ವಿಕಲ್ಪಗಳು ಪರಿಶಿಷ್ಟರಿಗೆ ಕಡಿಮೆ.

ದಿನಗೂಲಿಗಳಾಗಿ ದುಡಿಯುವ ಪರಿಶಿಷ್ಟರು ವರ್ಗ ಸಂಬಂಧದ ನೆಲೆಯಲ್ಲಿ ಸಂಘಟಿತರಾಗುವುದು ಸಾಧ್ಯವಾಗಿಲ್ಲ. ನಮ್ಮ ಸಮಾಜದ ಸಂದರ್ಭದಲ್ಲಿ ಅತ್ಯಂತ ಅಸಂಘಟಿತ ವರ್ಗವೆಂದರೆ ದಿನಗೂಲಿಗಳು. ಏಕೆಂದರೆ ದಿನಗೂಲಿಗಳು ಅನೇಕ ಸಂಗತಿಗಳ ಆಧಾರದ ಮೇಳೆ ವಿಘಟಿತರಾಗಿದ್ದಾರೆ. ಇಲ್ಲಿ ಕಂಡುಬರುತ್ತಿರುವ ಒಂದು ಆಶಾದಾಯಕ ಸಂಗತಿಯೆಂದರೆ ಜಾತಿಯ ಆಧಾರದ ಮೇಲೆ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗಗಳ ಜನರು ಸಂಘಟಿತವಾಗುತ್ತಿದ್ದಾರೆ. ಈಜಾತಿ ಆಧರಿತ ದುಡಿಯುವ ವರ್ಗದ ಸಂಘಟನೆಗಳನ್ನು ವರ್ಗಸಂಘರ್ಷಕ್ಕೆ ಪೂರಕವಲ್ಲವೆಂದು ತಳ್ಳಿ ಹಾಕಲು ಸಾಧ್ಯವಿಲ್ಲ. ಏಕೆಂದರೆ ಜಾತಿ ಪ್ರಜ್ಞೆ ಮತ್ತುವರ್ಗ ಪ್ರಜ್ಞೆಗಳು ನಮ್ಮ ಸಮಾಜದ ಸಂದರ್ಭದಲ್ಲಿ ಪರಸ್ಪರ ಪೂರಕವಾಗಿರುವುದನ್ನು ಗುರುತಿಸಬಹುದಾಗಿದೆ. ಬಂಡವಾಳ ಮತ್ತು ಶ್ರಮ ಮಾರುಕಟ್ಟೆಯು ಜಾತಿ ಸಂಬಂಧದಿಂದ ಕೂಡಿರುವಾಗ ದುಡಿಮೆಗಾರರು ಜಾತಿ ಆಧಾರದ ಮೇಲೆ ಸಂಘಟಿತರಾಗುವುದು ಹೋರಾಟಕ್ಕೆ ಅನಾನುಕೂಲಕರವೆನ್ನಲು ಸಾಧ್ಯವಿಲ್ಲ. ಪರಿಶಿಷ್ಟರಲ್ಲಿ ಕಂಡುಬರುತ್ತಿರುವ ಸಂಘಟನೆ, ರಾಜಕೀಯ ಪಕ್ಷಗಳಲ್ಲಿ ಸಹಭಾಗಿತ್ವ, ಚುನಾವಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಮುಂತಾದ ಸಂಗತಿಗಳಿಂದಾಗಿ ಪರಿಶಿಷ್ಟರಿಗೆ ಅನೇಕ ಹಕ್ಕುಗಳು ದೊರೆಯುವಂತಾಗಿವೆ.

ದಿನಗೂಲಿಗಳು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಯೆಂದರೆ ಅಭದ್ರತೆ, ದಿನ ಗೂಲಿಗಳು ದಿನವೂ ದುಡಿಮೆಯನ್ನು ಎದುರು ನೋಡಬೇಕಾಗಿರುತ್ತದೆ. ದಿನಗೂಲಿಗಳಿಗೆ ಸಂಬಂಧಿಸಿದಂತೆ ತಾತ್ಕಲಿಕ ನಿರುದ್ಯೋಗ ಮತ್ತು ಉದ್ಯೋಗ ಎರಡೂ ಏಕಕಾಲದಲ್ಲಿ ಸಂಭವಿಸುತ್ತಿರುತ್ತವೆ. ಉದ್ಯಮಪತಿಗಳು ದುಡಿಮೆಗಾರರನ್ನು ಅಭದ್ರ ಸ್ಥಿತಿಯಲ್ಲಿಡಲು ಪ್ರಯತ್ನಿಸುತ್ತಾರೆ. ಇದರಿಂದ ಕೂಲಿಯನ್ನು ಅತ್ಯಂತ ಕೆಳಮಟ್ಟದಲ್ಲಿ ಕಾಯ್ದುಕೊಳ್ಳಬಹುದು.

[1]ಗ್ರಾಮೀಣ ಕೃಷಿ ಕ್ಷೇತ್ರದಲ್ಲಿ ದುಡಿಮೆಗೆ ಸಂಬಂಧಿಸಿದ ಎಲ್ಲ ವ್ಯವಹಾರಗಳೂ ಮೌಖಿಕವಾಗಿರುತ್ತವೆ. ಈ ಮೌಖಿಕ ಒಪ್ಪಂಧಗಳು ಭೂಮಾಲೀಕರಿಗೆ ಅನುಕೂಲಕರವಾಗಿರುತ್ತವೆ ವಿನಾ ದಿನಗೂಲಿಗಳಿಗಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೃಷಿಗೆ ಸಂಬಂಧಿಸಿದ ದಿನಗೂಲಿಗಳಿಗೆ ಯಾವುದೇ ಬಗೆಯ ಕಾನೂನುಗಳ ರಕ್ಷಣೆಯಿಲ್ಲ. ಸಾಮಾಜಿಕ ಭದ್ರತೆ ಎಂಬುದಿಲ್ಲ. ದಣಿಗಳ/ಭೂಮಾಲೀಕರ ಕೃಪೆ ದೊರೆಯಬಹುದು. ಆದರೆ ಇಂತಹ ಕೃಪೆಯು ದಿನಗೂಲಿಗಳಿಗೆ ಸಂಕೋಲೆಯಾಗಿರುತ್ತದೆ ವಿನಾ ಅನುಕೂಲಕರವಾಗಿರುವುದಿಲ್ಲ.

**ದುಡಿಮೆಯ ಲಿಂಗ ಸಂಬಂಧಿ ಸ್ವರೂಪ**

ಮಹಿಳೆಯರ ಸಂತಾನೋತ್ಪತ್ತಿ ದುಡಿಮೆಯು ಶ್ರಮಶಕ್ತಿಯ ಪೂರೈಕೆಯ ಮೂಲವಾಗಿದೆ. ಬಡತನದ. ನಿರುದ್ಯೋಗದ, ಅಸ್ವಸ್ಥತೆಯ, ವೃದ್ಧಾಪ್ಯದ ಸಂದರ್ಭದಲ್ಲಿ ಮಹಿಳೆಯರ ಸಂಗೋಪನಾ ದುಡಿಮೆಯು ಪುರುಷ ಶ್ರಮಶಕ್ತಿಯ ಆರೈಕೆಯ ಮೂಲವಾಗಿದೆ. ಸಂತಾನೋತ್ಪತ್ತಿ ದುಡಿಮೆಯು ಪುರುಷ ಶ್ರಮಶಕ್ತಿಯ ಆರೈಕೆಯ ಮೂಲವಾಗಿದೆ. ಸಂತಾನೋತ್ಪತ್ತಿ ದುಡಿಮೆ ಹಾಗೂ ಸಂಗೋಪನೆ ದುಡಿಮೆಗಳನ್ನು ನಿರ್ವಹಿಸುತ್ತಿರುವ ಮಹಿಳೆಯರಿಗೆ ಮನೆಯ ಹೊರಗಿನ ಉತ್ಪಾದನಾ ದುಡಿಮೆಗಳನ್ನು ನಿರ್ವಹಿಸುತ್ತಿರುವ ಮಹಿಳೆಯರಿಗೆ ಮನೆಯ ಒಳಗಿನ ಉತ್ಪಾದನಾ ದುಡಿಮೆಯಿಂದ ವಿನಾಯಿತಿಯೇನೂ ದೊರೆಯುವುದಿಲ್ಲ. ಈ ಮಾತು ಬಡಕುಟುಂಬಗಳು, ಪರಿಶಿಷ್ಟ ಕುಟುಂಬಗಳ ಮಹಿಳೆಯರಿಗೆ ಹೆಚ್ಚಾಗಿ ಅನ್ವಯವಾಗುತ್ತದೆ. ಮಹಿಳೆಯರು ನಿರ್ವಹಿಸುವ ಮೂರು ಬಗೆಯ ದುಡಿಮೆಗಳಲ್ಲಿ ಮೊದಲಿನ ಎರಡೂ ದುಡಿಮೆಗಳಿಗೆ ಯಾವುದೇ ಬಗೆಯ ಸಂಭಾವನೆಯಿರುವುದಿಲ್ಲ. ಸಂತಾನೋತ್ಪತ್ತಿ ದುಡಿಮೆ ಹಾಗೂ ಸಂಗೋಪನಾ ದುಡಿಮೆಗಳನ್ನು ಲಿಂಗ ನಿರ್ದಿಷ್ಟ ದುಡಿಮೆಗಳೆಂದು ವರ್ಗೀಕರಿಸಲಾಗಿದೆ. ಮಹಿಳೆಯರು ನಿರ್ವಹಿಸಬೇಕಾದ ದುಡಿಮೆ ಇವುಗಳಾಗಿವೆ. ಈ ಕಾರಣದಿಂದಾಗಿ ಉತ್ಪಾದನಾ ದುಡಿಮೆಯು ಮಹಿಳೆಯರಿಗೆ ಪೂರಕವಾದುದೆಂದು ಅದು ಬಿಡುವಿನ ವೇಳೆಯಲ್ಲಿ ನಡೆಸುವ ಶ್ರಮವೆಂದು ಪರಿಗಣಿಸಲಾಗಿದೆ. ಮಹಿಳೆಯರ ದುಡಿಮೆ ಮಾರುಕಟ್ಟೆಯು ಸಂಪೂರ್ಣವಾಗಿ ಅನೌಪಚಾರಿಕವಾಗಿದೆ ಮತ್ತು ವಿಘಟಿತವಾಗಿದೆ.

ಮಹಿಳೆಯರ ದುಡಿಮೆಯನ್ನು ಲಿಂಗ ಸಂಬಂಧಿ ಶ್ರಮ ವಿಭಜನೆಯ ನೆಲೆಯಲ್ಲಿ ಪರಿಭಾವಿಸಿಕೊಳ್ಳಬೇಕಾಗುತ್ತಿದೆ. ಆದರೆ ಕುಟುಂಬದ ಚೌಕಟ್ಟಿನಲ್ಲಿ ಮಾತ್ರ ಅದು ಹೆಚ್ಚು ಗಟ್ಟಿಯಾಗೆ ಮುಂದುವರಿದಿದೆ. ಇದರಿಂದಾಗಿ ಮಹಿಳೆಯರ ಮನೆಯ ಹೊರಗಿನ ಉತ್ಪಾದನಾ

ದುಡಿಮೆಯನ್ನು ಪ್ರಾಸಂಗಿಕವೆಂದೂ ತಿಳಿಯಲಾಗಿದೆ. ಮಹಿಳೆಯರು ಉತ್ಪಾದನಾ ದುಡಿಮೆಗೆ ಸಂಬಂಧಿಸಿದಂತೆ ಬೆವರು ಹರಿಸುತ್ತಿದ್ದಾರೆ. ಸಂಗೋಪನಾ ದುಡಿಮೆ ಅಥವಾ ಕೌಟುಂಬಿಕ ದುಡಿಮೆಗೆ ಸಂಬಂಧಿಸಿದಂತೆ ಕಣ್ಣೀರು ಹರಿಸುತ್ತಿದ್ದಾರೆ. ಸಂತಾನೋತ್ಪತ್ತಿ ದುಡಿಮೆಯಲ್ಲಿ ರಕ್ತ ಹರಿಸುತ್ತಿದ್ದಾರೆ.[2] ಆದರೆ ದುಡಿಮಗೆ ತಕ್ಕ ಪ್ರತಿಫಲ ಅವರಿಗೆ ದೊರೆಯುತ್ತಿಲ್ಲ. ಲಿಂಗಶಾಹಿ ವಿಚಾರ ಪ್ರಣಾಳಿಕೆಯಿಂದಾಗಿ ಅವರು ಹೆಚ್ಚಿನ ಶೋಷಣೆಗೆ ಒಳಗಾಗಿದ್ದಾರೆ.

**ಪರಿಶಿಷ್ಟ ಮಹಿಳೆಯರ ದುಡಿಮೆ**

ದುಡಿಮೆಯ ಒತ್ತಡವು ಪರಿಶಿಷ್ಟ ಮಹಿಳೆಯರಿಗೆ ಅಧಿಕವಾಗಿದೆ. ಕರ್ನಾಟಕದ ಒಟ್ಟು ದುಡಿಮೆಗಾರರಲ್ಲಿ ಶಿಷ್ಟರಿಗೆ ಸಂಬಂಧಿಸಿದಂತೆ ಮಹಿಳಾ ದುಡಿಮೆಗಾರರ ಪ್ರಮಾಣ ಕೇವಲ ಶೇ. ೧೯.೦೯. ಆದರೆ ಪರಿಶಿಷ್ಟರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ. ೩೪.೧೫. ಈಗಾಗಲೇ ತಿಳಿಸಿರುವುಂತೆ ಪರಿಶಿಷ್ಟರಿಗೆ ಸಂಬಂಧಿಸಿದಂತೆ ದುಡಿಮೆಯ ವ್ಯಾಪ್ತಿ ಸೀಮಿತವಾದುದು. ಅಲ್ಲಿ ವಿಕಲ್ಪಗಳು ತುಂಬಾ ಕಡಿಮೆ. ಪರಿಶಿಷ್ಟ ಮಹಿಳೆಯರ ದುಡಿಮೆ ಅವಕಾಶಗಳು ತುಂಬಾ ಸೀಮಿತವಾಗಿವೆ. ಲಿಂಗಶಾಹಿ ವಿಚಾರ ಪ್ರಣಾಳಿಕೆಯಿಂದಾಗಿ ಕೌಟುಂಬಿಕ ದುಡಿಮೆಯನ್ನು ಅವರು ನಿರ್ವಹಿಸಬೇಕಾಗಿದೆ. ಅಸ್ಪೃಶ್ಯತೆ ಮತ್ತು ಬಡತನದ ಕಾರಣವಾಗಿ ಅವರು ಮನೆಯ ಹೊರಗೆ ಕೂಲಿಯನ್ನು ಮಾಡಬೇಕಾಗಿದೆ. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪುರುಷ ದುಡಿಮೆಗಾರರು ಇಂದು ದುಡಿಮೆಯನ್ನು ಅರಸಿಕೊಂಡು ನಗರ ಪ್ರದೇಶಕ್ಕೆ ವಲಸೆ ಹೋಗುವುದು ಕಂಡುಬರುತ್ತದೆ. ಸಂಚಾರ - ಸಂಚಲನೆಯೆಂಬುದು ಪುರುಷ ದುಡಿಮೆಗಾರರಿಗೆ ಸಮಸ್ಯೆಯಲ್ಲ. ಆದರೆ ಕೌಟುಂಬಿಕ ದುಡಿಮೆಯ ಜವಾಬ್ದಾರಿ ಹಾಗೂ ಮಕ್ಕಳ ಮತ್ತು ವೃದ್ಧರ ಪಾಲನೆಯ ಜವಾಬ್ದಾರಿಯು ಮಹಿಳೆಯರ ಮೇಲೆರುವುದರಿಂದ ಮಹಿಳಾ ದುಡಿಮೆಗಾರರು ವಲಸೆ ಹೋಗುವುದು ಸಾಧ್ಯವಾಗುವುದಿಲ್ಲ. ಇದಕ್ಕಿಂತ ಮುಖ್ಯವಾಗಿ ಸಂಚಾರ - ಸಂಚಲನೆಯು ಮಹಿಳಾ ದುಡಿಮೆಗಾರರಿಗೆ ಸುಲಭದ ಸಂಗತಿಯಲ್ಲ.

ಅಸ್ಪೃಶ್ಯತೆಯು ಮಹಿಳೆಯರ ಅಭಿವೃದ್ಧಿಗೆ ತುಂಬಾ ಮಾರಕವಾದ ಸಂಗತಿಯಾಗಿಬಿಟ್ಟಿದೆ. ಈ ಸಂಗತಿಯು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಪ್ರಧಾನ ಸ್ಥಾನವನ್ನು ಪಡೆದುಕೊಂಡಿಲ್ಲ. ಪರಿಶಿಷ್ಟ ಮಹಿಳಾ ದುಡಿಮೆಗಾರರ ಅಭಿವೃದ್ಧಿಯನ್ನು ಸರ್ಕಾರವು ಪ್ರತ್ಯೇಕವಾಗಿ ವಿಶೇಷವಾಗಿ ನಿರ್ವಹಿಸುವ ಅಗತ್ಯವಿದೆ.[3] ಪುರುಷಶಾಹಿಯು ಪರಿಶಿಷ್ಟರಿಗೆ ಮತ್ತು ಶಿಷ್ಟರಿಗೆ ಸಮಾನವಾಗಿದೆ. ಆದರೆ ಇದರ ಪರಿಣಾಮಗಳು ಪರಿಶಿಷ್ಟ ಮಹಿಳೆಯರಿಗೆ ಹೆಚ್ಚು ಅಘಾತಕಾರಿಯಾಗಿವೆ. ಕೋಷ್ಟಕ - ೮ರಲ್ಲಿ ಮಹಿಳೆಯರ ದುಡಿಮೆಯ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ತೋರಿಸಲಾಗಿದೆ. ದುಡಿಮೆಯ ಒತ್ತಡವು ಶಿಷ್ಟ ಮಹಿಳೆಯರಿಗಿಂತ ಪರಿಶಿಷ್ಟ ಮಹಿಳೆಯರಿಗೆ ಅಧಿಕವಾಗಿರುವುದನ್ನು ಅಲ್ಲಿ ನೋಡಬಹುದಾಗಿದೆ. ಶಿಷ್ಟ ಮಹಿಳೆಯರಿಗೆ ಅಧಿಕವಾಗಿರುವುದನ್ನು ಅಲ್ಲಿ ನೋಡಬಹುದಾಗಿದೆ. ಶಿಷ್ಟ ಮಹಿಳೆಯರಿಗೆ ಸಂಬಂಧಿಸಿದಂತೆ ಭೂರಹಿತ ಕೃಷಿ ದಿನಗೂಲಿ ಮಹಿಳೆಯರ ಪ್ರಮಾಣವು ಪರಿಶಿಷ್ಟರಲ್ಲಿ ಶೇ. ೫೦.೮೯ರಷ್ಟಿದ್ದರೆ ಶಿಷ್ಟ ಮಹಿಳೆಯರಲ್ಲಿ ಅದರ ಪ್ರಮಾಣ ಕೇವಲ ಶೇ. ೧೭.೧೮. ಕೃಷಿ ಅವಲಂಬನೆಯ ಪ್ರಮಾಣದಲ್ಲೂ ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅದು ಅಧಿಕವಾಗಿದೆ. ಪರಿಶಿಷ್ಟ ಮಹಿಳಾ ದುಡಿಮೆಗಾರರಲ್ಲಿ (೮೫.೧೮ಲಕ್ಷ) ಸರಿಸುಮಾರು ಶೇ. ೭೦.೪೮ರಷ್ಟು ಮಹಿಳಾ ದುಡಿಮೆಗಾರರು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ಕೃಷಿ ಅವಲಂಬನೆ ಶಿಷ್ಟ ಮಹಿಳಾ ದುಡಿಮೆಗಾರರಿಗೆ ಸಂಬಂಧಿಸಿದಂತೆ ಶೇ.೫೬.೩೧ರಷ್ಟಿದೆ.

ಇಲ್ಲಿನ ಚರ್ಚೆಯ ಮೂಲ ತಥ್ಯವೆಂದರೆ ಸಾಮಾಜಿಕ ಏಣಿಶ್ರೇಣಿಗಳಲ್ಲಿ ಅತ್ಯಂತ ಅಂಚೆಗೆ ದೂಡಲ್ಪಟ್ಟವರು ಹಾಗೂ ವಂಚಿತರು ಅಂದರೆ ಪರಿಶಿಷ್ಟ ಮಹಿಳೆಯರು ಎಂಬುದಾಗಿದೆ. ಆದ್ದರಿಂದ ಅಭಿವೃದ್ಧಿಯಲ್ಲಿ ಪರಿಶಿಷ್ಟ ಮಹಿಳೆಯರ ನೆಲೆಯಿಂದ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಮತ್ತು ಅವರ ನೆಲೆಯಿಂದ ಅದನ್ನು ಕಟ್ಟಬೇಕಾಗುತ್ತದೆ. ಅಂತ್ಯೋದಯವೆನ್ನುವುದು ಇದನ್ನೇ ಸೂಚಿಸುತ್ತದೆ.

ಭಾಗ ೪

**ಅಸ್ಪೃಶ್ಯತೆ: ಅಭಿವೃದ್ಧಿಗೆ ತೊಡಿಸಿದ ಸಂಕೋಲೆ**

ಅಸ್ಪೃಶ್ಯತೆ ಕುರಿತಂತೆ ನಾವು ಮೊದಲು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ನಮ್ಮ ಸಮಾಜದ ಸಂದರ್ಭದಲ್ಲಿ ಅದು ಯಾರ ಸಮಸ್ಯೆ ಎಂಬುದಾಗಿದೆ. ಅದು ಎಷ್ಟರಮಟ್ಟಿಗೆ ಪರಿಶಿಷ್ಟರ ಸಮಸ್ಯೆ? ಬಾಬಾಸಾಹೇಬ್ ಅಂಬೇಡ್ಕರ್ ಸರಿಯಾಗಿ ಗುರುತಿಸಿರುವಂತೆ ಶಿಷ್ಟರು ಪರಿಶಿಷ್ಟರನ್ನು ಅಸ್ಪೃಶ್ಯರೆಂದು ಪರಿಭಾವಿಸಿಕೊಂಡಿರುವುದರಿಂದ ಅಂತಹ ಸಮಸ್ಯೆ ನಮ್ಮ ಸಮಾಜದಲ್ಲಿದೆ. ಸಮಾಜ ಹಾಗೂ ಜನರಲ್ಲಿ 'ತಾವು ಶ್ರೇಷ್ಠರು' ಮತ್ತು 'ತಮ್ಮ ಶ್ರೇಷ್ಠತೆ ಹುಟ್ಟಿನಿಂದ ಪ್ರಾಪ್ತವಾದುದು' ಎಂಬ ನಂಬಿಕೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿವರೆಗೆ ಅಸ್ಪೃಶ್ಯತೆ ಇರುತ್ತದೆ. ಅಸ್ಪೃಶ್ಯತೆಯೆಂಬ ಸಂಸ್ಥೆಯು ಅನೇಕ ರೂಪಗಳಲ್ಲಿ ಕಂಡುಬರುತ್ತದೆ. ಅದರ ಆಚರಣೆಯನ್ನು ಶಾಸನಗಳ ಮೂಲಕ ನಿಷೇಧಿಸಲಾಗಿದೆ. [ಅಸ್ಪೃಶ್ಯತಾ (ಅಪರಾಧಗಳು) ಶಾಸನ: ೧೯೫೫, ನಾಗರಿಕ ಹಕ್ಕುಗಳ ರಕ್ಷಣ(ತಿದ್ದುಪಡಿ ಶಾಸನ: ೧೯೭೬,ಪ.ಜಾ/ಪ.ವರ್ಗ ಮೇಲಿನ ದೌರ್ಜನ್ಯ ನಿವಾರಣಾ ಶಾಸನ: ೧೯೮೯ ಮುಂತಾದವು] ಶಾಸನಗಳಿಂದ - ಸಂವಿಧಾನದಿಂದ ಅಸ್ಪೃಶ್ಯತೆಯಂತಹ ಸಂಸ್ಥೆಯನ್ನು ನಾಶಮಾಡುವುದು ಸಾಧ್ಯವಿಲ್ಲ. ಅದನ್ನು ನೇರವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಎದುರಿಸಬೇಕಾಗುತ್ತದೆ.[4]

ಸ್ವಾತಂತ್ರ್ಯಾನಂತರ ಭಾರತದಲ್ಲಿ ಬದಲಾವಣೆಗಳಾಗಿವೆ. ಖ್ಯಾತ ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಅವರು 'ಕ್ರಾಂತಿಯೊಂದರ ಪ್ರಕ್ರಿಯೆಯಲ್ಲಿ ನಾವು ಬದುಕುತ್ತಿದ್ದೇವೆ' ಎಂದು ಉದ್ಗಾರ ತೆಗೆದಿದ್ದಾರೆ(೧೯೯೨).[5] ಅನುಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ - ಆರ್ಥಿಕ ಅಸಮಾನತೆಗಳು ಬದಲಾಗುತ್ತಿಲ್ಲವೆಂದು ಹೇಳುವುದು ಸಾಧ್ಯವಿಲ್ಲವೆಂದು ಅಮರ್ತ್ಯಸೇನ್ ಬರೆಯುತ್ತಾರೆ. (೨೦೦೨:೩೫೮) ಈ ಬದಲಾವಣೆಯು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅರ್ಥಪೂರ್ಣವಾಗಿಲ್ಲವೆಂಬುದನ್ನು ಮನೋಹರ್ ಯಾದವ್ ದಾಖಲಿಸುತ್ತಾರೆ(೨೦೦೩). ಅವರ ಪ್ರಕಾರ ಕ್ರಾಂತಿ ಪ್ರಕ್ರಿಯೆಯ ಫಲಗಳನ್ನು ಅಧಿಕವಾಗಿ ಉನ್ನತ ಜಾತಿಗಳು ಗುತ್ತಿಗೆ ಹಿಡಿದುಕೊಂಡು ಬಿಟ್ಟಿವೆ. ಈ ಬಗ್ಗೆ ಅವರೊಂದು ಪ್ರಶ್ನೆಯನ್ನು ಕೇಳುತ್ತಾರೆ. ರಾಜ್ಯದ ಯಾವುದೇ ವಾಣಿಜ್ಯ, ವ್ಯಾಪಾರ, ಉದ್ದಿಮೆ ವಲಯಗಳಲ್ಲಿ ಯಾಕೆ ಅಸ್ಪೃಶ್ಯರು ಪ್ರವೇಶಿಸಿಲ್ಲ? ಜಾತಿಯ ಕಾರಣವಾಗಿ ಪರಿಶಿಷ್ಟರಿಗೆ ಕೃಷಿಯೇತರ ಕ್ಷೇತ್ರಗಳನ್ನು ಪ್ರವೇಶಿಸುವುದು ಕಷ್ಟವಾಗಿದೆ (ಬಾರ್ಬರಾ ಹ್ಯಾರಿಸ್ ವೈಟ್ (೨೦೦೪:೩೧)) ದುಡಿಮೆಯ ವ್ಯಾಪ್ತಿ ತುಂಬಾ ಸೀಮಿತವಾಗಿರುವುದರಿಂದಾಗಿ, ದುಡಿಮೆಗೆ ಸಂಬಂಧಿಸಿದಂತೆ ವಿಕಲ್ಪಗಳು ಕಡಿಮೆಯಿರುವುದರಿಂದಾಗಿ ಪರಿಶಿಷ್ಟರು ಕೃಷಿಯನ್ನು, ದಿನಗೂಲಿಯನ್ನು ಹೆಚ್ಚಾಗಿ ಅವಲಂಬಿಸಿಕೊಂಡಿದ್ದಾರೆ. ಕಸುಬು ಮತ್ತು ಜಾತಿಗಳ ನಡುವಿನ ಸಂಬಂಧ ಕುಸಿದುಬಿದ್ದಿದೆ ಎಂಬ ವಾದವನ್ನು ಎಂ.ಎನ್. ಶ್ರೀನಿವಾಸ್ ಮಾಡುತ್ತಾರೆ. ಆದರೆ ಇದನ್ನು ಪರಿಶಿಷ್ಟರಿಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಅಸ್ಪೃಶ್ಯರು ಸಮಾಜದಲ್ಲಿ ಶಿಷ್ಟರಿಗಿಂತ ಎರಡುಪಟ್ಟು ಅಧಿಕವಾಗಿ ಕೃಷಿಯನ್ನು, ಕೂಲಿಯನ್ನು ಅವಲಂಬಿಸಿಕೊಳ್ಳಬೇಕಾದ ಮತ್ತು ಬಡತನವನ್ನು ಅನುಭವಿಸಬೇಕಾದ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅತ್ಯಂತ ಕನಿಷ್ಟ ಕೂಲಿಗೆ ಪರಿಶಿಷ್ಟ ಮಹಿಳೆಯರು ದುಡಿಯಬೇಕಾದ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಪರಿಶಿಷ್ಟ ದುಡಿಮೆಗಾರರಲ್ಲಿ ಮೂರು ಮುಕ್ಕಾಲು ವೀಸೆಯಷ್ಟು ಜನರು ಬಡತನದ ರೇಖೆಯ ಕೆಳಗೆ ಜೀವನ ದೂಡುತ್ತಿದ್ದಾರೆ.

**ಮಹಿಳಾ ದುಡಿಮೆಗಾರರ ಶಿಷ್ಟ – ಪರಿಶಿಷ್ಟ ಸ್ವರೂಪ: ೧೯೯೧ ಮತ್ತು ೨೦೦೧**

**ಕೋಷ್ಟಕ ೮**

| **ವಿವರಗಳು** | **ಒಟ್ಟು** | | **ಪರಿಶಿಷ್ಟ / ದಲಿತರು** | | **ಶಿಷ್ಟರು / ದಲಿತೇತರರು** | |
|---|---|---|---|---|---|---|
| | **೧೯೯೧** | **೨೦೦೧** | **೧೯೯೧** | **೨೦೦೧** | **೧೯೯೧** | **೨೦೦೧** |
| ೧. ಒಟ್ಟು ಮಹಿಳಾ ದುಡಿಮೆಗಾರರು | ೫೦.೦೭ | ೫೪.೧೩ | ೧೩.೯೭ | ೧೫.೨೧ | ೩೬.೧೦ | ೩೮.೯೨ |
| ೨. ಒಟ್ಟು ಮಹಿಳಾ ಸಾಗುವಳಿದಾರರು | ೧೨.೮೮<br>(೨೫.೭೨) | ೧೬.೧೯<br>(೨೯.೯೧) | ೨.೩೦<br>(೧೩.೯೭) | ೩.೦೮<br>(೨೦.೨೫) | ೧೦.೫೮<br>(೨೯.೯೨) | ೧೨.೧೧<br>(೩೧.೧೨) |
| ೩. ಒಟ್ಟು ಮಹಿಳಾ ಭೂರಹಿತ ಕೃಷಿ ದಿನಗೂಲಿಗಳು | ೨೪.೮೮<br>(೪೯.೬೯) | ೧೮.೨೨<br>(೩೩.೬೬) | ೯.೨೫<br>(೬೬.೨೧) | ೭.೬೩<br>(೫೦.೧೬) | ೧೫.೬೩<br>(೪೩.೩೦) | ೧೦.೫೯<br>(೨೭.೨೧) |
| ೪. ಒಟ್ಟು ಕೃಷಿ ಅವಲಂಬಿತ ದುಡಿಮೆಗಾರರು | ೩೭.೭೬<br>(೭೫.೦೯) | ೩೩.೪೧<br>(೬೧.೭೨) | ೧೧.೫೫<br>(೮೨.೬೮) | ೧೦.೭೧<br>(೭೦.೪೧) | ೨೬.೨೧<br>(೭೨.೬೦) | ೨೨.೭೦<br>(೫೮.೩೨) |

*ಟಿಪ್ಪಣಿ: ಆವರಣದಲ್ಲಿ ಅಂಕಿಗಳು ಒಟ್ಟು ಮೊತ್ತದ ಶೇಕಡ ಪ್ರಮಾಣವನ್ನು ಸೂಚಿಸುತ್ತವೆ.*

## ಭಾಗ ೫
## ಮರಣ ಪ್ರಮಾಣ:ಶಿಷ್ಟ ಪರಿಶಿಷ್ಟ – ನೆಲೆಗಳು

ಜನಗಣತಿ ವರದಿಗಳಲ್ಲಿ ಮರಣ ಪ್ರಮಾಣಕ್ಕೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ದೊರೆಯುತ್ತದೆ. ಇದನ್ನು ಅಮರ್ತ್ಯಸೆನ್ ಆರೋಗ್ಯ ಸೂಚಿಯನ್ನಾಗಿ ಬಳಸುತ್ತಾರೆ. ಮರಣ ಪ್ರಮಾಣ ಮತ್ತು ಜನರ ಜೀವನ ಮಟ್ಟಗಳ ನಡುವೆ ವಿಲೋಮ ಸಂಬಂಧವಿರುವುದನ್ನು ತಜ್ಞರು ಗುರುತಿಸಿದ್ದಾರೆ. ಆದರೆ ಮರಣ ಪ್ರಮಾಣಕ್ಕೆ ಸಂಬಂಧಿಸಿದ ಸಂಗತಿಗಳು ಜಾತಿ ರಚನೆಗೆ ಅನುಗುಣವಾಗಿ ಪ್ರಯುಕ್ತವಾಗುತ್ತಿರುವುದು ಕುತೂಹಲಕಾರಿ ಸಂಗತಿಯಾಗಿದೆ.

**ಶಿಶು ಮರಣ, ಮಕ್ಕಳ ಮರಣ ಮತ್ತು ಐದುವರ್ಷದ ಮಕ್ಕಳ ಮರಣ ಪ್ರಮಾಣ : ೧೯೯೮ – ೧೯೯೯**

**ಕೋಷ್ಟಕ ೯**

| ಕ್ರ.ಸಂ | ಸಾಮಾಜಿಕ ಗುಂಪುಗಳು | ಶಿಶುಮರಣ ಪ್ರಮಾಣ | ಮಕ್ಕಳ ಮರಣ ಪ್ರಮಾಣ | ಐದು ವರ್ಷದ ಮಕ್ಕಳ ಮರಣ ಪ್ರಮಾಣ |
|---|---|---|---|---|
| ೧ | ಪರಿಶಿಷ್ಟ ಜಾತಿ | ೭೦ | ೩೭ | ೧೦೫ |
| ೨. | ಪರಿಶಿಷ್ಟ ಪಂಗಡ | ೮೫ | ೩೯ | ೧೨೧ |
| ೩. | ಹಿಂದುಳಿದ ವರ್ಗಗಳು (ಒಬಿಸಿ) | ೬೧ | ೧೯ | ೭೮ |
| ೪. | ಇತರೆ | ೫೬ | ೧೪ | ೭೦ |

*ಮೂಲ: ಕರ್ನಾಟಕ ಸರ್ಕಾರ ೨೦೦೪, ಆರ್ಥಿಕ ಸಮೀಕ್ಷೆ : ೨೦೦೩ – ೨೦೦೪ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಪು. ೧೬೨*

ಜನರ ಆರೋಗ್ಯ ಸೂಚಿಯಾದ ಮರಣ ಪ್ರಮಾಣವು ಜಾತಿ - ವರ್ಗಗಳ ನಡುವೆ ಭಿನ್ನವಾಗಿರುವುದನ್ನು ಕೋಷ್ಟಕ ೮ರಲ್ಲಿ ತೋರಿಸಲಾಗಿದೆ. ಪರಿಶಿಷ್ಟ ಜನರ ಬದುಕಿನ ಗುಣಮಟ್ಟವು ಶಿಷ್ಟ ಜನರ ಬದುಕಿನ ಗುಣಮಟ್ಟಕ್ಕಿಂತ ಕೆಳಗಿರುವುದು ಇದರಿಂದ ಸ್ಪಷ್ಟವಾಗಿದೆ. ಮರಣ ಪ್ರಮಾಣಕ್ಕೆ ಸಂಬಂಧಿಸಿದ ಮೂರು ಸೂಚಿಗಳಲ್ಲೂ ಪರಿಶಿಷ್ಟರ ಸ್ಥಿತಿಯು ಉಳಿದೆರಡು ವರ್ಗಗಳಗಿಂತ ಕೆಳಗಿರುವುದು ಆತಂಕಕಾರಿಯಾಗಿದೆ. ಐದು ವರ್ಷದ ಮಕ್ಕಳ ಮರಣ ಪರಮಾಣವು ಪರಿಶಿಷ್ಟರ ಎರಡು ಗುಂಪಿನಲ್ಲೂ ನೂರಕ್ಕಿಂತ ಅಧಿಕವಾಗಿರುವುದು ಆರೋಗ್ಯಕ್ಕೆ ಸಂಬಂಧಿಸಿದ ಜಾತಿ - ವರ್ಗಗಳ ನಡುವಿನ ಅಸಮಾನತೆಯನ್ನು ಸೂಚಿಸುತ್ತದೆ.

ಪರಿಶಿಷ್ಟರು ಆರೋಗ್ಯ ಭಾಗ್ಯದಿಂದ ವಂಚಿತರಾಗಿದ್ದಾರೆ. ಪ್ರತಿಷ್ಠಿತರು ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಸವಲತ್ತು - ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ.

ಅಭಿವೃದ್ಧಿ, ಸಾಕ್ಷರತೆ, ಆರೋಗ್ಯ ಮತ್ತು ದುಡಿಮೆಗೆ ಸಂಬಂಧಿಸಿದ ಸಂಗತಿಗಳು ಜಾತಿ ರಚನೆಗನುಗುಣವಾಗಿ ಸಂಭವಿಸುತ್ತಿರುವುದನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಜಾತಿ ಸಂಬಂಧಿ ಏಣಿಶ್ರೇಣಿಗಳನ್ನು ಅಭಿವೃದ್ಧಿಯು ಗಟ್ಟಿಗೊಳಿಸುತ್ತಿರುವಂತೆ ಕಾಣುತ್ತದೆ. ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳು ಇಂತಹ ಸಾಮಾಜಿಕ ಸಂಗತಿಗಳ ಬಗ್ಗೆ ನಿರ್ಲಿಪ್ತವಾಗಿಬಿಟ್ಟರೆ ಅಸಮಾನತೆಗಳನ್ನು ತೊಡೆದು ಹಾಕುವುದು ಸಾಧ್ಯವಿಲ್ಲ. ಅಭಿವೃದ್ಧಿಯು ಏಣಿಶ್ರೇಣಿಯಲ್ಲಿ ಕೆಳಸ್ತರದಲ್ಲಿರುವ ಪರಿಶಿಷ್ಟರ ಬದುಕಿಗೆ ಅಭಿಮುಖವಾಗಿರಬೇಕಾಗುತ್ತದೆ. ಅಂತಹ ಅಭೀವೃದ್ಧಿ ಪ್ರಣಾಳಿಕೆಯನ್ನು ರೂಪಿಸುವ ಅಗತ್ಯವಿದೆ. ಬಡತನ, ಆಹಾರಭದ್ರತೆ, ಪೌಷ್ಟಿಕತೆ ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆಯೂ ನಮಗೆ ಮೇಳೆನದಕ್ಕಿಂತ ಭಿನ್ನವಾದ ಚಿತ್ರವೇನೂ ಕಂಡುಬರುವುದಿಲ್ಲ. ಇಂತಹ ಸಾಮಾಜಿಕ ಸಂಕೋಲೆಯಿಂದ (ಉದಾಃ ಅಸ್ಪೃಶ್ಯತೆ) ಅಭಿವೃದ್ಧಿಯನ್ನು ಬಿಡುಗಡೆಗೊಳಿಸದಿದ್ದರೆ ಅದು ಅಂಚಿನಲ್ಲಿರುವವರನ್ನು ತಬ್ಬಿಕೊಳ್ಳುವುದು ಸಾಧ್ಯವಿಲ್ಲ.

**ಸಾರಾಂಶ**

ಇಡೀ ಪ್ರಬಂಧದಲ್ಲಿ ಅಭಿವೃದ್ಧಿ - ಬಂಡವಾಳ ಸಂಚಯನಗಳು ನಮ್ಮ ಸಮಾಜದ ಸಂದರ್ಭದಲ್ಲಿ ಪರಿಶಿಷ್ಟರಿಗೆ ವಿಮುಖವಾಗಿದ್ದರೆ ಶಿಷ್ಟರಿಗೆ ಅಭಿಮುಖವಾಗಿವೆ. ಎಂಬುದನ್ನು ಕುರಿತಂತೆ ಚರ್ಚಿಸಲಾಗಿದೆ. ಯಾವುದನ್ನು ವಿದ್ವಾಂಸರು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ - ಆರ್ಥಿಕ ಅಸಮಾನತೆಗಳು ಎಂದು ಕರೆದಿದ್ದಾರೋ ಆ ಅಸ್ಪೃಶ್ಯತೆಯ ಆಚರಣೆಯು ಪರಿಶಿಷ್ಟರ ಅಭಿವೃದ್ಧಿಗೆ ಕಂಟಕ ಪರಿಣಮಿಸಿದೆ. ಈ ಕಂಟಕವನ್ನು ಅಭಿವೃದ್ಧಿಯಿಂದ, ಶಿಕ್ಷಣದಿಂದ, ಶಾಸನಗಳಿಂದ, ಉಪದೇಶದಿಂದ ಪರಿಹರಿಸಬಹುದೆಂದು ನಂಬಿಕೊಂಡು ಬರಲಾಗಿದೆ ಮತ್ತು ಅದೇ ನೆಲೆಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ ಅದು ತನ್ನಷ್ಟಕ್ಕೆ ತಾನೆ ಪರಿಹಾರವಾಗುವ ಸಂಗತಿಯಲ್ಲ. ಅದನ್ನು ನೇರವಾಗಿ ಎದುರಿಸಬೇಕಾಗುತ್ತದೆ. ಚರಿತ್ರೆಯ ಹುಳುಕುಗಳನ್ನು ಮರೆಮಾಡುವುದರಿಂದ ಪ್ರಯೋಜನವಿಲ್ಲ. ಅದರ ಬಗ್ಗೆ ಪ್ರಜ್ಞಾ, ಪೂರ್ವಕವಾಗಿ ಅನುಸಂಧಾನ ನಡೆಸುವುದರ ಮೂಲಕ ಅದನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಅದರಿಂದ ಬಿಡಿಸಿಕೊಳ್ಳಬಹುದು. ಅದಿಲ್ಲವೆಂದುಕೊಂಡು ಬಿಟ್ಟರೆ ಅದು ಇಲ್ಲವಾಗುವುದಿಲ್ಲ. ವಿದ್ವಾಂಸರು ಗುರುತಿಸಿರುವಂತೆ ಅಭಿವೃದ್ಧಿಯೆಂಬುದು, ಅದರ ಸೂಚಿಗಳಾದ ಅಕ್ಷರ, ಆಹಾರ, ಆರೋಗ್ಯ, ಆಶ್ರಯ, ಅಭಯಗಳೆಲ್ಲವೂ ಪರಿಶಿಷ್ಟರಿಗೆ 'ಅಪರೂದ ಸರಕುಗಳಾಗಿ' ಬಿಟ್ಟಿವೆ (ರೇರ್ ಗೂಡ್ಸ್). ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಸಾಕ್ಷರತೆ ಹಾಗೂ ದುಡಿಮೆಗಳ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಇದನ್ನೇ ಬಾಬಾಸಾಹೇಬ್ ಅಂಬೇಡ್ಕರ್ ಅವರು 'ಲೈಫ್ ಆಫ್ ಕಾಂಟ್ರಡಿಕ್ಷನ್ಸ್' ಎಂದು ಕರೆದಿದ್ದಾರೆ. ಅವರು ಜನವರಿ ೨೬, ೧೯೫೦ರಂದು ಸಂವಿಧಾನವನ್ನು ಭಾರತಕ್ಕೆ ಅರ್ಪಿಸುವ ಸಂದರ್ಭದಲ್ಲಿ ಗುರುತಿಸಿದ್ದ ಕಾಂಟ್ರಡಿಕ್ಷನ್ಸ್‌ಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಅನೇಕ ವಿದ್ವಾಂಸರು ತಿಳಿದುಕೊಂಡಿರುವಂತೆ ಅವು ಪೂರ್ಣವಾಗಿ ಮಾಯವಾಗಿಲ್ಲ. ಈ ದಿಶೆಯಲ್ಲಿ ನಾವು ಮತ್ತಷ್ಟು ಚಿಂತಿಸುವ ಅಗತ್ಯವಿದೆ. ಸಮಾಜದ ಅಂಚಿನಲ್ಲಿರುವ ಪರಿಶಿಷ್ಟರ ನೆಲೆಯಿಂದ ಅಭಿವೃದ್ಧಿಯ ಆರಂಭ ನಡೆಯಬೇಕು.

**ಆಕರ ಸೂಚಿ**

೧. ಚಂದ್ರಶೇಖರ ಟ.ಆರ್., ೨೦೦೦, ಬೆವರು, ಕಣ್ಣೀರು, ರಕ್ತ ಮತ್ತು ಮಹಿಳಾ ದುಡಿಮೆ, **ಕನ್ನಡ ಅಧ್ಯಯನ,** ಸಂ.೨, ಸಂ.೧, ಪು. ೧೦೨ - ೧೦೩.

೨. ಜೀನ್‌ಡ್ರೀಜ್, ಅಮರ್ತ್ಯಸೆನ್, ೨೦೦೨, ಇಂಡಿಯಾ: **ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಶನ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು. ೩೪೭ - ೩೮೦.

೩. ಬಾರ್ಬರಾ ಹ್ಯಾರಿಸ್ ವೈಟ್, ೨೦೦೪, **ಇಂಡಿಯಾ ವರ್ಕಿಂಗ್ – ಎಸ್ಸೇಸ್‌ಆನ್ ಸೊಸೈಟಿ ಅಂಡ್ ಎಕನಾಮಿ,** ಕೆಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು.೧೭ - ೪೨(ಎರಡನೇ ಅಧ್ಯಾಯ).

೪. ಮನೋಹರ್ ಯಾದವ್,
೨೦೦೩, **ಸೋಶಿಯೋ ಎಕಾನಾಮಿಕ್ ಸರ್ವೆ ಆಫ್ ಶೆಡ್ಯೂಲ್ಡ್ ಕಾಸ್ಟ್ ಅಂಡ್ ಶೆಡ್ಯೂಲ್ಡ್‌ಟ್ರೈಬ್ ಇನ್ ಕರ್ನಾಟಕ – ಎ ಕ್ರಿಟಿಕಲ್ ಅನಾಲಿಸಸ್,** ಇನ್ಸಿಟ್ಯುಟ್ ಫಾರ್ ಸೋಶಿಯಲ್ ಅಂಡ್ ಎಕನಾಮಿಕ ಚೇಂಜ್, ಬೆಂಗಳೂರು.

೫. ವಲೇರಿಯನ್ ರೊಡ್ರಿಗಸ್(ಸಂ), ೨೦೦೨, **ದಿ ಎಸೆನ್ಸಿಯಲ್ ರೈಟಿಂಗ್ಸ್ ಆಫ್ ಬಿ.ಆರ್. ಅಂಬೇಡ್ಕರ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು.೧ - ೪೩(ಪ್ರಸ್ತಾವನೆ).

೬. ಶ್ರೀನಿವಾಸ್ ಎಂ.ಎನ್., ೧೯೯೨, **ಆನ್ ಲಿವಿಂಗ್ ಇನ್ ಎ ರೆವಲ್ಯೂಷನ್ ಆಂಡ್ ಅದರ್ ಎಸ್ಸೆಸ್,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

೭. ಶೇಷಾದ್ರಿ ಬಿ., ೧೯೯೧, **ಇಂಡಸ್ಟ್ರೀಯಲೈಜೇಶನ್ ಆಂಡ್ ರೀಜಿನಲ್ ಡೆವಲಪ್‌ಮೆಂಟ್,** ಕಾನ್ಸೆಪ್ಟ್ ಪಬ್ಲಿಶಿಂಗ್ ಕಂಪನಿ, ನವದೆಹಲಿ.

೮. ಸೆನ್ಸಸ್ ಆಫ್ ಇಂಡಿಯಾ, ೧೯೯೧, ಸಿರೀಸ್ – ೧೦ ಕರ್ನಾಟಕ – ಪಾರ್ಟ್೧೧ – ಬಿ(ii), **ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್: ಜನರಲ್ ಪಾಪುಲೇಶನ್,** ಡೈರಕ್ಟರ್ ಆಫ್ ಸೆನ್ಸಸ್‌ಆಫರೇಶನ್ಸ್, ಕರ್ನಾಟಕ.

೯. ಸೆನ್ಸಸ್ ಆಫ್ ಇಂಡಿಯಾ ೧೯೯೧, ಸಿರೀಸ್ – ೧೧, ಕರ್ನಾಟಕ – ಪಾರ್ಟ್೧೧ – ಬಿ(ii), **ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್:ಪ.ಜಾತಿ ಮತ್ತು ಪ.ಪಂ.** ಡೈರಕ್ಟರೇಟ್ ಆಫ್ ಸೆನ್ಸಸ್ ಆಫರೇಶನ್ಸ್, ಕರ್ನಾಟಕ.

೧೦. ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿರೀಸ್ – ೩೦, ಕರ್ನಾಟಕ ಪೇಪರ್ ೩, ೨೦೦೧, ಪ್ರಾವಿಶನಲ್ ಪಾಪ್ಯೂಲೇಶನ್ ಟೋಟಲ್ಸ್, ಡಿಸ್ಟ್ರಿಬ್ಯುಶನ್ ಆಫ್ ವರ್ಕಸ್‌ರೆ ಮತ್ತು ನಾಲ್ ವರ್ಕಸ್‌ರೆ, ಡೈರಕ್ಟರೇಟ್ ಆಫ್ ಸೆನ್ಸಸ್ ಆಫರೇಶನ್ಸ್, ಕರ್ನಾಟಕ.

೧೧. ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿರೀಸ್ – ೩೦, ೨೦೦೧, ಡಿಸ್ಟ್ರಿಬ್ಯುಶನ್ ಆಫ್ ವರ್ಕಸ್‌ರೆ ಮತ್ತು ನಾಲ್ ವರ್ಕರ್ಸ್, ಡೈರಕ್ಟರೇಟ್ ಆಫ್ ಸೆನ್ಸಸ್ ಆಫರೇಶನ್ಸ್, ಕರ್ನಾಟಕ.

೧೨. ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿರೀಸ್ – ೩೦, ಕರ್ನಾಟಕ. ಫೈನಲ್ ಪಾಪ್ಯುಲೇಶನ್ ಟೋಟಲ್ಸ್ ಪ.ಜಾತಿ ಮತ್ತು ಪ.ವರ್ಗ ಡೈರಕ್ಟರೇಟ್ ಆಫ್ ಸೆನ್ಸಸ್ ಆಫರೇಶನ್ಸ್, ಕರ್ನಾಟಕ.

[1] ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳಲ್ಲಿ ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯ ಮತ್ತು ಸಾಮರ್ಥ್ಯ ಇಲ್ಲದಿರುವುದನ್ನು ದುಸ್ಥಿತಿ – ಬಡತನವೆಂದು ಕರೆಯಲಾಗಿದೆ. ದುಡಿಮೆ – ದಿನಗೂಲಿಯು ಪರಿಶಿಷ್ಟರಿಗೆ ಆಯ್ಕೆ ಆಗುವುದಕ್ಕೆ ಪ್ರತಿಯಾಗಿ ಅನಿವಾರ್ಯವಾಗಿದೆ. ಈ ಅನಿವಾರ್ಯತೆಯನ್ನು ದುರುಪಯೋಗಪಡಿಸಿಕೊಳ್ಳುವ ಸಮಾಜದ ಶಿಷ್ಟರು – ಪ್ರತಿಷ್ಠಿತರು ಕೂಲಿ ಪ್ರಮಾಣವನ್ನು ಅತ್ಯಂತ ಕೆಳಮಟ್ಟದಲ್ಲಿರುವಂತೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಪರಿಶಿಷ್ಟರು ಅನೇಕ ಬಗೆಯ ಅಭದ್ರತೆಗಳಿಂದ ನರಳುತ್ತಿದ್ದಾರೆ. ಉದಾ. ಆಹಾರ ಅಭದ್ರತೆ, ಆರೋಗ್ಯ ಅಭದ್ರತೆ, ಉದ್ಯೋಗದ ಅಭದ್ರತೆ ಇತ್ಯಾದಿ.

[2] ಇದಕ್ಕೆ ಸಂಬಂಧಿಸಿದ ಚರ್ಚೆಗೆ ನೋಡಿ: ಚಂದ್ರಶೇಖರ ಟಿ.ಆರ್. ೨೦೦೦:೧೦೨ – ೧೦೩.

[3] ನೋಡಿ: ಟಿಪ್ಪಣಿ ೪

[4] ನೋಡಿ: ಮನೋಹರ್ ಯಾದವ್: ೨೦೦೩:೯೮ – ೧೦೦. ಮಲೆಏರಿಯನ್‌ರೊಡ್ರಿಗಸ್ (ಸಂ) : ೨೦೦೨ – ೨೭. ಪರಿಶಿಷ್ಟರ ಸಂಘಟನೆಯ ಅವಶ್ಯಕತೆಯನ್ನು, ಅವರು ಸ್ವಸಾಮರ್ಥ್ಯದಿಂದ ಅಸ್ಪೃಶ್ಯತೆ ವಿರುದ್ಧ ಹೋರಾಡಬೇಕಾದ ಅಗತ್ಯವನ್ನು ಕುರಿತಂತೆ ಅಲ್ಲಿ ಚರ್ಚಿಸಲಾಗಿದೆ.

[5] ಅವರ ಒಂದು ಸಂಕಲನದ ಶೀರ್ಷಿಕೆಯೇ 'ಆನ್ ಲಿವಿಂಗ್ ಇನ್ ಎ ರೆವಲ್ಯೂಷನ್'(೧೯೯೨)

# ೭. ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ - ಸಾಮಾಜಿಕ ನೆಲೆಗಳು

## (೧)


**ಸಾರಲೇಖ**

ಈ ಪ್ರಬಂಧದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸ್ವರೂಪದ ಚಾರಿತ್ರಿಕ ಹಾಗೂ ಸಾಮಾಜಿಕ ನೆಲೆಗಳನ್ನು ಗುರುತಿಸಲು ಹಾಗೂ ಚರ್ಚಿಸಲು ಪ್ರಯತ್ನಿಸಲಾಗಿದೆ. ಈ ಪ್ರಬಂಧದಲ್ಲಿ ಮೂರು ಸಂಗತಿಗಳನ್ನು ಕೇಂದ್ರವಾಗಿಟ್ಟುಕೊಂಡು ಚರ್ಚೆಯನ್ನು ಕಟ್ಟಲಾಗಿದೆ.

೧. ಕರ್ನಾಟಕದಲ್ಲಿ ಯಾವ ಯಾವ ಭಾಗಗಳು ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತು ಶಾಹಿ ಆಡಳಿತದ ಮತ್ತು ಅಭಿವೃದ್ಧಿಯ ಅನುಕೂಲಗಳನ್ನು ಪಡೆದಿದ್ದವೋ ಅವು ಸ್ವಾತಂತ್ರ್ಯಾ ನಂತರ ತೀವ್ರ ಸ್ವರೂಪದ ಆಧುನಿಕತೆಗೆ ಹಾಗೂ ಸಾಮಾಜಿಕ ಪರಿವರ್ತನೆಗೆ ಒಳಗಾದವು. ಈ ಕಾರಣದಿಂದಾಗಿ ಅವುಗಳಿಗೆ ಬಂಡವಾಳಶಾಹಿ ವ್ಯವಸ್ಥೆಯನ್ನು ಕಟ್ಟಿಕೊಳ್ಳುವುದು ಸಾಧ್ಯವಾಯಿತು.

ಆದರೆ ಯಾವ ಯಾವ ಪ್ರದೇಶಗಳು ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತುಶಾಹಿ ಆಡಳಿತದ ಮತ್ತು ಅಭಿವೃದ್ಧಿಯ ಅನುಕೂಲಗಳಿಂದ ವಂಚಿತವಾಗಿದ್ದವೋ ಅವು ಜಮೀನುದಾರಿ ಪಾಳೆಗಾರಿಕೆಯ ದಬ್ಬಾಳಿಕೆಗೆ ಸಿಕ್ಕು ಜರ್ಜರಿತವಾದವು. ಸ್ವಾತಂತ್ರ್ಯಾನಂತರ ಅವುಗಳಿಗೆ ತೀವ್ರ ದುಸ್ಥಿತಿಯ ಬದುಕನ್ನು ಬದುಕುವುದು ಅನಿವಾರ್ಯವಾಗಿ ಬಿಟ್ಟಿತು. ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳನ್ನು ಸದರಿ ಪ್ರದೇಶಗಳಲ್ಲಿ ಇಂದು ಗುರುತಿಸಬಹುದಾಗಿದೆ.

ಬಂಡವಾಳಶಾಹಿಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ (ದ.ಕ.ಪ್ರ.) ಬೇರು ಬಿಡಲು ತೊಡಗಿದ್ದರಿಂದ ಅದು ಉತ್ತರ ಕರ್ನಾಟಕ ಪ್ರದೇಶದಿಂದ (ಉ.ಕ.ಪ್ರ.) ಭೌತಿಕ, ಮಾನವ ಹಾಗೂ ಹಣಕಾಸು ಸಂಪನ್ಮೂಲವನ್ನು ಆಕರ್ಷಿಸತೊಡಗಿತು. ಬಂಡವಾಳಶಾಹಿ ವ್ಯವಸ್ಥೆಗೆ ಸಹಜವಾದ ಕೇಂದ್ರೀಕರಣ ಪ್ರಕ್ರಿಯೆಗೆ ದ.ಕ.ಪ್ರ. ಒಳಗಾದರೆ ಉ.ಕ.ಪ್ರ.ವು ಬರನಾಡಾಗುವ ಪ್ರಕ್ರಿಯೆಗೆ ಒಳಗಾಯಿತು.

ಹೈದರಾಬಾದ್ ನಿಜಾಮ್ ಪ್ರಾಂತದಿಂದ ಬೇರೆ ರಾಜ್ಯಗಳಿಗೆ ವರ್ಗಾಯಿಸಿದ ಪ್ರದೇಶಗಳು ಆಯಾರಾಜ್ಯಗಳಲ್ಲಿ ಅವು ಇಂದಿಗೂ ಹಿಂದುಳಿದ ಸ್ಥಿತಿಯಲ್ಲಿವೆ. ನಿಜಾಮ ಪ್ರಾಂತದಿಂದ ೧೯೫೬ ರಲ್ಲಿ ಮರಾಠಿ ಮಾತನಾಡುವ ಭಾಗವನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಯಿತು. ಕನ್ನಡ ಮಾತನಾಡುವ ಭಾಗವನ್ನು ಕರ್ನಾಟಕಕ್ಕೆ ವರ್ಗಾಯಿಸಲಾಯಿತು. ತೆಲುಗು ಮಾತನಾಡುವ ತೆಲಂಗಾಣ ಪ್ರದೇಶವನ್ನು ಮದರಾಸು ಪ್ರಾಂತದ ಆಡಳಿತ ವ್ಯಾಪ್ತಿಯಲ್ಲಿದ್ದ ಆಂಧ್ರ ಪ್ರದೇಶದ ಜೊತೆ ವಿಲೀನಗೊಳಿಸಿ ವಿಶಾಲಾಂಧ್ರವನ್ನು ರೂಪಿಸಲಾಯಿತು. ಹೀಗೆ ನಿಜಾಮ ಪ್ರಾಂತದಿಂದ ಬಂದ ಮರಾಠವಾಡ ಪ್ರದೇಶ ಮಹಾರಾಷ್ಟ್ರದಲ್ಲಿ, ಹೈದರಾಬಾದ್ - ಕರ್ನಾಟಕ ಪ್ರದೇಶ ಕರ್ನಾಟಕದಲ್ಲಿ ಹಾಗೂ ತೆಲಂಗಾಣ ಪ್ರದೇಶ ಆಂಧ್ರದಲ್ಲಿ ಹಿಂದುಳಿದಿರುವ ಸ್ಥಿತಿಯಲ್ಲಿವೆ. ಅವು ೧೯೫೦ ಕ್ಕೆ ಪೂರ್ವದಲ್ಲಿ ಅವುಗಳಿಗೆ ವಸಾಹತುಶಾಹಿ ಆಡಳಿತದ ಅನುಕೂಲ ದೊರೆಯಲಿಲ್ಲ.

ದ.ಕ.ಪ್ರ.ದಲ್ಲಿ ಬಂಡವಾಳಶಾಹಿ ಬೆಳೆದಿರುವುದನ್ನು ಮತ್ತು ಉ.ಕ.ಪ್ರ.ದಲ್ಲಿ ಅದರಲ್ಲೂ ಮುಖ್ಯವಾಗಿ ಗುಲಬರ್ಗಾ ವಿಭಾಗದಲ್ಲಿ ಊಳಿಗಮಾನ್ಯ ವ್ಯವಸ್ಥೆ ಗಟ್ಟಿಯಾಗುಳಿದಿರುವು ದನ್ನು ಭೂ - ಸಂಬಂಧಗಳ ಹಾಗೂ ದುಡಿಮೆಗಾರರ ಸ್ವರೂಪವನ್ನು ಆಧರಿಸಿ ಇಲ್ಲಿ ಚರ್ಚಿಸಲಾಗಿದೆ.

೨. ಹಿಂದುಳಿದಿರುವಿಕೆ ಅಥವಾ ಮುಂದುವರಿದಿರುವಿಕೆಗಳು ಯಾವುದೇ ಪ್ರದೇಶದ ವಿಶಿಷ್ಟತೆಯೇನಲ್ಲವೆಂಬ ಪ್ರಮೇಯವೊಂದು ಇಂದು ಪ್ರಚಲಿತದಲ್ಲಿದೆ, ದ.ಕ.ಪ್ರ.ದಲ್ಲಿ ಹಿಂದುಳಿದ ತಾಲ್ಲೂಕುಗಳಿವೆಯೆಂದೂ ಉ.ಕ.ಪ್ರ.ದಲ್ಲಿ ಮುಂದುವರಿದ ತಾಲ್ಲೂಕುಗಳಿವೆ ಯೆಂದೂ ವಾದ ಮಾಡಲಾಗುತ್ತಿದೆ. ಅದು ಸರಿಯಲ್ಲವೆಂಬುದನ್ನು ಸಾಧಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ರಾಜ್ಯದಲ್ಲಿ ದ.ಕ.ಪ್ರ. ಮತ್ತು ಉ.ಕ.ಪ್ರ.ಗಳ ನಡುವೆ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯು ತೀವ್ರವಾಗುತ್ತಾ ನಡೆದಿರುವುದನ್ನು ಇಲ್ಲಿ ತೋರಿಸಲಾಗಿದೆ.

೩. ಪ್ರಾದೇಶಿಕ ಅಸಮಾನತೆಯೆಂಬುದು ಕೇವಲ ಭೌತಿಕವಾದ, ಭೂಗೋಳಿಕವಾದ, ಬಂಡವಾಳಕ್ಕೆ ಸಂಬಂಧಿಸಿದ ಸಂಗತಿಯಲ್ಲ. ಅದಕ್ಕೆ ಪರಿಶಿಷ್ಟವಾದಿ ಹಾಗೂ ಲಿಂಗ ಸಂಬಂಧಿ ಮುಖಗಳಿವೆ. ಆದ್ದರಿಂದ ಮೇಲ್ವರ್ಗವಾದಿ ನೆಲೆಯಿಂದ ಇದನ್ನು ಪರಿಭಾವಿಸಿ ಕೊಳ್ಳುವುದಕ್ಕೆ ಪ್ರತಿಯಾಗಿ ಜನಸಮೂಹದ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡುವುದರಿಂದ ಹಿಂದುಳಿದ ಜಿಲ್ಲೆ ಹಾಗೂ ತಾಲ್ಲೂಕುಗಳು ತೀವ್ರ ಅಭಿವೃದ್ಧಿ ಸಾಧಿಸಿಕೊಂಡು ಬಿಡುತ್ತವೆಯೆಂದು ಹೇಳಲಾಗಿದೆ. ಆದರೆಇಡೀ ರಾಜ್ಯದಲ್ಲಿನ ಬಡತನ, ಹಸಿವು, ಅಸಮಾನತೆಗಳ ನಿವಾರಣೆಯ ದೃಷ್ಟಿಯಿಂದ, ಇಡೀ ಜನಸಮೂಹದ ಬದುಕು ಉತ್ತಮಗೊಳ್ಳುವ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ಅಗತ್ಯವಿದೆ.

ಪ್ರಸ್ತುತ ಪ್ರಬಂಧದಲ್ಲಿ ಜನಸಮೂಹವನ್ನು ಕೇಂದ್ರವಾಗಿಟ್ಟುಕೊಂಡ ಅಭಿವೃದ್ಧಿ ರಾಜಕಾರಣದ ಪ್ರಸ್ತುತತೆಯನ್ನು ಪ್ರತಿಪಾದಿಸಲಾಗಿದೆ.

## <u>ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸಾಮಾಜಿಕ ನೆಲೆಗಳು</u>

### ಪ್ರಸ್ತಾವನೆ

ಈ ಪ್ರಬಂಧದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯನ್ನು ವರಮಾನ/ಬಂಡವಾಳ - ಆರ್ಥಿಕ ಸಂಗತಿಗಳ ನೆಲೆಯಿಂದ ಪರಿಭಾವಿಸಿ ಕೊಳ್ಳುವುದಕ್ಕೆ ಪ್ರತಿಯಾಗಿ ಇಲ್ಲಿ ಅದನ್ನು ಕುರಿತಂತೆ ಚಾರಿತ್ರಿಕ - ಸಾಮಾಜಿಕ - ರಾಜಕೀಯ ನೆಲೆಯಲ್ಲಿ ಅನುಸಂಧಾನ ಮಾಡಲು ಪ್ರಯತ್ನಿಸಲಾಗಿದೆ. ಪ್ರಾದೇಶಿಕ ಅಸಮಾನತೆಯ ಸೂಚಿಗಳ ಬೆನ್ನು ಹತ್ತುವುದಕ್ಕೆ ಪ್ರತಿಯಾಗಿ ಇಲ್ಲಿ ಅದರ ಮೂಲದಲ್ಲಿನ ಸೈದ್ಧಾಂತಿಕ ಸ್ವರೂಪವನ್ನು ಹಿಡಿದಿಡಲಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮತೋಲನವನ್ನು ಉಂಟು ಮಾಡುತ್ತಿರುವ ಸಾಮಾಜಿಕ ಪ್ರಕ್ರಿಯೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಒಟ್ಟಾರೆ ಪ್ರಸ್ತುತ ಪ್ರಬಂಧದ ಉದ್ದೇಶವೇನೆಂದರೆ ಪ್ರಾದೇಶಿಕ ಅಸಮಾನತೆಯನ್ನು ಹುಟ್ಟು ಹಾಕುತ್ತಿರುವ ಚಾರಿತ್ರಿಕ - ಸಾಮಾಜಿಕ - ರಾಜಕೀಯ ಸಂಗತಿಗಳನ್ನು ಅರ್ಥ ಮಾಡಿಕೊಳ್ಳುವುದಾಗಿದೆ. ಈ ಬಗೆಯ ಅನುಸಂಧಾನದ ಮೂಲಕವೇ ಅದರ ಪರಿಹಾರದ ನೆಲೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ.

ಇಲ್ಲಿ ಚರ್ಚಿಸಲಾಗಿರುವ ಸಂಗತಿಗಳು ಹೀಗಿವೆ :

೧. ಪ್ರಾದೇಶಿಕ ಅಸಮಾನತೆಯ ದಕ್ಷಿಣ - ಉತ್ತರ ವರ್ಗೀಕರಣವನ್ನು ಇಲ್ಲಿ ಪ್ರಶ್ನಿಸಲಾಗಿದೆ. ಈ ಬಗೆಯ ಅಸಮಾನತೆಯ ಪ್ರಾದೇಶಿಕ ಸ್ವರೂಪವನ್ನು ಇಲ್ಲಿ ಭಿನ್ನ ನೆಲೆಯಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ. ಪ್ರಾದೇಶಿಕ ಅಸಮಾನತೆಯ ಅಧ್ಯಯನದ ಉನ್ನತಾಧಿಕಾರ ಸಮಿತಿಯ ಅಂತಿಮ ವರದಿ ಹಾಗೂ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ಸಿದ್ಧಪಡಿಸಿರುವ 'ಮಾನವ ಅಭಿವೃದ್ಧಿ ವರದಿ'ಗಳನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ಸಮಸ್ಯೆಯನ್ನು ನಾಲ್ಕು ವಿಭಾಗಗಳ ನೆಲೆಯಲ್ಲಿ ಚರ್ಚಿಸಲಾಗಿದೆ.

ಈ ವರದಿಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ 'ಮುಂದುವರಿದಿರುವಿಕೆ' ಹಾಗೂ 'ಹಿಂದುಳಿದಿರುವಿಕೆ'ಗಳು ಎಲ್ಲ ಪ್ರದೇಶಗಳಿಗೂ ಸಮಾನ - ಸಾಮಾನ್ಯವೆಂಬ ಪ್ರಮೇಯವನ್ನು ಇಲ್ಲಿ ತಿರಸ್ಕರಿಸಿ ಕರ್ನಾಟಕದ ಸಂದರ್ಭದಲ್ಲಿ ಅಭಿವೃದ್ಧಿಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಮಡುಗಟ್ಟಿಕೊಂಡಿದ್ದರೆ ದುಸ್ಥಿತಿಯು ರಾಜ್ಯದ ಏಳು ಜಿಲ್ಲೆಗಳಲ್ಲಿ (ಬಾಂಬೆ ಕರ್ನಾಟಕ - ೨ ಮತ್ತು ಗುಲಬರ್ಗಾ ವಿಭಾಗ - ೫) ದಟ್ಟೈಸಿರುವುದನ್ನು ತೋರಿಸಲು ಪ್ರಯತ್ನಿಸಲಾಗಿದೆ.

[1]

೧. ಈ ಸಮಸ್ಯೆಯ ಮೂಲವನ್ನು ಚರಿತ್ರೆಯಲ್ಲಿ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಚರಿತ್ರೆಯ ಒಂದು ಪರಿಣಾಮವಾಗಿ ಹುಟ್ಟಿಕೊಂಡ ಸಮಸ್ಯೆ ಇದು. ಸ್ವಾತಂತ್ರ್ಯಾ ನಂತರ - ಏಕೀಕರಣದ ನಂತರ ರಾಜ್ಯದ ಉ.ಕ.ಪ್ರದೇಶದಲ್ಲಿ ಚರಿತ್ರೆಯ ವಿಕಲತೆಯು ಹೇಗೆ ಮುಂದುವರಿದುಕೊಂಡು ಹೋಗುತ್ತಿದೆ ಎಂಬುದನ್ನು ತೋರಿಸಲಾಗಿದೆ.[2] ಅಭಿವೃದ್ಧಿಯ - ಅದರಲ್ಲೂ ಬಂಡವಾಳಶಾಹಿ - ಜಾಗತೀಕರಣವಾದಿ - ಉದಾರವಾದಿ ಸ್ವರೂಪದ ಮೂಲ ಗುಣವೆಂದರೆ ಒಂದು ಪ್ರಶಸ್ತ ಪ್ರದೇಶದಲ್ಲಿ ಮಡುಗಟ್ಟಿಕೊಳ್ಳುವುದಾಗಿದೆ. ಬಂಡವಾಳಶಾಹಿ ವಿಚಾರ ಪ್ರಣಾಳಿಕೆಯು ಕೇಂದ್ರೀಕರಣವನ್ನು - 'ಕೇಂದ್ರಾಭಿಮುಖಿ' ಸಂಚಲನೆಯನ್ನು ಪೋಷಿಸುತ್ತದೆ. ಹಿಂದುಳಿದ ಪ್ರದೇಶಗಳಿಂದ ಸಂಪನ್ಮೂಲಗಳನ್ನು - ಭೌತಕ - ಮಾನವ, ಹಣಕಾಸು - ಸಂಪನ್ಮೂಲಗಳನ್ನು ತನ್ನತ್ತ ಆಕರ್ಷಿಸುವುದರ ಮೂಲಕ ಅದನ್ನು ಬರನಾಡನ್ನಾಗಿ ಮಾಡಿಬಿಡುತ್ತದೆ. ಹಿಂದುಳಿದ ಪ್ರದೇಶವು ಬರನಾಡಾಗಿ ಪರಿವರ್ತಿತವಾಗುತ್ತಿದ್ದರೆ ಮುಂದುವರಿದ ಪ್ರದೇಶವು ಸಮೃದ್ಧಿಯ ಬೀಡಾಗಿ ಬಿಡುತ್ತದೆ. (ವಿವರಗಳಿಗೆ ನೋಡಿ: ಗುನ್ನಾರ್ ಮಿರ್ಡಾಲ್, ೧೯೫೭) ಈ ಪ್ರಕ್ರಿಯೆಯ ಸ್ವರೂಪವನ್ನು ಪ್ರಸ್ತುತ ಪ್ರಬಂಧದಲ್ಲಿ ಹಿಡಿದಿಡಲಾಗಿದೆ.

ಕಳೆದ ೫೦ ವರ್ಷಗಳ ಅವಧಿಯಲ್ಲಿ (೧೯೫೬ - ೨೦೦೬) ದ.ಕ.ಪ್ರ. ಮತ್ತು ಉ.ಕ. ಪ್ರ.ಗಳು ನಡುವೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯು ಹೇಗೆ ಉಲ್ಬಣಗೊಳ್ಳುತ್ತಾ ನಡೆದಿದೆ ಎಂಬುದನ್ನು ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೩. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಗೆ ಪರಿಶಿಷ್ಟವಾದಿ ಹಾಗೂ ಲಿಂಗ ಸಂಬಂಧಿ ಮುಖವಿರುವುದನ್ನು ಇಲ್ಲಿ ಚರ್ಚಿಸಲಾಗಿದೆ. ಪ್ರಾದೇಶಿಕ ಅಸಮಾನತೆ ಯನ್ನು ಜನಸಮೂಹದ ನೆಲೆಯಿಂದ ಗ್ರಹಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಪ್ರಾದೇಶಿಕ ಅಸಮಾನತೆಯು ಪರಿಶಿಷ್ಟ ಜನಸಮೂಹದ ಮೇಲೆ ಹಾಗೂ ದುಡಿಯುವ ಮಹಿಳೆಯರ ಮೇಲೆ ಉಂಟು ಮಾಡುತ್ತಿರುವ ಪರಿಣಾಮಗಳನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಯಾಕೆ ಇದರ ಪರಿಣಾಮವು ಪರಿಶಿಷ್ಟರ ಮೇಲೆ ಪ್ರಧಾನವಾಗಿರುತ್ತದೆ? ಯಾಕೆ ಬಡತನದ ತೀವ್ರತೆಯನ್ನು ಎದುರಿಸುವ ಜವಾಬುದಾರಿ ಮಹಿಳೆಯರ ಮೇಲೆ ಬೀಳುತ್ತದೆ? ಈ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಉತ್ತರ – ದಕ್ಷಿಣ ಕಂದರ**

ಜಾಗತಿಕ ಮಟ್ಟದಲ್ಲಿ ಪ್ರಾದೇಶಿಕ ಅಸಮಾನತೆಯನ್ನು 'ಉತ್ತರ - ದಕ್ಷಿಣ' ಎಂಬ ವರ್ಗೀಕರಣದಲ್ಲಿ ಹಿಡಿದಿಡುವುದು ವಾಡಿಕೆಯಲ್ಲಿದೆ. ಈ ಬಗೆಯ ಪ್ರಾದೇಶಿಕ ಅಸಮಾನತೆಯೆಂಬುದು ಭಾರತಕ್ಕೆ ಅಥವಾ ಕರ್ನಾಟಕಕ್ಕೆ ಮಾತ್ರವೇ ವಿಶಿಷ್ಟವಾದ ಸಂಗತಿಯೇನಲ್ಲ. ಇದೊಂದು ಜಾಗತಿಕವಾದ ಸಂಗತಿಯಾಗಿದೆ. ಪ್ರಾದೇಶಿಕ ಅಸಮಾನತೆ ಕುರಿತ ಚರ್ಚೆಗಳಲ್ಲಿ 'ದಕ್ಷಿಣ'ವು ಹಿಂದುಳಿದಿರುವಿಕೆಯನ್ನು ಪ್ರತಿನಿಧಿಸಿದರೆ 'ಉತ್ತರ'ವು ಮುಂದುವರಿದಿರುವಿಕೆಯನ್ನು ಪ್ರತಿನಿಧಿಸುತ್ತದೆ. ಅಮೆರಿಕೆಯಲ್ಲಿ ೧೮೬೦ ರಲ್ಲಿ ಭುಗಿಲೆದ್ದಿದ್ದ ಅಂತರ್ಕಲಹ - ಸಿವಿಲ್ ವಾರ್‌ನ ಮೂಲದಲ್ಲಿದ್ದುದು ಕೈಗಾರಿಕೀಕರಣದ ಮೂಲಕ ಮುಂದುವರಿದಿದ್ದ ಉತ್ತರ ಹಾಗೂ ಕೃಷಿ ಪ್ರಧಾನ ಆರ್ಥಿಕತೆ ಹೊಂದಿದ್ದ ದಕ್ಷಿಣಗಳ ನಡುವಣ ಘರ್ಷಣೆಯಾಗಿತ್ತು. ಇಡೀ ಜಗತ್ತನ್ನೇ ತೆಗೆದುಕೊಂಡರೂ ನಮಗೆ ಇದೇ ಬಗೆಯ ಉತ್ತರ - ದಕ್ಷಿಣ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಮಾತ್ರ ಇದು ತಲೆಕೆಳಗಾಗಿದೆ. ಇಲ್ಲಿ ದಕ್ಷಿಣವು ಮುಂದುವರಿದ ಪ್ರದೇಶವಾಗಿದ್ದರೆ ಉತ್ತರವು ಹಿಂದುಳಿದ ಪ್ರದೇಶವಾಗಿದೆ. ಚರಿತ್ರೆಯ ಅಣಕ ವ್ಯಂಗ್ಯವೆಂದರೆ ಒಂದು ಕಾಲಕ್ಕೆ ಕರ್ನಾಟಕದಲ್ಲಿ ಇಂದು ಯಾವ ಭಾಗವನ್ನು 'ದುಸ್ಥಿತಿಯ ಕೂಪ'ವೆಂದು ಕರೆಯಲಾಗುತ್ತಿದೆಯೋ ಆ ಪ್ರದೇಶದಲ್ಲಿ ಅಂದರೆ ಚಾಲುಕ್ಯರ ಬಾದಾಮಿ - ಕಲ್ಯಾಣ, ರಾಷ್ಟ್ರಕೂಟರ ಮಾನ್ಯಕೇಟ, ಬಹುಮನಿ ಸುಲ್ತಾನರ ಬಿಜಾಪುರ ಮುಂತಾದವು ವಿಶ್ವದಲ್ಲೇ ಅದ್ಭುತವಾದ ಅಭಿವೃದ್ಧಿಯನ್ನು ಮೆರೆದಿದ್ದವು. ಇಂದು ಆ ಪ್ರದೇಶಗಳು ಬರಗಾಲದಿಂದ, ಹಸಿವಿನಿಂದ, ವಲಸೆಯಿಂದ, ಅನಕ್ಷರತೆ, ಅನಾರೋಗ್ಯ ಗಳಿಂದ ನರಳುತ್ತಿವೆ. ಅವು ಜರ್ಜರಿತವಾಗಿವೆ. ಇದು ಚರಿತ್ರೆಯ ಅಣಕ. ಅಂದು ದಕ್ಷಿಣವು ಹಿಂದುಳಿದಿದ್ದ ಸ್ಥಿತಿಯಲ್ಲಿತ್ತು.

ಪ್ರಸ್ತುತ ಪ್ರಬಂಧದಲ್ಲಿ ಚರ್ಚೆಯನ್ನು ಕೇವಲ ಉತ್ತರ - ದಕ್ಷಿಣವೆಂಬ ಅಖಂಡವಾದಿ ವರ್ಗೀಕರಣಕ್ಕೆ ಪ್ರತಿಯಾಗಿ ರಾಜ್ಯದ ನಾಲ್ಕು ವಿಭಾಗಗಳಾದ ಬೆಂಗಳೂರು ಮತ್ತು ಮೈಸೂರು (ದ.ಕ.ಪ್ರ.) ಹಾಗೂ ಬೆಳಗಾವಿ ಮತ್ತು ಗುಲಬರ್ಗಾ ವಿಭಾಗಗಳ (ಉ.ಕ.ಪ್ರ.) ನೆಲೆಯಲ್ಲಿ ಸಮಸ್ಯೆಯನ್ನು ಹಿಡಿದಿಡಲಾಗಿದೆ.

ಉ.ಕ.ಪ್ರ.ವನ್ನು ಇಡಿಯಾಗಿ ಪರಿಭಾವಿಸಿಕೊಳ್ಳುವುದರಿಂದ ಅತ್ಯಂತ ಹಿಂದುಳಿದ ಜಿಲ್ಲೆಗಳನ್ನು ಪಡೆದಿರುವ 'ಹೈದರಾಬಾದ್ - ಕರ್ನಾಟಕ' ಪ್ರದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಡಾ.ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ೬೧ ತಾಲ್ಲೂಕುಗಳನ್ನು ಮುಂದುವರಿದ ತಾಲ್ಲೂಕುಗಳೆಂದು ವರ್ಗೀಕರಿಸಲಾಗಿದೆ. ಈ ೬೧ ಮುಂದುವರಿದ ತಾಲ್ಲೂಕುಗಳಲ್ಲಿ ಗುಲಬರ್ಗಾ ವಿಭಾಗದ ತಾಲ್ಲೂಕುಗಳು ಸಂಖ್ಯೆ ಕೇವಲ ಮೂರು (ಬಳ್ಳಾರಿ, ಹೊಸಪೇಟೆ ಮತ್ತು ಬೀದರ್). ಬಳ್ಳಾರಿ ಜಿಲ್ಲೆಯನ್ನು ಗುಲಬರ್ಗಾ ವಿಭಾಗದಲ್ಲಿ ಸೇರಿಸಿರುವುದರಿಂದ ಹೈ.ಕ.ಪ್ರದೇಶಕ್ಕೆ ಅನ್ಯಾಯವಾಗಿದೆ. ಮುಂದುವರಿದ ೬೧ ತಾಲ್ಲೂಕುಗಳಲ್ಲಿ ಹೈ.ಕ. ಪ್ರದೇಶ ಮೂರು ತಾಲೂಕುಗಳಲ್ಲಿ ಎರಡು ಬಳ್ಳಾರಿ ಜಿಲ್ಲಿಗೆ ಸೇರಿದ್ದರೆ ಒಂದು ಮಾತ್ರ ಬೀದರ್ ಜಿಲ್ಲೆಗೆ ಸೇರಿದೆ.

ಡಿ.ಎಂ. ನಂಜುಂಡಪ್ಪ ವರದಿ (೨೦೦೨) ಹಾಗೂ ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ (೧೯೯೯ ಮತ್ತು ೨೦೦೬) ವರದಿಗಳು ಪ್ರಕಟವಾದಾಗ ಹುಟ್ಟಿಕೊಂಡ ಒಂದು ಪ್ರಮೇಯವು ನಮ್ಮನ್ನು ದಾರಿ ತಪ್ಪಿಸುವಂತಿದೆ. ಉದಾಹರಣೆಗೆ ನಂಜುಂಡಪ್ಪ ವರದಿಯ ಪ್ರಕಾರ ಅಭಿವೃದ್ಧಿ ಹೊಂದದ ತಾಲ್ಲೂಕುಗಳ ೧೧೪. ಇವುಗಳಲ್ಲಿ ದ.ಕ.ಪ್ರ.ದ ಪಾಲು ೫೫ ಮತ್ತು ಉ.ಕ.ಪ್ರ.ದ. ಪಾಲು ೫೯. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಉ.ಕ.ಪ್ರ.ದ ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸ್ಥಾನವು ಅನೇಕ ದ.ಕ.ಪ್ರ.ದ ಜಿಲ್ಲೆಗಳ ಸ್ಥಾನಕ್ಕಿಂತ ಉತ್ತಮವಾಗಿದೆ. ಈ ಆಧಾರದ ಮೇಲೆ ಹಿಂದುಳಿದಿರುವಿಕೆ ಅಥವಾ ಮುಂದುವರಿದಿರುವಿಕೆಗಳು ಎರಡೂ ಪ್ರದೇಶಕ್ಕೂ ಸಾಮಾನ್ಯವೆಂಬ ತೀರ್ಮಾನಗಳನ್ನು ಮಾಡಲಾಗುತ್ತಿದೆ. ಆದರೆ ಇದು ಸರಿಯಲ್ಲ. ನಂಜುಂಡಪ್ಪ ವರದಿ ಪ್ರಕಾರ ರಾಜ್ಯದಲ್ಲಿನ ಅತ್ಯಂತ ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಗುಲಬರ್ಗಾ ವಿಭಾಗದ ಪಾಲು ೨೧ (ಶೇ. ೫೩.೮೫). ಇಡೀ ಉ.ಕ.ಪ್ರ.ವನ್ನು ತೆಗೆದುಕೊಂಡಿದೆ. ೩೯ ರಲ್ಲಿ ಅದರ ಪಾಲು ೨೬ (ಶೇ. ೬೬.೬೬).

ಸಂಚಯಿತ ದುಸ್ಥಿತಿ ಸೂಚ್ಯಂಕವೆಂಬ ಮಾಪನವೊಂದನ್ನು ನಂಜುಂಡಪ್ಪ ವರದಿಯಲ್ಲಿ ರೂಪಿಸಲಾಗಿದೆ. ಅದರ ಪ್ರಕಾರ ಸಂಚಯಿತ ದುಸ್ಥಿತಿಯಲ್ಲಿ ಗುಲಬರ್ಗಾ ವಿಭಾಗದ ಪಾಲು ಶೇ. ೪೦ ಮತ್ತು ಬೆಳಗಾವಿ ವಿಭಾಗದ ಪಾಲು ಶೇ.೨೦. ಒಟ್ಟಾರೆ ಉ.ಕ.ಪ್ರ.ದ ಪಾಲು ಶೇ. ೬೦. ಆದರೆ ರಾಜ್ಯದ ಜನಸಂಖ್ಯೆಯಲ್ಲಿ ಉ.ಕ.ಪ್ರ.ದ ಪಾಲು ಕೇವಲ ಶೇ. ೪೩ (ಡಿ.ಎಂ. ನಂಜುಮಡಪ್ಪ ಸಮಿತಿಯ ಅಂತಿಮ ವರದಿ, ೨೦೦೨).

ಪ್ರಸ್ತುತ ಪ್ರಬಂಧದಲ್ಲಿ ರಾಜ್ಯದ ಏಳು ಜಿಲ್ಲೆಗಳು ಅತ್ಯಂತ ಹಿಂದುಳಿದಿರುವ ಸ್ಥಿತಿಯಲ್ಲಿರುವುದನ್ನು ಗುರುತಿಸಿದೆ. ಅವುಗಳಾವುವೆಂದರೆ ಗುಲಬರ್ಗಾ ವಿಭಾಗದ ಐದು ಜಿಲ್ಲೆಗಳಾದ ಬೀದರ್, ಬಳ್ಳಾರಿ, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಹಾಗೂ ಬೆಳಗಾವಿ ವಿಭಾಗದ

ಎರಡು ಜಿಲ್ಲೆಗಳಾದ ಬಾಗಲಕೋಟೆ ಮತ್ತು ಬಿಜಾಪುರ. ಪ್ರಾದೇಶಿಕ ಅಸಮಾನತೆಯೆಂಬುದು ಸದರಿ ಏಳು ಜಿಲ್ಲೆಗಳು ಹಾಗೂ ಉಳಿದ ಕರ್ನಾಟಕಗಳ ನಡುವೆ ಎಂಬುದನ್ನು ಇಲ್ಲಿ ಪ್ರತಿಪಾದಿಸಲು ಪ್ರಯತ್ನಿಸಲಾಗಿದೆ.

ಅಭಿವೃದ್ಧಿ ಅಧ್ಯಯನಕ್ಕೆ ಸಂಬಂಧಿಸಿದ ಸಮಸ್ಯೆಯೊಂದನ್ನು ಇಲ್ಲಿ ಚರ್ಚಿಸುವುದು ಸೂಕ್ತವಾಗಿದೆ. ಅಲ್ಲಿ ಅಭಿವೃದ್ಧಿಯನ್ನು 'ಸಮಗ್ರ' - 'ಅಖಂಡ' ನೆಲೆಯಲ್ಲಿ ಪರಿಭಾವಿಸಿ ಕೊಳ್ಳುವುದು ಕಂಡುಬರುತ್ತದೆ. ಅಲ್ಲಿ ಪ್ರಾದೇಶಿಕ ವಿಭಿನ್ನತೆಗಳಿಗೆ ಸ್ಥಾನ ನೀಡಿಲ್ಲ. ರಾಜಕೀಯ ಭೂಪ್ರದೇಶವನ್ನು ಒಂದು ಘಟಕವಾಗಿ ಪರಿಭಾವಿಸಿಕೊಂಡು ಅಭಿವೃದ್ಧಿಯನ್ನು ಕುರಿತ ಸಂಗತಿಗಳನ್ನು ಚರ್ಚಿಸಲಾಗುತ್ತದೆ. ಆದರೆ ಭಾರತದ ಸಂದರ್ಭದಲ್ಲಿ ಇದ ಉಪಯುಕ್ತವಾದ ಕ್ರಮವಲ್ಲ. ಪ್ರತಿಯೊಂದು ರಾಜ್ಯದೊಳಗಿನ ವಿವಿಧ ಪ್ರಾದೇಶಿಕ ಘಟಕಗಳ ಅಭಿವೃದ್ಧಿ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಕರ್ನಾಟಕವನ್ನೇ ತೆಗೆದುಕೊಂಡರೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಅಭಿವೃದ್ಧಿ ಸ್ವರೂಪವು ಬಿಜಾಪುರ ಹಾಗೂ ಗುಲಬರ್ಗಾ ಜಿಲ್ಲೆಗಳ ಅಭಿವೃದ್ಧಿ ಸ್ವರೂಪಕ್ಕಿಂತ ಭಿನ್ನವಾಗಿರುತ್ತದೆ ಮೊದಲ ಗುಂಪಿನ ಎರಡು ಜಿಲ್ಲೆಗಳು ೧೯೫೬ರ ನಂತರ ತೀವ್ರ ಅಭಿವೃದ್ಧಿ - ಪರಿವರ್ತನೆ ಸಾಧಿಸಿಕೊಂಡಿದ್ದರೆ ಎರಡನೆಯ ಗುಂಪಿನ ಜಿಲ್ಲೆಗಳು ಹಿಂದುಳಿದ ಸ್ಥಿತಿಯಲ್ಲಿವೆ. ಈ ಪ್ರಾದೇಶಿಕ ಭಿನ್ನತೆಯ ಅಧ್ಯಯನವು ತುಂಬಾ ಮುಖ್ಯವಾಗಿದೆ. ಏಕೆಂದರೆ ಉಡುಪಿ - ದಕ್ಷಿಣ ಕನ್ನಡ ಜಿಲ್ಲೆಗಳ ಅಭಿವೃದ್ಧಿಯಿಂದ ಬಿಜಾಪುರ - ಗುಲಬರ್ಗಾ ಜಿಲ್ಲೆಗಳು ಪಾಠ ಕಲಿಯಬಹುದಾಗಿದೆ. ಉಡುಪಿ - ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳು ಅಭಿವೃದ್ಧಿಯನ್ನು ನಿರ್ವಹಿಸುವ ಸ್ವರೂಪಕ್ಕೂ ಮತ್ತು ಬಿಜಾಪುರ - ಗುಲಬರ್ಗ ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳು ಅಭಿವೃದ್ಧಿಯನ್ನು ನಿರ್ವಹಿಸುತ್ತಿರುವ ಕ್ರಮಕ್ಕೂ ವ್ಯತ್ಯಾಸಗಳಿವೆ. ಅವುಗಳನ್ನು ಗುರುತಿಸಬೇಕು. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಅಧ್ಯಯನಗಳು ಮಹತ್ವವು ಇದರಿಂದ ತಿಳಿಯುತ್ತದೆ.

**ಚಾರಿತ್ರಿಕ ನೆಲೆಗಳು**

ಡಾ. ಬಿ. ಶೇಷಾದ್ರಿ ಸರಿಯಾಗಿ ಗುರುತಿಸಿರುವಂತೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯೆಂಬುದು ಕರ್ನಾಟಕದ ಹುಟ್ಟಿನೊಂದಿಗೆ ೧೯೫೬ ರಿಂದಲೇ ಅಂಟಿಕೊಂಡು ಬಂದ 'ಬಾಲಗ್ರಹ' ಪೀಡೆಯಾಗಿದೆ.[3] ವಿವಿಧ ಆಡಳಿತದ ವ್ಯಾಪ್ತಿಯಲ್ಲಿದ್ದ ಪ್ರದೇಶಗಳೆಲ್ಲವನ್ನು ಸೇರಿಸಿ ೧೯೫೬ ರಲ್ಲಿ ಕರ್ನಾಟಕವನ್ನು ರಚಿಸಲಾಯಿತು. ಬಾಂಬೆ ಪ್ರಾಂತದಿಂದ ನಾಲ್ಕು, ಮದರಾಸು ಪ್ರಾಂತದಿಂದ ಎರಡು, ಹೈದರಾಬಾದ್ ನಿಜಾಮ್‌ಪ್ರಾಂತದಿಂದ ಮೂರು, ಮೈಸೂರು ಸಂಸ್ಥಾನದ ಒಂಬತ್ತು ಹಾಗೂ ಕೊಡಗು - ಹೀಗೆ ಹತ್ತೊಂಬತ್ತು ಜಿಲ್ಲೆಗಳನ್ನು ಒಳಗೊಂಡ ಏಕೀಕೃತ ಕರ್ನಾಟಕ ೧೯೫೬ ರಲ್ಲಿ ಹುಟ್ಟಿಕೊಂಡಿತು. ಹೀಗೆ ವಿಲೀನಗೊಂಡ ವಿವಿಧ ಆಡಳಿತ ವ್ಯಾಪ್ತಿಯಲ್ಲಿದ್ದ ಪ್ರದೇಶಗಳ ಅಭಿವೃದ್ಧಿಯ ಮಟ್ಟವು ಬೇರೆ ಬೇರೆಯಾಗಿತ್ತು. ಅಭಿವೃದ್ಧಿಯ ದೃಷ್ಟಿಯಿಂದ ವಿವಿಧ ಮಟ್ಟಗಳಲ್ಲಿದ್ದ ಪ್ರದೇಶಗಳೆಲ್ಲವೂ ಸೇರಿ ಕರ್ನಾಟಕವನ್ನು ರಚಿಸಲಾಯಿತು. ಈ ಬಗೆಯ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಮಟ್ಟವು ಇಂದಿಗೂ ವಿವಿಧ ನೆಲೆಗಳಲ್ಲಿ ಮುಂದುವರಿದಿದೆ. ಇದನ್ನೇ ನಾವು ಪ್ರಾದೇಶಿಕ ಅಸಮಾನತೆಯೆಂದು ಕರೆದಿದ್ದೇವೆ.

**ವಸಾಹತುಶಾಹಿಯ ಅನುಕೂಲಗಳು**

ಬಾಂಬೆ ಪ್ರಾಂತದಿಂದ ಬಂದು ಕರ್ನಾಟಕದಲ್ಲಿ ವಿಲೀನಗೊಂಡ ನಾಲ್ಕುಜಿಲ್ಲೆಗಳು ಹಾಗೂ ಮದರಾಸು ಪ್ರಾಂತದಿಂದ ಬಂದು ಕರ್ನಾಟಕ ಸೇರಿದ ಎರಡು ಜಿಲ್ಲೆಗಳು ನೂರಾರು ವರ್ಷಗಳ ವಸಾಹತುಶಾಹಿ ಆಡಳಿತದ ಹಾಗೂ ಅಭಿವೃದ್ಧಿಯ ಅನುಕೂಲಗಳನ್ನು ಅನುಭವಿಸಿದ್ದವು. ವಸಾಹತುಶಾಹಿಯು ಎರಡು ಪ್ರಧಾನ ಪರಿಣಾಮಳನ್ನು ಉಂಟು ಮಾಡಿತು. ಮೊದಲನೆಯದು ಆಡಳಿತ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ಅನುಕೂಲಗಳನ್ನು ಅದು ಒದಗಿಸಿತು. ಇದಕ್ಕೆ ಸಮಾನಾಂತರವಾಗಿ ಅದು ಅನೇಕ ವಿನಾಶಕಾರಿ ಪರಿಣಾಮಗಳನ್ನು ಉಂಟು ಮಾಡಿತು. ಎರಡೂ ಕಾರ್ಯಗಳನ್ನು ಅದು ನಡೆಸಿತು.[4] ನಮ್ಮ ಸಂದರ್ಭದಲ್ಲಿ ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಬಿಜಾಪುರ ಹಾಗೂ ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ೧೯ನೆಯ ಶತಮಾನದಲ್ಲಿ ಹಾಗೂ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಶಿಕ್ಷಣ,

ಆರೋಗ್ಯ, ಸಾರಿಗೆ, ರೆವಿನ್ಯೂ ವ್ಯವಸ್ಥೆ, ಸಂಪರ್ಕ, ಪತ್ರಿಕೆಗಳು ಮುಂತಾದವುಗಳಿಗೆ ಸಂಬಂಧಿಸಿದ ಅನುಕೂಲಗಳು ವಸಾಹತುಶಾಹಿಯಿಂದಾಗಿ ಪ್ರಾಪ್ತವಾದವು. ಈ ಪ್ರದೇಶದಲ್ಲಿ ರಾಜಕೀಯ ಶಾಂತಿ ನೆಲೆಸಿತ್ತು. ಜನ ಸಂಘಟನೆ ಅಲ್ಲಿ ಸಾಧ್ಯವಾಯಿತು. ಜನಪರ ಚಳವಳಿಗಳು ಅಲ್ಲಿ ಹುಟ್ಟಿಕೊಂಡವು.

ಮೈಸೂರು ರಾಜಸಂಸ್ಥಾನದಲ್ಲಿ ಪ್ರಗತಿಪರವಾದ ಪ್ರಭುತ್ವ ಆಡಳಿತದಲ್ಲಿತ್ತು. ದೂರದೃಷ್ಟಿಯುಳ್ಳ ದಿವಾನರುಗಳು ಅಲ್ಲಿದ್ದರು. ಈ ಕಾರಣದಿಂದಾಗಿ ಅಲ್ಲಿ ಅಭಿವೃದ್ಧಿಯು ತೀವ್ರವಾಗಿ ಸಂಭವಿಸಿತು. ಕೈಗಾರಿಕೆಗಳನ್ನು ಕಟ್ಟಲಾಯಿತು. ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಬ್ಯಾಂಕುಗಳನ್ನು ಆರಂಭಿಸಲಾಯಿತು. ಜನರ ಭಾಷೆಗೆ ಅಲ್ಲಿ ಮನ್ನಣೆಯಿತ್ತು. ಸರ್ ಎಂ. ವಿಶ್ವೇಶ್ವರಯ್ಯ ಅವರ ದಿವಾನಗಿರಿ ಆಡಳಿತದಲ್ಲಿ ಮೈಸೂರು ಸಂಸ್ಥಾನವು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿಕೊಂಡಿತು. ಸರ್ ಮಿರ್ಜಾ ಇಸ್ಮಾಯಿಲ್‌ಅವರು ಇಂತಹ ಅಭಿವೃದ್ಧಿಪರ ನೀತಿಗಳನ್ನು ತಮ್ಮ ದಿವಾನ್‌ಗಿರಿ ಅವಧಿಯಲ್ಲಿ ಮುಂದುವರಿಸಿದರು. ಇದರಿಂದಾಗಿ ಅದರ ಅಭಿವೃದ್ಧಿ ಮಟ್ಟವು ಸಾಪೇಕ್ಷವಾಗಿ ೧೯೫೬ ರಲ್ಲಿ ಉಳಿದ ಪ್ರದೇಶಗಳಿಗಿಂತ ಉನ್ನತ ಮಟ್ಟದಲ್ಲಿತ್ತು. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಮುಂಬೈ ಕರ್ನಾಟಕದ ಬಿಜಾಪುರ – ಬಾಗಲಕೋಟೆ ಪ್ರದೇಶದಲ್ಲಿ ಮರಾಠಿ ಭಾಷೆಯು ಆಡಳಿತದ ಹಾಗೂ ಶಿಕಷಣದ ಭಾಷೆಯಾಗಿ ಬಿಟ್ಟಿತು. ಕನ್ನಡ ಶಾಲೆಗಳು ತೀವ್ರ ಕಡೆಗಣಿಸಲ್ಪಟ್ಟವು. ಈ ಭಾಗದಲ್ಲಿದ್ದ ಜಮಖಂಡಿ ಸಂಸ್ಥಾನ, ಮುಧೋಳ ಸಂಸ್ಥಾನ, ರಾಮದುರ್ಗ ಸಂಸ್ಥಾನ ಮುಂತಾದವು ಮರಾಠಿ ಭಾಷೆಗೆ ಮನ್ನಣೆ ನೀಡಿದವು. ಕನ್ನಡ ಮಾತನಾಡುವ ಜನರ ಬವಣೆಗಳನ್ನು ಅಲ್ಲಿ ಕೇಳುವವರಿರಲಿಲ್ಲ.

ಅದೇ ರೀತಿ ಬೀದರ್, ಗುಲಬರ್ಗ ಹಾಗೂ ರಾಯಚೂರು – ಕೊಪ್ಪಳ ಪ್ರದೇಶದಲ್ಲಿ ಹೈದರಾಬಾದ್ ನಿಜಾಮನ ಆಳ್ವಿಕೆಯಿಂದಾಗಿ ಉರ್ದು ಭಾಷೆಯು ಆಡಳಿತದ ಹಾಗೂ ಶಿಕಷಣದ ಭಾಷೆಯಾಗಿತ್ತು. ಅನ್ಯಭಾಷೆಗಳ ದಬ್ಬಾಳಿಕೆಯಿಂದಾಗಿ ಕನ್ನಡಿಗರ ಬದುಕು ಇಲ್ಲಿ ಅನಾಥವಾಗಿ ಬಿಟ್ಟಿತು. ಪ್ರಾದೇಶಿಕ ಅಸಮಾನತೆ ಬಗ್ಗೆ ನಾವು ಮಾತನಾಡುವಾಗ ಇದನ್ನು ಅಗತ್ಯ ಗಮನಿಸಬೇಕಾಗುತ್ತದೆ. (ವಿವರಗಳಿಗೆ ನೋಡಿಃ ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್, ೧೯೯೯).

ಕೊಡಗು ಜಿಲ್ಲೆಯು ನೈಸರ್ಗಿಕವಾಗಿ ಶ್ರೀಮಂತವಾಗಿತ್ತು. ಅದು ಪ್ರತ್ಯೇಕ ರಾಜಕೀಯ ಸ್ಥಾನಮಾನ ಪಡೆದಿತ್ತು. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಜಿಲ್ಲೆ ಅದಾಗಿತ್ತು. ಇದರಿಂದಾಗಿ ಅದರ ಅಭಿವೃದ್ಧಿ ಸ್ಥಾನ ಉನ್ನತವಾಗಿತ್ತು.

[1] ವಿಶ್ವಸಂಸ್ಥೆಯ ಪರಿಭಾಷೆಯಲ್ಲಿ ಪ್ರಾದೇಶಿಕ ಅಸಮಾನತೆ, ಮುಂದುವರಿದ ಪ್ರದೇಶ – ಹಿಂದುಳಿದ ಪ್ರದೇಶಗಳ ರಚನೆಯನ್ನು 'ಉತ್ತರ – ದಕ್ಷಿಣ' ಕಂದರವೆಂದು ಗುರುತಿಸುವುದು ರೂಢಿಯಲ್ಲಿದೆ. ರಾಜ್‌ಕೃಷ್ಣ ಅವರ ಪ್ರಕಾರ ಇದನ್ನು ಉತ್ತರ – ದಕ್ಷಿಣ ಕಂದರದ ಸಮಸ್ಯೆಯೆಂದು ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ 'ಕೇಂದ್ರ – ಪರಿಧಿ'ಯೆಂದು ಪರಿಭಾವಿಸಿಕೊಳ್ಳುವುದು ಸರಿಯಾದ ಕ್ರಮವಾಗಿದೆ. ಏಕೆಂದರೆ ಅಭಿವೃದ್ಧಿ ಹೊಂದಿದ ಪ್ರದೇಶಗಳೆಲ್ಲವೂ 'ಕೇಂದ್ರ'ದಲ್ಲಿದ್ದರೆ ಹಿಂದುಳಿದ ಪ್ರದೇಶಗಳು ಪರಿಧಿಯಲ್ಲಿ ನೆಲೆಗೊಂಡಿದ್ದಾವೆ. (ವಿವರಗಳಿಗೆ ನೋಡಿಃ ರಾಜ್‌ಕೃಷ್ಣ, ೧೯೦೦, ಪು.೪೩ – ೮೫).

[2] ಪ್ರಾದೇಶಿಕ ವಿಶಿಷ್ಟತೆಯ ಚಳುವಳಿಗಳು ಆರಂಭವಾದುದು ತಮಿಳು, ತೆಲುಗು, ಕನ್ನಡ, ಮಲೆಯಾಳಂ ಮತ್ತು ಒರಿಯಾ ಭಾಷೆಗಳನ್ನಾಡುವ ಪ್ರದೇಶಗಳನ್ನು ಒಳಗೊಂಡಿದ್ದ ಮದರಾಸು ಪ್ರಾಂತದಲ್ಲಿ ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಮದರಾಸು ಪರಾಂತದಂತೆ ನಿಜಾಮನ ಹೈದರಾಬಾದ್ ಸಂಸ್ಥಾನವೂ ಕೂಡ ಮರಾಠಿ, ಕನ್ನಡ ಮತ್ತು ತೆಲುಗು ಭಾಷೆಗಳನ್ನಾಡುವ ಪ್ರದೇಶಗಳನ್ನು ಒಳಗೊಂಡ ಪ್ರಾಂತವಾಗಿತ್ತು. ಮದರಾಸು ಪ್ರಾಂತದಿಂದ ಆಂಧ್ರ ಪ್ರದೇಶವನ್ನು ೧೯೫೩ ರಲ್ಲಿ ಪ್ರತ್ಯೇಕಗೊಳಿಸಲಾಯಿತು. ರಾಜ್ಯ ಪುನರ್ವಿಂಗಡಣೆಯ ಸಂದರ್ಭದಲ್ಲಿ ಹೈದರಾಬಾದ್ ನಿಜಾಮ ಪ್ರಾಂತದಿಂದ ಮರಾಠಿ ಭಾಷಾ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಯಿತು. ಕನ್ನಡ ಮಾತನಾಡುವ ಪ್ರದೇಶವನ್ನು ಕರ್ನಾಟಕಕ್ಕೆ ವರ್ಗಾಯಿಸಲಾಯಿತು.

ತೆಲುಗು ಮಾತನಾಡುವ ತೆಲಂಗಾಣ ಪ್ರದೇಶವನ್ನು ಆಂಧ್ರ ರಾಜ್ಯದಲ್ಲಿ ಸೇರಿಸಿ ವಿಶಾಲಾಂಧ್ರ ರಾಜ್ಯವನ್ನು ೧೯೫೬ ರಲ್ಲಿ ರೂಪಿಸಲಾಯಿತು.

ನಿಜಾಮ ಸಂಸ್ಥಾನದಿಂದ ಮಹಾರಾಷ್ಟ್ರ ರಾಜ್ಯಕ್ಕೆ ವರ್ಗಾವಣೆಯಾದ ಮರಾಠವಾಡ ಪ್ರದೇಶವು ಮಹಾರಾಷ್ಟ್ರದಲ್ಲಿ ಇಂದಿಗೂ ಹಿಂದುಳಿದ ಪ್ರದೇಶವಾಗಿದೆ. ನಿಜಾಮ ಪ್ರಾಂತದಿಂದ ಕರ್ನಾಟಕಕ್ಕೆ ವರ್ಗಾವಣೆಯಾದ ಪ್ರದೇಶವು ಆ ರಾಜ್ಯದಲ್ಲಿ ಅದು ಅಲ್ಲಿನ ಉಳಿದೆಲ್ಲ ಪ್ರದೇಶಗಳಿಗಿಂತ ಹಿಂದುಳಿದ ಸ್ಥಿತಿಯಲ್ಲಿದೆ. ಅದೇ ರೀತಿ ವಿಶಾಲಾಂಧ್ರ ಪ್ರದೇಶದಲ್ಲಿ ವಿಲೀನವಾದ ತೆಲಂಗಾಣ ಪ್ರದೇಶವು ಅಲ್ಲಿ ಹಿಂದುಳಿದ ಪ್ರದೇಶವಾಗಿದೆ. ಈ ಮೂರು ರಾಜ್ಯಗಳಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯು ಮೂಲತಃ ಚಾರಿತ್ರಿಕವಾದ ಒಂದು ಪರಿಣಾಮವಾಗಿದೆ (ವಿವರಗಳಿಗೆ ನೋಡಿ : ಮುಧೋಳ್‌ಕರ್ ಮತ್ತು ವೋರ ೧೯೮೪ ಮತ್ತು ಸುಬ್ರಮಣ್ಯಮ್ ೧೯೮೪, ಕೋದಂಡರಾವ್ ಎಂ., ೨೦೦೭).

[3] ಕರ್ನಾಟಕದ ಹುಟ್ಟಿನಿಂದಲೇ ಅದಕ್ಕೆ ಅಂಟಿಕೊಂಡು ಬಂದ ವಿಕೃತಿ ಪ್ರಾದೇಶಿಕ ಅಸಮಾನತೆ (ನೋಡಿ : ಶೇಷಾದ್ರಿ ಬಿ., ೧೯೯೧, ಮುಧೋಳ್‌ಕರ್ ಮತ್ತು ವೋರ್೧೯೮೪, ಸುಬ್ರಮಣ್ಯಮ್ ೧೯೮೪).

ಕರ್ನಾಟಕವು ಏಕೀಕರಣಗೊಂಡಾಗ ಅದರ ವಿವಿಧ ಪ್ರದೇಶಗಳ ಅಭಿವೃದ್ಧಿಯ ಸಾಪೇಕ್ಷ ಸ್ಥಿತಿ ಹೀಗಿತ್ತು ಎಂಬುದನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ – ೧**

| **ಕ್ರ. ಸಂ.** | **ಪ್ರದೇಶಗಳು** | **ತಲಾ ವರಮಾನ ೧೯೬೦ – ೬೧ (ಚಾಲ್ತಿ ಬೆಲೆಗಳು)** | **ಸ್ಥಾನ** | **ಸಾಕ್ಷರತೆ ೧೯೫೫ – ೫೬** | **ಸ್ಥಾನ** |
|---|---|---|---|---|---|
| ೧. | ಹಿಂದಿನ ಮೈಸೂರು ಸಂಸ್ಥಾನ (೯ ಜಿಲ್ಲೆಗಳು) | ರೂ.೩೦೬ | ೩ | ಶೇ. ೧೦.೬ | ೪ |
| ೨. | ಬಾಂಬೆ ಕರ್ನಾಟಕ (೪ ಜಿಲ್ಲೆಗಳು) | ರೂ. ೨೯೩ | ೪ | ಶೇ. ೨೨.೩ | ೩ |
| ೩. | ಮದರಾಸು ಕರ್ನಾಟಕ (೨ ಜಿಲ್ಲೆಗಳು) | ರೂ. ೩೪೧ | ೨ | ಶೇ. ೨೩.೩ | ೨ |
| ೪. | ಹೈದರಾಬಾದ್ ಕರ್ನಾಟಕ ಪ್ರದೇಶ (೩ ಜಿಲ್ಲೆಗಳು) | ರೂ. ೨೪೯ | ೫ | ಶೇ. ೮.೫ | ೫ |
| ೫. | ಕೊಡಗು ಪ್ರಾಂತ | ರೂ. ೫೫೮ | ೧ | ಶೇ. ೨೭.೨ | ೧ |
| ೬. | ರಾಜ್ಯ | ರೂ. ೨೮೯ | – | – | – |

**ಮೂಲ :** ಗೌವರ್ನಮೆಂಟ್ ಆಫ್‌ಮೈಸೂರು, ೧೯೭೦, ಪು. ೨೩೯ ಮತ್ತು ೨೬೮

[4] ಕಾರ್ಲ್‌ಮಾರ್ಕ್ಸ್ ಪ್ರಕಾರ ಬ್ರಿಟನ್ ದೇಶವು ಭಾರತದಲ್ಲಿ ಎರಡು ಕಾರ್ಯಗಳನ್ನು ಕೈಗೊಳ್ಳಬೇಕಾಗಿತ್ತು. ೧. ವಿನಾಶಾತ್ಮಕವಾದ ಕಾರ್ಯ, ೨. ವಿಧಾಯಕವಾದ ಕಾರ್ಯ. ಪ್ರಾಚೀನ ಏಷ್ಯಾ ಸಮಾಜವನ್ನು ನಾಶ ಮಾಡುವುದು ಮೊದಲ ಕಾರ್ಯವಾದರೆ ಎರಡನೆಯ ಕರ್ತವ್ಯ ಏಷ್ಯಾದಲ್ಲಿ ಪಾಶ್ಚಿಮಾತ್ಯ ಸಮಾಜದ ಲೌಕಿಕ ವ್ಯವಸ್ಥೆಯನ್ನು ಪ್ರತಿಷ್ಠಾಪಿಸುವುದು ಎರಡನೆಯ ಕಾರ್ಯವಾಗಿತ್ತು. (ನೋಡಿ : ಕಾರ್ಲ್‌ಮಾರ್ಕ್ಸ್ ಮತ್ತು ಫೆಡ್ರಿಕ್ ಏಂಜೆನ್ಸ್, ೧೯೫೯ ಪು. ೮೨).

# ೭. ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ - ಸಾಮಾಜಿಕ ನೆಲೆಗಳು

# (೨)

**ನಿಜಾಮನ ಸಂಸ್ಥಾನ**

ಆದರೆ ನಿಜಾಮನ ಪ್ರಾಂತದಿಂದ ಬಂದು ಕರ್ನಾಟಕದಲ್ಲಿ ವಿಲೀನವಾದ ಜಿಲ್ಲೆಗಳಿಗೆ ವಸಾಹತುಶಾಹಿ ಆಡಳಿತದ - ಅಭಿವೃದ್ಧಿಯ ಸೌಭಾಗ್ಯ ದೊರೆತಿರಲಿಲ್ಲ. ಈ ಪ್ರದೇಶದಲ್ಲಿ ೧೯೦೦ - ೧೯೫೦ ವರೆಗೆ ಒಂದು ರೀತಿಯ ಅರಾಜಕತೆ, ಅಶಾಂತಿ, ಘರ್ಷಣೆಗಳು ಮೆರೆದಾಡಿದವು. ಎಲ್ಲಕ್ಕಿಂತ ಹೆಚ್ಚಾಗಿ ಅನ್ಯಭಾಷೆಯೊಂದರ ದಬ್ಬಾಳಿಕೆಯಿಂದಾಗಿ ಜನರ ಬದುಕು ಜರ್ಜರಿತವಾಗಿತ್ತು. ಪ್ರಭುತ್ವಕ್ಕೆ ಜನಕಲ್ಯಾಣವು ಮುಖ್ಯವಾಗಿರಲಿಲ್ಲ. ಈ ಜಿಲ್ಲೆಗಳು ಕರ್ನಾಟಕದಲ್ಲಿ ವಿಲೀನಗೊಂಡಾಗ ಅವುಗಳ ಅಭಿವೃದ್ಧಿ ಸ್ಥಾನವು ಉಳಿದೆಲ್ಲ ಪ್ರದೇಶಗಳ ಅಭಿವೃದ್ಧಿ ಸ್ಥಾನಗಳಿಗಿಂತ ಕೆಳಮಟ್ಟದಲ್ಲಿತ್ತು (ಕೋದಂಡರಾವ್ ಎಂ., ೨೦೦೭) (ನೋಡಿ ಟಿಪ್ಪಣಿ : ೩)

ರಾಜ್ಯ ಪುನರ್ವಿಂಗಡಣೆ ಸಂದರ್ಭದಲ್ಲಿ ನಿಜಾಮ ಸಂಸ್ಥಾನದ ಒಂದು ಭಾಗ ಮಹಾರಾಷ್ಟ್ರದಲ್ಲಿ ವಿಲೀನಗೊಂಡರೆ ಮತ್ತೊಂದು ಭಾಗ ಕರ್ನಾಟಕದಲ್ಲಿ ವಿಲೀನಗೊಂಡಿತು. ಉಳಿದ ತೆಲಂಗಾಣ ಪ್ರದೇಶ ಹಾಗೂ ಮದರಾಸು ಪ್ರಾಂತದ ಭಾಗವಾಗಿದ್ದ ಆಂಧ್ರದ ಭಾಗಗಳನ್ನು ಸೇರಿಸಿ ವಿಶಾಲಾಂಧ್ರ ರಾಜ್ಯವನ್ನು ೧೯೫೬ ರಲ್ಲಿ ರೂಪಿಸಲಾಯಿತು. ಕುತೂಹಲದ ಸಂಗತಿಯೆಂದರೆ ನಿಜಾಮನ ಸಂಸ್ಥಾನದಿಂದ ಯಾವ ಯಾವ ಭಾಗಗಳು ಬೇರೆ ರಾಜ್ಯಗಳಲ್ಲಿ ವಿಲೀನಗೊಂಡವೋ ಅವು ಆಯಾ ರಾಜ್ಯಗಳಲ್ಲಿ ಇಂದಿಗೂ ಹಿಂದುಳಿದ ಪ್ರದೇಶಗಳಾಗಿ ಉಳಿದಿವೆ.

ಈಗಾಗಲೆ ತಿಳಿಸಿರುವಂತೆ ನಿಜಾಮ ಪ್ರಾಂತದಿಂದ ಒಂದು ಭಾಗ ಮಹಾರಾಷ್ಟ್ರದಲ್ಲಿ ವಿಲೀನಗೊಂಡಿತು. ಹೀಗೆ ನಿಜಾಮ ಪ್ರಾಂತದಿಂದ ಒಂದು ಮಹಾರಾಷ್ಟ್ರದಲ್ಲಿ ವಿಲೀನ ಗೊಂಡ ಭಾಗವನ್ನು ಅಲ್ಲಿ ಮರಾಠವಾಡ ಪ್ರದೇಶವೆಂದು ಕರೆಯಲಾಗುತ್ತಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಮರಾಠವಾಡ ಪ್ರದೇಶವು ಉಳಿದ ಪ್ರದೇಶಗಳಾದ ವಿಧರ್ಭ ಹಾಗೂ ಪಶ್ಚಿಮ ಕರಾವಳಿ ಪ್ರದೇಶಗಳಿಗಿಂತ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ.

ನಿಜಾಮ ಪ್ರಾಂತದಿಂದ ಬಂದು ಕರ್ನಾಟಕದಲ್ಲಿ ವಿಲೀನಗೊಂಡ ಜಿಲ್ಲೆಗಳು ಅಲ್ಲಿ ಹಿಂದುಳಿದ ಸ್ಥಿತಿಯಲ್ಲಿವೆ. ಅದೇ ರೀತಿ ಆಂಧ್ರ ಪ್ರದೇಶದಲ್ಲಿ ನಿಜಾಮ ಆಡಳಿತದ ಭಾಗವಾಗಿದ್ದ ತೆಲಂಗಾಣವು ವಸಾಹತುಶಾಹಿ ಆಡಳಿತವನ್ನು ಅನುಭವಿಸಿದ ಆಂಧ್ರದ ಭಗಕ್ಕಿಂತ ಹೆಚ್ಚು ಹಿಂದುಳಿದ ಸ್ಥಿತಿಯಲ್ಲಿದೆ. ಮಹಾರಾಷ್ಟ್ರದಲ್ಲಿ ಮರಾಠವಾಡ, ಆಂಧ್ರದಲ್ಲಿ ತೆಲಂಗಾಣ ಮತ್ತು ಕರ್ನಾಟಕದಲ್ಲಿ ಬೀದರ್, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು ಒಳಗೊಂಡ ಹೈದರಾಬಾದ್ ಕರ್ನಾಟಕ ಪ್ರದೇಶವು ಆಯಾ ರಾಜ್ಯಗಳ ಉಳಿದ ಪ್ರದೇಶಗಳಿಗಿಂತ ಅತ್ಯಂತ ದುಸ್ಥಿತಿ ಅನುಭವಿಸುತ್ತಿವೆ.

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಚರ್ಚೆ ಮಾಡುವಾಗ ಅದರ ಚಾರಿತ್ರಿಕ ಹಿನ್ನೆಲೆಯನ್ನು ಅಗತ್ಯವಾಗಿ ಪರಿಗಣಿಸಬೇಕಾಗುತ್ತದೆ. ವಸಾಹತುಶಾಹಿ ಆಡಳಿತ ಹಾಗೂ ಅಭಿವೃದ್ಧಿಯ ಅನುಕೂಲಗಳಿಂದ ವಂಚಿತವಾದ ಪ್ರದೇಶಗಳು ೨೦ನೆಯ ಶತಮಾನದ ಕೊನೆಯ ೫೦ ವರ್ಷಗಳ ಅವಧಿಯಲ್ಲಿ 'ಯಥಾಸ್ಥಿತಿವಾದಿ' ಸ್ಥಿತಿಯನ್ನು ಅನುಭವಿಸಿದವು. ಅಲ್ಲಿ ಜಮೀನುದಾರಿ ಪಾಳೆಗಾರಿಕೆಯು ಮುಂದುವರಿಯಿತು. ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಯನ್ನು ಅಲ್ಲಿ ಇಂದಿಗೂ ಕಾಣಬಹುದಾಗಿದೆ. ಈ ಪ್ರದೇಶದಲ್ಲಿ ಇಂದಿಗೂ ಸಣ್ಣಪುಟ್ಟ ನೌಕರರು, ರೈತರು, ಕಾರ್ಮಿಕರು, ಸರ್ಕಾರಿ ಅಧಿಕಾರಿಗಳ ಕೊಠಡಿ ಪ್ರವೇಶಿಸವಾಗ ಚಪ್ಪಲಿ ಬಿಟ್ಟು ಪ್ರವೇಶಿಸುವುದನ್ನು ಕಾಣಬಹುದು. ಚಪ್ಪಲಿ ಬಿಟ್ಟು ಬರಬೇಕೆಂದು ಯಾವ ಅಧಿಕಾರಿಯೂ ಆದೇಶ ನೀಡಿಲ್ಲ. ಆದರೆ ಅದೊಂದು ಸಾಮಾಜಿಕ ಶಿಷ್ಟಾಚಾರವಾಗಿದೆ. ಆದರೆ ಹಿಂದಿರುವ ಜಮೀನುದಾರಿ ಪಾಳೆಗಾರಿಕೆಯ ಮೌಲ್ಯಗಳನ್ನು ನಾವು ಗುರುತಿಸಬೇಕಾಗುತ್ತದೆ.

ವಸಾಹತುಶಾಹಿ ಆಡಳಿತದ ಅನುಕೂಲಗಳನ್ನು ಹಾಗೂ ಅಭಿವೃದ್ಧಿಯ ಫಲಗಳನ್ನು ಅನುಭವಿಸಿದ ಪ್ರದೇಶಗಳು ಊಳಿಗಮಾನ್ಯ ವ್ಯವಸ್ಥೆಯ ಸಂಕೋಲೆಗಳನ್ನು ಮುರಿದು ಕೊಂಡು ಬಂಡವಾಳಶಾಹಿಯ ಚಹರೆಗಳನ್ನು ಪಡೆದುಕೊಳ್ಳುತ್ತಿರುವಾಗ ನಿಜಾಮ ಪ್ರಾಂತದಿಂದ ಬಂದು ಬೇರೆ ಬೇರೆ ರಾಜ್ಯಗಳಲ್ಲಿ ವಿಲೀನಗೊಂಡ ಪ್ರದೇಶಗಳು ಸ್ವಾತಂತ್ರ್ಯಾ ನಂತರದಲ್ಲೂ ಊಳಿಗಮಾನ್ಯ ವ್ಯವಸ್ಥೆಯ ಸಂಕೋಲೆಯಲ್ಲಿ ಮುಂದುವರಿದಿರುವುದನ್ನು ಕಾಣಬಹುದು.

**ಸಾಮಾಜಿಕ ಪರಿವರ್ತನೆ : ೧೯೫೦ – ೨೦೦೦**

ಈಗಾಗಲೇ ತಿಳಿಸಿರುವಂತೆ ವಸಾಹತುಶಾಹಿ ಆಡಳಿತ ಮತ್ತು ಅಭಿವೃದ್ಧಿಯ ಅನುಕೂಲಗಳಿಂದ ವಂಚಿತವಾದ ಪ್ರದೇಶಗಳು ಇಪ್ಪತ್ತನೆಯ ಶತಮಾನದ ಕೊನೆಯ ಅರ್ಧ ಭಾಗದಲ್ಲಿ 'ಯಥಾಸ್ಥಿತಿವಾದಿ'ತನವನ್ನು ಅನುಭವಿಸಿದವು. ಇದರಿಂದಾಗಿ ಸ್ವಾತಂತ್ರ್ಯ ಪೂರ್ವದ ಭೂ ಸಂಬಂಧಗಳು, ದುಡಿಮೆಗಾರರ ಸ್ವರೂಪ ಮುಂತಾದವು ಊಳಿಗಮಾನ್ಯ ನೆಲೆಯಲ್ಲೇ ಮುಂದುವರಿದವು. ಆದರೆ ವಸಾಹತುಶಾಹಿ ಆಡಳಿತದ ಅನುಕೂಲ ಪಡೆದ ಪ್ರದೇಶಗಳು ಹಾಗೂ ಮೈಸೂರು ರಾಜ ಸಂಸ್ಥಾನದ ಜಿಲ್ಲೆಗಳು ಇದೇ ಅವಧಿಯಲ್ಲಿ ಬಂಡವಾಳಶಾಹಿ ಚಹರೆಯನ್ನು ಪಡೆದುಕೊಳ್ಳ ತೊಡಗಿದವು.

ಸ್ವಾತಂತ್ರ್ಯಾನಂತರ ದ.ಕ.ಪ್ರದೇಶವು ತೀವ್ರ ಸ್ವರೂಪದ ಸಾಮಾಜಿಕ ಪರಿವರ್ತನೆಗೆ ಹಾಗೂ ರಾಜಕೀಯ ಜಾಗೃತಿಗೆ - ಜನಸಂಘಟನೆಗೆ ಒಳಗಾದರೆ ಉ.ಕ.ಪ್ರ.ವು ಅದರಲ್ಲೂ ಗುಲಬರ್ಗಾ ವಿಭಾಗದ ೫ ಜಿಲ್ಲೆಗಳು ಹಾಗೂ ಬಾಂಬೆ ಕರ್ನಾಟಕದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಚಾರಿತ್ರಿಕ ವಿಕಲತೆಗೆ ಒಳಗಾದವು.

ಈ ಪ್ರಬಂಧದಲ್ಲಿ ಭೂಸಂಬಂಧಗಳ ಸ್ವರೂಪದ ಆಧಾರದ ಮೇಲೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಉಂಟಾಗಿರುವ ಸಾಮಾಜಿಕ - ರಾಜಕೀಯ ಬದಲಾವಣೆಯ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಈ ಕುರಿತಂತೆ ಮೊದಲನೆಯ ಸೂಚಿಯೆಂದರೆ ಕೃಷಿ ಅವಲಂಬನೆ ಪ್ರಮಾಣ. ದ.ಕ.ಪ್ರ.ದಲ್ಲಿ ೨೦೦೧ರ ಜನಗಣತಿ ವರದಿ ಪ್ರಕಾರ ಒಟ್ಟು ದುಡಿಮೆಗಾರರಲ್ಲಿ ಕೃಷಿ ಅವಲಂಬಿತರ ಪ್ರಮಾಣ ಶೇ. ೧೮.೫೧. ಆದರೆ ಉ.ಕ.ಪ್ರ.ದಲ್ಲಿ ಅದು ಶೇ. ೬೬.೧೫. ಗುಲಬರ್ಗಾ ವಿಭಾಗವನ್ನು ತೆಗೆದುಕೊಂಡರೆ ಕೃಷಿ ಅವಲಂಬನೆಯ ಪ್ರಮಾಣ ಶೇ. ೬೮.೩೭. ಸ್ವಾತಂತ್ರ್ಯಾನಂತರ ಉ.ಕ.ಪ್ರ.ದಲ್ಲಿ ಹಾಗೂ ಗುಲಬರ್ಗಾ ವಿಭಾಗದಲ್ಲಿ ಕೃಷಿಯೇತರ ಚಟುವಟಿಕೆಗಳು ತೀವ್ರಗತಿಯಲ್ಲಿ ಬೆಳೆಯಲಿಲ್ಲ. ಆದರೆ ದ.ಕ.ಪ್ರ.ದಲ್ಲಿ ಒಟ್ಟು ದುಡಿಮೆಗಾರರಲ್ಲಿ ಅರ್ಧಕ್ಕಿಂತ ಅಧಿಕ ದುಡಿಮೆಗಾರರು ಕೃಷಿಯನ್ನು ಬಿಟ್ಟು ಕೃಷಿಯೇತರ ಕ್ಷೇತ್ರಗಳಿಗೆ ಪ್ರವೇಶಿಸಿಬಿಟ್ಟರು.

ಎರಡನೆಯ ಸೂಚಿಯೆಂದರೆ ಭೂರಹಿತ ಕೃಷಿ ದಿನಗೂಲಿ ದುಡಿಮೆಗಾರರ ಪ್ರಮಾಣ. ಕೃಷಿ ಅವಲಂಬಿತದಲ್ಲಿ ಎರಡು ವರ್ಗಗಳಿವೆ.

೧. ಭೂ ಮಾಲಿಕರು ಅಥವಾ ಸಾಗುವಳಿದಾರರು

೨. ಭೂರಹಿತ ಕೃಷಿ ದಿನಗೂಲಿ ದುಡಿಮೆಗಾರರು

ದ.ಕ.ಪ್ರದಲ್ಲಿನ ಒಟ್ಟು ಕೃಷಿ ಅವಲಂಬಿತರಲ್ಲಿ ಭೂರಹಿತ ಕೃಷಿ ದಿನಗೂಲಿಗಳ ಪ್ರಮಾಣ ಶೇ. ೩೯.೯೩. ಅಂದರೆ ಇಲ್ಲಿ ಭೂಮಾಲಿಕರ ಪ್ರಮಾಣವು ದಿನಗೂಲಿಗಳ ಪ್ರಮಾಣಕ್ಕಿಂತ ಅಧಿಕವಾಗಿದೆ. (ಶೇ. ೬೦.೦೭) ಇದಕ್ಕೆ ಪ್ರತಿಯಾಗಿ ಉ.ಕ.ಪ್ರ.ದಲ್ಲಿನ ಒಟ್ಟು ಕೃಷಿ ಅವಲಂಬಿತರಲ್ಲಿ ದಿನಗೂಲಿಗಳ ಪ್ರಮಾಣ ಶೇ. ೫೪.೭೧. ಗುಲಬರ್ಗಾ ವಿಭಾಗದಲ್ಲಿ ಅವರ ಪ್ರಮಾಣ ಶೇ. ೫೯.೩೭. ಈ ಪ್ರದೇಶದಲ್ಲಿ ಭೂಹೀನರ ಅಂದರೆ ಕೃಷಿಯ ಜೊತೆ ಸಂಕೋಲೆ ರೀತಿಯ ಸಂಬಂಧ ಪಡೆದ ದುಡಿಮೆಗಾರರ ಪ್ರಮಾಣ ಅಗಾಧವಾದುದು.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ದ.ಕ.ಪ್ರ.ದ ಪಾಲು ಶೇ. ೫೭.೩೦ ಮತ್ತು ಉ.ಕ.ಪ್ರ.ದ ಪಾಲು ಶೇ. ೪೨.೭೦. ಆದರೆ ಭೂರಹಿತ ಕೃಷಿ ದಿನಗೂಲಿಗಳ ಪ್ರಮಾಣವನ್ನು ತೆಗೆದುಕೊಂಡರೆ, ಅವರಲ್ಲಿ ದ.ಕ.ಪ್ರ.ದ ಪಾಲು ಶೇ. ೪೨.೭೪ ರಷ್ಟಾದರೆ ಉ.ಕ.ಪ್ರ.ದ ಪಾಲು ಶೇ. ೫೭.೨೬. ಅಂದರೆ ಇಲ್ಲಿ ಅದು ತಿರುವು ಮುರುವು ಆಗಿದೆ. ರಾಜ್ಯದ ಜನಸಂಖ್ಯೆಯಲ್ಲಿ ಶೇ. ೫೭.೩೦ ರಷ್ಟುಪಾಲು ಪಡೆದಿರುವ ದ.ಕ.ಪ್ರ.ವು ಭೂರಹಿತ ಕೃಷಿ ಕೂಲಿಕಾರರಲ್ಲಿ ಮಾತ್ರ ಶೇ. ೪೨.೭೪ ಪಾಲು ಪಡೆದಿದೆ(೨೦೦೧). ಅಂದರೆ ಕಳೆದ ೫೦ ವರ್ಷಗಳ ಅವಧಿಯಲ್ಲಿ ದ.ಕ.ಪ್ರ.ದಲ್ಲಿ ಕೃಷಿಯೇತರ ಚಟುವಟಿಕೆಗಳು ಅಗಾಧ ಪ್ರಮಾಣದಲ್ಲಿ ಬೆಳೆದಿವೆ. ಇದರಿಂದಾಗಿ ಅಲ್ಲಿ ಕೃಷಿ ಅವಲಂಬನೆ ಕಡಿಮೆಯಾಗಿದೆ ಮತ್ತು ಕೃಷಿಕೂಲಿಕಾರರ ಪ್ರಮಾಣ ಕೆಳಮಟ್ಟದಲ್ಲಿದೆ.

ಇದಕ್ಕೆ ಪ್ರತಿಯಾಗಿ ಉ.ಕ.ಪ್ರ. ಅದರಲ್ಲೂ ಗುಲಬರ್ಗಾ ವಿಭಾಗವು ಕೃಷಿಯನ್ನೇ ಪ್ರಧಾನ ಕಸುಬನ್ನಾಗಿ ಮಾಡಿಕೊಂಡಿದೆ. ಕೃಷಿಯೇತರ ಚಟುವಟಿಕೆಗಳು ಕಳೆದ ೫೦ ವರ್ಷಗಳ (೧೯೫೬ - ೨೦೦೬) ಅವಧಿಯಲ್ಲಿ ತೀವ್ರವಾಗಿ ಅಲ್ಲಿ ಬೆಳೆಯಲಿಲ್ಲ. ರಾಜ್ಯದ ಜನಸಂಖ್ಯೆಯಲ್ಲಿ ಅದರ ಪಾಲು ಶೇ.೪೨.೭೦. ಆದರೆ ಕೃಷಿಕೂಲಿಕಾರರನ್ನು ತೆಗೆದು ಕೊಂಡರೆ ಅದರ ಪಾಲು ಶೇ. ೫೭.೨೬. ಇಲ್ಲಿ ಏನನ್ನು ಹೇಳಲು ಪ್ರಯತ್ನಿಸಲಾಗುತ್ತಿದೆ ಯೆಂದರೆ ಸ್ವಾತಂತ್ರ್ಯಾ ನಂತರ ಉ.ಕ.ಪ್ರ. ಮತ್ತು ಅದರಲ್ಲಿ ಮುಖ್ಯವಾಗಿ ಗುಲಬರ್ಗಾ ವಿಭಾಗವು ಸಾಮಾಜಿಕ - ಆರ್ಥಿಕ - ರಾಜಕೀಯ ಯಥಾಸ್ಥಿತಿವಾದಿತನದಿಂದ ನರಳುತ್ತಿದ್ದರೆ ದ.ಕ.ಪ್ರ.ವು ತೀವ್ರ ಸ್ವರೂಪದ ಪರಿವರ್ತನೆಯನ್ನು ಅನುಭವಿಸಿತು. ಈ ಸಂಗತಿಯನ್ನು ನಾವು ಸೂಕ್ಷ್ಮವಾಗಿ ಗ್ರಹಿಸಿದರೆ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ನೆಲೆಗಳನ್ನು ಗ್ರಹಿಸುವುದು ಸಾಧ್ಯವಾಗುತ್ತದೆ.

ನಿಜಾಮ ಸಂಸ್ಥಾನದಲ್ಲಿನ ತೆಲಂಗಾಣ ಪ್ರದೇಶದ ಸಾಮಾಜಿಕ - ಆರ್ಥಿಕ ಸ್ವರೂಪದ ಬಗ್ಗೆ ಸ್ವಾಮಿ ರಮಾನಂದ ತೀರ್ಥ ಅವರು ಹೀಗೆ ಬರೆದಿದ್ದಾರೆ. "…..ಅಲ್ಲಿನ ವಿಚಿತ್ರ ಭೂ ಸಮಸ್ಯೆ ಅದಕ್ಕೊಂದು ವೈಶಿಷ್ಟ್ಯವನ್ನೇ ನೀಡಿದ್ದು ಅಲ್ಲಿನ ಎಲ್ಲ ಸಮಸ್ಯೆಗಳಲ್ಲಿ ಆರ್ಥಿಕ ಸಾಮಾಜಿಕ ಮುಖವನ್ನು ಗಮನಿಸಲೇಬೇಕು. ಹೆಚ್ಚು ಕಡಿಮೆ ಹಳ್ಳಿಗಾಡುಗಳಲ್ಲಿ ಎರಡೇ ವರ್ಗಗಳು - ಭೂಮಾಲಿಕ ಶ್ರೀಮಂತ ವರ್ಗ ಹಾಗೂ ಭೂರಹಿತ ರೈತವರ್ಗ. ಭೂಮಾಲಿಕರ ಸಂಖ್ಯೆ ಕಡಿಮೆಯಾದರೂ ಅವರು ಭಾರಿ ಭೂಮಿಯನ್ನು ಹೊಂದಿದ್ದು ರೈತರು ಕೂಲಿಯಾಲುಗಳಾಗಿ ದುಡಿಯಬೇಕು. ಇದರಿಂದ ಎಲ್ಲ ರೀತಿಯ ಅಸಮಾನತೆಗಳು ಬೆಳೆದಿದ್ದವು. ಭೂ ಮಾಲಿಕರಿಗೆ ತಪ್ಪದೇ ನಿರಂಕುಶ ಆಳರಸರ ಬೆಂಬಲ………………………" (ಸ್ವಾಮಿ ರಮಾನಂದ ತೀರ್ಥರ ಹೋರಾಟದ ನೆನಪುಗಳು, ಪು. ೧೬೬).

ಹೈದರಾಬಾದ್ ನಿಜಾಮ ಸಂಸ್ಥಾನದಲ್ಲಿ ಮೂರು ಭಾಷಾ ಪ್ರಾಂತಗಳಿದ್ದವು. ಈ ಮೂರು ಭಾಗಗಳಲ್ಲಿ ಜಮೀನುದಾರಿ ಪಾಳೆಗಾರಿಕೆ ಮೆರೆದಾಡುತ್ತಿತ್ತು. ನಿಜಾಮಾ ಸಂಸ್ಥಾನದಲ್ಲಿದ್ದ ಮೂರು ಭಾಷಾ ಪ್ರದೇಶಗಳನ್ನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ವಿಲೀನಗೊಳಿಸಲಾಯಿತು. ಹೀಗೆ ಭಾಷಾ ಪ್ರಾಂತ ಸೇರಿದ ಭಾಗ ಗಳೆಲ್ಲವೂ ಆಯಾ ಭಾಷಾ ಪ್ರಾಂತಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಹೊಂದಿದ್ದವು. ಮತ್ತು ಹಿಂದುಳಿದ ಸ್ಥಿತಿಯಲ್ಲಿದ್ದವು.

(ಇದಕ್ಕೆ ಸಂಬಂಧಿಸಿದ ವಿವರಗಳಿಗೆ ನೊಡಿ : ಸ್ವಾಮಿ ರಮಾನಂದ ತೀರ್ಥ ೧೯೭೭, ಹೋರಾಟದ ನೆನಪುಗಳು, ಅನು: ಸೂರ್ಯನಾಥ ಕಾಮತ್, ಗೀತಾಬುಕ್‌ಹೌಸ್, ಮೈಸೂರು)

ಈ ಬಗೆಯ ಚಾರಿತ್ರಿಕ - ಸಾಮಾಜಿಕ ಸ್ವರೂಪದ ಸಂಗತಿಗಳನ್ನು ಗುರುತಿಸಿಕೊಂಡರೆ ಅದಕ್ಕೆ ಸಂಬಂಧಿಸಿದ ಉಳಿದ ಸಂಗತಿಗಳನ್ನು ವಿವರಿಸುವುದು ಸಾಧ್ಯವಾಗುತ್ತದೆ. ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿ, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಸಾಕ್ಷರತೆ, ಅದರಲ್ಲೂ ಮಹಿಳೆಯರ ಸಾಕ್ಷರತೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ, ಶಾಲೆಯ ಹೊರಗುಳಿದ ಮಕ್ಕಳು, ವಲಸೆ, ಒಣಭೂಮಿ ಬೇಸಾಯ, ಬರಗಾಲ ಮುಂತಾದ ಸಂಗತಿಗಳನ್ನು ವಿವರಿಸುವುದು ನಮಗೆ ಕಷ್ಟವಾಗಬಾರದು. ಈ ಪ್ರದೇಶದಲ್ಲಿನ ಭೂ ಸಂಬಂಧಗಳು, ದುಡಿಮೆಗಾರರ ಸ್ವರೂಪ ಮುಂತಾದವುಗಳಿಗೂ ಮತ್ತು ಅಭಿವೃದ್ಧಿ ಸಂಬಂಧಿ ದುಸ್ಥಿತಿಗೂ ಸಂಬಂಧವಿದೆ.

**ಅವಿಭಜಿತ ಬಿಜಾಪುರ ಜಿಲ್ಲೆ**

ಹೈದರಾಬಾದ್ ಕರ್ನಾಟಕವೆಂಬ ಅಭಿದಾನ ಪಡೆದ ಬೀದರ್, ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ವಸಾಹತುಶಾಹಿ ಅನುಕೂಲಗಳಿಂದ ವಂಚಿತವಾಗಿದ್ದ ಕಾರಣದಿಂದ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ಕಪಿಮುಷ್ಟಿಯಿಂದಾಗಿ ಇಂದಿಗೂ ಹಿಂದುಳಿದ ಸ್ಥಿತಿಯಲ್ಲಿವೆ.[1] ಆದರೆ ಅವಿಭಜಿತ ಬಿಜಾಪುರ ಜಿಲ್ಲೆಯು ಬಾಂಬೆ ಸಂಸ್ಥಾನದ ಭಾಗವಾಗಿ ವಸಾಹತುಶಾಹಿ ಆಡಳಿತದ ಹಾಗೂ ಅಭಿವೃದ್ಧಿಯ ಅನುಕೂಲಗಳನ್ನು ಪಡೆದುಕೊಂಡಿತ್ತು. ಆದರೂ ಸಹ ಅದರ ಅಭಿವೃದ್ಧಿಯ ಸ್ವರೂಪವು ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ಸಮಾನವಾಗಿದೆ. ಸ್ವಲ್ಪಮಟ್ಟಿಗೆ ಅದರ ಸ್ಥಾನ ಉತ್ತಮವಾಗಿರಬಹುದು. ಉದಾಹರಣೆಗೆ ೨೦೦೧ ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು ಬೀದರ್, ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕ್ರಮವಾಗಿ ೦.೫೯೯, ೦.೫೪೭ ಮತ್ತು ೦.೫೮೨ ರಷ್ಟಿದ್ದರೆ ಬಿಜಾಪುರ ಹಾಗೂ ಬಾಗಲಕೋಟೆಗಳ ಮಾನವ ಅಭಿವೃದ್ಧಿ ಸೂಚ್ಯಂಕ ಕ್ರಮವಾಗಿ ೦.೫೮೯ ಮತ್ತು ೦.೫೯೧ ರಷ್ಟಿದೆ. ಆದರೆ ಬಾಂಬೆ ಸಂಸ್ಥಾನದಿಂದ ವರ್ಗಾವಣೆಯಾಗಿ ಕರ್ನಾಟಕದಲ್ಲಿ ವಿಲೀನವಾದ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳು ೦.೬೦೦ ಕ್ಕಿಂತ ಅಧಿಕ ಮಟ್ಟದಲ್ಲಿವೆ (ಕರ್ನಾಟಕ ಸರ್ಕಾರ, ೨೦೦೬).

ಈ ಕಾರಣದಿಂದ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಹಿಂದುಳಿದಿರುವಿಕೆ ಯನ್ನು ಬೇರೆ ನೆಲೆಯಲ್ಲಿ ಚರ್ಚಿಸಬೇಕಾಗುತ್ತದೆ.

ಮೊದಲನೆಯದಾಗಿ ಈ ಜಿಲ್ಲೆಗಳ ಸಾಮಾಜಿಕ - ಚಾರಿತ್ರಿಕ ಹಾಗೂ ರಾಜಕೀಯ ಸ್ವರೂಪವು ಹೈ.ಕ.ಪ್ರ.ದ ಜಿಲ್ಲೆಗಳ ಸ್ವರೂಪಕ್ಕೆ ಸಮಾನವಾಗಿದೆ. ಈ ಜಿಲ್ಲೆಗಳು ಯಾವ ರೀತಿಯಲ್ಲೂ ಬೆಳಗಾವಿ ವಿಭಾಗದ ಉಳಿದ ಜಿಲ್ಲೆಗಳಿಗೆ ಸಮಾನವಾದ ಅಂಶವನ್ನು ಹೊಂದಿಲ್ಲ. ಏಕೀಕರಣದ ನಂತರ ಈ ಜಿಲ್ಲೆಗಳನ್ನು ಬೆಳಗಾವಿ ವಿಭಾಗಕ್ಕೆ ಸೇರಿಸಿದ ಸಂಗತಿಯಲ್ಲೇ ಕೆಲವು ಸಮಸ್ಯೆಗಳಿರುವಂತೆ ಕಾಣುತ್ತದೆ. ಸ್ವಾತಂತ್ರ್ಯಾನಂತರ ಹಾಗೂ ಏಕೀಕರಣದ ನಂತರ ಇವು ತೀವ್ರ ರೀತಿಯ ಬೆಳವಣಿಗೆಯನ್ನು ಕಾಣಲು ಸಾಧ್ಯವಾಗಲಿಲ್ಲ. ಈ ಜಿಲ್ಲೆಗಳು ಬೆಳಗಾವಿ ವಿಭಾಗದಲ್ಲಿ ಆಡಳಿತಾತ್ಮಕವಾಗಿ ಇದ್ದ ಕಾರಣದಿಂದಾಗಿ ಅವು ತೀವ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಿಕೊಳ್ಳಲು ಆಧ್ಯವಾಗಲಿಲ್ಲವೆಂದು ಹೇಳಬಹುದು.[2]

ಎರಡನೆಯದಾಗಿ, ಚಾರಿತ್ರಿಕವಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಅನೇಕ ಪ್ರಭುತ್ವಗಳ ನಡುವಿನ ಘರ್ಷಣೆಯ ಕೇಂದ್ರವಾಗಿದ್ದವು. ಸ್ಥಳೀಯ ಸಂಸ್ಥಾನಗಳು, ಹೈದರಾಲಿ, ಟಿಪ್ಪೂ ಸುಲ್ತಾನ, ಪೇಶ್ವೆಗಳು, ಹೈದರಾಬಾದ್ ನಿಜಾಮ ಹಾಗೂ ಬ್ರಿಟಿಷರ ನಡುವಿನ ಘರ್ಷಣೆಯ ಕಾರ್ಯಸ್ಥಾನ ಇದಾಗಿತ್ತು.

ಅದಿಲ್‌ಶಾಹಿ, ಪೇಶ್ವೆಗಳು ಹಾಗೂ ಬ್ರಿಟಿಷ್ ಆಡಳಿತಗಳು ಜಿಲ್ಲೆಯಲ್ಲಿದ್ದ ಭೂಮಾಲಿಕ ವ್ಯವಸ್ಥೆಯನ್ನು ಊಳಿಗಮಾನ್ಯ ಸ್ವರೂಪದಲ್ಲೇ ಮುಂದುವರಿಸಿದವು. ದೇಸಾಯಿಗಳು, ದೇಶಮುಖರು, ನಾಡಗೌಡರು, ಜಹಗೀರ್‌ದಾರರು, ಪಾಟೀಲರು ಮುಂತಾದವರು ಭೂಮಾಲಿಕರಾಗಿದ್ದರು.[3] ಪ್ರಭುತ್ವ ಬದಲಾಯಿತೆ ವಿನಾ ಜಮೀನುದಾರ ಪಾಳೆಗಾರಿಕೆಯು ಇಲ್ಲಿ ಬದಲಾಗಲಿಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸ್ಥಾನಗಳು ೧೯೯೧ರಲ್ಲಿ ಕ್ರಮವಾಗಿ ೨೧ ಮತ್ತು ೨೦ ಆಗಿತ್ತು. ಆದರೆ ೨೦೦೧ ರಲ್ಲಿ ಸದರಿ ಜಿಲ್ಲೆಗಳ ಸ್ಥಾನಗಳು ಕುಸಿದಿರುವುದು ತುಂಬಾ ಆತಂಕಕಾರಿಯಾಗಿ ಕಾಣುತ್ತದೆ. ಈ ಜಿಲ್ಲೆಗಳು ಸ್ಥಾನಗಳು ೨೦೦೧ರಲ್ಲಿ ಕ್ರಮವಾಗಿ ೨೩ ಮತ್ತು ೨೨.

ಮೂರನೆಯದಾಗಿ ಹೈದರಾಬಾದ್ - ಕರ್ನಾಟಕ ಪ್ರದೇಶದ ಜಿಲ್ಲೆಗಳಂತೆ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಒಣಭೂಮಿ ಬೇಸಾಯದ ಜಿಲ್ಲೆಗಳಾಗಿವೆ. ಇಂದಿಗೂ ನೀರಾವರಿ ಪ್ರದೇಶದ ಪ್ರಮಾಣವು ಬಿಜಾಪುರ ಜಿಲ್ಲೆಯಲ್ಲಿ ಶೇ. ೨೦ ಮೀರಲಿಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿ ಇತ್ತೀಚೆಗೆ ನೀರಾವರಿ ಪ್ರದೇಶವು ತೀವ್ರ ವಿಸ್ತರಿಸಿದೆ.

ಹೈದರಾಬಾದ್ - ಕರ್ನಾಟಕ ಪ್ರದೇಶದ ಜಿಲ್ಲೆಗಳಂತೆ ಅವಿಭಜಿತ ಬಿಜಾಪುರ ಜಿಲ್ಲೆ ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಮರಾಠಿ ಭಾಷೆಯ ದಬ್ಬಾಳಿಕೆಗೆ ಒಳಗಾಗಬೇಕಾಯಿತು. ಇಂದಿಗೂ ಅದರ ಪ್ರಭಾವವು ಅಲ್ಲಿನ ವ್ಯಾಪಾರ - ವ್ಯವಹಾರ ಕ್ಷೇತ್ರಗಳಲ್ಲಿ ಕಂಡುಬರುತ್ತದೆ. ಹೈದರಾಬಾದ್ - ಕರ್ನಾಟಕ ಪ್ರದೇಶದ ಜಿಲ್ಲೆಗಳು ಭಿನ್ನವಾದ ಚಾರಿತ್ರಿಕ ಕಾರಣಗಳಿಗೆ ಹಿಂದುಳಿದಿದ್ದರೆ ಬಿಜಾಪುರ - ಬಾಗಲಕೋಟೆ ಜಿಲ್ಲೆಗಳು ಅದಕ್ಕಿಂತ ಭಿನ್ನ ವಾದ ಚಾರಿತ್ರಿಕ ಹಾಗೂ ಸಾಮಾಜಿಕ ಕಾರಣಗಳಿಗಾಗಿ ಹಿಂದುಳಿದಿವೆ.

ಇಂದಿಗೂ ಇವೆರಡೂ ಜಿಲ್ಲೆಗಳಲ್ಲಿ ಕೃಷಿ ಅವಲಂಬನೆ ಅತ್ಯಧಿಕವಾಗಿದೆ. ಜಮೀನು ದಾರಿ ಪಾಳೆಗಾರಿಕೆಯ ದಬ್ಬಾಳಿಕೆಯು ಇಂದಿಗೂ ಇಲ್ಲಿ ಮುಂದುವರಿದಿದೆ. ಹೀಗೆ ರಾಜ್ಯದ ಒಟ್ಟು ಏಳು ಜಿಲ್ಲೆಗಳು ಭಿನ್ನ ಭಿನ್ನವಾದ ಚಾರಿತ್ರಿಕ ಕಾರಣಗಳಿಗೆ, ನೈಸರ್ಗಿಕ ಕಾರಣಗಳಿಗೆ ಹಾಗೂ ಆಡಳಿತಾತ್ಮಕ ಕಾರಣಗಳಿಗೆ ಅತ್ಯಂತ ಹಿಂದುಳಿದಿರುವ ಸ್ಥಿತಿಯಲ್ಲಿವೆ.

**ಕೇಂದ್ರಾಭಿಮುಖಿ ಸಂಚಲನ**

ಸ್ವಾತಂತ್ರ್ಯಾನಂತರ ಬಂಡವಾಳಶಾಹಿ ಚಹರೆಯನ್ನು ಪಡೆದುಕೊಂಡ ದ.ಕ.ಪ್ರ.ವು ತೀವ್ರ ಸ್ವರೂಪದ ಅಭಿವೃದ್ಧಿಯನ್ನು ಸಾಧಿಸಿಕೊಂಡಿತು. ಅಭಿವೃದ್ಧಿಯಲ್ಲಿ ಹಿಂದುಳಿದ ಉ.ಕ.ಪ್ರ.ದಿಂದ, ಅದರಲ್ಲೂ ಮುಖ್ಯವಾಗಿ ಗುಲಬರ್ಗಾ ವಿಭಾಗದಿಂದ ಎಲ್ಲ ಬಗೆಯ ಸಂಪನ್ಮೂಲವನ್ನು ಅದು ಆಕರ್ಷಿಸತೊಡಗಿತು. ಇದರಿಂದಾಗಿ ಅಭಿವೃದ್ಧಿಯು ದ.ಕ.ಪ್ರ. ದಲ್ಲಿ ಕೇಂದ್ರೀಕೃತಗೊಳ್ಳತೊಡಗಿತು. ರಾಜ್ಯದಲ್ಲಿ ದ.ಕ.ಪ್ರ.ವು ಕೇಂದ್ರವಾಗಿ ಬಿಟ್ಟರೆ ಉ.ಕ.ಪ್ರ.ವು ಪರಿಧಿಯಾಗಿ ಬಿಟ್ಟಿತು. ಬಂಡವಾಳಶಾಹಿಯ ಮೂಲಗುಣವೇ ಅಧಿಕಾರದ - ಆದಾಯದ ಕೇಂದ್ರೀಕರಣ. ಪರಿಧಿಯು ಕೇಂದ್ರಕ್ಕೆ ಸಂಪನ್ಮೂಲವನ್ನು ಒದಗಿಸುವ ಘಟಕವಾಗಿ ಬಿಟ್ಟಿತು. ಸರ್ಕಾರದ ಕ್ರಮಗಳೂ ಕೂಡ ಇಂತಹ ಕೇಂದ್ರಾಭಿಮುಖಿ ಸಂಚಲನೆಗೆ ಪೂರಕವಾಗಿದ್ದವು. ಬಂಡವಾಳದ ಕೇಂದ್ರೀಕರಣದಿಂದಾಗಿ ಅಭಿವೃದ್ಧಿಯ ಸ್ವರೂಪವು ದ.ಕ.ಪ್ರ.ದಲ್ಲಿ ಭಿನ್ನವಾಗಿ ಬಿಟ್ಟಿತು. ಕೃಷಿಯೇತರ ಚಟುವಟಿಕೆಗಳು ಅಗಾಧ ಪ್ರಮಾಣದಲ್ಲಿ ಅಧಿಕಗೊಂಡವು.

ಏಕೀಕರಣಕ್ಕೆ ಹೋರಾಟ ಮಾಡಿದ ಹಿರಿಯರು ಏಕೀಕರಣದ ನಂತರ ಬೆಂಗಳೂರು 'ಉತ್ತರಾಭಿಮುಖವಾಗಬೇಕು' ಎಂದು ಕರೆ ನೀಡಿದ್ದರು.

ಕೃಷ್ಣಕುಮಾರ ಕಲ್ಲೂರ ಎನ್ನುವ ಕನ್ನಡದ ಖ್ಯಾತ ಕಥೆಗಾರರೊಬ್ಬರು ೧೯೫೭ ರಲ್ಲಿ ಇದನ್ನು ಕುರಿತಂತೆ ಹೀಗೆ ಬರೆದಿದ್ದಾರೆ.

*“ನಿಜ ಕರ್ನಾಟಕ ಕೊಡಗು, ಕನ್ನಡ ಜಿಲ್ಲೆ, ಶಿವಮೊಗ್ಗ, ಬಿಜಾಪುರ, ಚಿತ್ರದುರ್ಗ, ಗುಲಬರ್ಗಾಗಳ ಪ್ರದೇಶದಲ್ಲಿರುವುದಲ್ಲದೆ ಬೆಂಗಳೂರು – ಮಂಗಳೂರು ಮೈಸೂರು ನಗರಗಳಲ್ಲಿಲ್ಲ ……………… ಕರ್ನಾಟಕದ ಬಹುಭಾಗ ನಾಡಿನ ಪಶ್ಚಿಮ ಹಾಗೂ ಉತ್ತರ ನಿಟ್ಟಿನಲ್ಲಿರುವುದರಿಂದಲೂ ಅದರಲ್ಲೂ ಕೆಲಭಾಗ ರಾಜಧಾನಿಯಿಂದ ಅತಿದೂರದಲ್ಲಿರುವುದರಿಂದಲೂ ಬೆಂಗಳೂರು ಇನ್ನು ಮುಂದೆ ಉತ್ತರಾಭಿಮುಖವಾಗಬೇಕು .” (೧೯೫೬).*

ಕಲ್ಲೂರ ಅವರ ಆಶಯವು ಕೈಗೂಡಲಿಲ್ಲ. ಇದಕ್ಕೆ ಪ್ರತಿಯಾಗಿ ಇಡೀ ಕರ್ನಾಟಕವು ಬೆಂಗಳೂರಿಗೆ ಅಭಿಮುಖವಾಗಿ ಬಿಟ್ಟಿತು.

ರಾಜ್ಯದ ನಿವ್ವಳ ಜಿಲ್ಲಾ ವರಮಾನದಲ್ಲಿ ದ.ಕ.ಪ್ರ.ದ ಪಾಲು ೧೯೬೦ – ೬೧ ರಲ್ಲಿ ಶೇ. ೫೭.೯೪ ರಷ್ಟಿತ್ತು. ಇದಕ್ಕೆ ಪ್ರತಿಯಾಗಿ ಉ.ಕ.ಪ್ರ.ದ ಪಾಲು ಅಂದು ಶೇ. ೪೨.೦೬ ರಷ್ಟಿತ್ತು. ಇವೆರಡೂ ಪ್ರದೇಶಗಳ ನಡುವಿನ ಜನಸಂಖ್ಯೆಯ ವಿತರಣೆಗೆ ಇದು ಸರಿ ಸಮಾನವಾಗಿತ್ತು.[4]

ಆದರೆ ಇಡೀ ರಾಜ್ಯವು ಬೆಂಗಳೂರಾಭಿಮುಖವಾದುದರಿಂದ ವರಮಾನದ ಪ್ರದೇಶವಾರು ಹಂಚಿಕೆಯು ೧೯೯೯ – ೨೦೦೦ ರಲ್ಲಿ ತೀವ್ರ ಬದಲಾಯಿತು. ರಾಜ್ಯದ ನಿವ್ವಳ ಜಿಲ್ಲಾ ವರಮಾನದಲ್ಲಿ ದ.ಕ.ಪ್ರ. ಪಾಲು ೧೯೯೯ – ೨೦೦೦ ರಲ್ಲಿ ಶೇ. ೬೫.೩೧ ರಷ್ಟಾದರೆ ಉ.ಕ.ಪ್ರ.ದ ಪಾಲು ಶೇ. ೩೪.೬೯ ಕ್ಕೆ ಇಳಿಯಿತು.

ಉ.ಕ.ಪ್ರ. ಮತ್ತು ದ.ಕ.ಪ್ರ.ಗಳ ನಡುವಿನ ರಾಜ್ಯ ನಿವ್ವಳ ಆಂತರಿಕ ಉತ್ಪನ್ನದ ಹಂಚಿಕೆಯು ತೀವ್ರ ಅಸಮಾನತೆಯಿಂದ ಕೂಡಿರುವುದು ಇಂದು ಸ್ಪಷ್ಟವಾಗಿದೆ. ಈ ಅಸಮಾನತೆಯ ಪ್ರಮಾಣ ತೀವ್ರವಾಗುತ್ತ ನಡೆದಿದೆ. ಇವೆರಡೂ ಪ್ರದೇಶಗಳ ನಡುವಿನ ರಾಜ್ಯ ನಿವ್ವಳ ಆಂತರಿಕ ಉತ್ಪನ್ನದ ಹಂಚಿಕೆ ೨೦೦೫ – ೦೬ ರಲ್ಲಿ ಹೀಗಿತ್ತು :

ರಾಜ್ಯ ನಿವ್ವಳ ಆಂತರಿಕ ಉತ್ಪನ್ನದಲ್ಲಿ ೨೦೦೫ – ೦೬ ರಲ್ಲಿ ದ.ಕ.ಪ್ರ.ದ ಪಾಲು ಶೇ. ೬೬.೭೦ ರಷ್ಟಿದ್ದರೆ ಉ.ಕ.ಪ್ರ.ದ ಪಾಲು ಶೇ. ೩೩.೩೦ಕ್ಕೆ ಇಳಿದಿದೆ. (ಕರ್ನಾಟಕ ಸರ್ಕಾರ : ಆರ್ಥಿಕ ಸಮೀಕ್ಷೆ : ೨೦೦೭ – ೦೮, ಪು. ೮೦)

ದಕ್ಷಿಣ – ಉತ್ತರಗಳ ನಡುವಿನ ಕಂದರವು ಉಲ್ಬಣಗೊಳ್ಳುತ್ತಾ ನಡೆದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ರಾಜ್ಯದಲ್ಲಿ ತಲಾವರಮಾನವು ೧೯೬೦ – ೬೧ ರಲ್ಲಿ ಕನಿಷ್ಟ ಬೀದರ್ ಜಿಲ್ಲೆಯಲ್ಲಿತ್ತು (ರೂ. ೨೨೩) ಮತ್ತು ಗರಿಷ್ಟ ಕೊಡಗು ಜಿಲ್ಲೆಯಲ್ಲಿತ್ತು. (ರೂ.೫೫೮) ಅಂದು ಗರಿಷ್ಟ ಮತ್ತು ಕನಿಷ್ಟಗಳ ನಡುವಿನ ಅಂತರವು ಶೇ. ೧೧೫.೯೧ ರಷ್ಟಿದ್ದುದು ೧೯೯೯ – ೨೦೦೦ ರಲ್ಲಿ ಅದು ಶೇ. ೧೪೬.೪೮ಕ್ಕೆ ಅಧಿಕಗೊಂಡಿದೆ. ಈ ಅಂತರ ೨೦೦೫ – ೦೬ ರಲ್ಲಿ ಶೇ. ೧೭೬.೫ ರಷ್ಟಾಗಿದೆ.

ಅತ್ಯಂತ ಕನಿಷ್ಟ ತಲಾ ವರಮಾನವನ್ನು ಪಡೆದ ಬೀದರ್ ಜಿಲ್ಲೆಯ ತಲಾ ವರಮಾನವು ೧೯೬೦ – ೬೧ ರಲ್ಲಿ ರಾಜ್ಯ ತಲಾ ವರಮಾನದ ಶೇ. ೭೭.೧೬ ರಷ್ಟಿತ್ತು. ಆದರೆ ಅತ್ಯಧಿಕ ತಲಾ ವರಮಾನ ಪಡೆದ ಕೊಡಗಿನ ತಲಾ ವರಮಾನವು ರಾಜ್ಯ ತಲಾ ವರಮಾನದ ಶೇ. ೧೯೩.೦೭ ರಷ್ಟಿತ್ತು.

ಆದರೆ ೧೯೯೯ – ೨೦೦೦ ರಲ್ಲಿ ಕನಿಷ್ಟ ತಲಾ ವರಮಾನ ಪಡೆದ ಬೀದರ್‌ನ ತಲಾ ವರಮಾನವು ರಾಜ್ಯದ ವರಮಾನದ ಶೇ. ೫೯.೪೫ ರಷ್ಟಾದರೆ ಅಧಿಕ ತಲಾ ವರಮಾನದ ಪಡೆದ ದಕ್ಷಿಣ ಕನ್ನಡದ ತಲಾ ವರಮಾನವು ರಾಜ್ಯ ತಲಾ ವರಮಾನದ ಶೇ. ೨೦೫.೯೩ ರಷ್ಟಾಗಿದೆ.

ಆದರೆ ೨೦೦೫ - ೦೬ ರಲ್ಲಿ ಕನಿಷ್ಟ ತಲಾ ವರಮಾನವಿದ್ದ ಬೀದರ್ ಜಿಲ್ಲೆಯ ತಲಾ ವರಮಾನವು (ರೂ.೧೩೩೬೧) ರಾಜ್ಯ ತಲಾ ವರಮಾನದ ಶೇ ೫೧.೩೫ ರಷ್ಟಾದರೆ ಗರಿಷ್ಠ ತಲಾ ವರಮಾನ ಪಡೆದಿದ್ದ ಬೆಂಗಳೂರು ನಗರ ತಲಾ ವರಮಾನವು ರಾಜ್ಯ ತಲಾ ವರಮಾನದ ಶೇ. ೨೨೩.೮೫ ರಷ್ಟಾಗಿದೆ.

ಕಳೆದ ನಾಲ್ಕು ದಶಕಗಳ ಕಾಲಾವಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಪ್ರಮಾಣ ತೀವ್ರವಾಗಿದೆ. ಶ್ರೀಮಂತ ಜಿಲ್ಲೆಗಳು ಶ್ರೀಮಂತವಾಗುತ್ತಾ ನಡೆದಿವೆ ಮತ್ತು ಬಡ ಜಿಲ್ಲೆಗಳು ಬಡವಾಗುತ್ತಾ ನಡೆದಿವೆ.

ಕಳೆದ ನಾಲ್ಕು ದಶಕಗಳ ಕಾಲಾವಧಿಯಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ದ.ಕ.ಪ್ರ.ವು ಗುನ್ನಾರ್‌ಮಿರ್ಡಾಲ್‌ಹೇಳಿದ 'ಸ್ಪ್ರೆಡ್‌ಎಫೆಕ್ಟ್'ಗೆ ಒಳಗಾಗಿದ್ದರೆ ಉ.ಕ.ಪ್ರ.ವು 'ಬ್ಯಾಗ್‌ವಾಷ್‌ಎಫೆಕ್ಟ್'ಗೆ ಒಳಗಾಯಿತು. ಅಂದರೆ ಉ.ಕ.ಪ್ರ.ವು 'ಬರಿದಾಗುವ' ಪರಿಣಾಮಕ್ಕೆ ಪಕ್ಕಾದರೆ ದ.ಕ.ಪ್ರ.ವು ಕೇಂದ್ರೀಕರಣ ಪ್ರಕ್ರಿಯೆಗೆ ಒಳಗಾಯಿತು.

**ಪರಿಶಿಷ್ಟರ ಬದುಕು ಹಾಗೂ ಬವಣೆ**

ಬಡತನ, ಹಸಿವು, ಅಸಮಾನತೆ ಮುಂತಾದವುಗಳ ಪರಿಣಾಮಗಳನ್ನು ಸಮಾಜದ ಅಂಚಿನಲ್ಲಿರುವ ವಂಚಿತರು ಅಧಿಕವಾಗಿ ಅನುಭವಿಸಬೇಕಾಗುತ್ತದೆ. ಇದೇ ರೀತಿ ಬಡತನ - ಹಸಿವು ತೀವ್ರ ಸ್ವರೂಪ ತಳೆದಾಗ ಅದರ ಪರಿಣಾಮವನ್ನು ನಿರ್ವಹಿಸುವ ಜವಾಬುದಾರಿ ಮಹಿಳೆಯರ ಮೇಲೆ ಬಿದ್ದು ಬಿಡುತ್ತದೆ. ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ನಿವಾರಣೆಯು ಯಾಕೆ ಬಹಳ ಮುಖ್ಯವಾಗಬೇಕು ಎಂದರೆ ಅದರ ಮೂಲಕ ರಾಜ್ಯದಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ. ಲಿಂಗ ಸಂಬಂಧಿ ಅಸಮಾನತೆಯನ್ನು ನಿವಾರಣೆ ಮಾಡುವುದರ ಮೂಲಕ ಹಿಂದುಳಿದ ಪ್ರದೇಶದಲ್ಲಿ ದುಡಿಮೆಗಾರ ಮಹಿಳೆಯರ ಬದುಕನ್ನು ಉತ್ತಮಗೊಳಿಸಬಹುದಾಗಿದೆ.[5]

ರಾಜ್ಯದ ಒಟ್ಟು ಜನಸಂಖ್ಯೆ ಪರಿಶಿಷ್ಟರ (ಪ.ಜಾ.+ಪ.ಪಂ.) ಪ್ರಮಾಣವು ೨೦೦೧ ರಲ್ಲಿ ಶೇ. ೨೨.೫೬ ರಷ್ಟಿದ್ದರೆ ಅವರ ಪ್ರಮಾಣವು ಉ.ಕ.ಪ್ರ.ದಲ್ಲಿ ಶೇ. ೨೩.೧೬ ಮತ್ತು ಗುಲಬರ್ಗಾ ವಿಭಾಗದಲ್ಲಿ ಶೇ. ೩೧.೫೭ ರಷ್ಟಿತ್ತು. ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ರಾಜ್ಯದ ಗುಲಬರ್ಗಾ ವಿಭಾಗದಲ್ಲಿ ಅಧಿಕವಾಗಿದೆ. ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತ್ಯಂತ ಕನಿಷ್ಟ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿದೆ. ರಾಜ್ಯದಲ್ಲಿ ಮಹಿಳೆಯರ ಸಾಕ್ಷರತೆ ೨೦೦೧ ರಲ್ಲಿ ಶೇ. ೫೭.೪೫. ಆದರೆ ಗುಲಬರ್ಗಾ ವಿಭಾಗದಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ಕನಿಷ್ಟ ಶೇ. ೩೬.೮೪ ರಷ್ಟಿದ್ದರೆ ಗರಿಷ್ಟ ಶೇ. ೫೦.೦೧ ರಷ್ಟಿದೆ.

ರಾಜ್ಯದಲ್ಲಿ ಒಟ್ಟು ಸಾಕ್ಷರತೆಯು ಶೇ. ೬೭.೦೪ ರಷ್ಟಾದರೆ ಪರಿಶಿಷ್ಟ ಜಾತಿಯಲ್ಲಿ ಸಾಕ್ಷರತೆ ಶೇ. ೫೨.೯ ರಷ್ಟಾಗಿದೆ. ಪರಿಶಿಷ್ಟ ಪಂಗಡದಲ್ಲಿ ಸಾಕ್ಷರತಾ ಪ್ರಮಾಣವು ಶೇ. ೪೮.೩ ರಷ್ಟಿದೆ. ಇದನ್ನು ಸರಿಪಡಿಸಬೇಕಾಗಿದೆ.

[1] ಹೈದರಾಬಾದ್ ನಿಜಾಮನ ಸಂಸ್ಥಾನವು ಬ್ರಿಟಿಷ್‌ವಸಾಹತುಶಾಹಿಯ ನೇರ ಆಡಳಿತಕ್ಕೆ ಒಳಗಾಗಲಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಪಶ್ಚಿಮ ಕರಾವಳಿ ಪ್ರದೇಶ ಹಾಗೂ ವಿದರ್ಭ ಪ್ರದೇಶವು ವಸಾಹತುಶಾಹಿ ಆಡಳಿತಕ್ಕೆ ಒಳಗಾಯಿತು. ಕರ್ನಾಟಕದಲ್ಲಿ ಮುಂಬೈ ಕರ್ನಾಟಕ ಪ್ರದೇಶ ಮತ್ತು ಮದರಾಸು ಪ್ರಾಂತಕ್ಕೆ ಸೇರಿದ ಜಿಲ್ಲೆಗಳು ವಸಾಹತುಶಾಹಿ ಆಡಳಿತದ ಅನುಕೂಲ ಅನುಭವಿಸಿದವು. ತೆಲಂಗಾಣ ಪ್ರದೇಶವು ವಸಾಹತುಶಾಹಿ ಆಡಳಿತದಿಂದ ವಂಚಿತವಾಗಿದ್ದರೆ ಆಂಧ್ರ ಕರಾವಳಿ ಪ್ರದೇಶವು ವಸಾಹತುಶಾಹಿ ಆಡಳಿತಕ್ಕೆ ಒಳಗಾಯಿತು. ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಯಾವ ಭಾಗಗಳು ವಸಾಹತುಶಾಹಿ ಆಡಳಿತ ಅಭಿವೃದ್ಧಿಗೆ ಒಳಗಾಗಿದ್ದವೋ ಅವು ಏಕೀಕರಣ (೧೯೫೬)ದ ನಂತರ ತೀವ್ರ ಅಭಿವೃದ್ಧಿ ಸಾಧಿಸಿಕೊಂಡರೆ ವಸಾಹತುಶಾಹಿ ಆಡಳಿತದ

ಅನುಕೂಲದಿಂದ ವಂಚಿತವಾದ ಪ್ರದೇಶಗಳು ಆಯಾ ರಾಜ್ಯಗಳಲ್ಲಿ ಇಂದಿಗೂ ಹಿಂದುಳಿದ ಪ್ರದೇಶಗಳಾಗಿ ಉಳಿದಿವೆ (ವಿವರಗಳಿಗೆ ನೋಡಿ : ಮುಧೋಲ್‌ಕರ್ ಮತ್ತು ವೋರಾ ೧೯೮೪, ಸುಬ್ರಮಣ್ಯಮ್, ೧೯೮೯).

[2] ಆಡಳಿತಾತ್ಮಕ ಹಾಗೂ ಚಾರಿತ್ರಿಕ ಕಾರಣಗಳಿಂದಾಗಿ ವಿಜಾಪುರ (ಅವಿಭಜಿತ) ಜಿಲ್ಲೆಯನ್ನು ಬೆಳಗಾವಿ ವಿಭಾಗಕ್ಕೆ ಸೇರಿಸಲಾಯಿತು. ಆದರೆ ಇದು ಗುಲಬರ್ಗಾ ವಿಭಾಗದ ಜಿಲ್ಲೆಗಳ ಸಾಮಾಜಿಕ - ಆರ್ಥಿಕ - ಸಾಂಸ್ಕೃತಿಕ ವೈಲಕ್ಷಣಗಳಿಗೆ ಸಮಾನ ವಾದ ಲಕ್ಷಣಗಳನ್ನು ಹೊಂದಿದೆ. ಬೆಳಗಾವಿ, ಧಾರವಾಡ (ಅವಿಭಜಿತ) ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸಮಾನವಾದ ಅಂಶಗಳು ಬಿಜಾಪುರ ಜಿಲ್ಲೆಯಲ್ಲಿಲ್ಲ. ಈ ಬಗ್ಗೆ ಕನ್ನಡದ ಖ್ಯಾತ ಕಥೆಗಾರ ಕೃಷ್ಣಕುಮಾರ್ ಕಲ್ಲೂರು ಹೀಗೆ ಬರೆಯುತ್ತಾರೆ.

*"......... ಕೃಷ್ಣಾ ಮಂಡಲದ ವಿಭಾಗ ಮಲಪ್ರಭಾ ನದಿಯಿಂದ*
*ಮಂಜೀರಾ ನದಿಯಾಚೆಯವರೆಗೆ ಇದ್ದ ಅಚ್ಚ ಬೆಳವಲ*
*ನಾಡಿನ ಕೆಚ್ಚೆನಂತಿರುವುದು ಬಿಜಾಪುರ."*(೧೯೯೪:೧೭೪)

[3] ಪ್ರಸಿದ್ಧ ವಿದ್ವಾಂಸ ಪ್ರೊ. ಎ.ಎಸ್. ಹಿಪ್ಪರಗಿ ಅವರು ತಮ್ಮ ಆತ್ಮಕಥನದಲ್ಲಿ ಬಿಜಾಪುರ ಪ್ರದೇಶದಲ್ಲಿದ್ದ ಪಾಳೆಗಾರಿಕೆ - ಜಮೀನುದಾರರ ದಬ್ಬಾಳಿಕೆ ಬಗ್ಗೆ ಬರೆದಿದ್ದಾರೆ (ನೋಡಿ: ಎ.ಎಸ್. ಹಿಪ್ಪರಗಿ ಅಭಿನಂದನ ಗ್ರಂಥ : ದೀಪಸ್ತಂಭ: ಪು. ೪೦೧ - ೪೦೫).

[4] ನಮ್ಮ ರಾಜ್ಯದಲ್ಲಿ ಬೆಂಗಳೂರು ಹೇಗೆ ಭೂತಾಕಾರವಾಗಿ ಬೆಳೆದಿದೆ ಮತ್ತು ಎಲ್ಲವನ್ನೂ ಮನಾಪಲಿ ಮಾಡಿಕೊಳ್ಳುತ್ತಿದೆ ಎಂಬುದನ್ನು ನಾವು ಅವಶ್ಯ ಪರಿಗಣಿಸಬೇಕು. ರಾಜ್ಯದಲ್ಲಿನ ಒಟ್ಟು ವರಮಾನದಲ್ಲಿ ಬೆಂಗಳೂರಿನ ಪಾಲು ೧೯೯೦ - ೯೧ ರಲ್ಲಿ ಶೇ. ೧೭.೫೪ ರಷ್ಟಿತ್ತು. ಆದರೆ ಅದು ೨೦೦೧ - ೦೨ ರಲ್ಲಿ ಅದರ ಪಾಲು ಶೇ. ೨೩.೪೭ಕ್ಕೆ ಏರಿದೆ. ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತನಾಡುವಾಗ ನಾವು ಬೆಂಗಳೂರಿನ ಮಲಾಪಲಿ ಬೆಳವಣಿಗೆ ಬಗ್ಗೆ ಗಮನ ನೀಡಬೇಕು (ನೋಡಿ : ಕರ್ನಾಟಕದ ಮಾನವ ಅಭಿವೃದ್ಧಿ ವರದಿ ೨೦೦೫).

[5] ರಾಜ್ಯದಲ್ಲಿ ಪರಿಶಿಷ್ಟರ ಬದುಕು ಉಳಿದ ಜನಸಮೂಹದ ಬದುಕಿಗಿಂತ ಹೇಗೆ ಶೋಷಣೆಗೆ ಹಾಗೂ ಅನ್ಯಾಯಕ್ಕೆ ಒಳಗಾಗಿದೆ ಎಂಬ ಅಂಶಕ್ಕೆ ನೋಡಿ : ಚಂದ್ರಶೇಖರ ಟಿ.ಆರ್., ೨೦೦೭.

# ೭. ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ - ಸಾಮಾಜಿಕ ನೆಲೆಗಳು (೩)

**ಪ್ರಾದೇಶಿಕ ಅಸಮಾನತೆಯ ಲಿಂಗ ಸಂಬಂಧಿ ಆಯಾಮಗಳು**

ಅಭಿವೃದ್ಧಿ ಮತ್ತು ಲಿಂಗ ಸಂಬಂಧಗಳ ನಡುವಿನ ಸಂಬಂಧ ಕುರಿತಂತೆ ತೀವ್ರ ಚರ್ಚೆಗಳು ನಡೆಯುತ್ತಿವೆ. ಅಭಿವೃದ್ಧಿ ಕುರಿತ ಸಿದ್ಧಾಂತಗಳಲ್ಲಿ ಲಿಂಗ ಸಂಬಂಧಗಳನ್ನು ಕುರಿತಂತೆ ಚರ್ಚೆ ನಡೆಸಲು ಹಿಂಜರಿಕೆಯಿರುವುದನ್ನು ಸೇನ್ ಗುರುತಿಸಿದ್ದಾರೆ (೧೯೯೦). ಲಿಂಗ ಸಂಬಂಧಗಳ ಚರ್ಚೆಯನ್ನು ವಿಚ್ಛಿದ್ರಕಾರಿ ಎಂದು ಪರಿಗಣಿಸುವುದು ರೂಢಿಯಲ್ಲಿದೆ. ವರಮಾನವಾದಿ - ವರ್ಗವಾದಿ ಅಸಮಾನತೆ ಕುರಿತಂತೆ ಅಭಿವೃದ್ಧಿ ಸಿದ್ಧಾಂತಗಳು ಹೆಚ್ಚಿನ ಗಮನವನ್ನು ನೀಡಿವೆ. ಆದರೆ ಲಿಂಗ ಸಂಬಂಧಿ ಅಸಮಾನತೆಯನ್ನು ನಿರ್ಲಕ್ಷಿಸಲಾಗಿದೆ. ಈ

ಬಗೆಯ ಚರ್ಚೆಗಳು ವರಮಾನವಾದಿ - ವರ್ಗವಾದಿ ಅಸಮಾನತೆ ಕುರಿತ ಚರ್ಚೆಗಳಿಗೆ ಪೂರಕವಾಗಿರುತ್ತವೆ ವಿನಾ ಪ್ರತಿಕೂಲ ವಾಗಿರಲು ಸಾಧ್ಯವಿಲ್ಲ.

ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಕುರಿತ ಚರ್ಚೆಗಳಲ್ಲೂ ಲಿಂಗ ಸಂಬಂಧಿ ಆಯಾಮಗಳನ್ನು ಮೂಲೆಗುಂಪು ಮಾಡಲಾಗಿದೆ. ಲಿಂಗ ನಿರಪೇಕ್ಷತೆಯೆಂಬುದು ಸಮಾಜವಿಜ್ಞಾನಿಗಳಿಗೆ ಸಂಬಂಧಿಸಿದ ಸಿದ್ಧಾಂತಗಳ ಅಂತರ್ಗತ ಭಾಗವಾಗಿ ಬಿಟ್ಟಿದೆ.

ಜಮೀನುದಾರಿ ಪಾಳೆಗಾರಿಕೆ - ಊಳಿಗಮಾನ್ಯ ವ್ಯವಸ್ಥೆ - ಅಭಿವೃದ್ಧಿ - ಲಿಂಗ ಸಂಬಂಧಗಳು ಇವುಗಳ ನಡುವೆ ಕುತೂಹಲಕಾರಿ ಸಂಬಂಧವನ್ನು ಗುರುತಿಸುವುದು ಸಾಧ್ಯ. ಈ ಕುರಿತಂತೆ ಜೀನ್‌ಡ್ರೀಜ್‌ಮತ್ತು ಅಮರ್ತ್ಯಸೇನ್ (೨೦೦೨) ಒಂದು ಪ್ರಮೇಯವನ್ನು ರೂಪಿಸಿದ್ದಾರೆ. ಅವರ ಪ್ರಕಾರ ಯಾವ ಪ್ರದೇಶದಲ್ಲಿ ಜಮೀನು ದಾರಿಕೆಯು ಗಟ್ಟಿಯಾಗಿರುತ್ತದೋ, ಯಾವ ಪ್ರದೇಶವು ಹಿಂದುಳಿದ ಸ್ಥಿತಿಯಲ್ಲಿರುತ್ತದೋ, ಯಾವ ಪ್ರದೇಶವು ಜನಸಂಖ್ಯೆಯ ಗಾತ್ರ ಮತ್ತು ಗುಣಕ್ಕೆ ಸಂಬಂಧಿಸಿದಂತೆ ಸಮಸ್ಯೆ ಎದುರಿಸುತ್ತದೋ ಅಲ್ಲಿ ಲಿಂಗ ಸಂಬಂಧಿಗಳು ತೀವ್ರ ಅಸಮಾನತೆಯಿಂದ ಕೂಡಿರುತ್ತವೆ. ಇದಕ್ಕೆ ಅವರು ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನಗಳ ಉದಾಹರಣೆ ನೀಡುತ್ತಾರೆ. ಇದೇ ಪ್ರಮೇಯವನ್ನು ಕರ್ನಾಟಕದ ವಿವಿಧ ಪ್ರಾದೇಶಿಕ ಘಟಕಗಳಿಗೆ ಅನ್ವಯಿಸಿ ಕೆಲವು ನಿರ್ಣಯಗಳನ್ನು ಕೈಗೊಳ್ಳಬಹುದಾಗಿದೆ.

ಈ ಹಿಂದೆ ವಿವರಿಸಿರುವಂತೆ ರಾಜ್ಯದ ಬಿಜಾಪುರ, ಬಾಗಲಕೋಟೆ, ಬೀದರ್, ಗುಲಬರ್ಗ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಊಳಿಗಮಾನ್ಯ ವ್ಯವಸ್ಥೆ ಗಟ್ಟಿಯಾಗಿ ಇಂದಿಗೂ ಮುಂದುವರಿದಿದೆ. ಇಲ್ಲಿ ಭೂರಹಿತ ಕೃಷಿಕಾರ್ಮಿಕರಲ್ಲಿ ಮಹಿಳೆಯ ಪ್ರಮಾಣವು ಅಧಿಕವಾಗಿದೆ. ಬಡತನವು ತೀವ್ರವಾಗಿದೆ. ಬಡತನದ ನಿರ್ವಹಣೆಯ ಜವಾಬುದಾರಿಯು ಮಹಿಳೆಯರ ಮೇಲೆ ಅಧಿಕವಾಗಿದೆ. ಆದರೆ ಈ ಜಿಲ್ಲೆಗಳಲ್ಲಿ ಅಭಿವೃದ್ಧಿಯ ಫಲಗಳಿಂದ ತೀವ್ರವಾಗಿ ಮಹಿಳೆಯರು ವಂಚಿತರಾಗಿದ್ದಾರೆ. ಇಲ್ಲಿ ಲಿಂಗ ಅಸಮಾನತೆಯು ವ್ಯಾಪಕವಾಗಿದೆ.

ಈಗಾಗಲೇ ತಿಳಿಸಿರುವಂತೆ ಕರ್ನಾಟಕದ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಯೆಂಬುದು ಚಾರಿತ್ರಿಕವಾದ ಸಂಗತಿಯಾಗಿದೆ. ಊಳಿಗಮಾನ್ಯ - ಜಮೀನುದಾರಿ ಪಾಳೆಗಾರಿಕೆಯು ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ೧೯೫೦ರ ನಂತರವೂ ಮುಂದುವರೆದುಕೊಂಡು ಬಂದಿರುವ ಸಂಗತಿಯನ್ನು ಗುರುತಿಸಲಾಗಿದೆ. ಇಂತಹ ವ್ಯವಸ್ಥೆಯಲ್ಲಿ ಲಿಂಗ ಸಂಬಂಧಗಳು ಯಾವ ಸ್ವರೂಪದಲ್ಲಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

[1]

- ರಾಜ್ಯದ ೭ ಹಿಂದುಳಿದ ಜಿಲ್ಲೆಗಳಲ್ಲಿ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ಅಧಿಕವಿದೆ. ಅದು ರಾಜ್ಯ ಸರಾಸರಿಗಿಂತ ಅಧಿಕವಿದೆ. ಇದನ್ನು ಸ್ವಾಗತಾರ್ಹ ಸಂಗತಿಯನ್ನಾಗಿ ಪರಿಗಣಿಸುವುದು ಸಾಧ್ಯವಿಲ್ಲ. ಮುಂದುವರಿದ ಜಿಲ್ಲೆಗಳಲ್ಲೂ ಇದು ಅಧಿಕವಿದೆ.

ಆದರೆ ಇವೆರಡೂ ಬಗೆಯ ಜಿಲ್ಲೆಗಳಲ್ಲಿನ ದುಡಿಮೆಗಾರರ ವೃತ್ತಿ ಸಂಬಂಧಿ ಸ್ವರೂಪವನ್ನು ನಾವು ಪರಿಗಣಿಸಬೇಕಾಗುತ್ತದೆ.

- ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಮಹಿಳೆಯರ ಕೃಷಿ ಅವಲಂಬನೆಯು ಪುರುಷರ ಕೃಷಿ ಅವಲಂಬನೆಗಿಂತ ಅಧಿಕವಿದೆ.

ಅಭಿವೃದ್ಧಿ - ಪ್ರಾದೇಶಿಕ ಅಭಿವೃದ್ಧಿ ಕುರಿತ ಚರ್ಚೆಗಳಲ್ಲಿ ಪ್ರಾದೇಶಿಕ ಅಸಮಾನತೆಯೆಂಬುದು ಮುಖ್ಯವಾದ ಸಂಗತಿಯಾಗಿ ಪರಿಗಣಿತವಾಗುತ್ತಿಲ್ಲ. ಅದಕ್ಕೆ ಲಿಂಗ ಸಂಬಂಧಿ ಆಯಾಮವಿರುವುದನ್ನು ನಾವು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಕೋಷ್ಟಕ - ೧ ರಲ್ಲಿ ತೋರಿಸಿರುವಂತೆ ರಾಜ್ಯದ ಹಿಂದುಳಿದ ಪ್ರದೇಶ - ಜಿಲ್ಲೆಗಳಲ್ಲಿ ಮಹಿಳೆಯರು ಹೆಚ್ಚಿನ ದುಸ್ಥಿತಿ ಅನುಭವಿಸುತ್ತಿರುವುದು ಕಂಡುಬರುತ್ತಿದೆ. ಒಟ್ಟು ಮಹಿಳಾ ದುಡಿಮೆ ಗಾರರಲ್ಲಿ ಕೃಷಿ ಕೂಲಿಕಾರ ಮಹಿಳೆಯರ ಪ್ರಮಾಣವು ಹಿಂದುಳಿದ ಜಿಲ್ಲೆಗಳಲ್ಲಿ ಅಧಿಕವಾಗಿದೆ. ಈ ಜಿಲ್ಲೆಗಳಲ್ಲಿ

ಮಹಿಳೆಯರ ಸಾಕ್ಷರತೆ ಪ್ರಮಾಣವು ಕನಿಷ್ಠವಾಗಿದೆ. ಲಿಂಗಸಂಬಂಧಗಳ ಪ್ರಾದೇಶಿಕ ವಿಭಿನ್ನತೆಯನ್ನು ನಾವು ಗಂಭೀರವಾಗಿ ಪರಿಗಣಿಸಿದಂತೆ ಕಾಣಲಿಲ್ಲ. ಈ ಗುಂಪಿನಲ್ಲಿ ಗದಗ, ಹಾವೇರಿ ಮತ್ತು ಬಳ್ಳಾರಿ ಜಿಲ್ಲೆಗಳು ಮಾತ್ರ ಪ್ರತ್ಯೇಕವಾಗಿ ನಿಲ್ಲುತ್ತವೆ. ಈ ಜಿಲ್ಲೆಗಳಲ್ಲಿ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿದ್ದರೂ ಮಹಿಳೆಯರ ಸಾಕ್ಷರತೆ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕವು ಅಧಿಕ ಮಟ್ಟದಲ್ಲಿವೆ.

**ಕರ್ನಾಟಕದಲ್ಲಿ ಮಹಿಳಾ ಕೃಷಿ ಕಾರ್ಮಿಕರು : ೨೦೦೧**

**ಕೋಷ್ಟಕ – ೧**

| **ಜಿಲ್ಲೆಗಳು** | **ಒಟ್ಟು ಮಹಿಳಾ ದುಡಿಮೆಗಾರರಲ್ಲಿ ಕೃಷಿ ಕೂಲಿಕಾರ ಮಹಿಳೆಯರ ಪ್ರಮಾಣ : ೨೦೦೧** | **ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ : ೨೦೦೧** | **ಮಹಿಳೆಯರ ಸಾಕ್ಷರತೆ ೨೦೦೧** |
|---|---|---|---|
| **೧. ಮಹಿಳಾ ಕೃಷಿ ಕಾರ್ಮಿಕರು ಅಧಿಕವಿರುವ ಜಿಲ್ಲೆಗಳು** | | | |
| (ಒಟ್ಟು ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಶೇಕಡಾ ಪ್ರಮಾಣ ಶೇ. ೬೦+) | | | |
| ೧. ಬಾಗಲಕೋಟೆ | ೬೧.೭೦ | ೦.೫೭೧ | ೪೪.೧೦ |
| ೨. ಬಿಜಾಪುರ | ೬೬.೫೧ | ೦.೫೭೩ | ೪೬.೧೯ |
| ೩. ಗದಗ | ೬೧.೮೫ | ೦.೬೨೫ | ೫೨.೫೮ |
| ೪. ಹಾವೇರಿ | ೬೭.೩೭ | ೦.೫೯೬ | ೫೭.೬೦ |
| ೫. ಬಳ್ಳಾರಿ | ೬೦.೯೦ | ೦.೬೦೬ | ೪೬.೧೬ |
| ೬. ಗುಲಬರ್ಗಾ | ೬೫.೧೯ | ೦.೫೪೩ | ೩೮.೪೦ |
| ೭. ಕೊಪ್ಪಳ | ೬೩.೯೬ | ೦.೫೬೧ | ೪೦.೭೬ |
| ೮. ರಾಯಚೂರು | ೭೧.೩೧ | ೦.೫೩೦ | ೩೬.೮೪ |
| **೨. ಮಹಿಳಾ ಕೃಷಿ ಕಾರ್ಮಿಕರು ಕಡಿಮೆಯಿರುವ ಜಿಲ್ಲೆಗಳು (ಶೇ. ೪೦<)** | | | |
| ೧. ಬೆಂಗಳೂರು ಗ್ರಾಮೀಣ | ೩೩.೦೩ | ೦.೬೪೦ | ೫೫.೧೨ |
| ೨. ಬೆಂಗಳೂರು ನಗರ | ೫.೩೮ | ೦.೭೩೧ | ೭೮.೯೮ |
| ೩. ತುಮಕೂರು | ೩೭.೫೩ | ೦.೬೧೮ | ೫೭.೧೮ |

| | | | |
|---|---|---|---|
| ೪. ದ.ಕನ್ನಡ | ೩.೫೧ | ೦.೭೧೪ | ೭೭.೩೯ |
| ೫. ಹಾಸನ | ೨೪.೪೬ | ೦.೬೩೦ | ೫೯.೩೨ |
| ೬. ಕೊಡಗು | ೫.೩೫ | ೦.೬೯೦ | ೭೨.೫೩ |
| ೭. ಉಡುಪಿ | ೨೫.೧೯ | ೦.೭೦೪ | ೭೪.೦೨ |
| ೮. ಉ.ಕನ್ನಡ | ೨೫.೩೧ | ೦.೬೩೯ | ೬೮.೪೮ |
| ೯. ಚಿಕ್ಕಮಗಳೂರು | ೩೩.೯೦ | ೦.೬೩೬ | ೬೪.೪೭ |
| ೧೦. ಮೈಸೂರು | ೩೮.೨೬ | ೦.೬೦೫ | ೫೫.೮೧ |
| ೧೧. ಮಂಡ್ಯ | ೩೮.೭೦ | ೦.೫೯೩ | ೫೧.೬೨ |
| **೩. ಮಧ್ಯಮ ಸ್ಥಿತಿಯ ಜಿಲ್ಲೆಗಳು (>ಶೇ. ೪೦ < ಶೇ. ೬೦)** | | | |
| ೧. ಚಿತ್ರದುರ್ಗ | ೫೨.೭೧ | ೦.೬೧೮ | ೫೪.೬೨ |
| ೨. ದಾವಣಗೆರೆ | ೫೭.೧೦ | ೦.೬೨೧ | ೫೮.೪೫ |
| ೩. ಕೋಲಾರ | ೪೦.೪೫ | ೦.೬೧೩ | ೫೨.೮೧ |
| ೪. ಶಿವಮೊಗ್ಗ | ೫೨.೬೦ | ೦.೬೬೧ | ೬೭.೨೪ |
| ೫. ಚಾಮರಾಜನಗರ | ೫೯.೯೪ | ೦.೫೫೭ | ೪೩.೦೨ |
| ೬. ಬೆಳಗಾವಿ | ೫೦.೮೯ | ೦.೬೩೫ | ೫೨.೫೩ |
| ೭. ಧಾರವಾಡ | ೪೯.೭೯ | ೦.೬೨೬ | ೬೨.೨೦ |
| ೮. ಬೀದರ್ | ೫೯.೩೩ | ೦.೫೭೨ | ೫೦.೦೧ |

*ಮೂಲ: ಕರ್ನಾಟಕ ಸರ್ಕಾರ, ೨೦೦೬, ಸೆನ್ಸ್‌ನ್‌ಆಫ್ ಇಂಡಿಯಾ : ೨೦೦೧*

ಕೋಷ್ಟಕ - ೧ರಲ್ಲಿ ಎರಡು ವಿವರಗಳನ್ನು ನೀಡಲಾಗಿದೆ. ಮೊದಲನೆಯದು ಜಿಲ್ಲೆಯ ಒಟ್ಟು ಮಹಿಳಾ ದುಡಿಮೆಗಾರರಲ್ಲಿ ಕೃಷಿ ಕೂಲಿಕಾರ ಮಹಿಳೆಯರ ಪ್ರಮಾಣ. ಎರಡನೆಯದು ಜಿಲ್ಲಾವಾರು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ. ಯಾವ ಜಿಲ್ಲೆಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಶೇ. ೬೦ ಕ್ಕಿಂತ ಅಧಿಕವಾಗಿದೆಯೋ ಆ ಜಿಲ್ಲೆಗಳಲ್ಲಿ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವು ಕಡಿಮೆಯಿದೆ. ಗದಗ ಮತ್ತು ಬಳ್ಳಾರಿಗಳ ಅಪವಾದ ಬಿಟ್ಟರೆ ಉಳಿದ ೬ ಜಿಲ್ಲೆಗಳಲ್ಲಿ ಜಿಡಿಐಯು ೦.೬೦೦ರ ಒಳಗಿದೆ. ಯಾವ ಜಿಲ್ಲೆಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಅತ್ಯಂತ ಕಡಿಮೆಯಿದೆಯೋ ಅಂತಹ ಜಿಲ್ಲೆಗಳಲ್ಲಿ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವು ಅಧಿಕವಾಗಿದೆ. ಈ

ಬಗೆಯ ೧೧ ಜಿಲ್ಲೆಗಳ ಗುಂಪಿನ್ಲಿ ಮಂಡ್ಯವೊಂದನ್ನು ಬಿಟ್ಟರೆ ಉಳಿದ ೧೦ ಜಿಲ್ಲೆಗಳ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವು ೦.೬೦೦ ಕ್ಕಿಂತ ಅಧಿಕವಿದೆ. ಈ ಜಿಲ್ಲೆಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಶೇ. ೪೦ ಕ್ಕಿಂತ ಕಡಿಮೆಯಿದೆ.

ರಾಜ್ಯದಲ್ಲಿ ಎಂಟು ಜಿಲ್ಲೆಗಳು ಮಧ್ಯಮ ಅಭಿವೃದ್ಧಿ ಸ್ಥಿತಿಯಲ್ಲಿವೆ. ಈ ಜಿಲ್ಲೆಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಶೇ. ೬೦ಕ್ಕಿಂತ ಕಡಿಮೆಯಿದೆ ಮತ್ತು ಶೇ. ೪೦ ಕ್ಕಿಂತ ಅಧಿಕವಿದೆ. ಈ ಗುಂಪಿನ ಜಿಲ್ಲೆಗಳಲ್ಲಿ ಲಿಂಗ ಸಂಬಂಧಿ ಮಾನವ ಅಭಿವೃದ್ಧಿ ಸೂಚ್ಯಂಕವು ಮಧ್ಯಮ ಸ್ತಿತಿಯಲ್ಲಿದೆ. ಊಳಿಗಮಾನ್ಯ ಭೂಸಂಬಂಧಗಳಿಗೂ ಮತ್ತು ಲಿಂಗ ಸಂಬಂಧಿ ದುಸ್ಥಿತಿಗೂ ಸಂಬಂಧವಿರುವುದು ಮೇಲಿನ ವಿಶ್ಲೇಷಣೆಯಿಂದ ತಿಳಿದುಬರುತ್ತದೆ. ಕೋಷ್ಟಕದ ಕೊನೆಯ ಅಂಕಣದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ನೀಡಲಾಗಿದೆ. ಯಾವ ಜಿಲ್ಲೆಗಳಲ್ಲಿ ಕೃಷಿ ಕೂಲಿಕಾರ ಮಹಿಳೆಯರ ಪ್ರಮಾಣವು ಶೇ.೬೦ ಕ್ಕಿಂತ ಅಧಿಕವಾಗಿದೆಯೋ ಅಲ್ಲಿ ಮಹಿಳಾ ಸಾಕ್ಷರತೆಯು ಕಡಿಮೆಯಿದೆ. ಈ ಗುಂಪಿನ ಎಂಟು ಜಿಲ್ಲೆಗಳ ಪೈಕಿ ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಬಿಟ್ಟರೆ ಉಳಿದ ಆರು ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣವು ಶೇ. ೪೬ ರಿಂದ ಶೇ.೩೬ರ ಪರಿಧಿಯಲ್ಲಿದೆ.

ಆದರೆ ಕೃಷಿ ಕೂಲಿಕಾರ ಮಹಿಳೆಯರ ಪ್ರಮಾಣವು ಶೇ. ೪೦ಕ್ಕಿಂತ ಕಡಿಮೆಯಿರುವ ಎರಡನೆಯ ಗುಂಪಿನ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಸಾಮಾನ್ಯವಾಗಿ ಅಧಿಕವಾಗಿರುವುದನ್ನು ಕಾಣಬಹುದು. ಈ ಗುಂಪಿನಲ್ಲಿ ಮಂಡ್ಯ ಜಿಲ್ಲೆಯೊಂದನ್ನು ಬಿಟ್ಟರೆ ಉಳಿದಂತೆ ಸಾಕ್ಷರತಾ ಪ್ರಮಾಣವು ಶೇ. ೫೫ ಕ್ಕಿಂತ ಅಧಿಕವಿದೆ. (ರಾಜ್ಯ ಸರಾಸರಿ ಮಹಿಳಾ ಸಾಕ್ಷರತೆ ಶೇ. ೫೭.೪೫). ಮಧ್ಯಮಗತಿ ಜಿಲ್ಲೆಗಳನ್ನು ಒಳಗೊಂಡ ಮೂರನೆಯ ಗುಂಪಿನಲ್ಲಿ ಮಹಿಳೆಯರ ಸಾಕ್ಷರತೆಯು ಮಧ್ಯಮ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಊಳಿಗಮಾನ್ಯ ವ್ಯವಸ್ಥೆಗೂ ಮತ್ತು ಲಿಂಗ ಅಸಮಾನತೆಗು ನಡುವೆ ಸಂಬಂಧವಿರುವುದನ್ನು ಇದರಿಂದ ಕಂಡುಕೊಳ್ಳಬಹುದಾಗಿದೆ.

**ಅಭಿವೃದ್ಧಿ ರಾಜಕಾರಣ**

ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ರಾಜಕಾರಣದ ಸ್ವರೂಪವು ಬದಲಾಗಬೇಕು. ಪ್ರಾದೇಶಿಕ ಅಸಮಾನತೆಯ ಸಂಗತಿಯನ್ನು ಜನಸಮೂಹದ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಪ್ರಾದೇಶಿಕ ಅಸಮಾನತೆಯ ನಿವಾರಣೆಯಿಂದಾಗಿ ರಾಜ್ಯದಲ್ಲಿ ಹಿಂದುಳಿದಿರುವ ಜಿಲ್ಲೆಗಳಿಗೆ ತುಂಬಾ ಅನುಕೂಲ ಒದಗಿಬಿಡುತ್ತವೆ ಎಂದು ಭಾವಿಸುವ ಪರಿಯಿದೆ. ಇದು ನಿಜ. ಆದರೆ ಇದಕ್ಕೆ ಪ್ರತಿಯಾಗಿ ಪ್ರಾದೇಶಿಕ ಅಸಮಾನತೆ ನಿವಾರಣೆಯು ಯಾಕೆ ಮುಖ್ಯವೆಂದರೆ ಅದರ ಮೂಲಕ ರಾಜ್ಯದಲ್ಲಿ ಬಡತನದ ಪ್ರಮಾಣವನ್ನು ಕಡಿಮೆ ಮಾಡಬಹುದು. ಲಿಂಗ ಸಂಬಂಧಿ ಅಸಮಾನತೆಯನ್ನು ಕಡಿಮೆ ಮಾಡಬಹುದು. ಪರಿಶಿಷ್ಟರ ಬದುಕನ್ನು ಉತ್ತಮಪಡಿಸಬಹುದು (ಜಾವೇದ್ ಆಲಮ್ : ೧೯೮೪).

ಮೇಲ್ವರ್ಗವಾದಿ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಪರಿಭಾವಿಸಿಕೊಂಡಾಗ ಹಿಂದುಳಿದ ಪ್ರದೇಶಗಳಿಗೆ ಹೈಕೋರ್ಟು ಮುಖ್ಯವಾಗುತ್ತದೆ. ವಿಮಾನ ನಿಲ್ದಾಣಗಳು ಮುಖ್ಯವಾಗುತ್ತವೆ. ಸಿಈಟಿಯಲ್ಲಿ ಮೀಸಲಾತಿ ಆದ್ಯತೆಯಾಗಿ ಬಿಡುತ್ತದೆ. ಈ ಬಗೆಯ ಮೇಲ್ವರ್ಗವಾದಿ ಅಭಿವೃದ್ಧಿ ರಾಜಕಾರಣವನ್ನು ಬದಲಾಯಿಸಬೇಕಾಗಿದೆ. ಜನಸಮೂಹವಾದಿ ಅಭಿವೃದ್ಧಿ ರಾಜಕಾರಣವನ್ನು ರೂಪಿಸಬೇಕಾಗಿದೆ. ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮವೇ ಬದಲಾಗಬೇಕಾಗಿದೆ. ವರಮಾನದ ವರ್ಧನೆಯೇ ಅಭಿವೃದ್ಧಿಯೆಂಬ ವಿಚಾರ ಪ್ರಣಾಳಿಕೆಯನ್ನು ಕೈಬಿಟ್ಟು ಜನರ ಧಾರಣ ಸಾಮರ್ಥ್ಯದ ವರ್ಧನೆಯ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಆಹಾರ ಭದ್ರತೆ, ವಲಸೆಯ ನಿಯಂತ್ರಣ, ಲಿಂಗ ಸಂಬಂಧಿ ಸಮಾನತೆ ಮುಂತಾದವು ಅಭಿವೃದ್ಧಿ ರಾಜಕಾರಣದಲ್ಲಿ ಆದ್ಯತೆಯ ಸಂಗತಿಗಳಾಗಬೇಕು. ಅತ್ಯಂತ ತುರ್ತಾಗಿ ಅಭಿವೃದ್ಧಿಯು ಬೆಂಗಳೂರಾಭಿಮುಖವಾಗಿರುವುದನ್ನು

ತಲೆಕೆಳಗು ಮಾಡಬೇಕು. ಕೃಷ್ಣಕುಮಾರ್ ಕಲ್ಲೂರ ಹೇಳಿದಂತೆ ಬೆಂಗಳೂರು ಉತ್ತರಾಭಿಮುಖವಾಗಬೇಕು. ಈ ಬಗೆಯ ಅಭಿವೃದ್ಧಿ ರಾಜಕಾರಣದಿಂದ ರಾಜ್ಯದ ಹಿಂದುಳಿದ ಪ್ರದೇಶದ ಜಿಲ್ಲೆಗಳು ಚರಿತ್ರೆಯ ಭಾರದಿಂದ ಹೊರಬರುವುದು ಸಾಧ್ಯವಾಗುತ್ತದೆ.

ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಬಂಡವಾಳಶಾಹಿಯು ಹುಟ್ಟು ಹಾಕಿರುವ ಅಭಿವೃದ್ಧಿಗೆ ಸಂಬಂಧಿಸಿದ ಕೇಂದ್ರೀಕರಣ ಪ್ರಕ್ರಿಯೆಯನ್ನು ಜಾಗತೀಕರಣವು ಗಟ್ಟಿಗೊಳಿಸುವ ಸಾಧ್ಯತೆಯಿದೆ. ಈ ಪ್ರಕ್ರಿಯೆಯಲ್ಲಿ ಬೆಂಗಳೂರು ಉತ್ತರಾಭಿಮುಖವಾಗುವ ಬದಲು ಅದು ಜನರಿಂದ ದೂರವಾಗುವ ಪ್ರಕ್ರಿಯೆಗೆ ಒಳಗಾದಂತೆ ಕಾಣುತ್ತದೆ. ಅದು ರಾಜ್ಯದ ಹಿಂದುಳಿದ ತಾಲ್ಲೂಕುಗಳಾದ ದೇವದುರ್ಗ, ಜೇವರ್ಗಿ, ಸುರಪುರಗಳಿಗೆ ಅಭಿಮುಖವಾಗುವುದಕ್ಕೆ ಪ್ರತಿಯಾಗಿ ಅದು ಸಿಂಗಪುರವಾಗುವ ಪ್ರಕ್ರಿಯೆಗೆ ಪಕ್ಕಾಗಿ ಬಿಟ್ಟಿದೆ.

ಕರ್ನಾಟಕದ ಏಕೀಕರಣದ ಉದ್ದೇಶಗಳು ವಿಫಲವಾಗಿ ಬಿಟ್ಟಿದೆ. ರಾಜ್ಯದ ಅಭಿವೃದ್ಧಿಯೇನೋ ಉನ್ನತ ಮಟ್ಟಕ್ಕೇರಿದೆ. ಬೆಂಗಳೂರು ಸಿಂಗಪುರವಾಗುತ್ತಿದೆ. ಎಲ್ಲ ಜಿಲ್ಲೆಗಳು ವಿಮಾನ ನಿಲ್ದಾಣ ಕೇಳುವಂತಾಗಿದೆ. ಆದರೆ ರಾಜ್ಯದ ಹಿಂದುಳಿದ ಪ್ರದೇಶದಲ್ಲಿ ಜನರ ಬದುಕು ಜರ್ಜರಿತವಾಗಿ ಬಿಟ್ಟಿದೆ. ದುಡಿಮೆಯನ್ನು ಅರಸಿಕೊಂಡು ಬೆಂಗಳೂರಿಗೆ ವಲಸೆ ಬರುವ ಗುಲಬರ್ಗಾ, ರಾಯಚೂರು, ಬಾಗಲಕೋಟೆ, ಬಿಜಾಪುರ, ಕೊಪ್ಪಳ ಜಿಲ್ಲೆಯ ದುಡಿಮೆಗಾರರ ಬದುಕು ಅಲ್ಲಿನ ಕಟ್ಟಡಗಳ - ಬೃಹತ್ ಸೌಧಗಳ ಕುಸಿತಕ್ಕೆ ಸಿಕ್ಕು ಚಿಂದಿಯಾಗುತ್ತಿದೆ. ಇದು ನಿಲ್ಲಬೇಕು.

**ಒಣಭೂಮಿ ಬೇಸಾಯ**

ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ - ಸಾಮಾಜಿಕ ಸಂಗತಿಗಳನ್ನು ಚರ್ಚಿಸುವ ಸಂದರ್ಭದಲ್ಲಿ ಅಗತ್ಯವಾಗಿ ಪರಿಗಣಿಸಬೇಕಾದ ಸಂಗತಿಯೆಂದರೆ ಅಲ್ಲಿನ ಪ್ರತಿಕೂಲ ನೈಸರ್ಗಿಕ ಸನ್ನಿವೇಶ. ನಮ್ಮ ರಾಜ್ಯದಲ್ಲಿನ ಹಿಂದುಳಿದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ ಹಾಗೂ ಬಿಜಾಪುರ ಒಣಭೂಮಿ ಬೇಸಾಯವನ್ನು ಪ್ರಧಾನವಾಗಿ ಪಡೆದಿರುವ ಜಿಲ್ಲೆಗಳಾಗಿವೆ.[2]

ಹೈದರಾಬಾದ್ ನಿಜಾಮ ಸಂಸ್ಥಾನವನ್ನು ಭಾಷಾವಾರು ಮೂರು ಭಾಗಗಳಾಗಿ ವಿಭಜಿಸಿ ಮಹಾರಾಷ್ಟ್ರ (ಮರಾಠವಾಡ), ಆಂಧ್ರಪ್ರದೇಶ (ತೆಲಂಗಾಣ) ಮತ್ತು ಕರ್ನಾಟಕ (ಹೈದರಾಬಾದ್ - ಕರ್ನಾಟಕ) ರಾಜ್ಯಗಳಲ್ಲಿ ವಿಲೀನಗೊಳಿಸಲಾಯಿತು. ಹೀಗೆ ನಿಜಾಮ ಸಂಸ್ಥಾನದಿಂದ ವರ್ಗಾವಣೆಯಾಗಿ ಬೇರೆ ಬೇರೆ ರಾಜ್ಯಗಳಲ್ಲಿ ವಿಲೀನವಾದ ಪ್ರದೇಶಗಳೆಲ್ಲವೂ ಒಣಭೂಮಿ ಬೇಸಾಯ ಪ್ರಧಾನ ಪ್ರದೇಶಗಳಾಗಿವೆ. ರಾಜಸ್ಥಾನದಿಂದ ದಕ್ಷಿಣಾಭಿಮುಖವಾಗಿ ಹರಿದಿರುವ ಒಣಭೂಮಿ ಪ್ರದೇಶವು (ಸೆಮಿ ಅರಿಡ್ ರೀಜನ್ಸ್) ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯವರೆಗೆ ಹಬ್ಬಿದೆ. ಈ ಪ್ರದೇಶದಲ್ಲಿ ಬರುವ ಜಿಲ್ಲೆಗಳೆಲ್ಲವೂ ಸಂಬಂಧಿಸಿದ ರಾಜ್ಯಗಳಲ್ಲಿ ಹಿಂದುಳಿದ ಜಿಲ್ಲೆಗಳಾಗಿವೆ.

ಈಗಾಗಲೆ ತಿಳಿಸಿರುವಂತೆ ಹೈದರಾಬಾದ್ ನಿಜಾಮನ ಸಂಸ್ಥಾನವು ವಸಾಹತುಶಾಹಿ ಆಡಳಿತದ ಹಾಗೂ ಅಭಿವೃದ್ಧಿಯ ಅನುಕೂಲಗಳಿಂದ ವಂಚಿತವಾಗಿತ್ತು. ಈ ಪ್ರದೇಶದಲ್ಲಿ ನೀರಾವರಿ ಯೋಜನೆಗಳು ಬೆಳೆಯಲಿಲ್ಲ. ಬ್ರಿಟಿಷ್‌ವಸಾಹತುಶಾಹಿ ಆಡಳಿತದ ಪ್ರದೇಶಗಳು ನೀರಾವರಿ ಸೌಲಭ್ಯವನ್ನು ವ್ಯಾಪಕವಾಗಿ ಪಡೆದುಕೊಂಡವು.

‘ಬರಗಾಲ - ಒಣಭೂಮಿ ಬೇಸಾಯ - ಹಿಂದುಳಿದಿರುವಿಕೆ’ - ಇವುಗಳ ನಡುವಣ ಸಂಬಂಧ ಕುರಿತಂತೆ ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಬಗ್ಗೆ ಚರ್ಚಿಸುವಾಗ ಮೇಲಿನ ಮೂರು

ಸಂಗತಿಗಳ ನಡುವಣ ಸಂಕೀರ್ಣ - ಸೂಕ್ಷ್ಮ ಸಂಬಂಧಗಳನ್ನು ಅವಶ್ಯವಾಗಿ ಪರಿಗಣಿಸಬೇಕಾಗುತ್ತದೆ. ಚರಿತ್ರೆಯ ಜೊತೆಗೆ ಸದರಿ ಪ್ರದೇಶಗಳು ಪ್ರತಿಕೂಲ ಪರಿಸರದ ಹೆಣಬಾರವನ್ನು ಹೆಗಲಿಗೇರಿಸಿಕೊಂಡಿವೆ.

**ಮೇಲ್ವರ್ಗವಾದಿ ಅಭಿವೃದ್ಧಿ ರಾಜಕಾರಣ**

ಪ್ರಸ್ತುತ ಪ್ರಬಂಧದಲ್ಲಿ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ, ಸಾಮಾಜಿಕ ಹಾಗೂ ನೈಸರ್ಗಿಕ ಮುಖಗಳನ್ನು ಗುರುತಿಸಲಾಗಿದೆ. ಇವುಗಳ ಜೊತೆ ಪ್ರಾದೇಶಿಕ ಅಸಮಾನತೆಯನ್ನು ಹುಟ್ಟು ಹಾಕುತ್ತಿರುವ ಮೇಲ್ವರ್ಗವಾದಿ - ಬಂಡವಾಳ ಶಾಹಿ ಅಭಿವೃದ್ಧಿ ರಾಜಕಾರಣದ ಪಾತ್ರವನ್ನು ನಾವು ಪರಿಗಣಿಸಬೇಕಾಗುತ್ತದೆ. ಗ್ರಾಮೀಣಕ್ಕೆ ಪ್ರತಿಯಾಗಿ ನಗರವನ್ನು, ಕೃಷಿಗೆ ಪ್ರತಿಯಾಗಿ ಉದ್ದಿಮೆಯನ್ನು, ಕೃಷಿಯೊಳಗೆ ಒಣಭೂಮಿ ಬೇಸಾಯಕ್ಕೆ ಪ್ರತಿಯಾಗಿ ನೀರಾವರಿಯನ್ನು, ಭೂರಹಿತ ಕೃಷಿ ಕೂಲಿಕಾರರಿಗೆ ಪ್ರತಿಯಾಗಿ ಭೂಮಾಲಿಕರನ್ನು ಓಲೈಸುವ ಅಭಿವೃದ್ಧಿ ರಾಜಕಾರಣದ ಪಾತ್ರವನ್ನು ಪ್ರಾದೇಶಿಕ ಅಸಮಾನತೆ ಕುರಿತ ಚರ್ಚೆಯಲ್ಲಿ ಪರಿಗಣಿಸಬೇಕಾಗುತ್ತದೆ.

ಅಭಿವೃದ್ಧಿ ರಾಜಕಾರಣವು ಯಾವಾಗಲೂ ಉಳ್ಳವರ ಪರವಾಗಿರುತ್ತದೆ ವಿನಾ ಉಳಿದವರ ಪರವಾಗಿರುವುದಿಲ್ಲ. ಅದು ಸಾಮಾನ್ಯವಾಗಿ ಪಟ್ಟಭದ್ರವನ್ನು ಒಲೈಸುತ್ತದೆ. ವಂಚಿತರನ್ನು, ಅಂಚಿನಲ್ಲಿರುವವರನ್ನು ಅದು ನಿರ್ಲಕ್ಷಿಸುತ್ತದೆ. ಅದೇ ಪ್ರಕಾರ ಅದು ಮುಂದುವರಿದ ಪ್ರದೇಶಕ್ಕೆ ಹೆಚ್ಚಿನ ಗಮನ ನೀಡುತ್ತದೆ ವಿನಾ ಹಿಂದುಳಿದ ಪ್ರದೇಶಕ್ಕೆ ಆದ್ಯತೆಯನ್ನು ನೀಡುವುದಿಲ್ಲ. ಹಿಂದುಳಿದ ಪ್ರದೇಶವನ್ನು ನಿರ್ಲಕ್ಷಿಸಿ ರಾಜಕಾರಣವನ್ನು ನಡೆಸಬಹುದು. ಆದರೆ ಮುಂದುವರಿದ ಪ್ರದೇಶದ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ರಾಜಕಾರಣ ನಡೆಸುವುದು ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಅಭಿವೃದ್ಧಿ ರಾಜಕಾರಣವು ಮೇಲ್ವರ್ಗವಾದಿಯಾಗಿರುತ್ತದೋ, ಪಟ್ಟಭದ್ರರನ್ನು ಮಾತ್ರ ಒಲೈಸುತ್ತಿರುತ್ತದೊ ಅಲ್ಲಿಯವರೆಗೆ ಹಿಂದುಳಿದ ಪ್ರದೇಶಗಳಿಗೆ ನ್ಯಾಯ ದೊರೆಯುವುದು ಸಾಧ್ಯವಿಲ್ಲ.

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಸರ್ಕಾರಗಳು ಯಾವತ್ತೂ ಗಂಭೀರವಾಗಿ ಪರಿಗಣಿಸಲಿಲ್ಲ. ಪ್ರಾದೇಶಿಕ ಅಭಿವೃದ್ಧಿ ನೀತಿ ಎಂಬುದನ್ನು ಇನ್ನೂ ಅದಕ್ಕೆ ರೂಪಿಸಲು ಸಾಧ್ಯವಾಗಲಿಲ್ಲ. ಈ ರೀತಿಯಲ್ಲಿ ಹಿಂದುಳಿದ ಪ್ರದೇಶದ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿಯೂ ರಾಜಕಾರಣ ನಡೆಸಬಹುದು ಎಂಬುದೇ ನಮ್ಮ ಮುಂದಿರುವ ದುರಂತ. ಅಲ್ಲದಿದ್ದರೆ ೫೦ ವರ್ಷಗಳ ನಂತರವೂ ಸಾಕ್ಷರತೆ ಪ್ರಮಾಣ ಶೇ. ೫೦ ದಾಟಿದ್ದರೂ ಅಂತಹ ತಾಲ್ಲೂಕುಗಳಲ್ಲಿ ಶಾಸಕರು ४ ಬಾರಿ - ೫ ದಾರಿ, ೬ ಬಾರಿ ಆಯ್ಕೆಯಾಗುತ್ತಾರೆಂದರೆ ಇನ್ನೇನು ಅರ್ಥ? ಈ ಬಗೆಯ ಅಭಿವೃದ್ಧಿ ರಾಜಕಾರಣವನ್ನು ಬದಲಾಯಿಸಬೇಕಾಗುತ್ತದೆ. ಅದನ್ನು ಬಡವರ, ಅಂಚಿನಲ್ಲಿರುವವರ, ವಂಚಿತರ, ಮಹಿಳೆಯರ ಪರವಾಗುವಂತೆ ಪುನಾರೂಪಿಸಬೇಕಾಗುತ್ತದೆ. ಆಗ ಪ್ರಾದೇಶಿಕ ಅಸಮಾನತೆಯ ನಿವಾರಣೆಯು ಆದ್ಯತೆಯ ಸಂಗತಿಯಾಗುತ್ತದೆ.

**ಸಾರಾಂಶ**

ಪ್ರಸ್ತುತ ಪ್ರಬಂಧದಲ್ಲಿ ಪ್ರಾದೇಶಿಕ ಅಸಮಾನತೆಯ ಬೃಹತ್‌ಸ್ವರೂಪವನ್ನು ಹಿಡಿದಿಡುವುದಕ್ಕೆ ಪ್ರತಿಯಾಗಿ ಅದಕ್ಕೆ ಕಾರಣವಾಗಿರುವ ಸಾಮಾಜಿಕ - ಚಾರಿತ್ರಿಕ ಸಂಗತಿಗಳನ್ನು ಗುರುತಿಸುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಲಾಗಿದೆ. ಸಾಮಾಜಿಕ - ರಾಜಕೀಯ ಪರಿವರ್ತನೆಯ ನೆಲೆಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಪರಿಭಾವಿಸಿ ಕೊಳ್ಳುವ ಪ್ರಯತ್ನ ಇಲ್ಲಿದೆ. ಜನಸಮೂಹದ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಪರಿಚಯಿಸುವ ದೃಷ್ಟಿಕೋನ ಇಲ್ಲಿದೆ.

**ಆಕರಸೂಚಿ**

೧. ಅಮರ್ತ್ಯಸೇನ್, ೧೯೯೦, 'ಜೆಂಡರ್ ಆಂಡ್ ಕೋಆಪರೇಟಿವ್ ಕಾನ್ಫ್ಲಿಕ್ಟ್'. ಇಲ್ಲಿ ಐರ್ನಿ ಟಿಂಕರ್
(ಸಂ.) **ಪರ್‌ಸಿಸ್ಟಿಂಗ್ ಇನೀಕ್ವಾಲಿಟೀಸ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್.

೨. ಕರ್ನಾಟಕ ಸರ್ಕರ, ೨೦೦೬, **ಕರ್ನಾಟಕದ ಮಾನವ ಅಭಿವೃದ್ಧಿ ವರದಿ ೨೦೦೫,** ಯೋಜನಾ ಇಲಾಖೆ, ಬೆಂಗಳೂರು.

೩. ಕರ್ನಾಟಕ ಸರ್ಕಾರ, ೨೦೦೨, **ಪ್ರಾದೇಶಿಕ ಅಸಮತೋಲನ ಅಧ್ಯಯನದ ಉನ್ನತಾಧಿಕಾರ ಸಮಿತಿಯ ಅಂತಿಮ ವರದಿ,** ಯೋಜನಾ ಇಲಾಖೆ, ಬೆಂಗಳೂರು

೪. ಕರ್ನಾಟಕ ಸರ್ಕಾರ, ೧೯೯೯, **ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್** (ಅವಿಭಜಿತ) ಸಂ.ಆರ್. ಮುನಿಸ್ವಾಮಿ, ಕರ್ನಾಟಕ ಗ್ಯಾಸೆಟಿಯರ್ ಕಚೇರಿ, ಬೆಂಗಳೂರು

೫. ಕರ್ನಾಟಕ ಸರ್ಕಾರ, ೧೯೭೦, **ಎಕಾನಾಮಿಕ್ ಡೆವಲಪ್‌ಮೆಂಟ್ ಆಫ್ ಮೈಸೂರು :" ೧೯೫೬ – ೧೯೬೯,** ಬ್ಯುರೋ ಆಫ್ ಇಕಾನಾಮಿಕ್ಸ್ ಆಂಡ್ ಸ್ಟಾಟಿಸ್ಟಿಕ್ಸ್, ಬೆಂಗಳೂರು.

೬. ಕೃಷ್ಣ ಕೊಲ್ಹಾರ ಕುಲಕರ್ಣಿ, ೧೯೯೪, **ಕೃಷ್ಣಕುಮಾರ್ ಕಲ್ಲೂರ್ ಸಾಹಿತ್ಯ ವಾಚಿಕೆ,** ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ಪು. ೧೫೧ - ೨೦೮.

೭. ಕೃಷ್ಣಕುಮಾರ್ ಕಲ್ಲೂರು, ೧೯೫೬, **ಕನ್ನಡ ನಾಡಿನ ಸಾರಿಗೆ – ಸಂಪರ್ಕ,** ಸಂ. ಚಂದ್ರಶೇಖರ ಟಿ.ಆರ್., ಪ್ರಸಾರಾಮಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ (೨೦೦)

೮. ಕೋದಂಡರಾವ್ ಎಂ., ೨೦೦೭, 'ಮೂವ್‌ಮೆಂಟ್ ಫಾರ್‌ತೆಲಂಗಾಣ ಸ್ಟೇಟ್ ; ಎ ಸ್ಟ್ರಗಲ್ ಫಾರ್‌ಅಟಾನಮಿ', **ಇಕಾನಾಮಿಕ್ ಆಂಡ್ ಪೊಲಿಟಿಕಲ್‌ವೀಕ್ಲಿ,** ಜನವರಿ ೧೩, ಪು. ೯೦ - ೯೪

೯. ಕಾರ್ಲ್‌ಮಾರ್ಕ್ಸ್ ಮತ್ತು ಫೆಡ್ರಿಕ್ ಏಂಜೆಲ್ಸ್, ೧೯೫೯, **ಆನ್ ಕಲೋನಿಯಲಿಸಮ್,** ಪ್ರೊಗ್ರೆಸ್ ಪಬ್ಲಿಷರ್ಸ್, ಮಾಸ್ಕೋ, ಪು.೮೨

೧೦. ಗುನ್ನಾರ್ ಮಿರ್ಡಾಲ್, ೧೯೫೬, **ಎಕಾನಾಮಿಕ್ ಥಿಯರಿ ಆಂಡ್ ಅಂಡರ್ ಡೆವಲಪ್ಡ್ ರೀಜನ್ಸ್,** ಮಿಥ್ಯಿಯನ್ ಅಂಡ್ ಕಂಪನಿ, ಲಂಡನ್.

೧೧. ಚಂದ್ರಶೇಖರ ಟಿ.ಆರ್., ೨೦೦೪, 'ಮಹಿಳಾ ವಿಶ್ವವಿದ್ಯಾಲಯ : ಒಂದು ಚರ್ಚೆ', **ಮಹಿಳಾ ಅಧ್ಯಯನ,** ಸಂ.೫, ಸಂ.೧ ಮತ್ತು ೨, ಪು. ೧೮೩ - ೪೧೯೦.

೧೨. ಚಂದ್ರಶೇಖರ ಟಿ.ಆರ್., ೨೦೦೫, 'ಅಸ್ಪೃಶ್ಯತೆ ಆರ್ಥಿಕತೆ ಮತ್ತು ಅಭಿವೃದ್ಧಿ', **ಅಭಿವೃದ್ಧಿ ಅಧ್ಯಯನ,** ಸಂ.೪, ಸಂ.೨, ಪು. ೬ - ೩೪

೧೩. ಮಿಹಿರ್ ಶಹಾ ಮತ್ತು ಇತರರು, 'ಡ್ರೈಲ್ಯಾಂಡ್ಸ್‌ಆಫ್ ಇಂಡಿಯಾ', ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

೧೪. ಮುಧೋಳ್‌ಕರ್ ಎ., ಮತ್ತು ವೋರಾ ಆರ್., ೧೯೮೪, 'ರೀಜನಲಿಸಮ್ ಇನ್ ಮಹಾರಾಷ್ಟ್ರ'. ಇಲ್ಲಿ ಆಕ್ತರ್ ಮಜೀದ್ (ಸಂ). **ರೀಜನಲಿಸಮ್ : ಡೆವಲಪ್‌ಮೆಂಟಲ್ ಟೆನ್ಷನ್ ಇನ್ ಇಂಡಿಯಾ,** ಕಾಸ್ಮೊ ಪಬ್ಲಿಕೇಶನ್ಸ್, ನವದೆಹಲಿ. ಪು. ೮೯ - ೧೧೪.

೧೫. ರಾಜ್‌ಕೃಷ್ಣ, ೧೯೯೦, 'ದಿ ಸೆಂಟರ್ ಆಂಡ್ ಫೆರಿಫೆರಿ : ಇಂಟರ್‌ಸ್ಟೇಟ್ ಡಿಸ್ ಪ್ಯಾರಿಟೀಸ್ ಇನ್ ಇಕಾನಾಮಿಕ್‌ಡೆವಲಪ್‌ಮೆಂಟ್.' ಇಲ್ಲಿ ಚೌಧರಿ, ಶಾಮಗಮ್‌ಕರ್ ಆಂಡ್ ಅರಬಿಂದೋ ಘೋಷ್

(ಸಂ). **ದಿ ಇಂಡಿಯನ್ ಇಕಾನಮಿ ಆಂಡ್ ಇಟ್ಸ್ ಪರ್‌ಫಾರ್‌ಮೆನ್ಸ್ ಸಿನ್ಸ್ ಇಂಡಿಪೆಂಡೆನ್ಸ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು. ೪೩ - ೮೫.

೧೬. ಸುಬ್ರಮಣ್ಯಮ್‌ಎಂ., ೧೯೮೪, 'ಇನ್‌ಟ್ರಾರೀಜನಲಿಸಮ್ ಇನ್ ಆಂಧ್ರ ಪ್ರದೇಶ್'. ಇಲ್ಲಿ ಅಕ್ತರ್ ಮಜೀದ್
(ಸಂ.) **ರೀಜನಲಿಸಮ್: ಡೆವಲಪ್‌ಮೆಂಟಲ್‌ಟೆನ್ಷನ್ ಇನ್ ಇಂಡಿಯಾ,** ಕಾಸ್ಮೋ ಪಬ್ಲಿಕೇಶನ್ಸ್, ನವದೆಹಲಿ, ಪು. ೧೧೫ - ೧೩೨.

೧೭. ಸ್ವಾಮಿ ರಮಾನಂದತೀರ್ಥ, ೧೯೭೭, **ಹೋರಾಟದ ನೆನಪುಗಳು,** ಅನು: ಸೂರ್ಯನಾಥ ಕಾಮತ್, ಗೀತಾ ಬುಕ್ ಹೌಸ್, ಮೈಸೂರು.

೧೮. ಶೇಷಾದ್ರಿ ಬಿ., ೧೯೯೧, **ಇಂಡಸ್ಟ್ರಿಯಲೈಸೇಶನ್ ಆಂಡ್ ರೀಜನಲ್ ಡೆವಲಪ್‌ಮೆಂಟ್,** ಕಾನ್ಸೆಪ್ಟ್‌ಪಬ್ಲಿಶಿಂಗ್ ಕಂಪನಿ, ನವದೆಹಲಿ.

ಶೇಷಾದ್ರಿ ಬಿ., ೨೦೦೨, 'ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ : ಕರ್ನಾಟಕದ ಅನುಭವಗಳು' **ಅಭಿವೃದ್ಧಿ ಅಧ್ಯಯನ,** ಸಂ.೧, ಸಂ.೨, ಪು.೩೩ - ೬೩.

[1] ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಲಿಂಗಸಂಬಂಧಗಳು ಹಾಗೂ ಮಹಿಳೆಯರ ಬವಣೆ ಹೇಗಿದೆ ಎಂಬುದಕ್ಕೆ ನೋಡಿ : ಚಂದ್ರಶೇಖರ ಟಿ.ಆರ್., ೨೦೦೪.

[2] ಒಣಭೂಮಿ ಬೇಸಾಯದ ಬಗ್ಗೆ ನೋಡಿ : ಮಿಹಿರ್ ಷಹಾ ಮತ್ತು ಇತರರು.

# ೮. ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ (ಗುಲಬರ್ಗಾ ವಿಭಾಗವನ್ನು ಅನುಲಕ್ಷಿಸಿ) (೧)

**ಪ್ರಸ್ತಾವನೆ**

ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯೆಂಬುದು ಕರ್ನಾಟಕವನ್ನು ೧೯೫೬ರಿಂದಲೂ ಕಾಡುತ್ತಿರುವ ಬಾಲಗ್ರಹ ಪೀಡೆಯಾಗಿದೆ. ಕರ್ನಾಟಕದ ಹುಟ್ಟಿನೊಂದಿಗೆ ಜನ್ಮ ತಳೆದ ರೋಗ ಇದಾಗಿದೆ. ವಾಸ್ತವವಾಗಿ ಇದು ಕರ್ನಾಟಕಕ್ಕೆ ವಿಶಿಷ್ಟವಾದ ಸಮಸ್ಯೆಯೇನಲ್ಲ. ಆಂಧ್ರಪ್ರದೇಶದಲ್ಲಿ (ತೆಲಂಗಾಣ), ಮಹಾರಾಷ್ಟ್ರದಲ್ಲಿ (ಮರಾಠವಾಡ), ಗುಜರಾತಿನಲ್ಲಿ (ಕಚ್ ಪ್ರದೇಶ) ಒರಿಸ್ಸಾದಲ್ಲಿ (ಪಶ್ಚಿಮಭಾಗ) ಇಂತಹ ಸಮಸ್ಯೆಯಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಚಾರಿತ್ರಿಕವಾಗಿ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಇಂದು ನಾವು ಯಾವ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ವರ್ಗೀಕರಿಸುತ್ತಿದ್ದೇವೆಯೋ ಅವು ಒಂದು ರೀತಿಯ ಚಾರಿತ್ರಿಕ ವಿಕಲತೆಗೆ ಒಳಗಾಗಿರುವುದು ಸ್ಪಷ್ಟವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತುಶಾಹಿ ಆಡಳಿತಕ್ಕೆ ಮತ್ತು ಅಭಿವೃದ್ಧಿಗೆ ಒಳಪಡದಿದ್ದ ಪ್ರದೇಶಗಳೇ ಇಂದು ಹಿಂದುಳಿದಿರುವ ಸ್ಥಿತಿಯಲ್ಲಿವೆ.

ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದ ಉಗ್ರ ಚಳುವಳಿಯ ಕಾರಣವಾಗಿ ೧೯೫೩ ರಲ್ಲಿ ಆಂಧ್ರ ಪ್ರಾಂತವನ್ನು ರಚಿಸಲಾಯಿತು. ಆದರೆ ತೆಲುಗು ಮಾತನಾಡುವ ಒಂದು ಪ್ರದೇಶವು (ತೆಲಂಗಾಣ) ಹೈದರಾಬಾದ್ ನಿಜಾಮ ಸಂಸ್ಥಾನದಲ್ಲಿತ್ತು. ರಾಜ್ಯ ಪುನರ್ವಿಂಗಡಣಾ ಸಮಿತಿಯ ಶಿಫಾರಸ್ಸಿಗನುಗುಣವಾಗಿ ೧೯೫೬ ರಲ್ಲಿ ನಿಜಾಮ ಪ್ರಾಂತವನ್ನು ಮೂರು ಭಾಗಗಳನ್ನಾಗಿ ವಿಭಜಿಸಲಾಯಿತು. ನಿಜಾಮ್ ಪ್ರಾಂತದಿಂದ ಮರಾಠಿ ಮಾತನಾಡುವ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಯಿತು. ಹೀಗೆ ಮಹಾರಾಷ್ಟ್ರಕ್ಕೆ ನಿಜಾಮ ಪ್ರಾಂತದಿಂದ ವರ್ಗಾವಣೆಯಾದ ಪ್ರದೇಶವನ್ನು ಇಂದು ಇಲ್ಲಿ ಮರಾಠವಾಡ ಪ್ರದೇಶವೆಂದು ಕರೆಯಲಾಗುತ್ತಿದೆ. ನಿಜಾಮ್ ಪ್ರಾಂತದಿಂದ ಕನ್ನಡ ಮಾತನಾಡುವ ಪ್ರದೇಶವನ್ನು ಕರ್ನಾಟಕಕ್ಕೆ ವರ್ಗಾಯಿಸಲಾಯಿತು. ಅದನ್ನು ಕರ್ನಾಟಕದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯಲಾಗುತ್ತಿದೆ. ತೆಲುಗು ಮಾತನಾಡುವ ತೆಲಂಗಾಣ ಪ್ರದೇಶವನ್ನು ಆಂಧ್ರದ ಜೊತೆ ವಿಲೀನಗೊಳಿಸಲಾಯಿತು. ಹೀಗೆ ನಿಜಾಮ್ ಪ್ರಾಂತದಿಂದ ವರ್ಗಾವಣೆಯಾದ ಪ್ರದೇಶಗಳೆಲ್ಲವೂ ಸಂಬಂಧಿಸಿದ ರಾಜ್ಯಗಳಲ್ಲಿ ಹಿಂದುಳಿದ ಪ್ರದೇಶಗಳಾಗಿ ಇಂದಿಗೂ ದುಸ್ಥಿತಿ ಅನುಭವಿಸುತ್ತಿವೆ. ಮಹಾರಾಷ್ಟ್ರದಲ್ಲಿ ಪಶ್ಚಿಮ ಕರಾವಳಿ ಪ್ರದೇಶ, ಪೂನಾ - ಮುಂಬೈ ಪ್ರದೇಶವು ವಸಾಹತು ಶಾಹಿ ಆಡಳಿತದ ಅನುಕೂಲ ಪಡೆದುಕೊಂಡಿದ್ದರಿಂದ ೧೯೫೬ ರಲ್ಲಿ ಅವುಗಳ ಅಭಿವೃದ್ಧಿ ಸ್ಥಿತಿಯು ವಸಾಹತುಶಾಹಿ ಆಡಳಿತದ ಅನುಕೂಲ ಪಡೆಯದ ಮರಾಠವಾಡ ಪ್ರದೇಶಕ್ಕಿಂತ ಉತ್ತಮವಾಗಿತ್ತು. ಅದೇ ರೀತಿ ವಸಹಾತುಶಾಹಿ ಆಡಳಿತದ ಅನುಕೂಲ ಪಡೆದ ಆಂಧ್ರ ಕರಾವಳಿ ಪೂವಭಾಗವು ಪಶ್ಚಿಮದ ತೆಲಂಗಾಣ ಪ್ರದೇಶಕ್ಕಿಂತ ಅಭಿವೃದ್ಧಿಯಲ್ಲಿ ಮುಂದುವರಿದಿತ್ತು. ಕರ್ನಾಟಕದಲ್ಲಿ ವಸಹಾತುಶಾಹಿ ಆಡಳಿತದ ಅನುಕೂಲ ಪಡೆದಿದ್ದ ಮುಂಬೈ ಕರ್ನಾಟಕ ಹಾಗೂ ಪ್ರಗತಿಗಾಮಿ ಮೈಸೂರು ರಾಜ ಸಂಸ್ಥಾನ ಪ್ರದೇಶಗಳು ಹೈದರಾಬಾದ್ ಕರ್ನಾಟಕದ ಪ್ರತದೇಶಕ್ಕಿಂತ ಅಭಿವೃದ್ಧಿಯಲ್ಲಿ ಉತ್ತಮ ಸ್ಥಿತಿಯಲ್ಲಿದ್ದವು. ಈ ಬಗೆಯ ಚಾರಿತ್ರಿಕ ವಿಕಲತೆಯಿಂದಾಗಿ, ಬಾಷೆಗೆ ಸಂಬಂಧಿಸಿದ ತಬ್ಬಲಿತನದಿಂದಾಗಿ ಮತ್ತು ಪುರೋಗಾಮಿ ಆಡಳಿತದ ಕೊರತೆಯಿಂದಾಗಿ ಹೈದರಾಬಾದ್ - ಕರ್ನಾಟಕ ಪ್ರದೇಶವು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿ ಕರ್ನಾಟಕದೊಳಗೆ ವಿಲೀನಗೊಂಡಿತು. ಒಂದು ದೇಶ/ಪ್ರದೇಶ ಉನ್ನತ ಮಟ್ಟದ ಅಭಿವೃದ್ಧಿಯನ್ನು ಸಾಧಿಸಿಕೊಂಡರೆ ಪ್ರಾದೇಶಿಕ ಅಸಮಾನತೆಯೆಂಬುದು ಸಮಾನತೆಯಾಗಿ ಪರಿವರ್ತನೆಯಾಗಲು ತೀವ್ರಗತಿಯ ಅಭಿವೃದ್ಧಿಯೊಂದೇ ಪರಿಹಾರವೆಂದು ಸರ್ಕಾರಗಳು ನಂಬಿರುವಂತೆ ಕಾಣುತ್ತದೆ. ಇಂತಹ ನಂಬಿಕೆಗಳು ನಿಜವಾಗುವುದಕ್ಕೆ ಪ್ರತಿಯಾಗಿ ಹುಸಿಯಾಗಿವೆ. ಅಭಿವೃದ್ಧಿಯು ತೀವ್ರಗತಿಯನ್ನು ಗಳಿಸಿಕೊಂಡಂತೆ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಪ್ರಜ್ಞಾಪೂರ್ವಕ ಪ್ರಯತ್ನವಿಲ್ಲದಿದ್ದರೆ ಸಮಾನತೆಗೆ ಪ್ರತಿಯಾಗಿ ಅಸಮಾನತೆ ತೀವ್ರಗೊಳ್ಳುವುದು ಖಚಿತ. ಪ್ರಾದೇಶಿಕವಾಗಿ ಅಭಿವೃದ್ಧಿ ಸಂಬಂಧಿ ಸಮಾನತೆ ಸಾಧಿಸಿಕೊಳ್ಳಲು ಪ್ರಜ್ಞಾಪೂರ್ವಕ ಪ್ರಯತ್ನ ಬೇಕು. ಇಲ್ಲಿ ಸರ್ಕಾರದ ಪಾತ್ರವು ನಿರ್ಣಾಯಕವಾಗಿರುತ್ತದೆ. ಅಭಿವೃದ್ಧಿಯಿಂದ ವಂಚಿತವಾದ ಜನವರ್ಗಗಳಿರುತ್ತವೆ. ಅದರಿಂದ ವಂಚಿತವಾದ ಪ್ರದೇಶಗಳಿರುತ್ತದೆ. ಅಂತಹ ಜನವರ್ಗಗಳಿಗೆ ಹಾಗೂ ಪ್ರದೇಶಗಳಿಗೆ ಅಭಿವೃದ್ಧಿಯ ಫಲ ಹರಿಯುವಂತೆ ಮಾಡಬೇಕಾಗುತ್ತದೆ. ಅಭಿವೃದ್ಧಿಯ ಸಹಜ ಗುಣವೆಂದರೆ ಅದು ಕೆಲವು ಪ್ರಶಸ್ತಿ ಪ್ರದೇಶಗಳಲ್ಲಿ ಮಡುಗಟ್ಟಿಕೊಳ್ಳುವುದಾಗಿದೆ. ಅದು ಮಡುಗಟ್ಟಿಕೊಳ್ಳುವುದಕ್ಕೆ ಪ್ರತಿಯಾಗಿ ಪಸರಿಸುವಂತೆ ಮಾಡುವ ಕ್ರಮಗಳು ತುಂಬಾ ಮುಖ್ಯ.

ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯಿರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ಪ್ರಕಟಿಸಿರುವ 'ಕರ್ನಾಟಕ ಮಾನವ ಅಭಿವೃದ್ಧಿ ಕುರಿತ ಎರಡು ವರದಿಗಳು (೧೯೯೯ ಮತ್ತು ೨೦೦೬) ಇಂದು ನಮ್ಮ ಮುಂದಿದೆ. ಕೇಂದ್ರ ಯೋಜನಾ ಆಯೋಗ ೨೦೦೬ ರಲ್ಲಿ ಪ್ರಕಟಿಸಿರುವ 'ಕರ್ನಾಟಕ ಅಭಿವೃದ್ಧಿ ವರದಿ' ನಮ್ಮ ಮುಂದಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಕುರಿತಂತೆ ಅಧ್ಯಯನ ನಡೆಸಲು ಸರ್ಕಾರವು ೨೦೦೦ ರಲ್ಲಿ ನೇಮಿಸಿದ್ದ ಉನ್ನತಾಧಿಕಾರ ಸಮಿತಿ (ಡಾ. ಎಂ. ನಂಜುಂಡಪ್ಪ ಸಮಿತಿ) ವರದಿ (೨೦೦೨) ನಮಗೀಗ ಲಭ್ಯವಿದೆ. ಜನಗಣತಿ ವರದಿಗಳಿವೆ. ಇವೆಲ್ಲವೂ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯಿರುವುದನ್ನು ದೃಢಪಡಿಸಿದೆ.

ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಹೇಗೆ? ರಾಜ್ಯದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಳ್ಳಾರಿ, ಬಿಜಾಪುರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಚಾಮರಾಜನಗರ, ಬಾಗಲಕೋಟೆ ಇವುಗಳ ಅಭಿವೃದ್ಧಿ ಮಟ್ಟವು ರಾಜ್ಯದ ಅಭಿವೃದ್ಧಿ ಮಟ್ಟಕ್ಕೆ ಸಮನಾಗುವಂತೆ

ಮಾಡಲು ಏನು ಮಾಡಬೇಕು? ಒಂದೇ ರಾಜ್ಯದಲ್ಲಿ ಶೇ. ೪೦ ರಷ್ಟು ಸಾಕ್ಷರತೆಯಿರುವ ತಾಲ್ಲೂಕುಗಳು ಹಾಗೂ ಶೇ.೮೦ ರಷ್ಟು ಸಾಕ್ಷರತೆಯಿರುವ ತಾಲ್ಲೂಕುಗಳು ಒಟ್ಟಿಗೆ ಇರುವುದು ಹೇಗೆ ಸಾಧ್ಯ? ತಲಾ ಆದಾಯ ಒಂದು ಜಿಲ್ಲೆಯಲ್ಲಿ ರೂ. ೪೦,೦೦೦ ಮತ್ತೊಂದು ಜಿಲ್ಲೆಯಲ್ಲಿ ರೂ. ೧೩,೦೦೦ ದಷ್ಟಿರುವುದು ಸಾಧ್ಯವೆ? ಭೂರಹಿತ ದಿನಗೂಲಿಗಳ ಪ್ರಮಾಣ ಹಿಂದುಳಿದ ಜಿಲ್ಲೆಗಳಲ್ಲಿ ಶೇ. ೪೦ ರಷ್ಟಿದ್ದರೆ ಮುಂದುವರಿದ ಜಿಲ್ಲೆಗಳಲ್ಲಿ ಅದು ಶೇ. ೨೦ ರಷ್ಟಿದೆ. ಸಮಾನತೆಗೆ ಬದ್ಧವಾದ ಸಮಾಜದಲ್ಲಿ ಇಂತಹ ಅಂತರ ಅಸಮಾನತೆಗಳನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಈ ಬಗ್ಗೆ ಉನ್ನತಾಧಿಕಾರ ಸಮಿತಿಯ ವರದಿ ನಮಗೆ ಮಾರ್ಗಸೂಚಿಯಾಗಿದೆ. ಅದರ ವಿವಿಧ ಆಯಾಮಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ. ಬಹಳ ಮುಖ್ಯವಾಗಿ ರಾಜ್ಯದ ಬಹಳ ಹಿಂದುಳಿದಿರುವ ಗುಲಬರ್ಗಾ ವಿಭಾಗದ ಐದು ಜಿಲ್ಲೆಗಳ ಅಭಿವೃದ್ಧಿ ಸ್ಥಿತಿಗತಿಯನ್ನು ವರದಿ ಹೇಗೆ ಗುರುತಿಸದೆ? ಅದರ ಪರಿಹಾರಕ್ಕೆ ಅದು ಸೂಚಿಸಿರುವ ಕಾಯಕಲ್ಪ ಯಾವ ಬಗೆಯದು? ಇಂತಹ ಸಂಗತಿಗಳನ್ನು ರಾಜ್ಯದ ಹಿಂದುಳಿದ ಜಿಲ್ಲೆಗಳಿಗೆ ಸೇರಿದವರು ಮತ್ತು ಸೇರದವರು - ಹೀಗೆ ಎಲ್ಲರೂ ನಾವು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಈ ವರದಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಈ ವರದಿಯ ಆಧಾರದ ಮೇಲೆ ಹಿಂದುಳಿದ ಗುಲಬರ್ಗಾ ವಿಭಾಗಕ್ಕೆ ಸಂಬಂಧಿಸಿದಂತೆ ನಾವು ನ್ಯಾಯವನ್ನು ಒತ್ತಾಯಿಸಬಹುದಾಗಿದೆ. ಈ ಒಂದು ಉದ್ದೇಶದಿಂದ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಈ ಪ್ರಬಂಧದಲ್ಲಿ ಪ್ರಸ್ತಾವನೆ ಬಿಟ್ಟು ಐದು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಉನ್ನತಾಧಿಕಾರಿ ಸಮಿತಿ ವರದಿಯ ಸ್ಥೂಲ ವಿವರವನ್ನು ನೀಡಲಾಗಿದೆ. ಈ ವರದಿಯ ವಿಶಿಷ್ಟ ಲಕ್ಷಣಗಳನ್ನು ಇಲ್ಲಿ ಗುರುತಿಸಲಾಗಿದೆ. ಪ್ರಾದೇಶಿಕ ಅಸಮಾನತೆಯ ಸ್ವರೂಪವನ್ನು ವರದಿಯು ಹಿಡಿದಿಟ್ಟಿರುವ ನೆಲೆಗಳನ್ನು ಇಲ್ಲಿ ಅನಾವರಣ ಮಾಡಲಾಗಿದೆ. ಎರಡನೆಯ ಭಾಗದಲ್ಲಿ ವರದಿಯನ್ನು ಮುಖ್ಯ ಆಕರವನ್ನಾಗಿಟ್ಟುಕೊಂಡು ಗುಲಬರ್ಗಾ ವಿಭಾಗದ ಐದು ಜಿಲ್ಲೆಗಳು ಹಾಗೂ ಮೂವತ್ತೊಂದು ತಾಲ್ಲೂಕುಗಳ ಅಭಿವೃದ್ಧಿ, ದುಸ್ಥಿತಿ ಸ್ವರೂಪವನ್ನು ವಿವರಿಸಲಾಗಿದೆ. ಉನ್ನತಾಧಿಕಾರ ಸಮಿತಿ ರೂಪಿಸಿರುವ ಸೂಚ್ಯಂಕದ ಜೊತೆ ಮಾನವ ಅಭಿವೃದ್ಧಿ ಸೂಚ್ಯಂಕ, ವರಮಾನದ ವಿವರ, ದುಡಿಯುವ ವರ್ಗದ ಹಂಚಿಕೆ ಮುಂತಾದ ಸಂಗತಿಗಳನ್ನು ಇಲ್ಲಿ ಚರ್ಚೆಗೆ ಬಳಸಿಕೊಳ್ಳಲಾಗಿದೆ. ಪ್ರಬಂಧದ ಮೂರನೆಯ ಭಾಗದಲ್ಲಿ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಗಳನ್ನು ಗುಲಬರ್ಗಾ ವಿಭಾಗವನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಉನ್ನತಾಧಿಕಾರ ಸಮಿತಿಯ ಬಹುಮುಖ್ಯ ಶಿಫಾರಸ್ಸಾದ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯ ವಿವರ ಹಾಗೂ ಅನುದಾನ ಹಂಚಿಕೆಗೆ ಸಮಿತಿ ರೂಪಿಸಿರುವ ಸಂಚಯಿತ ದುಸ್ಥಿತಿ ಸೂಚ್ಯಂಕದ ಲೆಕ್ಕಾಚಾರವನ್ನು ಇಲ್ಲಿ ವಿವರಿಸಲಾಗಿದೆ.

ಐದನೆಯ ಭಾಗದಲ್ಲಿ ಗುಲಬರ್ಗಾ ವಿಭಾಗದ ಅಭಿವೃದ್ಧಿಗೆ ಸಂಬಂಧಿಸಿದಂತೆ, ದುಸ್ಥಿತಿ ನಿವಾರಣೆಗೆ ಸಂಬಂಧಿಸಿದಂತೆ, ಸಾಕ್ಷರತೆ - ಶಿಕ್ಷಣ ಕುರಿತಂತೆ ಏನು ಮಾಡಬಹುದು, ಏನು ಮಾಡಬೇಕು ಎಂಬುದನ್ನು ಕುರಿತಂತೆ ಚರ್ಚಿಸಲಾಗಿದೆ. ಈ ಪ್ರಬಂಧವನ್ನು ಮೂಲವಾಗಿಟ್ಟುಕೊಂಡು ಗುಲಬರ್ಗಾ ವಿಭಾಗದ ಜನತೆ ತಮ್ಮ ತಮ್ಮನೆಲೆಗಳಲ್ಲಿ ಏನು ಮಾಡಬಹುದು - ಮಾಡಬೇಕು ಎಂಬುದರ ಬಗ್ಗೆ ಯೋಚಿಸಬಹುದು. ಗುಲಬರ್ಗಾ ವಿಭಾಗದಲ್ಲಿ ಅಭಿವೃದ್ಧಿ ಕುರಿತಂತೆ, ಪ್ರಾದೇಶಿಕ ಅಸಮಾತೆ ಕುರಿತಂತೆ, ದುಸ್ಥಿತಿ ಕುರಿತಂತೆ, ಹಿಂದುಳಿದಿರುವಿಕೆ ಬಗ್ಗೆ ಒಂದು ಬಗೆಯ ಜಾಗೃತಿಯನ್ನು ಉಂಟು ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಇದೊಂದು ಬಗೆಯ ಕ್ರಿಯಾತ್ಮಕ ಸಂಶೋಧನೆಯ ಸ್ವರೂಪದ ಪ್ರಬಂಧವಾಗಿದೆ. ಈ ಪ್ರಬಂಧದಲ್ಲಿ ಅಧ್ಯಯನದಿಂದ ಕಂಡುಕೊಂಡ ತಥ್ಯಗಳಿವೆ ಹಾಗೂ ಪ್ರಾಯೋಗಿಕವಾಗಿ ಏನು ಮಾಡಬಹುದು ಎಂಬುದರ ಬಗ್ಗೆ ಸ್ಥೂಲ ವಿವರಗಳಿವೆ.

ಭಾಗ ೧

**ಉನ್ನತಾಧಿಕಾರಿ ಸಮಿತಿ ವರದಿ – ಒಂದು ಸ್ಥೂಲನೋಟ**

ಪ್ರಾದೇಶಿಕ ಅಸಮಾನತೆಯನ್ನು ಕುರಿತಂತೆ ಅಧ್ಯಯನ ನಡೆಸಿ ಅದರ ನಿವಾರಣೆಗೆ ಯೋಜನೆಯೊಂದನ್ನು ರೂಪಿಸಿಕೊಡುವ ಉದ್ದೇಶದಿಂದ ೨೦೦೦ ದಲ್ಲಿ ಕರ್ನಾಟಕ ಸರ್ಕಾರವು ಡಾ. ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದಲ್ಲಿ ಉನ್ನತಾಧಿಕಾರ

ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯು ಎರಡು ವರ್ಷಗಳ ಕಾಲ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಸಮಸ್ಯೆಯನ್ನು ಅಧ್ಯಯನ ಮಾಡಿ, ೨೦೦೨ ರಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು - ಬೃಹತ್ ವರದಿಯನ್ನು ಸಲ್ಲಿಸಿತು. ಒಟ್ಟಿ ೩೪ ಅಧ್ಯಾಯಗಳಲ್ಲಿ ಹಾಗೂ ಸಾವಿರ ಪುಟಗಳಲ್ಲಿ ವರದಿ ಹರಡಿಕೊಂಡಿದೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು, ಹಿಂದುಳಿದಿರುವ ಪ್ರದೇಶಗಳನ್ನು ಗುರುತಿಸುವುದೇ ತುಂಬಾ ಕ್ಲಿಷ್ಟವಾದ ಸಂಗತಿಯಾಗಿದೆ. ಕೇಂದ್ರ ಸರ್ಕಾರ ಹಾಗೂ ದೇಶದ ವಿವಿಧ ಪ್ರಾಂತಗಳು ನೇಮಿಸಿರುವ ಸಮಿತಿಗಳು ವಿವಿಧ ರೀತಿಯಲ್ಲಿ ಹಿಂದುಳಿದಿರುವಿಕೆಯನ್ನು ಗುರುತಿಸಲು ಪ್ರಯತ್ನಿಸಿವೆ. ಹಿಂದುಳಿದಿರುವಿಕೆ ಹಾಗೂ ಪ್ರಾದೇಶಿಕ ಅಸಮಾನತೆಗಳು ಒಂದೇ ನಾಣ್ಯದ ಎರಡು ಮುಖಗಳಂತೆ. ಒಂದು ಮತ್ತೊಂದಕ್ಕೆ ಕಾರಣವಾಗುವ, ಪರಿಣಾಮವಾಗುವ ಸಾಧ್ಯತೆಯಿದೆ. ಬಹಳ ಕುತೂಹಲಕರ ಸಂಗತಿಯೆಂದರೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಪ್ರೋತ್ಸಾಹಿಸುವ ಸಿದ್ಧಾಂತಗಳು ನಮ್ಮ ಮುಂದಿವೆ. ಏಕೆಂದರೆ ಪ್ರಶಸ್ತವಾದ, ಸಂಪನ್ಮೂಲಗಳಿಂದ ಸಮೃದ್ಧವಾದ ಪ್ರದೇಶಗಳು ಅಭಿವೃದ್ಧಿ ಹೊಂದಿದರೆ ಅದರ ಲಾಭ ಪ್ರಸರಣಾ ಪರಿಣಾಮವಾಗಿ ಹಿಂದುಳಿದ, ಸಂಪನ್ಮೂಲ ಕೊರತೆ ಎದುರಿಸುವ ಪ್ರದೇಶಗಳಿಗೂ ಲಭ್ಯವಾಗುತ್ತದೆ ಎನ್ನಲಾಗಿದೆ. ಈಗಾಗಲೇ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ, ಮೂಲಸೌಲಭ್ಯಗಳು ಲಭ್ಯವಿರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಸುಲಭ. ಆದ್ದರಿಂದ ಮೊದಲು ಅವು ಅಭಿವೃದ್ಧಿ ಸಾಧಿಸಕೊಳ್ಳಲಿ, ಒಮ್ಮೆ ಅಲ್ಲಿ ಅಭಿವೃದ್ಧಿಯ ಮಟ್ಟ ಹಾಗೂ ಗತಿ ಉನ್ನತವಾಗಿಬಿಟ್ಟರೆ, ಪ್ರಾದೇಶಿಕ ಅಸಮಾನತೆಯು ಪ್ರಸರಣಾ ಪರಿಣಾಮವಾಗಿ ನಿವಾರಣೆಯಾಗಿ ಬಿಡುತ್ತದೆ ಎಂದು ಸೈದ್ಧಾಂತಿಕವಾಗಿ ವಾದಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಹಾಗೆ ನಡೆದ ನಿದರ್ಶನಗಳು ನಮಗೆ ದೊರೆಯುವುದಿಲ್ಲ.

**ಅಭಿವೃದ್ಧಿ ಘಟಕ – ತಾಲ್ಲೂಕು**

ನಮ್ಮ ಸಂದರ್ಭದಲ್ಲಿ ಅಭಿವೃದ್ಧಿ ಮತ್ತು ದುಸ್ಥಿತಿಯ ಮಾಪನಕ್ಕೆ ಜಿಲ್ಲೆಯನ್ನು ಘಟಕವನ್ನಾಗಿ ಬಳಸುತ್ತಾ ಬರಲಾಗಿದೆ. ಆದರೆ ನೀತಿ - ನಿರೂಪಣೆ ದೃಷ್ಟಿಯಿಂದ ತಾಲ್ಲೂಕು ಅಭಿವೃದ್ಧಿ ಘಟಕವಾಗಿ ಸೂಕ್ತವಾದುದು ಎಂಬ ಸಂಗತಿ ಇಂದು ದೃಢವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಉನ್ನತಾಧಿಕಾರ ಸಮಿತಿಯು ಅಭಿವೃದ್ಧಿ - ದುಸ್ಥಿತಿ ಅಳೆಯಲು ತಾಲ್ಲೂಕನ್ನು ಘಟಕವನ್ನಾಗಿ ಬಳಸಲು ತೀರ್ಮಾನಿಸಿತು.

ಅಭಿವೃದ್ಧಿ - ದುಸ್ಥಿತಿಯನ್ನು ಅಳೆಯಲು ಸಮಿತಿಯು ಐದು ವಲಯಗಳಿಗೆ ಸಂಬಂಧಿಸಿ ೩೫ ಸೂಚಿಗಳನ್ನು ಆಯ್ಕೆ ಮಾಡಿಕೊಂಡಿತು. ಅದರ ವಿವರ ಇಲ್ಲಿದೆ.

**ಕೃಷಿ ಮತ್ತು ತತ್ಸಂಬಂಧಿ ವಲಯ**

೧. ಒಟ್ಟು ಸಾಗುವಳಿ ಪ್ರದೇಶದಲ್ಲಿ ನಿವ್ವಳ ಸಾಗುವಳಿ ಪ್ರದೇಶ
೨. ಒಟ್ಟು ಸಾಗುವಳಿ ಪ್ರದೇಶದಲ್ಲಿ ಆಹಾರ ಬೆಳಗಳ ಪ್ರದೇಶ
೩. ಒಟ್ಟು ಸಾಗುವಳಿ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶ
೪. ಒಟ್ಟು ಸಾಗುವಳಿ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳ ಪ್ರದೇಶ
೫. ಒಟ್ಟು ಸಾಗುವಳಿ ಪ್ರದೇಶದಲ್ಲಿ ನಿವ್ವಳ ನೀರಾವರಿ ಪ್ರದೇಶ
೬. ಪ್ರತಿ ಹೆಕ್ಟೇರಿನಲ್ಲಿ ರಾಸಾಯನಿಕ ಗೊಬ್ಬರ (ಎನ್‌ಪಿಕೆ) ಬಳಕೆ ಪ್ರಮಾಣ
೭. ಪ್ರತಿ ಸಾವಿರ ಹೆಕ್ಟೇರು ಸಾಗುವಳಿ ಪ್ರದೇಶದಲ್ಲಿನ ಟ್ರಾಕ್ಟರ್‌ಗಳ ಸಂಖ್ಯೆ

೮. ಪ್ರತಿ ಲಕ್ಷ ಗ್ರಾಮೀಣ ಜನಸಂಖ್ಯೆಗೆ ಸಾಕು ಪ್ರಾಣಿಗಳ ಪ್ರಮಾಣ
೯. ಕೃಷಿಕ್ಷೇತ್ರದಲ್ಲಿನ ತಲಾ ಬ್ಯಾಂಕ್‌ಸಾಲ (ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳು)

**೨. ಕೈಗಾರಿಕೆ, ವ್ಯಾಪಾರ ಮತ್ತು ಹಣಕಾಸು ವಲಯ**

೧. ಪ್ರತಿ ಲಕ್ಷ ಜನಸಂಖ್ಯೆಗೆ ಕೈಗಾರಿಕಾ ಘಟಕಗಳ ಸಂಖ್ಯೆ
೨. ಒಟ್ಟು ದುಡಿಮೆಗಾರರಲ್ಲಿ ಕೈಗಾರಿಕಾ ದುಡಿಮೆಗಾರರ ಪ್ರಮಾಣ
೩. ಬ್ಯಾಂಕುಗಳ ತಲಾ ಅಭಿವೃದ್ಧಿ ಸಾಲ
೪. ಪ್ರತಿ ಲಕ್ಷ ಜನಸಂಖ್ಯೆಗೆ ಬ್ಯಾಂಕ್ ಶಾಖೆಗಳು
೫. ಪ್ರತಿ ಲಕ್ಷ ಜನಸಂಖ್ಯೆಗೆ ವ್ಯಾಪಾರ, ಹೋಟೆಲು ಮತ್ತು ಸಾರಿಗೆಯಲ್ಲಿ ನಿರತವಾದ ಉದ್ದಿಮೆ ಘಟಕಗಳ ಸಂಖ್ಯೆ.

**೩. ಮೂಲ ಸೌಲಭ್ಯಗಳು – ಆರ್ಥಿಕ**

೧. ಪ್ರತಿ ಲಕ್ಷ ಜನಸಂಖ್ಯೆಗೆ ಅಂಚೆ ಕಛೇರಿಗಳ ಸಂಖ್ಯೆ
೨. ಪ್ರತಿ ಲಕ್ಷ ಜನಸಂಖ್ಯೆಗೆ ದೂರವಾಣಿಗಳ ಸಂಖ್ಯೆ
೩. ಪ್ರತಿ ನೂರು ಕಿ.ಮೀ.ಗೆ ರಸ್ತೆಗಳ ಉದ್ದ (ಕಿ.ಮೀ.ಗಳಲ್ಲಿ)
೪. ಸರ್ವ ಋತು ರಸ್ತೆ ಸೌಲಭ್ಯ ಪಡೆದ ಹಳ್ಳಿಗಳ ಪ್ರಮಾಣ
೫. ಪ್ರತಿ ಸಾವಿರ ಚದರ ಕಿ.ಮೀ.ಗೆ ರೈಲು ಮಾರ್ಗಗಳ ಉದ್ದ (ಕಿ.ಮೀ.ಗಳಲ್ಲಿ)
೬. ಪ್ರತಿ ಲಕ್ಷ ಜನಸಂಖ್ಯೆಗೆ ಮೋಟಾರು ವಾಹನಗಳ ಸಂಖ್ಯೆ
೭. ಪ್ರತಿ ಲಕ್ಷ ಜನಸಂಖ್ಯೆಗೆ ಸಹಕಾರಿ ಸಾಲ ಸೊಸೈಟಿಗಳ ಸಂಖ್ಯೆ
೮. ಒಟ್ಟು ಹಳ್ಳಿಗಳು ಮತ್ತು ಜನವಸತಿಗಳಲ್ಲಿ ವಿದ್ಯುತ್‌ಸಂಪರ್ಕ ಪಡೆದ ಹಳ್ಳಿಗಳ ಮತ್ತು ವಸತಿಗಳ ಪ್ರಮಾಣ
೯. ಪ್ರತಿ ಲಕ್ಷ ಜನಸಂಖ್ಯೆಗೆ ನಿಯಂತ್ರಿತ ಪ್ರಧಾನ ಮತ್ತು ಉಪ ಮಾರುಕಟ್ಟೆಗಳ ಸಂಖ್ಯೆ.

**೪. ಮೂಲ ಸೌಲಭ್ಯಗಳು – ಸಾಮಾಜಿಕ**

೧. ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ವೈದ್ಯರ (ಖಾಸಗಿ ಮತ್ತು ಸರ್ಕಾರಿ) ಸಂಖ್ಯೆ
೨. ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಸರ್ಕಾರಿ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ
೩. ಸಾಕ್ಷರತಾ ಪ್ರಮಾಣ (ಶೇಕಡ)
೪. ಶಿಕ್ಷರು - ವಿದ್ಯಾರ್ಥಿಗಳ ಅನುಪಾತ (ಒಂದರಿಂದ ಹತ್ತನೆಯ ತರಗತಿ)
೫. ಶಾಲೆಯಿಂದ ಹೊರಗಿರುವ ೬ - ೧೪ ವಯೋಮಾನದ ಮಕ್ಕಳ ಪ್ರಮಾಣ
೬. ಪ್ರತಿಲಕ್ಷ ಜನಸಂಖ್ಯೆಗೆ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆ
೭. ನಲವತ್ತು ಅಥವಾ ಅದಕ್ಕಿಂತ ಅಧಿಕ ಲೀಟರುಗಳ ಕುಡಿಯುವ ನೀರಿನ ಸೌಲಭ್ಯ ಪಡೆದ ಜನವಸತಿಗಳ ಪ್ರಮಾಣ.

**೬. ಜನಸಂಖ್ಯಾ ಲಕ್ಷಣಗಳು**

೧. ಲಿಂಗ ಅನುಪಾತ

೨. ಒಟ್ಟು ಜನಸಂಖ್ಯೆಯಲ್ಲಿ ನಗರವಾಸಿಗಳ ಪ್ರಮಾಣ

೩. ಒಟ್ಟು ಜನಸಂಖ್ಯೆಯಲ್ಲಿ ಪ.ಜಾ ಮತ್ತು ಪ.ಪಂ.ಗಳ ಪ್ರಮಾಣ

೪. ಒಟ್ಟು ದುಡಿಮೆಗಾರರಲ್ಲಿ ಕೃಷಿಯೇತರ ದುಡಿಮೆಗಾರರ ಪ್ರಮಾಣ

೫. ಒಟ್ಟು ದುಡಿಮೆಗಾರರಲ್ಲಿ ಕೃಷಿ ದುಡಿಮೆಗಾರರ ಪ್ರಮಾಣ

**ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ**

ಈ ೩೫ ಸೂಚಿಗಳನ್ನು ಆಧರಿಸಿ ಕರ್ನಾಟಕದ ಪ್ರತಿಯೊಂದು ತಾಲ್ಲೂಕಿನ ಅಭಿವೃದ್ಧಿಯನ್ನು ಅಳೆಯಲು ಸಮಿತಿಯು ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವೆಂಬ ಮಾಪನವನ್ನು ರೂಪಿಸಿದೆ. S ಸೂಚ್ಯಂಕದ ಆಧಾರದ ಮೇಲೆ ಸಮಿತಿಯು ಅಭಿವೃದ್ಧಿ ಅಥವಾ ಹಿಂದುಳಿದಿರುವಿಕೆಯನ್ನು ಗುರುತಿಸಿದೆ.

೧. ಯಾವ ತಾಲ್ಲೂಕಿನ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ರಾಜ್ಯಮಟ್ಟದ ಅಭಿವೃದ್ಧಿ ಪ್ರಮಾಣ ಒಂದಕ್ಕಿಂತ ಅಧಿಕ ವಿರುತ್ತದೋ ಆ ತಾಲ್ಲೂಕನ್ನು ಅಭಿವೃದ್ಧಿ ಹೊಂದಿದ ತಾಲ್ಲೂಕ್ಕೊಂದು ತೀರ್ಮಾನಿಸಲಾಗಿದೆ.

೨. ಯಾವ ತಾಲೂಕಿನ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ರಾಜ್ಯ ಮಟ್ಟದ ಅಭಿವೃದ್ಧಿ ಪ್ರಮಾಣ ಒಂದಕ್ಕಿಂತ ಕಡಿಮೆಯಿದೆಯೋ ಆ ತಾಲ್ಲೂಕನ್ನು ಅಭಿವೃದ್ಧಿ ಹೊಂದದ ತಾಲ್ಲೂಕ್ಕೆಂದು ತೀರ್ಮಾನಿಸಲಾಗಿದೆ.

ಸಮಿತಿಯ ಪ್ರಕಾರ ರಾಜ್ಯದ ೧೭೫ ತಾಲ್ಲೂಕುಗಳಲ್ಲಿ ೬೧ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಾಗಿದ್ದರೆ, ೧೧೪ ಅಭಿವೃದ್ಧಿ ಹೊಂದದ ತಾಲ್ಲೂಕುಗಳಾಗಿವೆ.

**ಅಭಿವೃದ್ಧಿ ಹೊಂದದ ತಾಲ್ಲೂಕುಗಳ ವರ್ಗೀಕರಣ**

ಅಭಿವೃದ್ಧಿ ಹೊಂದದ ೧೧೪ ತಾಲ್ಲೂಕುಗಳನ್ನು ಅವುಗಳ ಹಿಂದುಳಿದಿರುವಿಕೆಯ ತೀವ್ರತೆಯನ್ನು ಪರಿಗಣಿಸಿ ಮೂರು ಗುಂಪುಗಳನ್ನಾಗಿ ಸಮಿತಿಯು ವರ್ಗೀಕರಿಸಿತು.

**೧. ಹಿಂದುಳಿದ ತಾಲ್ಲೂಕುಗಳು – ೩೫**

ಯಾವ ತಾಲ್ಲೂಕುಗಳ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ೦.೮೯ ರಿಂದ ೦.೯೯ ರವರೆಗೆ ಇದೆಯೋ ಅಂತಹ ತಾಲ್ಲೂಕುಗಳ 'ಹಿಂದುಳಿದಿರುವ' ತಾಲ್ಲೂಕುಗಳು. ಅಂತಹ ತಾಲ್ಲೂಕುಗಳ ಸಂಖ್ಯೆ ೩೫.

**೨. ಅತಿ ಹಿಂದುಳಿದ ತಾಲ್ಲೂಕುಗಳು – ೪೦**

ಯಾವ ತಾಲ್ಲೂಕುಗಳ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ೦.೮೦ ರಿಂದ ೦.೮೮ ರವರೆಗೆ ಇದೆಯೋ ಅಂತಹ ತಾಲ್ಲೂಕುಗಳನ್ನು 'ಅತಿ ಹಿಂದುಳಿದ' ತಾಲ್ಲೂಕುಗಳೆಂದು ಕರೆಯಲಾಗಿದೆ. ಅಂತಹ ತಾಲ್ಲೂಕುಗಳ ಸಂಖ್ಯೆ ೪೦.

**೩. ಅತ್ಯಂತ ಹಿಂದುಳಿದ ತಾಲ್ಲೂಕುಗಳು – ೩೯**

ಯಾವ ತಾಲ್ಲೂಕುಗಳ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ೦.೫೩ ರಿಂದ ೦.೭೯ ರವರೆಗೆ ಇದೆಯೋ ಅಂತಹ ತಾಲ್ಲೂಕುಗಳನ್ನು 'ಅತ್ಯಂತ ಹಿಂದುಳಿದ' ತಾಲ್ಲೂಕುಗಳೆಂದು ಸಮಿತಿ ಗುರುತಿಸಿದೆ. ಅಂತಹ ತಾಲ್ಲೂಕುಗಳ ಸಂಖ್ಯೆ ೩೯. ಒಟ್ಟು ಅಭಿವೃದ್ಧಿ ಹೊಂದದ ತಾಲ್ಲೂಕುಗಳ ೧೧೪ (೩೫+೪೦+೩೯).

**ತಾಲ್ಲೂಕುಗಳ ವಿಭಾಗವಾರು ಮತ್ತು ಜಿಲ್ಲಾವಾರು ಹಂಚಿಕೆ**

**ಕೋಷ್ಟಕ ೧**

| ವಿಭಾಗ ತಾಲ್ಲೂಕುಗಳು | ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಅತಿಹಿಂದುಳಿದ ತಾಲ್ಲೂಕುಗಳು | ಅತ್ಯಂತ ಹಿಂದುಳಿದ ತಾಲ್ಲೂಕುಗಳು | ಒಟ್ಟು ತಾಲ್ಲೂಕುಗಳು |
|---|---|---|---|---|---|
| **ಬೆಂಗಳೂರು ವಿಭಾಗ** | **೧೮** | **೯** | **೧೩** | **೧೧** | **೫೧** |
| ೧. ಬೆಂಗಳೂರು (ನ) | ೨ | ೧ | – | – | ೩ |
| ೨. ಬೆಂಗಳೂರು (ಗ್ರಾ) | ೪ | ೨ | – | ೨ | ೮ |
| ೩. ಚಿತ್ರದುರ್ಗ | ೧ | – | ೪ | – | ೬ |
| ೪. ದಾವಣಗೆರೆ | ೨ | – | ೨ | ೨ | ೬ |
| ೫. ಕೋಲಾರ | ೨ | ೫ | ೩ | ೧ | ೧೧ |
| ೬. ಶಿವಮೊಗ್ಗ | ೫ | ೧ | ೧ | – | ೭ |
| ೭. ತುಮಕೂರು | ೨ | – | ೩ | ೫ | ೧೦ |
| **ಮೈಸೂರು ವಿಭಾಗ** | **೨೨** | **೧೦** | **೧೦** | **೨** | **೪೪** |
| ೧. ಚಾಮಗರಾಜನಗರ | ೧ | – | ೨ | ೧ | ೪ |
| ೨. ಚಿಕ್ಕಮಗಳೂರು | ೫ | ೧ | ೧ | – | ೭ |
| ೩. ದಕ್ಷಿಣ ಕನ್ನಡ | ೫ | – | – | – | ೫ |
| ೪. ಹಾಸನ | ೩ | ೪ | ೧ | – | ೮ |
| ೫. ಕೊಡಗು | ೩ | – | – | – | ೩ |
| ೬. ಮಂಡ್ಯ | ೧ | ೩ | ೩ | – | ೭ |

| | | | | | |
|---|---|---|---|---|---|
| ೭. ಮೈಸೂರು | ೧ | ೨ | ೩ | ೧ | ೭ |
| ೮. ಉಡುಪಿ | ೩ | – | – | – | ೩ |
| **ದಕ್ಷಿಣ ಕರ್ನಾಟಕ** | **೪೦** | **೧೯** | **೨೩** | **೧೩** | **೯೫** |
| **ಬೆಳಗಾವಿ ವಿಭಾಗ** | **೧೮** | **೧೪** | **೧೨** | **೫** | **೪೯** |
| ೧. ಬಾಗಲಕೋಟೆ | ೩ | – | ೨ | ೧ | ೬ |
| ೨. ಬೆಳಗಾವಿ | ೩ | ೪ | ೩ | – | ೧೦ |
| ೩. ವಿಜಾಪುರ | – | ೧ | – | ೪ | ೫ |
| ೪. ಧಾರವಾಡ | ೨ | ೨ | ೧ | – | ೫ |
| ೫. ಗದಗ | ೨ | ೨ | ೧ | – | ೫ |
| ೬. ಹಾವೇರಿ | ೧ | ೩ | ೩ | – | ೭ |
| ೭. ಉತ್ತರ ಕನ್ನಡ | ೭ | ೨ | ೨ | – | ೧೧ |
| **ಗುಲಬರ್ಗಾ ವಿಭಾಗ** | **೩** | **೨** | **೫** | **೨೧** | **೩೧** |
| ೧. ಬಳ್ಳಾರಿ | ೨ | – | ೩ | ೨ | ೭ |
| ೨. ಬೀದರ್ | ೧ | – | – | ೪ | ೫ |
| ೩. ಗುಲಬರ್ಗಾ | – | ೧ | – | ೯ | ೧೦ |
| ೪. ಕೊಪ್ಪಳ | – | ೧ | ೧ | ೨ | ೪ |
| ೫. ರಾಯಚೂರು | – | – | ೧ | ೪ | ೫ |
| **ಉತ್ತರ ಕರ್ನಾಟಕ** | **೨೧** | **೧೬** | **೧೭** | **೨೬** | **೮೦** |
| **ಕರ್ನಾಟಕ** | **೬೧** | **೩೫** | **೪೦** | **೩೯** | **೧೭೫** |

ಈ ಕೋಷ್ಟಕದಿಂದ ತಿಳಿದುಬರುವ ಸಂಗತಿಗಳು ಹೀಗಿವೆ.

೧. ಇಡೀ ರಾಜ್ಯದಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಸಂಖ್ಯೆ ೬೧

೨. ಜಿಲ್ಲೆಯೊಂದರ ಎಲ್ಲ ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುವ ಜಿಲ್ಲೆಗಳ ಸಂಖ್ಯೆ ೩

೩. ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ೩೯

೪. ಇವುಗಳಲ್ಲಿ ಗುಲಬರ್ಗಾ ವಿಭಾಗಕ್ಕೆ ಸೇರಿದ ತಾಲ್ಲೂಕುಗಳ ಸಂಖ್ಯೆ ೨೧

೫. ಅತಿ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ೪೦

೬. ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ೩೫

೭. ಜಿಲ್ಲೆಯ ಎಲ್ಲ ತಾಲ್ಲೂಕುಗಳು ಹಿಂದುಳಿದಿರುವ ಸ್ಥಿತಿಯಲ್ಲಿರುವ ಜಿಲ್ಲೆಗಳ ಸಂಖ್ಯೆ ನಾಲ್ಕು. ಎಲ್ಲ ತಾಲ್ಲೂಕುಗಳು ಹಿಂದುಳಿದಿರುವ ಸ್ಥಿತಿಯಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿ ಮೂರು ಗುಲಬರ್ಗಾ ವಿಭಾಗಕ್ಕೆ ಸೇರಿವೆ. (ಗುಲಬರ್ಗಾ, ರಾಯಚೂರು, ಕೊಪ್ಪಳ).

ಈ ಎಲ್ಲ ವಿವರಗಳಿಂದ ತಿಳಿದುಬರುವ ಸಂಗತಿಯೆಂದರೆ ಏಕೀಕರಣದ ನಂತರ ಅಭಿವೃದ್ಧಿಯು ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಮಡುಗಟ್ಟಿಕೊಳ್ಳುತ್ತಾ ನಡೆದಿದ್ದರೆ ಉತ್ತರ ಕರ್ನಾಟಕ ಪ್ರದೇಶದ ಗುಲಬರ್ಗಾ ವಿಭಾಗದಲ್ಲಿ ದುಸ್ಥಿತಿಯು ಮಡುಗಟ್ಟಿಗೊಳ್ಳುತ್ತಾ ನಡೆದಿದೆ.

೧. ರಾಜ್ಯದ ಅಭಿವೃದ್ಧಿ ಹೊಂದಿದ ೬೧ ತಾಲ್ಲೂಕುಗಳಲ್ಲಿ ಗುಲಬರ್ಗಾ ವಿಭಾಗದ ಪಾಲು ಕೇವಲ ಶೇ. ೪.೯೨

೨. ರಾಜ್ಯದ ಅತ್ಯಂತ ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಗುಲಬರ್ಗಾ ವಿಭಾಗದ ಪಾಲು ಶೇ. ೫೩.೮೫

ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನದ ಉನ್ನತಾಧಿಕಾರ ಸಮಿತಿಯು ರಾಜ್ಯದಲ್ಲಿ ಪ್ರಥಮಬಾರಿಗೆ ಪ್ರಾದೇಶಿಕ ಅಸಮಾನತೆ - ಹಿಂದುಳಿದಿರುವಿಕೆ ಕುರಿತಂತೆ ವಿವರವಾದ ಮಾಹಿತಿಯನ್ನು, ನಿರ್ದಿಷ್ಟ ಮಾಪನವನ್ನು ಒದಗಿಸಿಕೊಟ್ಟಿದೆ. ಇದರ ಆಧಾರದ ಮೇಲೆ ಹಿಂದುಳಿದ ಪ್ರದೇಶಗಳ ಜನರು ಪ್ರಾದೇಶಿಕ ಸಮಾನತೆ ನ್ಯಾಯವನ್ನು ಒತ್ತಾಯಿಸಬಹುದಾಗಿದೆ.

ಭಾಗ ೨

**ಗುಲಬರ್ಗಾ ವಿಭಾಗದ ಅಭಿವೃದ್ಧಿ – ದುಸ್ಥಿತಿ ಆಯಾಮಗಳು**

ಚಾರಿತ್ರಿಕವಾಗಿ ಯಾವುದನ್ನು 'ಹೈದರಾಬಾದ್ ಕರ್ನಾಟಕ' ಪ್ರದೇಶವೆಂದು ಕರೆಯಲಾಗುತ್ತದೆಯೋ ಅದರಲ್ಲಿ ಗುಲಬರ್ಗಾ ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಮಾತ್ರ ಸೇರುತ್ತವೆ. ಆಡಳಿತದ ಅನುಕೂಲಕ್ಕೆ ಏಕೀಕರಣದ ಸಂದರ್ಭದಲ್ಲಿ ಮದರಾಸು ಪ್ರಾಂತದಿಂದ ವರ್ಗಾವಣೆಯಾಗಿ ಕರ್ನಾಟಕವನ್ನು ಸೇರಿದ ಬಳ್ಳಾರಿ ಜಿಲ್ಲೆಯನ್ನು ಗುಲಬರ್ಗಾ ವಿಭಾಗಕ್ಕೆ ಸೇರಿಸಲಾಯಿತು. ಬೀದರ್, ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಹೈದರಾಬಾದ್ ನಿಜಾಮನ ಪ್ರಾಂತ್ಯದ ಭಾಗಗಳಾಗಿದ್ದವು. ರಾಜ್ಯ ಪುನರ್ವಿಂಗಡಣೆ ಸಂದರ್ಭದಲ್ಲಿ ಹೈದರಾಬಾದ್ ನಿಜಾಮ ಸಂಸ್ಥಾನವನ್ನು ಭಾಷಾವಾರು ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಮರಾಠಿ ಮಾತನಾಡುವ ಮರಾಠವಾಡ ಪ್ರದೇಶವನ್ನು ಮಹಾರಾಷ್ಟ್ರಕ್ಕೆ, ತೆಲುಗು ಭಾಷೆ ಮಾತನಾಡುವ ತೆಲುಗೂ ಪ್ರದೇಶವನ್ನು ಆಂಧ್ರ ಪ್ರದೇಶಕ್ಕೆ ಮತ್ತು ಕನ್ನಡ ಮಾತನಾಡುವ ಪ್ರದೇಶವನ್ನು ಕರ್ನಾಟಕಕ್ಕೆ ವರ್ಗಾವಣೆ ಮಾಡಲಾಯಿತು. ಬಹಳ ಕುತೂಹಲದ ಸಂಗತಿಯೆಂದರೆ ನಿಜಾಮನ ಪ್ರಾಂತದಿಂದ ವರ್ಗಾವಣೆಯಾದ ಪ್ರದೇಶಗಳು ಆಯಾ ರಾಜ್ಯಗಳಲ್ಲಿ ಇಂದಿಗೂ 'ಹಿಂದುಳಿದ' ಪ್ರದೇಶಗಳಾಗಿ ಉಳಿದಿವೆ.

ಪ್ರಬಂಧದ ಪ್ರಸ್ತುತ ಭಾಗದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಅಧ್ಯಯನದ ಉನ್ನತಾಧಿಕಾರಿ ಸಮಿತಿಯ ವರದಿಯ ಹಿನ್ನೆಲೆಯಲ್ಲಿ ಗುಲಬರ್ಗಾ ವಿಭಾಗದ ಸ್ಥಿತಿಗತಿಯನ್ನು ವರಮಾನ, ಸಾಕ್ಷರತೆ, ದುಡಿಮೆಗಾರರ ಹಂಚಿಕೆ, ಲಿಂಗ ಸಂಬಂಧ, ಮಾನವ ಅಭಿವೃದ್ಧಿ ಮುಂತಾದ ಸಂಗತಿಗಳ ನೆಲೆಯಲ್ಲಿ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

# ೮. ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ (ಗುಲಬರ್ಗಾ ವಿಭಾಗವನ್ನು ಅನುಲಕ್ಷಿಸಿ) (೨)

**ಅಭಿವೃದ್ಧಿಯ ಮಟ್ಟ ಮತ್ತು ಗತಿ**

ಇಡೀ ರಾಜ್ಯದಲ್ಲಿ ಗುಲಬರ್ಗಾ ವಿಭಾಗವು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆಯೆಂದರೆ ಕಳೆದ ೫೦ ವರ್ಷಗಳಲ್ಲಿ (೧೯೫೬ – ೨೦೦೬) ಅಭಿವೃದ್ಧಿಯೇ ಅಲ್ಲಿ ನಡೆದಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ ಕಳೆದ ೫ ದಶಕಗಳ ಅವಧಿಯಲ್ಲಿ ಗುಲಬರ್ಗಾ ವಿಭಾಗದ ಜಿಲ್ಲೆಗಳು ಸಾಕಷ್ಟು ಅಭಿವೃದ್ಧಿ ಸಾಧಿಸಿಕೊಂಡಿವೆ. ಅನೇಕ ಸೂಚಿ – ಸೂಚ್ಯಂಕಗಳ ಮೂಲಕ ಇದನ್ನು ದೃಢಪಡಿಸಬಹುದಾಗಿದೆ. ಕೆಳಕಂಡ ಸೂಚಿಗಳನ್ನು ಬಳಿಸಿಕೊಂಡು ಗುಲಬರ್ಗಾ ವಿಭಾಗದ ಜಿಲ್ಲೆಗಳು ಸಾಧಿಸಿಕೊಂಡಿರುವ ಅಭಿವೃದ್ಧಿ ಮಟ್ಟವನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

೧. ಜಿಲ್ಲಾ ಒಟ್ಟು ವರಮಾನ ಮತ್ತು ತಲಾ ವರಮಾನ
೨. ಸಾಕ್ಷರತೆ
೩. ಕೃಷಿ ಅವಲಂಬನೆ ಮತ್ತು ಕೃಷಿ ಕಾರ್ಮಿಕರ ಪ್ರಮಾಣ
೪. ಮಾನವ ಅಭಿವೃದ್ಧಿ

**ಜಿಲ್ಲಾ ಒಟ್ಟು ವರಮಾನ ಮತ್ತು ತಲಾ ವರಮಾನ**

ಗುಲಬರ್ಗಾ ವಿಭಾಗಗಳ ಒಟ್ಟು ವರಮಾನ ಹಾಗೂ ತಲಾ ವರಮಾನವು ೧೯೯೩ – ೯೪ ರಿಂದ ೨೦೦೩ – ೦೪ರ ಅವಧಿಯಲ್ಲಿ ತೀವ್ರ ಏರಿಕೆಯಾಗಿದೆ. ಈ ಪ್ರದೇಶವು ಅಭಿವೃದ್ಧಿಯನ್ನು ಸಾಧಿಸಿಕೊಂಡಿದೆ. ಆದರೆ ರಾಜ್ಯಮಟ್ಟದ ಅಭಿವೃದ್ಧಿಗೆ ಸಾಪೇಕ್ಷವಾಗಿ ಇದರ ಅಭಿವೃದ್ಧಿ ತುಬ ಮಂದಗತಿಯದ್ದಾಗಿದೆ.

ಗುಲಬರ್ಗಾ ವಿಭಾಗದ ಜಿಲ್ಲಾ ಒಟ್ಟು ವರಮಾನ ೧೯೯೩ – ೯೪ರಲ್ಲಿ ರೂ. ೫೬೬೪.೨೮ ಕೋಟಿಯಷ್ಟಿತ್ತು. ಇದು ೨೦೦೩ – ೦೪ ರಲ್ಲಿ ರೂ. ೧೯೧೧೭.೩೮ ಕೋಟಿಗೇರಿದೆ. ಇಲ್ಲಿನ ವರಮಾನದ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೨೩.೭೫. ಇದೇ ಅವಧಿಯಲ್ಲಿ ರಾಜ್ಯದ ಒಟ್ಟು ವರಮಾನವು ರೂ. ೪೧೧೦೭೯.೦೫ ಕೋಟಿಯಿಂದ ರೂ. ೧೩೦೧೨೬.೬೧ ಕೋಟಿಗೇರಿದೆ. ಇಲ್ಲಿನ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೨೧.೬೮.

ರಾಜ್ಯದ ವರಮಾನದಲ್ಲಿ ಗುಲಬರ್ಗಾ ವಿಭಾಗದ ವರಮಾನದ ಪಾಲು ೧೯೯೩ – ೯೪ ರಲ್ಲಿ ಶೇ. ೧೩.೭೯ ರಷ್ಟಿತ್ತು. ಇದು ೨೦೦೩ – ೦೪ ರಲ್ಲಿ ಶೇ. ೧೪ – ೬೯ ರಷ್ಟಕ್ಕೇರಿದೆ. ಆದರೆ ರಾಜ್ಯದ ಜನಸಂಖ್ಯೆಯಲ್ಲಿ ಗುಲಬರ್ಗಾ ವಿಭಾಗದ ಪಾಲು ಸರಿಸುಮಾರು ಶೇ. ೧೮ ರಷ್ಟಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಗುಲಬರ್ಗಾ ವಿಭಾಗವು ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲನ್ನು ವರಮಾನಕ್ಕೆ ಸಂಬಂಧಿಸಿದಂತೆ ಪಡೆದಿದೆ. ಇದರ ಪ್ರಮಾಣದಲ್ಲಿ ತೀವ್ರ ಏರಿಕೆ ಕಂಡುಬಂದಿಲ್ಲ. ಕಳೆದ ೧೦ ವರ್ಷಗಳಲ್ಲಿ ಅದರ ಪಾಲು ಶೇ. ೧೩.೭೯ ರಿಂದ ಶೇ. ೧೪.೬೯ ಕ್ಕೇರಿದೆ.

ಗುಲಬರ್ಗಾ ವಿಭಾಗದ ತಲಾ ವರಮಾನವು ೧೯೯೩ – ೯೪ ರಿಂದ ೨೦೦೩ – ೦೪ರ ಅವಧಿಯಲ್ಲಿ ರೂ. ೬೬೪೧.೫೦ ರೂ. ೧೭೩೮೯ ಕ್ಕೇರಿದೆ (ಚಾಲ್ತಿಬೆಲೆ). ಇಲ್ಲಿನ ವಾರ್ಷಿಕ ಏರಿಕೆ ಪ್ರಮಾಣ ಶೇ. ೧೯.೬೪. ಇದೇ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ತಲಾ ವರಮಾನವು ರೂ. ೮೭೦೬ ರಿಂದ ರೂ. ೨೩೮೫೯ ಕ್ಕೇರಿದೆ. ಇದರ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೧೭.೪೧. ಎರಡೂ ಕಾಲಘಟ್ಟಗಳಲ್ಲಿ ಗುಲಬರ್ಗಾ ವಿಭಾಗದ ತಲಾ ವರಮಾನವು ರಾಜ್ಯಮಟ್ಟದ ತಲಾ ವರಮಾನಕ್ಕಿಂತ ಕೆಳಮಟ್ಟದಲ್ಲಿದೆ.

ಗುಲಬರ್ಗಾ ವಿಭಾಗದ ತಲಾ ವರಮಾನವು ೧೯೯೩ – ೯೪ ರಲ್ಲಿ ರಾಜ್ಯಮಟ್ಟದಲ್ಲಿನ ತಲಾ ವರಮಾನದ ಶೇ. ೭೬.೨೯ ರಷ್ಟಿತ್ತು. ಇದು ೨೦೦೩ – ೦೪ ರಲ್ಲಿ ಶೇ. ೮೨.೫೨ ರಷ್ಟಾಗಿದೆ. ಅಂದರೆ ಈ ಪ್ರದೇಶದ ತಲಾ ವರಮಾನದಲ್ಲಿ ಸಾಪೇಕ್ಷ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ.

ಒಟ್ಟಾರೆಯಾಗಿ ಗುಲಬರ್ಗಾ ವಿಭಾಗ ಅಭಿವೃದ್ಧಿಯಾಗುತ್ತಿದೆ. ಆದರೆ ರಾಜ್ಯಮಟ್ಟಕ್ಕೆ ಸಾಪೇಕ್ಷವಾಗಿ ಅದರ ಅಭಿವೃದ್ಧಿ ತೃಪ್ತಿಕರವಾಗಿಲ್ಲ. ಈ ದೃಷ್ಟಿಯಿಂದ ಸರ್ಕಾರವು ಗುಲಬರ್ಗಾ ವಿಭಾಗದ ಅಭಿವೃದ್ಧಿಗೆ ತೀವ್ರ ಗಮನ ನೀಡಬೇಕಾದ ಅಗತ್ಯವಿದೆ.

**ಸಾಕ್ಷರತೆ**

ಸಾಕ್ಷರತೆ ವಿಷಯದಲ್ಲಿ ಗುಲಬರ್ಗಾ ವಿಭಾಗದ ಸ್ಥಿತಿ ಅತ್ಯಂತ ಹೀನಾಯವಾಗಿದೆ. ನಿಜವಾದ ಸಮಸ್ಯೆ ಇಲ್ಲಿದೆ. ಇಲ್ಲಿ ಅತ್ಯಂತ ನಿಕೃಷ್ಟಕ್ಕೆ ಒಳಗಾಗಿರುವ ಅಭಿವೃದ್ಧಿ ಸೂಚಿಯೆಂದರೆ ಸಾಕ್ಷರತೆ.

ಇಡೀ ರಾಜ್ಯದಲ್ಲಿ ೨೦೦೧ ರಲ್ಲಿನ ಅಕ್ಷರಸ್ಥನ ಸಂಖ್ಯೆ ೩೦೪.೩೫ ಲಕ್ಷ. ಗುಲಬರ್ಗಾ ವಿಭಾಗದ ಅಕ್ಷರಸ್ಥರ ಸಂಖ್ಯೆ ೪೨.೫೭ ಲಕ್ಷ. ರಾಜ್ಯದ ಅಕ್ಷರಸ್ಥರಲ್ಲಿ ಗುಲಬರ್ಗಾ ವಿಭಾಗದ ಅಕ್ಷರಸ್ಥರ ಪಾಲು ೨೦೦೧ರಲ್ಲಿ ಶೇ. ೧೪. ರಾಜ್ಯದ ಜನಸಂಖ್ಯೆಯಲ್ಲಿ ಗುಲಬರ್ಗಾ ವಿಭಾಗವು ಶೇ. ೧೮ ರಷ್ಟು ಪಾಲು ಪಡೆದಿದ್ದರೆ, ರಾಜ್ಯದ ಅಕ್ಷರಸ್ಥರಲ್ಲಿ ಅದರ ಪಾಲು ಕೇವಲ ಶೇ. ೧೪.

ಇದಕ್ಕಿಂತ ಆತಂಕಕಾರಿ ಸಂಗತಿಯೆಂದರೆ ಲಿಂಗ ಸಂಬಂಧಿ ಸಾಕ್ಷರತಾ ಸೂಚ್ಯಂಕ, ರಾಜ್ಯಮಟ್ಟದಲ್ಲಿ ಲಿಂಗ ಸಂಬಂಧಿ ಸಾಕ್ಷರತಾ ಸೂಚ್ಯಂಕ ೭೨.೩೩ ರಷ್ಟಿದ್ದರೆ, ಗುಲಬರ್ಗಾ ವಿಭಾಗದಲ್ಲಿ ಅದರ ಸೂಚ್ಯಂಕ ಕೇವಲ ೬೦.೭೦.

ರಾಜ್ಯಮಟ್ಟದಲ್ಲಿ ೨೦೦೧ ರಲ್ಲಿ ಸಾಕ್ಷರತೆ ಪ್ರಮಾಣ ಶೇ. ೬೭.೦೪. ಆದರೆ ಗುಲಬರ್ಗಾ ವಿಭಾಗದಲ್ಲಿ ಸಾಕ್ಷರತೆಯು ಅತಿ ಹೆಚ್ಚು ಬೀದರ್‌ನಲ್ಲಿ ಶೇ. ೬೧.೭೮ ರಷ್ಟಿದ್ದರೆ, ಅತಿ ಕಡಿಮೆ ಶೇ. ೫೦ ರಷ್ಟು ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿದೆ. ಇವೆರಡೂ ಜಿಲ್ಲೆಗಳು ರಾಜ್ಯದಲ್ಲಿ ಅತಿ ಕಡಿಮೆ ಸಾಕ್ಷರತೆ ಜಿಲ್ಲೆಗಳಾಗಿವೆ. ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ತೆಗೆದುಕೊಂಡರೆ ಸ್ಥಿತಿ ಆತಂಕಕಾರಿಯಾಗಿದೆ. ರಾಜ್ಯ ಮಟ್ಟದಲ್ಲಿ ಮಹಿಳೆಯರ ಸಾಕ್ಷರತೆ ೨೦೦೧ ರಲ್ಲಿ ಶೇ. ೫೭.೪೫. ಅತಿ ಹೆಚ್ಚು ಮಹಿಳಾ ಸಾಕ್ಷರತೆ ಶೇ. ೭೭.೩೯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಮಹಿಳೆಯರ ಸಾಕ್ಷರತೆ ಸೇ. ೪೦ ಕ್ಕಿಂತ ಕಡಿಮೆ ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿದೆ. ಸಾಕ್ಷರತೆಯು ಶೇ. ೩೦ ಕ್ಕಿಂತ ಕಡಿಮೆಯಿರುವ ಯಾದಗೀರ್ (ಶೇ. ೨೬.೯೯), ಶಹಾಪುರ (ಶೇ. ೨೬.೯೭), ಜೇವರ್ಗಿ (ಶೇ.೨೯.೮೬) ಮತ್ತು ದೇವದುರ್ಗ (ಶೇ. ೨೭.೨೦) ತಾಲ್ಲೂಕುಗಳು ಗುಲಬರ್ಗಾ ವಿಭಾಗದಲ್ಲಿವೆ.

ಸಾಕ್ಷರತೆಗೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗವು ಸಾಗಬೇಕಾದ ದಾರಿ ಬಹಳ ದೂರವಿದೆ. ಇಲ್ಲಿ ಎರಡು ಸವಾಲುಗಳಿವೆ.

ಮೊದಲನೆಯದು ಈ ವಿಭಾಗವು ತನ್ನ ಸಾಕ್ಷರತೆ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕು. ಎರಡನೆಯದಾಗಿ ಕನಿಷ್ಟ ಮೊದಲನೆಯ ಹಂತದಲ್ಲಿ ಅದು ರಾಜ್ಯಮಟ್ಟದ ಸಾಕ್ಷರತೆಗೆ ಸಮಾನವಾದ ಮಟ್ಟವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಬೇಕು. ಅಂದರೆ ಗುಲಬರ್ಗಾ ವಿಭಾಗದ ಸಾಕ್ಷರತೆ ಬೆಳವಣಿಗೆ ಪ್ರಮಾಣವು ರಾಜ್ಯಮಟ್ಟದ ಸಾಕ್ಷರತೆ ಬೆಳವಣಿಗೆ ಗತಿಗಿಂತ ತೀವ್ರ ಅಧಿಕವಾಗಿರಬೇಕು.

**ಪರಿವರ್ತನಾ ಸೂಚ್ಯಂಕ : ೨೦೦೫ – ೦೬ ರಿಂದ ೨೦೦೬ – ೦೭**

ಶಿಕ್ಷಣದ ಸಾರ್ವತ್ರೀಕರಣದ ಮಾಪನವಾಗಿ ಪರಿವರ್ತನಾ ಸೂಚ್ಯಂಕವನ್ನು ಬಳಸಬಹುದಾಗಿದೆ. ಪ್ರಾಥಮಿಕ ಹಂತದ ಏಳನೆಯ ತರಗತಿಯಿಂದ ಪ್ರೌಢ ಹಂತದ ಎಂಟನೆಯ ತರಗತಿಗೆ ಹರಿಯುವ ಮಕ್ಕಳ ಪ್ರಮಾಣವನ್ನು ಪರಿವರ್ತನಾ ಸೂಚ್ಯಂಕವು ತೋರಿಸುತ್ತದೆ. ಕರ್ನಾಟಕ ರಾಜ್ಯ ಮಟ್ಟದಲ್ಲಿ ೨೦೦೫ – ೦೬ ರಲ್ಲಿ ಏಳನೆಯ ತರಗತಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ ೯.೯೬ ಲಕ್ಷ. ಆದರೆ ೨೦೦೬ – ೦೭ನೆಯ ಸಾಲಿನಲ್ಲಿ ಎಂಟನೆಯ ತರಗತಿಗೆ ಹರಿದುಬಂದ ಮಕ್ಕಳ ಸಂಖ್ಯೆ ೮.೯೫ ಲಕ್ಷ. ಇಲ್ಲಿ ಪರಿವರ್ತನಾ ಸೂಚ್ಯಂಕ ೦.೮೯೯. ಆದರೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಪರಿವರ್ತನಾ ಸೂಚ್ಯಂಕವು ೦.೯೭೩ ರಷ್ಟಾಗಿದೆ. ಅದು ಸಾರ್ವತ್ರೀಕರಣಕ್ಕೆ ತುಂಬಾ ಸನಿಹದಲ್ಲಿದೆ. ಆಧರೆ ಗುಲಬರ್ಗಾ ವಿಭಾಗದಲ್ಲಿ ಪರಿವರ್ತನಾ ಸೂಚ್ಯಂಕ ಕೇವಲ ೦.೭೭೯. ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗವು ಸಾಗಬೇಕಾದ ದಾರಿ ಬಹಳ ದೂರವಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ರೂಪಿಸುವಾಗ ಪ್ರಾದೇಶಿಕ ಸಂಗತಿಗಳಿಗೆ ಆದ್ಯ ಗಮನ ನೀಡಬೇಕಾಗುತ್ತದೆ. ಅದರಲ್ಲೂ ಗುಲಬರ್ಗಾ ವಿಭಾಗದ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ವಿಶೇಷವಾಗಿ ರೂಪಿಸುವ ಅಗತ್ಯವಿದೆ.

**ಕೃಷಿ ಅವಲಂಬನೆ ಮತ್ತು ಕೃಷಿ ಕಾರ್ಮಿಕರು**

ಯಾವ ಆರ್ಥಿಕತೆಯಲ್ಲಿ ಕೃಷಿ ಅವಲಂಬನೆ ಅಧಿಕವಾಗಿರುತ್ತದೋ, ಎಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಅತ್ಯಧಿಕವಾಗಿರುತ್ತದೋ ಅಂತಹ ಆರ್ಥಿಕತೆಯು ಹಿಮದುಳಿದಿರುತ್ತವೆ ಎಂಬ ವಾದವನ್ನು ಅಭಿವೃದ್ಧಿ ಸಿದ್ಧಾಂತಗಳು ಮಂಡಿಸುತ್ತಾ ಬಂದಿವೆ. ಕೃಷಿ ಅವಲಂಬನೆ ಅತ್ಯಧಿಕವಾಗಿದ್ದಾಗ ಅಲ್ಲಿ ಪ್ರತಿ ತಲಾ ಉತ್ಪಾದನೆ – ತಲಾ ಕಾರ್ಮಿಕರ ಉತ್ಪನ್ನ ಅತ್ಯಮತ ಕಡಿಮೆಯಿರುತ್ತದೆ. ಇಂತಹ ಸಂದರ್ಭದಲ್ಲಿ ಬಂಡವಾಳ ಹೂಡಿಕೆ ಮತ್ತು ಕೃಷಿಯೇತರ ಚಟುವಟಿಕೆಗಳ ಬೆಳವಣಿಗೆ ಕೆಳಮಟ್ಟದಲ್ಲಿರುತ್ತದೆ. ಕೈಗಾರೀಕರಣ, ನಗರೀಕರಣ ಹಾಗೂ ಆಧುನೀಕರಣಗಳು ಅಲ್ಲಿ ತ್ಯಂತ ಮಂದಗತಿಯಲ್ಲಿ ನಡೆಯುತ್ತಿರುತ್ತವೆ.

ಕರ್ನಾಟಕ ರಾಜ್ಯದ ಗುಲಬರ್ಗಾ ವಿಭಾಗದಲ್ಲಿ ಕೃಷಿ ಅವಲಂಬನೆ ಹಾಗೂ ಕೃಷಿ ಕಾರ್ಮಿಕರ ಪ್ರಮಾಣವು ಸಾಪೇಕ್ಷವಾಗಿ ಅತ್ಯಧಿಕ ಮಟ್ಟದಲ್ಲಿದೆ. ರಾಜ್ಯಮಟ್ಟದಲ್ಲಿರುವುದಕ್ಕಿಂತ ಮತ್ತು ದಕ್ಷಿಣ ಕರ್ನಾಟಕದಲ್ಲಿರುವುದಕ್ಕಿಂತ ಕೃಷಿ ಅವಲಂಬನೆ ಇಲ್ಲಿ ಅಧಿಕವಾಗಿದೆ. ಊಳಿಗಮಾನ್ಯ ಭೂಸಂಬಂಧಗಳು ಇಲ್ಲಿ ತುಂಬಾ ಗಟ್ಟಿಯಾಗಿ ಉಳಿದುಕೊಂಡಿವೆ.

**ವಿಭಾಗವಾರು ಕೃಷಿ ಅವಲಂಬನೆ ಮತ್ತು ಕೃಷಿ ಕಾರ್ಮಿಕರ ಪ್ರಮಾಣ : ೨೦೦೧**

**ಕೋಷ್ಟಕ ೨**

| **ಕ್ರ.ಸಂ.** | **ವಿಭಾಗಗಳು** | **ಕೃಷಿ ಅವಲಂಬನೆ ಪ್ರಮಾಣ (ಶೇಕಡ)** | **ಒಟ್ಟು ದುಡಿಮೆಗಾರರಲ್ಲಿ ಕೃಷಿ ಕಾರ್ಮಿಕರ ಪ್ರಮಾಣ** |
|---|---|---|---|
| ೧. | ಬೆಂಗಳೂರು ವಿಭಾಗ | ೪೭.೫೯ | ೧೯.೮೨ |
| ೨. | ಮೈಸೂರು ವಿಭಾಗ | ೫೦.೩೮ | ೧೮.೭೦ |

| | | | |
|---|---|---|---|
| ೩. | ದಕ್ಷಿಣ ಕರ್ನಾಟಕ | ೪೮.೫೨ | ೧೯.೩೯ |
| ೪. | ಬೆಳಗಾವಿ ವಿಭಾಗ | ೬೪.೫೫ | ೩೩.೦೨ |
| ೫. | ಗುಲಬರ್ಗಾ ವಿಭಾಗ | ೬೮.೩೮ | ೪೦.೫೮ |
| ೬. | ಉತ್ತರ ಕರ್ನಾಟಕ | ೬೬.೧೫ | ೩೬.೧೯ |
| ೭. | ಕರ್ನಾಟಕ ರಾಜ್ಯ | ೫೫.೯೭ | ೨೬.೪೦ |

ಈ ಕೋಷ್ಟಕವು ತುಂಬಾ ಕುತೂಹಲಕಾರಿ ಸಂಗತಿಗಳನ್ನು ಅನಾವರಣ ಮಾಡುತ್ತಿದೆ. ತುಂಬಾ ಸೂಕ್ಷ್ಮವಾಗಿ ಇದನ್ನು ಗಮನಿಸುವ ಅಗತ್ಯವಿದೆ. ಈ ಕೋಷ್ಟಕವು ಕರ್ನಾಟಕ ರಾಜ್ಯದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಪರಿಮಾಣವನ್ನು ಮತ್ತು ಅದರ ಮೂಲದಲ್ಲಿರುವ ಸಾಂಸ್ಥಿಕ ಕಾರಣಗಳನ್ನು ತಿಳಿಸುತ್ತಿದೆ. ಕಳೆದ ೫೦ ವರ್ಷಗಳಲ್ಲಿ ರಾಜ್ಯದ ಯಾವ ಪ್ರದೇಶ ತೀವ್ರ ಅಭಿವೃದ್ಧಿ ಸಾಧಿಸಿಕೊಂಡಿದೆ ಮತ್ತು ಯಾವ ಪ್ರದೇಶ ದುಸ್ಥಿತಿ ಅನುಭವಿಸುತ್ತಿದೆ ಎಂಬುದನ್ನು ಕೋಷ್ಟಕವು ತಿಳಿಸುತ್ತದೆ. ಕಳೆದ ೫೦ ವರ್ಷಗಳ ಅವಧಿಯಲ್ಲಿ ಕೃಷಿಯೇತರ ಚಟುವಟಿಕೆಗಳು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಿದ್ದರೆ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಅದು ಮಮದಗತಿಯಲ್ಲಿ ಬೆಳೆಯುತ್ತಿದೆ. ರಾಜ್ಯದ ಗುಲಬರ್ಗಾ ವಿಭಾಗದಲ್ಲಿ ಕೃಷಿಯೇತರ ಚಟುವಟಿಕೆಗಳ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ.

ಊಳಿಗಮಾನ್ಯ ಭೂಸಂಬಂಧಗಳು ಉತ್ತರ ಕರ್ನಾಟಕ ಪ್ರದೇಶದಲ್ಲಿ, ಅದರಲ್ಲೂ ಗುಲಬರ್ಗಾ ವಿಭಾಗದಲ್ಲಿ ಇನ್ನೂ ಗಟ್ಟಿಯಾಗಿ ನೆಲೆಗೊಂಡಿರುವುದು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಭೂರಹಿತ ಕೃಷಿ ದಿನಗೂಲಿಗಳ ಪ್ರಮಾಣ ಕೇವಲ ಶೇ.೨೦ ಕ್ಕಿಂತ ಕಡಿಮೆಯಿದೆ. ರಾಜ್ಯಮಟ್ಟದಲ್ಲಿ ಅದು ಶೇ. ೨೬.೪ ರಷ್ಟಿದೆ. ಆದರೆ ಗುಲಬರ್ಗಾ ವಿಭಾಗದಲ್ಲಿ ಅವರ ಪ್ರಮಾಣವು ಶೇ.೪೦ ಕ್ಕಿಂತ ಅಧಿಕವಿದೆ. ಇದು ರಾಜ್ಯದಲ್ಲಿ ದುಸ್ಥಿತಿಯು ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಮಡುಗಟ್ಟಿ ಕೊಂಡಿರುವುದನ್ನು ಸೂಚಿಸುತ್ತದೆ. ಈ ಸಮಸ್ಯೆಯನ್ನು ಎಲ್ಲಿಯವರೆಗೆ ನಾವು ಎದುರಿಸುವುದಿಲ್ಲವೋ ಅಲ್ಲಿಯವರೆಗೆ, ಎಲ್ಲಿಯವರೆಗೆ ಊಳಿಗಮಾನ್ಯ ಭೂ ಸಂಬಂಧಗಳನ್ನು ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ದುಸ್ಥಿತಿಯು ರಾಜ್ಯದ ಹಿಂದುಳಿದ ಪ್ರದೇಶದಲ್ಲಿ ಮುಂದುವರಿಯುತ್ತದೆ.

ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಸಾಂಸ್ಥಿಕ – ಭೂಸಂಬಂಧಗಳ ಪ್ರಶ್ನೆಗಳನ್ನು ಉನ್ನತಾಧಿಕಾರಿ ಸಮಿತಿಯು ನೇರವಾಗಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಿಲ್ಲ. ಇದಕ್ಕೆ ಸಂಬಂಧಿಸಿದ ಸೂಚಿಗಳನ್ನು ಅದು ತನ್ನ ಸೂತ್ರದಲ್ಲಿ ಸೇರಿಸಿಕೊಂಡಿದೆ. ಗುಲಬರ್ಗಾ ವಿಭಾಗಗಳಲ್ಲಿ ಕೃಷಿ ಅವಲಂಬನೆ ಅತಿಯಾಗಿರುವುದಕ್ಕೂ, ಭೂರಹಿತ ಕೃಷಿ ಕೂಲಿಕಾರರ ಪ್ರಮಾಣ ಅಧಿಕವಾಗಿರುವುದಕ್ಕೂ, ಅನಕ್ಷರತೆ ಅಧಿಕವಾಗಿರುವುದಕ್ಕೂ, ಅಲ್ಲಿ ವಲಸೆ ಪ್ರವೃತ್ತಿ ತೀವ್ರವಾಗಿರುವುದಕ್ಕೂ ಸಂಬಂಧಗಳಿವೆ. ಪ್ರಾದೇಶಿಕ ಅಸಮಾನತೆ ಕುರಿತಂತೆ ಕೇವಲ ರಾಜ್ಯ ಸರ್ಕಾರದ ಮಲತಾಯಿ ಧೋರಣೆ ಬಗ್ಗೆ ಮಾತ್ರವೇ ಮಾತನಾಡುವುದರಲ್ಲಿ ಅರ್ಥವಿಲ್ಲ. ರಾಜ್ಯದಲ್ಲಿ ದುಸ್ಥಿತಿ ಎದುರಿಸುತ್ತಿರುವ ಪ್ರದೇಶದ ವಿಶಿಷ್ಟ ಸಂಗತಿಗಳ ಬಗ್ಗೆಯೂ ಗಮನ ನೀಡುವ ಅಗತ್ಯವಿದೆ.

**ಮಾನವ ಅಭಿವೃದ್ಧಿ**

ಅಭಿವೃದ್ಧಿಯನ್ನು ಅನೂಚಾನವಾಗಿ ವರಮಾನ ವರ್ಧನೆಯೆಂದು ನಿರ್ವಚಿಸಿಕೊಂಡು ಬರಲಾಗಿದೆ. ವರಮಾನದಲ್ಲಿ ಏರಿಕೆ, ಅಂದರೆ ದೇಶ/ಪ್ರದೇಶದಲ್ಲಿ ಉತ್ಪನ್ನ, ಉದ್ಯೋಗ, ಆಹಾರೋತ್ಪಾದನೆ ಮುಂತಾದವುಗಳಲ್ಲಿ ಉಂಟಾಗುವ ಏರಿಕೆಯನ್ನು ಅಭಿವೃದ್ಧಿಯೆಂದು ಗುರುತಿಸಿಕೊಂಡು ಬರಲಾಗಿದೆ. ಇದನ್ನು ವರಮಾನ ವರ್ಧನಾ ಅಭಿವೃದ್ಧಿ ಮೀಮಾಂಸೆಯೆಂದು ಕರೆಯಬಹುದು. ಈ ಬಗೆಯ ಅಭಿವೃದ್ಧಿ ಮೀಮಾಂಸೆಯನ್ನು ಅಮರ್ತ್ಯಸೆನ್ ಮತ್ತು ಮೆಹಬೂಬ್‌ಉಲ್‌ಹಕ್‌ಅವರು ತೀವ್ರವಾಗಿ ಟೀಕಿಸುತ್ತಾರೆ. ಅವರ ಪ್ರಕಾರ ವರಮಾನದಲ್ಲಿನ

ವರ್ಧನೆಯೇ ಅಭಿವೃದ್ಧಿಯಲ್ಲ. ಏಕೆಂದರೆ ಅದು ಅಭಿವೃದ್ಧಿಯ ಸಾಧನವೇ ವಿನಾ ಅದು ಅದರ ಅಂತಿಮ ಗಂತವ್ಯವಲ್ಲ. ಜನರ ಬದುಕು ಉತ್ತಮವಾಗ ಬೇಕಾದರೆ ಸಮಾಜದಲ್ಲಿ ಒದಗಿರುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು ಸಾಮರ್ಥ್ಯವಿರಬೇಕು ಮತ್ತು ಸ್ವಾತಂತ್ರ್ಯವಿರಬೇಕು. ಗುಲಬರ್ಗಾ ವಿಭಾಗದ ೧೬.೯೬ ಲಕ್ಷ ಭೂರಹಿತ ಕೃಷಿ ಕೂಲಿಕಾರರ ಸ್ವಾತಂತ್ರ್ಯದ ವ್ಯಾಪ್ತಿ ತುಂಬಾ ಸೀಮಿತವಾದುದು. ಏಕೆಂದರೆ ಅವರಿಗಿರುವ ಆಯ್ಕೆಗಳು ಎರಡೇ! ಒಂದು : ಕೂಲಿ ಮಾಡಬೇಕು. ಎರಡು : ಉಪವಾಸವಿರಬೇಕು.

ಬದುಕನ್ನು ಉತ್ತಮಪಡಿಸಿಕೊಳ್ಳಲು ಸಮಾಜದಲ್ಲಿ ಒದಗಿಬರುವ ಅವಕಾಶಗಳಲ್ಲಿ ತಮಗೆ ಇಷ್ಟವಾದುದನ್ನು ಆಯ್ಕೆ ಮಾಡಿಕೊಳ್ಳುವ ಜನರ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಅಮರ್ತ್ಯಸೇನ್ ಅಭಿವೃದ್ಧಿಯೆಂದು ಕರೆದಿದ್ದಾರೆ. ಆಯ್ಕೆ ಮಾಡಿಕೊಳ್ಳುವ ಜನರ ಸಾಮರ್ಥ್ಯ ಮತ್ತು ಸ್ವಾತಂತ್ರ್ಯಗಳನ್ನು ಸೇನ್ 'ಧಾರಣಾ ಸಾಮರ್ಥ್ಯ'ವೆಂದು ಕರೆದಿದ್ದಾರೆ. s ಧಾರಣಾ ಸಾಮರ್ಥ್ಯದ ವರ್ಧನೆಯೇ ಮಾನವ ಅಭಿವೃದ್ಧಿ. ಇದನ್ನು ಮಾಪನ ಮಾಡಲು ರೂಪಿಸಿರುವ ಸೂತ್ರವೇ ಮಾನವ ಅಭಿವೃದ್ಧಿ ಸೂಚ್ಯಂಕ. ಈಗಾಗಲೇ ನೋಡಿರುವಂತೆ ನಮ್ಮ ರಾಜ್ಯದಲ್ಲಿ ವರಮಾನದ ವರ್ಧನೆಯ ದೃಷ್ಟಿಯಿಂದಲೂ ಗುಲಬರ್ಗಾ ವಿಭಾಗವು ರಾಜ್ಯದ ಉಳಿದೆಲ್ಲ ವಿಭಾಗಗಳ ವರಮಾನದ ಮಟ್ಟಕ್ಕಿಂತ ತುಂಬಾ ಕೆಳಗಿದೆ. ಮಾನವ ಅಭಿವೃದ್ಧಿ ಅಥವಾ ಧಾರಣಾ ಸಾಮರ್ಥ್ಯದ ದೃಷ್ಟಿಯಿಂದಲೂ ಅದರ ಸ್ಥಿತಿ ತುಂಬಾ ಕೆಳಮಟ್ಟದಲ್ಲಿದೆ.

ಮಾನವ ಅಭಿವೃದ್ಧಿ ಸೂಚ್ಯಂಕವು ಆರೋಗ್ಯ, ಸಾಕ್ಷರತೆ/ ಶಿಕ್ಷಣ ಮತ್ತು ವರಮಾನ – ಮೂರು ಸೂಚಿಗಳನ್ನು ಒಳಗೊಂಡ ಸಂಯುಕ್ತ ಮಾಪನವಾಗಿದೆ. ನಮ್ಮ ರಾಜ್ಯದ ಜಿಲ್ಲಾವಾರು ಮಾನವ ಅಭಿವೃದ್ಧಿ ಸೂಚ್ಯಂಕದ ವಿವರವನ್ನು ಕೆಳಗೆ ನೀಡಲಾಗಿದೆ.

**ಜಿಲ್ಲಾವಾರು ಮಾನವ ಅಭಿವೃದ್ಧಿ ಸೂಚ್ಯಂಕ : ೧೯೯೧ ಮತ್ತು ೨೦೦೧**

**ಕೋಷ್ಟಕ ೩**

| **ವಿಭಾಗಗಳು** | | **ಗರಿಷ್ಟ ಸೂಚ್ಯಂಕ** | | **ಕನಿಷ್ಟ ಸೂಚ್ಯಂಕ** | |
|---|---|---|---|---|---|
| ಬೆಂಗಳೂರು ವಿಭಾಗ | ೧೯೯೧ | ಬೆಂಗಳೂರು ನಗರ | ೦.೬೨೩ | ಕೋಲಾರ | ೦.೫೨೨ |
| | ೨೦೦೧ | ಬೆಂಗಳೂರು ನಗರ | ೦.೭೫೩ | ಕೋಲಾರ | ೦.೬೨೫ |
| ಮೈಸೂರು ವಿಭಾಗ | ೧೯೯೧ | ದಕ್ಷಿಣ ಕನ್ನಡ | ೦.೬೬೬೧ | ಚಾ.ನಗರ | ೦.೪೮೮ |
| | ೨೦೦೧ | ದಕ್ಷಿಣ ಕನ್ನಡ | ೦.೭೨೨ | ಚಾ.ನಗರ | ೦.೫೭೬ |
| ಬೆಳಗಾವಿ ವಿಭಾಗ | ೧೯೯೧ | ಉತ್ತರ ಕನ್ನಡ | ೦.೫೬೭ | ಹಾವೇರಿ | ೦.೪೯೬ |
| | ೨೦೦೧ | ಉತ್ತರ ಕನ್ನಡ | ೦.೬೫೩ | ವಿಜಾಪುರ | ೦.೫೮೯ |
| ಗುಲಬರ್ಗಾ ವಿಭಾಗ | ೧೯೯೧ | ಬಳ್ಳಾರಿ | ೦.೫೧೨ | ರಾಯಚೂರು | ೦.೪೪೩ |
| | ೨೦೦೧ | ಬಳ್ಳಾರಿ | ೦.೫೧೨ | ರಾಯಚೂರು | ೦.೫೪೭ |
| ಕರ್ನಾಟಕ | ೧೯೯೧ | | ೦.೫೪೧ | | |
| | ೨೦೦೧ | | ೦.೬೫೦ | | |

***ಮೂಲ :** ಕರ್ನಾಟಕ ಮಾನವ ಅಭಿವೃದ್ಧಿ ವರದಿ : ೨೦೦೫*

ಎರಡೂ ಕಾಲಘಟ್ಟಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕನಿಷ್ಟವಿದ್ದುದು ಗುಲಬರ್ಗಾ ವಿಭಾಗದ ರಾಯಚೂರು ಜಿಲ್ಲೆಯಲ್ಲಿ ಎಂಬುದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಬಹಳ ಕುತೂಹಲಕರ ಸಂಗತಿಯೆಂದರೆ ಗುಲಬರ್ಗಾ ವಿಭಾಗದ ಗರಿಷ್ಟ ಮಾನವ ಅಭಿವೃದ್ಧಿ

ಸೂಚ್ಯಂಕವು ಇಡೀ ರಾಜ್ಯದಲ್ಲಿ ಕನಿಷ್ಟವಾಗಿದೆ. ಗುಲಬರ್ಗಾ ವಿಭಾಗದ ಐದು ಜಿಲ್ಲೆಗಳ ಸೂಚ್ಯಂಕವು ಎರಡು ಕಾಲಘಟ್ಟಗಳಲ್ಲಿ ರಾಜ್ಯ ಮಟ್ಟದ ಸೂಚ್ಯಂಕಕ್ಕಿಂತ ಕೆಳಮಟ್ಟದಲ್ಲಿದೆ.

ಹೀಗೆ ಯಾವ ಸೂಚಿಯನ್ನು ತೆಗೆದುಕೊಂಡರೂ ರಾಜ್ಯದಲ್ಲಿ ಗುಲಬರ್ಗಾ ವಿಭಾಗದ ಜಿಲ್ಲೆಗಳು ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ.

**ಅಭಿವೃದ್ಧಿ ಸೂಚ್ಯಂಕ ಮತ್ತು ದುಸ್ಥಿತಿ ಸೂಚ್ಯಂಕ**

ಪ್ರಾದೇಶಿಕ ಅಸಮಾನತೆ ನಿವಾರಣೆ ಅಧ್ಯಯನದ ಉನ್ನತಾಧಿಕಾರಸಮಿತಿಯು ಅಭಿವೃದ್ಧಿಯನ್ನು ಮಾಪನ ಮಾಡಲು 'ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ' ವೆಂಬುದನ್ನು ಮತ್ತು ದುಸ್ಥಿತಿಯನ್ನು ಮಾಪನ ಮಾಡಲು 'ಸಂಚಯಿತ ದುಸ್ಥಿತಿ ಸೂಚ್ಯಂಕ'ವೆಂಬುದನ್ನು ರೂಪಿಸಿದೆ. ಈ ಪ್ರಬಂಧದ ಭಾಗ – ೧ ರಲ್ಲಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕದ ವಿವರಗಳನ್ನು ನೀಡಲಾಗಿದೆ. ಇಲ್ಲಿ ಸಂಚಯಿತ ದುಸ್ಥಿತಿ ಸೂಚ್ಯಂಕದ ವಿವರಗಳನ್ನು ನೀಡಲು ಪ್ರಯತ್ನಿಸಲಾಗಿದೆ.

ಈಗಾಗಲೇ ತಿಳಿಸಿರುವಂತೆ ರಾಜ್ಯಮಟ್ಟದ ಅಭಿವೃದ್ಧಿಯನ್ನು 'ಒಂದು' ಎಂಬ ಮಾನದಂಡದಿಂದ ಗುರುತಿಸಿಕೊಂಡು ತಲ್ಲೂಕುಗಳ ಅಭಿವೃದ್ಧಿಯನ್ನು ಮಾಪನ ಮಾಡಲಾಗಿದೆ. ಅದೇ ರೀತಿ ರಾಜ್ಯಮಟ್ಟದ ಅಭಿವೃದ್ಧಿ 'ಒಂದು' ಎಂಬ ಮಾನದಂಡದ ಆಧಾರದ ಮೇಲೆ ದುಸ್ಥಿತಿಯನ್ನು ಮಾಪನ ಮಾಡಬಹುದಾಗಿದೆ. ಒಂದು ತಾಲ್ಲೂಕಿನ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವು ರಾಜ್ಯಮಟ್ಟದ 'ಒಂದು' ಎಂಬ ಮಾನದಂಡ ದಿಂಡ ಕಡಿಮೆಯಿದ್ದರೆ ಅದು ಹಿಂದುಳಿದಿರುವ ಮಾಪನವಾದರೆ ಅವೆರಡರ ನಡುವಿನ ಅಂತರವೇ ದುಸ್ಥಿತಿಯ ಮಾಪನ. ಕೆಳಗಿನ ಕೋಷ್ಟಕದಲ್ಲಿ ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳ ಅಭಿವೃದ್ಧಿ ಹಾಗೂ ದುಸ್ಥಿತಿಯ ವಿವರವನ್ನು ನೀಡಲಾಗಿದೆ.

**ದುಸ್ಥಿತಿ ಸೂಚ್ಯಂಕ : ಗುಲಬರ್ಗಾ ಜಿಲ್ಲೆ : ೨೦೦೧**

**ಕೋಷ್ಟಕ ೪**

| **ಕ್ರ.ಸಂ.** | **ತಾಲ್ಲೂಕುಗಳು** | **ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ** | **ದುಸ್ಥಿತಿ ಸೂಚ್ಯಂಕ** |
|---|---|---|---|
| ೧. | ಅಫಜಲಪುರ | ೦.೬೨ | ೦.೩೮ |
| ೨. | ಅಳಂದ | ೦.೬೧ | ೦.೩೯ |
| ೩. | ಚಿಂಚೋಳಿ | ೦.೫೭ | ೦.೪೩ |
| ೪. | ಚಿತ್ತಾಪುರ | ೦.೬೫ | ೦.೩೫ |
| ೫. | ಗುಲಬರ್ಗಾ | ೦.೮೯ | ೦.೧೧ |
| ೬. | ಜೇವರ್ಗಿ | ೦.೫೭ | ೦.೪೩ |
| ೭. | ಸೇಡಂ | ೦.೭೨ | ೦.೨೮ |
| ೮. | ಶಹಪುರ | ೦.೬೨ | ೦.೩೮ |
| ೯. | ಸುರಪುರ | ೦.೭೦ | ೯.೩೦ |
| ೧೦. | ಯಾದಗಿರ್ | ೦.೬೭ | ೦.೩೩ |
| | **ಗುಲಬರ್ಗಾ ಜಿಲ್ಲೆ** | **೬.೬೨** | **೩.೩೮** |

ಈ ಲೆಕ್ಕಾಚಾರದ ಪ್ರಕಾರ ಗುಲಬರ್ಗಾ ಜಿಲ್ಲೆಯ ದುಸ್ಥಿತಿ ಸೂಚ್ಯಂಕ ೩.೩೮. ಇದೇ ಪ್ರಕಾರ ಎಲ್ಲ ಜಿಲ್ಲೆಗಳ ಸಂಚಯಿತ ದುಸ್ಥಿತಿ ಸೂಚ್ಯಂಕಗಳನ್ನು ಲೆಕ್ಕ ಹಾಕಬಹುದಾಗಿದೆ. ಉನ್ನತಾಧಿಕಾರಿ ಸಮಿತಿಯು ವಿಭಾಗವಾರು ಸಂಚಯಿತ ದುಸ್ಥಿತಿ ಸೂಚ್ಯಂಕದ ವಿವರವನ್ನು ನೀಡಿದೆ. ಅದರ ವಿವರವನ್ನು ಇಲ್ಲಿ ನೀಡಲಾಗಿದೆ.

**ವಿಭಾಗವಾರು ಜಿಲ್ಲಾ ಸಂಚಯಿತ ದುಸ್ಥಿತಿ ಸೂಚ್ಯಂಕ : ೨೦೦೧**

**ಕೋಷ್ಟಕ ೫**

| ಕ್ರ.ಸಂ. | ಜಿಲ್ಲೆ / ವಿಭಾಗಗಳು | ಸಂಚಯಿತ ದುಸ್ಥಿತಿ ಸೂಚ್ಯಂಕ |
|---|---|---|
| | **ಗುಲಬರ್ಗಾ ವಿಭಾಗ** | **೮.೦೬** |
| ೧. | ಬಳ್ಳಾರಿ | ೧.೦೦ |
| ೨. | ಬೀದರ್ | ೧.೧೯ |
| ೩. | ಗುಲಬರ್ಗಾ | ೩.೩೮ |
| ೪. | ರಾಯಚೂರು | ೧.೫೦ |
| ೫. | ಕೊಪ್ಪಳ | ೦.೯೯ |
| | **ಬೆಳಗಾವಿ ವಿಭಾಗ** | **೪.೧೨** |
| ೬. | ಬೆಳಗಾವಿ | ೦.೬೯ |
| ೭. | ವಿಜಾಪುರ | ೧.೪೦ |
| ೮. | ಬಾಗಲಕೋಟೆ | ೦.೫೬ |
| ೯. | ಧಾರವಾಡ | ೦.೨೨ |
| ೧೦. | ಗದಗ | ೦.೩೧ |
| ೧೧. | ಹಾವೇರಿ | ೦.೫೩ |
| ೧೨. | ಉತ್ತರ ಕನ್ನಡ | ೦.೪೧ |
| | **ಬೆಂಗಳೂರು ವಿಭಾಗ** | **೫.೩೨** |
| ೧೩. | ಬೆಂಗಳೂರು (ನಗರ) | ೦.೧೦ |
| ೧೪. | ಬೆಂಗಳೂರು (ಗ್ರಾಮೀಣ) | ೦.೫೫ |
| ೧೫. | ಚಿತ್ರದುರ್ಗ | ೦.೮೬ |
| ೧೬. | ದಾವಣಗೆರೆ | ೦.೮೪ |
| ೧೭. | ಕೋಲಾರ | ೦.೯೪ |
| ೧೮. | ಶಿವಮೊಗ್ಗ | ೦.೨೬ |
| ೧೯. | ತುಮಕೂರು | ೦.೭೭ |
| | **ಮೈಸೂರು ವಿಭಾಗ** | **೨.೭೬** |
| ೨೦. | ಚಿಕ್ಕಮಗಳೂರು | ೦.೩೦ |

| | | |
|---|---|---|
| ೧೧. | ದಕ್ಷಿಣ ಕನ್ನಡ | – |
| ೧೨. | ಉಡುಪಿ | – |
| ೧೩. | ಹಾಸನ | ೦.೪೨ |
| ೧೪. | ಕೊಡಗು | – |
| ೧೫. | ಮಂಡ್ಯ | ೦.೬೬ |
| ೧೬. | ಮೈಸೂರು | ೦.೭೭ |
| ೧೭. | ಚಾಮರಾಜನಗರ | ೦.೬೧ |
| | **ರಾಜ್ಯ** | **೨೦.೨೬** |

**ವಿಭಾಗವಾರು ದುಸ್ಥಿತಿಯ ಶೇಕಡಪಾಲು**

**ಕೋಷ್ಟಕ ೬**

| **ಕ್ರ.ಸಂ.** | **ವಿಭಾಗ** | **ಸಂಚಯಿತ ದುಸ್ಥಿತಿ ಸೂಚ್ಯಂಕ** | **ಶೇಕಡ ಪಾಲು** |
|---|---|---|---|
| ೧. | ಬೆಂಗಳೂರು ವಿಭಾಗ | ೫.೩೨ | ೫.೩೨ / ೨೦.೨೬ x ೧೦೦<br>= ೨೬.೨೬ ಶೇ.೨೫ |
| ೨. | ಮೈಸೂರು ವಿಭಾಗ | ೨.೭೬ | ೨.೭೬ / ೨೦.೨೬ x ೧೦೦<br>= ೧೩.೬೨ ಶೇ. ೧೫ |
| ೩. | ಬೆಳಗಾವಿ ವಿಭಾಗ | ೪.೧೨ | ೪.೧೨ / ೨೦.೨೬ x ೧೦೦<br>= ೨೦.೩೪ ಶೇ. ೨೦ |
| ೪. | ಗುಲಬರ್ಗಾ ವಿಭಾಗ | ೮.೦೬ | ೮.೦೬ / ೨೦.೨೬ x ೧೦೦<br>= ೩೯.೭೮ ಶೇ. ೪೦ |
| ೫. | ರಾಜ್ಯ | ೨೦.೨೬ | ಶೇ. ೧೦೦.೦೦ |

**ಸಮಿತಿಯ ಅನುದಾನ ಹಂಚಿಕೆ ಸೂತ್ರ**

ಸಂಚಯಿತ ದುಸ್ಥಿತಿ ಸೂಚ್ಯಂಕದ ಆಧಾರದ ಮೇಲೆ ವಿಭಾಗಗಳು, ಜಿಲ್ಲೆಗಳು ಮತ್ತು ತಾಲ್ಲೂಕುಗಳ ನಡುವೆ ಅನುದಾನ ಹಂಚಿಕೆಯಾಗಬೇಕು ಎಂಬುದು ಸಮಿತಿಯ ಅಭಿಮತವಾಗಿದೆ. ಈ ಸೂತ್ರದ ಪ್ರಕಾರ ‘‘ಹೆಚ್ಚು ಹಿಂದುಳಿದ ತಾಲ್ಲೂಕು/ಜಿಲ್ಲೆ/ವಿಭಾಗಗಳಿಗೆ ಹೆಚ್ಚು ಅನುದಾನ, ಕಡಿಮೆ ಹಿಂದುಳಿದ ತಾಲ್ಲೂಕು/ಜಿಲ್ಲೆ/ವಿಭಾಗಗಳಿಗೆ ಕಡಿಮೆ ಅನುದಾನ, ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಿಗೆ ವಿಶೇಷ ಅನುದಾನಕ್ಕೆ ಅವಕಾಶವಿಲ್ಲ.

ಸಮಿತಿಯ ಸೂತ್ರದ ಪ್ರಕಾರ ವಿಶೇಷ ಅಭಿವೃದ್ಧಿ ಅನುದಾನವನ್ನು ವಿಭಾಗವಾರು ಕೆಳಕಂಡಂತೆ ಹಂಚಬೇಕಾಗುತ್ತದೆ.

**ಅನುದಾನ ಹಂಚಿಕೆ**

| | |
|---|---|
| ಬೆಂಗಳೂರು ವಿಭಾಗ | ಶೇ.೨೫ |
| ಮೈಸೂರು ವಿಭಾಗ | ಶೇ.೧೫ |
| ದಕ್ಷಿಣ ಕರ್ನಾಟಕ | ಶೇ.೪೦ |
| ಬೆಳಗಾವಿ ವಿಭಾಗ | ಶೇ.೨೦ |
| ಗುಲಬರ್ಗಾ ವಿಭಾಗ | ಶೇ.೪೦ |
| ಉತ್ತರ ಕರ್ನಾಟಕ | ಶೇ.೬೦ |
| ರಾಜ್ಯದ ೧೧೪ ತಾಲ್ಲೂಕುಗಳು | ಶೇ.೧೦೦.೦೦ |

# ೮. ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ (ಗುಲಬರ್ಗಾ ವಿಭಾಗವನ್ನು ಅನುಲಕ್ಷಿಸಿ) (೩)

**ಭಾಗ ೩**

**ಉನ್ನತಾಧಿಕಾರ ಸಮಿತಿ ಶಿಫಾರಸ್ಸುಗಳು**

ಈ ಪ್ರಬಂಧದ ಪ್ರಸ್ತುತ ಭಾಗ ೩ರಲ್ಲಿ ಉನ್ನತಾಧಿಕಾರ ಸಮಿತಿಯು ನೀಡಿರುವ ಬಹುಮುಖ್ಯ ಶಿಫಾರಸ್ಸುಗಳಲ್ಲಿ ಆಯ್ದ ಕೆಲವನ್ನು ನೀಡಲಾಗಿದೆ. ಉನ್ನತಾಧಿಕಾರ ಸಮಿತಿಯ ಶಿಫಾರಸ್ಸುಗಳ ವಿವರವಾದ ಮಾಹಿತಿಗೆ ಮೂಲ ವರದಿಯನ್ನು ನೋಡುವುದು ಅಗತ್ಯ.

೧. ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ನಾವು ಅನುಸರಿಸಿಕೊಂಡು ಬಂದಿರುವ ಸಮಗ್ರವಾದಿ ದೃಷ್ಟಿಕೋನದ ಫಲವೇ ಪ್ರಾದೇಶಿಕ ಅಸಮಾನತೆ. ವಿಕೇಂದ್ರೀಕರಣ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆ ಬಗ್ಗೆ ಒತ್ತು ನೀಡಲಾಗಿದ್ದರೂ ಸಮಗ್ರ ದೃಷ್ಟಿಕೋನದ ಅಭಿವೃದ್ಧಿ ಯೋಜನೆಗಳನ್ನು ಕೈಬಿಟ್ಟು ಪ್ರದೇಶ - ನಿರ್ದಿಷ್ಟ ಸೂಕ್ಷ್ಮ ತಳಮಟ್ಟದ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಇದರಿಂದಾಗಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯು ತೀವ್ರಗೊಳ್ಳುತ್ತಾ ನಡೆದಿದೆ. ಇದು ಬದಲಾಗಬೇಕು.

೨. ಸಮಿತಿಯ ಮೊಟ್ಟಮೊದಲ ಹಾಗೂ ಬಹುಮುಖ್ಯವಾದ ಶಿಫಾರಸ್ಸೆಂದರೆ ಸರ್ಕಾರವು ತುರ್ತಾಗಿ 'ಪ್ರಾದೇಶಿಕ ಅಭಿವೃದ್ಧಿ ನೀತಿ'ಯನ್ನು ಪ್ರಕಟಿಸಬೇಕು. ಜಿಲ್ಲೆ - ಜಿಲ್ಲೆಗಳ ನಡುವೆ, ಪ್ರದೇಶ - ಪ್ರದೇಶಗಳ ನಡುವೆ ಜಿಲ್ಲೆಗಳೊಳಗೆ, ಪ್ರದೇಶಗಳೊಳಗೆ ಕಂಡು ಬರುವ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು ಅದರ ಮುಖ್ಯ ಉದ್ದೇಶವಾಗಿರಬೇಕು.

೩. ಪಂಚವಾರ್ಷಿಕ ಅಥವಾ ವಾರ್ಷಿಕ ಅಭಿವೃದ್ಧಿ ಯೋಜನೆ ರೂಪಿಸುವಾಗ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಎರಡು ನೆಲೆಗಳಲ್ಲೂ ಪ್ರಾದೇಶಿಕ ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ. ಪ್ರತಿವರ್ಷವೂ ಸರ್ಕಾರವು ಪ್ರಾದೇಶಿಕ ಅಸಮಾನತೆ ಎಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂಬುದನ್ನು ಸಮೀಕ್ಷೆ ಮಾಡಬೇಕು.

೪. ರಾಜ್ಯಮಟ್ಟದ ಅಭಿವೃದ್ಧಿಯನ್ನು ಒಂದು ಮಾನದಂಡವನ್ನಾಗಿಟ್ಟುಕೊಂಡು ಪ್ರತಿಯೊಂದು ಜಿಲ್ಲೆ - ತಾಲ್ಲೂಕುಗಳ ಅಭಿವೃದ್ಧಿ ಮಟ್ಟವು ರಾಜ್ಯದ ಸರಾಸರಿ ಮಟ್ಟಕ್ಕೆ ಸಮಾನವಾಗುವಂತೆ ಮಾಡಲು ಅಗತ್ಯವಾದ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು.

೫. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳ ನಡುವೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಸಮಾನತೆ ಮುಂದುವರಿಯುತ್ತಿರುವುದು ದೃಢಪಟ್ಟಿದೆ. ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಸಾಮರ್ಥ್ಯ ಅಗಾಧವಾಗಿದೆ. ಪ್ರಾದೇಶಿಕ ಸಮಾನತೆ ಸಾಧಿಸಿಕೊಳ್ಳಲು ಅಭಿವೃದ್ಧಿ ತಂತ್ರದಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

೬. ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯಕ್ಕೆ ಸಂಬಂಧಿಸಿದ ಜವಾಬ್ದಾರಿಯನ್ನು ಮಾರುಕಟ್ಟೆ ಶಕ್ತಿಗಳಿಗೆ ವಹಿಸದೆ, ಸರ್ಕಾರವೇ ಅದನ್ನು ನಿರ್ವಹಿಸಬೇಕಾಗುತ್ತದೆ.

೭. ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡ ಕಾರ್ಯಕ್ರಮಗಳ ಜೊತೆ ದುಸ್ಥಿತಿಯನ್ನು ಎದುರಿಸಲು ಅಗತ್ಯವಾದ ಕಾರ್ಯಯೋಜನೆ ಬಗ್ಗೆಯೂ ನಾವು ಯೋಚಿಸಬೇಕಾಗುತ್ತದೆ.

೮. ಸಂಪನ್ಮೂಲ ವಿತರಣೆಗೆ, ಅನುದಾನ ಹಂಚಿಕೆಗೆ ಸರ್ಕಾರವು ಸಮಿತಿ ರೂಪಿಸಿರುವ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಸಂಪನ್ಮೂಲ ಹಂಚಿಕೆಗೆ ಸಂಬಂಧಿಸಿದಂತೆ ದಕ್ಷಿಣ ಕರ್ನಾಟಕಕ್ಕೆ ಶೇ. ೪೦ ಮತ್ತು ಉತ್ತರ ಕರ್ನಾಟಕಕ್ಕೆ ಶೇ.೬೦ರ ಅನುದಾನವಿರಬೇಕೆಂದು ಸಮಿತಿ ಸ್ಪಷ್ಟಪಡಿಸಿದೆ. ಈ ಸಮಿತಿಯ ಶಿಫಾರಸ್ಸಿನ ಪ್ರಕಾರ ಮತ್ತು ಸಮಿತಿ ಸೂತ್ರದ ಪ್ರಕಾರ ರೂ. ೧೬,೦೦೦ - ೦೦ ಕೋಟಿಯನ್ನು ನಾಲ್ಕು ವಿಭಾಗಗಳಿಗೆ ಮತ್ತು ೨೭ ಜಿಲ್ಲೆಗಳಿಗೆ ಹಂಚಿದರೆ ಪ್ರತಿಯೊಂದರ ಪಾಲು ಎಷ್ಟೆಂಬುದನ್ನು ಅನುಬಂಧ - ೧ ರಲ್ಲಿ ತೋರಿಸಿದೆ.

೯. ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಅತ್ಯಂತ ಹಿಂದುಳಿದ ಎಲ್ಲ ೧೦ ತಾಲ್ಲೂಕುಗಳು ಗುಲಬರ್ಗಾ ವಿಭಾಗದಲ್ಲಿದೆ. ಅವುಗಳಾವುವೆಂದರೆ ಶಿರಗುಪ್ಪ, ಅಫಜಲಪುರ, ಚಿತ್ತಾಪುರ, ಜೇವರ್ಗಿ, ಶಹಾಪುರ, ಯಾದಗಿರ್, ಯಲಬುರ್ಗಾ, ಸಿಂಧನೂರು, ದೇವದುರ್ಗ ಮತ್ತು ಮಾನವಿ. ಈ ಹತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಯನ್ನು ಆದ್ಯತೆಯ ಮೇಲೆ ಕೈಗೊಳ್ಳಲು ಸಮಿತಿ ಶಿಫಾರಸ್ಸು ಮಾಡಿದೆ.

೧೦. ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸರ್ಕಾರವು ಹೆಚ್ಚು ಹೆಚ್ಚು ಶಾಲಾ - ಕಾಲೇಜುಗಳನ್ನು ಸ್ಥಾಪಿಸಬೇಕು ಹಾಗೂ ಖಾಸಗಿ ಸಂಸ್ಥೆಗಳಿಗೆ ಅನುದಾನ ನೀಡುವ ಕ್ರಮವನ್ನು ವಿಸ್ತರಿಸಬೇಕು. ಇವೆಲ್ಲವೂ ಆದ್ಯತೆಯ ಮೇಲೆ ನಡೆಯಬೇಕು.

೧೧. ರಾಜ್ಯದ ೧೧೪ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಸಮಿತಿಯು ಎಂಟು ವರ್ಷಗಳ ರೂ. ೧೬.೦೦೦ ಕೋಟಿಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ಶಿಫಾರಸ್ಸು ಮಾಡಿದೆ. ಇದರ ಕಾಲಾವಧಿ ೨೦೦೩ - ೨೦೧೧

ಉನ್ನತಾಧಿಕಾರ ಸಮಿತಿಯು ರಾಜ್ಯದ ಹಿಂದುಳಿದ ೧೧೪ ತಾಲ್ಲೂಕುಗಳ ಅಭಿವೃದ್ಧಿಗೆ ಅನೇಕ ವಿನೂತನ ಶಿಫಾರಸ್ಸುಗಳನ್ನು ಮಾಡಿದೆ. ಅವುಗಳಲ್ಲಿ ಕೆಲವನ್ನು ಸರ್ಕಾರವು ಕೈಗೆತ್ತಿಕೊಂಡಿದೆ. ಆದರೆ ಉನ್ನತಾಧಿಕಾರ ಸಮಿತಿ ವರದಿಯ ಸಾರವನ್ನು ಸರ್ಕಾರವು ಗ್ರಿಸಿದಂತೆ ಕಾಣಲಿಲ್ಲ. ಅದರ ಸಲಹೆಯಾದ ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ರೂಪಿಸುವುದು ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ದಿಶೆಯಲ್ಲಿ ಇದು ಸರ್ಕಾರದ ಅತಿದೊಡ್ಡ ವೈಫಲ್ಯವಾಗಿದೆ. ಉನ್ನತಾಧಿಕಾರ ಸಮಿತಿಯು ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುರುತಿಸುವ ಅತ್ಯಂತ ಹಿಂದುಳಿದ ರಾಜ್ಯದ ಹತ್ತು ತಾಲ್ಲೂಕುಗಳಲ್ಲಿ ಇದುವರೆವಿಗೂ ಸರ್ಕಾರ ಯಾವುದೇ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ಇದನ್ನೆಲ್ಲ ಗಮನಿಸಿದರೆ ಸರ್ಕಾರವು ಹಾಗು ಜನ ಪ್ರತಿನಿಧಿಗಳು ಪ್ರಾದೇಶಿಕ ಅಸಮಾನತೆಯನ್ನು

ಗಂಭೀರವಾಗಿ ಪರಿಗಣಿಸಿಲ್ಲವೆಂಬುದು ತಿಳಿಯುತ್ತದೆ. ರಾಜ್ಯದ ಹಿಂದುಳಿದ ಜಿಲ್ಲೆ - ತಾಲ್ಲೂಕುಗಳಲ್ಲಿ ಪ್ರಾಥಮಿಕ ಶಾಲೆಗಳನ್ನು, ಪ್ರೌಢಶಾಲೆಗಳನ್ನು ಕಾಲೇಜುಗಳನ್ನು ಹೆಚ್ಚಾಗಿ ಸ್ಥಾಪಿಸುವಂತೆ ಸಮಿತಿ ಶಿಫಾರಸ್ಸು ಮಾಡಿದೆ. ಆದರೆ ಇದು ಕಾರ್ಯರೂಪಕ್ಕೆ ಬರಲಿಲ್ಲ.

<u>ಭಾಗ ೪</u>

**ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಅನುದಾನ ಹಂಚಿಕೆ ಸೂತ್ರ**

ಉನ್ನತಾಧಿಕಾರ ಸಮಿತಿಯ ಬಹುಮುಖ್ಯ ಸಲಹೆಯೆಂದರೆ ರಾಜ್ಯ ೧೧೪ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯಾಗಿದೆ. ಅದು ರೂ. ೧೬,೦೦೦ ಕೋಟಿ ಯೋಜನೆಯಾಗಿದೆ. ಈ ಯೋಜನೆಯಲ್ಲಿ ವಿಭಾಗಗಳ ನಡುವೆ, ಜಿಲ್ಲೆಗಳ ನಡುವೆ ಮತ್ತು ತಲ್ಲೂಕುಗಳ ನಡುವೆ ಅನುದಾನ ಹಂಚುವ ಸೂತ್ರವು ಸಂಚಯಿತ ದುಸ್ಥಿತಿ ಸೂಚ್ಯಂಕವನ್ನು ಅವಲಂಬಿಸಿದೆ. ಇದನ್ನು ಅನುಬಂಧದಲ್ಲಿ ತೋರಿಸಿದೆ.

೧. ಉನ್ನತಾಧಿಕಾರಿ ಸಮಿತಿಯು ರೂಪಿಸಿರುವ ರೂ. ೧೬೦೦೦ ಕೋಟಿಯ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಗುಲಬರ್ಗಾ ವಿಭಾಗದ ಗುಲಬರ್ಗಾ ಜಿಲ್ಲೆ ಹಾಗೂ ಅದರ ತಾಲ್ಲೂಕುಗಳು ಅನುದಾನದ ಲೆಕ್ಕವನ್ನು ಇಲ್ಲಿ ನೀಡಲಾಗಿದೆ.

೨. ವಿಶೇಷ ಅಭಿವೃದ್ಧಿ ಯೋಜನೆ ಮೊತ್ತ ರೂ. ೧೬,೦೦೦ ಕೋಟಿ

೩. ಗುಲಬರ್ಗಾ ವಿಭಾಗದ ಪಾಲು ಶೇ. ೪೦ ರೂ. ೬೪೦೦ ಕೋಟಿ

೪. ಗುಲಬರ್ಗಾ ವಿಭಾಗದಲ್ಲಿ ಗುಲಬರ್ಗಾ ಜಿಲ್ಲೆಯ ಪಾಲು ಶೇ. ೪೧.೯೪ ರೂ. ೨೬೮೪.೧೬

**ಗುಲಬರ್ಗಾ ಜಿಲ್ಲೆಯ ಮೊತ್ತದಲ್ಲಿ ಅದರ ಹತ್ತು ತಾಲ್ಲೂಕುಗಳ ಪಾಲು**

**ಕೋಷ್ಟಕ ೭**

| **ಕ್ರ. ಸಂ.** | **ತಾಲ್ಲೂಕುಗಳು** | **ಅನುದಾನ ಹಂಚಿಕೆ ಸೂತ್ರ** | **ಶೇಕಡ ಪ್ರಮಾಣ** | **ಅನುದಾನದ ಮೊತ್ತ** |
|---|---|---|---|---|
| ೧. | ಅಫಜಲಪುರ | ೦.೩೮/೩.೩೮x೧೦೦ | = ೧೧.೨೪ | ರೂ. ೩೦೧.೬೯ ಕೋಟಿ |
| ೨. | ಅಳಂದ | ೦.೩೯/೩.೩೮x೧೦೦ | = ೧೧.೫೪ | ರೂ. ೩೦೯.೭೫ ಕೋಟಿ |
| ೩. | ಚಿಂಚೋಳಿ | ೦.೪೩/೩.೩೮x೧೦೦ | = ೧೨.೭೨ | ರೂ. ೩೪೧.೪೨ ಕೋಟಿ |
| ೪. | ಚಿತ್ತಾಪುರ | ೦.೩೫/೩.೩೮x೧೦೦ | = ೧೦.೩೬ | ರೂ. ೨೭೮ - ೦೭ ಕೋಟಿ |
| ೫. | ಗುಲಬರ್ಗಾ | ೦.೧೧/೩.೩೮x೧೦೦ | = ೩.೨೬ | ರೂ. ೮೭.೦೫ ಕೋಟಿ |
| ೬. | ಜೇವರ್ಗಿ | ೦.೪೩/೩.೩೮x೧೦೦ | = ೧೨.೭೨ | ರೂ. ೩೪೧.೪೨ ಕೋಟಿ |

| | | | | |
|---|---|---|---|---|
| ೭. | ಸೇಡಂ | ೦.೨೮/೩.೩೮x೧೦೦ | = ೮.೨೮ | ರೂ. ೨೨೨.೨೪ ಕೋಟಿ |
| ೮. | ಶಹಾಪುರ | ೦.೩೮/೩.೩೮x೧೦೦ | = ೮.೨೮ | ರೂ. ೨೨೨.೨೪ ಕೋಟಿ |
| ೯. | ಶೋರಾಪುರ | ೦.೩೦/೩.೩೮x೧೦೦ | = ೮.೮೮ | ರೂ. ೨೩೮.೩೫ ಕೋಟಿ |
| ೧೦. | ಯಾದಗಿರ್ | ೦.೩೩/೩.೩೮x೧೦೦ | = ೯.೭೬ | ರೂ. ೨೬೧.೯೭ ಕೋಟಿ |
| | ಗುಲಬರ್ಗಾ | ೧೦೦.೦೦ | | ರೂ. ೨೬೮೪.೧೦ ಕೋಟಿ |

ಉನ್ನತಾಧಿಕಾರ ಸಮಿತಿಯು ರೂಪಿಸಿರುವ ಅನುದಾನ ಹಂಚಿಕೆ ಸೂತ್ರದ ಆಧಾರದ ಮೇಲೆ ರಾಜ್ಯದ ಹಿಂದುಳಿದ ೧೧೪ ತಾಲ್ಲೂಕುಗಳ ನಡುವೆ ಅನುದಾನವನ್ನು ಹೇಗೆ ಹಂಚಬೇಕು ಎಂಬುದನ್ನು ಗುರುತಿಸಬಹುದಾಗಿದೆ.

**ಅನುದಾನ ಹಂಚಿಕೆಗೆ ಸರ್ಕಾರಿ ಸೂತ್ರ : ೨೦೦೭ – ೦೮**

ಉನ್ನತಾಧಿಕಾರ ಸಮಿತಿಯು ಸಲಹೆ ಮಾಡಿದ್ದ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯನ್ನು ಒಪ್ಪಿಕೊಂಡ ಸರ್ಕಾರವು ೨೦೦೭ - ೦೮ರ ಆಯವ್ಯಯದಲ್ಲಿ ಮೊದಲ ವರ್ಷದ ಬಾಬ್ತು ರೂ. ೧೫೭೧.೫೦ ಕೋಟಿ ತೆಗೆದಿರಿಸಿದೆ. ಇದೊಂದು ಸ್ವಾಗತಾರ್ಹ ಕ್ರಮವಾಗಿದೆ. ಸರ್ಕಾರದ ಕ್ರಮವು ಅಭಿನಂದನೀಯವಾಗಿದೆ.

ಈ ಯೋಜನೆಯನ್ನು ಅನುಷ್ಠಾವಿನಗೊಳಿಸಿದ ಸರ್ಕಾರವು ರಾಜ್ಯದ ೧೧೪ ಹಿಂದುಳಿದ ತಾಲ್ಲೂಕುಗಳ ನಡುವೆ ಅನುದಾನ ಹಂಚಿಕೆಗೆ ಕೆಳಕಂಡ ಸೂತ್ರವನ್ನು ರೂಪಿಸಿದೆ.

| | |
|---|---|
| **ರಾಜ್ಯದ ೩೯ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ** | **ಶೇ.೫೦** |
| **ರಾಜ್ಯದ ೪೦ ಅತಿ ಹಿಂದುಳಿದ ತಾಲ್ಲೂಕುಗಳಿಗೆ** | **ಶೇ.೩೦** |
| **ರಾಜ್ಯದ ೫೫ ಹಿಂದುಳಿದ ತಾಲ್ಲೂಕುಗಳಿಗೆ** | **ಶೇ. ೨೦** |

ಇದರ ಪ್ರಕಾರ ೨೦೦೭ - ೦೮ನೆಯ ಸಾಲಿನ ಅನುದಾನ ಹಂಚಿಕೆ ಹೀಗಿದೆ

ರಾಜ್ಯದ ೨೯ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಶೇ. ೫೦ ರೂ. ೭೮೫.೭೫ ಕೋಟಿ
ರಾಜ್ಯದ ೪೦ ಅತಿ ಹಿಂದುಳಿದ ತಾಲ್ಲೂಕುಗಳು ಶೇ. ೩೦ ರೂ.೪೭೧.೭೫ ಕೋಟಿ
ರಾಜ್ಯದ ೩೫ ಹಿಂದುಳಿದ ತಾಲ್ಲೂಕುಗಳು ಶೇ.೨೦ ರೂ. ೩೧೪.೩೦ ಕೋಟಿ
ಒಟ್ಟು ಶೇ. ೧೦೦.೦೦ ರೂ. ೧೫೭೧.೮೦ ಕೋಟಿ

ಇದರ ವಿಭಾಗವಾರು ಮತ್ತು ಜಿಲ್ಲಾವಾರು ಹಂಚಿಕೆಯ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

**ಗುಲಬರ್ಗಾ ವಿಭಾಗದ ಅನುದಾನದಲ್ಲಿ ಕಡಿತ**

ಸರ್ಕಾರಿ ಸೂತ್ರದ ಪ್ರಕಾರ ೨೦೦೭ - ೦೮ರಲ್ಲಿ ನಿಗದಿಪಡಿಸಿದ ರೂ. ೧೫೭೧.೫೦ ಕೋಟಿಯಲ್ಲಿ ಗುಲಬರ್ಗಾ ವಿಭಾಗಕ್ಕೆ ದೊರೆಯುವ ಮೊತ್ತ ರೂ. ೪೯೯.೯೮ ಕೋಟಿ. ಆದರೆ ಉನ್ನತಾಧಿಕಾರ ಸಮಿತಿಯು ಸೂತ್ರದ ಪ್ರಕಾರ ಅನುದಾನ ಹಂಚಿದರೆ ಗುಲಬರ್ಗಾ ವಿಭಾಗಕ್ಕೆ ದೊರೆಯುವ ಮೊತ್ತ ರೂ. ೬೨೮.೬೦ ಕೋಟಿ. ಅನುದಾನ ಹಂಚಿಕೆ ಸೂತ್ರದ ಬದಲಾವಣೆಯಿಂದ ಗುಲಬರ್ಗಾ ವಿಭಾಗಕ್ಕೆ ಉಂಟಾಗುವ ಕಡಿತ ರೂ. ೧೨೮.೬೨ ಕೋಟಿ.

ಸರ್ಕಾರವು ರೂಪಿಸಿರುವ ೫೦:೩೦:೨೦ರ ಪ್ರಕಾರ ಅನುದಾನ ಹಂಚುವ ಸೂತ್ರದಲ್ಲಿ ಪ್ರಾದೇಶಿಕ ಸ್ವರೂಪಕ್ಕೆ ಸ್ಥಾನವಿಲ್ಲವಾಗಿದೆ. ಇದರಿಂದಾಗಿ ಗುಲಬರ್ಗಾ ವಿಭಾಗಕ್ಕೆ ಕಡಿತ ಉಂಟಾಗುತ್ತದೆ. ರಾಜ್ಯದ ಎಲ್ಲ ಹಿಂದುಳಿದ ಜಿಲ್ಲೆಗಳಿಗೂ ಇದರಿಂದ ಕಡಿತ ಉಂಟಾಗುತ್ತದೆ. ಉದಾಹರಣೆಗೆ ಸರ್ಕಾರಿ ಸೂತ್ರದ ಪ್ರಕಾರ ರಾಜ್ಯದ ಹಿಂದುಳಿದ ಮತ್ತೊಂದು ಜಿಲ್ಲೆಯಾದ ವಿಜಾಪುರಕ್ಕೆ ದೊರೆಯುವ ಮತೊತ ರೂ. ೮೯.೫೭ ಕೋಟಿ. ಆದರೆ ಸಮಿತಿಯ ಸೂತ್ರವನ್ನು ಅನುಸರಿಸಿದರೆ ಅದಕ್ಕೆ ದೊರೆಯುವ ಮೊತ್ತ ರೂ. ೧೦೬.೮೩ ಕೋಟಿ.

ಹೀಗೆ ಅತ್ಯಂತ ಹಿಂದುಳಿದ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಸರ್ಕಾರಿ ಸೂತ್ರದಿಂದ ಅನ್ಯಾಯವಾಗುತ್ತದೆ. ಸಮಿತಿಯು ರೂಪಿಸಿರುವ ಸೂತ್ರವು ಹಿಂದುಳಿದ ಪ್ರದೇಶಕ್ಕೆ ನ್ಯಾಯ ಒದಗಿಸುತ್ತದೆ. ಇವೆರಡೂ ಸೂತ್ರಗಳ ನಡುವಿನ ವ್ಯತ್ಯಾಸವನ್ನು ಅಗತ್ಯವಾಗಿ ನಾವು ಗಮನಿಸಬೇಕು. ಸರ್ಕಾರವು ರೂಪಿಸಿರುವ ೫೦:೩೦:೨೦ ಸೂತ್ರವನ್ನು ಕೈಬಿಟ್ಟು ಸಮಿತಿ ಸೂಚಿಸಿರುವ ವಿಭಾಗವಾರು ಅನುದಾನ ಹಂಚಿಕಯನ್ನು ಅನುಸರಿಸುವುದು ಸೂಕ್ತ. ಏಕೆಂದರೆ ಸರ್ಕಾರಿ ಸೂತ್ರದಲ್ಲಿ ಅನುದಾನ ಹಂಚಿಕೆಗೆ ಹಿಂದುಳಿದಿರುವಿಕೆ ತೀವ್ರತೆಯು ಆಧಾರವಾಗಿಲ್ಲ. ಅಲ್ಲಿ ಜಿಲ್ಲೆಗಳ ನಡುವೆ ಮತ್ತು ತಾಲ್ಲೂಕುಗಳ ನಡುವೆ ಅನುದಾನ ಹಂಚಿಕೆಗೆ ಸರ್ಕಾರಿ ಸೂತ್ರದಲ್ಲಿ ಯಾವುದೇ ಕ್ರಮವಿಲ್ಲ.

**<u>ಭಾಗ</u> <u>೫</u>**

**ನಾವೇನು ಮಾಡಬಹುದು – ಮಾಡಬೇಕು!**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಮತಕ್ಕೆ, ಜನಾಭಿಪ್ರಾಯದ ಒತ್ತಡಕ್ಕೆ ಮಹತ್ವದ ಪಾತ್ರವಿದೆ. ಜನಮನವು ಕೇವಲ ಜನಮತವಾಗಿರಬಾರದು. ಅದಕ್ಕೆ ಸೂಕ್ತವಾದ ಸೈದ್ಧಾಂತಿಕ ಹಾಗೂ ಎಂಫೆರಿಕಲ್ ಆಧಾರ - ಪುರಾವೆಗಳು ಇರಬೇಕು. ಅರಿವಿನಿಂದ ಕೂಡಿದ ಜನಮತವನ್ನು ಸಂಘಟಿಸಬೇಕಾಗುತ್ತದೆ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ರಾಜ್ಯದಲ್ಲಿನ ಮುಂದುವರಿದ ಪ್ರದೇಶಗಳಲ್ಲಿ ಜನಮತದ ಸಂಘಟನೆ ಉತ್ತಮವಾಗಿದೆ. ಆದರೆ ಹಿಂದುಳಿದ ಪ್ರದೇಶದಲ್ಲಿ ಜನಮತದ ಸಂಘಟನೆ ಉತ್ತಮವಾಗಿದೆ. ಆದರೆ ಹಿಂದುಳಿದ ಪ್ರದೇಶದಲ್ಲಿ ಜನಮತದ ಸಂಘಟನೆಯಿಲ್ಲ ಮತ್ತು ಪ್ರಾದೇಶಿಕ ಅಸಮಾನತೆ ಬಗ್ಗೆ ಸೂಕ್ಷ್ಮ ಮಾಹಿತಿಯು ಜನರಿಗೆ ಲಭ್ಯವಿಲ್ಲ. ಈ ದಿಶೆಯಲ್ಲಿ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾದ ಗುಲಬರ್ಗಾ ವಿಭಾಗದಲ್ಲಿ ಜನಮತದ ಸಂಘಟನೆ ನಡೆಸುವ ಅಗತ್ಯವಿದೆ ಹಾಗೂ ಅದರ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಅರಿವಿನಿಂದ ಕೂಡಿದ ಜನಮತವನ್ನು ಸರ್ಕಾರವು ನಿರ್ಲಕ್ಷಿಸಲು ಸಾಧ್ಯವಿಲ್ಲ. ಈ ಪ್ರಬಂಧದ ಮೂಲ ಉದ್ದೇಶವೇ ಇದಾಗಿದೆ. ಗುಲಬರ್ಗಾ ವಿಭಾಗದ ಅಭಿವೃದ್ಧಿಗೆ ಕಂಟಕವಾಗಿರುವ ಸಂಗತಿಗಳಾವುವು? ಈ ಭಾಗದಲ್ಲಿ ಸಾಕ್ಷರತೆಯನ್ನು ಅಧಿಕಗೊಳಿಸುವುದು ಹೇಗೆ? ಅಭಿವೃದ್ಧಿಯೆಂದರೆ ಕೇವಲ ಕಾಮಗಾರಿಯೇ? ಅದು ಕೇವಲ ರಸ್ತೆ, ಸೇತುವೆ, ಕಟ್ಟಡ, ಸಮುದಾಯ ಭವನಗಳೇ? ಹಾಗಾದರೆ ಶಾಲೆಗೆ ಸರಿಯಾಗಿ ಶಿಕ್ಷಕರು ಹಾಜರಾಗುವಂತೆ ಮಾಡುವುದು ಅಭಿವೃದ್ಧಿಯಾಗುವುದಿಲ್ಲವೆ? ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿರುವಂತೆ ಮಾಡುವುದು, ಜನರಿಗೆ ಔಷದೋಪಾಚಾರ ದೊರೆಯುವಂತೆ ಮಾಡುವುದು ಅಭಿವೃದ್ಧಿಯಲ್ಲವೆ? ವಲಸೆ ಹೋಗುವುದನ್ನು ತಡೆಯುವುದು ಏನು? ಕಾಮಗಾರಿ, ರಸ್ತೆ - ಸೇತುವೆ ನಿರ್ಮಾಣ, ಕಟ್ಟಡ ಕಟ್ಟಿಸುವುದು ಮುಂತಾದವುಗಳ ಬಗ್ಗೆ ಜನ ಪ್ರತಿನಿಧಿಗಳು ತೋರುವ ಆಸಕ್ತಿಯನ್ನು ಯಾಕೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆಯನ್ನು

ಬಗೆಹರಿಸುವುದರ ಬಗ್ಗೆ ತೋರುವುದಿಲ್ಲ? ಯಾರನ್ನು ನಾವು ಬುದ್ಧಿಜೀವಿಗಳೆಂದು ಕರೆಯುತ್ತೇವೆಯೋ ಅವರು ಗುಲಬರ್ಗಾ ವಿಭಾಗದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಏನು ಮಾಡಬಹುದು?

ಈ ಪ್ರದೇಶದ ಅಭಿವೃದ್ಧಿ ಸಂಬಂಧಿ ಆದ್ಯತೆಗಳನ್ನು ಗುರುತಿಸುವುದು ತುಂಬಾ ಅಗತ್ಯವಿದೆ. ಈ ಪ್ರದೇಶದ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಜನರಿಗೆ ಸಂಬಂಧಿಸಿದಂತೆ ಸಮಸ್ಯೆಗಳೇನಿವೆ? ಇಂತಹ ಸಂಗತಿಗಳನ್ನು ಚರ್ಚೆಗೆ ಸಂವಾದಕ್ಕೆ ಒಳಪಡಿಸುವಲ್ಲಿ ಬುದ್ಧಿ ಜೀವಿಗಳ ಪಾತ್ರ ನಿರ್ಣಾಕವಾದುದಾಗಿದೆ. ಅವಕಾಶ ಎಲ್ಲಿ ದೊರೆಯುತ್ತದೋ ಅಂತಹ ವೇದಿಕೆಗಳಲ್ಲಿ, ಮಾಧ್ಯಮಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಗುಲಬರ್ಗಾ ವಿಭಾಗದ ಜನರ ಸಮಸ್ಯೆಗಳು ಚರ್ಚೆಯಾಗುವಂತೆ ನೋಡಿಕೊಳ್ಳಬೇಕು. ನಾವೇನು ಮಾಡಬೇಕು ಎಂಬುದಕ್ಕೆ ಸಿದ್ಧಸೂತ್ರಗಳೇನಿರುವುದಿಲ್ಲ. ಅದನ್ನು ನಾವು ನಮ್ಮ ಸಂದರ್ಭದ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಅನುದಾನ ಹಂಚಿಕೆ ಸೂತ್ರದಿಂದ ಗುಲಬರ್ಗಾ ವಿಭಾಗಕ್ಕೆ ಉಂಟಾಗುವ ಅನುದಾನದ ಕಡಿತವನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಉನ್ನತಾಧಿಕಾರ ಸಮಿತಿಯು ಕೇಂದ್ರೀಯ ವಿಶ್ವವಿದ್ಯಾಲಯವನ್ನು ಗುಲಬರ್ಗಾದಲ್ಲಿ ಸ್ಥಾಪಿಸಲು ಶಿಫಾರಸ್ಸು ಮಾಡಿದೆ ಎಂಬುದನ್ನು ಜನರ ಗಮನಕ್ಕೆ ತರಬೇಕಾಗುತ್ತದೆ. ಈ ವಿಭಾಗದಲ್ಲಿ ನೇಮಕವಾದ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತೆ ತಮ್ಮ ಸ್ವಂತ ಜಿಲ್ಲೆ - ವಿಭಾಗಕ್ಕೆ ವರ್ಗಾವಣೆ ಮಾಡಿಸಿಕೊಂಡು ಹೋಗದಂತೆ ನೋಡಿಕೊಳ್ಳಬೇಕು.

ಬಹಳ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗದಲ್ಲಿ ಕೇವಲ ಉಚಿತ ಪಠ್ಯಪುಸ್ತಕ ವಿತರಣೆ, ಸಮವಸ್ತ್ರಗಳನ್ನು ಕೊಡುವುದು, ಅಕ್ಷರ ದಾಸೋಹ ಮುಂತಾದವು ಸಾಕಾಗುವುದಿಲ್ಲ. ಇಲ್ಲಿನ ಸಮಸ್ಯೆಯ ಸ್ವರೂಪವು ತುಂಬಾ ಸಂಕೀರ್ಣವಾಗಿದೆ. ಈ ವಿಭಾಗದಲ್ಲಿ ಬೃಹತ್‌ಪ್ರಮಾಣದಲ್ಲಿ ವಿದ್ಯಾರ್ಥಿ - ವಿದ್ಯಾರ್ಥಿನಿ ವಸತಿ ನಿಲಯಗಳು, ವಸತಿಯುತ ಶಾಲೆಗಳು, ವಿಶೇಷ ಬೋಧನೆ ಮುಂತಾದ ಸಂಗತಿಗಳನ್ನು ಒಳಗೊಂಡ ವಿಶೇಷ ಕಾರ್ಯಕ್ರಮವನ್ನೇ ಹಮ್ಮಿಕೊಳ್ಳಬೇಕಾಗುತ್ತದೆ. ರಾಜ್ಯಮಟ್ಟದಲ್ಲಿ ರೂಪಿಸುವ ಕಾರ್ಯಯೋಜನೆಯಿಂದ ಹಿಂದುಳಿದ ಜಿಲ್ಲೆಗಳ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಈ ವಿಭಾಗದ ಪ್ರತಿ ತಾಲ್ಲೂಕಿಗೆ ಕನಿಷ್ಠ ೫ ವಿದ್ಯಾರ್ಥಿನಿಯರ ಮತ್ತು ೫ ವಿದ್ಯಾರ್ಥಿಗಳ ವಸತಿಯುತ ಶಾಲೆಗಳನ್ನು ಹಾಗೂ ಅದೇ ರೀತಿ ವಿದ್ಯಾರ್ಥಿನಿಲಯಗಳನ್ನು ತೆರೆಯಬೇಕು. ಶೈಕ್ಷಣಿಕವಾಗಿ - ಕೌಟುಂಬಿಕವಾಗಿ ಇಲ್ಲಿನ ಮಕ್ಕಳು ಎದುರಿಸುತ್ತಿರುವ ಕೊರತೆಯನ್ನು ಸರ್ಕಾರವು ವಿಶೇಷ ಕಾರ್ಯಕ್ರಮದ ಮೂಲಕ ತುಂಬಿಕೊಡಬೇಕಾಗುತ್ತದೆ. ಅದಕ್ಕಾಗಿ ಬೃಹತ್ ಪ್ರಮಾಣದ ಶೈಕ್ಷಣಿಕ ಅಂದೋಳನವನ್ನೇ ಇಲ್ಲಿ ಕೈಗೊಳ್ಳಬೇಕಾಗುತ್ತದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದಿನಗೂಲಿ ರೂ.೧೦೦ ರಷ್ಟಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಕನಿಷ್ಟ ರೂ. ೧೫೦ ರಷ್ಟಿರಬೇಕಾಗುತ್ತದೆ. ಇಡೀ ರಾಷ್ಟ್ರಕ್ಕೆ ರಾಜ್ಯಕ್ಕೆ ಒಂದೇ ರೀತಿಯ ಕೂಲಿ ನಿಗದಿಪಡಿಸುವುದು ಸರಿಯಲ್ಲ. ಕೇಂದ್ರ ಸರ್ಕಾರವು ದಿನಗೂಲಿಗೆ ರೂ. ೧೦೦ ನೀಡಿದರೆ ಅದಕ್ಕೆ ಸಮವಾಗಿ ರಾಜ್ಯ ಸರ್ಕಾರವು ರೂ.೭೦ ನೀಡಬೇಕು. ಈ ಬಗೆಯ ಕ್ರಿಯಾಶೀಲ ಕ್ರಮಗಳಿಂದ ಮಾತ್ರ ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕಬಹುದು. ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾದ ಗುಲಬರ್ಗಾ ವಿಭಾಗಕ್ಕೆ ಹೆಚ್ಚಿನ ಸಂಪನ್ಮೂಲ ಹರಿಯುವಂತೆ ಮಾಡುವ ಅಗತ್ಯವಿದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆಯೂ ನಾವು ಗುಲಬರ್ಗಾ ವಿಭಾಗಕ್ಕೆ ವಿಶೇಷ ಕಾರ್ಯಯೋಜನೆ ರೂಪಿಸುವ ಅಗತ್ಯವಿದೆ. ಯಾವುದಾದರೂ ಯೋಜನೆಯ ನಿರ್ಮಾಣವನ್ನು ಕೈಗೆತ್ತಿಕೊಂಡರೆ ಅದನ್ನು ಅತಿ ಶೀಘ್ರವಾಗಿ ಮುಗಿಸುವ ಬಗ್ಗೆ ಒತ್ತು ನೀಡಬೇಕು. ಸಾಮಾನ್ಯ ಸಂದರ್ಭದಲ್ಲಿ ಐದು ವರ್ಷಗಳು ಒಂದು ಯೋಜನೆ ನಿರ್ಮಾಣಕ್ಕೆ ಕಾಲಾವಧಿ ಅಗತ್ಯವಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದನ್ನು ಮೂರು ವರ್ಷಕ್ಕೆ ಮುಗಿಸುವ ಬಗ್ಗೆ ನಾವು ಯೋಚಿಸಬೇಕು. ಈ ಬಗೆಯ ಯೋಜನೆಗಳನ್ನು ಸರ್ಕಾರವು ಜಾರಿಗೊಳಿಸುವಂತೆ ಗುಲಬರ್ಗಾ ವಿಭಾಗದ ಜನಸಮೂಹ ಒತ್ತಾಯಿಸಬೇಕಾಗುತ್ತದೆ.

**ಜನಪ್ರತಿನಿಧಿಗಳ ಪಾತ್ರ ಮತ್ತು ಜನಸಂಘಟನೆ ಪಾತ್ರ**

ಅಭಿವೃದ್ಧಿ ಸಂಗತಿಗಳನ್ನು, ಪ್ರಾದೇಶಿಕ ಅಸಮಾನತೆ ವಿಷಯವನ್ನು ಮತ್ತು ಗುಲಬರ್ಗಾ ವಿಭಾಗದ ಹಿಂದುಳಿದಿರುವಿಕೆ ಸ್ಥಿತಿಯನ್ನು 'ರಾಜಕೀಕರಣ'ಗೊಳಿಸುವ ಅಗತ್ಯವಿದೆ. ಇಲ್ಲಿ 'ರಾಜಕೀಕರಣ'ವೆಂಬುದನ್ನು ವಿಸ್ತೃತವಾದ ಅರ್ಥದಲ್ಲಿ ಬಳಸಲಾಗಿದೆ. ಜನಸಮೂಹವು ಅಭಿವೃದ್ಧಿಯಲ್ಲಿ - ಅಧಿಕಾರದಲ್ಲಿ ಪಾಲು ಪಡೆಯುವುದು ಮತ್ತು ಪಾಲನ್ನು ಒತ್ತಾಯಿಸುವುದು ರಾಜಕಾರಣ. ಅದನ್ನು ಸೀಮಿತವಾದ ಹಾಗೂ ವಿಕೃತ ರೀತಿಯಲ್ಲಿ ಇಂದು ಬಳಸಲಾಗುತ್ತಿದೆ. ನಮ್ಮ ಸಂದರ್ಭದಲ್ಲಿ ಗುಲಬರ್ಗಾ ವಿಭಾಗ ಮತ್ತು ಈ ವಿಭಾಗದ ಜನಸಮೂಹವು ರಾಜ್ಯಮಟ್ಟದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ತನ್ನ ಪಾಲನ್ನು ಒತ್ತಾಯಿಸಬೇಕು. ಈ ಅರ್ಥದಲ್ಲಿ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮಾನತೆಯನ್ನು ರಾಜಕೀಕರಣಗೊಳಿಸಬೇಕೆಂದು ಇಲ್ಲಿ ಹೇಳಲಾಗಿದೆ.

ರಾಜಕೀಯ - ರಾಜಕಾರಣವೆನ್ನುವುದು ಕೇವಲ ಜನಪ್ರತಿನಿಧಿಗಳ ಜವಾಬುದಾರಿಯೆಂದು ಸಂಕುಚಿತ ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು ಸರಿಯಲ್ಲ. ಜನಪ್ರತಿನಿಧಿಗಳು, ಸಂಸತ್ ಸದಸ್ಯರು, ವಿಧಾನ ಮಂಡಳದ ಸದಸ್ಯರು ನಿರ್ವಾತದಲ್ಲೇನು ಕೆಲಸ ಮಾಡುತ್ತಿರುವುದಿಲ್ಲ. ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗಕ್ಕೆ ರಾಜ್ಯ ಸರ್ಕಾರದಿಂದ ನ್ಯಾಯ ದೊರಕದಿದ್ದರೆ ಅದು ಜನಪ್ರತಿನಿದಿಗಳು ವೈಫಲ್ಯವೆಂಬುದರಲ್ಲಿ ಆಶ್ಚರ್ಯವಿಲ್ಲ. ಆದರೆ ಅವರನ್ನು ಮಾತ್ರವೇ ಅದಕ್ಕೆ ಕಾರಣವನ್ನಾಗಿ ಮಾಡುವುದು ಸರಿಯೆಂದು ಕಾಣುವುದಿಲ್ಲ.

ಜನಪ್ರತಿನಿಧಿಗಳು ರಾಜಕೀಯವಾಗಿ ವಿಫಲರಾಗಿದ್ದರೆ ಅದರಲ್ಲಿ ಜನಸಮೂಹದ ಪಾಲು ಇದೆ. ಆದ್ದರಿಂದ ಜನಸಂಘಟನೆಯನ್ನು ಇದಕ್ಕೆ ಸಂಬಂಧಿಸಿದಂತೆ ಕಟ್ಟುವ ಅಗತ್ಯವಿದೆ. ಜನಪ್ರತಿನಿಧಿಗಳು ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಗುಲಬರ್ಗಾ ವಿಭಾಗಕ್ಕೆ ನ್ಯಾಯವನ್ನು ಒದಗಿಸಿಕೊಂಡುವಂತೆ ಒತ್ತಾಯ ಹೇರುವಂತೆ ಮಾಡುವ ಜವಾಬುದಾರಿ ಜನ ಸಂಘಟನೆಗಿರುತ್ತದೆ. ಜನಸಂಘಟನೆ ಪಾತ್ರವು ರಾಜಕಾರಣದ ದೃಷ್ಟಿಯಿಂದ ನಿರ್ಣಾಯಕವಾದುದಾಗಿದೆ. ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ಜನಸಮೂಹಕ್ಕೆ ಮಾಹಿತಿ ಇರಬೇಕು ಹಾಗೂ ಅರಿವು ಇರಬೇಕು. ಮಾಹಿತಿ ಮತ್ತು ಅರಿವಿನ ನೆಲೆಯಲ್ಲಿ ಜನಸಂಘಟನೆ ನಡೆದರೆ ಅದು ರಾಜಕೀಯವಾಗಿ ಯಶಸ್ವಿಯಾಗ ಬಲ್ಲುದಾಗಿದೆ. ಜನ ಸಂಘಟನೆಯು ಕೇವಲ ಡಾ. ಡಿ.ಎಂ. ನಂಜುಂಡಪ್ಪ ವರದಿಯ ಅನುಷಾವಿನವನ್ನು ಮಾತ್ರ ಒತ್ತಾಯಿಸಿದರೆ ಸಾಕಾಗುವುದಿಲ್ಲ. ಈ ವರದಿಯ ಹಿನ್ನೆಲೆಯಲ್ಲಿ ತಮ್ಮ ಪ್ರದೇಶದ ಅಭಿವೃದ್ಧಿ - ದುಸ್ಥಿತಿಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗುರುತಿಸಿಕೊಳ್ಳಬೇಕು. ವರ್ಗ ಸಂಬಂಧಗಳ ನೆಲೆಯಲ್ಲಿ ಜನಸಂಘಟನೆ ನಡೆಯಬೇಕು ಮತ್ತು ವರ್ಗಸಂಬಂಧಗಳ ನೆಲೆಯಲ್ಲಿ ಅಭಿವೃದ್ಧಿಯ ಅನುಸಂಧಾನ ನಡೆಯಬೇಕು. ವಿಮಾನ ನಿಲ್ದಾಣದಂತಹ ಬೇಡಿಕೆಯ ಗುಲಬರ್ಗಾ ವಿಭಾಗದ ಅಭಿವೃದ್ಧಿ ಆದ್ಯತೆಗಳ ವಿಕೃತಿಯಾಗಬಹುದೇ ವಿನಾ ಅದು ಜನಸಮೂಹದ ವರ್ಗಾಹಿತಾಸಕ್ತಿಗಳನ್ನು ಪ್ರತಿಬಿಂಬಿಸುವುದಿಲ್ಲ.

ಆದ್ದರಿಂದ ಅಭಿವೃದ್ಧಿ - ದುಸ್ಥಿತಿಗೆ ಸಂಬಂಧಿಸಿದಂತೆ ಗುಲಬರ್ಗಾ ವಿಭಾಗದಲ್ಲಿ ಜನಸಂಘಟನೆ ನಡೆಸುವ ಅಗತ್ಯವಿದೆ. ಜನಸಂಘಟನೆಯ ಪಾತ್ರವನ್ನು ಅಮರ್ತ್ಯಸೇನ್‌ಪಬ್ಲಿಕ್‌ಆಕ್ಷ್ಯನ್‌ಎಂದು ಕರೆದಿದ್ದಾರೆ. ಇಲ್ಲಿ ಪಬ್ಲಿಕ್ ಎನ್ನುವುದನ್ನು ಸಾರ್ವಜನಿಕವೆಂದು ತಿಳಿಯುವುದಕ್ಕೆ ಪ್ರತಿಯಾಗಿ ಜನಸಮೂಹ ಅಥವಾ ಜನಸಂಘಟನೆಯೆಂದು ತಿಳಿಯಬೇಕು. ಇಂತಹ ಜನಸಂಘಟನೆಯನ್ನು ಕಟ್ಟುವ ದಿಶೆಯಲ್ಲಿ ಪ್ರಸ್ತುತ ಕೈಪಿಡಿ - ಹೊತ್ತಿಗೆಯ ಒಂದು ಪ್ರಯತ್ನವಾಗಿದೆ. ಏನು ಮಾಡಬೇಕು - ಮಾಡಬಹುದು ಎಂಬುದು ಇಲ್ಲಿ ಜನಸಂಘಟನೆಯನ್ನು ಪ್ರತಿನಿಧಿಸುತ್ತದೆ. ಇಂತಹ ಜನಸಂಘಟನೆಯಲ್ಲಿ ಗುಲಬರ್ಗಾ ವಿಭಾಗದ ಕಾಲೇಜು ವಿದ್ಯಾರ್ಥಿ - ವಿದ್ಯಾರ್ಥಿನಿಯರನ್ನು ತೊಡಗಿಸುವ ಅಗತ್ಯವಿದೆ. ಅಧ್ಯಯನ - ಅರಿವು - ಜಾಗೃತಿ ಒಂದು ಕಡೆ ಮತ್ತು ಇನ್ನೊಂದು ಕಡೆ ಕ್ರಿಯಾಶೀಲತೆ ನೇರ ಕ್ರಮಗಳ ಸಂಯೋಜನೆ ಮೂಲಕ ಜನಸಂಘಟನೆಯನ್ನು ನಡೆಸಬೇಕಾಗಿದೆ.

ಜನಸಂಘಟನೆಯೆಂಬುದು ಕೇವಲ ಬೇಡಿಕೆಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಸರ್ಕಾರಕ್ಕೆ ಸಲ್ಲಿಸುವುದಕ್ಕೆ ಮೀಸಲಾದ ಸಂಗತಿಯಾಗಬಾರದು. ಅಭಿವೃದ್ಧಿ ಕಾರ್ಯಕ್ರಮಗಳು ಜನರಿಗೆ ಜನಸಮೂಹಕ್ಕೆ ಸಮರ್ಥವಾಗಿ ದೊರೆಯುವಂತೆ ಮಾಡುವ ಜವಾಬುದಾರಿಯನ್ನು ಅದು ನಿರ್ವಹಿಸಬೇಕಾಗುತ್ತದೆ.

**ಅಭಿವೃದ್ಧಿ ಅನುಸಂಧಾನ**

ಗುಲಬರ್ಗಾ ವಿಭಾಗದ ಅಭಿವೃದ್ಧಿ ಕುರಿತಂತೆ, ದುಸ್ಥಿತಿ ಕುರಿತಂತೆ, ಅಲ್ಲಿನ ಪ್ರಾಥಮಿಕ ಶಿಕ್ಷಣ ಕುರಿತಂತೆ, ಆರೋಗ್ಯಕ್ಕೆ ಸಂಬಂಧಿಸಿದಂತೆ, ಮೂಲಸೌಲಭ್ಯ ಕುರಿತಂತೆ ಅನುಸಂಧಾನ ನಡೆಯಬೇಕು, ಸಂವಾದ ನಡೆಯಬೇಕು. ಈ ಬಗೆಯ ಅನುಸಂಧಾನ - ಸಂವಾದದ ಮೂಲಕ ಜನಸಂಘಟನೆ ನಡೆಯಬೇಕು. ಇಂತಹ ಜನಸಂಘಟನೆಯು ಜನಪ್ರತಿನಿಧಿಗಳ ಮೇಲೆ ಮತ್ತು ಸರ್ಕಾರದ ಮೇಲೆ ಒತ್ತಡ ತರಬಹುದು. ಆ ಮೂಲಕ ಗುಲಬರ್ಗಾ ವಿಭಾಗದ ಅಭಿವೃದ್ಧಿಗೆ ಹೆಚ್ಚಿನ ನೆರವನ್ನು ಪಡೆಯಬಹುದು. ಈ ಜನ ಸಂಘಟನೆಯ ಕಾರ್ಯದಲ್ಲಿ ಗುಲಬರ್ಗಾ ವಿಭಾಗದ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮಪಂಚಾಯತಿ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ ಸದಸ್ಯರನ್ನು ತೊಡಗಿಸಬಹುದು. ಸ್ವಸಹಾಯ ಗುಂಪುಗಳು ಮಹಿಳಾ ಸದಸ್ಯರನ್ನು ಇದರಲ್ಲಿ ತೊಡಗಿಸಬಹುದು. ಮಹಿಳೆಯರು ಜನ ಸಂಘಟನೆಯಲ್ಲಿ ಹೆಚ್ಚು ತೊಡಗುವಂತೆ ಮಾಡುವ ಅಗತ್ಯವಿದೆ. ಏಕೆಂದರೆ ಪ್ರಾದೇಶಿಕ ಅಸಮಾನತೆಗೆ ಲಿಂಗಸಂಬಂಧಿ ಆಯಾಮ ಕೂಡ ಇದೆ ಎಂಬುದನ್ನು ನಾವು ಮರೆಯಬಾರದು.

**ಅನುಬಂಧ ೧**

**ಉನ್ನತಾಧಿಕಾರ ಸಮಿತಿ ಸೂತ್ರದ ಪ್ರಕಾರ ಅನುದಾನ ಹಂಚಿಕೆ : ೨೦೦೧**

| ಜಿಲ್ಲೆಗಳು | ಶೇಕಡಪಾಲು | ರೂ.೧೬೦೦೦ ಕೋಟಿ ಪಾಲು | ರೂ.೧೫೭೧.೫ರ ಕೋಟಿ ಪಾಲು | ಜಿಲ್ಲೆಗಳು | ಶೇಕಡಪಾಲು | ರೂ.೧೬೦೦೦ ಕೋಟಿ ಪಾಲು | ರೂ.೧೫೭೧.೫೦ ಕೋಟಿ ಪಾಲು |
|---|---|---|---|---|---|---|---|
| ಬಳ್ಳಾರಿ | ೧೨.೪೧ | ೭೯೪.೨೪ | ೭೮.೦೦ | ಬೆಂಗಳೂರು (ಗ್ರಾ) | ೧.೮೯ | ೭೫.೬೦ | ೭.೪೩ |
| ಬೀದರ್ | ೧೪.೭೬ | ೯೪೪.೬೪ | ೯೨.೭೮ | ಬೆಂಗಳೂರು(ನ) | ೧೦.೩೪ | ೪೧೩.೬೦ | ೪೦.೬೨ |
| ಗುಲಬರ್ಗಾ | ೪೧.೯೪ | ೨೬೮೪.೧೬ | ೨೬೩.೬೪ | ಚಿತ್ರದುರ್ಗ | ೧೬.೧೬ | ೬೪೬.೪೦ | ೬೩.೪೯ |
| ರಾಯಚೂರು | ೧೮.೬೧ | ೧೧೯೧.೦೪ | ೧೧೬.೯೮ ೪ | ದಾವಣಗೆರೆ | ೧೫.೭೯ | ೬೩೧.೬೦ | ೬೨.೦೪ |
| ಕೊಪ್ಪಳ | ೧೨.೨೮ | ೭೮೫.೯೨ | ೭೭.೧೯ ೫. | ಕೋಲಾರ | ೧೭.೬೬ | ೭೦೬.೪೦ | ೬೯.೩೮ |
| – | – | – | – | ಶಿವಮೊಗ್ಗ | ೪.೮೯ | ೧೯೫.೬೦ | ೧೯.೨೧ |
| – | – | – | – | ತುಮಕೂರು | ೩೩.೨೭ | ೧೩೩೦.೮೦ | ೧೩೦.೭೧ |

| | | | | | | | |
|---|---|---|---|---|---|---|---|
| ಗುಲಬರ್ಗಾ ವಿಭಾಗ | ೧೦೦.೦೦ | ೬೪೦೦.೦೦ | ೬೨೮.೬೦ | ಬೆಂಗಳೂರು ವಿಭಾಗ | ೧೦೦.೦೦ | ೪೦೦೦.೦೦ | ೩೯೨.೮೭ |
| ಬೆಳಗಾವಿ | ೧೬.೭೫ | ೫೩೬.೦೦ | ೫೨.೬೫ | ಚಿಕ್ಕಮಗಳೂರು | ೧೦.೮೭ | ೨೬೦.೮೮ | ೨೫.೬೨ |
| ಬಿಜಾಪುರ | ೩೩.೯೯ | ೧೦೮೭.೬೮ | ೧೦೬.೮೩ | ದಕ್ಷಿಣ ಕನ್ನಡ | – | – | – |
| ಬಾಗಲಕೋಟೆ | ೧೩.೫೯ | ೪೩೪.೮೮ | ೪೨.೭೧ | ಉಡುಪಿ | – | – | – |
| ಧಾರವಾಡ | ೫.೩೪ | ೧೭೦.೮೮ | ೧೬.೭೮ | ಹಾಸನ | ೧೫.೨೨ | ೩೬೫.೨೮ | ೩೫.೮೮ |
| ಗದಗ | ೭೫೨ | ೨೪೦.೬೪ | ೨೩.೬೪ | ಕೊಡಗು | – | – | – |
| ಹಾವೇರಿ | ೧೨.೮೬ | ೪೧೧.೫೨ | ೪೦.೪೨ | ಮಂಡ್ಯ | ೨೩.೯೧ | ೫೭೩.೮೪ | ೫೬.೩೬ |
| ಉ.ಕನ್ನಡ | ೯.೯೫ | ೩೧೮.೪೦ | ೩೧.೨೭ | ಮೈಸೂರು | ೨೭.೯೦ | ೬೬೯.೬೦ | ೬೫.೭೭ |
| – | – | – | – | ಚಾಮರಾಜನಗರ | ೨೨.೧೦ | ೫೩೦.೪೦ | ೫೨.೦೦ |
| **ಬೆಳಗಾವಿ ವಿಭಾಗ** | **೧೦೦.೦೦** | **೩೨೦೦.೦೦** | **೩೧೪.೩೦** | **ಮೈಸೂರು ವಿಭಾಗ** | **೧೦೦.೦೦** | **೨೪೦೦.೦೦** | **೨೩೫.೭೩** |
| **ಉತ್ತರ ಕರ್ನಾಟಕ** | **೬೦.೦೦** | **೯೬೦೦.೦೦** | **೯೪೨.೯೦** | **ದಕ್ಷಿಣ ಕರ್ನಾಟಕ** | **೪೦.೦೦** | **೬೪೦೦.೦೦** | **೬೨೮.೬೦** |

*ಮೂಲ : ಪ್ರಾದೇಶಿಕ ಅಸಮಾನತೆ ಅಧ್ಯಯನದ ಉನ್ನತಾಧಿಕಾರ ಸಮಿತಿಯ ಅಂತಿಮ ವರದಿ : ೨೦೦೨*

ಅನುಬಂಧ ೨

ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ ಅನುದಾನ ವಿನಿಯೋಗದಲ್ಲಿ ವ್ಯತ್ಯಯ ೨೦೦೭ – ೦೮

(ಕೋಟಿ ರೂಪಾಯಿಗಳಲ್ಲಿ)

| | | ಸರ್ಕಾರಿ ಸೂತ್ರ | | | ಸಮಿತಿ ಸೂತ್ರ | | | |
|---|---|---|---|---|---|---|---|---|
| **ವಿಭಾಗಗಳು** | **ಹಿಂದುಳಿದ ತಾಲ್ಲೂಕುಗಳು** | **ಅತಿ ಹಿಂದುಳಿದ ತಾಲ್ಲೂಕುಗಳು** | **ಅತ್ಯಂತ ಅತಿ ಹಿಂದುಳಿದ ತಾಲ್ಲೂಕುಗಳು** | **ಒಟ್ಟು** | **ಹಿಂದುಳಿದ ತಾಲ್ಲೂಕುಗಳು** | **ಅತಿ ಹಿಂದುಳಿದ ತಾಲ್ಲೂಕುಗಳು** | **ಅತ್ಯಂತ ಅತಿ ಹಿಂದುಳಿದ** | **ಒಟ್ಟು** |

| | | | | | | | | |
|---|---|---|---|---|---|---|---|---|
| ಬೆಂಗಳೂರು ವಿಭಾಗ | ೮೦.೮೨ | ೧೫೩.೨೨ | ೨೨೧.೬೨ | ೪೫೫.೬೬ | ೭೮.೫೬ | ೧೧೭.೮೬ | ೧೯೬.೪೪ | ೩೯೨.೮೬ |
| ಮೈಸೂರು ವಿಭಾಗ | ೮೯.೮೦ | ೧೧೭.೮೬ | ೪೦.೩೦ | ೨೪೭.೯೬ | ೪೭.೧೫ | ೭೦.೭೨ | ೧೧೭.೮೬ | ೨೩೫.೭೩ |
| ದ.ಕ. ಪ್ರದೇಶ | ೧೭೦.೬೨ | ೨೭೧.೦೮ | ೨೬೧.೯೨ | ೭೦೩.೬೨ | ೧೨೫.೭೧ | ೧೮೮.೫೮ | ೩೧೪.೩೦ | ೬೨೮.೫೯ |
| ಬೆಳಗಾವಿ ವಿಭಾಗ | ೧೨೫.೭೨ | ೧೪೧.೪೪ | ೧೦೦.೭೪ | ೩೬೭.೯೦ | ೬೨.೮೬ | ೯೪.೨೯ | ೧೫೭.೧೫ | ೩೧೪.೩೦ |
| ಗುಲಬರ್ಗಾ ವಿಭಾಗ | ೧೭.೯೬ | ೫೮.೭೩ | ೪೨೩.೦೯ | ೪೯೯.೯೮ | ೧೨೫.೭೨ | ೧೮೮.೫೦ | ೪೧೪.೩೦ | ೬೨೮.೫೨ |
| ಉ.ಕ.ಪ್ರದೇಶ | ೧೪೩.೬೮ | ೨೦೦.೩೭ | ೫೨೩.೮೩ | ೮೬೭.೮೮ | ೧೮೮.೫೮ | ೨೮೨.೭೯ | ೪೭೧.೪೫ | ೯೪೨.೮೨ |
| ರಾಜ್ಯ | ೩೧೪.೩೦ | ೪೭೧.೭೫ | ೭೮೫.೭೫ | ೧೫೭೧.೫೦ | ೩೧೪.೩೦ | ೪೭೧.೭೫ | ೭೮೫.೭೫ | ೧೫೭೧.೫೦ |

***ಟಿಪ್ಪಣಿ :*** *ಸರ್ಕಾರವು ೨೦೦೭ –*

*೦೮ನೆಯ ಸಾಲಿನ ಬಜೆಟ್ಟ್‌ನಲ್ಲಿ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ ರೂ. ೧೫೭೧.೫ ಕೋಟಿ ಮೀಸಲಿಟ್ಟಿದೆ. ಅದನ್ನು ಸಮಿತಿ ಸೂತ್ರದಂತೆ ಹಂಚಿದರೆ ವಿಭಾಗಗಳಿಗೆ ಎಷ್ಟು ದೊರೆಯುತ್ತದೆ ಮತ್ತು ಸರ್ಕಾರಿ ಸೂತ್ರದ ಪ್ರಕಾರ ಹಂಚಿದರೆ ವಿಭಾಗಗಳಿಗೆ ಎಷ್ಟು ದೊರೆಯು ತ್ತದೆ ಎಂಬುದನ್ನು ತೋರಿಸಿದೆ.*

# ೯. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ – ಗತಿ (೧)

ಪ್ರಸ್ತಾವನೆ

ಶಿಕ್ಷಣವನ್ನು ಸ್ಥೂಲವಾಗಿ ಪ್ರಾಥಮಿಕ (ಮೂಲ) ಮತ್ತು ಉನ್ನತವೆಂದು ವರ್ಗೀಕರಸುವದು ರೂಢಿಯಲ್ಲಿದೆ.

[1]ವಾಸ್ತವವಾಗಿ ಇವೆರಡರ ನಡುವೆ ಪ್ರೌಢಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣವೆಂಬ ಮಧ್ಯಂತರ ಹಂತಗಳೂ ಇವೆ.[2]ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ೧ ರಿಂದ ೧೦ನೆಯ ತರಗತಿಗಳನ್ನು ಒಳಗೊಂಡ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪ್ರಾಥಮಿಕವೆಂದು ಮತ್ತು ಅದರ ನಂತರದ್ದನ್ನು ಉನ್ನತವೆಂದೂ ವರ್ಗೀಕರಿಸಿಕೊಳ್ಳಲಾಗಿದೆ. ಇತ್ತೀಚೆಗೆ ಪುರ್ವ ಪ್ರಾಥಮಿಕವೆಂ ಹಂತವೂ ರೂಪುಗೊಂಡಿದೆ.

ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ ದೃಷ್ಟಿಯಿಂದ ಶಿಕ್ಷಣದ ಪಾತ್ರ ತುಂಬಾ ಮಹತ್ವದ್ದಾಗಿದೆ. ಸಾಮಾಜಿಕ – ಆರ್ಥಿಕ ರಚನೆಯಲ್ಲಿ ಮೇಲ್ಮುಖಿ ಚಲನೆಯು ಶಿಕ್ಷಣದಿಂದ ಸಾಧ್ಯವೆಂದು ಹೇಳಲಾಗುತ್ತಿದೆ. ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಶಿಕ್ಷಣವನ್ನು ‘ಮಾನವ

ಬಂಡವಾಳ’ವೆಂದು ಪರಿಗಣಿಸಲಾಗಿದೆ. ಅದರ ಮೇಲೆ ತೊಡಗಿಸುವ ಬಂಡವಾಳವನ್ನು ಹೂಡಿಕೆಯೆಂದು ಪರಿಭಾವಿಸಿಕೊಳ್ಳಲಾಗಿದೆ. ಆದರೆ ಶಿಕ್ಷಣಕ್ಕೆ ಎಷ್ಟು ಮಹತ್ವ ಸಲ್ಲಬೇಕೋ ಅಷ್ಟು ಮಹತ್ವವನ್ನು ನಮ್ಮ ಸರ್ಕಾರಗಳು ನೀಡುತ್ತಿಲ್ಲ (ಗೇಲ್ ಒಮ್ ವಿಡ್ತ್೧೯೯೯:೧೩೪). ಅದರಲ್ಲೂ ಪ್ರಾಥಮಿಕ ಶಿಕ್ಷಣವೂ ಸರ್ಕಾರದ ನೀತಿ ನಿರೂಪಣೆ ಹಾಗೂ ಆಯವ್ಯಯಗಳಲ್ಲಿ ಆದ್ಯತೆಯ ಸಂಗತಿಯಾಗಿಲ್ಲ. ಇಂದು ಸಮಾಜವು ಉನ್ನತ ಶಿಕ್ಷಣ – ಗುಣಮಟ್ಟದ ಶಿಕ್ಷಣವನ್ನು ವ್ಯಸನದಂತೆ ಹಚ್ಚಿಕೊಂಡಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಲಾಗಾಯ್ತಿನಿಂದ ಶಿಕ್ಷಣ – ಅಕ್ಷರವನ್ನು ಕೆಲವು ವರ್ಗಗಳು ಗುತ್ತಿಗೆ ಹಿಡಿದಿದ್ದವು (ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್: ೨೦೦೨:೧೪೫).[3] ಇಂದಿಗೂ ಅವುಗಳ ಗುತ್ತಿಗೆ ಪ್ರಚ್ಛನ್ನ ರೂಪದಲ್ಲಿ ಮುಂದುವರಿದಿದೆ. ಸ್ವಾತಂತ್ರ್ಯಾ ನಂತರ ಶಿಕ್ಷಣವನ್ನು ಜನಸಮೂಹಕ್ಕೆ ಒದಗಿಸುವ ಜವಾಬುದಾರಿಯನ್ನು ಸರ್ಕಾರವು ವಹಿಸಿಕೊಂಡಿತು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಪಾತ್ರ ನಿರ್ಣಾಯಕವಾದುದಾಗಿದೆ.[4] ಶಿಕ್ಷಣವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳು ತುಂಬಾ ಸರಳವಾಗಿವೆ. ಶಾಲೆಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಒದಗಿಸಿದರೆ ಸಾಕು, ಜನರು ಶಿಕ್ಷಣ ಸೌಲಭ್ಯವನ್ನು ಪಡೆದುಕೊಳ್ಳುತ್ತಾರೆ ಎಂಬುದು ಸರ್ಕಾರವು ಅನುಸರಿಸಿಕೊಂಡು ಬರುತ್ತಿರುವ ನೀತಿಯಾಗಿದೆ. ಶಾಲಾಕಟ್ಟಡ, ಶಿಕ್ಷಕರು, ಪಠ್ಯಪುಸ್ತಕ ಮುಂತಾದವುಗಳನ್ನು ಒದಗಿಸುವುದೇ ಶಿಕ್ಷಣ ಕಾರ್ಯಕ್ರಮವೆಂದು ಸರ್ಕಾರವು ಭಾವಿಸಿದಂತಿದೆ. ಆದರೆ ಈ ಸಮಸ್ಯೆಯು ಸರ್ಕಾರವು ತಿಳಿದುಕೊಂಡಷ್ಟು ಮುಗ್ಧವಾಗಿಲ್ಲ.[5] ಶಿಕ್ಷಣ, ಅಕ್ಷರ, ವಿದ್ಯೆ, ಶಾಲೆ ಮುಂತಾದ ಸಂಗತಿಗಳೆಲ್ಲ ಸಾಮಾಜಿಕ – ಸಾಂಸ್ಕೃತಿಕ ಆಯಾಮಗಳನ್ನು ಹೊಂದಿವೆ. ಯಾರು ಅಕ್ಷರ ಕಲಿಯಬೇಕು – ಯಾರು ಕಲಿಯಬಹುದು – ಯಾರು ಕಲಿಯಬಾರದು ಎಂಬ ಸಂಗತಿಗಳೆಲ್ಲ ಸಾಮಾಜಿಕವಾಗಿ ನಿರ್ಧಾರವಾಗುವ ಸಂಗತಿಗಳಾಗಿವೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಶಿಕ್ಷಣ ನೀತಿ – ಶಿಕ್ಷಣ ಕಾರ್ಯಕ್ರಮಗಳನ್ನು ಪರಿಭಾವಿಸಿಕೊಳ್ಳಬೇಕಾಗುತ್ತದೆ. ಶಿಕ್ಷಣ ನೀತಿ – ಶಿಕ್ಷಣ ಕಾರ್ಯಕ್ರಮಗಳನ್ನು ಪರಿಭಾವಿಸಿಕೊಳ್ಳಬೇಕಾಗುತ್ತದೆ. ಶಿಕ್ಷಣ ನೀತಿ – ಕಾರ್ಯಕ್ರಮಗಳನ್ನು ರೂಪಿಸುವಾಗ ಜನಸಮೂಹವನ್ನು ಸರ್ಕಾರವು ಅವಿಭಕ್ತ – ಏಕರೂಪಿ ನೆಲೆಯಲ್ಲಿ ಪರಿಭಾವಿಸಿಕೊಂಡು ಬಂದಿದೆ. ಅದು ಒಂದು ದೃಷ್ಟಿಯಿಂದ ಸರಿಯಿರಬಹುದು! ಆದರೆ ಜನಸಮೂಹವೆಂಬುದು ಏಕರೂಪಿ – ಅಖಂಡವಾದುದಲ್ಲವೆಂಬುದು ಈಗೀಗ ಸ್ಪಷ್ಟವಾಗತೊಡಗಿದೆ. ಸಂವಿಧಾನವನ್ನು ನಾವು ಒಪ್ಪಿಕೊಂಡ ಜನವರಿ ೨೬, ೧೯೫೦ರ ನಂತರ ಹತ್ತು ವರ್ಷಗಳ ಅವಧಿಯಲ್ಲಿ ಶಿಕ್ಷಣವು ಎಲ್ಲರಿಗೂ ಒದಗುವಂತಾಗಬೇಕು ಎಂಬ ಗುರಿಯನ್ನು ನಿಗದಿಪಡಿಸಲಾಗಿತ್ತು. ಅದು ಇಂದಿಗೂ ಗುರಿಯಾಗೆ ಉಳಿದಿದೆ. ಸಮಾಜದ ವಿವಿಧ ವರ್ಗಗಳು ಸಾಕ್ಷರತೆಗೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಸಾಧನೆಯೂ ಏಕರೂಪಿಯಾಗಿಲ್ಲ. ಅಂದಮೇಲೆ ಜನಸಮೂಹವೆಂಬುದು ಅಖಂಡವಾದುದಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ (ಗೋಪಾಲಗುರು; ೨೦೦೩). ಪ್ರಸ್ತುತ ಪ್ರಬಂಧದಲ್ಲಿ ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸಾಮಾಜಿಕ ಸ್ವರೂಪವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಎರಡು ಸಂಗತಿಗಳ ಬಗ್ಗೆ ಇಲ್ಲಿ ಗಮನವನ್ನು ಕೇಂದ್ರೀಕರಿಸಲಾಗಿದೆ.

೧. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ

೨. ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ.

ಇವೆರಡೂ ಸಂಗತಿಗಳ ಸಾಮಾಜಿಕ ಸ್ವರೂಪವನ್ನು ಪೃಥಕ್ಕರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಮೂರು ಆಯಾಮಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

೧. ಪ್ರಾದೇಶಿಕ ಸ್ವರೂಪ

೨. ಜಾತಿ ಸ್ವರೂಪ

೩. ಲಿಂಗ ಸಂಬಂಧಿ ಸ್ವರೂಪ

ಈ ಅಧ್ಯಯನ ಪ್ರಬಂಧವನ್ನು ಆನುಷಂಗಿಕ ಮಾಹಿತಿಯನ್ನು ಆಧರಿಸಿ ಕಟ್ಟಲಾಗಿದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು "ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ : ೨೦೦೫" ಎಂಬ ಕೋಶವೊಂದನ್ನು ಪ್ರಕಟಿಸಿದೆ ಅದು ೨೦೦೬ 'ಸಮಗ್ರ ಶೈಕ್ಷಣಿಕ ಮಾಹಿತಿಕೋಶ'ವೆಂಬ ವರದಿಯನ್ನು ಪ್ರಕಟಿಸಿದೆ. ಈ ಕೋಶಗಳಲ್ಲಿನ ಮಾಹಿತಿಯನ್ನು ಆಧರಿಸಿಕೊಂಡು ಇಲ್ಲಿ ಚರ್ಚೆಯನ್ನು ಬೆಳೆಸಲಾಗಿದೆ. ಸಾಕ್ಷರತೆಗೆ ಸಂಬಂಧಿಸಿದ ಮಾಹಿತಿಯನ್ನು ಜನಗಣತಿ ವರದಿಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ. ಸರಳವಾದ ಗಣಿತಸೂತ್ರಗಳನ್ನು ಉಪಯೋಗಿಸಿಕೊಂಡು ಕೆಲವು ಪಥ್ಯಗಳನ್ನು ರೂಪಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇಲ್ಲಿ ರೂಪಿಸಿರುವ ತಥ್ಯಗಳು ಹಾಗೂ ತೀರ್ಮಾನಗಳು ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ಮರುರೂಪಿಸಲು ನೆರವಾಗುತ್ತವೆ ಎಂದು ಭಾವಿಸಲಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಕುತೂಹಲಕಾರಿ ಸಂಗತಿಗಳನ್ನು ಇಲ್ಲಿ ಬೆಳಕಿಗೆ ತರಲಾಗಿದೆ. ನೀತಿ ನಿರೂಪಣೆ ದೃಷ್ಟಿಯಿಂದ ಪ್ರಸ್ತುತ ಪ್ರಬಂಧವು ತುಂಬಾ ಮಹತ್ವದ್ದಾಗಿದೆ. ಈಗಾಗಲೆ ತಿಳಿಸಿರುವಂತೆ ಇಲ್ಲಿ ಮೂರು ವಿಷಯಗಳಿಗೆ ಒತ್ತು ನೀಡಲಾಗಿದೆ.

ಮೊದಲನೆಯದು ಪ್ರಾಥಮಿಕ ಶಿಕ್ಷಣದ ಪ್ರಾದೇಶಿಕ ಸ್ವರೂಪ. ಇದು ಪ್ರಾದೇಶಿಕ ಅಸಮಾನತೆಯನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅದನ್ನು ನಿವಾರಿಸುವ ಮಾರ್ಗೋಪಾಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಎರಡನೆಯದಾಗಿ ಪ್ರಸ್ತುತ ಪ್ರಬಂಧದಲ್ಲಿ ಪ್ರಾಥಮಿಕ ಶಿಕ್ಷಣದ ಶಿಷ್ಟ ಮತ್ತು ಪರಿಶಿಷ್ಟ ನೆಲೆಗಳನ್ನು ಅನ್ವೇಷಿಸಲು ಪ್ರಯತ್ನಿಸಲಾಗಿದೆ. ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತೆಗೆ ಸಂಬಂಧಿಸಿದಂತೆ ದಲಿತರ ಸಿದ್ಧಾಸಾಧನೆಗಳನ್ನು ಇಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಮೂರನೆಯದಾಗಿ ಪ್ರಾಥಮಿಕ ಶಿಕ್ಷಣದ ಲಿಂಗಸಂಬಂಧಿ ಆಯಾಮವನ್ನು ಗುರುತಿಸಲಾಗಿದೆ. ಲಿಂಗ ಸಂಬಂಧಿ ಆಯಾಮದ ಬಗ್ಗೆ ಚರ್ಚಿಸುವಾಗ ದಲಿತ ಮಹಿಳೆ ಹಾಗೂ ದಲಿತೇತರ ಮಹಿಳೆಯನ್ನು ಮುಖಾಮುಖಿಯಾಗಿಸಿ ತಥ್ಯಗಳನ್ನು ರೂಪಿಸಲಾಗಿದೆ.[6]

ಪ್ರಸ್ತಾವನೆ ಹಾಗೂ ಅಧ್ಯಯನದ ತಥ್ಯಗಳ ಭಾಗಗಳನ್ನು ಬಿಟ್ಟು ಪ್ರಬಂಧದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಕರ್ನಾಟಕವು ೧೯೮೧ – ೯೧ ಮತ್ತು ೧೯೯೧ – ೨೦೦೧ರ ದಶಕಗಳಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಸಾಧಿಸಿಕೊಂಡ ಸಾಧನೆಯನ್ನು ಚರ್ಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಸಾಕ್ಷರತೆಯ ದಲಿತ ಹಾಗೂ ದಲಿತೇತರ ನೆಲೆಗಳನ್ನು ಹಾಗೂ ಲಿಂಗ ಸಂಬಂಧಿ ಆಯಾಮಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಸಾಕ್ಷರತೆಯ ಪ್ರಾದೇಶಿಕ ಸ್ವರೂಪವನ್ನು ಸ್ಥೂಲವಾಗಿ ಅಂಕಿಸಂಖ್ಯೆಗಳ ರೂಪದಲ್ಲಿ ಮಂಡಿಸಲಾಗಿದೆ. ಇಡೀ ಪ್ರಬಂಧದಲ್ಲಿ ಶಿಕ್ಷಣದ ಪ್ರಾದೇಶಿಕ ಸ್ವರೂಪದ ಬಗ್ಗೆ ಒತ್ತು ನೀಡಲಾಗಿದೆ. ಎರಡನೆಯ ಭಾಗದಲ್ಲಿ ಮಕ್ಕಳ ದಾಖಲಾತಿ ಹಾಗೂ ಅದರ ವಿವಿಧ ಮುಖಗಳನ್ನು ಕುರಿತಂತೆ ಚರ್ಚೆ ಮಾಡಲಾಗಿದೆ. ಮೂರನೆಯ ಭಾಗದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವನ್ನು ಕುರಿತಂತೆ ಚರ್ಚಿಸಲಾಗಿದೆ. ಸಂಗ್ರಹ ಭಾಗದಲ್ಲಿ ಅಧ್ಯಯನದ ಮುಖ್ಯ ತಥ್ಯಗಳನ್ನು ನೀಡಲಾಗಿದೆ. ಈ ತಥ್ಯಗಳು ಶಿಕ್ಷಣಕ್ಕೆ ಸಂಬಂಧಿಸಿದ ನೀತಿ – ನಿರೂಪಣೆ ದೃಷ್ಟಿಯಿಂದ ತುಂಬಾ ಮಹತ್ವವಾದವುಗಳೆಂದು ಭಾವಿಸಲಾಗಿದೆ.

**ಭಾಗ ೧**

**ಸಾಕ್ಷರತೆಯ ಸಾಮಾಜಿಕ ಸ್ವರೂಪ**

ಸಾಕ್ಷರತೆಯ ಮಹತ್ವವನ್ನು ಹೀಗೆ ಗುರುತಿಸಲಾಗಿದೆ :

"ಸಾಮಾಜಿಕ ಸಂಪರ್ಕ ಮತ್ತು ಸಂಬಂಧಗಳು ಲಿಖಿತ ಮಾಧ್ಯಮದ ಮೂಲಕ ಸಂಭವಿಸುವುದರಿಂದ ಸಮಾಜದಲ್ಲಿ ಸಾಕ್ಷರತೆಯು ಆತ್ಮರಕ್ಷಣೆಯ ಸಾಧನವಾಗಿರುತ್ತದೆ. ಅಕ್ಷರಜ್ಞಾನವಿಲ್ಲದವರು ತಮ್ಮನ್ನು ತಾವು ನ್ಯಾಯಾಲಯದ ಕಟಕಟೆಯಲ್ಲಿ ರಕ್ಷಿಸಿ ಕೊಳ್ಳಲಾರರು, ಬ್ಯಾಂಕಿನಿಂದ ಸಾಲ ಎತ್ತಲಾರರು, ತಮ್ಮ ವಾರಸುದಾರಿಕೆ ಹಕ್ಕುಗಳನ್ನು ಚಲಾಯಿಸಲಾರರು, ಆಧುನಿಕ ತಂತ್ರಜ್ಞಾನದ ಅನುಕೂಲ ಪಡೆದುಕೊಳ್ಳಲಾರರು, ಉದ್ಯೋಗ ಮಾರುಕಟ್ಟೆಯಲ್ಲಿ ಪೈಪೋಟಿ ಮಾಡಲಾರರು, ಸರಿಯಾದ ಬಸ್ಸು ಏರಲಾರರು, ರಾಜಕೀಯ

ಚಟುವಟಿಕೆಗಳಲ್ಲಿ ಭಾಗವಹಿಸಲಾರರು – ಒಟ್ಟಾರೆ ಆಧುನಿಕ ಆರ್ಥಿಕತೆ ಮತ್ತು ಸಮಾಜದಲ್ಲಿ ಯಶಸ್ವಿಯಾಗಿ ಸಹ ಪಾಲುದಾರರಾಗಲಾರರು." (ಜೀನ್‌ಡ್ರೀಜ್ ಮತ್ತು ಅಮರ್ತ್ಯಸೇನ್, ೨೦೦೨: ೧೪೩)

ಸಾಕ್ಷರತೆಯ ಮಹತ್ವವನ್ನು ತುಂಬಾ ಸರಳವಾದ ನಿದರ್ಶನದ ಮೂಲಕ ತೋರಿಸಬಹುದು. ಕರ್ನಾಟಕದ ವಿವಿಧ ಜಿಲ್ಲೆಗಳ ಅಭಿವೃದ್ಧಿ ಸಂಬಂಧಿ ಸಿದ್ಧಿಸಾಧನೆಗಳನ್ನು ಮುಖಾಮುಖಿಯಾಗಿಸಿದರೆ ಯಾವ ಜಿಲ್ಲೆಯಲ್ಲಿ ಸಾಕ್ಷರತೆ ಪ್ರಮಾಣವು ಉನ್ನತವಾಗಿರುವುದೋ ಅದು ಆರ್ಥಿಕವಾಗಿ ಉನ್ನತ ಅಭಿವೃದ್ಧಿ ಸಾಧಿಸಿಕೊಂಡಿರುತ್ತದೆ ಎಂಬುದು ತಿಳಿಯುತ್ತದೆ. ಉದಾಹರಣೆ ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳು. ಯಾವ ಜಿಲ್ಲೆಗಳಲ್ಲಿ ಸಾಕ್ಷರತೆ ಪ್ರಮಾಣವು ಕನಿಷ್ಠವಾಗಿರುತ್ತದೋ ಅವು ಸಹಜವಾಗಿ ಆರ್ಥಿಕವಾಗಿ ಹಿಂದುಳಿದಿರುವ – ದುಸ್ಥಿತಿಯಲ್ಲಿರುವ ಜಿಲ್ಲೆಗಳಾಗಿರುತ್ತವೆ. ಉದಾಹರಣೆ ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು.[7]

ಆಧುನಿಕ ಸಮಾಜದಲ್ಲಿ ಎದುರಿಸಬೇಕಾದ ಸಾಮಾಜಿಕ ಅಲಕ್ಷ್ಯ ಹಾಗೂ ಹತಾಶೆಗಳನ್ನು ಅಕ್ಷರಸ್ಥರು ಹೆಚ್ಚು ಯಶಸ್ವಿಯಾಗಿ ಎದುರಿಸಲು ಸಾಧ್ಯ. ಆದ್ದರಿಂದ ಶಿಕ್ಷಣದ ಸಶಕ್ತೀಕರಣದ ಪಾತ್ರವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಈ ಕೋಷ್ಟಕ – ೧, ಎರಡು ನೆಲೆಗಳಲ್ಲಿ ಮಹತ್ವವಾದುದಾಗಿದೆ. ಮೊದಲನೆಯದಾಗಿ ದಲಿತರು ಮತ್ತು ದಲಿತೇತರರ ನಡುವಣ ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ಅದು ತೋರಿಸುತ್ತದೆ. ಈ ಅಂತರವೂ ೧೯೯೧ ಮತ್ತು ೨೦೦೧ ಎರಡೂ ಕಾಲಘಟ್ಟಗಳಲ್ಲೂ ಕಂಡುಬರುತ್ತದೆ. ದಲಿತರ ಸಾಮಾಜಿಕ ಸ್ಥಾನಮಾನವು ಕೆಳಮಟ್ಟದಲ್ಲಿರುವುದು ಇದರಿಂದ ಸ್ಪಷ್ಟವಾಗುತ್ತದೆ.

**ಕರ್ನಾಟಕದಲ್ಲಿ ಸಾಕ್ಷರತಾ ಪ್ರಮಾಣದ ಸಾಮಾಜಿಕ ಸ್ವರೂಪ: ೧೯೯೧ ಮತ್ತು ೨೦೦೧**

**ಕೋಷ್ಟಕ – ೧**

| **ವಿವರ** | **ಸಾಕ್ಷರತೆ** | **ದಶಕವಾರು ಶೇಕಡ ಪ್ರಮಾಣ ೧೯೯೧** | **ಶೇಕಡ ೨೦೦೧** | **ಬೆಳವಣಿಗೆ (೧೯೯೧ – ೨೦೦೧)** |
|---|---|---|---|---|
| | ಒಟ್ಟು | ೫೬.೦೪ | ೬೬.೬ | ೧೮.೮೪ |
| ರಾಜ್ಯದಲ್ಲಿ ಸಾಕ್ಷರತೆ | ಪು. | ೬೭.೨೬ | ೭೬.೧ | ೧೩.೧೪ |
| | ಮ. | ೪೪.೩೪ | ೫೬.೯ | ೨೮.೩೩ |
| ಲಿಂಗ ಸಮಾನತೆ ಸೂಚಿ | | ೬೫.೯೨ | ೭೪.೭೭ | ೧೩.೪೨ |
| | ಒಟ್ಟು | ೬೧.೬೩ | ೭೧.೪೫ | ೧೭.೮೪ |
| **ರಾಜ್ಯದಲ್ಲಿ ದಲಿತೇತರ ಸಾಕ್ಷರತೆ** (ಪ.ಜಾ + ಪ.ಪಂ. ಬಿಟ್ಟು ಇತರೆ) | ಪು. | ೭೧.೭೪ | ೮೦.೧೮ | ೧೧.೭೬ |
| | ಮ. | ೪೯.೦೬ | ೬೩.೩೯ | ೨೯.೨೧ |
| ಲಿಂಗ ಸಮಾನತಾ ಸೂಚಿ | | ೬೮.೩೮ | ೭೯.೦೬ | ೧೫.೬೨ |

| | | | | |
|---|---|---|---|---|
| | ಒಟ್ಟು | ೩೮.೦೬ | ೫೨.೯ | ೩೮.೯೯ |
| **ರಾಜ್ಯದಲ್ಲಿ ಪ.ಜಾ. ಸಾಕ್ಷರತೆ** | ಪು | ೪೯.೬೯ | ೬೩.೮ | ೨೮.೩೯ |
| | ಮ. | ೨೫.೯೫ | ೪೧.೭೬ | ೬೦.೬೯ |
| ಲಿಂಗ ಸಮಾನತಾ ಸೂಚಿ | | ೫೨.೨೨ | ೬೫.೩೬ | ೨೫.೧೬ |
| | ಒಟ್ಟು | ೩೬.೦೧ | ೪೮.೩ | ೩೪.೧೩ |
| **ರಾಜ್ಯದಲ್ಲಿ ಪರಿಶಿಷ್ಟ ಪಂಗಡ ಸಾಕ್ಷರತೆ** | ಪು. | ೪೭.೯೫ | ೫೯.೭ | ೨೪.೫೧ |
| | ಮ. | ೨೩.೫೭ | ೩೬.೬ | ೫೫.೨೮ |
| ಲಿಂಗ ಸಮಾನತಾ ಸೂಚಿ | | ೪೯.೧೫ | ೬೧.೩೧ | ೨೪.೭೪ |
| | ಒಟ್ಟು | ೩೭.೬೩ | ೫೧.೫೫ | ೩೬.೯೯ |
| **ರಾಜ್ಯದಲ್ಲಿ ದಲಿತರ ಸಾಕ್ಷರತೆ** (ಪ.ಜಾ. + ಪ.ಪಂ.) | ಪು. | ೪೯.೩೩ | ೬೨.೫೮ | ೨೬.೮೬ |
| | ಮ. | ೨೫.೪೬ | ೪೦.೨೩ | ೫೮.೦೧ |
| ಲಿಂಗ ಸಮಾನತಾ ಸೂಚಿ | | ೫೧.೬೧ | ೬೪.೨೮ | ೨೪.೫೫ |

**ಮೂಲ** : ಜನಗಣತಿ ವರದಿಗಳು, ೧೯೯೧ ಮತ್ತು ೨೦೦೧, ಕರ್ನಾಟಕ

ಈ ಕೋಷ್ಟಕವು ತೋರಿಸುತ್ತಿರುವ ಎರಡನೆಯ ಸಂಗತಿಯು ತುಂಬಾ ವಿಶಿಷ್ಟವಾದುದಾಗಿದೆ. ದಲಿತರು ಮತ್ತು ದಲಿತೇತರರ ನಡುವಣ ಸಾಕ್ಷರತೆಗೆ ಸಂಬಂಧಿಸಿದ ಅಂತರವು ಸಾಪೇಕ್ಷವಾಗಿ ಕಡಿಮೆಯಾಗುತ್ತಿರುವ ಕುತೂಹಲಕಾರಿ ಸಂಗತಿಯನ್ನು ಕೋಷ್ಟಕವು ತೋರಿಸುತ್ತಿದೆ. ದಲಿತೇತರರ ಸಾಕ್ಷರತೆ ಪ್ರಮಾಣವು ೧೯೯೧ರಲ್ಲಿ ಒಟ್ಟು ಸಾಕ್ಷರತಾ ಪ್ರಮಾಣದ ಶೇ. ೧೦೮.೧೯ ರಷ್ಟಿದ್ದುದು ೨೦೦೧ರಲ್ಲಿ ಅದು ಶೇ. ೧೦೭.೨೮ ಕ್ಕೆ ಇಳಿದಿದೆ. ಈ ಅವಧಿಯಲ್ಲಿ, ಅಂದರೆ ೧೯೯೧ ರಿಂದ ೨೦೦೧ರ ದಶಕದಲ್ಲಿ ಅವರ ಸಾಕ್ಷರತಾ ಪ್ರಮಾಣವು ಶೇ. ೧೭.೮೪ ರಷ್ಟು ಬೆಳವಣಿಗೆ ಕಂಡಿದೆ. ಇದಕ್ಕೆ ಇದಿರಾಗಿ ದಲಿತರ ಸಾಕ್ಷರತಾ ಪ್ರಮಾಣವು ೧೯೯೧ ರಲ್ಲಿ ಒಟ್ಟು ಸಾಕ್ಷರತಾ ಪ್ರಮಾಣದ ಶೇ. ೬೭.೧೫ ರಷ್ಟಿದ್ದುದು ೨೦೦೧ರಲ್ಲಿ ಶೇ. ೭೭.೪ ರಷ್ಟಾಗಿದೆ. ಇದನ್ನು ಸರಳವಾಗಿ ಇನ್ನೊಂದು ಬಗೆಯಲ್ಲಿ ಹೀಗೆ ಹೇಳಬಹುದು. ದಲಿತರ ಸಾಕ್ಷರತೆ ಪ್ರಮಾಣವು ೧೯೯೧ರಲ್ಲಿ ಒಟ್ಟು ಸಾಕ್ಷರತಾ ಪ್ರಮಾಣದ ೨/೩ ರಷ್ಟಿದ್ದುದು ೨೦೦೧ ರಲ್ಲಿ ಅದು ೩/೪ ರಷ್ಟಾಗಿದೆ. ಇವರ ಸಾಕ್ಷರತಾ ಪ್ರಮಾಣವು ೧೯೯೧ ರಿಂದ ೨೦೦೧ರ ದಶಕದಲ್ಲಿ ಶೇ. ೩೬.೯೯ ರಷ್ಟು ಬೆಳವಣಿಗೆ ಕಂಡಿದೆ. ದಲಿತರ ಸಾಮಾಜಿಕ ಸ್ಥಾನಮಾನವು ನಿಧಾನವಾಗಿ ಉತ್ತಮವಾಗುತ್ತಿರುವುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ.

ಮಹಿಳೆಯರ ಸಾಕ್ಷರತಾ ಪ್ರಮಾಣವು – ದಲಿತರು ಮತ್ತು ದಲಿತೇತರರು – ಎರಡೂ ಗುಂಪಿನಲ್ಲೂ ಪುರುಷರ ಸಾಕ್ಷರತೆಗಿಂತ ಕಡಿಮೆಯಿರುವುದು ಕೋಷ್ಟಕದಿಂದ ತಿಳಿದು ಬರುತ್ತದೆ. ಇದು ಸಾಕ್ಷರತೆಗೆ ಸಂಬಂಧಿಸಿದ ಲಿಂಗ ಸಂಬಂಧಿ ಅಸಮಾನತೆಯ ಒಂದು ಮುಖ ಮಾತ್ರವಾಗಿದೆ. ದಲಿತ ಮಹಿಳೆಯರ ಸಾಕ್ಷರತಾ ಪ್ರಮಾಣವು ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆಯಿರುವುದು

ಸಮಸ್ಯೆಯ ಮತ್ತೊಂದು ಕರಾಳ ಮುಖವಾಗಿದೆ. ಕುತೂಹಲದ ಸಂಗತಿಯೆಂದರೆ ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣವು ದಲಿತೇತರ ಪುರುಷರ ಸಾಕ್ಷರತಾ ಪ್ರಮಾಣದ ಶೇ. ೬೯.೨೨ರಷ್ಟು ೧೯೯೧ ರಲ್ಲಿದ್ದುದು ೨೦೦೧ ರಲ್ಲಿ ಅದು ಶೇ. ೭೯.೦೬ ಕ್ಕೆ ಏರಿದೆ. ಆದರೆ ದಲಿತ ಮಹಿಳೆಯರ ಸಾಕ್ಷರತಾ ಪ್ರಮಾಣವು ದಲಿತ ಪುರುಷರ ಸಾಕ್ಷರತಾ ಪ್ರಮಾಣದ ಶೇ. ೫೧.೬೧ರಷ್ಟು ೧೯೯೧ ರಲ್ಲಿತ್ತು. ಇದು ೨೦೦೧ ರಲ್ಲಿ ಶೇ. ೬೪.೫೯ಕ್ಕೇರಿದೆ. ಲಿಂಗ ಸಮಾನತೆ ದೃಷ್ಟಿಯಿಂದ ದಲಿತ ಮಹಿಳೆಯರ ಸ್ಥಿತಿಯು ದಲಿತೇತರ ಮಹಿಳೆಯರ ಸ್ಥಿತಿಗಿಂತ ಕೆಳಮಟ್ಟದಲ್ಲಿರುವುದು ಇದರಿಂದ ಸ್ಪಷ್ಟವಾಗುತ್ತದೆ. ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣವು ೧೯೯೧ – ೨೦೦೧ರ ದಶಕದಲ್ಲಿ ಕೇವಲ ಶೇ. ೨೯.೨೧ರಷ್ಟು ಬೆಳವಣಿಗೆ ಕಂಡಿದೆ. ಆದರೆ ದಲಿತ ಮಹಿಳೆಯರ ಸಾಕ್ಷರತೆಯು ೧೯೯೧ – ೨೦೦೧ರ ದಶಕದಲ್ಲಿ ಶೇ. ೫೮ರಷ್ಟು ಬೆಳವಣಿಗೆ ಕಂಡಿದ್ದರೂ ಅದು ಅತ್ಯಂತ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ (ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ, ೧೯೯೯).

ಸಾಕ್ಷರತೆಗೆ ಸಂಬಂಧಿಸಿದ ದಶಕವಾರು ಬೆಳವಣಿಗೆಯನ್ನು ತೋರಿಸುವ ಕೋಷ್ಟಕ – ೧ ಇನ್ನೊಂದು ರೀತಿಯಲ್ಲಿ ವಿಶಿಷ್ಟವಾದುದಾಗಿದೆ. ಇಲ್ಲಿ ಬೆಳವಣಿಗೆ ಪ್ರಮಾಣ ಅತ್ಯಂತ ಕನಿಷ್ಟ ಶೇ. ೧೧.೭೬ ದಲಿತೇತರ ಪುರುಷರಿಗೆ ಸಂಬಂಧಿಸಿದ್ದರೆ ಅದರ ಗರಿಷ್ಟ ಪ್ರಮಾಣ ಶೇ. ೫೮.೦೧ ದಲಿತ ಮಹಿಳೆಯರಲ್ಲಿದೆ. ಇದು ತುಂಬಾ ಕುತೂಹಲಕಾರಿಯಾದ ಸಂಗತಿಯಾಗಿದೆ. ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಸಾಕ್ಷರತೆ ಮಟ್ಟವು ಉನ್ನತ ಹಂತವನ್ನು ತಲುಪಿದಂತೆ ಅದರ ಬೆಳವಣಿಗೆ ಗತಿಯು ಮಂದವಾಗುತ್ತದೆ. ಇದಕ್ಕೆ ಪ್ರಿತಯಾಗಿ ಸಾಕ್ಷರತಾ ಪ್ರಮಾಣವು ಕೆಳಮಟ್ಟದಲ್ಲಿದ್ದಾಗ ಅದರ ಬೆಳವಣಿಗೆ ಗತಿಯು ತೀವ್ರವಾಗಿರುತ್ತದೆ. ಈ ಕಾರಣದಿಂದಾಗಿ ಮಹಿಳೆಯರ ಸಾಕ್ಷರತೆಯು ಸಾಪೇಕ್ಷವಾಗಿ ಅತ್ಯಂತ ಕನಿಷ್ಟವಿರುವುದರಿಂದ ಅದರ ಬೆಳವಣಿಗೆ ಪ್ರಮಾಣವು ಗರಿಷ್ಟವಿವಾಗಿದೆ (ವಿಮಲಾ ರಾಮಚಂದ್ರನ್, ೨೦೦೪).

ಕೋಷ್ಟಕ – ೨ ಸಾಕ್ಷರತೆಯ ಸಾಮಾಜಿಕ ನೆಲೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗಿದೆ. ಇಲ್ಲಿ ಸಾಕ್ಷರತೆಯ ಸಾಮಾಜಿಕ ಅಂತರವನ್ನು ಎರಡು ವಿಧಾನದಲ್ಲಿ ಲೆಕ್ಕ ಹಾಕಲಾಗಿದೆ. ಮೊದಲನೆದಾಗಿ ಒಟ್ಟು ಜನಸಂಖ್ಯೆಯ, ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಮೂಹವನ್ನು ಒಳಗೊಂಡಂತೆ ಒಟ್ಟು ಜನಸಂಖ್ಯೆಯ ಸಾಕ್ಷರತೆ ಮತ್ತು ಪರಿಶಿಷ್ಟರ ಸಾಕ್ಷರತೆ ನಡುವಣ ಅಂತರವನ್ನು ಸಾಲು – ೩ ರಲ್ಲಿ ತೋರಿಸಿದೆ. ಎರಡನೆಯದಾಗಿ ಶಿಷ್ಟರು ಮತ್ತು ಪರಿಶಿಷ್ಟರ ಸಾಕ್ಷರತೆ ನಡುವಣ ಅಂತರವನ್ನು ಲೆಕ್ಕ ಹಾಕಲಾಗಿದೆ (ನೋಡಿ : ಸಾಲು ೫). ಇದರಿಂದ ಸಾಕ್ಷರತೆಯ ಸಾಮಾಜಿಕ ಅಂತರದ ಪ್ರಮಾಣವನ್ನು ಸರಿಯಾಗಿ ಮಾಪನ ಮಾಡಬಹುದಾಗಿದೆ. ಸಾಲು – ೩ರಲ್ಲಿ ಸಾಕ್ಷರತಾ ಅಂತರ ೧೯೯೧ ರಲ್ಲಿ ಶೇ. ೧೮.೪೧ ಅಂಶಗಳಿಷ್ಟಿದ್ದುದು ೨೦೦೧ ರಲ್ಲಿ ಅದು ಶೇ. ೧೫.೦೫ ಅಂಶಗಳಿಗೆ ಇಳಿದಿದೆ. ಆದರೆ ಶಿಷ್ಟರು ಮತ್ತು ಪರಿಶಿಷ್ಟರಿಗೆ ಪ್ರತ್ಯೇಕವಾಗಿ ಅಂತರವನ್ನು ಲೆಕ್ಕ ಹಾಕಿದರೆ ಅಂತರ ಅಧಿಕ ಮಟ್ಟದಲ್ಲಿರುವುದು ತಿಳಿಯುತ್ತದೆ. ಇಲ್ಲಿ ಅಂತರ ೧೯೯೧ರಲ್ಲಿ ಶೇ. ೨೪ ಅಂಶಗಳಷ್ಟಿದ್ದುದು ೨೦೦೧ ರಲ್ಲಿ ಶೇ. ೧೯.೯೦ ಅಂಶಗಳಷ್ಟಾಗಿದೆ.

**ಸಾಕ್ಷರತಾ ಅಂತರದ ಸಾಮಾಜಿಕ ಸ್ವರೂಪ ೧೯೯೧ ಮತ್ತು ೨೦೦೧**

**ಕೋಷ್ಟಕ – ೨**

| **ವಿವರಗಳು** | **ಒಟ್ಟು ಸಾಕ್ಷರತೆ** | | **ಪುರುಷರ ಸಾಕ್ಷರತೆ** | | **ಮಹಿಳೆಯರ ಸಾಕ್ಷರತೆ** | |
|---|---|---|---|---|---|---|
| | **೧೯೯೧** | **೨೦೦೧** | **೧೯೯೧** | **೨೦೦೧** | **೧೯೯೧** | **೨೦೦೧** |
| ಒಟ್ಟು ಸಾಕ್ಷರತೆ | ೫೬.೦೪ | ೬೬.೬೦ | ೬೭.೨೬ | ೭೬.೧೦ | ೪೪.೩೪ | ೫೬.೯೦ |

| | | | | | | |
|---|---|---|---|---|---|---|
| **ಪರಿಶಿಷ್ಟರ ಸಾಕ್ಷರತೆ** | ೩೭.೬೩ | ೫೧.೫೫ | ೪೯.೩೩ | ೬೨.೫೮ | ೨೫.೪೬ | ೪೦.೨೩ |
| **ಅಂತರ** | ೧೮.೪೧ | ೧೫.೦೫ | ೧೭.೯೩ | ೧೩.೫೨ | ೧೮.೮೮ | ೧೬.೬೭ |
| **ಶಿಷ್ಟರ ಸಾಕ್ಷರತೆ** | ೬೧.೬೩ | ೭೧.೪೫ | ೭೧.೭೪ | ೮೦.೧೮ | ೪೯.೦೬ | ೬೩.೩೯ |
| **ವ್ಯತ್ಯಾಸ** | ೨೪.೦೦ | ೧೯.೯೦ | ೨೨.೪೧ | ೧೭.೬೦ | ೨೩.೬೦ | ೨೩.೧೬ |

*ಟಿಪ್ಪಣಿ : ಸಾಲು ೩ ಮತ್ತು ಸಾಲು ೫ ರಲ್ಲಿನ ಅಂತರಗಳಲ್ಲಿ ವ್ಯತ್ಯಾಸವನ್ನು*ಗುರುತಿಸುವ ಅಗತ್ಯವಿದೆ. ಸಾಲು ೫ರಲ್ಲಿನ ಅಂತರವು ಸಾಲು ೩ರಲ್ಲಿನ ಅಂತರಕ್ಕಿಂತ ಅಧಿಕ ಮಟ್ಟದಲ್ಲಿದೆ.

**ಲಿಂಗ ಸಮಾನತಾ ಸೂಚಿ**

ಸಾಕ್ಷರತೆಗೆ ಸಂಬಂಧಿಸಿದಂತೆ ಮಹಿಳೆಯರು ಮತ್ತು ಪುರುಷರ ಸಾಕ್ಷರತೆ ಪ್ರಮಾಣಗಳ ನಡುವಿನ ಅಂತರವನ್ನು ಮಾಪನ ಮಾಡಲು ಸರಳವಾದ ಲಿಂಗ ಸಮಾನತಾ ಸೂಚಿಯನ್ನು ಇಲ್ಲಿ ಬಳಸಲಾಗಿದೆ. ಅದು ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಯಿಂದ ಎಷ್ಟು ದೂರದಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಈ ಸೂಚಿಯು ಲಿಂಗ ಸಮಾನತೆಯಿಂದ ವಾಸ್ತವಿಕ ಸ್ಥಿತಿಯು ಎಷ್ಟು ಅಂತರದಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಇಲ್ಲೂ ಕುತೂಹಲದ ಸಂಗತಿಯೊಂದು ನಮಗೆ ಗೋಚರಿಸುತ್ತದೆ. ದಲಿತೇತರರ ಲಿಂಗ ಸಮಾನತಾ ಸೂಚಿಯು (೭೯.೦೬) ದಲಿತರಿಗೆ ಸಂಬಂಧಿಸಿದ ಲಿಂಗ ಸಮಾನತಾ ಸೂಚಿಗಿಂತ (೬೪.೨೮) ಉತ್ತಮವಾಗಿದೆ. ಆದರೆ ೧೯೯೧ – ೨೦೦೧ರ ದಶಕದಲ್ಲಿ ಲಿಂಗ ಸಮಾನತಾ ಸೂಚಿಯ ಬೆಳವಣಿಗೆಯನ್ನು ಗಮನಿಸಿದರೆ ದಲಿತರಿಗೆ ಸಂಬಂಧಿಸಿದಂತೆ ಬೆಳವಣಿಗೆ ಪ್ರಮಾಣವು (ಶೇ. ೨೪.೫೫) ದಲಿತೇತರರ ಸೂಚಿಯ ಬೆಳವಣಿಗೆ ಪ್ರಮಾಣಕ್ಕಿಂತ (ಶೇ. ೧೫.೬೨) ಉತ್ತಮವಾಗದೆ. ದಲಿತೇತರರಿಗೆ ಸಂಬಂಧಿಸಿದಂತೆ ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಯ ೩/೪ಕ್ಕಿಂತ ಅಧಿಕವಿದ್ದರೆ ದಲಿತರಿಗೆ ಸಂಬಂಧಿಸದಂತೆ ಅದು ಕೇವಲ ೨/೩ ಕ್ಕಿಂತ ಕಡಿಮೆಯಿದೆ. ಲಿಂಗ ಸಮಾನತೆ ಬಗ್ಗೆ ಮಾತನಾಡುವಾಗ ಮಹಿಳೆಯರು ಮತ್ತು ಪುರುಷರ ನಡುವಿನ ಸಾಕ್ಷರತೆಯಲ್ಲಿನ ಅಂತರದ ಜೊತೆಗೆ ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ನಡುವಣ ಅಂತರದ ಕಡೆಗೂ ಹೆಚ್ಚಿನ ಗಮನ ನೀಡಬೇಕಾಗುತ್ತದೆ.

[1] ಪ್ರೋಬ್ ತಂಡವು ಸಿದ್ಧಪಡಿಸಿದ ವರದಿಯಲ್ಲಿ 'ಮೂಲಶಿಕ್ಷಣ'ವೆಂಬ ನುಡಿಯನ್ನು ಬಳಸಿದ್ದರೆ ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆ (ಎನ್ಐಈಪಿಎ) ಯು ಸಿದ್ಧಪಡಿಸಿರುವ 'ಸ್ಟೇಟ್‌ರಿಪೋರ್ಟ್‌ಕಾರ್ಡ್ಸ್ ೨೦೦೫' ರಲ್ಲಿ 'ಪ್ರಾಥಮಿಕ ಶಿಕ್ಷಣ' ಎಂಬ ನುಡಿ ಬಳಸಲಾಗಿದೆ. [ನೋಡಿ: ಪಬ್ಲಿಕ್ ರಿಪೋರ್ಟ್‌ಆನ್‌ಬೇಸಿಕ್ ಎಜುಕೇಶನ್ (೨೦೦೨) ಮತ್ತು ಎಲಿಮೆಂಟರಿ ಎಜುಕೇಶನ್ ಇನ್ ಇಂಡಿಯಾ: ವೇರ್ ಡು ವಿ ಸ್ಟಾಂಡ್? (೨೦೦೬)]

[2] ಈ ಮೂರು ಹಂತಗಳನ್ನು ಅಂಕಿಗಳಲ್ಲಿ '೧೦+೨+೩' ಎಂದು ಕರೆಯುತ್ತಾರೆ. '೧೦' ಎಂಬುದು ೧೦ ವರ್ಷಗಳ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪ್ರತಿನಿಧಿಸಿದರೆ '೨' ಎಂಬುದು ಎರಡು ವರ್ಷಗಳ ಪದವಿಪೂರ್ವ ಶಿಕ್ಷಣವನ್ನು ಮತ್ತು '೩' ಎಂಬುದು ಮೂರು ವರ್ಷಗಳ ಪದವಿ ಶಿಕ್ಷಣವನ್ನು ಪ್ರತಿನಿಧಿಸುತ್ತದೆ.

[3] ವಿವರವಾದ ಚರ್ಚೆಗೆ ನೋಡಿ – ಗೆಲ್ ಓಮ್‌ವೆಡ್ಟ್: ೧೯೯೯:೧೩೪

[4] ರಾಜ್ಯದಲ್ಲಿ ಇಂದು (೨೦೦೫) ಸರಿಸುಮಾರು ೫೩,೪೬೧ ಪ್ರಾಥಮಿಕ ಶಾಲೆಗಳು ಕೆಲಸ ಮಾಡುತ್ತಿವೆ (೧ ರಿಂದ ೭ನೆಯ ತರಗತಿ). ಇವುಗಳಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ೪೩೫೯೧ (ಶೇ. ೮೧.೫೪). ಕರ್ನಾಟಕ ಸರ್ಕಾರವು ೨೦೦೬ – ೦೭ನೆಯ ಸಾಲಿನಲ್ಲಿ ಪ್ರಾಥಮಿಕ

ಶಿಕ್ಷಣಕ್ಕೆ ಒಟ್ಟು ರೂ. ೪೪೬೬ ಕೋಟಿ ಮಿಸಲಿಟ್ಟಿದೆ. ಇದು ರಾಜ್ಯದ ಯೋಜನೆ ಮತ್ತು ಯೋಜನೇತರ ವೆಚ್ಚದ ಶೇ. ೧೨ ರಷ್ಟಾಗುತ್ತದೆ. (ಕರ್ನಾಟಕ ಸರ್ಕಾರ : ಆಯವ್ಯಯ ೨೦೦೬ – ೦೭) 'ಈ ಸಂವಿಧಾನವು ಶುರುವಾದ ಹತ್ತು ವರ್ಷಗಳೊಳಗಾಗಿ ೧೪ ವರ್ಷಗಳವರೆಗೆ ಪ್ರತಿ ಮಗುವಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದಕ್ಕೆ ಸರ್ಕಾರ ದುಡಿಯುತ್ತದೆ.' (ಭಾರತ ಸಂವಿದಾನ, ಆರ್ಟಿಕಲ್ – ೪೫)

[5] ಸರ್ಕಾರವು ಪ್ರಾಥಮಿಕ ಶಿಕ್ಷಣವನ್ನು ಕೇವಲ ಪೂರೈಕೆ ನೆಲೆಯಿಂದ ಪರಿಭಾವಿಸಿ ಕೊಂಡಿದೆ. ಆದರೆ ಸರ್ಕಾರುವ ಒದಗಿಸುವ ಸೌಲಭ್ಯವನ್ನು ಬಳಸಿಕೊಳ್ಳುವ ಸಾಮರ್ಥ್ಯ ಜನರಿಗಿರಬೇಕಲ್ಲ! ಇದನ್ನು ಅಮರ್ತ್ಯಸೇನ್ ಬಹಳ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಅಧಿಕೃತವಾಗಿ 'ಜಾನ್' ಎನ್ನುವ ಮಗುವಿಗೆ ಶಾಲೆಯನ್ನು ತೆರೆಯಲಾಗಿದೆಯೇ ಎಂಬ ಪ್ರಶ್ನೆಗಿಂತ ಜಾನ್ ಎಂಬ ಮಗು ಶಾಲೆಗೆ ಹೋಗುವಷ್ಟು ಸಂಪನ್ಮೂಲ ಹೊಂದಿದೆಯೇ ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದು ಅವರು ಬರೆದಿದ್ದಾರೆ (೧೯೯೯:೪). ಶಾಲೆಗೆ ಹೋಗುವಷ್ಟು ಸ್ವಾತಂತ್ರ್ಯ ಮಗುವಿಗಿದೆಯೇ ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದು ಅವರು ವಾದಿಸಿದ್ದಾರೆ. 'ಅವಕಾಶ'ಗಳನ್ನು ಒದಗಿಸುವುದು ಒಂದು ಸಂಗತಿಯಾದರೆ ಅವುಗಳನ್ನು 'ಧಾರಣೆ' ಮಾಡಿಕೊಳ್ಳುವ ಸಾಮರ್ಥ್ಯವು ಬೇರೊಂದು ಸಂಗತಿಯಾಗಿದೆ.

'ಒಂದು ಗ್ರಾಮದಲ್ಲಿ ಶಾಲಾ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದೇ ಶಾಲೆಗೆ ಸೇರುವ ವಯೋಮಾನದ ಮಕ್ಕಳೆಲ್ಲ ಶಾಲೆಯಲ್ಲಿರುತ್ತಾರೆ ಎಂಬುದಕ್ಕೆ ಖಾತ್ರಿಯಲ್ಲ' (ವಿಮಲಾ ರಾಮಚಂದ್ರನ್, ೨೦೦೪, ೨೧ ಮತ್ತು ೭೦.)

[6] ಮಹಿಳೆಯನ್ನು ಒಂದು ಅಖಂಡ ವರ್ಗವಾಗಿ ನೋಡುವ ಕ್ರಮವಿದೆ. ಕೆಲವು ಸಂದರ್ಭಗಳಲ್ಲಿ ಅದು ಉಪಯುಕ್ತವಾಗಬಹುದು. ಆದರೆ ಭಾರತದ – ಕರ್ನಾಟಕದ ಸಂದರ್ಭಗಳಲ್ಲಿ ಮಹಿಳೆಯರನ್ನು ಅಖಂಡ ವರ್ಗವಾಗಿ ನೋಡುವುದರಿಂದ ಅನೇಕ ಸಮಸ್ಯೆಗಳನ್ನು ಮೂಲೆಗುಂಪಾಗಿ ಬಿಡುತ್ತವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯನ್ನು ದಲಿತ ಮತ್ತು ದಲಿತೇತರರೆಂದು ವರ್ಗೀಕರಿಸಿಕೊಳ್ಳಲಾಗಿದೆ. ಇದರಿಂದ ಅನೇಕ ಉಪಯುಕ್ತ ಸೂಚನೆಗಳು ದೊರೆಯುತ್ತವೆ. ಸಾಮಾನ್ಯವಾಗಿ ಲಿಂಗಸಂಬಂಧಿ ಅಸಮಾನತೆ ಕುರಿತ ಅಧ್ಯಯನಗಳು ಮಹಿಳೆ ಮತ್ತು ಪುರುಷರ ನಡುವಿನ ಸಂಬಂಧದ ಬಗ್ಗೆ ಚರ್ಚಿಸುತ್ತವೆ. ಆಧರೆ ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ನಡುವಿನ ಅಂತರದ ಬಗ್ಗೆಯೂ ಗಮನ ನೀಡಬೇಕಾಗುತ್ತದೆ (ಗೋಪಾಲ ಗುರು : ೨೦೦೩).

[7]

| **ಜಿಲ್ಲೆಗಳು** | **ಸಾಕ್ಷರತಾ ಪ್ರಮಾಣ (೨೦೦೧)**<br>**ಪುರುಷ ಮಹಿಳೆ ಒಟ್ಟು** | **ತಲಾ ಒಟ್ಟು ದೇಶೀಯ ಉತ್ಪನ್ನ**<br>**೧೯೯೯ – ೨೦೦೦ (ಚಾಲ್ತಿ ಬೆಲೆ)** |
|---|---|---|
| **ಅಭಿವೃದ್ಧಿ ಹೊಂದಿದ ಜಿಲ್ಲೆಗಳು** | | |
| ದಕ್ಷಿಣ ಕನ್ನಡ | ೮೯.೭ ೭೭.೨ ೮೩.೪ | ರೂ.೩೯೮೧೭ |
| ಉಡುಪಿ | ೮೮.೨ ೭೫.೨ ೮೧.೨ | ರೂ. ೧೯೨೦೮ |
| ಶಿವಮೊಗ್ಗ | ೮೨.೦ ೬೬.೯ ೭೪.೫ | ರೂ. ೧೯೩೪೯ |
| **ಹಿಂದುಳಿದ ಜಿಲ್ಲೆಗಳು** | | |

| | | |
|---|---|---|
| ಗುಲಬರ್ಗಾ | ೬೧.೮ ೩೭.೯ ೫೦.೦ | ರೂ. ೧೩೪೪೬ |
| ಕೊಪ್ಪಳ | ೬೮.೪ ೩೯.೬ ೫೪.೧ | ರೂ. ೧೩೭೮೯ |
| ರಾಯಚೂರು | ೬೧.೫ ೩೫.೯ ೪೮.೮ | ರೂ. ೧೧೩೪೪ |

*ಮೂಲ : ಕರ್ನಾಟಕ ಸರ್ಕಾರ, ೨೦೦೨, ಸ್ಟೇಟ್‌ಡೊಮೆಸ್ಟಿಕ್ ಪ್ರಾಡಕ್ಟ್, ಕರ್ನಾಟಕ, ೧೯೯೩ – ೯೪ ರಿಂದ ೨೦೦೦ – ೨೦೦೧, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಜನಗಣತಿ ವರದಿ, ೨೦೦೧.*

ಈ ಕೋಷ್ಟಕದಲ್ಲಿ ಕಂಡುಬರುವಂತೆ ಸಾಕ್ಷರತೆಯಲ್ಲಿ ಉನ್ನತ ಮಟ್ಟ ಸಾಧಿಸಿಕೊಂಡಿರುವ ಜಿಲ್ಲೆಗಳು ಆರ್ಥಿಕವಾಗಿಯೂ ಉನ್ನತ ಮಟ್ಟ ಸಾಧಿಸಿಕೊಂಡಿವೆ. ಕರ್ನಾಟಕ ರಾಜ್ಯದ ತಲಾ ಒಟ್ಟು ದೇಶೀಯ ಉತ್ಪನ್ನವು ೧೯೯೯ – ೨೦೦೦ ದಲ್ಲಿ ರೂ. ೧೮೫೬೧ (ಚಾಲ್ತಿ ಬೆಲೆಗಳಲ್ಲಿ). ಹಿಂದುಳಿದ ಜಿಲ್ಲೆಗಳಲ್ಲಿ ಸಾಕ್ಷರತೆ ಮಟ್ಟವು ಕನಿಷ್ಠವಾಗಿದೆ ಮತ್ತು ತಲಾ ಒಟ್ಟು ದೇಶೀಯ ಉತ್ಪನ್ನವೂ ಕೆಳಮಟ್ಟದಲ್ಲಿದೆ.

# ೯. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ – ಗತಿ (೨)

**ಭಾಗ ೨**

ಈ ಭಾಗದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ (೧ ರಿಂದ ೧೦) ಸಂಬಂಧಿಸಿದ ಮಕ್ಕಳ ದಾಖಲಾತಿಯ ವಿವಿಧ ಆಯಾಮಗಳನ್ನು ವಿಶದವಾಗಿ ಚರ್ಚಿಸಲಾಗಿದೆ. ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಮಕ್ಕಳ ದಾಖಲಾತಿಯ ಮೂರು ನೆಲೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ದಾಖಲಾತಿಗೆ ಸಂಬಂಧಿಸಿದ ಸ್ಥಿತಿಯನ್ನು, ಅದರ ಪ್ರಾದೇಶಿಕ ಸ್ವರೂಪವನ್ನು, ದಲಿತರು ಹಾಗೂ ದಲಿತೇತರ ಆಯಾಮಗಳನ್ನು ಹಾಗೂ ದಾಖಲಾತಿಯ ಲಿಂಗ ಸಂಬಂಧಿ ನೆಲೆಗಳನ್ನು ವಿವರವಾಗಿ ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

**ಮಕ್ಕಳ ದಾಖಲಾತಿ ಸಾಧನೆ**

ಕೋಷ್ಟಕ – ೩ ರಲ್ಲಿ ೨೦೦೫ ಕ್ಕೆ ಸಂಬಂಧಿಸಿದಂತೆ ೧ ರಿಂದ ೭ನೆಯ, ೮ ರಿಂದ ೧೦ನೆಯ ಹಾಗೂ ಒಟ್ಟು ೧ ರಿಂದ ೧೦ನೆಯ ತರಗತಿಗಳ ದಾಖಲಾತಿ ವಿವರಗಳನ್ನು ವಿಭಾಗವಾರು ಹಾಗೂ ರಾಜ್ಯಕ್ಕೆ ಸಂಬಂಧಿಸಿದಂತೆ ನೀಡಲಾಗಿದೆ. ಒಂದರಿಂದ ಹತ್ತನೆಯ ತರಗತಿ ವರೆಗಿನ ದಾಖಲಾತಿ ಸಂಖ್ಯೆ ೯೯.೩೬ ಲಕ್ಷ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ೧ – ೧೦ನೆಯ ತರಗತಿಯಲ್ಲಿರುವ ಮಕ್ಕಳ ಪ್ರಮಾಣವು ಶೇ. ೧೮.೮೦ ರಷ್ಟಿದೆ.

ಈ ಕೋಷ್ಟಕವು ತೋರಿಸುತ್ತಿರುವ ಒಂದು ಕುತೂಹಲಕಾರಿ ಸಂಗತಿ ಬಗ್ಗೆ ವಿವರವಾಗಿ ಚರ್ಚಿಸುವ ಅಗತ್ಯವಿದೆ. ಒಟ್ಟು ಮಕ್ಕಳ ದಾಖಲಾತಿಯ ಪ್ರಾದೇಶಿಕ ಸ್ವರೂಪಕ್ಕೆ ಇದು ಸಂಬಂಧಿಸಿದೆ. ಕರ್ನಾಟಕ ರಾಜ್ಯದ ಎರಡು ಪ್ರದೇಶಗಳಾದ ದಕ್ಷಿಣ ಕರ್ನಾಟಕ (ದ.ಕ.) ಮತ್ತು ಉತ್ತರ ಕರ್ನಾಟಕ (ಉ.ಕ.)ಗಳ ನಡುವೆ ಜನಸಂಖ್ಯೆಯ ಹಂಚಿಕೆಗಿಂತ ದಾಖಲಾದ ಮಕ್ಕಳ ಹಂಚಿಕೆಯು ಭಿನ್ನವಾಗಿದೆ. ಕೋಷ್ಟಕದ ಎರಡನೆಯ ಅಂಕಣದಲ್ಲಿ ತೋರಿಸಿರುವಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ. ೫೭.೩೦ ರಷ್ಟಿದ್ದರೆ ಉತ್ತರ ಕರ್ನಾಟಕದ ಪಾಲು ಕೇವಲ ಶೇ. ೪೨.೭೦. ಆದರೆ ೧ ರಿಂದ ೧೦ನೆಯ ತರಗತಿವರೆಗಿನ ಮಕ್ಕಳ ದಾಖಲಾತಿಯಲ್ಲಿ ಇದು ತಿರುವು

ಮುರುವು ಆಗಿರುವುದು ಕಂಡುಬರುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. ೫೭.೩೦ ಪಾಲು ಪಡೆದಿರುವ ದಕ್ಷಿಣ ಕರ್ನಾಟಕ ಪ್ರದೇಶವು ೧ ರಿಂದ ೧೦ನೆಯ ತರಗತಿವರೆಗಿನ ಶಾಲಾ ಮಕ್ಕಳಿಗೆ ಸಂಬಂಧಿಸಿದಂತೆ ಅದರ ಪಾಲು ಕೇವಲ ಶೇ. ೫೩.೪೮. ಇದಕ್ಕೆ ಪ್ರತಿಯಾಗಿ ಜನಸಂಖ್ಯೆಯಲ್ಲಿ ಶೇ. ೪೨.೭೦ ಪಾಲು ಪಡೆದಿರುವ ಉತ್ತರ ಕರ್ನಾಟಕ ಪ್ರದೇಶವು ಶಾಲಾ ಮಕ್ಕಳಲ್ಲಿ ಶೇ. ೪೬.೫೨ ಪಾಲು ಪಡೆದಿದೆ. ಇದನ್ನು ಹೇಗೆ ವಿವರಿಸುವುದು?

**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ (೧ – ೧೦) ದಾಖಲಾತಿ ಪ್ರಮಾಣ : ಕರ್ನಾಟಕ – ೨೦೦೫**

**ಕೋಷ್ಟಕ – ೩**

| ವಿಭಾಗಗಳು ಪ್ರದೇಶ ರಾಜ್ಯ | **ಜನಸಂಖ್ಯೆ ೨೦೦೧ (ತರಗತಿ)** | **ದಾಖಲಾತಿ (೨೦೦೫)** | | |
|---|---|---|---|---|
| | | **೧ – ೭ (ತರಗತಿ)** | **೮ – ೧೦ (ತರಗತಿ)** | **೧ – ೧೦** |
| ಬೆಂಗಳೂರು | ೧೮,೪೯೦,೮೧೧ (೩೪.೯೯) | ೨,೫೨೯,೯೪೫, (೩೨.೦೨) | ೭೫೪,೪೪೬ (೩೭.೦೫) | ೩,೨೮೪,೩೯೧ (೩೩.೦೫) |
| ಮೈಸೂರು | ೧೧,೭೯೧,೩೦೨ (೨೨.೩೧) | ೧,೫೨೭,೩೫೭ (೧೯.೩೨) | ೫೦೧,೯೪೪ (೨೪.೬೫) | ೨,೦೨೯,೩೦೧ (೨೦.೪೨) |
| ದ.ಕ. | ೩೦,೨೮೨,೧೧೩ (೫೭.೩೦) | ೪,೦೫೭,೩೦೨ (೫೧.೩೫) | ೧,೨೫೬,೩೯೦ (೬೧.೭೧) | ೫,೩೧೩,೬೯೨ (೫೩.೪೮) |
| ಬೆಳಗಾವಿ | ೧೩,೦೪೨,೧೬೩ (೨೪.೬೮) | ೨,೧೪೧,೭೨೪ (೨೭.೧೧) | ೫೦೪,೮೫೪ (೨೪.೮೦) | ೨,೬೪೬,೫೭೮ (೨೬.೬೩) |
| ಗುಲಬರ್ಗಾ | ೫,೫೨೬,೨೮೬ (೧೮.೦೨) | ೧,೭೦೧,೭೦೭ (೨೧.೫೪) | ೨೭೪,೬೩೪ (೧೩.೪೯) | ೧,೯೭೬,೩೪೧ (೧೯.೮೯) |
| ಉ.ಕ. | ೨೨,೫೬೮,೪೪೯ (೪೨.೭೦) | ೩,೮೪೩,೪೩೧ (೪೮.೬೫) | ೭೭೯,೪೮೮ (೩೮.೨೯) | ೪,೬೨೨,೯೧೯ (೪೬.೫೨) |
| ರಾಜ್ಯ | ೫೨,೮೫೦,೫೬೨ (೧೦೦.೦೦) | ೭,೯೦೦,೭೩೩ (೧೦೦.೦೦) | ೨,೦೩೫,೮೭೮ (೧೦೦.೦೦) | ೯,೯೩೬,೬೧೧ (೧೦೦.೦೦) |

*ಮೂಲ : ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ೨೦೦೫*

ಈ ವಿಚಿತ್ರವನ್ನು ಅರ್ಥ ಮಾಡಿಕೊಳ್ಳಲು ನಾವು ರಾಜ್ಯದಲ್ಲಿನ ೦ – ೬ ವಯೋಮಾನದ ಮಕ್ಕಳ ಹಂಚಿಕೆಯನ್ನು ಪರಿಗಣಿಸಬೇಕಾಗುತ್ತದೆ. ಕೋಷ್ಟಕ – ೪ ರಲ್ಲಿ ೧೯೯೧ ಮತ್ತು ೨೦೦೧ ರಲ್ಲಿ ರಾಜ್ಯದ ವಿಭಾಗಗಳ ನಡುವೆ ೦ – ೬ ವಯೋಮಾನದ ಮಕ್ಕಳ ಹಂಚಿಕೆಯ ವಿವರ ನೀಡಲಾಗಿದೆ. ಈ ಕೋಷ್ಟಕದಲ್ಲಿ ೦ – ೬ ವಯೋಮಾನದ ಮಕ್ಕಳ ಸಂಖ್ಯೆ ಹಾಗೂ ಅವರ ವಿಭಾಗವಾರು ಹಂಚಿಕೆಯನ್ನು ಶೇಕಡವಾರು ತೋರಿಸಲಾಗಿದೆ.

[1]

**ಕರ್ನಾಟಕದಲ್ಲಿ ೦ – ೬ ವಯೋಮಾನದ ಮಕ್ಕಳ ಸಂಖ್ಯೆ : ೧೯೯೧ ಮತ್ತು ೨೦೦೧**

**ಕೋಷ್ಟಕ – ೪**

| **ವಿಭಾಗಗಳು ಪ್ರದೇಶ ರಾಜ್ಯ** | **೦ – ೬ ವಯೋಮಾನದ ಮಕ್ಕಳು : ೧೯೯೧** | | **೦ – ೬ ವಯೋಮಾನದ ಮಕ್ಕಳು : ೨೦೦೧** | | **೧೯೯೧ – ೨೦೦೧ರ ದಶಕವಾರು ಬೆಳವಣಿಗೆ** | |
|---|---|---|---|---|---|---|
| | **ಸಂಖ್ಯೆ (ಲಕ್ಷಗಳಲ್ಲಿ)** | **ಪ್ರಮಾಣ (ಶೇ)** | **ಸಂಖ್ಯೆ (ಲಕ್ಷಗಳಲ್ಲಿ)** | **ಪ್ರಮಾಣ (ಶೇ)** | **ಸಂಖ್ಯೆ (ಲಕ್ಷಗಳಲ್ಲಿ)** | **ಪ್ರಮಾಣ (ಶೇ)** |
| ಬೆಂಗಳೂರು ವಿಭಾಗ | ೨೩.೧೮ | ೩೧.೦೧ | ೨೨.೯೦ | ೩೧.೮೮ | – ೦.೨೮ | – ೧.೨೧ |
| ಮೈಸೂರು ವಿಭಾಗ | ೧೫.೬೩ | ೨೦.೯೧ | ೧೩.೯೫ | ೧೯.೪೨ | – ೧.೬೮ | – ೧೦.೭೫ |
| ದ.ಕ. ಪ್ರದೇಶ | ೩೮.೮೧ | ೫೧.೯೨ | ೩೬.೮೫ | ೫೧.೩೦ | – ೧.೯೬ | – ೫.೦೫ |
| ಬೆಳಗಾವಿ ವಿಭಾಗ | ೧೯.೭೦ | ೨೬.೩೫ | ೧೯.೧೦ | ೨೬.೫೯ | – ೦.೬೦ | – ೩.೦೫ |
| ಗುಲಬರ್ಗಾ ವಿಭಾಗ | ೧೬.೨೫ | ೨೧.೭೩ | ೧೫.೮೮ | ೨೨.೧೧ | – ೦.೩೭ | – ೨.೨೮ |
| ಉ.ಕ. ಪ್ರದೇಶ | ೩೫.೯೫ | ೪೮.೦೮ | ೩೪.೯೮ | ೪೮.೭೦ | – ೦.೯೭ | – ೨.೭೦ |
| ಕರ್ನಾಟಕ ರಾಜ್ಯ | ೭೪.೭೬ | ೧೦೦.೦೦ | ೭೧.೮೩ | ೧೦೦.೦೦ | – ೨.೯೩ | – ೩.೯೨ |

*ಮೂಲ : ಜನಗಣತಿ ವರದಿಗಳು, ೧೯೯೯ ಮತ್ತು ೨೦೦೧*

ಕೋಷ್ಟಕ – ೪ ರಲ್ಲಿನ ವಿವರಗಳ ನೆರವಿನಿಂದ ಕೋಷ್ಟಕ – ೩ ಕ್ಕೆ ಸಂಬಂಧಿಸಿದಂತೆ ಎತ್ತಿರುವ ಪ್ರಶ್ನೆಗೆ ಉತ್ತರ ನೀಡಬಹುದಾಗಿದೆ. ಮೊದಲನೆಯದಾಗಿ ರಾಜ್ಯ ಮಟ್ಟದಲ್ಲಿ ೧೯೯೧ ರಿಂದ ೨೦೦೧ ರ ಅವಧಿಯಲ್ಲಿ ೦ – ೬ ವಯೋಮಾನದ ಮಕ್ಕಳ ಸಂಖ್ಯೆಯು ಕಡಿಮೆಯಾಗಿದೆ. ಎಲ್ಲ ವಿಭಾಗಗಳಲ್ಲೂ ಅದರ ಗಾತ್ರ ಕಡಿಮೆಯಾಗಿದೆ. ಆದರೆ ೦ – ೬ ವಯೋಮಾನದ ಮಕ್ಕಳ ಸಂಖ್ಯೆಯಲ್ಲಿನ ಕಡಿತವು ಎಲ್ಲ ವಿಭಾಗಗಳಲ್ಲೂ ಸಮನಾಗಿಲ್ಲ. ಈ ಇಳಿಕೆಯು ಮೈಸೂರು ವಿಭಾಗದಲ್ಲಿ ಅತ್ಯಧಿಕವಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಅತ್ಯಂತ ಕಡಿಮೆಯಿದೆ. ವಿಭಾಗಗಳ ನಡುವೆ ೦ – ೬ ವಯೋಮಾನದ ಮಕ್ಕಳ ಹಂಚಿಕೆಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆಯಾಗಿದೆ.

ಎರಡನೆಯದಾಗಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಜನಸಂಖ್ಯೆಯ ವಿಭಾಗವಾರು ಹಂಚಿಕೆ ಪ್ರಮಾಣವು ಭಿನ್ನವಾಗಿದೆ. ರಾಜ್ಯದ ಜನಸಂಖ್ಯೆಯಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ. ೫೭.೩೦. ಆದರೆ ಶಾಲಾ ದಾಖಲಾತಿಯಲ್ಲಿ ಅದರ ಪ್ರಮಾಣ ಕೇವಲ ಶೇ. ೫೩.೪೮. ಇದಕ್ಕೆ ಕಾರಣ ಅದು ೦ – ೬ ವಯೋಮಾನದ ಮಕ್ಕಳಿಗೆ ಸಂಬಂಧಿಸಿದಂತೆ ಪಡೆದಿರುವ ಪಾಲು (ಶೇ. ೫೧.೩) ಎಂಬುದನ್ನು ನಾವು ಗುರುತಿಸಬೇಕಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇ. ೪೨.೭೦ ಪಾಲು ಪಡೆದಿದ್ದರೂ ಉತ್ತರ ಕರ್ನಾಟಕ ಪ್ರದೇಶವು ಶಾಲಾ ದಾಖಲಾತಿಯಲ್ಲಿ ಶೇ. ೪೬.೫೨ ಪಾಲು ಪಡೆದಿದೆ. ಇದಕ್ಕೆ ಕಾರಣ ಅದು ೦ – ೬ ವಯೋಮಾನದ ಮಕ್ಕಳಲ್ಲಿ ಶೇ. ೪೮.೭೦ ಪಾಲು ಪಡೆದಿರುವುದು ಕಾರಣವಾಗಿದೆ.

ಕೋಷ್ಟಕ – ೩ ರಲ್ಲಿನ ಮತ್ತೊಂದು ಸಂಗತಿಯನ್ನು ನಾವು ಗುರುತಿಸಬೇಕಾಗಿದೆ. ಆ ಕೋಷ್ಟಕದಲ್ಲಿ ದಾಖಲಾತಿಯನ್ನು ೧ ರಿಂದ ೭ ಹಾಗೂ ೮ ರಿಂದ ೧೦ ನೆಯ ತರಗತಿಗಳಿಗೆ ಪ್ರತ್ಯೇಕವಾಗಿ ನೀಡಲಾಗಿದೆ. ಇದು ಪ್ರಾದೇಶಿಕ ಅಸಮಾನತೆ ಬಗ್ಗೆ ಒಂದು ಸೂಕ್ಷ್ಮ ಸಂಗತಿಯನ್ನು ತೋರಿಸುತ್ತಿದೆ. ಅದೇನೆಂದರೆ ೧ ರಿಂದ ೭ನೆಯ ತರಗತಿವರೆಗಿನ ದಾಖಲಾತಿಯಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ. ೫೧.೩೫ ಮತ್ತು ಗುಲಬರ್ಗಾ ವಿಭಾಗದ ಪಾಲು ಶೇ. ೨೧.೫೪ ರಷ್ಟಿದೆ. ಆದರೆ ೮ ರಿಂದ ೧೦ನೆಯ ತರಗತಿಯ ದಾಖಲಾತಿಯಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ. ೬೧.೭೧ ರಷ್ಟಾದರೆ ಗುಲಬರ್ಗಾ ವಿಭಾಗದ ಪಾಲು ಕೇವಲ ಶೇ. ೧೩.೪೯. ಅಂದರೆ ೧ ರಿಂದ ೭ನೆಯ ತರಗತಿಯ ಹಂತದಿಂದ ೮ ರಿಂದ ೧೦ನೆಯ ತರಗತಿ ಹಂತದವರೆಗಿನ ಪರಿವರ್ತನೆಯಲ್ಲಿ ಶಾಲೆಯನ್ನು ಬಿಡುವ ಮಕ್ಕಳ ಪ್ರಮಾಣವು ಗುಲಬರ್ಗಾ ವಿಭಾಗದಲ್ಲಿ ಅತ್ಯಧಿಕವಾಗಿದೆ. ಈ ವಿಭಾಗದಲ್ಲಿ ೧ ರಿಂದ ೭ನೆಯ ತರಗತಿವರೆಗಿನ ಮಕ್ಕಳ ಪ್ರಮಾಣ ಒಟ್ಟು ಮಕ್ಕಳ ಶೇ. ೮೬.೧೦ ರಷ್ಟಾದರೆ ೮ ರಿಂದ ೧೦ ನೆಯ ತರಗತಿವರೆಗಿನ ಮಕ್ಕಳ ಪ್ರಮಾಣ ಶೇ. ೧೩.೯೦ ಆದರೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಇವೆರಡೂ ಹಂತಗಳ ನಡುವಿನ ಅನುಪಾತವು ೭೬.೩೪ : ೨೩.೬೬ ರಷ್ಟಿದೆ. ವಿವರಗಳಿಗೆ ಕೋಷ್ಟಕ – ೫ ನೋಡಿ.

**ಕೋಷ್ಟಕ – ೫**

| **ಕ್ರ.ಸಂ.** | **ವಿಭಾಗಗಳು** | **ದಾಖಲಾತಿ ಪ್ರಮಾಣ ಶೇಕಡ** | |
|---|---|---|---|
| | | **೧ – ೭ ನೆಯ ತರಗತಿ** | **೮ – ೧೦ ನೆಯ ತರಗತಿ** |
| ೧. | ಬೆಂಗಳೂರು | ೭೭.೦೩ | ೨೨.೯೭ |
| ೨. | ಮೈಸೂರು | ೭೫.೨೭ | ೨೪.೭೩ |
| ೩. | ದ.ಕ. ಪ್ರದೇಶ | ೭೬.೩೪ | ೨೩.೬೬ |
| ೪. | ಬೆಳಗಾವಿ | ೮೦.೯೨ | ೧೯.೦೮ |
| ೫. | ಗುಲಬರ್ಗಾ | ೮೬.೧೦ | ೧೩.೯೦ |
| ೬. | ಉ.ಕ. ಪ್ರದೇಶ | ೬೩.೧೪ | ೧೬.೮೬ |
| ೭. | ಕರ್ನಾಟಕ | ೭೯.೫೧ | ೨೦.೪೯ |

*ಟಿಪ್ಪಣಿ : ಕೋಷ್ಟಕ ೨೧ರ ಆಧಾರದ ಮೇಲೆ ಗಣನೆ ಮಾಡಲಾಗಿದೆ.*

ಈ ಕೋಷ್ಟಕವು ತುಂಬಾ ಕುತೂಹಲಕಾರಿಯಾದುದಾಗಿದೆ. ರಾಜ್ಯ ಮಟ್ಟದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಹಾಗೂ ವಿಭಾಗ ಮಟ್ಟದಲ್ಲಿ ೧ ರಿಂದ ೭ನೆಯ ತರಗತಿವರೆಗಿನ ಮಕ್ಕಳ ದಾಖಲಾತಿಯು ೮ ರಿಂದ ೧೦ನೆಯ ತರಗತಿವರೆಗಿನ ದಾಖಲಾತಿ ಪ್ರಮಾಣಕ್ಕಿಂತ ಅಧಿಕವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಇವೆರಡರ ಪರಿಮಾಣ ೭೬.೩೪:೨೩.೬೬ ರಷ್ಟಿದೆ. ಗುಲಬರ್ಗಾ ವಿಭಾಗದಲ್ಲಿ ಇದರ ಪರಿಮಾಣ ೮೬.೧೦:೧೩.೯೦ ರಷ್ಟಿದೆ. ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತಕ್ಕೆ ಸಾಗುವ ಮಕ್ಕಳ ಪ್ರಮಾಣವು ಗುಲಬರ್ಗಾ ವಿಭಾಗದಲ್ಲಿ ಉಳಿದೆಲ್ಲ ವಿಭಾಗಗಳಿಗಿಂತ ಕೆಳಮಟ್ಟದಲ್ಲಿದೆ. ಇದನ್ನು ಸರಿಪಡಿಸುವ ಅಗತ್ಯವಿದೆ.

ಕೋಷ್ಟಕ – ೩ ಶಾಲಾ ದಾಖಲಾತಿಗೆ ಸಂಬಂಧಿಸಿದ ಒಟ್ಟು ಸಾಧನೆ ಹಾಗೂ ಅದರ ಪ್ರಾದೇಶಿಕ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಕೋಷ್ಟಕದಲ್ಲಿ ಅಂಕಿಸಂಖ್ಯೆಯ ಮೂಲಕ ಮೂರು ಮುಖ್ಯ ತಥ್ಯಗಳನ್ನು ರೂಪಿಸಬಹುದಾಗಿದೆ.

೧. ಕರ್ನಾಟಕದಲ್ಲಿ ಇಂದು ೧ ರಿಂದ ೧೦ನೆಯ ತರಗತಿಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಸರಿಸುಮಾರು ೧೦೦ ಲಕ್ಷ ಇದೆ. ಆದರೆ ದಕ್ಷಿಣ ಕರ್ನಾಟಕ ಪ್ರದೇಶವು ರಾಜ್ಯದ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲು ರಾಜ್ಯದ ಮಕ್ಕಳ ದಾಖಲಾತಿಯಲ್ಲಿ ಪಡೆದಿದೆ. ಇದಕ್ಕೆ ಪ್ರತಿಯಾಗಿ ಉತ್ತರ ಕರ್ನಾಟಕ ಪ್ರದೇಶವು ರಾಜ್ಯದ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅಧಿಕ ಪಾಲನ್ನು ರಾಜ್ಯದ ಶಾಲಾಮಕ್ಕಳ ಸಂಖ್ಯೆಯಲ್ಲಿ ಪಡೆದಿದೆ. ಆದರೆ ಇಂತಹ ಹಂಚಿಕೆ ೧ – ೭ನೆಯ ತರಗತಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ. ಮುಂದೆ ೮ – ೧೦ನೆಯ ತರಗತಿಯ ದಾಖಲಾತಿ ತೆಗೆದುಕೊಂಡರೆ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಇಲ್ಲಿ ದಕ್ಷಿಣ ಕರ್ನಾಟಕದ ಪಾಲು ಅಧಿಕವಾಗಿದೆ ಮತ್ತು ಉತ್ತರ ಕರ್ನಾಟಕದ ಪಾಲು ಕಡಿಮೆಯಾಗಿದೆ.

೨. ಪ್ರಾದೇಶಿಕವಾಗಿ ದಾಖಲಾದ ಮಕ್ಕಳ ಹಂಚಿಕೆಯು ಜನಸಂಖ್ಯೆಯ ಹಂಚಿಕೆಗಿಂತ ಭಿನ್ನವಾಗಿದ್ದರೆ ಅದಕ್ಕೆ ಉತ್ತರವನ್ನು ೦ – ೬ ವಯೋಮಾನದ ಮಕ್ಕಳ ಪ್ರಾದೇಶಿಕ ಹಂಚಿಕೆಯಲ್ಲಿ ಕಂಡುಕೊಳ್ಳಬಹುದಾಗಿದೆ.

೩. ಪ್ರಾದೇಶಿಕವಾಗಿ ೦ – ೬ ವಯೋಮಾನದ ಮಕ್ಕಳ ಹಂಚಿಕೆಯ ಆಧಾರದ ಮೇಲೆ ರಾಜ್ಯದಲ್ಲಿ ಜನಸಂಖ್ಯೆಯ ಬೆಳವಣಿಗೆಗೆ ಒತ್ತರ ಯಾವ ಪ್ರದೇಶದಲ್ಲಿ ಅಧಿಕವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

**ಶಾಲಾ ದಾಖಲಾತಿಯ ದಲಿತೀಕರಣ ಪ್ರಕ್ರಿಯೆ**

ಕೋಷ್ಟಕ – ೪ರಲ್ಲಿ ೧ ರಿಂದ ೧೦ನೆಯ ತರಗತಿಗಳಿಗೆ ಸಂಬಂಧಿಸಿದಂತೆ ಎರಡು ಹಂತಗಳಲ್ಲಿ ಪರಿಶಿಷ್ಟ (ಪ.ಜಾ.+ಪ.ಪಂ.) ಮಕ್ಕಳ ಶಾಲಾ ದಾಖಲಾತಿ ವಿವರಗಳನ್ನು ವಿಭಾಗವಾರು ನೀಡಲಾಗಿದೆ. ಈ ಕೋಷ್ಟಕದಲ್ಲೂ ಕುತೂಹಲಕಾರಿ ಸಂಗತಿಯೊಂದು ನಮ್ಮ ಗಮನ ಸೆಳೆಯುತ್ತದೆ. ಒಟ್ಟಾರೆ ನೋಡಿದಾಗ ಪರಿಶಿಷ್ಟರ ಪ್ರಮಾಣ ಜನಸಂಖ್ಯೆಯಲ್ಲಿ ಎಷ್ಟಿದೆಯೋ ಅದಕ್ಕಿಂತ ಅಧಿಕವಾಗಿ ಅವರ ಪಾಲು ೧ ರಿಂದ ೧೦ ನೆಯ ತರಗತಿ ದಾಖಲಾತಿಯಲ್ಲಿದೆ. ಉದಾಹರಣೆಗೆ ರಾಜ್ಯಮಟ್ಟದ ಸ್ಥಿತಿಯನ್ನು ತೆಗೆದುಕೊಂಡರೆ, ರಾಜ್ಯದ ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಶೇ. ೨೨.೯೬. ಅದೇ ರೀತಿ ೧ ರಿಂದ ೧೦ನೆಯ ತರಗತಿವರೆಗಿನ ರಾಜ್ಯದ ಒಟ್ಟು ದಾಖಲಾತಿಯಲ್ಲಿ ಪರಿಶಿಷ್ಟ ಮಕ್ಕಳ ಪ್ರಮಾಣವು ಶೇ. ೨೬.೨೯ ರಷ್ಟಿದೆ. ಸಾಪೇಕ್ಷವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಲಿತ ಮಕ್ಕಳ ಪ್ರತಿನಿಧೀಕರಣವು ಉನ್ನತ ಮಟ್ಟದಲ್ಲಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇದು ರಾಜ್ಯದ ಎಲ್ಲ ನಾಲ್ಕು ವಿಭಾಗಗಳಿಗೂ ಅನ್ವಯವಾಗುವ ಸಂಗತಿಯಾಗಿದೆ. ರಾಜ್ಯವು ಹೆಮ್ಮೆಪಟ್ಟುಕೊಳ್ಳಬಹುದಾದ ಸಾಧನೆ ಇದಾಗಿದೆ. ರಾಜ್ಯದಲ್ಲಿ ೧ ರಿಂದ ೧೦ನೆಯ ತರಗತಿಗಳಲ್ಲಿ ಕಲಿಯುತ್ತಿರುವ ದಲಿತ ಮಕ್ಕಳ ಸಂಖ್ಯೆ ೨೬.೧೨ ಲಕ್ಷ ದಲಿತರ ಒಟ್ಟು ಜನಸಂಖ್ಯೆಯಲ್ಲಿ (೧೨೧.೩೮ ಲಕ್ಷ) ೧ ರಿಂದ ೧೦ನೆಯ ತರಗತಿಯವರೆಗೆ ಶಾಲೆ ಕಲಿಯುತ್ತಿರುವ ದಲಿತ ಮಕ್ಕಳ ಪ್ರಮಾಣ ಶೇ. ೨೧.೫೨. ಆದರೆ ದಲಿತೇತರರಿಗೆ ಸಂಬಂಧಿಸಿದಂತೆ ೧ ರಿಂದ ೧೦ನೆಯ ತರಗತಿಯವರೆಗೆ ಕಲಿಯುತ್ತಿರುವ ಒಟ್ಟು

ದಲಿತೇತರ ಮಕ್ಕಳು ಅವರ ಜನಸಂಖ್ಯೆಯಲ್ಲಿ ಶೇ. ೧೭.೯೮ ರಷ್ಟಿದ್ದಾರೆ. ಪ್ರಸ್ತುತ ಅಧ್ಯಯನವು ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಶಾಲಾ ದಾಖಲಾತಿ ಪ್ರಮಾಣವು ಉತ್ತಮ ಮಟ್ಟದಲ್ಲಿರುವುದನ್ನು ದೃಢಪಡಿಸುತ್ತದೆ.

ಇದು ಅಖಂಡವಾಗಿ ಶಾಲಾ ದಾಖಲಾತಿಯನ್ನು ಪರಿಶೀಲಿಸಿದಾಗ ಕಂಡುಬರುವ ಸಂಗತಿಯಾಗಿದೆ. ಆದರೆ ಶಾಲಾ ದಾಖಲಾತಿಯನ್ನು ಪ್ರಾಥಮಿಕ (೧ – ೭) ಮತ್ತು ಪ್ರೌಢ (೮ – ೧೦) ವೆಂದು ವರ್ಗೀಕರಿಸಿದಾಗ ಕಂಡುಬರುವ ಸ್ಥಿತಿಯು ಭಿನ್ನವಾಗುತ್ತದೆ. ಕೋಷ್ಟಕ – ೪ ರಲ್ಲಿ ತೋರಿಸಿರುವಂತೆ ೧ – ೭ನೆಯ ತರಗತಿಗೆ ಸಂಬಂಧಿಸಿದಂತೆ ಒಟ್ಟು ದಾಖಲಾತಿಯಲ್ಲಿ ಪರಿಶಿಷ್ಟರ ಪ್ರಮಾಣ ಶೇ. ೨೭.೩೯ ರಷ್ಟಿದೆ. ಆದರೆ ೮ – ೧೦ನೆಯ ಪ್ರೌಢಶಾಲೆಗಳನ್ನು ತೆಗೆದುಕೊಂಡರೆ ಅಲ್ಲಿನ ಒಟ್ಟು ದಾಖಲಾತಿಯಲ್ಲಿ ದಲಿತರ ಪ್ರಮಾಣ ಕೇವಲ ಶೇ. ೨೨.೧೦. ಉನ್ನತ ತರಗತಿಗಳಿಗೆ ಸಾಗಿದಂತೆ ದಲಿತರ ಪ್ರಮಾಣವು ಕಡಿಮೆಯಾಗುತ್ತದೆ.

**ಶಾಲಾ ದಾಖಲಾತಿಯ ದಲಿತೀಕರಣ : ಕರ್ನಾಟಕ (೨೦೦೫)**

**ಕೋಷ್ಟಕ – ೬**

| ವಿಭಾಗಗಳು ಪ್ರದೇಶಗಳು ರಾಜ್ಯ | ಜನಸಂಖ್ಯೆ (ಲಕ್ಷಗಳಲ್ಲಿ) ೨೦೦೧ | ಪರಿಶಿಷ್ಟರ ಜನಸಂಖ್ಯೆ (ಲಕ್ಷಗಳಲ್ಲಿ) ೨೦೦೧ | ದಾಖಲಾತಿ (ಲಕ್ಷಗಳಲ್ಲಿ): ೧ ರಿಂದ ೭ನೆಯ ತರಗತಿ | | ೮ ರಿಂದ ೧೦ ನೆಯ ತರಗತಿ | | ಒಟ್ಟು ತರಗತಿ ೧ – ೧೦ | |
|---|---|---|---|---|---|---|---|---|
| | | | ಒಟ್ಟು ದಾಖಲಾತಿ | ಪರಿಶಿಷ್ಟರ ದಾಖಲಾತಿ | ಒಟ್ಟು ದಾಖಲಾತಿ | ಪರಿಶಿಷ್ಟರ ದಾಖಲಾತಿ | ಒಟ್ಟು ದಾಖಲಾತಿ | ಪರಿಶಿಷ್ಟರ ದಾಖಲಾತಿ |
| ಬೆಂಗಳೂರು | ೧೮೪.೯೧ | ೪೩.೯೩ (೨೩.೭೫) | ೨೫.೨೯ | ೭.೫೩ (೨೯.೭೭) | ೭.೫೪ | ೧.೯೧ (೨೫.೩೩) | ೩೨.೮೪ | ೯.೪೪ (೨೮.೭೪) |
| ಮೈಸೂರು | ೧೧೭.೯೧ | ೨೩.೭೬ (೨೦.೧೫) | ೧೫.೨೭ | ೩.೬೨ (೨೩.೭೧) | ೫.೦೨ | ೧.೦೩ (೨೦.೫೨) | ೨೦.೨೯ | ೪.೬೩ (೨೨.೮೨) |
| ದ.ಕ.ಪ್ರ. | ೩೦೨.೮೨ | ೬೭.೬೯ (೨೨.೩೫) | ೪೦.೫೬ | ೧೧.೧೫ (೨೭.೪೯) | ೧೨.೫೬ | ೨.೯೪ (೨೩.೪೦) | ೫೩.೧೩ | ೧೪.೦೭ (೨೬.೪೮) |
| ಬೆಳಗಾವಿ | ೧೩೦.೪೨ | ೨೩.೩೪ (೧೭.೮೯) | ೨೧.೪೧ | ೪.೩೯ (೨೦.೫೦) | ೫.೦೫ | ೦.೮೪ (೧೬.೬೩) | ೨೬.೪೬ | ೫.೨೩ (೧೯.೭೬) |
| ಗುಲಬರ್ಗಾ | ೯೫.೨೬ | ೩೦.೩೫ (೩೧.೮೬) | ೧೭.೦೨ | ೬.೧೦ (೩೫.೮೪) | ೨.೭೫ | ೦.೭೨ (೨೬.೧೮) | ೧೯.೭೬ | ೬.೮೨ (೩೪.೫೧) |

| | | | | | | | | |
|---|---|---|---|---|---|---|---|---|
| | ೨೨೫.೭೮ | ೫೩.೭೯ | ೩೮.೪೩ | ೧೦.೪೯ | ೬.೮೦ | ೧.೫೭ | ೪೭.೨೨ | ೧೨.೦೫ |
| ಉ.ಕ.ಪ್ರದೇಶ | | | | | | | | |
| | | (೨೩.೬೯) | | (೨೬.೨೯) | | (೨೦.೦೦) | | (೨೭.೦೬) |
| | ೫೨೮.೩೮ | ೬೮.೯೯ | ೨೧.೭೪ | ೨೦.೩೭ | ೪.೫ | ೯೯.೩೫ | ೨೭.೧೨ | |
| ರಾಜ್ಯ | | | | | | | | |
| | | (೨೨.೯೭) | | (೨೬.೩೯) | | (೨೨.೧೦) | | (೨೭.೨೯) |

ಮೂಲ : ಕರ್ನಾಟಕ ಸರ್ಕಾರ ೨೦೦೫ : ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ : ೨೦೦೫

ಇಷ್ಟಾದರೂ, ಒಟ್ಟು ಚಿತ್ರವು ಪ್ರೋತ್ಸಾಹದಾಯಕವಾಗಿದೆ. ಏಕೆಂದರೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ದಲಿತರ ಪ್ರಮಾಣ ಎಷ್ಟಿದೆಯೋ ಅದಕ್ಕಿಂತ ಹೆಚ್ಚಿನ ಪ್ರತಿ ನಿಧೀಕರಣವನ್ನು ೧ – ೧೦ನೆಯ ತರಗತಿಗಳ ದಾಖಲಾತಿಯಲ್ಲಿ ಕಾಣಬಹುದಾಗದೆ. ಇದನ್ನೇ ಇಲ್ಲಿ ಶಾಲಾ ದಾಖಲಾತಿಯ ದಲಿತೀಕರಣವೆಂದು ಕರೆಯಲಾಗಿದೆ. ಈ ಸಂಗತಿಯನ್ನು ಸ್ವಲ್ಪ ಎಚ್ಚರಿಕೆಯಿಂದ ಪರಿಗಣಿಸಬೇಕಾಗಿದೆ. ಒಟ್ಟು ದಾಖಲಾತಿಗೆ ಸಂಬಂಧಿಸಿದಂತೆ ಪ್ರಾದೇಶಿಕವಾಗಿ ನಮಗೆ ಇಂತಹ ಚಿತ್ರ ಕಂಡುಬಂದಿದೆ. ಜಾತಿ ಸ್ವರೂಪಕ್ಕೆ ಸಂಬಂಧಿಸಿದಂತೆ ದಲಿತೀಕರಣ ಪ್ರಕ್ರಿಯೆ ಕಂಡುಬಂದಿದೆ. ಇದನ್ನು ಕುರಿತಂತೆ ವಿಸ್ತೃತವಾದ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ.

**ದಲಿತೀಕರಣದ ಅವರೋಹಣ ಗತಿ**

ಕೋಷ್ಟಕ – ೫ರಲ್ಲಿ ಸ್ಪಷ್ಟವಾಗಿರುವಂತೆ ಒಟ್ಟು ದಾಖಲಾತಿಯಲ್ಲಿ ಪರಿಶಿಷ್ಟರ ಪ್ರಮಾಣವು ಅವರು ಜನಸಂಖ್ಯೆಯಲ್ಲಿ ಪಡೆದಿರುವ ಪ್ರಮಾಣಕ್ಕಿಂತ ಅಧಿಕವಿದೆ. ಇದೊಂದು ಸ್ವಾಗತಾರ್ಹವಾದ ಸಂಗತಿಯಾಗಿದೆ. ಆದರೆ ಪ್ರೌಢಶಾಲೆಯ ಹಂತಕ್ಕೆ ಸಾಗಿದಾಗ ದಲಿತ ಮಕ್ಕಳ ಪ್ರಮಾಣವು ಕಡಿಮೆಯಾಗುತ್ತದೆ. ಇದನ್ನು ಪ್ರಸ್ತುತ ಅಧ್ಯಯನದ ಸಂದರ್ಭಧಲ್ಲಿ ದಲಿತೀಕರಣದ ಅವರೋಹಣ ಗತಿ ಎಂದು ಕರೆಯಲಾಗಿದೆ.

**ವಿವಿಧ ತರಗತಿಗಳಲ್ಲಿ ದಲಿತೀಕರಣದ ಪ್ರಮಾಣ**

**ಕೋಷ್ಟಕ – ೬**

| ವಿವರ | ಒಂದನೆಯ ತರಗತಿ | ಏಳನೆಯ ತರಗತಿ | ಹತ್ತನೆಯ ತರಗತಿ | ಒಟ್ಟು ದಾಖಲಾತಿ ೧ – ೧೦ |
|---|---|---|---|---|
| | ೧,೧೫೬,೮೬೮ | ೧,೦೧೫,೦೭೦ | ೫೫೬,೬೫೫ | ೯,೯೩೭,೭೧೧ |
| ಒಟ್ಟುದಾಖಲಾತಿ | (೧೧.೭೫) | (೧೦.೨೨) | (೫.೭೧) | |
| | [೧೦೦.೦೦] | [೧೦೦.೦೦] | [೧೦೦.೦೦] | [೧೦೦.೦೦] |
| ದಲಿತೇತರ | ೮೩೨,೩೪೪ | ೬೭೧,೪೭೯ | ೪೪೦,೨೧೯ | ೬,೩೨೯,೩೭೭ |
| ದಾಖಲಾತಿ | (೧೧.೩೭) | (೧೦.೩೯) | (೭.೦೧) | |

| | | | | |
|---|---|---|---|---|
| | [೭೧.೮೯] | [೭೫.೦೨] | [೭೮.೯೨] | [೭೩.೭೬] |
| ದಲಿತರ | ೩೨೫,೫೩೪ | ೨೫೩,೫೯೧, | ೧೧೭,೫೩೬ | ೧,೬೦೭,೨೪೫ |
| | (೧೨.೪೮) | (೯.೭೨) | (೪.೫೧) | |
| ದಾಖಲಾತಿ | | | | |
| | [೧೮.೧೧] | [೧೪.೯೮] | [೧೧.೦೮] | [೧೬.೧೪] |

***ಟಿಪ್ಪಣಿ :*** *ದುಂಡಗಿರುವ ಆವರಣದಲ್ಲಿರುವ ಅಂಕಿಗಳು ೧ – ೧೦ನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತರು ಹಾಗೂ ದಲಿತೇತರರ ಪ್ರಮಾಣವನ್ನು ತೋರಿಸಿದರೆ ಚೌಕಾಕಾರದ ಆವರಣದಲ್ಲಿರುವ ಅಂಕಿಗಳು ಸಂಬಂಧಿಸಿದ ತರಗತಿಯ ದಾಖಲಾತಿಯಲ್ಲಿ ದಲಿತರು ಹಾಗೂ ದಲಿತೇತರ ಪ್ರಮಾಣವನ್ನು ತೋರಿಸುತ್ತವೆ.*

***ಮೂಲ :*** *ಕರ್ನಾಟಕ ಸರ್ಕಾರ ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ೨೦೦೫*

ಕೋಷ್ಟಕ – ೭ ತುಂಬಾ ಕುತೂಹಲಕಾರಿ ಸಂಗತಿಯೊಂದನ್ನು ನಮಗೆ ತೋರಿಸುತ್ತದೆ. ರಾಜ್ಯದ ೧ – ೧೦ ರವರೆಗಿನ ಒಟ್ಟು ದಾಖಲಾತಿಯಲ್ಲಿ ಒಂದನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ. ೧೧.೬೫ ರಷ್ಟಾದರೆ ಏಳನೆಯ ತರಗತಿಯಲ್ಲಿನ ಪ್ರಮಾಣ ಶೇ. ೧೦.೨೨. ಆದರೆ ಹತ್ತನೆಯ ತರಗತಿಯಲ್ಲಿನ ಪ್ರಮಾಣ ಕೇವಲ ಶೇ. ೫.೬೧. ಒಟ್ಟು ದಾಖಲಾತಿಯನ್ನು ದಲಿತರು ಮತ್ತು ದಲಿತೇತರರ ದಾಖಲಾತಿಯಾಗಿ ವರ್ಗೀಕರಿಸಿ ನೋಡಿದಾಗ ನಮಗೆ ಬೇರೆ ಚಿತ್ರ ಎದುರಾಗುತ್ತದೆ. ರಾಜ್ಯದಲ್ಲಿ ೨೦೦೫ ರಲ್ಲಿ ದಲಿತೇತರರ ದಾಖಲಾತಿ ೭೩.೨೯ ಲಕ್ಷ. ಇವರಲ್ಲಿ ಒಂದನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ. ೧೧.೩೬ ಹಾಗೂ ಏಳನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ. ೧೦.೩೯. ಪ್ರೌಢಶಿಕ್ಷಣದ ಕೊನೆಯ ಹಂತವಾದ ಹತ್ತನೆಯ ತರಗತಿಯಲ್ಲಿನ ಈ ಮಕ್ಕಳ ಪ್ರಮಾಣ ಶೇ. ೬.೦೧.

ಒಟ್ಟು ದಾಖಲಾತಿ ಹಾಗೂ ದಲಿತೇತರ ದಾಖಲಾತಿಗೆ ಭಿನ್ನವಾದ ಚಿತ್ರ ದಲಿತ ಮಕ್ಕಳ ದಾಖಲಾತಿಗೆ ಸಂಬಂಧಿಸಿದಂತೆ ಕಂಡುಬರುತ್ತದೆ. ದಲಿತರ ರಾಜ್ಯಮಟ್ಟದ ಒಟ್ಟು ದಾಖಲಾತಿ ೧೬.೦೭ ಲಕ್ಷ. ಇವರಲ್ಲಿ ಒಂದನೆಯ ತರಗತಿಯಲ್ಲಿನ ದಲಿತ ಮಕ್ಕಳ ಪ್ರಮಾಣ ಶೇ. ೧೨.೪೮. ಮುಂದೆ ಏಳನೆಯ ತರಗತಿಯಲ್ಲಿ ಅದರ ಪ್ರಮಾಣ ಶೇ. ೯.೭೨. ಆದರೆ ಅತ್ಯಂತ ಆತಂಕಕಾರಿ ಸಂಗತಿಯೆಂದರೆ ಹತ್ತನೆಯ ತರಗತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಕೇವಲ ಶೇ. ೪.೫೧. ಆದರೆ ದಲಿತೇತರ ಮಕ್ಕಳ ದಾಖಲಾತಿ ಚಿತ್ರವು ಇದಕ್ಕಿಂತ ಭಿನ್ನವಾಗಿದೆ. ಒಟ್ಟು ೧ ರಿಂದ ೧೦ನೆಯ ತರಗತಿಯಲ್ಲಿರುವ ದಲಿತೇತರ ಮಕ್ಕಳ ಸಂಖ್ಯೆ ೭೩.೨೯ ಲಕ್ಷ. ಇವರಲ್ಲಿ ಒಂದನೆಯ ತರಗತಿಯಲ್ಲಿರುವ ಮಕ್ಕಳ ಪ್ರಮಾಣ ಶೇ. ೧೧.೩೬, ಏಳನೆಯ ತರಗತಿಯಲ್ಲಿರುವವರ ಪ್ರಮಾಣ ಶೇ. ೧೦.೩೯ ಮತ್ತು ಹತ್ತನೆಯ ತರಗತಿಯಲ್ಲಿರುವವರ ಪ್ರಮಾಣ ಶೇ. ೬.೦೧.

ಅದೇ ರೀತಿ ಒಂದನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಶೇ. ೧೮.೧೧ ರಷ್ಟಿದ್ದರೆ ಏಳನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ಅವರ ಪ್ರಮಾಣ ೧೪.೯೮. ಆದರೆ ಹತ್ತನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಕೇವಲ ಶೇ. ೧೧.೦೮. ಹೀಗೆ ಉನ್ನತ ತರಗತಿಗಳಿಗೆ ಸಾಗಿದಂತೆ ದಲಿತರ ಪ್ರಮಾಣ ಕಡಿಮೆಯಾಗುವ ಪ್ರಕ್ರಿಯೆಯನ್ನು 'ದಲಿತೀಕರಣದ ಅವರೋಹಣ ಬೆಳವಣಿಗೆ' ಎಂದು ಕರೆಯಲಾಗಿದೆ. ಇದು ಅನೂಚಾನವಾಗಿ ಹರಿದು ಕೊಂಡು ಬಂದಿರುವ ಸಾಮಾಜಿಕ ಅಸಮಾನತೆಯ ಪರಿಣಾಮವಾಗಿದೆ. ಯಾವುದನ್ನು ಡ್ರೀಜ್ – ಸೆನ್‌ಅವರು 'ಅನೂಚಾನವಾಗಿ ಹರಿದುಕೊಂಡು ಬಂದಿರುವ ಅಸಮಾನತೆ' ಯೆಂದು ಕರೆದಿದ್ದಾರೋ (೨೦೦೨:೩೪೩) ಅದನ್ನು ನಿವಾರಿಸುವ ಕಡೆಗೆ ಇಂದು ಹೆಚ್ಚಿನ ಗಮನ ನೀಡುವ ಅಗತ್ಯವಿದೆ. ಈ ಬಗೆಯ ಅಸಮಾನತೆಯನ್ನು ವಿಮಲಾ ರಾಮಚಂದ್ರನ್ ಅವರು (೨೦೦೪) 'ಸಾಮಾಜಿಕ ಶ್ರೇಣೀಕರಣ' ವೆಂದು ಕರೆದಿದ್ದಾರೆ. ಪ್ರಾಥಮಿಕ ಶಿಕ್ಷಣವು ಇಂದು ಮುಖ್ಯವಾಗಿ ಎದುರಿಸಬೇಕಾದ ಸಮಸ್ಯೆಯೆಂದರೆ ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ಜನರನ್ನು ಒಳಗೊಳ್ಳುವುದಾಗಿದೆ.

ದಲಿತೀಕರಣವು ಕೆಳಹಂತದಲ್ಲಿ ನಡೆಯುತ್ತಿದೆ. ಆದರೆ ಉನ್ನತ ಹಂತವನ್ನು ಅದಿನ್ನೂ ಪ್ರವೇಶಿಸಿಲ್ಲ. ಈ ಬಗ್ಗೆ ಪ್ರಸ್ತುತ ಅಧ್ಯಯನವು ಬೆಳಕು ಚೆಲ್ಲುತ್ತದೆ.

**ದಾಖಲಾತಿಯ ಲಿಂಗ ಸ್ವರೂಪ**

ಶಾಲಾ ದಾಖಲಾತಿಯ ಲಿಂಗ ಸ್ವರೂಪವನ್ನು ಸರಳವಾದ 'ಲಿಂಗ ಸಮಾನತಾ ಸೂಚಿ' ಎಂಬ ಮಾಪನದ ಮೂಲಕ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಸೂಚಿಯು ದಾಖಲಾತಿಗೆ ಸಂಬಂಧಿಸಿದಂತೆ ಮಹಿಳೆಯರ ಪ್ರಮಾಣ ಎಷ್ಟಿದೆ ಎಂಬುದನ್ನು ತಿಳಿಸುತ್ತದೆ. ಈ ಸೂಚಿಯ ಆಧಾರದ ಮೇಲೆ ಹೆಣ್ಣುಮಕ್ಕಳ ಶಾಲಾ ಶಿಕ್ಷಣದ ಸಾಧನೆಯನ್ನು ಗುರುತಿಸಬಹುದಾಗಿದೆ.

**ಪ್ರಾಥಮಿಕ ಹಾಗೂ ಪ್ರೌಢಶಾಲಾ ದಾಖಲಾತಿಯಲ್ಲಿ ಲಿಂಗ ಸಮಾನತಾ ಸೂಚಿ : ೨೦೦೪ – ೦೫**

**ಕೋಷ್ಟಕ – ೮**

| ವಿಭಾಗಗಳು ಪ್ರದೇಶ ರಾಜ್ಯ | ಲಿಂಗ ಸಮಾನತಾ ಸೂಚಿ | | |
|---|---|---|---|
| | ೧ – ೭ | ೮ – ೧೦ | ೧ – ೧೦ |
| ಬೆಂಗಳೂರು ವಿಭಾಗ | ೯೪.೯೧ | ೮೯.೯೬ | ೯೩.೭೫ |
| ಮೈಸೂರು ವಿಭಾಗ | ೯೪.೫೮ | ೯೪.೬೭ | ೯೪.೬೦ |
| ದಕ್ಷಿಣ ಕನ್ನಡ ಪ್ರದೇಶ | ೯೪.೭೯ | ೯೧.೮೧ | ೯೪.೦೮ |
| ಬೆಳಗಾವಿ | ೭೨.೭೨ | ೭೮.೭೦ | ೮೯.೮೮ |
| ಗುಲಬರ್ಗಾ | ೮೯.೮೬ | ೭೫.೨೩ | ೮೭.೬೯ |
| ಉತ್ತರ ಕನ್ನಡ ಪ್ರದೇಶ | ೯೧.೪೪ | ೭೭.೪೬ | ೮೮.೯೩ |
| ಕರ್ನಾಟಕ ರಾಜ್ಯ | ೯೩.೧೪೭ | ೮೬.೦೫ | ೯೧.೬೫ |

*ಮೂಲ : ಅನುಬಂಧ ಕೋಷ್ಟಕ – ೧, ೨ ಮತ್ತು ೩ ರಿಂದ ಪಡೆಯಲಾಗಿದೆ.*

ಕೋಷ್ಟಕ – ೮ ರಲ್ಲಿ ೧ – ೭ ಹಾಗೂ ೮ – ೧೦ ನೆಯ ತರಗತಿಗಳಲ್ಲಿನ ಪುರುಷರ ದಾಖಲಾತಿಗೆ ಸಾಪೇಕ್ಷವಾಗಿ ಹೆಣ್ಣುಮಕ್ಕಳ ಪ್ರಮಾಣ ಎಷ್ಟಿದೆ ಎಂಬುದನ್ನು ತೋರಿಸಲಾಗಿದೆ. ಬಹಳ ಸ್ಪಷ್ಟವಾಗಿ ಗೋಚರಿಸುವ ಸಂಗತಿಯೆಂದರೆ ಲಿಂಗ ಸಮಾನತಾ ಸೂಚಿಯ ಮಟ್ಟವು ೧ – ೭ನೆಯ ತರಗತಗಳಲ್ಲಿ ಅಧಿಕವಿದ್ದು ೮ – ೧೦ನೆಯ ತರಗತಿಗಳಲ್ಲಿ ಅದು ಕಡಿಮೆಯಿದೆ. ಎರಡನೆಯದಾಗಿ ಪ್ರದೇಶ – ವಿಭಾಗವೊಂದರ ಅಭಿವೃದ್ಧಿ ಮಟ್ಟಕ್ಕೂ ಮತ್ತು ಅದಕ್ಕೆ ಸಂಬಂಧಿಸಿದ ಸೂಚಿಯ ಪ್ರಮಾಣಕ್ಕೂ ಸಂಬಂಧವಿರುವಂತೆ ಕಾಣುತ್ತದೆ. ರಾಜ್ಯದಲ್ಲಿ ತೀವ್ರ ಅಭಿವೃದ್ಧಿ ಹೊಂದಿದ ಮೈಸೂರು ವಿಭಾಗದಲ್ಲಿ ಸೂಚಿಯು ಅಧಿಕ ಮಟ್ಟದಲ್ಲಿದೆ ಹಾಗೂ ೧ – ೭, ೮ – ೧೦ ಹಾಗೂ ೧ – ೧೦ ಹೀಗೆ ಮೂರು ಹಂತದಲ್ಲೂ ಅದು ಏಕರೂಪಿಯಾಗಿದೆ. ಇದೊಂದು ವಿಶಿಷ್ಟ ಸಾಧನೆಯಾಗಿದೆ.

ಆದರೆ ಅತ್ಯಂತ ಕನಿಷ್ಟ ಸೂಚಿಯಿರುವ ಗುಲಬರ್ಗಾ ವಿಭಾಗದಲ್ಲಿ ೧ – ೭ನೆಯ ಹಾಗೂ ೮ – ೧೦ ನೆಯ ತರಗತಿಗಳ ನಡುವೆ ತೀವ್ರ ವ್ಯತ್ಯಾಸವಿರುವುದನ್ನು ಗಮನಿಸಬಹುದು. (ಶೇ. ೧೪.೬೩ ಅಂಶಗಳಷ್ಟು ವ್ಯತ್ಯಾಸವಿದೆ.) ಲಿಂಗ ಸಮಾನತೆ ಮತ್ತು ಅಭಿವೃದ್ಧಿಯ ಗತಿಗಳ ನಡುವೆ ಸಂಬಂಧವಿರುವುದು ಇದರಿಂದ ತಿಳಿದುಬರುತ್ತದೆ. ಆದರೆ ಇದನ್ನು ಸಮೀಕರಣದ ರೀತಿಯಲ್ಲಿ ಪ್ರತಿಪಾದಿಸುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಅಭಿವೃದ್ಧಿಯ ಗತಿ ಉನ್ನತ ಮಟ್ಟಕ್ಕೇರಿದಂತೆ ಲಿಂಗ ಸಮಾನತೆ ಉಂಟಾಗುತ್ತದೆ ಎಂಬುದಕ್ಕೆ ನಮಗೆ ಖಚಿತವಾದ ಆಧಾರಗಳೇನಿಲ್ಲ.

[1] ಕರ್ನಾಟಕದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ೦ – ೬ ವಯೋಮಾನದ ಮಕ್ಕಳ ಪ್ರಮಾಣದ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| **ವಿಭಾಗಗಳು** | **ಒಟ್ಟು ಜನಸಂಖ್ಯೆಯಲ್ಲಿ ೦ – ೬ ವಯೋಮಾನದ ಮಕ್ಕಳ ಪ್ರಮಾಣ** | | **ಬದಲಾವಣೆ ಪ್ರಮಾಣ ೧೯೯೧ – ೨೦೦೧ (ಶೇಕಡ)** |
|---|---|---|---|
| | **೧೯೯೧** | **೨೦೦೧** | |
| ಬೆಂಗಳೂರು ವಿಭಾಗ | ೧೫.೪೦ | ೧೭.೭೫ | + ೧೫.೨೫ |
| ಮೈಸೂರು ವಿಭಾಗ | ೧೪.೪೯ | ೧೧.೨೦ | – ೨೨.೭೦ |
| ದ.ಕ.ಪ್ರದೇಶ | ೧೫.೧೫ | ೧೧.೫೩ | – ೨೩.೮೯ |
| ಬೆಳಗಾವಿ ವಿಭಾಗ | ೧೭.೫೪ | ೧೪.೦೫ | – ೧೯.೮೯ |
| ಗುಲಬರ್ಗಾ ವಿಭಾಗ | ೨೦.೨೨ | ೧೫.೯೨ | – ೨೧.೨೬ |
| ಉ.ಕ. ಪ್ರದೇಶ | ೧೮.೬೪ | ೧೪.೮೪ | – ೨೦.೩೮ |
| ಕರ್ನಾಟಕ ರಾಜ್ಯ | ೧೬.೬೩ | ೧೨.೯೪ | – ೨೨.೧೮ |

ಎರಡೂ ಕಾಲಘಟ್ಟಗಳಲ್ಲಿ ೦ – ೬ ವಯೋಮಾನದ ಮಕ್ಕಳ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿರುವುದು ಉತ್ತರ ಕರ್ನಾಟಕ ಪ್ರದೇಶದಲ್ಲಿ ಎಂಬುದು ಕೋಷ್ಟಕದಿಂದ ತಿಳಿಯುತ್ತದೆ. ಉತ್ತರ ಕರ್ನಾಟಕ ಪ್ರದೇಶದ ಜನಸಂಖ್ಯೆಯು ದಕ್ಷಿಣ ಕರ್ನಾಟಕ ಪ್ರದೇಶದ ಜನಸಂಖ್ಯೆಗಿಂತ ಹೆಚ್ಚು ಎಳೆತನದಿಂದ ಕೂಡಿರುವುದು ಸ್ಪಷ್ಟವಾಗಿದೆ. ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯುವ ಕಾರ್ಯಕ್ರಮದ ದೃಷ್ಟಿಯಿಂದ ಮೇಲಿನ ಸಂಗತಿಯು ತುಂಬಾ ಮುಖ್ಯವಾಗಿದೆ. (ವಿವರವಾದ ಚರ್ಚೆಗೆ ನೋಡಿ : ಚಂದ್ರಶೇಖರ ಟಿ.ಆರ್., ೨೦೦೩, ೨೭ – ೩೪).

# ೯. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ - ಗತಿ (೩)

ಭಾಗ ೩

**ಶಾಲೆಯನ್ನು ಮಧ್ಯದಲ್ಲಿ ಮಕ್ಕಳು ಬಿಡುವ ಸಮಸ್ಯೆ**

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ನಾವು ಎದುರಿಸುತ್ತಿರುವ ಸಮಸ್ಯೆಯೆಂದರೆ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಸಂಗತಿಯಾಗಿದೆ. ಪ್ರತಿಯೊಂದು ಮಗುವಿಗೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವ ಜವಾಬುದಾರಿಗೆ ಸಮಾಜವು ಬದ್ಧವಾಗಿದೆ. ಆದರೆ ೧೦ ವರ್ಷಗಳ ಶಾಲಾಶಿಕ್ಷಣವನ್ನು ಪಡೆಯುವ ಭಾಗ್ಯ ಅನೇಕ ಮಕ್ಕಳಿಗಿರುವುದಿಲ್ಲ. ಇದಕ್ಕೆ ಬಡತನವನ್ನು ಮುಖ್ಯ ಕಾರಣವನ್ನಾಗಿ ನೀಡುತ್ತಾ ಬರಲಾಗಿದೆ. ಆದರೆ ಮಕ್ಕಳು ಶಾಲೆಯನ್ನು ಬಿಡಲು ಅನೇಕ ಕಾರಣಗಳು ಸಾಧ್ಯ. ಅದಕ್ಕೆ ಬಡತನವನ್ನು ಮಾತ್ರವೇ ಕಾರಣ ಮಾಡುವುದು ಸೂಕ್ತವೆನಿಸುವುದಿಲ್ಲ.

[1]

ಅನೇಕ ಸಾಮಾಜಿಕ - ರಾಜಕೀಯ - ಚಾರಿತ್ರಿಕ ಕಾರಣಗಳು ಇದರ ಹಿಂದಿರಲು ಸಾಧ್ಯ. ಮೊದಲ ತಲೆಮಾರಿನ ಅಕ್ಷರಸ್ಥ ಮಕ್ಕಳ ಸಮಸ್ಯೆ ಒಂದು ಬಗೆಯದ್ದಾದರೆ ವಲಸೆ ಹೋಗುವ ಕುಟುಂಬಗಳಲ್ಲಿನ ಮಕ್ಕಳ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. ಈಚಿನ ಅಧ್ಯಯನಗಳು ತೋರಿಸಿರುವಂತೆ ಶಾಲೆಯೊಳಗಿನ ವಾತಾವರಣವೂ ಬಹಳ ಮುಖ್ಯ. ಮಕ್ಕಳಿಗೆ ಶಾಲೆ - ಪಾಠ ಆಕರ್ಷಣೀಯವಾಗುವಂತೆ ಮಾಡುವುದು, ಉಚಿತ ಊಟ, ಪಠ್ಯಪುಸ್ತಕ, ಸಮವಸ್ತ್ರ ಮುಂತಾದವುಗಳನ್ನು ಒದಗಿಸುವುದು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದನ್ನು ಕಡಿಮೆ ಮಾಡಬಲ್ಲವು. ಆವರ್ತನ ರೀತಿಯ ವಲಸೆಯು ವ್ಯಾಪಕವಾಗಿರುವ ಪ್ರದೇಶಗಳಲ್ಲಿ ಉದ್ಯೋಗ ಭದ್ರತೆಯ ಪಾತ್ರ ತುಂಬಾ ಮುಖ್ಯವಾಗುತ್ತದೆ. ಈ ಸಮಸ್ಯೆಯು ದಲಿತ ಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಅಧಿಕ. ಹೀಗೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗೆ ಅನೇಕ ಮುಖಗಳಿವೆ.

ಇದನ್ನು ತಡೆಗಟ್ಟುವ ಕಾರ್ಯಯೋಜನೆಯೂ ಕೂಡ ಬಹುರೂಪಿಯಾಗಿರಬೇಕಾಗುತ್ತದೆ. ಆದರೆ ಸರ್ಕಾರವು ಶಾಲಾ ಸೌಲಭ್ಯಗಳನ್ನು ಅಧಿಕಗೊಳಿಸುವುದರ ಮತ್ತು ಅದನ್ನು ಉತ್ತಮಪಡಿಸುವುದರ ಮೂಲಕ ಸಮಸ್ಯೆಯನ್ನು ತಡೆಗಟ್ಟಬಹುದೆಂದು ತಿಳಿದಿರುವಂತಿದೆ. ಆದರೆ ಅವಕಾಶಗಳನ್ನು ಒಂದು ಕಡೆ ವಿಸ್ತರಿಸಿದಂತೆ ಇನ್ನೊಂದು ಕಡೆ ಅವುಗಳನ್ನು ಧಾರಣೆ ಮಾಡಿಕೊಳ್ಳಲು ಅವಶ್ಯವಾದ ಜನರ ಸಾಮರ್ಥ್ಯವನ್ನು ಉತ್ತಮ ಪಡಿಸಬೇಕಾಗುತ್ತದೆ. ದಲಿತರು ಹಾಗೂ ಹಿಂದುಳಿದ ವರ್ಗಗಳ ವಿಷಯದಲ್ಲಿ ಇದು ಬಹಳ ಮುಖ್ಯವಾಗಿದೆ.

ಕೋಷ್ಟಕ - ೯ರಲ್ಲಿ ೧ ರಿಂದ ೭ನೆಯ ತರಗತಿಗೆ ಸಂಬಂಧಿಸಿದ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವನ್ನು ಜಿಲ್ಲಾವಾರು ನೀಡಲಾಗಿದೆ. ಅದನ್ನು ನಕ್ಷೆಯ ಮೂಲಕವೂ ತೋರಿಸಲಾಗಿದೆ. ಈ ಕೋಷ್ಟಕ ಹಾಗೂ ನಕ್ಷೆಗಳು ಸಮಸ್ಯೆಯ ಪ್ರಮಾಣ ಹಾಗೂ ಅದರ ಪ್ರಾದೇಶಿಕ ಸ್ವರೂಪವನ್ನು ತೋರಿಸುತ್ತವೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವು ಶೇ. ೧೪.೪೭ ರಷ್ಟಿದೆ. ಆದರೆ ಬೆಂಗಳೂರು ನಗರ ಜಿಲ್ಲೆ (ಶೇ. ೧೫.೯೩) ದಾವಣಗೆರೆ (ಶೇ. ೧೪.೪೦) ಮತ್ತು ಕೋಲಾರ (ಶೇ. ೧೧.೮೮) ಗಳನ್ನು ಬಿಟ್ಟರೆ ಉಳಿದಂತೆ ದಕ್ಷಿಣ ಕರ್ನಾಟಕದಲ್ಲಿ ಇದರ ಪ್ರಮಾಣವು ಶೇ. ೧೦ ಮತ್ತು ೧೦ ಕ್ಕಿಂತ ಕಡಿಮೆಯಿದೆ. ಆದರೆ ರಾಜ್ಯದ ಬೆಳಗಾವಿ ವಿಭಾಗ ಹಾಗೂ ಗುಲಬರ್ಗಾ ವಿಭಾಗಗಳಲ್ಲಿ ಸಮಸ್ಯೆಯ ಪ್ರಮಾಣ ತೀವ್ರವಾಗಿದೆ. ಬೆಳಗಾವಿ ವಿಭಾಗದ ಮೂರು ಜಿಲ್ಲೆಗಳಲ್ಲಿ ಅದು ಶೇ. ೨೦ ಕ್ಕಿಂತ ಅಧಿಕವಿದೆ. ಈ ಸಮಸ್ಯೆಯು ಅತ್ಯಂತ ಗಂಭೀರ ಸ್ವರೂಪದಲ್ಲಿರುವುದು ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಎಂಬುದು ಗಮನಿಸಬೇಕಾದ ಸಂಗತಿ. ಈ ವಿಭಾಗದ ೫ ಜಿಲ್ಲೆಗಳ ಪೈಕಿ ಮೂರರಲ್ಲಿ ಅದು ಶೇ. ೩೦ ಕ್ಕಿಂತ ಅಧಿಕವಿದೆ. ಅಭಿವೃದ್ಧಿಗೆ

ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯು ರಾಜ್ಯದ ಯಾವ ವಿಭಾಗದಲ್ಲಿ ಮತ್ತು ಯಾವ ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿದೆ ಎಂಬುದು ಕೋಷ್ಟಕ - ೭ ರಿಂದ ಸ್ಪಷ್ಟವಾಗುತ್ತದೆ.

**ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ : ೨೦೦೫ (೧೯೯೭ – ೯೮ ರಲ್ಲಿ ದಾಖಲಾದ ಮಕ್ಕಳು)**

**ಕೋಷ್ಟಕ – ೯**

| **ಸಂ.** | **ಜಿಲ್ಲೆಗಳು** | **೧ ರಿಂದ ೭ನೆಯ ತರಗತಿ (ಶೇಕಡ)** | | |
|---|---|---|---|---|
| | | **ಗಂಡು** | **ಹೆಣ್ಣು** | **ಒಟ್ಟು** |
| ೧. | ಬೆಂಗಳೂರು (ನಗರ) | ೧೬.೫೮ | ೧೫.೨೪ | ೧೫.೯೩ |
| ೨. | ದಾವಣಗೆರೆ | ೧೫.೪೫ | ೧೩.೩೮ | ೧೪.೪೦ |
| ೩. | ಕೋಲಾರ | ೧೨.೫೩ | ೧೧.೧೭ | ೧೧.೮೮ |
| ೪. | ಶಿವಮೊಗ್ಗ | ೧೦.೪೦ | ೯.೩೬ | ೯.೯೦ |
| ೫. | ಚಿತ್ರದುರ್ಗ | ೯.೫೩ | ೯.೭೪ | ೯.೬೩ |
| ೬. | ಬೆಂಗಳೂರು (ಗ್ರಾಮಾಂತರ) | ೭.೧೦ | ೬.೪೧ | ೬.೭೭ |
| ೭. | ತುಮಕೂರು | ೬.೦೧ | ೫.೯೦ | ೫.೯೬ |
| (ಬೆಂಗಳೂರು ವಿಭಾಗ) | | | | |
| ೮. | ಮಂಡ್ಯ | ೧೧.೦೭ | ೧೦.೨೭ | ೧೦.೬೯ |
| ೯. | ಚಾಮರಾಜನಗರ | ೧೦.೪೨ | ೧೦.೫೧ | ೧೦.೪೬ |
| ೧೦. | ಮೈಸೂರು | ೮.೨೯ | ೯.೧೦ | ೮.೬೮ |
| ೧೧. | ಹಾಸನ | ೮.೮೩ | ೭.೮೬ | ೮.೩೫ |
| ೧೨. | ಕೊಡಗು | ೭.೬೧ | ೭.೬೫ | ೭.೬೩ |
| ೧೩. | ಚಿಕ್ಕಮಗಳೂರು | ೫.೫೪ | ೫.೧೯ | ೫.೩೬ |
| ೧೪. | ದಕ್ಷಿಣ ಕನ್ನಡ | ೩.೯೫ | ೩.೭೦ | ೩.೮೩ |

| | | | | |
|---|---|---|---|---|
| ೧೫. | ಉಡುಪಿ | ३.೨೭ | ३.೫೮ | ३.೪೨ |
| (ಮೈಸೂರು ವಿಭಾಗ) | | | | |
| ೧೬. | ಬಿಜಾಪುರ | ೨೪.೬೬ | ೨೭.೨೭ | ೨೫.೮೧ |
| ೧೭. | ಬಾಗಲಕೋಟೆ | ೨೦.೨೯ | ೨೦.೭೪ | ೨೦.೫೦ |
| ೧೮. | ಗದಗ | ೨೦.೩೭ | ೧೯.೮೫ | ೨೦.೧೨ |
| ೧೯. | ಹಾವೇರಿ | ೧೫.೦೪ | ೧೪.೬೯ | ೧೪.೮೭ |
| ೨೦. | ಉತ್ತರ ಕನ್ನಡ | ೮.೮೯ | ೮.೫೨ | ೮.೭೧ |
| ೨೧. | ಬೆಳಗಾವಿ | ೭.೮೪ | ೯.೧೨ | ೮.೪೪ |
| ೨೨. | ಧಾರವಾಡ | ೬.೪೦ | ೬.೯೧ | ೬.೬೪ |
| (ಬೆಳಗಾವಿ ವಿಭಾಗ) | | | | |
| ೨೩. | ಗುಲಬರ್ಗಾ | ३೬.೫೪ | ३೯.೦೭ | ३೭.೬೫ |
| ೨೪. | ರಾಯಚೂರು | ३೨.೧೭ | ३೭.೦೪ | ३೪.೨೪ |
| ೨೫. | ಕೊಪ್ಪಳ | ३೧.೨೪ | ३೪.೫೬ | ३೨.೭೮ |
| ೨೬. | ಬೀದರ್ | ३೧.೫೦ | ೨೦.೫೮ | ೨೧.೦೭ |
| ೨೭. | ಬಳ್ಳಾರಿ | ೧೭.೯೧ | ೧೯.೭೬ | ೧೮.೭೬ |
| (ಗುಲಬರ್ಗಾ ವಿಭಾಗ) | | | | |
| | ಕರ್ನಾಟಕ ರಾಜ್ಯ | ೧೪.೫೯ | ೧೪.३೪ | ೧೪.೪೭ |

*ಟಿಪ್ಪಣಿ : ಪ್ರತಿ ವಿಭಾಗದಲ್ಲೂ ಜಿಲ್ಲೆಗಳನ್ನು ಅವರೋಹಣ ಕ್ರಮದಲ್ಲಿ ಜೋಡಿಸಿದೆ.*

*ಮೂಲ : ಕರ್ನಾಟಕ ಸರ್ಕಾರ ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ೨೦೦೫, ಸರ್ವಶಿಕ್ಷ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.*

**ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ : ೨೦೦೫ – ೦೬ ರಿಂದ ೨೦೦೬ – ೦೭**

ಪ್ರಾಥಮಿಕ ಹಂತದ ಏಳನೆಯ ತರಗತಿಯಿಂದ ಪ್ರೌಢ ಹಂತದ ಎಂಟನೆಯ ತರಗತಿಗೆ ಮಕ್ಕಳ ಸಾಗುವ ಪ್ರಕ್ರಿಯೆಯನ್ನು ಇಲ್ಲಿ ಶೈಕ್ಷಣಿಕ ಪರಿವರ್ತನಾ ಪ್ರಕ್ರಿಯೆಯೆಂದು ಕರೆಯಲಾಗಿದೆ. ಶೈಕ್ಷಣಿಗ ಪ್ರಗತಿಯ ಮಾಪನದ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಏಕೆಂದರೆ ಪರಿವರ್ತನಾ ಪ್ರಕ್ರಿಯೆಯನ್ನು ಶಿಕ್ಷಣದ ಸಾರ್ವತ್ರೀಕರಣ ಸೂಚಿಯನ್ನಾಗಿ ಬಳಸಬಹುದಾಗಿದೆ. ಈ ದಿಶೆಯಲ್ಲಿ ಕರ್ನಾಟಕವು ರಾಜ್ಯ ಮಟ್ಟದಲ್ಲಿ ಸಾಧಿಸಿಕೊಂಡಿರುವ ಸಾಧನೆ ನಿಜಕ್ಕೂ ಅದ್ಭುತವಾಗಿದೆ. ಕರ್ನಾಟಕ ರಾಜ್ಯ ಮಟ್ಟದಲ್ಲಿನ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ೦.೮೯೯. ಶಿಕ್ಷಣದ ಸಾರ್ವತ್ರೀಕರಣದ ಸನಿಹ ಅದು ಸಾಗಿದೆ. ಆದರೆ ಆತಂಕಕಾರಿ ಸಂಗತಿಯೆಂದರೆ ಶಿಕ್ಷಣದ ಸಾರ್ವತ್ರೀಕರಣದ ಸ್ವರೂಪವು ರಾಜ್ಯಾದ್ಯಂತ ಏಕರೂಪವಾಗಿಲ್ಲ. ಶೈಕ್ಷಣಿಕ ಸಾರ್ವತ್ರೀ ಕರಣ ಸಾಧನೆಯ ದೃಷ್ಟಿಯಿಂದ ರಾಜ್ಯದ ಗುಲಬರ್ಗಾ ವಿಭಾಗವು ಬಹಳ ದೂರದಲ್ಲಿದೆ. ಬೆಳಗಾವಿ ವಿಭಾಗವೂ ಸಾಕಷ್ಟು ದೂರದಲ್ಲಿದೆ. ರಾಜ್ಯಮಟ್ಟದ ಹಾಗೂ ದಕ್ಷಿಣ ಕರ್ನಾಟಕದ ಪ್ರದೇಶದ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸಾಧನೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡರೆ ನಮಗೆ ರಾಜ್ಯದಲ್ಲಿನ ಶಿಕ್ಷಣ ಪ್ರಗತಿಯ ಪೂಣ್ ರೂಪದ ದರ್ಶನವಾಗುವುದಿಲ್ಲ. ಇದನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ - ೧೦ ರಲ್ಲಿ ಸ್ಪಷ್ಟವಾಗಿ ತೋರಿಸಿರುವಂತೆ ದ.ಕ. ಪ್ರದೇಶದಲ್ಲಿ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ೦.೯೭೩ ರಷ್ಟಿದ್ದರೆ ಉ.ಕ. ಪ್ರದೇಶದಲ್ಲಿ ಅದು ೦.೮೧೯ ರಷ್ಟಿದೆ. ಆದರೆ ಗುಲಬರ್ಗಾ ವಿಭಾಗದಲ್ಲಿ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ಕೇವಲ ೦.೭೭೯ ರಷ್ಟಿದೆ. ಶಿಕ್ಷಣದ ಸಾರ್ವತ್ರೀಕರಣದ ದೃಷ್ಟಿಯಿಂದ ದ.ಕ. ಪ್ರದೇಶ ಎಷ್ಟು ಹತ್ತಿರದಲ್ಲಿದೆ ಮತ್ತು ಉ.ಕ. ಪ್ರದೇಶ ಎಷ್ಟು ದೂರದಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಪರಿವರ್ತನಾ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ಪರಿಧಿಯಿಂದ ಹೊರಹೋದ ೧.೦೧ ಲಕ್ಷ ಮಕ್ಕಳಲ್ಲಿ ದ.ಕ. ಪ್ರದೇಶದ ಪಾಲು ಕೇವಲ ಶೇ. ೧೪.೪೧ ರಷ್ಟಾದರೆ ಉ.ಕ. ಪ್ರದೇಶದ ಪಾಲು ಶೇ. ೮೫.೫೯. ಅಂದರೆ ಶೈಕ್ಷಣಿಕ ಪರಿಧಿಯಿಂದ ಹೊರ ನಡೆದ ೧.೦೧ ಲಕ್ಷದಲ್ಲಿ ದ.ಕ. ಪ್ರದೇಶಕ್ಕೆ ಸೇರಿದವರು ಕೇವಲ ೦.೧೫ ಲಕ್ಷವಾದರೆ ಉ.ಕ. ಪ್ರದೇಶದ ಮಕ್ಕಳ ಸಂಖ್ಯೆ ೦.೮೬ ಲಕ್ಷ. ರಾಜ್ಯದ ಜನಸಂಖ್ಯೆಯಲ್ಲಿ ಉ.ಕ. ಪ್ರದೇಶದ ಪಾಲು ಕೇವಲ ಶೇ. ೪೨.೭. ಆದರೆ ಪರಿವರ್ತನಾ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ಪರಿಧಿಯಿಂದ ಹೊರ ನಡೆದ ಮಕ್ಕಳ ಪ್ರಮಾಣವು ಶೇ. ೮೫.೫೮.

**ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ : ೨೦೦೫ – ೦೬ ರಿಂದ ೨೦೦೬ – ೦೭ (ವಿಭಾಗವಾರು)**

**ಕೋಷ್ಟಕ – ೧೦**

| **ರಾಜ್ಯ ಪ್ರದೇಶ ವಿಭಾಗಗಳು** | **೨೦೦೫ – ೦೬ ರಲ್ಲಿ ೭ನೆಯ ತರಗತಿ ದಾಖಲಾತಿ** | **೨೦೦೬ – ೦೭ರಲ್ಲಿ ೮ನೆಯ ತರಗತಿ ದಾಖಲಾತಿ** | **ವ್ಯತ್ಯಾಸ** | **ಪರಿವರ್ತನಾ ಸೂಚ್ಯಂಕ** |
|---|---|---|---|---|
| ಬೆಂಗಳೂರು ವಿಭಾಗ | ೩೩೩,೯೦೩ | ೩೨೪,೯೪೬ | – ೮೯೫೭ | ೦.೯೭೩ |
| | (೩೩.೫೩) | (೩೬.೩೦) | (೮.೯೦) | |
| ಮೈಸೂರು ವಿಭಾಗ | ೨೧೧,೫೪೯ | ೨೦೬,೦೦೦ | – ೫೫೪೯ | ೦.೯೭೪ |
| | (೨೧.೨೪) | (೨೩.೦೧) | (೫.೫೧) | |
| ದ.ಕ. ಪ್ರದೇಶ | ೫೪೫,೪೫೨ | ೫೩೦,೯೪೬ | – ೧೪೫೦೬ | ೦.೯೭೩ |

| | | | | |
|---|---|---|---|---|
| | (೫೪.೭೭) | (೫೯.೩೧) | (೧೪.೪೧) | |
| ಬೆಳಗಾವಿ ವಿಭಾಗ | ೨೭೯,೫೮೮ | ೨೩೧,೨೧೨ | –೪೮೩೭೬ | ೦.೮೨೭ |
| | (೨೮.೦೮) | (೨೫.೮೩) | (೪೮.೦೮) | |
| ಗುಲಬರ್ಗಾ ವಿಭಾಗ | ೧೭೦,೭೯೦ | ೧೩೩,೦೪೬ | –೩೭೭೪೪ | ೦.೭೭೯ |
| | (೧೭.೧೫) | (೧೪.೮೬) | (೩೭.೫೧) | |
| ಉ.ಕ. ಪ್ರದೇಶ | ೪೫೦,೩೭೮ | ೩೬೪,೨೫೮ | –೮೬೧೨೦ | ೦.೮೦೯ |
| | (೪೫.೨೩) | (೪೦.೬೯) | (೮೫.೫೯) | |
| ಕರ್ನಾಟಕ ರಾಜ್ಯ | ೯೯೫,೮೩೦ | ೮೯೫,೨೦೪ | –೧೦೦೬೨೬ | ೦.೮೯೯ |
| | (೧೦೦.೦೦) | (೧೦೦.೦೦) | (೧೦೦.೦೦) | |

*ಟಿಪ್ಪಣಿ : ಆವರಣದಲ್ಲಿನ ಅಂಕಿಗಳು ಒಟ್ಟು ಮೊತ್ತದ ಶೇಕಡ ಪ್ರಮಾಣವನ್ನು ತೋರಿಸುತ್ತವೆ.*

ಮೂಲ : ಕರ್ನಾಟಕ ಸರ್ಕಾರ, ೨೦೦೭, ಶೈಕ್ಷಣಿಕ ಮಾಹಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವಶಿಕ್ಷ ಅಭಿಯಾನ, ಬೆಂಗಳೂರು.

ಈ ಪ್ರಾದೇಶಿಕ ಅಸಮಾನತೆಯನ್ನು ಬಹಳ ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ರಾಜ್ಯದಲ್ಲಿ ಜಾರಿಯಲ್ಲಿರುವ ಸರ್ವಶಿಕ್ಷ ಅಭಿಯಾನದ ನೇತೃತ್ವ ವಹಿಸಿರುವವರು ಸಮಸ್ಯೆಯ ಪ್ರಾದೇಶಿಕ ಸ್ವರೂಪಕ್ಕೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ದುರದೃಷ್ಟದ ಸಂಗತಿಯೆಂದರೆ ಸದ್ಯ ಅಂತಹ ದೃಷ್ಟಿಕೋನ ಅಲ್ಲಿ ಗೈರುಹಾಜರಾಗಿದೆ. ಈತಲೂ ಕಾಲ ಮಿಂಚಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ತೀವ್ರ ಪ್ರಾದೇಶಿಕ ಅಸಮಾನತೆ ಗಳಿವೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಈಗ ಸರ್ವಶಿಕ್ಷ ಅಭಿಯಾನವು ಪೂರ್ಣವಾಗಿ ರಾಜ್ಯ ಕೇಂದ್ರಿತ ಕಾರ್ಯಕ್ರಮವಾಗಿದೆ. ಇದನ್ನು ಸರಿಪಡಿಸುವುದು ತುಂಬಾ ಅಗತ್ಯವಾಗಿದೆ.

**ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಪರಿವರ್ತನಾ ಪ್ರಕ್ರಿಯೆ : ತರಗತಿವಾರು**

**ಕೋಷ್ಟಕ – ೧೧**

| **ತರಗತಿಗಳು** | **೨೦೦೪ – ೦೫ ರಲ್ಲಿ ದಾಖಲಾತಿ** | **೨೦೦೫ – ೦೬ರಲ್ಲಿ ದಾಖಲಾತಿ** | **ವ್ಯತ್ಯಾಸ** | **ಶೇಕಡ ವ್ಯತ್ಯಾಸ** |
|---|---|---|---|---|
| ಒಂದನೆಯ ತರಗತಿ | ೧೧೫೭೮೭೮ | ೧೨೧೯೬೫೨ | – | – |
| ಎರಡನೆಯ ತರಗತಿ | ೧೧೬೬೦೮೫ | ೧೦೯೮೦೧೭ | –೫೯೮೬೧ | –೫.೧೭ |

| | | | | |
|---|---|---|---|---|
| ಮೂರನೆಯ ತರಗತಿ | ೧೧೬೩೭೪೯ | ೧೧೩೯೫೧೧ | – ೨೬೫೭೪ | – ೨.೨೮ |
| ನಾಲ್ಕನೆಯ ತರಗತಿ | ೧೧೯೫೨೮೫ | ೧೧೩೩೧೯೧ | – ೩೦೫೫೮ | – ೨.೬೩ |
| ಐದನೆಯ ತರಗತಿ | ೧೧೩೭೨೮೭ | ೧೧೬೭೪೦೮ | – ೨೭೮೭೭ | – ೨.೩೩ |
| ಆರನೆಯ ತರಗತಿ | ೧೦೬೫೩೮೯ | ೧೦೪೯೩೯೯ | – ೮೭೮೮೮ | – ೭.೭೩ |
| ಏಳನೆಯ ತರಗತಿ | ೧೦೧೫೦೬೦ | ೯೯೫೮೩೦ | – ೪೯೫೫೯ | – ೬.೫೩ |
| ಎಂಟನೆಯ ತರಗತಿ | ೮೦೨೯೫೬ | ೮೪೧೦೫೯ | – ೧೭೪೦೦೧ | – ೧೭.೧೪ |
| ಒಂಬತ್ತನೆಯ ತರಗತಿ | ೬೭೫೧೬೭ | ೭೦೦೨೨೦ | – ೧೦೨೭೩೬ | – ೧೨.೭೯ |
| ಹತ್ತನೆಯ ತರಗತಿ | ೫೫೭೭೫೫ | ೬೧೫೬೫೫ | – ೫೯೫೧೨ | – ೮.೮೧ |
| ಒಟ್ಟು ದಾಖಲಾತಿ | ೯೯೩೬೬೧೧ | ೯೯೫೯೯೪೪ | – | – |

*ಮೂಲ : ೧. ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ಸರ್ವಶಿಕ್ಷ ಅಭಿಯಾನ, ಬೆಂಗಳೂರು.*
೨. ಕರ್ನಾಟಕ ಸರ್ಕಾರ, ೨೦೦೬, ಸಮಗ್ರ ಶೈಕ್ಷಣಿಕ ಅಂಕಿ - ಅಂಶ, ೨೦೦೬, ಸರ್ವಶಿಕ್ಷ ಅಭಿಯಾನ, ಬೆಂಗಳೂರು.

ಕೋಷ್ಟಕ - ೧೧ ರಲ್ಲಿ ೨೦೦೪ - ೦೫ ರಿಂದ ೨೦೦೫ - ೦೬ರ ನಡುವೆ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ದಾಖಲಾತಿಯಲ್ಲಿನ ವ್ಯತ್ಯಾಸವನ್ನು ತೋರಿಸಿದೆ. ಒಂದನೆಯ ತರಗತಿಗೆ ೨೦೦೪ - ೦೫ ರಲ್ಲಿ ದಾಖಲಾದ ಮಕ್ಕಳ ಸಂಖ್ಯೆ ೧೧.೫೮ ಲಕ್ಷ. ಈ ಮಕ್ಕಳೆಲ್ಲ ೨೦೦೫ - ೦೬ ರಲ್ಲಿ ಎರಡನೆಯ ತರಗತಿ ಪ್ರವೇಶಿಸಬೇಕು. ಆದರೆ ವಾಸ್ತವಿಕವಾಗಿ ೨೦೦೫ - ೦೬ ರಲ್ಲಿ ಎರಡನೆಯ ತರಗತಿಗೆ ದಾಖಲಾದ ಮಕ್ಕಳ ಸಂಖ್ಯೆ ೧೦.೯೮ ಲಕ್ಷ. ಇಲ್ಲಿ ಉಂಟಾಗಿರುವ ಕಡಿತದ ಸಂಖ್ಯೆ ೫೯೮೬೧. ಅದೇ ರೀತಿ ಮೂರನೆಯ ತರಗತಿಯಲ್ಲಿ ಉಂಟಾದ ಕಡಿತದ ಸಂಖ್ಯೆ ೨೬೫೭೪. ಇದು ಹೀಗೆ ಮುಂದುವರದು ಏಳನೆಯ ತರಗತಿಯಿಂದ ಎಂಟನೆಯ ತರಗತಿ ನಡುವೆ ಉಂಟಾದ ಕಡಿತದ ಸಂಖ್ಯೆ ೧.೭೪ ಲಕ್ಷ.

ಈ ವಿವರಗಳಿಂದ ತಿಳಿಯುವ ಸಂಗತಿಯೆಂದರೆ ೧ ರಿಂದ ೧೦ನೆಯ ತರಗತಿವರೆಗಿನ ಶಿಕ್ಷಣದಲ್ಲಿ ಏಳನೆಯ ತರಗತಿಯಿಂದ ಎಂಟನೆಯ ತರಗತಿಗೆ ನಡೆಯುವ ಪರಿವರ್ತನೆಯ ತುಂಬಾ ನಿರ್ಣಾಯಕವಾಗುವ ಹಂತವಾಗಿದೆ. ಈ ಹಂತದಲ್ಲಿ ಕಡಿತದ ಪ್ರಮಾಣ ಶೇ. ೧೭.೧೪. ಅದೇ ರೀತಿ ಎಂಟರಿಂದ ಒಂಬತ್ತನೆಯ ತರಗತಿವರೆಗೆ ನಡೆದ ಪರಿವರ್ತನೆಯಲ್ಲಿ ಕಡಿತದ ಪ್ರಮಾಣ ಶೇ. ೧೨.೭೯. ಒಂಬತ್ತನೆಯ ತರಗತಿಯಿಂದ ಹತ್ತನೆಯ ತರಗತಿಗೆ ನಡೆಯುವ ಪರಿವರ್ತನೆಯಲ್ಲಿನ ಕಡಿತದ ಪ್ರಮಾಣ ಶೇ. ೮.೮೧.

ಇಲ್ಲಿ ಬಹಳ ಮುಖ್ಯವಾಗಿ ಪರಿಗಣಿಸಬೇಕಾದ ಸೂಕ್ಷ್ಮ ಸಂಗತಿಯೊಂದಿದೆ. ಕೋಷ್ಟಕ - ೮ ರಲ್ಲಿ ತೋರಿಸಿರುವಂತೆ ೨೦೦೪ - ೦೫ ರಿಂದ ೨೦೦೫ - ೦೬ರ ನಡುವಿನ ಏಳನೆಯ ತರಗತಿಯಿಂದ ಎಂಟನೆಯ ತರಗತಿವರೆಗಿನ ಪರಿವರ್ತನೆಯಲ್ಲಿ ಕಡಿತದ ಸಂಖ್ಯೆ ೧.೭೪ ಲಕ್ಷ. ಆದರೆ ಕೋಷ್ಟಕ - ೯ ರಲ್ಲಿ ತೋರಿಸಿರುವಂತೆ ಕಡಿತದ ಸಂಖ್ಯೆ ೨೦೦೫ - ೨೦೦೬ ರಿಂದ ೨೦೦೬ - ೦೭ರ ಅವಧಿಯಲ್ಲಿ ೧.೭೪ ಲಕ್ಷದಿಂದ ೧.೦೧ ಲಕ್ಷಕ್ಕೆ ಇಳಿದಿದೆ. ಇದೊಂದು ಆಶಾದಾಯಕ ಸೂಚನೆ ಹಾಗೂ ಸಾಧನೆಯಾಗಿದೆ.

**ಶೈಕ್ಷಣಿಕ ದುಸ್ಥಿತಿಯ ಕೂಪ**

ಈಗಾಗಲೇ ತಿಳಿದುಬಂದಿರುವಂತೆ ಶಾಲೆ ಬಿಟ್ಟ ಮಕ್ಕಳ ಪ್ರಮಾಣವು ಹೈದರಾಬಾದ್‌ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಅತ್ಯಧಿಕ ಮಟ್ಟದಲ್ಲಿದೆ. ಈ ವಿಭಾಗದ ಕೆಲವು ತಾಲ್ಲೂಕುಗಳಲ್ಲಿ ಸಮಸ್ಯೆಯು ಅತ್ಯಂತ ಗಂಭೀರ ಸ್ವರೂಪ ತಳೆದಿದೆ. ಇದೊಂದು ಆತಂಕಕಾರಿ ಸಂಗತಿಯಾಗಿದೆ. ಶೈಕ್ಷಣಿಕ ದುಸ್ಥಿತಿಯ ಕೂಪದಂತಿರುವ ತಾಲ್ಲೂಕುಗಳ ವಿವರವನ್ನು ಕೋಷ್ಟಕ - ೧೨ ರಲ್ಲಿ ನೀಡಿದೆ.

ಒಟ್ಟು ೧೪ ತಾಲ್ಲೂಕುಗಳಲ್ಲಿ ಸಮಸ್ಯೆ ಗಂಭೀರ ಸ್ವರೂಪ ತಳೆದಿದೆ ಈ ೧೪ರ ಪೈಕಿ ೮ ತಾಲ್ಲೂಕುಗಳು ಗುಲಬರ್ಗಾ ಜಿಲ್ಲೆಗೆ ಸೇರಿವೆ. ಪ್ರದೇಶವಾರು ನೋಡಿದಾಗ ಎಲ್ಲ ೧೪ ತಾಲ್ಲೂಕುಗಳು ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಈ ಕೂಪದ ಪಟ್ಟಿಯಲ್ಲಿ ದಕ್ಷಿಣ ಕರ್ನಾಟಕ ಪ್ರದೇಶದ ಒಂದು ತಾಲ್ಲೂಕು ಇಲ್ಲ. ಒಟ್ಟು ೧೪ ತಾಲ್ಲೂಕುಗಳಲ್ಲಿ ೧೨ ಗುಲಬರ್ಗಾ ವಿಭಾಗಕ್ಕೆ ಸೇರಿದ್ದರೆ, ಎರಡು ಬೆಳಗಾವಿ ವಿಭಾಗದ ತಾಲ್ಲೂಕುಗಳಾಗಿವೆ. ಈ ೧೪ ತಾಲ್ಲೂಕುಗಳ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳೂ ಆಗಿವೆ.[2]

ಡಿ.ಎಂ.ನಂಜುಂಡಪ್ಪ ವರದಿಯ ಪ್ರಕಾರ ೧೪ ತಾಲ್ಲೂಕುಗಳ ಅಭಿವೃದ್ಧಿ ಸ್ಥಾನಗಳು ೧೦೦ರ ಮೇಲಿವೆ. ಗುಲಬರ್ಗಾ, ಸವಣೂರು, ಮತ್ತು ಗಂಗಾವತಿ ತಾಲ್ಲೂಕುಗಳನ್ನು ಬಿಟ್ಟರೆ ಉಳಿದ ೧೧ ತಾಲ್ಲೂಕುಗಳ ಅಭಿವೃದ್ಧಿ ಸ್ಥಾನವು ೧೫೦ ಕ್ಕಿಂತ ಮೇಲಿವೆ. ಆರ್ಥಿಕವಾಗಿ ಅಥವಾ ವರಮಾನದ ದೃಷ್ಟಿಯಿಂದ ಉನ್ನತ ಸ್ಥಾನವನ್ನು ಸಾಧಿಸಿಕೊಂಡ ತಾಲ್ಲೂಕುಗಳೆಲ್ಲವೂ ಶೈಕ್ಷಣಿಕವಾಗಿಯೂ ಉತ್ತಮವಾಗಿರುತ್ತವೆಂದು ಹೇಳಲು ಸಾಧ್ಯವಿಲ್ಲ. ಶೋರಾಪುರ ತಾಲ್ಲೂಕು ಪಟ್ಟಿಯಲ್ಲಿನ ೧೪ರ ಪೈಕಿ ಅಭಿವೃದ್ಧಿಯಲ್ಲಿ ೬ನೆಯ ಸ್ಥಾನದಲ್ಲಿದೆ. ಆದರೆ ಸಾಕ್ಷರತೆಯಲ್ಲಿ ಅದರ ಸ್ಥಾನ ೧೦ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದಂತೆ ಇದರ ಸ್ಥಾನ ೧೨. ಸಿಂದಗಿಯು ಅಭಿವೃದ್ಧಿಯಲ್ಲಿ ೯ನೆಯ ಸ್ಥಾನದಲ್ಲಿದ್ದರೂ ಸಾಕ್ಷರತೆಯಲ್ಲಿ ಅದು ಉನ್ನತ ಸಾಧನೆ ಸಾಧಿಸಿಕೊಂಡಿದೆ.

**ಶೈಕ್ಷಣಿಕ ದುಸ್ಥಿತಿಯ ಕೂಪಗಳು ಮತ್ತು ಅಭಿವೃದ್ಧಿ ಮಟ್ಟ**

**ಕೋಷ್ಟಕ – ೧೨**

| **ತಾಲ್ಲೂಕುಗಳು** | **ಸಾಕ್ಷರತೆ (ಶೇ.)** | **ಸ್ಥಾನ ೨೦೦೧ – ೦೨** | **ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ** | **ಸ್ಥಾನ** | **ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ ೧೯೯೭ – ೯೮ರ ದಾಖಲಾತಿ (ಶೇ.) ೨೦೦೫ (೧ – ೭ನೆಯ ತರಗತಿ)** | **ಸ್ಥಾನ** |
|---|---|---|---|---|---|---|
| ಗುಲಬರ್ಗಾ | ೬೭.೪೦ | ೧ | ೦.೮೯ | ೨ | ೪೧.೮೫ | ೯ |
| ಸವಣೂರು | ೫೯.೮೮ | ೨ | ೦.೮೭ | ೩ | ೩೫.೨೨ | ೨ |
| ಗಂಗಾವತಿ | ೫೩.೯೩ | ೩ | ೦.೯೩ | ೧ | ೩೫.೦೩ | ೧ |
| ಸಿಂದಗಿ | ೫೨.೪೮ | ೪ | ೦.೬೪ | ೯ | ೩೬.೨೨ | ೩ |
| ಅಫಜಲಪುರ | ೫೧.೬೭ | ೫ | ೦.೬೨ | ೧೦ | ೪೨.೯೦ | ೧೦ |

| | | | | | | |
|---|---|---|---|---|---|---|
| ಸಿಂಧನೂರು | ೫೭.೬೬ | ೬ | ೦.೭೮ | ೪ | ೩೬.೭೫ | ೪ |
| ಚಿಂಚೋಳಿ | ೪೯.೩೮ | ೭ | ೦.೫೭ | ೧೨ | ೩೮.೬೫ | ೫ |
| ಸೇಡಂ | ೪೩.೨೩ | ೮ | ೦.೭೨ | ೫ | ೩೮.೮೨ | ೬ |
| ಜೇವರ್ಗಿ | ೪೪.೨೬ | ೯ | ೦.೫೭ | ೧೩ | ೪೮.೨೦ | ೧೧ |
| ಶೋರಾಪುರ | ೪೩.೮೪ | ೧೦ | ೦.೭೦ | ೬ | ೪೮.೩೩ | ೧೨ |
| ಮಾನವಿ | ೪೨.೭೮ | ೧೧ | ೦.೬೯ | ೯ | ೪೧.೬೯ | ೮ |
| ದೇವದುರ್ಗ | ೩೯.೫೬ | ೧೨ | ೦.೫೩ | ೧೪ | ೪೧.೪೯ | ೭ |
| ಶಹಾಪುರ | ೩೮.೫೩ | ೧೩ | ೦.೬೨ | ೧೧ | ೫೩.೬೪ | ೧೪ |
| ಯಾದಗೀರ್ | ೩೭.೪೩ | ೧೪ | ೦.೬೭ | ೮ | ೪೯.೯೫ | ೧೩ |

*ಟಿಪ್ಪಣಿ : ೧. ಸಾಕ್ಷರತೆ ಪ್ರಮಾಣವನ್ನು ಅವರೋಹಣ ಕ್ರಮದಲ್ಲಿ ಜೋಡಿಸಲಾಗಿದೆ. ಅಭಿವೃದ್ಧಿ ಮಟ್ಟವನ್ನು ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಸೂಚ್ಯಂಕದ ಆಧಾರದ ಮೇಲೆ ಸ್ಥಾನ ನೀಡಲಾಗಿದೆ. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣಕ್ಕೆ ಸಂಬಂಧಿಸಿದಂತೆ, ಯಾವ ತಾಲ್ಲೂಕುಗಳ ಪ್ರಮಾಣ ಶೇ. ೩೫ ಕ್ಕಿಂತ ಅಧಿಕವಿದೆಯೋ ಅವುಗಳನ್ನು ಶೈಕ್ಷಣಿಕ ದುಸ್ಥಿತಿ ಕೂಪಗಳೆಂದು ಕರೆಯಲಾಗಿದೆ.*

*೨. ಇಲ್ಲಿ ಪಟ್ಟಿ ಮಾಡಿರುವ ೧೪ ತಾಲ್ಲೂಕುಗಳಿಗೆ ಶ್ರೇಣಿಯನ್ನು ನೀಡಲಾಗಿದೆ.*

ಮೂಲ : ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ೨೦೦೫
ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವಶಿಕ್ಷ ಅಭಿಯಾನ, ೨೦೦೫, ಪು. ೩೩೯

[1] ಉಚಿತ ಶಿಕ್ಷಣವನ್ನು ಸರ್ಕಾರಿ ಶಾಲೆಗಳ ಮುಲಕ ಒದಗಿಸಲಾಗುತ್ತಿದೆ. ಆದರೆ ಶಾಲೆಗೆ ಮಕ್ಕಳನ್ನು ಕಳುಹಿಸಲು ಅದು ಮಾತ್ರ ಸಾಕಾಗುವುದಿಲ್ಲ. ಮತ್ತೊಂದು ಸಂಗತಿಯೆಂದರೆ ಸರ್ಕಾರಿ ಶಾಲೆಗಳ ಶಿಕ್ಷಕರ ಔದಾಸೀನ್ಯ ಮನೋಭಾವ. ಬಡಮಕ್ಕಳ ಸಮಸ್ಯೆ ಬಗ್ಗೆ ಶಿಕ್ಷಕರು ಪ್ರೋತ್ಸಾಹದಾಯವಾಗಿ ಸ್ಪಂದಿಸುತ್ತಿಲ್ಲ (ವಿವರಗಳಿಗೆ ನೋಡಿ : ವಿಮಲಾ ರಾಮಚಂದ್ರನ್, ೨೦೦೪).

[2] ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆ ಕುರಿತಂತೆ ಅಧ್ಯಯನ ನಡೆಸಲು ಸರ್ಕಾರವು ಡಾ. ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ೨೦೦೦ ದಲ್ಲಿ ನೇಮಿಸಿತ್ತು. ಸಮಿತಿಯು ಸಾವಿರ ಪುಟಗಳನ್ನು ಮೀರಿದ ಬೃಹತ್‌ವರದಿಯನ್ನು ಸರ್ಕಾರಕ್ಕೆ ೨೦೦೨ ರಲ್ಲಿ ಸಲ್ಲಿಸಿದೆ. ರಾಜ್ಯದ ತಾಲ್ಲೂಕುಗಳನ್ನು ಅಭಿವೃದ್ಧಿ ಘಟಕಗಳನ್ನಾಗಿ ಪರಿಗಣಿಸಿದ ಸಮಿತಿಯು ಅವುಗಳ ಅಭಿವೃದ್ಧಿ ಮಟ್ಟವನ್ನು ಗುರುತಿಸಲು ೩೫ ಸೂಚಿಗಳಿಂದ ಕೂಡಿದ 'ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ'ವೆಂಬ ಮಾಪನವನ್ನು ರೂಪಿಸಿದೆ. ಈ ಸೂಚಿಯ ಆಧಾರದ ಮೇಲೆ ರಾಜ್ಯದ ೧೭೫ ತಾಲ್ಲೂಕುಗಳಿಗೂ ಶ್ರೇಣಿಯನ್ನು ನೀಡಿದೆ. ಈ ಸೂಚ್ಯಂಕವು ಅತ್ಯಧಿಕ ಮಡಿಕೇರಿ ತಾಲ್ಲೂಕಿನಲ್ಲಿದ್ದರೆ ಕನಿಷ್ಟ ದೇವದುರ್ಗ ತಾಲ್ಲೂಕಿನಲ್ಲಿದೆ (ವಿವರಗಳಿಗೆ ನೋಡಿ: ಕರ್ನಾಟಕ ಸರ್ಕಾರ (೨೦೦೦). ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನ ಸಮಿತಿ ವರದಿ).

# ೯. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ - ಗತಿ (೪)

**ಲಿಂಗ ಸಂಬಂಧಿ ಸ್ವರೂಪ**

ಅತ್ಯಂತ ಕುತೂಹಲದ ಸಂಗತಿಯೆಂದರೆ ಶಾಲೆ ಬಿಟ್ಟ ಮಕ್ಕಳ ಲಿಂಗ ಸ್ವರೂಪವನ್ನು ಪರಿಶೀಲಿಸಿದಾಗ ಹೆಣ್ಣು ಮಕ್ಕಳ ಪ್ರಮಾಣವು ಗಂಡುಮಕ್ಕಳ ಪ್ರಮಾಣಕ್ಕೆ ಸರಿಸುಮಾರು ಸಮನಾಗಿರುವುದು ಕಂಡುಬರುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಗಂಡುಮಕ್ಕಳ ಪ್ರಮಾಣ ಶೇ. ೧೪.೫೯ ಮತ್ತು ಹೆಣ್ಣುಮಕ್ಕಳ ಪ್ರಮಾಣ ಶೇ. ೧೪.೩೪. ಇದೇ ಸ್ಥಿತಿ ಸರಿಸುಮಾರು ಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತದೆ.

ಪ್ರಚಲಿತದಲ್ಲಿರುವ ಸಂಗತಿಯೆಂದರೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಅಧಿಕ ಎಂಬುದಾಗಿದೆ. ಈ ನಂಬಿಕೆ ವ್ಯಾಪಕವಾಗಿ ಹರಡಿದೆ. ಇದು ಎಲ್ಲ ಸಂದರ್ಭದಲ್ಲೂ ನಿಜವಾಗಿರಲು ಸಾಧ್ಯವಿಲ್ಲ. ಇಂದು ಪರಿಸ್ಥಿತಿ ಬದಲಾಗುತ್ತಿದೆ. ಕೋಷ್ಟಕ - ೭ ರಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣವನ್ನು ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ನೀಡಲಾಗಿದೆ. ಇಲ್ಲಿ ಹೆಣ್ಣು - ಗಂಡುಗಳ ನಡುವೆ ತೀವ್ರ ಅಂತರಗಳೇನಿಲ್ಲ. ಇದೇ ಮಾತನ್ನು ಪ್ರೌಢ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಮಗೆ ಮಾಹಿತಿ ಇಲ್ಲದಿರುವುದರಿಂದ ಅದನ್ನು ಕುರಿತಂತೆ ಇಲ್ಲಿ ಚರ್ಚಿಸಿಲ್ಲ. ಆದರೆ ಉನ್ನತ ಹಂತಕ್ಕೆ ಸಾಗಿದಂತೆ ಹೆಣ್ಣುಮಕ್ಕಳ ಪ್ರಮಾಣವು ಕಡಿಮೆಯಾಗುವುದನ್ನು ಇನ್ನೊಂದು ರೂಪದಲ್ಲಿ ತೋರಿಸಬಹುದು. ಕೋಷ್ಟಕ - ೯ ರಲ್ಲಿ ೧ನೆಯ ತರಗತಿ, ೭ನೆಯ ತರಗತಿ ಹಾಗೂ ೧೦ನೆಯ ತರಗತಿಗಳಲ್ಲಿ ಹೆಣ್ಣುಮಕ್ಕಳ ಪ್ರಮಾಣವನ್ನು ವಿಭಾಗವಾರು ತೋರಿಸಿದೆ.ಲಿಂಗ ಸಂಬಂಧಿ ತಾರತಮ್ಯದ ಸೂಕ್ಷ್ಮ ಎಳೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

**ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮೂರು ಹಂತಗಳಲ್ಲಿನ ದಾಖಲಾತಿಯಲ್ಲಿ ಲಿಂಗ ಸಮಾನತಾ ಸೂಚಿ**

**ಕೋಷ್ಟಕ – ೧೩**

| ವಿಭಾಗಗಳು / ಪ್ರದೇಶ | ಒಂದನೆಯ ತರಗತಿ | ಏಳನೆಯ ತರಗತಿ | ಹತ್ತನೆಯ ತರಗತಿ | ಒಟ್ಟು (೧ – ೧೦) |
|---|---|---|---|---|
| ಬೆಂಗಳೂರು ವಿಭಾಗ | ೯೪.೦೭ | ೯೫.೦೫ | ೯೫.೮೭ | ೫೩.೭೫ |
| ಮೈಸೂರು ವಿಭಾಗ | ೯೪.೪೮ | ೯೩.೭೪ | ೧೦೧.೮೯ | ೯೪.೬೦ |
| ದ.ಕ. ಪ್ರದೇಶ | ೯೪.೨೨ | ೯೪.೫೩ | ೯೮.೨೪ | ೯೪.೦೮ |
| ಬೆಳಗಾವಿ ವಿಭಾಗ | ೯೨.೯೨ | ೯೦.೪೨ | ೭೭.೫೫ | ೮೯.೮೭ |
| ಗುಲಬರ್ಗಾ ವಿಭಾಗ | ೮೯.೭೬ | ೮೨.೪೩ | ೭೪.೭೧ | ೮೭.೬೮ |
| ಉ.ಕ. ಪ್ರದೇಶ | ೯೧.೪೧ | ೮೭.೨೮ | ೭೬.೫೬ | ೮೮.೯೩ |
| ಕರ್ನಾಟಕ ರಾಜ್ಯ | ೯೨.೭೯ | ೯೧.೩೨ | ೮೯.೧೭ | ೯೧.೬೫ |

*ಮೂಲ : ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ, ೨೦೦೫*
*ಕೋಷ್ಟಕ – ೧೩ಕ್ಕೆ ಸಂಬಂಧಿಸಿದಂತೆ ಕೆಳಕಂಡ ಸಂಗತಿಗಳನ್ನು ಗುರುತಿಸಬಹುದಾಗಿದೆ.*

ಅ. ಲಿಂಗ ಸಮಾನತಾ ಸೂಚಿಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಉತ್ತಮವಾಗಿದೆ. ಅಲ್ಲಿ ಸೂಚಿಯು ರಾಜ್ಯ ಸರಾಸರಿಗಿಂತ ಅಧಿಕ ಮಟ್ಟದಲ್ಲಿದೆ.

ಆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಸೂಚಿಯ ಪ್ರಮಾಣವು ಸಾಪೇಕ್ಷವಾಗಿ ಕೆಳಮಟ್ಟದಲ್ಲಿದೆ.

ಇ. ಅತ್ಯಂತ ಕನಿಷ್ಟತಮ ಸೂಚಿಯು (೭೪.೭೧) ಗುಲಬರ್ಗಾ ವಿಭಾಗದಲ್ಲಿದೆ.

ಈ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಸೂಚಿಯ ಪ್ರಮಾಣ ಮೂರು ಹಂತಗಳಲ್ಲೂ ಸರಿಸುಮಾರು ಒಂದೇ ಮಟ್ಟದಲ್ಲಿದೆ. ತೀವ್ರ ಏರುಪೇರುಗಳು ಅಲ್ಲಿ ಕಂಡುಬರುವುದಿಲ್ಲ. ಆದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಒಂದನೆಯ ತರಗತಿ ಮಟ್ಟದಲ್ಲಿ ಸೂಚಿಯು ಅಧಿಕವಾಗಿದ್ದು ೧೦ನೆಯ ತರಗತಿಯಲ್ಲಿ ಅದು ಕಡಿಮೆಯಾಗಿದೆ.

ಪ್ರಾದೇಶಿಕ ಅಸಮಾನತೆಯ ತೀವ್ರತೆಯು ಉತ್ತರ ಕರ್ನಾಟಕ ಭಾಗದಲ್ಲಿ, ಅದರಲ್ಲೂ ಗುಲಬರ್ಗಾ ವಿಭಾಗದಲ್ಲಿ ಮಡುಗಟ್ಟಿಕೊಂಡಿರುವುದನ್ನು ಕೋಷ್ಟಕ - ೧೩ ಸ್ಪಷ್ಟವಾಗಿ ತೋರಿಸುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗ ಸಮಾನತಾ ಸೂಚಿಯು ಸರಿಸುಮಾರು ಮೂರು ಹಂತದಲ್ಲಿ ಸಮನಾಗಿದೆ. ವಾಸ್ತವವಾಗಿ ಹತ್ತನೆಯ ತರಗತಿಯಲ್ಲಿ ಸೂಚಿಯ ಪ್ರಮಾಣವು ಒಂದನೆಯ ಮತ್ತು ಏಳನೆಯ ತರಗತಿಯಲ್ಲಿರುವುದಕ್ಕಿಂತ ಅಧಿಕವಾಗಿದೆ. ಆದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಒಂದನೆಯ ತರಗತಿ ಮಟ್ಟದಿಂದ ಹತ್ತನೆಯ ತರಗತಿಗೆ ಸಾಗುವ ಪ್ರಕ್ರಿಯೆಯಲ್ಲಿ ಬಾಲಕಿಯರು ಶಾಲಾ ವಾಹಿನಿಯಿಂದ ದೂರ ಸರಿಯುವ ಪ್ರಮಾಣ ಅಧಿಕವಾಗಿದೆ. ಗುಲಬರ್ಗಾ ವಿಭಾಗದಲ್ಲಿ ಲಿಂಗ ಸಮಾನತಾ ಸೂಚಿ ಒಂದನೆಯ ತರಗತಿಯಲ್ಲಿ ೮೯.೭೬ ರಷ್ಟಿದ್ದರೆ ಏಳನೆಯ ತರಗತಿಯಲ್ಲಿ ಅದು ೮೨.೪೩ ರಷ್ಟಾಗಿದೆ. ಹತ್ತನೆಯ ತರಗತಿಯಲ್ಲಿ ಅದು ೭೪.೭೧ ರಷ್ಟಾಗಿದೆ. ಇದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ. ಈ ಸಂಗತಿಯ ಕಡೆಗೆ ನೀತಿ - ನಿರೂಪಕರು ಹೆಚ್ಚು ಗಮನ ನೀಡುವ ಅಗತ್ಯವಿದೆ.

ಲಿಂಗ ಸಮಾನತೆಯು ಪ್ರಾಥಮಿಕ ಶಾಲೆಯ ಪ್ರವೇಶದ ಹಂತದಲ್ಲಿ ಉತ್ತಮಗೊಂಡಿದೆ. ಅದು ಉನ್ನತ ಹಂತದಲ್ಲೂ ಉತ್ತಮವಾಗಿ-ರುವಂತೆ ನೋಡಿಕೊಳ್ಳಬೇಕಾದುದು ನಮ್ಮ ಜವಾಬುದಾರಿಯಾಗಿದೆ.

**ಅಧ್ಯಯನದ ತಥ್ಯಗಳು**

ಪ್ರಸ್ತುತ ಅಧ್ಯಯನದ ಮೂಲಕ ಕರ್ನಾಟಕದಲ್ಲಿನ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಕುರಿತಂತೆ ಕೆಲವು ಸೂಕ್ತ ಸಂಗತಿಗಳನ್ನು ಗುರುತಿಸಲಾಗಿದೆ. ಶಿಕ್ಷಣ ನೀತಿ ಹಾಗೂ ಶಿಕ್ಷಣ ಕಾರ್ಯಕ್ರಮಗಳ ದೃಷ್ಟಿಯಿಂದ ಇವು ಮಹತ್ವದ ತಥ್ಯಗಳಾಗಿವೆ. ಇಲ್ಲಿ ರೂಪಿಸಿರುವ ತಥ್ಯಗಳ ಆಧಾರದ ಮೇಲೆ ಶಿಕ್ಷಣ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗುತ್ತದೆ. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲ ಉದ್ದೇಶವೇ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದಲ್ಲಿ ಸಾಮಾಜಿಕ ಹಾಗೂ ಲಿಂಗಸಂಬಂಧಿ ಕಂದರಗಳನ್ನು ೨೦೧೦ರೊಳಗೆ ನಿವಾರಿಸುವುದಾಗಿದೆ.

[1]ಈ ಗುರಿಯನ್ನು ಸಂಪೂರ್ಣವಾಗಿ ಸಾಧಿಸುವುದು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೆ ಕಂದರಗಳನ್ನು ನಿವಾರಿಸುವ ದಿಶೆಯಲ್ಲಿ ಕರ್ನಾಟಕವು ದಿಟ್ಟ ಹೆಜ್ಜೆಗಳನ್ನಿಟ್ಟು ಮುಂದೆ ಸಾಗುತ್ತಿರುವುದು ಶ್ಲಾಘನೀಯ ಸಂಗತಿಯಾಗಿದೆ. ಈ ಗುರಿಯನ್ನು ಈಡೇರಿಸಿ ಕೊಳ್ಳಲು ಪ್ರಾಥಮಿಕ

ಹಾಗೂ ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಕಾರ್ಯಕ್ರಮದಲ್ಲಿ ಯಾವ ರೀತಿಯ ಬದಲಾವಣೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಅಂಕಿ - ಅಂಶಗಳ ಆಧಾರದ ಮೇಲೆ ಮಂಡಿಸಿದೆ. ಪ್ರಸ್ತತ ಅಧ್ಯಯನದಿಂದ ಕಂಡುಕೊಂಡ ಮುಖ್ಯ ತಥ್ಯಗಳನ್ನು ಸಂಗ್ರಹ ರೂಪದಲ್ಲಿ ಇಲ್ಲಿ ನೀಡಲಾಗಿದೆ.

೧. ಸಾಕ್ಷರತೆಗೆ ಸಂಬಂಧಿಸಿದಂತೆ ದಲಿತರು ಮತ್ತು ದಲಿತೇತರರ ನಡುವೆ ಕಂದರವಿದೆ. ಈ ಕಂದರವು ತೀವ್ರಗತಿಯಲ್ಲಿ ಕಡಿಮೆಯಾಗುತ್ತಾ ನಡೆದಿದೆ. ಸಾಕ್ಷರತಾ ಪ್ರಮಾಣವು ಉನ್ನತ ಮಟ್ಟವನ್ನು ತಲುಪಿದಂತೆ ಅದರ ಬೆಳವಣಿಗೆ ಗತಿಯು ಮಂದವಾಗಿ ಬಿಡುತ್ತದೆ. ಈ ದೃಷ್ಟಿಯಿಂದ ಸರ್ಕಾರವು ದಲಿತರ ಸಾಕ್ಷರತಾ ಪ್ರಮಾಣವನ್ನು ಉತ್ತಮಪಡಿಸಲು ಹೆಚ್ಚಿನ ಶ್ರಮ ವಹಿಸಬೇಕಾಗುತ್ತದೆ.

೨. ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಸಮಾನತೆಗಳು ತೀವ್ರವಾಗಿವೆ. ಇದನ್ನು ಎರಡು ಬಗೆಗಳಲ್ಲಿ ಗುರುತಿಸಬೇಕಾಗುತ್ತದೆ.

ಅ. ಒಟ್ಟು ಸಾಕ್ಷರತೆಗೆ ಸಂಬಂಧಿಸಿದಂತೆ ದಲಿತೇತರರೊಳಗೆ ಮತ್ತು ದಲಿತರೊಳಗೆ ಲಿಂಗ ಸಂಬಂಧಿ ಅಂತರಗಳಿವೆ. ದಲಿತರಲ್ಲಿನ ಲಿಂಗ ಸಮಾನತಾ ಸೂಚಿಯ ಪ್ರಮಾಣವು ದಲಿತೇತರರದಲ್ಲಿನ ಲಿಂಗ ಸಮಾನತಾ ಸೂಚಿಗಿಂತ ಕೆಳಮಟ್ಟದಲ್ಲಿದೆ.

ಆ. ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ನಡುವೆಯೂ ಸಾಕ್ಷರತೆಗೆ ಸಂಬಂಧಿಸಿದಂತೆ ಅಂತರಗಳಿವೆ. ದಲಿತ ಮಹಿಳೆಯರ ಸಾಕ್ಷರತೆಯು ೨೦೦೧ ರಲ್ಲಿ ಶೇ. ೪೦.೨೩ ರಷ್ಟಿದ್ದರೆ ದಲಿತೇತರ ಮಹಿಳೆಯರ ಸಾಕ್ಷರತೆಯು ಶೇ. ೬೩.೩೯ ರಷ್ಟಿದೆ. ಅಲ್ಲಿ ಅಂತರ ಶೇ. ೨೩.೧೬ ಅಂಶಗಳಷ್ಟಿದೆ. ಮಹಿಳೆ ಮತ್ತು ಪುರುಷರ ನಡುವಿನ ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ಕಡಿಮೆ ಮಾಡುವುದರ ಜೊತೆಗೆ ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ನಡವಿನ ಸಾಕ್ಷರತೆಗೆ ಸಂಬಂಧಿಸಿದ ಅಸಮಾನತೆಯನ್ನು ನಿವಾರಿಸುವ ಕಡೆ ಹೆಚ್ಚಿನ ಗಮನ ನೀಡಬೇಕಾದ ಅಗತ್ಯವಿದೆ.

೩. ಈ ಅಧ್ಯಯನದಿಂದ ಒಡಮೂಡಿದ ಒಂದು ಮಹತ್ವದ ಒಳನೋಟವೆಂದರೆ ಶಾಲಾ (೧ - ೧೦) ದಾಖಲಾತಿಗೆ ಸಂಬಂಧಿಸಿದ ಪ್ರಾದೇಶಿಕ ಹಂಚಿಕೆಯಲ್ಲಿನ ವಿಶಿಷ್ಟತೆ. ರಾಜ್ಯದ ಜನಸಂಖ್ಯೆಯಲ್ಲಿ ದಕ್ಷಿಣ ಕರ್ನಾಟಕ ಪ್ರದೇಶವು ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲನ್ನು ೧ - ೧೦ ನೆಯ ತರಗತಿವರೆಗಿನ ದಾಖಲಾತಿಯಲ್ಲಿ ಪಡೆದಿದೆ. ಇದಕ್ಕೆ ಪ್ರತಿಯಾಗಿ ರಾಜ್ಯದ ಜನಸಂಖ್ಯೆಯಲ್ಲಿ ಉತ್ತರ ಕರ್ನಾಟಕ ಪ್ರದೇಶವು ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅಧಿಕ ಪಾಲನ್ನು ಮಕ್ಕಳ ದಾಖಲಾತಿಯಲ್ಲಿ ಪಡೆದಿದೆ. ಈ ತಥ್ಯದ ಇಂಗಿತಾರ್ಥವೇನು? ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಒತ್ತಡವನ್ನು ಗುರುತಿಸಬಹುದಾಗಿದೆ. ಏಕೆಂದರೆ ೦ - ೬ ವಯೋಮಾನದ ಮಕ್ಕಳ ಪ್ರಮಾಣವು ದಕ್ಷಿಣ ಕರ್ನಾಟಕ ಪ್ರದೇಶಕ್ಕಿಂತ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅಧಿಕವಿದೆ. ಇದು ಇನ್ನೊಂದು ಬಗೆಯಲ್ಲಿ ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದ ಒತ್ತಡವನ್ನು ಸೂಚಿಸುತ್ತದೆ.[2] ಆದ್ದರಿಂದ ಸರ್ಕಾರವು ಜನಸಂಖ್ಯೆಯ ಬೆಳವಣಿಗೆಯ ಪ್ರಾದೇಶಿಕ ವಿಶಿಷ್ಟತೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಬೇಕಾಗುತ್ತದೆ.

೪. ಶಾಲಾ (೧ - ೧೦) ದಾಖಲಾತಿಯು ಕರ್ನಾಟಕದಲ್ಲಿ ದಲಿತೀಕರಣ ಪ್ರಕ್ರಿಯೆಗೆ ಒಳಗಾಗಿರುವುದನ್ನು ಅಧ್ಯಯನವು ಗುರುತಿಸಿದೆ. ರಾಜ್ಯಮಟ್ಟದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ದಲಿತರ (ಪ.ಜಾ.+ಪ.ಪಂ.) ಪ್ರಮಾಣವು ೨೦೦೧ರಲ್ಲಿ ಶೇ. ೨೨.೮೬ ರಷ್ಟಿದೆ. ಆದರೆ ೧ - ೭ನೆಯ ತರಗತಿವರೆಗಿನ ಒಟ್ಟು ಶಾಲಾ ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣವು ಶೇ. ೨೬.೩೯ರಷ್ಟಿದ್ದರೆ, ೮ ರಿಂದ ೧೦ನೆಯ ತರಗತಿಗಳಿಗೆ ಸಂಬಂಧಿಸಿದ ಒಟ್ಟು ದಾಖಲಾತಿಯಲ್ಲಿ ದಲಿತರ ಪ್ರಮಾಣವು ಶೇ. ೨೨.೧೦ ರಷ್ಟಿದೆ. ಒಟ್ಟು ೧ - ೧೦ನೆಯ ತರಗತಿಗಳನ್ನು ಗಣನೆಗೆ ತೆಗೆದುಕೊಂಡರೆ ದಲಿತರ ಪ್ರಮಾಣ ಶೇ. ೨೬.೨೯ ರಷ್ಟಾಗುತ್ತದೆ. ಇದೊಂದು ಕುತೂಹಲದ ಹಾಗೂ

ಸ್ವಾಗತಾರ್ಹವಾದ ಸಂಗತಿಯಾಗಿದೆ. ಆದರೆ ಶಾಲಾ ರಚನೆಯಲ್ಲಿ ಉನ್ನತ ಹಂತಕ್ಕೆ ಸಾಗಿದಂತೆ ದಲಿತ ಮಕ್ಕಳ ಪ್ರಮಾಣವು ಕಡಿಮೆಯಾಗುತ್ತಾ ನಡೆಯುವುದನ್ನು ಅಧ್ಯಯನವು ಗುರುತಿಸಿದೆ. ದಲಿತೀಕರಣ ಹಾಗೂ ದಲಿತೀಕರಣದ ಅವರೋಹಣ ಗತಿ ಎರಡನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಪ್ರಾಥಮಿಕ ಶಿಕ್ಷಣ - ಪ್ರೌಢ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ.

೫. ಲಿಂಗ ಸಮಾನತಾ ಸೂಚಿಯು ರಾಜ್ಯಮಟ್ಟದಲ್ಲಿ ಉತ್ತಮವಾಗಿದೆ. ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲೂ ಇದು ತೃಪ್ತಿಕರವಾಗಿದೆ. ಆದರೆ ರಾಜ್ಯದ ಉತ್ತರ ಕರ್ನಾಟಕ ಪ್ರದೇಶದಲ್ಲಿ ಮತ್ತು ಮುಖ್ಯವಾಗಿ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಇದರ ಮಟ್ಟವು ತುಂಬಾ ಕಡಿಮೆಯಿದೆ. ಲಿಂಗ ಸಂಬಂಧಿ ಕಂದರವನ್ನು ನಿವಾರಿಸುವ ದಿಶೆಯಲ್ಲಿ ಮೇಲಿನ ಅಂಶವನ್ನು ಗಮನಿಸಬೇಕಾಗುತ್ತದೆ.

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆ ತುಂಬಾ ಮುಖ್ಯವಾದುದು. ಇದಕ್ಕೆ ಸಂಬಂಧಪಟ್ಟಂತೆ ಪ್ರಸ್ತುತ ಅಧ್ಯಯನದಲ್ಲಿ ಕೆಲವು ಮುಖ್ಯ ಸಂಗತಿಗಳನ್ನು ಮುಂಚೂಣಿಗೆ ತರಲಾಗಿದೆ. ರಾಜ್ಯಮಟ್ಟದಲ್ಲಿ ಅದು ಕೇವಲ ಶೇ. ೧೪.೪೭ ರಷ್ಟಿದೆ. ಆದರೆ ಬಹಳ ಮುಖ್ಯವಾದ ಸಂಗತಿಯೆಂದರೆ ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಇದು ಕೆಳಮಟ್ಟದಲ್ಲಿದೆ. ಆದರೆ ಸಮಸ್ಯೆ ಉತ್ತರ ಕರ್ನಾಟಕ ಪ್ರದೇಶದಲ್ಲಿ, ಅದರಲ್ಲೂ ಮುಖ್ಯವಾಗಿ ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿ ವ್ಯಾಪಕವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಮಸ್ಯೆಯು ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ತುಂಬಾ ಗಂಭೀರ ಸ್ವರೂಪದಲ್ಲಿದೆ. ಸರ್ಕಾರವು ಸಮಸ್ಯೆ ತೀವ್ರವಾಗಿರುವ ತಾಲ್ಲೂಕುಗಳ ಬಗ್ಗೆ ವಿಶೇಷ ಗಮನಹರಿಸಬೇಕದ ಅಗತ್ಯವಿದೆ.

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಲ್ಲಿ ಹೆಣ್ಣುಮಕ್ಕಳ ಪ್ರಮಾಣ ಅಧಿಕವಾಗಿರುತ್ತದೆ ಎಂಬ ನಂಬಿಕೆ ವ್ಯಾಪಕವಾಗಿ ಹರಡಿದೆ. ಆದರೆ ೧ - ೭ನೆಯ ತರಗತಿಗಳಲ್ಲಿ ಶಾಲೆ ಬಿಟ್ಟ ಮಕ್ಕಳಲ್ಲಿ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳ ನಡುವೆ ತೀವ್ರ ಅಂತರಗಳೇನಿಲ್ಲ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಲಿಂಗಸಂಬಂಧಿ ಅಸಮಾನತೆ ತೀವ್ರವಾಗಿರುವುದು ಮಾತ್ರ ಕಂಡುಬರುತ್ತದೆ.

ಒಟ್ಟಂದದಲ್ಲಿ ಕರ್ನಾಟಕದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದ ಸ್ಥಿತಿಗತಿಯನ್ನು ಪರಿಶೀಲಿಸಿದಾಗ ಅನೇಕ ಸ್ವಾಗತಾರ್ಹ ಸಂಗತಿಗಳು ಕಂಡುಬರುತ್ತವೆ. ಆದರೆ ಸಾಮಾಜಿಕ ಮತ್ತು ಲಿಂಗ ಸಂಬಂಧಿ ಅಂತರ - ಕಂದರಗಳನ್ನು ನಿವಾರಿಸುವ ದಿಶೆಯಲ್ಲಿ ರಾಜ್ಯವು ಸಾಗಬೇಕಾದ ದಾರಿ ತುಂಬಾ ದೂರವಿದೆ. ಅತ್ಯಂತ ಗಂಭೀರವಾದ ಸಮಸ್ಯೆಯೆಂದರೆ ಅದರ ಪ್ರಾದೇಶಿಕ ಅಸಮಾನತೆಯ ಸ್ವರೂಪ. ರಾಜ್ಯದ ಹಿಂದುಳಿದ ಜಿಲ್ಲೆಗಳಿಂದ ಕೂಡಿರುವ ಹೈದರಾಬಾದ್ - ಕರ್ನಾಟಕ (ಗುಲಬರ್ಗಾ ವಿಭಾಗ) ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರವು ವಿಶೇಷ ಕಾರ್ಯ ಯೋಜನೆಯನ್ನು ರೂಪಿಸುವ ಅಗತ್ಯವಿದೆ. ಇದು ಕೇವಲ ವಿಶೇಷ ನಿರ್ದೇಶನಾಲಯವನ್ನು ತೆರೆದುಬಿಟ್ಟರೆ ಸಾಕಾಗುವುದಿಲ್ಲ ಅಥವಾ ಡಿ.ಎಂ. ನಂಜುಂಡಪ್ಪ ವರದಿ ಕುರಿತಂತೆ ಜಪ ಮಾಡಿದರೆ ಸಾಕಾಗುವುದಿಲ್ಲ. ನಿರ್ದಿಷ್ಟವಾಗಿ ಕಾರ್ಯರೂಪಕ್ಕೆ ಇಳಿಸುವಂತಹ ಕ್ರಮಗಳನ್ನು ಯೋಜಿಸಬೇಕಾಗಿದೆ. ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಒಟ್ಟಾರೆ ಪ್ರಾಮಾಣಿಕ ಪ್ರಯತ್ನ ನಡೆಯಬೇಕು.

ಈ ಅಧ್ಯಯನದಲ್ಲಿ ವಿಶೇಷವಾಗಿ ಗುರುತಿಸಿರುವ ಸಂಗತಿಯೆಂದರೆ ಪ್ರಾಥಮಿಕ ಹಂತದಿಂದ ಪ್ರೌಢಹಂತಕ್ಕೆ ನಡೆಯುವ ಪರಿವರ್ತನೆಯ ಸಂದಿಕಾಲದಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ತೀವ್ರ ಕಡಿತ. ಇದನ್ನು ವಿಭಾಗವಾರು ಹಾಗೂ ತರಗತಿವಾರು ಗುರುತಿಸಲಾಗಿದೆ. ವಿಭಾಗವಾರು ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ಗುರುತಿಸಲಾಗಿದೆ. ವಿಭಾಗವಾರು ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ (ಕೋಷ್ಟಕ - ೮) ತೋರಿಸುವಂತೆ ರಾಜ್ಯ ಮಟ್ಟದಲ್ಲಿ ಪರಿವರ್ತನಾ ಸೂಚ್ಯಂಕ ೦.೮೯೯. ಆದರೆ ದ.ಕ. ಪ್ರದೇಶದಲ್ಲಿ ಇದರ ಪ್ರಮಾಣ ಅಧಿಕವಾಗಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅತ್ಯಂತ ಕಡಿಮೆಯಿದೆ. ಎಂಟನೆಯ ಮತ್ತು ಒಂಬತ್ತನೆಯ ತರಗತಿಗಳಲ್ಲಿ ಮಕ್ಕಳು ಶಾಲಾ ಪ್ರಕ್ರಿಯೆಯಿಂದ ಹೊರ ಹೋಗುವುದು ಅಧಿಕವೆಂಬುದನ್ನು ಇಲ್ಲಿ ತೋರಿಸಲಾಗಿದೆ (ಕೋಷ್ಟಕ - ೧೧). ಈ ಸಂಗತಿಯ ಕಡೆಗೆ ಸರ್ವ ಶಿಕ್ಷಣ ಅಭಿಯಾನದ ಪ್ರಭೃತಿಗಳು ಗಮನ ನೀಡಬೇಕು. ರಾಜ್ಯದಲ್ಲಿ ೨೦೦೫ - ೦೬ ರಿಂದ ೨೦೦೬ - ೦೭ರ ಪರಿವರ್ತನಾ ಪ್ರಕ್ರಿಯೆಯಲ್ಲಿ ಒಟ್ಟು ಕಡಿತವಾದ

ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಉ.ಕ. ಪ್ರದೇಶದ ಪಾಲು ಶೇ. ೮೫.೫೯. ಸಮಸ್ಯೆಯ ಮೂಲ ಎಲ್ಲಿದೆಯೆಂಬುದು ಇದರಿಂದ ಅರ್ಥವಾಗುತ್ತದೆ (ಕೋಷ್ಟಕ - ೧೦). ಇಂತಹ ಸೂಕ್ಷ್ಮ ಸಂಗತಿಗಳ ಕಡೆ ಗಮನ ನೀಡಬೇಕಾದ ಅಗತ್ಯವಿದೆ.

೭. ಈ ಅಧ್ಯಯನದಲ್ಲಿ ಪ್ರಧಾನವಾಗಿ ಕರ್ನಾಟಕದಲ್ಲಿನ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಯನ್ನು ಪ್ರಾದೇಶಿಕ ನೆಲೆಯಿಂದ ಪೃಥಕ್ಕರಿಸಲು ಪ್ರಯತ್ನಿಸಲಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಾದೇಶಿಕ ನೆಲೆಗಳನ್ನು ಪರಿಗಣಿಸದೆ ಶಿಕ್ಷಣದ ಸಾರ್ವತ್ರೀಕರಣವು ಸಾಧ್ಯವಿಲ್ಲ. ಈ ಅಧ್ಯಯನದಲ್ಲಿ ತೋರಿಸಿರುವಂತೆ ದಕ್ಷಿಣ ಕರ್ನಾಟಕ ಪ್ರದೇಶವು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾರ್ವತ್ರೀಕರಣದ ಸನಿಹಕ್ಕೆ ಸಾಗಿಬಿಟ್ಟಿದೆ. ಈಗ ಸಮಸ್ಯೆಯೆಂದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ, ಅದರಲ್ಲೂ ಮುಖ್ಯವಾಗಿ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಶಿಕ್ಷಣದ ಸಾರ್ವತ್ರಿಕರಣವನ್ನು ಹೇಗೆ ಸಾಧಿಸಿಕೊಳ್ಳುವುದು ಎಂಬುದಾಗಿದೆ. ರಾಜ್ಯ ಸರ್ಕಾರವು ತನ್ನ ನೀತಿ ನಿರೂಪಣೆಗಳಲ್ಲಿ, ಯೋಜನೆ - ಕಾರ್ಯಕ್ರಮಗಳಲ್ಲಿ ಪ್ರಜ್ಞಾಪೂರ್ವಕವಾಗಿ ಪ್ರಾದೇಶಿಕತೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವತ್ರೀಕರಣವು ಕೇವಲ ದಕ್ಷಿಣ ಕರ್ನಾಟಕ ಸಂಗತಿಯಾಗಿ ಬಿಡುತ್ತದೆ. ಇದನ್ನು ಸರಿಪಡಿಸುವ ದಿಶೆಯಲ್ಲಿ ಮೂಲಭೂತವಾದ ಬದಲಾವಣೆಯನ್ನು ಸರ್ಕಾರವು ತನ್ನ ಅಭಿವೃದ್ಧಿ ನೀತಿಯಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಸಂಗತಿಯತ್ತ ಗಮನ ಸೆಳೆಯಲು ಪ್ರಸ್ತುತ ಅಧ್ಯಯನ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ

೮. ಈ ಅಧ್ಯಯನದಲ್ಲಿ ಕಂಡುಕೊಂಡ ಮತ್ತೊಂದು ಮಹತ್ವವಾದ ತಥ್ಯವೆಂದರೆ ಲಿಂಗ ಸಮಾನತಾ ಸೂಚಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆ. ಶಾಲಾ ದಾಖಲಾತಿಯ ಕೆಳಹಂತದಲ್ಲಿ ಲಿಂಗ ಸಮಾನತಾ ಸೂಚಿಯು ಉತ್ತಮವಾಗಿರುತ್ತದೆ. ಅದು ಉನ್ನತ ಹಂತಕ್ಕೆ ಸಾಗಿದಂತೆ ಕಡಿಮೆಯಾಗುತ್ತಿರುತ್ತದೆ. ತುಂಬಾ ಕುತೂಹಲಕಾರಿಯಾಗಿದೆ. ಈ ಸಂಗತಿಯು ಪ್ರಾದೇಶಿಕಸಮಾನತೆಯನ್ನು ಸರಿಪಡಿಸುವ ದೃಷ್ಟಿಯಿಂದ ತುಂಬಾ ಮುಖ್ಯವಾದುದಾಗಿದೆ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ದಾಖಲಾತಿಗೆ ಸಂಬಂಧಿಸಿದ ಲಿಂಗ ಸಮಾನತಾ ಸೂಚಿಯು ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಒಂದು ನೆಲೆಯಲ್ಲಿ ಉತ್ತಮವಾಗಿರುವುದು ಕಂಡುಬರುತ್ತದೆ. ಆದರೆ ಉತ್ತರ ಕರ್ನಾಟಕದ ಪ್ರದೇಶದಲ್ಲಿ ದಾಖಲಾತಿಗೆ ಸಂಬಂಧಿಸಿದ ಲಿಂಗ ಸಮಾನತಾ ಸೂಚಿಯು ಕೆಳಹಂತದಲ್ಲಿ ಉತ್ತಮವಾಗಿದ್ದು ಉನ್ನತ ಹಂತದಲ್ಲಿ ತೀವ್ರ ಕಡಿಮೆಯಾಗಿರುವುದನ್ನು ಕೋಷ್ಟಕ - ೧೩ ರಲ್ಲಿ ತೋರಿಸಲಾಗಿದೆ. ಕೋಷ್ಟಕ - ೮ ಮತ್ತು ಕೋಷ್ಟಕ - ೧೩ ಎರಡೂ ಒಂದೇ ವಿಷಯಕ್ಕೆ ಸಂಬಂಧಿಸಿದ್ದರೂ ಅವುಗಳ ನಡುವಣ ಭಿನ್ನತೆಯನ್ನು ನಾವು ಅಗತ್ಯ ಗುರುತಿಸಿಕೊಳ್ಳಬೇಕು. ಪ್ರಸ್ತುತ ಅಧ್ಯಯನದ ಪ್ರಮುಖ ತಥ್ಯ ಇದಾಗಿದೆ.

**ಆಕರಸೂಚಿ**

ಅಮರ್ತ್ಯಸೆನ್, ೧೯೯೯, **ಕಮಾಡಿಟೀಸ್ ಅಂಡ್ ಕೇಪಬಲಿಟೀಸ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು.೪

ಅರುಣ್‌ಸಿ. ಮೆಹತಾ, ೨೦೦೬, **ಎಲಿಮೆಂಟರಿ ಎಜುಕೇಶನ್ ಇನ್ ಇಂಡಿಯಾ – ವೇರ್ ಡು ವಿ ಸ್ಟ್ಯಾಂಡ್?,** ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ನವದೆಹಲಿ.

ಕರ್ನಾಟಕ ಸರ್ಕಾರ, ೨೦೦೫, **ತಾಲ್ಲೂಕುವಾರು ಶೈಕ್ಷಣಿಕ ಅಂಕಿಅಂಶ ೨೦೦೫,** ರಾಜ್ಯ ಯೋಜನಾ ನಿರ್ದೇಶಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

ಕರ್ನಾಟಕ ಸರ್ಕಾರ, ೨೦೦೬, **ಆಯವ್ಯಯ,** ೨೦೦೬ - ೦೭ ಮಂಡಿಸಿದವರು ಶ್ರೀ ಬಿ.ಎಸ್.ಯಡಿಯೂರಪ್ಪ, ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು

ಕರ್ನಾಟಕ ಸರ್ಕಾರ, ೨೦೦೨, **ಸ್ಟೇಟ್ ಡೊಮೆಸ್ಟಿಕ್ ಪ್ರಾಡಕ್ಟ್ – ಕರ್ನಾಟಕ; ೧೯೯೩ – ೯೪ ರಿಂದ ೨೦೦೦ – ೨೦೦೧,** ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

ಕರ್ನಾಟಕ ಸರ್ಕಾರ, ೨೦೦೨, **ಪ್ರಾದೇಶಿಕ ಅಸಮತೋಲನ ನಿವಾರಣಾ ಅಧ್ಯಯನದ ಉನ್ನತಾಧಿಕಾರ ಸಮಿತಿ, ಅಂತಿಮ ವರದಿ,** ಪು. ೨೦೧ - ೨೯೬

ಗೇಲ್ ಒಮ್‌ವೆಡ್ಟ್, ೧೯೯೯, **'ವೈ ಎಲಿಮೆಂಟರಿ ಎಜುಕೇಶನ್ ಇಸ್ ನಾಟ್ ಎ ಪ್ರಯಾರಿಟಿ?',** ಇಲ್ಲಿ ಪ್ರೋಬ್ ತಂಡ, ಪ್ರೋಬ್, ನವದೆಹಲಿ, ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ಪು. ೧೩೪

ಗೋಪಾಲ ಗುರು, ೨೦೦೩, **'ದಲಿತ್ ವುಮೆನ್ ಟಾಕ್ ಡಿಫರೆಂಟ್‌ಲಿ'** ಇಲ್ಲಿ ಅನುಪಮಾರಾವ್ (ಸಂ.) ಜೆಂಡರ್ ಆಂಡ್ ಕಾಸ್ಟ್, ಕಾಳಿಫಾರ್ ವುಮೆನ್, ನವದೆಹಲಿ, ಪು. ೮೦ - ೮೫

ಜೀನ್‌ಡ್ರೀಜ್‌ಮತ್ತು ಅಮರ್ತ್ಯಸೇನ್, ೨೦೦೨, **ಇಂಡಿಯಾ : ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಶನ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು. ೧೪೩ - ೧೮೭

ಚಂದ್ರಶೇಖರ ಟಿ.ಆರ್., ೨೦೦೩, **ಕರ್ನಾಟಕ : ಅಭಿವೃದ್ಧಿಯ ಸಾಮಾಜಿಕ ನೆಲೆಗಳು,** ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ಪು. ೨೭ - ೩೪ ಮ್ತು ೪೩ - ೫೭.

ಪ್ರೋಬ್ ತಂಡ ೨೦೦೨, **ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಶನ್ ಇನ್ ಇಂಡಿಯಾ,** ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ

ವಿಮಲಾ ರಾಮಚಂದ್ರನ್ (ಸಂ.),
೨೦೦೪, **ಜೆಂಡರ್ ಆಂಡ್ ಸೋಶಿಯಲ್ ಈಕ್ವಿಟಿ ಇನ್ ಪ್ರೈಮರಿ ಎಜುಕೇಶನ್: ಹೈರಾರ್ಕಿಸ್ ಇನ್ ಆಕ್ಸೆಸ್, ಸೇಜ್ ಪಬ್ಲಿಕೆಶನ್,** ನವದೆಹಲಿ.

ವಿಮಲಾ ರಾಮಚಂದ್ರನ್, ೨೦೦೨, **ಎಜುಕೇಶನ್ ಅಂಡ್ ಸ್ಟೇಟ್ ಆಫ್ ವುಮನ್,** ಇಲ್ಲಿ ಗೋವಿಂದ ಆರ್ (ಸಂ.),
೨೦೦೨, **ಇಂಡಿಯಾ ಎಜುಕೇಶನ್ ರಿಪೋರ್ಟ್,** ಪು. ೨೫೧ - ೨೭೪, ಆಕ್ಸ್‌ಫರ್ಡ್‌ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಸೆನ್ಸಸ್‌ಆಫ್ ಇಂಡಿಯಾ, ೧೯೯೧, ಸಿರೀಸ್ - ೧೧, ಕರ್ನಾಟಕ. ಪಾರ್ಟ್
**ಬಿ. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್ : ಜನರಲ್ ಪಾಪ್ಯುಲೇಶನ್,** ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, ಬೆಂಗಳೂರು

ಸೆನ್ಸಸ್ ಆಫ್ ಇಂಡಿಯಾ, ೧೯೯೧, ಸಿರೀಸ್ - ೧೧, ಕರ್ನಾಟಕ.
ಪಾರ್ಟ್‌ಬಿ. **ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್: ಶೆಡೂಲ್ಡ್ ಕಾಸ್ಟ್ ಅಂಡ್ ಶೆಡೂಲ್ಡ್ ಟ್ರೈಬ್ಸ್,** ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, ಕರ್ನಾಟಕ

ಸೆನ್ಸಸ್ ಆಫ್ ಇಂಡಿಯಾ, ೨೦೦೧, ಸಿರೀಸ್ ೩೦ ಕರ್ನಾಟಕ ಪೇಪರ್ ೨
ಆಫ್೨೦೦೧, **ಪ್ರಾವಿಶನಲ್ ಪಾಪ್ಯುಲೇಶನ್ ಟೋಟಲ್ಸ್, ರೂರಲ್ – ಅರ್ಬನ್ ಪಾಪ್ಯುಲೇಶನ್,** ಡೈರೆಕ್ಟರೇಟ್ ಆಫ್ ಸೆನ್ಸೆಸ್ ಆಪರೇಶನ್, ಕರ್ನಾಟಕ.

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಸರ್ವಶಿಕ್ಷಣ ಅಭಿಯಾನ ಮಿಷನ್‌ನ ಉದ್ದೇಶಗಳು ಹೀಗಿವೆ.

ಅ. ಎಲ್ಲ ಮಕ್ಕಳು ೨೦೦೫ರೊಳಗೆ ಶಾಲೆಯಲ್ಲಿ ದಾಖಲಾಗಿರಬೇಕು.

ಆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿನ ಎಲ್ಲ ಲಿಂಗ ಸಂಬಂಧಿ ಹಾಗೂ ಸಾಮಾಜಿಕ ಅಂತರವನ್ನು ೨೦೦೭ರೊಳಗೆ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ೨೦೧೦ರೊಳಗೆ ಕಡಿಮೆ ಮಾಡುವುದು.

ಇ. ೨೦೧೦ರೊಳಗೆ ಶಾಲೆಯಲ್ಲಿ ಉಳಿಯುವಿಕೆಯನ್ನು ಸಾರ್ವತ್ರಿಕಗೊಳಿಸುವುದು.

ಈ. ತೃಪ್ತಿಕರ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಒದಗಿಸುವುದು.

(ವಿವರಗಳಿಗೆ ನೋಡಿ: ಕರ್ನಾಟಕ ಸರ್ಕಾರ ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ – ಅಂಶ ೨೦೦೫)

[2] ೨೦೦೧ರ ಜನಗಣತಿ ಪ್ರಕಾರ ೧೯೯೧ – ೨೦೦೧ರ ದಶಕದಲ್ಲಿ ಕರ್ನಾಟಕದಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೧.೭೩. ಆದರೆ ರಾಜ್ಯದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅದರ ಪ್ರಮಾಣ ಶೇ. ೨ ಕ್ಕಿಂತ ಅಧಿಕವಿದೆ. ರಾಜ್ಯದ ೧೮ ಜಿಲ್ಲೆಗಳಲ್ಲಿ ಅದು ರಾಜ್ಯ ಸರಾಸರಿಗಿಂತ ಕಡಿಮೆಯಿದೆ. ಅಂದಮೇಲೆ ಜನಸಂಖ್ಯೆಯ ಬೆಳವಣಿಗೆ ಒತ್ತಡವು ರಾಜ್ಯದ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಅಧಿಕವಿದೆ.

# ೧೦. ಕರ್ನಾಟಕದಲ್ಲಿ ಅಭಿವೃದ್ಧಿ ಯೋಜನೆಗಳು (೧)

## ಪ್ರಸ್ತಾವನೆ

ಭಾರತ ಒಕ್ಕೂಟ ವ್ಯವಸ್ಥೆಯಲ್ಲಿ ಕರ್ನಾಟಕಕ್ಕೆ ವಿಶಿಷ್ಟವಾದ ಸ್ಥಾನವಿದೆ. ಈ ವಿಶಿಷ್ಟತೆಯು ಕೇವಲ ಭೌಗೋಳಿಕ, ಭಾಷೆ, ಸಾಹಿತ್ಯ, ಹವಾಮಾನ ಮುಂತಾದ ವಿಷಯಕ್ಕೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅದು ಅನೇಕ ವಿಶಿಷ್ಟತೆಗಳನ್ನು ಮೆರೆದಿದೆ. ಇದನ್ನು ಕರ್ನಾಟಕದ ಆರ್ಥಿಕತೆ, ಸಮಾಜ, ರಾಜಕಾರಣಗಳನ್ನು ಕುರಿತಂತೆ ಅಧ್ಯಯನ ನಡೆಸಿದ ಸಮಾಜ ವಿಜ್ಞಾನಿಗಳು ಗುರುತಿಸಿದ್ದಾರೆ (ಜೇಮ್ಸ್‌ಮೇನರ್೧೯೮೯, ಶ್ರೀನಿವಾಸ್ ಎಂ.ಎನ್. ೧೯೮೪, ವಿನೋದ್ ವ್ಯಾಸುಲು, ೧೯೯೭). ಕರ್ನಾಟಕವು ಒಂದು ಆಧುನಿಕ ರಾಜಕೀಯ ವ್ಯವಸ್ಥೆಯಾಗಿ ರೂಪುಗೊಂಡು ೨೦೦೬ಕ್ಕೆ ೫೦ ವರ್ಷಗಳಾದವು. ಕರ್ನಾಟಕವು ೨೦೦೬ನೆಯ ಸಾಲನ್ನು 'ಸುವರ್ಣ ಕರ್ನಾಟಕ ವರ್ಷ'ವೆಂದು ಆಚರಿಸಿತು. ಒಂದು ದೇಶ / ಪ್ರದೇಶದ ಅಭಿವೃದ್ಧಿ ದೃಷ್ಟಿಯಿಂದ ೫೦ ವರ್ಷವು ದೀರ್ಘಾವಧಿಯೂ ಅಲ್ಲ ಅಥವಾ ಅಲ್ಪಾವಧಿಯೂ ಅಲ್ಲ. ಅದೊಂದು ಸಂಧಿಕಾಲ. ಅದೊಂದು ಆತ್ಮಾವಲೋಕನ ನಡೆಸುವ ಸಂದರ್ಭ. ಪ್ರಸ್ತುತ ಪ್ರಬಂಧದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಅದರ ವಿಶಿಷ್ಟತೆಗಳನ್ನು ಹಾಗೂ ಕಳೆದ ೫೦ ವರ್ಷಗಳ ಅದರ ಅಭಿವೃದ್ಧಿ ಯೋಜನೆಗಳ ಅನುಭವಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

**ಎಂ.ಎನ್. ಶ್ರೀನಿವಾಸರ ಪ್ರಮೇಯ**

ಖ್ಯಾತ ಸಮಾಜಶಾಸ್ತ್ರಜ್ಞ ಎಂ.ಎನ್.ಶ್ರೀನಿವಾಸ ಅವರು ಕರ್ನಾಟಕದ ಆರ್ಥಿಕತೆ, ರಾಜಕಾರಣ ಹಾಗೂ ಸಮಾಜ ಕುರಿತಂತೆ ಒಂದು ಪ್ರಸಿದ್ಧ ಪ್ರಮೇಯವನ್ನು ರೂಪಿಸಿದ್ದಾರೆ. ಅವರ (೧೯೮೪) "ದಕ್ಷಿಣ ಭಾರತದ ಕೇರಳ ಮತ್ತು ತಮಿಳುನಾಡುಗಳು ಅನುಭವಿಸುತ್ತಿರುವ 'ಉಗ್ರ' ಸ್ವರೂಪದ ಅಂದರೆ ಮೂಲಭೂತವೆನ್ನಬಹುದಾದ ಬದಲಾವಣೆಗಳಿಗೆ ಭಿನ್ನವಾದ ರೀತಿಯಲ್ಲಿ ಒಂದು ರೀತಿಯಲ್ಲಿ ಮೇಲ್ಪದರದ 'ರಾಜಿ' ಸ್ವರೂಪದ ಬದಲಾವಣೆಗಳನ್ನು ಕರ್ನಾಟಕವು ಅನುಭವಿಸುತ್ತಿದೆ" ಎಂಬುದು ಅವರ ಪ್ರಮೇಯದ ಸ್ಥೂಲ ರೂಪವಾಗಿದೆ. ಎಡಪಂಥೀಯ ಸಾಮಾಜಿಕ ಚಿಂತನೆಯು, ಚಳುವಳಿಯು, ಅಭಿವೃದ್ಧಿಯು ಕರ್ನಾಟಕದಲ್ಲಿ ಸಂಭವಿಸಲೇ ಇಲ್ಲ ಎಂಬ ಮಾತನ್ನು ಶ್ರೀನಿವಾಸ್ ತಮ್ಮ ಪ್ರಬಂಧದಲ್ಲಿ ಹೇಳುತ್ತಾರೆ.

ಕರ್ನಾಟಕವನ್ನು ಕುರಿತಂತೆ ಅನೇಕ ದಶಕಗಳಿಂದ ಅಧ್ಯಯನ ನಡೆಸಿಕೊಂಡು ಬಂದಿರುವ ಜೇಮ್ಸ್‌ಮೇನರ್ ಇದನ್ನು 'ಕೊಹೆಸಿವ್ ಸಮಾಜ'ವೆಂದು ಕರೆದಿದ್ದಾರೆ (೧೯೮೯). ವಿನೋದ್ ವ್ಯಾಸುಲು ಅದನ್ನು 'ಮಧ್ಯಮಗತಿ ಆರ್ಥಿಕತೆ'ಯೆಂದು ಕರೆದಿದ್ದಾರೆ (೧೯೯೭). ಅಂದರೆ ಕರ್ನಾಟಕವು 'ಬದಲಾವಣೆ'ಗಳನ್ನೇ ಕಾಣದ 'ಜಡ', 'ಯಥಾ ಸ್ಥಿತಿ'ಯ ಸಮಾಜವೇನಲ್ಲ. ಆದರೆ ಅದಕ್ಕೆ 'ಉಗ್ರ' ರೂಪದ ಬದಲಾವಣೆಗಳನ್ನು ಹುಟ್ಟು ಹಾಕುವುದು ಸಾಧ್ಯವಾಗಿಲ್ಲವೆಂಬುದು ನಿಜ. ಒಂದು ರೀತಿಯಲ್ಲಿ ಕರ್ನಾಟಕದ ಸಮಾಜ – ಆರ್ಥಿಕತೆ – ರಾಜಕಾರಣವು 'ಯಥಾಸ್ಥಿತಿ' ಮತ್ತು 'ಗತಿಸ್ಥಿತಿ'ಗಳ ನಡುವೆ ತೂಗುಯ್ಯಾಲೆಯಾಡುತ್ತಾ ನಡೆದಿದೆಯೆಂದು ಹೇಳಬಹುದು. ಇಲ್ಲಿ ಬದಲಾವಣೆಗಳಾಗುತ್ತಿವೆ, ಅಭಿವೃದ್ಧಿಗಳಾಗಿವೆ.

ಇದಕ್ಕೆ ನಿದರ್ಶನವಾಗಿ ಕರ್ನಾಟಕದ ಕೃಷಿ ವ್ಯವಸ್ಥೆಯನ್ನು ನೋಡಬಹುದು. (ವಿವರಗಳಿಗೆ ನೋಡಿ : ಕರ್ನಾಟಕ ಡೆವಲಪ್‌ಮೆಂಟ್ ರಿಪೋರ್ಟ್: ೨೦೦೭ : ೫೬೭ – ೬೧೫). ಕರ್ನಾಟಕವು ಮೂಲತಃ ಒಣಭೂಮಿಯನ್ನು ವ್ಯಾಪಕವಾಗಿ ಹೊಂದಿರುವ ರಾಜ್ಯ. ಈ ರಾಜ್ಯದ ನಿವ್ವಳ ಬಿತ್ತನೆ ಪ್ರದೇಶವು ಸರಿಸುಮಾರು ೧೦೦ ಲಕ್ಷ ಹೆಕ್ಟೇರುಗಳ ಆಸುಪಾಸಿನಲ್ಲಿದೆ. ಕಳೆದ ೫೦ ವರ್ಷಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ತುಂಬಾ ಬದಲಾವಣೆಯಾಗಿಲ್ಲ. ಈ ಬಿತ್ತೆ ಪ್ರದೇಶದಲ್ಲಿ ನೀರಾವರಿ ಪ್ರದೇಶವು ೧೯೬೦ ರಲ್ಲಿ ೮ ಲಕ್ಷ ಹೆಕ್ಟೇರರಷ್ಟಿದ್ದುದು ೨೦೦೫ – ೦೬ ರಲ್ಲಿ ೩೧ ಲಕ್ಷ ಹೆಕ್ಟೇರುಗಳೆಂದು ಅಂದಾಉ ಮಾಡಲಾಗಿದೆ. ಇಡೀ ದೇಶದಲ್ಲಿ ಒಣಭೂಮಿ ಬೇಸಾಯವನ್ನು ಅತಿ ಹೆಚ್ಚಾಗಿ ಪಡೆಸಿರುವ ಮೂರನೆಯ ರಾಜ್ಯ ಕರ್ನಾಟಕ (ವಿವರಗಳಿಗೆ ನೋಡಿ : ಮಿಹಿರ್ ಶಹಾ ಮತ್ತು ಇತರರು ೧೯೯೮). ನೈಸರ್ಗಿಕ ಸಂಪನ್ಮೂಲಗಳ ದೃಷ್ಟಿಯಿಂದ ಕರ್ನಾಟಕವು ಅನುಕೂಲಕರ ಸ್ಥಿತಿಯಲ್ಲೇನು ಇಲ್ಲ. ಇಷ್ಟಾದರೂ ಅದು ಆಹಾರ ಉತ್ಪನ್ನದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಿಕೊಂಡಿದೆ. ಬರಗಾಲವನ್ನು ಅದು ಸ್ವಸಾಮರ್ಥ್ಯದ ಮೇಲೆ ನಿರ್ವಹಿಸುವ ಸ್ಥಿತಿಯಲ್ಲಿದೆ.

ಕರ್ನಾಟಕದ ಅಭಿವೃದ್ಧಿ ಸಾಧನೆಯು ಕಣ್ಣುಕೋರೈಸುವಂತಹದಲ್ಲ. ಆದರೆ ಅದು ಅಲ್ಲಗಳೆಯವಂತಹದ್ದೂ ಅಲ್ಲ. ಕರ್ನಾಟಕದ ಅಭಿವೃದ್ಧಿಯನ್ನು ಪಂಚವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದಂತೆ ಅದರ ಅನುಭವಗಳನ್ನು ಕುರಿತಂತೆ ಚರ್ಚಿಸುವಾಗ

**ಭಾರತದ ಒಕ್ಕೂಟದಲ್ಲಿ ಮಧ್ಯಮ ಸ್ಥಾನದಲ್ಲಿ ಕರ್ನಾಟಕ**

**ಕೋಷ್ಟಕ – ೧**

| ಆಯ್ದ ಅಭಿವೃದ್ಧಿ ಸೂಚಿಗಳು | ಮುಂದುವರಿದ ರಾಜ್ಯಗಳು | | | | ಕರ್ನಾಟಕ | ಹಿಂದುಳಿದ ರಾಜ್ಯಗಳು | | | |
|---|---|---|---|---|---|---|---|---|---|
| | ಪಂಜಾಬ್ | ಮಹಾರಾಷ್ಟ್ರ | ತಮಿಳುನಾಡು | ಕೇರಳ | | ಬಿಹಾರ | ಮ.ಪ್ರದೇಶ | ಉ.ಪ್ರದೇಶ | ರಾಜಸ್ಥಾನ |

| | | | | | | | | | |
|---|---|---|---|---|---|---|---|---|---|
| ಲಿಂಗ ಪರಿಮಾಣ:<br>೨೦೦೧ | ೮೭೪ | ೯೨೨ | ೧೮೭ | ೧೦೫೮ | ೯೬೪ | ೯೨೧ | ೯೨೦ | ೮೯೮ | ೯೨೨ |
| ಸಾಕ್ಷರತೆ: ೨೦೦೧ | ೬೯.೬೫ | ೭೭.೨೭ | ೭೩.೪೭ | ೯೦.೯೨ | ೬೭.೦೪ | ೪೭.೫೩ | ೬೪.೧೧ | ೫೭.೩೬ | ೬೧.೦೨ |
| ಜೀವನಾಯುಷ್ಯ:<br>೨೦೦೧ – ೦೬ | | | | | | | | | |
| ಪುರುಷರು | ೬೯.೭೮ | ೬೬.೭೫ | ೬೭.೦೦ | ೭೧.೬೭ | ೬೨.೪೩ | ೬೫.೬೬ | ೫೯.೧೯ | ೬೩.೫೪ | ೬೨.೭೭ |
| ಮಹಿಳೆಯರು | ೭೨.೦೦ | ೬೯.೭೬ | ೬೯.೭೫ | ೭೫.೦೦ | ೬೬.೪೪ | ೬೪.೪೯ | ೫೮.೦೧ | ೬೪.೦೯ | ೬೨.೮೦ |
| ಜನಸಂಖ್ಯೆಯ<br>ಬೆಳವಣಿಗೆ ಪ್ರಮಾಣ | | | | | | | | | |
| ೧೯೯೧ – ೨೦೦೧ | ೧೯.೭೬ | ೨೨.೫೭ | ೧೧.೧೯ | ೯.೪೨ | ೧೭.೨೫ | ೨೮.೪೩ | ೨೪.೩೪ | ೨೫.೦೩ | ೨೮.೩೩ |
| ತಲಾವರಮಾನ<br>೨೦೦೩ – ೦೪ (ಶೇ)<br>ಚಾಲ್ತಿಬೆಲೆಗಳಲ್ಲಿ<br>(ರೂ.ಗಳಲ್ಲಿ) | ೨೭೮೫೧ | ೨೯೨೦೪ | ೨೩೩೫೮ | ೨೪೪೯೨ | ೨೩೮೫೯ | ೫೭೮೦ | ೧೪೦೧೧ | ೧೦೮೧೭ | ೧೫೪೮೬ |
| ಶಿಶುಮರಣ ಪ್ರಮಾಣ –<br>೨೦೦೩ | ೪೯ | ೪೨ | ೪೩ | ೧೧ | ೫೨ | ೬೦ | ೮೨ | ೭೬ | ೭೫ |
| ಪ್ರತಿ ಲಕ್ಷ ಜನರಿಗೆ<br>ವಾಹನಗಳ ಸಂಖ್ಯೆ<br>೨೦೦೨ | ೧೨೭೩೯ | ೭೬೫೨ | ೯೦೬೭ | ೭೨೭೨ | ೬೮೭೯ | ೧೨೩೫ | ೫೨೫೮ | ೩೧೧೧ | ೫೬೫೭ |
| ತಲಾ ಬ್ಯಾಂಕ್ ಠೇವಣಿ<br>೨೦೦೪ (ರೂ.ಗಳಲ್ಲಿ) | ೨೫೨೫೯ | ೩೪೦೧೦ | ೧೫೫೦೮ | ೧೯೯೯೦ | ೧೭೦೧೩ | ೩೩೬೫ | ೫೧೮೦ | ೬೪೦೬ | ೬೭೭೬ |
| ಕೃಷಿಯನ್ನು ಅವಲಂಬಿಸಿ<br>ಕೊಂಡಿರುವವರ<br>ಪ್ರಮಾಣ ೨೦೦೧(ಶೇ) | ೩೯.೩೬ | ೫೫.೪೧ | ೪೯.೫೫ | ೨೩.೨೬ | ೫೫.೮೯ | ೭೭.೩೫ | ೭೧.೫೯ | ೬೬.೦೩ | ೬೬.೦೦ |

*ಮೂಲ : ಕರ್ನಾಟಕ ಸರ್ಕಾರ ೨೦೦೬ ಆರ್ಥಿಕ ಸಮೀಕ್ಷೆ : ೨೦೦೫ – ೦೬, ಪು. ಎ೮ ರಿಂದ ಎ೧೯*

## ಅಧ್ಯಯನದ ವಿನ್ಯಾಸ

ಈ ಅಧ್ಯಯನದಲ್ಲಿ ಪ್ರಸ್ತಾವನೆ ಹಾಗೂ ಸಂಗ್ರಹ ಭಾಗಗಳನ್ನು ಬಿಟ್ಟು ಒಟ್ಟು ನಾಲ್ಕು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಕರ್ನಾಟಕದ ಜನಸಂಖ್ಯೆಗೆ ಸಂಬಂಧಿಸಿದ ಹಾಗೂ ಕೃಷಿಗೆ ಸಂಬಂಧಿಸಿದ ಕೆಲವು ವಿವರಗಳನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ವರಮಾನದ ವರ್ಧನೆ – ಬೆಳವಣಿಗೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ಪಂಚವಾರ್ಷಿಕ ಯೋಜನೆಗಳ ವಿವರಗಳನ್ನು ನೀಡಲಾಗಿದೆ. ನಾಲ್ಕನೆಯ ಭಾಗದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಮೂರು ಮುಖ್ಯ ವೈಫಲ್ಯದ ಸಂಗತಿಗಳನ್ನು ಚರ್ಚಿಸಲಾಗಿದೆ. (ಪ್ರಾದೇಶಿಕ ಅಸಮಾನತೆ, ಮಾನವ ಅಭಿವೃದ್ಧಿ ಮತ್ತು ಲಿಂಗ ಸಂಬಂಧಗಳು) ಕೊನೆಯ ಸಂಗ್ರಹದಲ್ಲಿ ಅಧ್ಯಯನದ ತಥ್ಯಗಳನ್ನು ಸಾರಾಂಶ ರೂಪದಲ್ಲಿ ನೀಡಲಾಗಿದೆ ಹಾಗೂ ಅಭಿವೃದ್ಧಿಯ ಮುಂದಿನ ದಿಶೆಗತಿಯನ್ನು ಕುರಿತು ಕೆಲವು ಸೂಚನೆಗಳನ್ನು ನೀಡಲಾಗಿದೆ.

## <u>ಭಾಗ – ೧</u>

**ಜನಸಂಖ್ಯೆ ಮತ್ತು ಕೃಷಿ ಅವಲಂಬನೆ**

ಕೋಷ್ಟಕ – ೨ರಲ್ಲಿ ಕರ್ನಾಟಕ ಜನಸಂಖ್ಯೆಯ ಬೆಳವಣಿಗೆಯ ಗಣಶೀಲ ಸ್ವರೂಪವನ್ನು ತೋರಿಸಲಾಗಿದೆ. ಅತ್ಯಂತ ಅಭಿನಂದಾರ್ಹ ಸಂಗತಿಯೆಂದರೆ ಕರ್ನಾಟಕದ ಜನಸಂಖ್ಯೆ ಒಟ್ಟು ಪರಿಮಾಣದಲ್ಲಿ ಏರಿಕೆಯಾಗುತ್ತಾ ನಡೆದಿದ್ದರೂ ಅದರ ಏರಿಕೆಯ ಗತಿ ೧೯೫೧ – ೬೧ರ ದಶಕದಲ್ಲಿ ಶೇ.೨೧.೫೫ ರಷ್ಟಿದ್ದುದು ೧೯೭೧ – ೮೧ರಲ್ಲಿ ಶೇ.೨೬.೮ಕ್ಕೆ ಏರಿಕೆಯಾಯಿತು. ಆದರೆ ೧೯೮೧ರ ನಂತರ ಅದು ಕಡಿಮೆಯಾಗತೊಡಗಿತು. ಜನಸಂಖ್ಯೆಯು ೧೯೮೧ – ೯೧ರ ದಶಕದಲ್ಲಿ ಶೇ. ೨೧.೧ರ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ೧೯೭೧ – ೮೧ರ ದಶಕದಲ್ಲಿ ಏರಿಕೆಗಿಂತ ಶೆ. ೫.೭ ಅಂಶಗಳಷ್ಟು ಕಡಿಮೆಯಾಗಿದೆ. ಕಳೆದ ೧೯೯೧ – ೨೦೦೧ ದಶಕದಲ್ಲಿ ಅದರ ದಶಕವಾರು ಬೆಳವಣಿಗೆ ಪ್ರಮಾಣ ಶೇ. ೧೭.೨೫. ಲಿಂಗ ಅನುಪಾತವು ೧೯೯೧ರಲ್ಲಿ ೯೬೦ ಇದ್ದುದು ೨೦೦೧ರಲ್ಲಿ ಅದು ೯೬೪ಕ್ಕೇರಿದೆ. ಜನನ ಪ್ರಮಾಣ ಹಾಗೂ ಶಿಶು ಮರಣ ಪ್ರಮಾಣದಲ್ಲಿ ತೀವ್ರ ಇಳಿಕೆ ಕಂಡು ಬಂದಿದೆ. ಜನಸಂಖ್ಯೆಯ ಗುಣವನ್ನು ಸೂಚಿಸುವ ಸಾಕ್ಷರತಾ ಪ್ರಮಾಣವು ೧೯೬೧ರಲ್ಲಿ ಶೇ. ೨೯.೮೦ರಷ್ಟಿದ್ದುದು ೨೦೦೧ರಲ್ಲಿ ಶೇ. ೬೭.೦೪ಕ್ಕೇರಿದೆ. ಮಹಿಳೆಯರ ಸಾಕ್ಷರತೆಯು ಶೇ. ೧೬.೭೦ ರಿಂದ ಶೇ. ೪೫ಕ್ಕೇರಿದೆ.

ಒಟ್ಟಾರೆ ಜನಸಂಖ್ಯಾ ಪರಿವರ್ತನಾ ಸಿದ್ಧಾಂತದಲ್ಲಿ ಗುರುತಿಸಲಾಗುವ ಕೆಳಮಟ್ಟದ ಜನನ ಪ್ರಮಾಣ ಮತ್ತು ಕೆಳಮಟ್ಟದ ಮರಣ ಪ್ರಮಾಣಗಳನ್ನು ಪ್ರತಿನಿಧಿಸುವ ಮೂರನೆಯ ಹಂತವನ್ನು ಕರ್ನಾಟಕವು ಪ್ರವೇಶಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಜನಸಂಖ್ಯೆಯ ಬೆಳವಣಿಗೆಯನ್ನು ಒಂದು ಸಮಸ್ಯೆಯನ್ನಾಗಿ ಪರಿಗಣಿಸುವ ಸ್ಥಿತಿ ಇಂದು ಇಲ್ಲ. ಇಂದು ಸೈದ್ಧಾಂತಕವಾಗಿ ಜನಸಂಖ್ಯೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ನೆಲೆಯ ಚರ್ಚೆ ಮುಂಚೂಣಿಗೆ ಬಂದಿದೆ. ಈ ಮುಂದೆ ಭಾಗ ನಾಲ್ಕರಲ್ಲಿ ವಿವರವಾಗಿ ಇದನ್ನು ಚರ್ಚಿಸಲಾಗಿದೆ.

**ಜನಸಂಖ್ಯಾ ಬೆಳವಣಿಗೆಯ ಗತಿಶೀಲ ಸ್ವರೂಪ – ಕರ್ನಾಟಕ : ೧೯೭೧ – ೨೦೦೧**

**ಕೋಷ್ಟಕ – ೨**

| **ಸೂಚಿಗಳು** | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|
| ಜನಸಂಖ್ಯೆ (ಲಕ್ಷಗಳಲ್ಲಿ) | ೨೯೨.೯೯ | ೩೭೧.೩೬ | ೪೪೯.೭೭ | ೫೨೭.೩೪ |

| | | | | |
|---|---|---|---|---|
| ಜನಸಂಖ್ಯೆಯ ದಶಕವಾರು ಬೆಳವಣಿಗೆ ಪ್ರಮಾಣ (ಶೇ.) | ೨೪.೨ | ೨೬.೮ | ೨೧.೧ | ೧೭.೨೫ |
| ಜನಸಾಂದ್ರತೆ (ಪ್ರತಿ ಚ.ಕಿ.ಮೀ.ನಲ್ಲಿ ವಾಸಿಸುವ ಜನ) | ೧೫೩ | ೧೯೪ | ೨೩೫ | ೨೭೫ |
| ನಗರವಾಸಿಗಳ ಪ್ರಮಾಣ (ಶೇ.) | ೨೪.೩ | ೨೮.೯ | ೩೦.೯ | ೩೩.೯೮ |
| ಲಿಂಗ ಅನುಪಾತ (ಪ್ರತಿ ಸಾವಿರ ಪುರುಷರಿಗೆ ಮಹಿಳೆಯರು) | ೯೫೭ | ೯೬೩ | ೯೬೦ | ೯೬೪ |
| ಸಾಕ್ಷರತೆ ಒಟ್ಟು | ೩೧.೫ | ೩೮.೫ | ೫೬.೦೪ | ೬೭.೦೪ |
| ಪುರುಷರು | ೪೧.೬ | ೪೮.೮ | ೬೭.೩ | ೭೬.೨೯ |
| ಮಹಿಳೆಯರು | ೨೧.೦೦ | ೨೭.೭೦ | ೪೪.೩೦ | ೫೭.೪೫ |
| ಜನನ ಪ್ರಮಾಣ | ೩೧.೭ | ೨೮.೩ | ೨೬.೨ | ೨೨.೨ |
| ಮರಣ ಪ್ರಮಾಣ | ೧೨.೧ | ೯.೧ | ೮.೫ | ೭.೬ |
| ಒಟ್ಟು ಸಂತಾನೋತ್ಪತ್ತಿ ಪ್ರಮಾಣ | ೪.೪ | ೩.೬ | ೩.೧ | ೨.೫ |
| ಶಿಶು ಮರಣ ಪ್ರಮಾಣ | ೯೫ | ೬೯ | ೭೩ | ೫೮ |
| ಜನನ ವೇಳೆ ಆಯುಷ್ಯ (ವರ್ಷಗಳಲ್ಲಿ) | ಪುರುಷರು | ೬೦.೨ | ೬೨.೧ | ೬೨.೪೩ |
| | ಮಹಿಳೆಯರು | ೬೧.೧ | ೬೩.೩ | ೬೬.೪೪ |

***ಮೂಲ :*** *ನ್ಯಾಷನಲ್‌ಫ್ಯಾಮಿಲಿ ಹೆಲ್ತ್‌ಸರ್ವೆ. ಕರ್ನಾಟಕ : ೧೯೯೨ – ೯೩ ಪಿ.ಆರ್.ಸಿ. ಬೆಂಗಳೂರು ಮತ್ತು ಐಐಪಿಎಸ್, ಮುಂಬೈ, ೧೯೯೫, ಪು.೮.* ಕರ್ನಾಟಕ ಸರ್ಕಾರ, ೨೦೦೪, ಆರ್ಥಿಕ ಸಮೀಕ್ಷೆ : ೨೦೦೩ – ೦೪, ಪು.ಎ೮ ರಿಂದ ಎ೧೧.

**ಕೃಷಿಯಲ್ಲಿ ಬೆಳವಣಿಗೆ**

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೃಷಿ ಮೇಲೆ ತೊಡಗಿಸಿದ ಹಣಕಾಸ ಪ್ರಮಾಣದ ವಿವರವನ್ನು ಕೋಷ್ಟಕ – ೩ರಲ್ಲಿ ನೀಡಿದೆ.

೧೯೬೦ – ೬೧ ರಲ್ಲಿ ಶೇ. ೬೧ರಷ್ಟಿದ್ದುದು ೨೦೦೦ – ೦೧ ರಲ್ಲಿ ಅದು ಶೇ. ೨೮.೯೭ಕ್ಕೆ ಇಳಿದಿದೆ. ಆದರೆ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಅದೇ ಪ್ರಮಾಣದಲ್ಲಿ ಕಡಿಮೆಯಾಗಲಿಲ್ಲ. (ವಿವರಗಳಿಗೆ ನೋಡಿ: ಕೋಷ್ಟಕ ೫ ಮತ್ತು

ಕೋಷ್ಟಕ ೬) ಈ ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿದ್ದವರ ಪ್ರಮಾಣ ೧೯೬೦ – ೬೧ರಲ್ಲಿ ಶೇ. ೭೦.೨೫ ರಷ್ಟಿದ್ದುದು ೨೦೦೦ – ೦೧ರಲ್ಲಿ ಅದು ಕೇವಲ ಶೇ. ೫೫.೮೯ಕ್ಕೆ ಇಳಿದಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ಭೂರಹಿತ ದಿನಗೂಲಿಗಳನ್ನು ಇತರೆ ವಲಯಕ್ಕೆ ವರ್ಗಾಯಿಸುವ ಕಾರ್ಯಕ್ರಮ ರೂಪಿಸಬೇಕಾಗಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಇಂದು ಕರ್ನಾಟಕದಲ್ಲಿ ೬೨ ಲಕ್ಷ ಭೂ ರಹಿತ ಕೃಷಿಕೂಲಿಕಾರರಿದ್ದಾರೆ (೨೦೦೧). ಈ ಹಿನ್ನೆಲೆಯಲ್ಲಿ ನಾವು ಮುಂದಿನ ಅಭಿವೃದ್ಧಿ ಯೋಜನೆಗಳ ಸ್ವರೂಪದ ಬಗ್ಗೆ ಯೋಚಿಸಬೇಕಾಗುತ್ತದೆ. ಕೃಷಿ ವಲಯವನ್ನು ಆಧುನೀಕರಿಸುವ ಹಾಗೂ ಅದರ ಬೆಳೆ ಪದ್ಧತಿಯನ್ನು ವೈವಿಧ್ಯಪಡಿಸುವ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತೋಟಗಾರಿಕೆ ಬೆಳಗಳಗೆ, ಮುಖ್ಯವಾಗಿ ಹಣ್ಣು, ತರಕಾರಿ, ಹೂವುಗಳ ಕೃಷಿಯನ್ನು ವಿಸ್ತೃತವಾಗಿ ಬೆಳಸಬೇಕಾಗಿದೆ. ಮುಂದಿನ ಪಂಚವಾಷಿಕ ಯೋಜನೆಗಳಲ್ಲಿ ಕೃಷಿಯ ಬೆಳವಣಿಗೆ ಬಗ್ಗೆ ಹೆಚ್ಚಿನ ಸಂಪನ್ಮೂಲ ಹಾಗೂ ಗಮನ ನೀಡುವ ಅಗತ್ಯವಿದೆ. ನೇರವಾಗಿ ಇಂದು ೧೩೧ ಲಕ್ಷ ಜನರು ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ.

**ವರಮಾನದ ವಲಯವಾರು ಪ್ರಮಾಣ : ಕರ್ನಾಟಕ**

**ಕೋಷ್ಟಕ – ೫**

| **ವರ್ಷಗಳು** | **ವಲಯವಾರು ಪಾಲು** | | | |
|---|---|---|---|---|
| | **ಪ್ರಾ.ವ.** | **ದ್ವಿ.ವ** | **ತೃ.ವ.** | **ಒಟ್ಟು** |
| ೧೯೬೦ – ೬೧ | ೬೧.೦೬ | ೧೩.೩೯ | ೨೫.೫೫ | ೧೦೦.೦೦ |
| ೧೯೭೦ – ೭೧ | ೫೨.೭೩ | ೨೦.೭೩ | ೨೬.೫೪ | ೧೦೦.೦೦ |
| ೧೯೮೦ – ೮೧ | ೪೬.೦೮ | ೨೦.೭೬ | ೩೩.೧೮ | ೧೦೦.೦೦ |
| ೧೯೯೦ – ೯೧ | ೩೭.೧೧ | ೨೩.೦೩ | ೩೯.೮೫ | ೧೦೦.೦೦ |
| ೨೦೦೦ – ೦೧ | ೨೮.೯೭ | ೨೪.೫೬ | ೪೬.೪೭ | ೧೦೦.೦೦ |

*ಮೂಲ : ವಿವಿಧ ದಶಕಗಳ ಜನಗಣತಿ ವರದಿಗಳು*

ಪ್ರಾ.ವ : ಪ್ರಾಥಮಿಕ ವಲಯ, ದ್ವಿ.ವ : ದ್ವಿತೀಯ ವಲಯ,

ತೃ.ವ : ತೃತೀಯ ವಲಯ

**ಕರ್ನಾಟಕದಲ್ಲಿ ಕೃಷಿಯ ಅವಲಂಬನೆ**

**ಕೋಷ್ಟಕ – ೭ (ಲಕ್ಷಗಳಲ್ಲಿ)**

| ವರ್ಷಗಳು | ಸಾಗುವಳಿದಾರರು | ಭೂರಹಿತ ದಿನಗೂಲಿಗಳು | ಒಟ್ಟು ಕೃಷಿ ಅವಲಂಬಿತರು | ಒಟ್ಟು ದುಡಿಮೆಗಾರರು |
|---|---|---|---|---|
| ೧೯೭೦ – ೭೧ | ೫೮.೦೭ | ೧೬.೭೧ | ೬೫.೭೬ | ೧೦೬.೬೨ |
| ೧೯೮೦ – ೮೧ | ೫೨.೨೨ | ೩೭.೫೫ | ೮೮.೬೬ | ೧೪೯.೪೪ |
| ೧೯೯೦ – ೯೧ | ೫೯.೧೫ | ೪೯.೯೯ | ೧೦೯.೧೪ | ೧೮೮.೮೭ |
| ೨೦೦೦ – ೦೧ | ೭೯.೩೭ | ೭೨.೦೯ | ೧೩೧.೪೫ | ೨೩೫.೨೧ |

*ಮೂಲ : ವಿವಿಧ ದಶಕಗಳ ಜನಗಣತಿ ವರದಿಗಳು*

ಕರ್ನಾಟಕ ಡೆವಲಪ್‌ಮೆಂಟ್ ರಿಪೋರ್ಟ್(೨೦೦೬) ದಲ್ಲಿ ಸ್ಪಷ್ಟವಾಗಿ ಗುರುತಿಸಿರುವಂತೆ ಕರ್ನಾಟಕದಲ್ಲಿ ಅಂತರಿಕ ಉತ್ಪನ್ನದ ಏರಿಕೆಯು ಕೃಷಿ ಕ್ಷೇತ್ರದ ಬೆಳವಣಿಗೆಯನ್ನು ಅವಲಂಬಿಸಿದೆ. ಕರ್ನಾಟಕದಲ್ಲಿ ಆಹಾರ ಬೆಳೆಗಳಿಗೆ ಸಂಬಂಧಿಸಿದಂತೆ ಇಳುವರಿಯಲ್ಲಿ ಸರಿಸುಮಾರು ಗರಿಷ್ಠಮಟ್ಟ ತಲುಪಲಾಗಿದೆ. ಆದ್ದರಿಂದ ಇನ್ನು ಮುಂದೆ ಆಹಾರೇತರ ಬೆಳೆಗಳಿಗೆ ಅಂದರೆ ತೋಟಗಾರಿಕೆ ಬೆಳೆಗಳು, ಎಣ್ಣೆಬೀಜ, ಬೇಳೆಕಾಳು, ಮೀನು, ಹೈನುಗಾರಿಕೆ ಮುಂತಾದ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸುವ ಅಗತ್ಯವಿದೆ. ಒಣಭೂಮಿ ಬೇಸಾಯವನ್ನು ಆದ್ಯತೆಯ ಮೇಲೆ ಅಭಿವೃದ್ಧಿಪಡಿಸದಿದ್ದರೆ ಕರ್ನಾಟಕದ ಕೃಷಿರಂಗವು ಕುಸಿತಕ್ಕೆ ಒಳಗಾಗುವುದು ಖಂಡಿತ. ಈ ವಲಯದಲ್ಲಿರುವ ಪ್ರಾದೇಶಿಕ ಅಸಮಾನತೆ ಕುಸಿತಕ್ಕೆ ಒಳಗಾಗುವುದು ಖಂಡಿತ. ಈ ವಲಯದಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ದಿಶೆಯಲ್ಲಿ ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ.

<u>ಭಾಗ – ೨</u>

**ವರಮಾನ ಮತ್ತು ತಲಾ ವರಮಾನ**

ಅಭಿವೃದ್ಧಿ ಯೋಜನೆಗಳ ಮುಖ್ಯ ಉದ್ದೇಶವೆಂದರೆ ಜನರ ವರಮಾನದ ಮಟ್ಟವನ್ನು ಅಧಿಕಗೊಳಿಸುವುದು. ಅಭಿವೃದ್ಧಿಯನ್ನು ವರಮಾನದ ವರ್ಧನೆಯ ನೆಲೆಯಲ್ಲೇ ಪಂಚ ವಾರ್ಷಿಕ ಯೋಜನೆಗಳಲ್ಲಿ ಪರಿಭಾವಿಸಿಕೊಂಡು ಬರಲಾಗಿದೆ. ಪಂಚವಾರ್ಷಿಕ ಯೋಜನೆಗಳ ಸಾಫಲ್ಯ – ವೈಫಲ್ಯವನ್ನು ವರಮಾನದ ವಾರ್ಷಿಕ ಬೆಳವಣಿಗೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಕೋಷ್ಟಕ – ೮ರಲ್ಲಿ ಕರ್ನಾಟಕ ರಾಜ್ಯದ ವರಮಾನದ ವಾರ್ಷಿಕ ಬೆಳವಣಿಗೆ ಪ್ರಮಾಣವನ್ನು ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ನೀಡಲಾಗಿದೆ.

ಈ ಕೋಷ್ಟಕದಲ್ಲಿ ತೋರಿಸಿರುವಂತೆ ೧೯೬೫ರವರೆಗೆ ರಾಜ್ಯದ ವರಮಾನದ ಬೆಳವಣಿಗೆ ಪ್ರಮಾಣವು ಭಾರತದ ಆರ್ಥಿಕ ಬೆಳವಣಿಗೆ ಪ್ರಮಾಣಕ್ಕಿಂತ ಅಧಿಕವಾಗಿತ್ತು.

ಸಂಗತಿಗಳನ್ನು ಚರ್ಚೆ ಮಾಡಬಹುದು. ಈಗಾಗಲೇ ಗುರುತಿಸಿರುವಂತೆ ಭಾರತ ಅದರಂತೆ ಕರ್ನಾಟಕದಲ್ಲಿ ಅಭಿವೃದ್ಧಿಯನ್ನು ವರಮಾನದ ವರ್ಧನೆಯ ನೆಲೆಯಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿಯನ್ನು ವರಮಾನ ಹಾಗೂ ತಲಾವರಮಾನಗಳು ವರ್ಧನೆಯೆಂದು ನಿರ್ವಚಿಸಿಕೊಳ್ಳಲಾಗಿತ್ತು. ಬಹಳ ಕುತೂಹಲದ ಸಂಗತಿಯೆಂದರೆ ಅಭಿವೃದ್ಧಿಯ ಚೌಕಟ್ಟಿನೊಳಗೆ ಭೌತಿಕ ಸರಕುಗಳ ಜೊತೆಗೆ ಸೇವಾ ಚಟುವಟಿಕೆಗಳಾದ ಶಿಕ್ಷಣ, ಆರೋಗ್ಯ ಮತ್ತು ಆಡಳಿತದ ಸಂಗತಿಗಳನ್ನು ಸೇರಿಸಲಾಗಿತ್ತು. ಕರ್ನಾಟಕ ಸರ್ಕಾರವು ೧೯೭೦ರಲ್ಲಿ ಪ್ರಕಟಿಸಿರುವ ಅಭಿವೃದ್ಧಿ ಕುರಿತ ಅಧಿಕೃತ ಕೃತಿಯಲ್ಲಿ ಅಭಿವೃದ್ಧಿಯನ್ನು ಹೀಗೆ ನಿರ್ವಚಿಸಲಾಗಿದೆ.

*"ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿಯೆಂದರೆ ಭೌತಿಕ ಹಾಗೂ*
*ಭೌತಿಕೇತರ ಸರಕುಗಳ ತಲಾ ಅನುಭೋಗದಲ್ಲಿ*
*ಸಾಧಿಸುವ ಸಾಮಾನ್ಯ ವರ್ಧನೆಯಾಗಿದೆ."*(೧೯೭೦: ಪು : ೨೧)

ಭೌತಿಕ ಸರಕುಗಳಲ್ಲಿ ಅನುಭೋಗಿ ಸರಕುಗಳು, ಆಹಾರ, ಬಾಳಿಕೆ ಬರುವ ಹಾಗೂ ತಕ್ಷಣಕ್ಕೆ ಉಪಯೋಗಿಸುವ ಸರಕುಗಳನ್ನು ಸೇರಿಸಿದ್ದರೆ ಭೌತಿಕೇತರ ಸರಕುಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಆಡಳಿತಗಳನ್ನು ಸೇರಿಸಲಾಗಿದೆ. ಮೊದಲನೆಯ ಪ್ರಕಾರವನ್ನು 'ವರಮಾನ ಅಭಿವೃದ್ಧಿ'ಯೆಂದೂ ಎರಡನೆಯ ಪ್ರಕಾರವನ್ನು ಸ್ಥೂಲವಾಗಿ 'ಮಾನವ ಅಭಿವೃದ್ಧಿ'ಯೆಂದೂ ಹೇಳಬಹುದು. ಅಖಿಲ ಭಾರತ ಮಟ್ಟದಲ್ಲೂ ಆರ್ಥಿಕ ಅಭಿವೃದ್ಧಿಯನ್ನು ವಿಸ್ತೃತ ನೆಲೆಯಲ್ಲಿ ಪರಿಭಾವಿಸಿಕೊಂಡಿರುವುದು ಕಂಡುಬರುತ್ತದೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಅಭಿವೃದ್ಧಿಯನ್ನು ಹೀಗೆ ನಿರ್ವಚಿಸಲಾಗಿದೆ.

"ಅಭಿವೃದ್ಧಿಯು ಸಮುದಾಯದ ಬದುಕಿನ ಎಲ್ಲ ಅಂಶಗಳನ್ನು ಒಳಗೊಳ್ಳುತ್ತದೆ. ಅದನ್ನು ವಿಸ್ತೃತ ನೆಲೆಯಲ್ಲಿ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಆರ್ಥಿಕ ಯೋಜನೆಯೆಂಬುದು ಆರ್ಥಿಕೇತರ ಸಂಗತಿಗಳಾದ ಶಿಕ್ಷಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಒಳಗೊಳ್ಳುವ ಒಂದು ಸಂಗತಿಯಾಗಿದೆ" (ಕೇಂದ್ರದ ಎರಡನೆಯ ಪಂಚವಾರ್ಷಿಕ ಯೋಜನೆ ಕರಡು: ೧೯೫೬, ಪು. ೧).

ಅಭಿವೃದ್ಧಿಯಲ್ಲಿ ಶಿಕ್ಷಣ ಹಾಗೂ ಆರೋಗ್ಯಗಳ ಪಾತ್ರವನ್ನು ಕುರಿತಂತೆ ಇಂದು ಹೆಚ್ಚಿನ ಚರ್ಚೆಗಳಾಗುತ್ತವೆ. ಅಮರ್ತ್ಯಸೇನ್ ಅವರ ಮಾನವ ಅಭಿವೃದ್ಧಿ ಪರಿಭಾವನೆಯು ಇಂತಹ ಚರ್ಚೆಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಿದೆ. ಆದರೆ ನಮ್ಮ ಯೋಜನೆಗಳನ್ನು ಪರಿಭಾವಿಸಿಕೊಳ್ಳುವಾಗ ಅವುಗಳನ್ನು ಅತ್ಯಂತ ವಿಸ್ತೃತವಾದ ನೆಲೆಯಲ್ಲಿ, ಅಂದರೆ ಶಿಕ್ಷಣ ಮತ್ತು ಆರೋಗ್ಯವನ್ನು ಒಳಗೊಳ್ಳುವ ರೀತಿಯಲ್ಲಿ ಪರಿಭಾವಿಸಿಕೊಳ್ಳಲಾಗಿತ್ತು ಎಂಬುದು ಬಹಳಮುಖ್ಯವಾದ ಸಂಗತಿಯಾಗಿದೆ. ಈ ಬಗ್ಗೆ ಪ್ರಬಂಧದ ನಾಲ್ಕನೆಯ ಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಅಭಿವೃದ್ಧಿ ಯೋಜನೆಗಳು ಭಾರತದಲ್ಲಿ ಆರಂಭಗೊಂಡ ಬಗ್ಗೆ, ಅವುಗಳ ಉಗಮದ ಬಗ್ಗೆ ಅನೇಕ ತಪ್ಪು ಅಭಿಪ್ರಾಯಗಳಿವೆ. ಪಂಚವಾರ್ಷಿಕ ಯೋಜನೆಗಳಿಗೆ ಪ್ರೇರಣೆ ಭಾರತದ ಒಳಗಿನಿಂದಲೂ ಬಂದಿವೆ ಮತ್ತು ಬಾಹ್ಯವಾಗಿಯೂ ಬಂದಿವೆ. ಸೋವಿಯಟ್ ರಷ್ಯಾದಿಂದ ಪ್ರೇರಣೆ ಪಡೆದು ಯೋಜನೆಗಳನ್ನು ರೂಪಿಸಲಾಗಿದೆ ಎಂಬ ಮಾತು ಕೇಳಿಬರುತ್ತಿದೆ. ಇದು ನಿಜವಿರಬಹುದು. ಆದರೆ ಕರ್ನಾಟಕವನ್ನೇ ತೆಗೆದುಕೊಂಡರೂ ಯೋಜಿತ ಅಭಿವೃದ್ಧಿ ಬಗ್ಗೆ ಪ್ರಯತ್ನಗಳು ಸ್ವಾತಂತ್ರ್ಯಪೂರ್ವದಲ್ಲೇ ಆರಂಭಗೊಂಡಿದ್ದು ಕಂಡುಬರುತ್ತದೆ. ಸರ್ ಎಂ.ವಿಶ್ವೇಶ್ವರಯ್ಯ ಅವರು ೧೯೧೧ರಲ್ಲಿ 'ಮೈಸೂರು ಆರ್ಥಿಕ ಸಮಾವೇಶ'ವನ್ನು ನಡೆಸಿದರು. ಅಲ್ಲಿ ಎರಡು ಸಂಗತಿಗಳ ಬಗ್ಗೆ ಚರ್ಚೆ ನಡೆದವು.

೧. ರಾಜ್ಯದಲ್ಲಿನ ಆರ್ಥಿಕ ಬದುಕನ್ನು ಕುರಿತಂತೆ ಅಧ್ಯಯನ.

೨. ರಾಜ್ಯವನ್ನು ಹೇಗೆ ಅಭಿವೃದ್ಧಿ ಪಡಿಸಬೇಕು ಎಂಬ ಅಧ್ಯಯನ.

ಈ ಸಮಾವೇಶದಲ್ಲಿ ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ ಪ್ರತಿನಿಧಿಗಳು ಭಾಗವಹಿಸಿದ್ದರು. ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ವಿವಿಧ ಮಂಡಳಿಗಳ ಮೂಲಕ ಅವುಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಲಾಯಿತು. ಅಂದ ಮೇಲೆ ಮೈಸೂರು ರಾಜ್ಯದಲ್ಲಿ ಯೋಜಿತ ಅಭಿವೃದ್ಧಿ ಪ್ರಕ್ರಿಯೆಯು ೨೦ನೆಯ ಶತಮಾನದ ಆದಿಭಾಗದಲ್ಲೇ ಆರಂಭಗೊಂಡಿತೆಂದು ಹೇಳಬಹುದು.

**ಪಂಚವಾರ್ಷಿಕ ಯೋಜನೆಗಳಲ್ಲಿ ತೊಡಗಿಸಿದ ಹಣಕಾಸು ಮೊತ್ತ**

**ಕೋಷ್ಟಕ – ೫**

| **ಯೋಜನೆಗಳು** | **ವರ್ಷಗಳು** | **ಕೋಟಿ ರೂ.ಗಳಲ್ಲಿ** |
|---|---|---|
| ೧. ಮೊದಲನೆಯ ಯೋಜನೆ | ೧೯೫೧ – ೫೬ | ರೂ. ೪೦.೫೧ ಕೋಟಿ |
| ೨. ಎರಡನೆಯ ಯೋಜನೆ | ೧೯೫೬ – ೬೧ | ರೂ. ೧೪೨.೫೮ ಕೋಟಿ |
| ೩. ಮೂರನೆಯ ಯೋಜನೆ | ೧೯೬೧ – ೬೬ | ರೂ. ೨೬೪.೧೩ ಕೋಟಿ |
| ೪. ವಾರ್ಷಿಕ ಯೋಜನೆಗಳು | ೧೯೬೬ – ೬೯ | ರೂ. ೧೯೫.೫೧ ಕೋಟಿ |
| ೫. ನಾಲ್ಕನೆಯ ಯೋಜನೆ | ೧೯೬೯ – ೭೪ | ರೂ. ೩೫೯.೮೫ ಕೋಟಿ |
| ೬. ಐದನೆಯ ಯೋಜನೆ | ೧೯೭೮ – ೭೮ | ರೂ. ೮೫೨.೩೯ ಕೋಟಿ |
| ೭. ವಾರ್ಷಿಕ ಯೋಜನೆಗಳು | ೧೯೭೮ – ೮೦ | ರೂ. ೬೪೭.೦೫ ಕೋಟಿ |
| ೮. ಆರನೆಯ ಯೋಜನೆ | ೧೯೮೦ – ೮೫ | ರೂ. ೨೫೦೦ ಕೋಟಿ |
| ೯. ಏಳನೆಯ ಯೋಜನೆ | ೧೯೮೫ – ೯೦ | ರೂ. ೪೦೪೫.೭೦ ಕೋಟಿ |
| ೧೦. ವಾರ್ಷಿಕ ಯೋಜನೆಗಳು | ೧೯೯೦ – ೯೨ | ರೂ. ೩೦೫೯.೭೦ ಕೋಟಿ |
| ೧೧. ಎಂಟನೆಯ ಯೋಜನೆ | ೧೯೯೨ – ೯೭ | ರೂ. ೧೪೮೯೪.೦೮ ಕೋಟಿ |
| ೧೨. ಒಂಬತ್ತನೆಯ ಯೋಜನೆ | ೧೯೯೭ – ೨೦೦೨ | ರೂ. ೨೩೪೦೦.೦೦ ಕೋಟಿ |

ಈ ಯೋಜನೆಯ ಉದ್ದೇಶಗಳು ಹೀಗಿವೆ.

೧. ಹಿಂದಿನ ಎರಡು ಯೋಜನೆಗಳಲ್ಲಿ ಆರಂಭಿಸಿದ ಅಭಿವೃದ್ಧಿ ಕಾರ್ಯಕ್ರಮ ಪ್ರಯತ್ನಗಳ ವೇಗವನ್ನು ಹೆಚ್ಚಿಸುವುದು.

೨. ಕೈಗಾರಿಕಾ ರಂಗದಲ್ಲಿನ ಬೆಳವಣಿಗೆಗೆ ಅನುಗುಣವಾಗಿ ಕೃಷಿ ಅಭಿವೃದ್ಧಿಯನ್ನು ತೀವ್ರಗೊಳಿಸುವುದು.

೩. ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ ಮಟ್ಟದ ನಾಗರಿಕ ಸೌಲಭ್ಯಗಳನ್ನು ಒದಗಿಸುವುದು.

೪. ಮಾಜಿಕ ಮತ್ತು ಆರ್ಥಿಕ ಅಸಮತೋಲನದ ನಿವಾರಣೆಗಾಗಿ ಭೂಸುಧಾರಣೆಯಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

೫. ಸಾಮಾನವ ಸಂಪನ್ಮೂಲದ ಪೂರ್ಣ ಬಳಕೆಗಾಗಿ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು.

೬. ರಾಜ್ಯದಲ್ಲಿ ೬ ರಿಂದ ೧೧ ವಯೋಮಾನದ ಮಕ್ಕಳಿಗೆಲ್ಲ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸುವುದು.

ಮೂರನೆಯ (೧೯೬೧ – ೧೯೬೬) ಯೋಜನೆಗೆ ನಿಗದಿಪಡಿಸಿದ್ದ ಹಣಕಾಸು ಸಂಪನ್ಮೂಲ ರೂ. ೨೪೬.೨೧ ಕೋಟಿ. ಆದರೆ ಖರ್ಚಾದ ಹಣ ರೂ. ೨೬೪.೧೩ ಕೋಟಿ.

**ವಲಯವಾರು ಸಂಪನ್ಮೂಲ ಹಂಚಿಕೆ: ೧೯೫೧ – ೧೯೬೬**

ಮೊದಲ ಮೂರು ಯೋಜನೆಗಳ ವಲಯವಾರು ಹಣಕಾಸು ವಿನಿಯೋಗದ ವಿವರಗಳನ್ನು ಕೋಷ್ಟಕ ೧೦, ೧೧ ಮತ್ತು ೧೨ರಲ್ಲಿ ನೀಡಲಾಗಿದೆ. ಕೋಷ್ಟಕದಲ್ಲಿನ ಮೊದಲ ಮೂರು ಬಾಬ್ತುಗಳನ್ನು 'ಕೃಷಿ'ಯೆಂದು ಪರಿಗಣಿಸಿದರೆ ಅದಕ್ಕೆ ಮೊದಲ ಯೋಜನೆಯಲ್ಲಿ ಮೀಸಲಿಟ್ಟ ಹಣದ ಪ್ರಮಾಣ ಶೇ. ೪೮.೪ ಎರಡನೆಯ ಯೋಜನೆಯಲ್ಲಿ ಅದೇ ಮೂರು ಬಾಬತ್ತುಗಳಿಗೆ ತೆಗೆದಿಟ್ಟ ಹಣದ ಪ್ರಮಾಣ ಶೇ. ೪೩.೬ ಮೂರನೆಯ ಯೋಜನೆಯಲ್ಲಿ ಮೊದಲ ಮೂರು ಬಾಬತ್ತುಗಳಿಗೆ ಪ್ರಮಾಣ ಶೇ. ೪೦.೬. ಇಂಧನ ಮತ್ತು ಸಾರಿಗೆ ಸೇರಿ ಮೂರು ಯೋಜನೆಗಳಲ್ಲಿ ತೆಗೆದಿಟ್ಟ ಹಣದ ಪ್ರಮಾಣ ಕ್ರಮವಾಗಿ ಶೇ. ೩೯.೪, ಶೇ. ೨೫.೭ ಮತ್ತು ಶೇ. ೩೩.೨.

ಒಂದು ರೀತಿಯಲ್ಲಿ ಯೋಜಿತ ಅಭಿವೃದ್ಧಿಗೆ ಅಗತ್ಯವಾದ ಅಡಿಪಾಯವನ್ನು ಮೊದಲೆರಡು ಯೋಜನೆಗಳಲ್ಲಿ ಸಿದ್ಧಪಡಿಸಲಾಯಿತು. ಮೂರನೆಯ ಯೋಜನೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಿರ್ದಿಷ್ಟ ಉದ್ದೇಶದೊಡನೆ ಅಳವಡಿಸಿಕೊಳ್ಳಲಾಯಿತು. ಆಹಾರ ಉತ್ಪಾದನೆಯು ೧೯೫೬ – ೫೭ರಲ್ಲಿ ೩೩.೩೧ ಲಕ್ಷ ಟನ್ ಇದ್ದುದು ೧೯೬೮ – ೬೯ರಲ್ಲಿ ಅದು ೪೪.೯೪ ಟನ್‌ಗೇರಿತು. ನೀರಾವರಿ ಪ್ರದೇಶದ ವಿಸ್ತೀರ್ಣವು ೧೯೫೬ – ೫೭ರಲ್ಲಿ ೭.೪ ಲಕ್ಷ ಹೆಕ್ಟೇರಷ್ಟಿದ್ದುದು ೧೯೬೬ – ೬೭ರಲ್ಲಿ ಅದು ೧೦.೨೧ ಲಕ್ಷ ಹೆಕ್ಟೇರಿಗೇರಿತು. ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯವಾದ ಪ್ರಗತಿ ಸಾಧಿಸಿಕೊಳ್ಳಲಾಯಿತು.

# ೧೦. ಕರ್ನಾಟಕದಲ್ಲಿ ಅಭಿವೃದ್ಧಿ ಯೋಜನೆಗಳು (೨)

ಮೊದಲನೆಯ ಪಂಚವಾರ್ಷಿಕ ಯೋಜನೆ ೧೯೫೧ – ೫೬

ಕೋಷ್ಟಕ – ೧೦ (ಕೋಟಿ ರೂಪಾಯಿಗಳಲ್ಲಿ)

| ವಲಯ | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ |
|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆ | ೫.೦೩ | ೧೦.೬ | ४.೨೨ |
| ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ | ೧.೯೧ | ४.೦ | ೧.೫೬ |
| ನೀರಾವರಿ | ೧೬.೧೦ | ೩೩.೮ | ೧೫.೩೮ |
| ಇಂಧನ | ೧೩.೭೯ | ೨೯.೦ | ೧೦.४೦ |
| ಸಾರಿಗೆ | ४.೯೩ | ೧೦.४ | ४.೮೦ |
| ಕೈಗಾರಿಕೆ | ೨.೦೬ | ४.೩ | ೧.೩೦ |
| ಸಾಮಾಜಿಕ ಸೇವೆಗಳು | ೩.೭೩ | ೭.೯ | ೨.೮೫ |
| ಒಟ್ಟು | ४೭.೫೮ | ೧೦೦.೦೦ | ४೦.೫೧ |

*ಮೂಲ : ಗೌವರ್ನಮೆಂಟ್ ಆಫ್ ಮೈಸೂರು : ೧೯೭೦*

ಎರಡನೆಯ ಪಂಚವಾರ್ಷಿಕ ಯೋಜನೆ ೧೯೫೬ – ೬೧

ಕೋಷ್ಟಕ – ೧೧ (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ |
|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗ | ೧೯.೯೯ | ೧೧.೫ | ೧೮.೩೫ |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | ೧೩.೬೧ | ೯.४ | ೧೧.೦೮ |
| ನೀರಾವರಿ | ೩೩.೯೯ | ೨೨.೭ | ೨೭.೧೦ |
| ಇಂಧನ | ೨೭.೨೮ | ೧೮.೮ | ೨೬.೫೬ |

| | | | |
|---|---|---|---|
| ಸಾರಿಗೆ ಮತ್ತು ಸಂಪರ್ಕ | ೧೦.೦೨ | ೬.೯ | ೧೪.೬೯ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೧.೭೯ | ೮.೧ | ೧೨.೧೦ |
| ಸಾಮಾಜಿಕ ಸೇವೆಗಳು | ೩೨.೩೯ | ೨೨.೩ | ೩೦.೦೬ |
| ಇತರೆ | ೦.೩೬ | ೦.೩ | ೦.೧೦ |
| ಒಟ್ಟು | ೧೪೫.೧೩ | ೧೦೦.೦೦ | ೧೪೨.೫೮ |

*ಮೂಲ : ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೭೦*

**ಮೂರನೆಯ ಪಂಚವಾರ್ಷಿಕ ಯೋಜನೆ ೧೯೬೧ – ೬೬**

**ಕೋಷ್ಟಕ – ೧೨** (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ |
|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆ | ೪೫.೪೪ | ೧೮.೫ | ೬೬.೬೯ |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | ೨೧.೨೨ | ೮.೬ | ೧೭.೬೮ |
| ನೀರಾವರಿ | ೩೩.೧೦ | ೧೩.೫ | ೩೦.೮೬ |
| ಇಂಧನ | ೬೮.೯೮ | ೨೮.೦ | ೬೯.೩೫ |
| ಸಾರಿಗೆ ಮತ್ತು ಸಂಪರ್ಕ | ೧೨.೯೦ | ೫.೨ | ೨೨.೪೭ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೫.೭೪ | ೬.೪ | ೧೫.೪೮ |
| ಸಾಮಾಜಿಕ ಸೇವೆಗಳು | ೪೮.೨೮ | ೧೯.೬ | ೪೧.೦೯ |
| ಇತರೆ | ೦.೫೫ | ೦.೨ | ೦.೫೧ |
| ಒಟ್ಟು | ೨೪೬.೨೧ | ೧೦೦.೦೦ | ೨೬೪.೧೩ |

*ಮೂಲ : ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೭೦*

**ವಾರ್ಷಿಕ ಯೋಜನೆ ೧೯೬೬ – ೬೯**

**ಕೋಷ್ಟಕ – ೧೩** (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ |
|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆ | ೪೩.೮೯ | ೨೬.೭೫ | ೪೬.೬೬ |
| ಸಮುದಾಯ ಅಭಿವೃದ್ಧಿ ಮತ್ತು ಸಹಕಾರ | ೭.೯೧ | ೪.೮೦ | ೮.೪೪ |
| ನೀರಾವರಿ | ೨೩.೩೨ | ೧೪.೧೬ | ೩೩.೫೭ |
| ಇಂಧನ | ೪೮.೭೬ | ೨೯.೬೧ | ೫೫.೫೮ |
| ಸಾರಿಗೆ ಮತ್ತು ಸಂಪರ್ಕ | ೧೦.೫೪ | ೬.೪೧ | ೧೨.೯೮ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೬.೬೫ | ೪.೦೪ | ೮.೯೦ |
| ಸಾಮಾಜಿಕ ಸೇವೆಗಳು | ೨೨.೮೭ | ೧೩.೮೯ | ೨೨.೬೯ |
| ಇತರೆ | ೦.೭೩ | ೦.೪೪ | ೦.೯೦ |
| ಒಟ್ಟು | ೧೬೪.೬೭ | ೧೦೦.೦೦ | ೧೯೫.೫೧ |

*ಮೂಲ : ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೭೦*

### ಯೋಜನಾ ಪ್ರಕ್ರಿಯೆಯಲ್ಲಿ ವ್ಯತ್ಯಯ

ರಾಷ್ಟ್ರಮಟ್ಟದಲ್ಲಿ ಎರಡು ಪ್ರಮುಖ ಕಾರಣಗಳಿಂದಾಗಿ ಮೂರನೆಯ ಯೋಜನೆ ಮುಗಿದ ಮೇಲೆ ನಾಲ್ಕನೆಯ ಯೋಜನೆಯನ್ನು ೧೯೬೬ - ೬೭ರಲ್ಲಿ ಆರಂಭಿಸುವುದು ಸಾಧ್ಯವಾಗಲಿಲ್ಲ. ನಾಲ್ಕನೆಯ ಯೋಜನೆಯನ್ನು ಮುಂದೂಡಲಾಯಿತು. ಇದರಿಂದಾಗಿ ರಾಜ್ಯದಲ್ಲಿ ೧೯೬೬ - ೬೭, ೧೯೬೭ - ೬೮ ಮತ್ತು ೧೯೬೮ - ೬೯ ಹೀಗೆ ಮುರು ವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಹೀಗೆ ನಾಲ್ಕನೆಯಯ ಯೋಜನೆಯನ್ನು ಮೂರು ವರ್ಷ ಮುಂದೂಡಲು ಕಾರಣವಾದ ಎರಡು ಸಂಗತಿಗಳು ಹೀಗಿದ್ದವು.

೧. ಚೀನಾ ಮತ್ತು ಪಾಕಿಸ್ಥಾನಗಳ ಜೊತೆ ಭಾರತವು ೧೯೬೨ರಲ್ಲಿ ಮತ್ತೆ ೧೯೬೫ರಲ್ಲಿ ಯುದ್ಧ ನಡೆಸಬೇಕಾಯಿತು. ಇದರಿಂದಾಗಿ ಸಂಪನ್ಮೂಲವನ್ನು ರಕ್ಷಣಾ ಉದ್ದಿಮೆಗೆ ವರ್ಗಾಯಿಸಬೇಕಾಯಿತು.

೨. ರಾಷ್ಟ್ರವು ೧೯೬೫ - ೬೬ ಮತ್ತು ೧೯೬೬ - ೬೭ರಲ್ಲಿ ತೀವ್ರ ಸ್ವರೂಪದ ಕ್ಷಾಮವನ್ನು ಎದುರಿಸಬೇಕಾಯಿತು. ಇದರ ಪರಿಣಾಮವಾಗಿ ೧೯೬೦ - ೬೧ರಲ್ಲಿ ೩೯.೩೦ ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯು ೧೯೬೫ - ೬೬ರಲ್ಲಿ ೩೫.೪೫ ಲಕ್ಷ ಟನ್‌ಗಳಿಗೆ ಕುಸಿಯಿತು.

**ವಾರ್ಷಿಕ ಯೋಜನೆಗಳು ೧೯೬೬ – ೬೭ರಿಂದ ೧೯೬೮ – ೬೯**

ಕೋಷ್ಟಕ - ೧೩ರಲ್ಲಿ ವಾರ್ಷಿಕ ಯೋಜನೆಗಳ ವಿವರವನ್ನು ನೀಡಲಾಗಿದೆ. ಕೋಷ್ಟಕದಲ್ಲಿ ತೋರಿಸಿರುವಂತೆ ಮೂರು ವರ್ಷದ ಒಟ್ಟು ಸಂಪನ್ಮೂಲದ ವಿನಿಯೋಜನೆಯಲ್ಲಿ ಅತ್ಯಧಿಕ ಶೇ. ೨೯.೬೧ ಇಂಧನ ಕ್ಷೇತ್ರಕ್ಕೆ ಮೀಸಲಾಗಿರಿಸಲಾಗಿತ್ತು. ಕೃಷಿ ಮತ್ತು ತತ್ಸಂಬಂಧಿ ಕ್ಷೇತ್ರಕ್ಕೆ ಶೇ. ೨೬.೬೫ ರಷ್ಟು ಸಂಪನ್ಮೂಲ ವಿನಿಯೋಗಿಸಲಾಯಿತು. ಒಟ್ಟು ಮೂರು ಯೋಜನೆಗಳ ಅವಧಿಯಲ್ಲಿ ವಿನಿಯೋಗಿಸಿದ ಮೊತ್ತ ರೂ. ೧೬೪.೬೭ ಕೋಟಿ. ವಾಸ್ತವವಾಗಿ ವೆಚ್ಚ ಮಾಡಿದ ಮೊತ್ತ ರೂ. ೧೯೫.೫೧ ಕೋಟಿ. ಯುದ್ಧ, ಕ್ಷಾಮ, ವಿದೇಶಿ ನೆರವಿನ ಕಡಿತ ಮುಂತಾದ ಕಾರಣಗಳಿಂದಾಗಿ ಯೋಜನೆಯ ವೆಚ್ಚದಲ್ಲಿ ತೀವ್ರ ಏರುಪೇರು ಉಂಟಾಯಿತು.

ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ತೀವ್ರ ತರದಲ್ಲಿ ಏರಿಸಲಾಯಿತು. ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ೧೯೬೫ - ೬೬ರಲ್ಲಿ ೩೫.೪೫ ಲಕ್ಷ ಟನ್‌ಗಳಷ್ಟಿದ್ದುದು ೧೯೬೮ - ೬೯ರಲ್ಲಿ ಅದು ೪೬.೯೪ ಲಕ್ಷ ಟನ್‌ಗಳಿಗೇರಿತು. ಆರ್ಥಿಕತೆಯಲ್ಲಿ ಒಂದು ಬಗೆಯ ದೃಢತೆಯನ್ನು ಸಾಧಿಸಲಾಯಿತು. ಈ ಕಾರಣದಿಂದಾಗಿ ರಾಜ್ಯಕ್ಕೆ ನಾಲ್ಕನೆಯ ಯೋಜನೆಯನ್ನು ೧೯೬೯ರಲ್ಲಿ ಆರಂಭಿಸುವುದು ಸಾಧ್ಯವಾಯಿತು.

**ನಾಲ್ಕನೆಯ ಪಂಚವಾರ್ಷಿಕ ಯೋಜನೆ : ೧೯೬೯ – ೭೪**

ಯೋಜನಾ ಪ್ರಕ್ರಿಯೆಯಲ್ಲಿ ಉಂಟಾದ ವ್ಯತ್ಯಯವು ೬೦ರ ದಶಕದ ಕೊನೆಯ ಹೊತ್ತಿಗೆ ಸರಿಹೋಯಿತು. ಮೂರು ವರ್ಷಗಳ ವಾರ್ಷಿಕ ಯೋಜನೆ (೧೯೬೬ - ೧೯೬೯)ಗಳ ಮೂಲಕ ಆರ್ಥಿಕತೆಯಲ್ಲಿ ಒಂದು ಬಗೆಯ ದೃಢತೆಯನ್ನು ಮರುಸ್ಥಾಪಿಸಲಾಯಿತು. ವಾಸ್ತವವಾಗಿ ಆಹಾರ ಉತ್ಪಾದನೆಯು ಕ್ರಾಂತಿಕಾರಕ ರೀತಿಯಲ್ಲಿ ೧೯೭೦ರ ಹೊತ್ತಿಗೆ ಏರಿಕೆ ಅನುಭವಿಸಿತು. ಹೊಸ ಕೃಷಿ ನೀತಿಯಿಂದಾಗಿ ರಾಷ್ಟ್ರದಲ್ಲಿ ಹಸಿರುಕ್ರಾಂತಿಗೆ ಅಂದು ನಾಂದಿ ಹಾಡಲಾಯಿತು. ಸಂಕಷ್ಟಗಳಿಂದ ಹೊರಬಂದ ಭಾರತವು ೧೯೬೯ರಲ್ಲಿ ನಾಲ್ಕನೆಯ ಯೋಜನೆಯನ್ನು ಆರಂಭಿಸಿತು.

ಕರ್ನಾಟಕದ ನಾಲ್ಕನೆಯ ಯೋಜನೆಯ ವಲಯವಾರು ವಿನಿಯೋಜನೆಯ ವಿವರವನ್ನು ಕೋಷ್ಟಕ - ೧೪ರಲ್ಲಿ ನೀಡಲಾಗಿದೆ. ಬಹಳ ಕುತೂಹಲಕಾರಿಯಾದ ಸಂಗತಿಯೆಂದರೆ ಇಲ್ಲಿ ಕೃಷಿಯ ಮೇಲಿನ ವಿನಿಯೋಜನೆಯನ್ನು ತೀವ್ರ ಏರಿಸಲಾಯಿತು. ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳ ಮೇಲಿನ ವಿನಿಯೋಜನೆಯು ಇಲ್ಲಿ ಶೇ. ೨.೯೭ರಷ್ಟಿದೆ. ಜಲಸಂಪನ್ಮೂಲ ಹಾಗೂ ಇಂಧನದ ಮೇಲಿನ ವಿನಿಯೋಜನೆ ಪ್ರಮಾಣವು ಶೇ. ೪೭.೦೭ರಷ್ಟಿದೆ. ಕೃಷಿ, ಸಹಕಾರ, ನೀರಾವರಿ ಮತ್ತು ಇಂಧನಗಳಿಗೆ ಸದರಿ ಯೋಜನೆಯಲ್ಲಿ ಶೇ. ೭೩.೯ರಷ್ಟು ಸಂಪನ್ಮೂಲವನ್ನು ಮೀಸಲಿಡಲಾಗಿತ್ತು. ಮುಂದಿನ ಯೋಜನೆಗಳಲ್ಲಿ ನಾವು ನೋಡುವಂತೆ ಕೃಷಿ ಮೇಲಿನ ವಿನಿಯೋಜನೆಯ ಶೇ. ೧೦ ದಾಟುವುದಿಲ್ಲ. ಈ ಹಿನ್ನೆಲೆಯಲ್ಲಿ ನಾಲ್ಕನೆಯ ಯೋಜನೆಯಲ್ಲಿ ಕೃಷಿಗೆ ಯೋಜನೆಯ ಶೇ. ೨೩.೯೭ರಷ್ಟನ್ನು ಮೀಸಲಿಟ್ಟಿರುವುದು ವಿಶಿಷ್ಟವಾದ ಸಂಗತಿಯಾಗಿದೆ. ಈ ಕಾರಣದಿಂದಾಗಿ ನಾಲ್ಕನೆಯ ಯೋಜನೆಯಲ್ಲಿ ಕೃಷಿಕ್ಷೇತ್ರದ ವಾರ್ಷಿಕ ಅಭಿವೃದ್ಧಿ ಪ್ರಮಾಣ ಶೇ. ೩.೬೮ರಷ್ಟಿತ್ತು. ಇಡೀ ದೇಶದಲ್ಲಿ ಕೃಷಿಯ ವಾರ್ಷಿಕ ಅಭಿವೃದ್ಧಿ ಪ್ರಮಾಣ ನಾಲ್ಕನೆಯ ಯೋಜನೆ ಅವಧಿಯಲ್ಲಿ (೧೯೬೯ - ೧೯೭೪) ಶೇ. ೩.೯೨ರಷ್ಟಿದ್ದರೆ ಕರ್ನಾಟಕದಲ್ಲಿ ಅದು ಶೇ. ೩.೬೮ರಷ್ಟಿತ್ತು. ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳನ್ನು ತೆಗೆದುಕೊಂಡರೆ ಅಭಿವೃದ್ಧಿಯ ವಾರ್ಷಿಕ ಪ್ರಮಾಣ ಪ್ರಮಾಣ ಶೇ. ೩.೨೪. ಇದು ರಾಷ್ಟ್ರಮಟ್ಟದ ಅಭಿವೃದ್ಧಿ ಪ್ರಮಾಣವಾದ ಶೇ. ೨.೭೪ಕ್ಕಿಂತ ಅಧಿಕವಿದೆ (ವಿವರಗಳಿಗೆ ನೋಡಿ: ಸತೀಶ್ ಚಂದ್ರನ್, ಕರ್ನಾಟಕ ಅಗ್ರಿಕಲ್ಚರ್: ಪ್ರಾಬ್ಲಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್). ಕೈಗಾರಿಕಾ ಕ್ಷೇತ್ರದಲ್ಲೂ ಕರ್ನಾಟಕವು ನಾಲ್ಕನೆಯ ಯೋಜನೆಯಲ್ಲಿ ಸಾಧಾರಣ ಬೆಳವಣಿಗೆ ಸಾಧಿಸಿಕೊಂಡಿತು.

**ನಾಲ್ಕನೆಯ ಪಂಚವಾರ್ಷಿಕ ಯೋಜನೆ ೧೯೬೯ – ೭೪**

**ಕೋಷ್ಟಕ – ೧೪** (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ | ಶೇಕಡ |
|---|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆ | ೮೩.೯೦ | ೨೩.೯೭ | ೭೫.೭೭ | ೨೧.೦೬ |
| ಸಹಕಾರ | ೧೦.೦೦ | ೨.೮೬ | ೧೮.೮೮ | ೫.೨೫ |
| ಜಲಸಂಪನ್ಮೂಲ ಮತ್ತು ಇಂಧನ | ೧೬೪.೭೫ | ೪೭.೦೭ | ೧೪೭.೭೦ | ೪೧.೦೪ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೪.೭೫ | ೪.೨೧ | ೧೫.೭೨ | ೪.೩೭ |
| ಸಾರಿಗೆ ಮತ್ತು ಸಂಪರ್ಕ | ೧೪.೫೦ | ೪.೧೪ | ೨೫.೧೯ | ೭.೦೦ |
| ಸಾಮಾಜಿಕ ಮತ್ತು ಸಮುದಾಯ ಸೇವೆ | ೬೧.೦೦ | ೧೭.೪೩ | ೭೫.೪೮ | ೨೦.೯೮ |
| ಆರ್ಥಿಕ ಸೇವೆ ಮತ್ತು ಸಾಮಾನ್ಯ ಸೇವೆ | ೧.೧೦ | ೦.೩೧ | ೧.೧೧ | ೦.೩೧ |
| ಒಟ್ಟು | ೩೫೦.೦೦ | ೧೦೦.೦೦ | ೩೫೯.೮೫ | ೧೦೦.೦೦ |

***ಮೂಲ :*** *ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೮೦*

ಈ ಯೋಜನೆಯ ಗಾತ್ರವು (ರೂ. .೩೫೦ ಕೋಟಿ) ಮೂರನೆಯ ಯೋಜನೆಯ ವಿನಿಯೋಜನೆಗಿಂತ ಶೇ. ೪೨.೧೫ರಷ್ಟು ಅಧಿಕವಾಗಿತ್ತು. ನಿಗದಿಪಡಿಸಿದ ಮೊತ್ತಕ್ಕಿಂತ ವೆಚ್ಚ ಮಾಡಿದ ಮೊತ್ತವು ಅಧಿಕವಾಗಿತ್ತು. ಈ ಯೋಜನೆಗೆ ನಿಗದಿಪಡಿಸಿದ್ದ ಮೊತ್ತ ರೂ. ೩೫೦ ಕೋಟಿ. ಆದರೆ ವಾಸ್ತವವಾಗಿ ಖರ್ಚು ಮಾಡಿದ ಮೊತ್ತ ರೂ. ೩೫೯.೮೫ ಕೋಟಿ.

ಎರಡನೆಯ ಮತ್ತು ಮೂರನೆಯ ಯೋಜನೆಗಳಲ್ಲಿ ಕೈಗಾರಿಕೆ ಮತ್ತು ಗಣಿಗಾರಿಕೆಗೆ ಮೀಸಲಿಟ್ಟ ಪ್ರಮಾಣ ಶೇ. ೧೦ಕ್ಕಿಂತ ಅಧಿಕವಿತ್ತು. ಆದರೆ ನಾಲ್ಕನೆಯ ಯೋಜನೆಯಲ್ಲಿ ಕೈಗಾರಿಕೆ ಮತ್ತು ಗಣಿಗಾರಿಕೆ ಮೇಲೆ ವಿನಿಯೋಗಿಸಿದ ಪ್ರಮಾಣವು ಕೇವಲ ಶೇ. ೪.೨೧.

**ಐದು, ಆರು ಮತ್ತು ಏಳನೆ ಯೋಜನೆಗಳು : ೧೯೭೪ ರಿಂದ ೧೯೯೦**

ಕೋಷ್ಟಕ - ೧೫, ೧೬, ೧೭ ಮತ್ತು ೧೮ರಲ್ಲಿ ಐದು, ಆರು ಮತ್ತು ಏಳನೆಯ ಯೋಜನೆಗಳು ವಲಯವಾರು ವಿನಿಯೋಜನೆ ವಿವರಗಳನ್ನು ನೀಡಲಾಗಿದೆ. ಈ ಯೋಜನಾ ಅವಧಿಯಲ್ಲಿ ೧೯೭೮ - ೮೦ರಲ್ಲಿ ವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. (ನೋಡಿ: ಕೋಷ್ಟಿಕ - ೧೬). ವಾಸ್ತವವಾಗಿ ಐದನೆಯ ಯೋಜನೆಯು ತನ್ನ ಪೂರ್ಣಾವಧಿಯಾದ ಐದು ವರ್ಷಗಳನ್ನು ಪೂರೈಸಲಿಲ್ಲ. ಒಂದು ವರ್ಷ ಮೊದಲೇ ಅದನ್ನು ರದ್ದುಪಡಿಸಲಾಯಿತು. ಅದು ೧೯೭೯ಕ್ಕೆ ಕೊನೆಗೊಳ್ಳುವುದಕ್ಕೆ ಪ್ರತಿಯಾಗಿ ೧೯೭೮ಕ್ಕೆ ಕೊನೆಗೊಂಡಿತು. ಐದು ಮತ್ತು ಆರನೆಯ ಯೋಜನೆಗಳ ನಡುವೆ ಎರಡು ವರ್ಷಗಳ ಅಂತರ ಇದರಿಂದ ಉಂಟಾಯಿತು. ಅದರ ವಿವರವನ್ನು ಕೋಷ್ಟಕ - ೧೬ರಲ್ಲಿ ನೀಡಲಾಗಿದೆ.

ಐದನೆಯ ಪಂಚವಾರ್ಷಿಕ ಯೋಜನೆ ೧೯೭೪ – ೭೯

ಕೋಷ್ಟಕ – ೧೫ (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ (೧೯೭೪ – ೭೮) | ಶೇಕಡ | ಮಾಡಿದ ವೆಚ್ಚ (೧೯೭೪ – ೭೯) | ಶೇಕಡ |
|---|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು | ೧೬೧.೪೪ | ೧೫.೦೦ | ೧೨೭.೯೩ | ೧೫.೦೧ |
| ಸಹಕಾರ | ೨೪.೭೦ | ೨.೨೯ | ೨೭.೦೭ | ೩.೧೮ |
| ಜಲಸಂಪನ್ಮೂಲ ಮತ್ತು ಇಂಧನ | ೫೭೪.೯೩ | ೫೩.೪೨ | ೪೫೦.೮೦ | ೫೨.೮೯ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೪೨.೬೯ | ೩.೯೭ | ೪೩.೩೭ | ೫.೦೯ |
| ಸಾರಿಗೆ ಮತ್ತು ಸಂಪರ್ಕ | ೬೪.೦೪ | ೫.೯೫ | ೪೫.೭೪ | ೫.೩೭ |
| ಸಾಮಾಜಿಕ ಮತ್ತು ಸಮುದಾಯ ಸೇವೆ | ೧೮೭.೯೭ | ೧೭.೪೬ | ೧೫೩.೨೯ | ೧೭.೯೮ |
| ಆರ್ಥಿಕ ಸೇವೆ ಮತ್ತು ಸಾಮಾನ್ಯ ಸೇವೆ | ೪.೨೦ | ೦.೩೯ | ೩.೬೬ | ೦.೪೩ |
| **ಒಟ್ಟು** | **೧೦೭೬.೩೩** | **೧೦೦.೦೦** | **೮೫೨.೩೯** | **೧೦೦.೦೦** |

*ಮೂಲ : ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೮೦*

ವಾರ್ಷಿಕ ಯೋಜನೆ ೧೯೭೮ – ೮೦

ಕೋಷ್ಟಕ – ೧೬ (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | ನಿಗದಿಪಡಿಸಿದ ಮೊತ್ತ | ಶೇಕಡ | ಮಾಡಿದ ವೆಚ್ಚ | ಶೇಕಡ |
|---|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು | ೯೫.೯೩ | ೧೩.೧೩ | ೯೨.೩೬ | ೧೪.೨೭ |
| ಸಹಕಾರ | ೧೪.೮೨ | ೨.೦೩ | ೧೫.೨೭ | ೨.೩೬ |
| ಜಲಸಂಪನ್ಮೂಲ ಮತ್ತು ಇಂಧನ | ೩೯೧.೯೭ | ೫೩.೬೪ | ೩೧೯.೭೧ | ೪೯.೪೧ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೪೪.೩೪ | ೬.೦೭ | ೪೮.೪೫ | ೭.೪೯ |
| ಸಾರಿಗೆ ಮತ್ತು ಸಂಪರ್ಕ | ೩೭.೮೮ | ೫.೧೮ | ೪೩.೧೮ | ೬.೬೭ |

| | | | | |
|---|---|---|---|---|
| ಸಾಮಾಜಿಕ ಮತ್ತು ಸಮುದಾಯ ಸೇವೆ | ೧೪೩.೦೭ | ೧೯.೫೮ | ೧೨೩.೯೮ | ೧೯.೧೬ |
| ಆರ್ಥಿಕ ಸೇವೆ | ೧.೦೨ | ೦.೧೪ | ೦.೪೯ | ೦.೦೮ |
| ಸಾಮಾಜಿಕ ಸೇವೆ | ೧.೬೩ | ೦.೨೨ | ೩.೬೩ | ೦.೫೬ |
| **ಒಟ್ಟು** | **೭೩೦.೬೬** | **೧೦೦.೦೦** | **೬೪೭.೦೫** | **೧೦೦.೦೦** |

*ಮೂಲ : ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೮೦*

**ಆರನೆಯ ವಾರ್ಷಿಕ ಯೋಜನೆ ೧೯೮೦ – ೮೫**

**ಕೋಷ್ಟಕ – ೧೭** (ಕೋಟಿ ರೂಪಾಯಿಗಳಲ್ಲಿ)

| **ವಲಯಗಳು** | **ನಿಗದಿಪಡಿಸಿದ ಮೊತ್ತ** | **ಶೇಕಡ** |
|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು | ೨೬೬.೫೦ | ೧೦.೬೬ |
| ಸಹಕಾರ | ೫೦.೦೦ | ೨.೦೦ |
| ಜಲಸಂಪನ್ಮೂಲ ಮತ್ತು ಇಂಧನ | ೧೧೧೪.೫೫ | ೪೪.೫೮ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೬೪.೦೦ | ೬.೫೬ |
| ಸಾರಿಗೆ ಮತ್ತು ಸಂಪರ್ಕ | ೧೫೦.೦೦ | ೬.೦೦ |
| ಸಾಮಾಜಿಕ ಮತ್ತು ಸಮುದಾಯ ಸೇವೆ | ೬೧೨.೦೦ | ೨೪.೪೮ |
| ಆರ್ಥಿಕ ಸೇವೆಗಳು | ೪.೬೫ | ೦.೧೯ |
| ಸಾಮಾನ್ಯ ಸೇವೆ | ೩.೩೦ | ೦.೧೩ |
| ಒಟ್ಟು | ೨೩೬೫.೦೦ | –– |
| | + ೧೩೫೦೦ | ೫.೪೦ |
| | ೨೫೦೦.೦೦ | ೧೦೦.೦೦ |

**ಮೂಲ :** ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೮೦

**ಏಳನೆಯ ಪಂಚವಾರ್ಷಿಕ ಯೋಜನೆ ೧೯೮೫ – ೯೦**

**ಕೋಷ್ಟಕ – ೧೮** (ಕೋಟಿ ರೂಪಾಯಿಗಳಲ್ಲಿ)

| **ವಲಯಗಳು** | **ನಿಗದಿಪಡಿಸಿದ ಮೊತ್ತ** | **ಶೇಕಡ** | **ಮಾಡಿದ ವೆಚ್ಚ** | **ಶೇಕಡ** |
|---|---|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು ಹಾಗೂ ಸಹಕಾರ | ೩೦೧.೮೦ | ೮.೪೪ | ೩೩೧.೫೬ | ೮.೧೯ |
| ಗ್ರಾಮೀಣ ಅಭಿವೃದ್ಧಿ | ೧೬೯.೧೨ | ೪.೭೩ | ೩೮೪.೫೫ | ೯.೫೦ |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೭೪೬.೦೦ | ೨೦.೮೭ | ೭೬೯.೫೮ | ೧೯.೦೨ |
| ಇಂಧನ | ೮೦೦.೪೮ | ೨೨.೩೯ | ೮೨೮.೮೬ | ೨೦.೪೮ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೨೪೧.೦೮ | ೬.೭೪ | ೩೩೮.೧೦ | ೮.೩೫ |
| ಸಾರಿಗೆ | ೨೪೩.೦೦ | ೬.೮೦ | ೨೦೩.೫೬ | ೫.೦೩ |
| ಸಾಮಾಜಿಕ ಸೇವೆಗಳು | ೧೦೧೨.೪೫ | ೨೮.೩೨ | ೧೧೬೮.೨೬ | ೨೮.೮೭ |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೪.೦೦ | ೦.೧೧ | ೩.೬೫ | ೦.೦೯ |
| ಸಾಮಾನ್ಯ ಆರ್ಥಿಕ ಸೇವೆಗಳು | ೨೯.೦೭ | ೦.೮೧ | ೭.೨೭ | ೦.೧೭ |
| ಸಾಮಾನ್ಯ ಸೇವೆಗಳು | ೨೮.೦೦ | ೦.೭೮ | ೪೯.೧೮ | ೧.೨೧ |
| ವಿಶೇಷ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ | – | – | | |
| **ಒಟ್ಟು** | **೩೫೭೫.೦೦** | **೧೦೦.೦೦** | **೪೦೪೫.೭೦** | **೧೦೦.೦೦** |

***ಮೂಲ :*** *ಗೌವರ್ನ್‌ಮೆಂಟ್ ಆಫ್ ಮೈಸೂರು : ೧೯೯೦*

ಕೋಷ್ಟಕ - ೧೯ ರಲ್ಲಿ ಕರ್ನಾಟಕದ ಕೃಷಿರಂಗದ ಬೆಳವಣಿಗೆ ಪ್ರಮಾಣದ ವಿವರವನ್ನು ನೀಡಲಾಗಿದೆ.

**ವಾರ್ಷಿಕ ಬೆಳವಣಿಗೆ ಪ್ರಮಾಣ (ನೈಜ ವರಮಾನ)**

**ಕೋಷ್ಟಕ – ೧೯**

| **ಅವಧಿ** | **ಕರ್ನಾಟಕ** | | **ಭಾರತ** | |
|---|---|---|---|---|
| | **ಕೃಷಿ** | **ಕೃಷಿ ಮತ್ತು ಇತರೆ ಚಟುವಟಿಕೆಗಳು** | **ಕೃಷಿ** | **ಕೃಷಿ ಮತ್ತು ಇತರೆ ಚಟುವಟಿಕೆಗಳು** |
| ನಾಲ್ಕನೆಯ ಯೋಜನೆ ೧೯೬೯ - ೭೪ | ೩.೬೬ | ೩.೨೪ | ೩.೯೨ | ೨.೭೪ |
| ಐದನೆಯ ಯೋಜನೆ ೧೯೭೪ - ೭೮ | ೩.೨೧ | ೨.೯೬ | ೪.೪೮ | ೩.೮೯ |
| ಆರನೆಯ ಯೋಜನೆ ೧೯೮೦ - ೮೫ | ೩.೭೧ | ೩.೫೩ | ೬.೩೪ | ೫.೭೮ |
| ಏಳನೆಯ ಯೋಜನೆ ೧೯೮೫ - ೮೯ | ೧.೮೯ | ೧.೭೧ | ೪.೦೬ | ೩.೭೫ |

*ಆಕರ : ಸತೀಶ್‌ಚಂದ್ರನ್‌ಟಿ.ಆರ್., ಕರ್ನಾಟಕ ಅಗ್ರಿಕಲ್ಚರ್: ಪ್ರಾಬ್ಲಮ್ಸ್‌ಆಂಡ್ ಪ್ರಾಸ್ಪೆಕ್ಟ್*

ಈ ನಾಲ್ಕು ಯೋಜನೆಗಳ ಅವಧಿಯಲ್ಲಿ (೧೯೭೪ - ೧೯೯೦) ಕೃಷಿ ವಲಯದ ಬೆಳವಣಿಗೆ ಪ್ರಮಾಣವು ಅತ್ಯಂತ ಕೆಳಮಟ್ಟ ತಲುಪಿಬಿಟ್ಟಿತು. ಅನೇಕ ಬಗೆಯ ಸಂಕಷ್ಟವನ್ನು ಕೃಷಿ ಎದುರಿಸಬೇಕಾಯಿತು. ಈ ನಾಲ್ಕು ಯೋಜನೆಗಳ ಅವಧಿಯಲ್ಲಿ ರಾಜ್ಯದ ಕೃಷಿಯ ಬೆಳವಣಿಗೆ ಪ್ರಮಾಣವು ದೇಶದ ಕೃಷಿ ಬೆಳವಣಿಗೆ ಪ್ರಮಾಣಕ್ಕಿಂತ ಕೆಳಮಟ್ಟದಲ್ಲಿತ್ತು. ಕೃಷಿಯ ಬೆಳವಣಿಗೆ ಪ್ರಮಾಣವು ಏಳನೆಯ ಯೋಜನಾವಧಿಯಲ್ಲಿ ಅತ್ಯಂತ ಕೆಳಮಟ್ಟವನ್ನು (ಶೇ. ೧.೮೯) ತಲುಪಿರುವುದು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

ಯೋಜನೆಯ ಗಾತ್ರವು ಐದನೆಯ ಯೋಜನೆಯಲ್ಲಿ ರೂ. ೧೦೭೬.೩೩ ಕೋಟಿಯಷ್ಟಿದ್ದುದು ಏಳನೆಯ ಯೋಜನೆಯಲ್ಲಿ ಅದು ರೂ. ೩೫೭೫ ಕೋಟಿಯಷ್ಟಾಗಿದೆ. ಈ ಯೋಜನೆಗಳ ಅವಧಿಯಲ್ಲಿ ಸಾಮಾಜಿಕ ಸೇವೆಗಳಿಗೆ ಮೀಸಲಿಟ್ಟ ಪ್ರಮಾಣವು ಪ್ರಮಾಣ ಶೇ. ೧೭.೪೬ರಷ್ಟಿತ್ತು. ಆದರೆ ಆರನೆಯ ಯೋಜನೆಯಲ್ಲಿ ಅದು ಶೇ. ೨೪.೪೮ಕ್ಕೆ ಮತ್ತು ಏಳನೆಯ ಯೋಜನೆಯಲ್ಲಿ ಅದು ಶೇ. ೨೮.೩೨ಕ್ಕೆ ಏರಿಕೆಯಾಗಿದೆ. ಈ ವಲಯದ ಎರಡು ಮುಖ್ಯ ಭಾಗಗಳೆಂದರೆ ಶಿಕ್ಷಣ ಮತ್ತು ಆರೋಗ್ಯ ಯೋಜನಾ ಪ್ರಕ್ರಿಯೆಯಲ್ಲಿ ಉಂಟಾದ ಬಹುಮುಖ್ಯ ಬದಲಾವಣೆ ಇದಾಗಿದೆ. ಮುಂದೆ ನೋಡುವಂತೆ ಹತ್ತನೆಯ ಯೋಜನೆಯಲ್ಲಿ ಅದರ ಪಾಲು ಶೇ. ೩೨.೫೬ಕ್ಕೇರುತ್ತದೆ.

ಈ ಯೋಜನೆಗಳ ಅವಧಿಯಲ್ಲಿ (೧೯೭೫ - ೧೯೯೦) ದೇಶವು ಅನೇಕ ಬಗೆಯ ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಅನುಭವಿಸಿತು. ಅಭಿವೃದ್ಧಿಯು ತುಂಬಾ ಕುಂಟಿತಗೊಂಡಿತು. ಅತ್ಯಂತ ಆತಂಕಕಾರಿಯಾದ ಸಂಗತಿಯೆಂದರೆ ಆಹಾರದ ಉತ್ಪಾದನೆಯು ೧೯೮೦ - ೮೧ರಲ್ಲಿ ೬೨ ಲಕ್ಷ ಟನ್‌ಗಳಿಷ್ಟಿದ್ದುದು ೧೯೯೦ - ೯೧ರಲ್ಲೂ ಅದು ೬೨ ಲಕ್ಷ ಟನ್‌ಗಳಲ್ಲೇ ಸ್ಥಿರಗೊಂಡಿತ್ತು. ಹೀಗೆ ಎಂಬತ್ತರ ದಶಕವು ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಮಂದಗತಿಯ ಅವಧಿಯಾಗಿತ್ತು.

**ಎಂಟು, ಒಂಬತ್ತು ಮತ್ತು ಹತ್ತನೆಯ ಯೋಜನೆಗಳು: ೧೯೯೦ – ೯೧ ರಿಂದ ೨೦೦೬ – ೦೭**

ಅನೇಕ ಆರ್ಥಿಕ - ರಾಜಕೀಯ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ದೇಶದಲ್ಲಿ ಏಳನೆಯ ಯೋಜನೆಯ ಮುಗಿದ ಮೇಲೆ, ಅಂದರೆ ೧೯೯೦ - ೯೧ರಲ್ಲಿ ಎಂಟನೆಯ ಯೋಜನೆಯನ್ನು ಆರಂಭಿಸುವುದು ಸಾಧ್ಯವಾಗಲಿಲ್ಲ. ಏಳನೆಯ ಮತ್ತು ಎಂಟನೆಯ ಯೋಜನೆಗಳ ಮಧ್ಯೆ (೧೯೯೦ - ೯೧ ಮತ್ತು ೧೯೯೧ - ೯೨) ವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು.

ಕೋಷ್ಟಕ - ೧೦,೧೧,೧೨ ಮತ್ತು ೧೩ ರಲ್ಲಿ ಕ್ರಮವಾಗಿ ವಾರ್ಷಿಯ ಯೋಜನೆಗಳು (೧೯೯೦ - ೯೨) ಎಂಟನೆಯ ಯೋಜನೆ (೧೯೯೨ - ೧೯೯೭), ಒಂಬತ್ತನೆಯ ಯೋಜನೆ (೧೯೯೭ - ೨೦೦೨) ಮತ್ತು ಹತ್ತನೆಯ ಯೋಜನೆ (೨೦೦೨ - ೨೦೦೭) ಗಳ ವಲಯವಾರು ವಿನಿಯೋಜನೆಯ ವಿವರಗಳನ್ನು ನೀಡಲಾಗಿದೆ.

# ೧೦. ಕರ್ನಾಟಕದಲ್ಲಿ ಅಭಿವೃದ್ಧಿ ಯೋಜನೆಗಳು (೩)

**ವಾರ್ಷಿಕ ಯೋಜನೆಗಳು ೧೯೯೦ – ೯೨**

**ಕೋಷ್ಟಕ – ೧೦** (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | **ನಿಗದಿಪಡಿಸಿದ ಶೇಕಡ ಮೊತ್ತ** | **ಮಾಡಿದ ವೆಚ್ಚ** |
|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು ಹಾಗೂ ಸಹಕಾರ | ೨೫೨.೪೮ | ೨೪೪.೩೭ |
| ಗ್ರಾಮೀಣ ಅಭಿವೃದ್ಧಿ | ೧೯೭.೬೧ | ೧೫೬.೫೬ |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೪೫೯.೪೪ | ೪೭೧.೫೯ |
| ಇಂಧನ | ೬೪೭.೪೬ | ೮೪೮.೮೮ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೮೪.೦೯ | ೨೨೩.೯೬ |
| ಸಾರಿಗೆ | ೧೫೨.೮೬ | ೧೯೩.೨೮ |
| ಸಾಮಾಜಿಕ ಸೇವೆಗಳು | ೬೨೮.೭೪ | ೭೩೭.೯೧ |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೩.೦೩ | ೨.೯೬ |
| ಸಾಮಾನ್ಯ ಆರ್ಥಿಕ ಸೇವೆಗಳು | ೧೩೮.೨೪ | ೧೪೨.೨೩ |
| ಸಾಮಾನ್ಯ ಸೇವೆಗಳು | ೩೮.೮೫ | ೩೭.೯೬ |
| **ಒಟ್ಟು** | **೨೭೦೨.೮೦** | **೩೦೫೯.೭೦** |

***ಮೂಲ :*** *ಗೌವರ್ನ್‌ಮೆಂಟ್ ಆಫ್ ಕರ್ನಾಟಕ : ೧೯೮೦*

**ಎಂಟನೆಯ ಪಂಚವಾರ್ಷಿಕ ಯೋಜನೆ ೧೯೯೨ – ೯೭**

**ಕೋಷ್ಟಕ – ೨೧** (ಕೋಟಿ ರೂಪಾಯಿಗಳಲ್ಲಿ)

| ವಲಯಗಳು | **ನಿಗದಿಪಡಿಸಿದ ಮೊತ್ತ** | **ಮಾಡಿದ ವೆಚ್ಚ** |
|---|---|---|
| **೧. ಆರ್ಥಿಕ ಸೇವೆಗಳು** | | |
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು | ೯೦೨.೦೦ (೭.೩೩) | ೯೩೭.೭೮ (೬.೩೦) |
| ಗ್ರಾಮೀಣ ಅಭಿವೃದ್ಧಿ | ೪೩೩.೦೦ (೩.೫೨) | ೮೪೩.೦೬ (೫.೬೬) |
| ವಿಶೇಷ ಪ್ರದೇಶ ಅಭಿವೃದ್ಧಿ | ೫೭೫.೦೦ (೪.೬೭) | ೪೦೪.೮೭ (೨.೭೨) |

| | | |
|---|---|---|
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೨೩೮೪.೦೦ (೧೯.೩೮) | ೩೩೦೦.೯೧ (೨೨.೧೭) |
| ಇಂಧನ | ೩೦೪೧.೦೦ (೨೪.೭೨) | ೩೦೩೧.೭೮ (೨೦.೩೭) |
| ಕೈಗಾರಿಕೆ ಮತ್ತು ಗಣಿಗಾರಿಕೆ | ೯೮೪.೦೦ (೮.೦೦) | ೮೦೯.೦೪ (೫.೪೩) |
| ಸಾರಿಗೆ | ೪೪೮.೦೦ (೩.೬೪) | ೮೬೬.೧೭ (೫.೨೨) |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೧೧.೦೦ (೦.೦೭) | ೧೯.೯೮ (೦.೧೩) |
| ಸಾಮಾನ್ಯ ಆರ್ಥಿಕ ಸೇವೆಗಳು | ೧೦೧.೦೬ (೦.೮೨) | ೩೫.೩೧ (೦.೨೪) |
| **ಒಟ್ಟು** | **೮೮೭೯.೦೬ (೭೨.೧೯)** | **೧೦೨೪೮.೯೦ (೬೮.೮೧)** |
| **೨. ಸಾಮಾಜಿಕ ಸೇವೆಗಳು** | | |
| ಶಿಕ್ಷಣ ಕಲೆ, ಕ್ರೀಡೆ ಮತ್ತು ಸಂಸ್ಕೃತಿ | ೧೦೨೬.೬೫ (೮.೩೫) | ೧೨೨೪.೧೨ (೮.೨೨) |
| ಆರೋಗ್ಯ | ೩೪೨.೦೦ (೨.೭೮) | ೪೬೧.೯೨ (೩.೧೦) |
| ನೀರು ಸರಬರಾಜು | ೬೨೫.೦೦ (೫.೦೮) | ೮೧೫.೯೩ (೫.೪೮) |
| ವಸತಿ | ೬೯೯.೬೦ (೫.೬೯) | ೬೪೩.೭೧ (೪.೩೨) |
| ನಗರಾಭಿವೃದ್ಧಿ | ೮೩.೦೦ (೦.೬೭) | ೩೨೩.೮೩ (೨.೧೭) |
| ಮಾಹಿತಿ ಮತ್ತು ಪ್ರಚಾರ | ೧೪.೦೦ (೦.೧೧) | ೧೮.೩೭ (೦.೧೨) |
| ಪ.ಜಾ.ಪ.ಪಂ. ಹಾಗೂ ಹಿಂದುಳಿದವರ ಅಭಿವೃದ್ಧಿ | ೨೫.೦೦ (೨.೦೩) | ೭೫೨.೧೫ (೫.೦೫) |
| ಕಾರ್ಮಿಕರು ಮತ್ತು ಕಾರ್ಮಿಕ ಕಲ್ಯಾಣ | ೩೭.೦೦ (೦.೩೦) | ೩೦.೨೧ (೦.೨೦) |
| ಸಾಮಾಜಿಕ ಕಲ್ಯಾಣ ಮತ್ತು ಪೌಷ್ಟಿಕತೆ | ೧೯೨.೨೯ (೧.೫೬) | ೨೨೯.೩೧ (೧.೫೪) |
| **ಒಟ್ಟು** | **೩೨೬೯.೫೪ (೨೬.೫೮)** | **೪೪೯೯.೫೫ (೩೦.೨೧)** |
| **೩. ಸಾಮಾನ್ಯ ಸೇವೆಗಳು** | ೧೫೧.೪೦ (೧.೨೩) | ೧೪೮೯೦.೦೮ (೧೦೦.೦೦) |

*ಟಿಪ್ಪಣಿ: ಆವರಣದಲ್ಲಿ ಒಟ್ಟು ಮೊತ್ತದ ಶೇಕಡ ಪ್ರಮಾಣವನ್ನು ನೀಡಲಾಗಿದೆ.*

*ಮೂಲ: ಗೌವರ್ನಮೆಂಟ್‌ಆಫ್‌ಕರ್ನಾಟಕ ೧೯೯೦*

ಒಂಬತ್ತನೆಯ ಪಂಚವಾರ್ಷಿಕ ಯೋಜನೆ ೧೯೯೭ – ೨೦೦೨

ಕೋಷ್ಟಕ – ೨೨ (ಕೋಟಿ ರೂಪಾಯಿಗಳಲ್ಲಿ)

| **ವಲಯಗಳು** | **ನಿಗದಿಪಡಿಸಿದ ಮೊತ್ತ** | **ಶೇಕಡ** |
|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು ಹಾಗೂ ಸಹಕಾರ | ೧೧೧೪.೦೦ | ೪.೭೬ |
| ಗ್ರಾಮೀಣ ಅಭಿವೃದ್ಧಿ | ೧೧೭೩.೯೭ | ೫.೦೨ |
| ವಿಶೇಷ ಪ್ರದೇಶ ಅಭಿವೃದ್ಧಿ | ೫೫೫.೦೦ | ೨.೩೭ |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೬೧೭೦.೦೦ | ೨೬.೩೭ |

| | | |
|---|---|---|
| ಇಂಧನ | ೩೭೪೫.೦೦ | ೧೬.೦೦ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೦೨೬.೦೦ | ೪.೩೮ |
| ಸಾರಿಗೆ | | |
| ಸಂಪರ್ಕ, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೪೦.೦೦ | ೦.೧೭ |
| ಸಾಮಾನ್ಯ ಆರ್ಥಿಕ ಸೇವೆಗಳು | ೧೦೫.೦೦ | ೦.೪೫ |
| ಸಾಮಾಜಿಕ ಸೇವೆಗಳು | ೭೨೧೦೬.೦೩ | ೩೦.೭೯ |
| ಸಾಮಾನ್ಯ ಸೇವೆಗಳು | ೧೭೫.೦೦ | ೦.೭೫ |
| ಅರಣ್ಯ ಮತ್ತು ವನ್ಯಜೀವಿಗಳು | ೩೫೦.೦೦ | ೧.೫೦ |
| **ಒಟ್ಟು** | **೨೩೪೦೦.೦೦** | **೧೦೦.೦೦** |

***ಮೂಲ :*** *ಗೌವರ್ನ್‌ಮೆಂಟ್ ಆಫ್ ಕರ್ನಾಟಕ : ೧೯೯೭*

ಈ ಯೋಜನೆಗಳ ಅವಧಿಯಲ್ಲಿ ಕೃಷಿಯ ಪಾಲು ಶೇ. ೫ ಕ್ಕೆ ಕುಸಿದಿದೆ. ಮೊದಲ ಏಳು ಯೋಜನೆಗಳ ಅವಧಿಯಲ್ಲಿ ಅದು ಶೇ. ೧೦ ರಷ್ಟಿತ್ತು. ಆದರೆ ಸಾಮಾಜಿಕ ಸೇವೆಗಳ ಪಾಲು ಮಾತ್ರ ಹಿಂದೆ ಶೇ. ೨೦ ಕ್ಕಿಂತ ಕಡಿಮೆಯಿತ್ತು. ಇದು ಎಂಟನೆಯ ಯೋಜನೆಯಲ್ಲಿ ಶೇ. ೨೬.೫೮ಕ್ಕೆ, ಒಂಬತ್ತನೆಯ ಯೋಜನೆಯಲ್ಲಿ ಶೇ ೩೦.೭೯ ಮತ್ತು ಹತ್ತನೆಯ ಯೋಜನೆಯಲ್ಲಿ ಶೇ. ೩೨.೫೦ ಕ್ಕೆ ಏರಿಕೆಯಾಗಿರುವುದು ಕಂಡುಬರುತ್ತದೆ.

ಸಾಮಾಜಿಕ ಸೇವೆಗಳು ಮಾನವ ಅಭಿವೃದ್ಧಿ ಸೂಚಿಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಒಳಗೊಳ್ಳುತ್ತವೆ. ಹೀಗೆ ೧೯೯೦ರ ನಂತರ ಯೋಜನೆಗಳಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳಿಗೆ ಹೆಚ್ಚಿನ ಒತ್ತನ್ನು ನೀಡಲು ತೊಡಗಿದ್ದು ಕಂಡುಬರುತ್ತದೆ.

ನೀರಾವರಿ ಮತ್ತು ಇಂಧನಗಳ ಪಾಲು ಇಲ್ಲಿನ ಮೂರು ಯೋಜನೆಗಳು ಅವಧಿಯಲ್ಲಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಇವೆರಡೂ ವಲಯಗಳಿಗೆ ಎಂಟನೆಯ ಯೋಜನೆಯಲ್ಲಿ ಶೇ. ೪೪.೧ ರಷ್ಟು ಹಣವನ್ನು ಮೀಸಲಿಡಲಾಗಿತ್ತು.

**ಹತ್ತನೆಯ ಪಂಚವಾರ್ಷಿಕ ಯೋಜನೆ : ೨೦೦೨ – ೨೦೦೭**

**ಕೋಷ್ಟಕ – ೨೩**

| **ವಲಯಗಳು** | **ನಿಗದಿಪಡಿಸಿದ ಮೊತ್ತ (ಕೋಟಿ ರೂಪಾಯಿಗಳಲ್ಲಿ)** | **ಶೇಕಡ** |
|---|---|---|
| ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು | ೨೩೪೬.೯೪ | ೫.೩೯ |
| ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ | ೨೨೨೭.೭೨ | ೫.೧೧ |
| ವಿಶೇಷ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳು | ೬೪೦.೭೪ | ೧.೪೭ |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೧೪೧೭೬.೫೭ | ೩೨.೫೫ |
| ಇಂಧನ | ೨೨೬೬.೯೫ | ೫.೨೦ |
| ಕೈಗಾರಿಕೆ ಮತ್ತು ಗಣಿಗಾರಿಕೆ | ೧೪೫೨.೮೭ | ೩.೩೪ |
| ಸಾರಿಗೆ | ೪೮೫೪.೪೪ | ೧೧.೧೪ |

| | | |
|---|---|---|
| ಸಂಪರ್ಕ, ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೨೫.೭೮ | ೦.೬೬ |
| ಸಾಮಾನ್ಯ ಆರ್ಥಿಕ ಸೇವೆಗಳು | ೮೯೫.೬೩ | ೨.೦೬ |
| ಸಾಮಾಜಿಕ ಸೇವೆಗಳು | ೧೪೧೮೨.೯೮ | ೩೨.೫೬ |
| ಸಾಮಾನ್ಯ ಸೇವೆಗಳು | ೪೮೭.೬೦ | ೧.೧೨ |
| **ಒಟ್ಟು** | **೪೩೫೫೮.೨೨** | **೧೦೦.೦೦** |

*ಮೂಲ : ಕರ್ನಾಟಕ ಸರ್ಕಾರ: ೨೦೦೪, ಇಂಟರ್‌ಸ್ಟೇಟ್ ಇಂಡಿಕೇಟರ್ಸ್ ಪ್ಲಾನಿಂಗ್ ಡಿಪಾರ್ಟ್‌ಮೆಂಟ್.*

ಆದರೆ ಅದು ಒಂಬತ್ತನೆಯ ಯೋಜನೆಯಲ್ಲಿ ಶೇ. ೪೨.೩೭ಕ್ಕೆ ಮತ್ತು ಹತ್ತನೆಯ ಯೋಜನೆಯಲ್ಲಿ ಅದು ಶೇ. ೩೭.೭೫ ಕ್ಕೆ ಕಡಿಮೆಯಾಗಿದೆ.

**ಕೃಷಿ ವಲಯದ ಬೆಳವಣಿಗೆ**

ಕೋಷ್ಟಕ – ೨೪ ರಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಸೂಚಿಗಳ ವಿವರ ನೀಡಲಾಗಿದೆ.

**ಕೃಷಿ ವಲಯದ ಬೆಳವಣಿಗೆ : ಆಯ್ದಸೂಚಿಗಳು : ೧೯೯೦ – ೯೧ ರಿಂದ ೨೦೦೫ – ೦೬**

**ಕೋಷ್ಟಕ – ೨೪**

| ವಿವರಗಳು | **೧೯೯೧ – ೯೨** | **೧೯೯೫ – ೯೬** | **೨೦೦೦ – ೦೧** | **೨೦೦೫ – ೦೬** |
|---|---|---|---|---|
| ಏಕದಳ ಧಾನ್ಯಗಳ ಸಾಗುವಳಿ ಪ್ರದೇಶ (ಲಕ್ಷ ಹೆಕ್ಟೇರುಗಳಲ್ಲಿ) | ೫೧.೩೭ | ೫೩.೩೬ | ೫೭.೫೭ | ೫೫.೫೨ |
| ದ್ವಿದಳ ಧಾನ್ಯಗಳ ಸಾಗುವಳಿ ಪ್ರದೇಶ (ಲಕ್ಷ ಹೆಕ್ಟೇರುಗಳಲ್ಲಿ) | ೧೭.೮೭ | ೧೫.೨೦ | ೨೦.೪೬ | ೧೮.೭೬ |
| ಏಕದಳ ಧಾನ್ಯಗಳ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ) | ೭೨.೨೮ | ೭೯.೫೬ | ೧೦೦.೦೪ | ೯೪.೯೯ |
| ದ್ವಿದಳ ಧಾನ್ಯಗಳ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ) | ೬.೭೩ | ೬.೮೮ | ೯.೫೬ | ೭.೦೩ |
| ಆಹಾರ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ) | ೭೯.೦೧ | ೮೬.೪೪ | ೧೦೯.೬೦ | ೧೦೨.೦೨ |
| ಅಧಿಕ ಇಳುವಳಿ ತಳಿಗಳ ಬಿತ್ತನೆ ಪ್ರದೇಶ (ಲಕ್ಷ ಟನ್‌ಗಳಲ್ಲಿ) | ೩೩.೪೪ | ೩೬.೦೩ | ೫೧.೦೫ | ೫೨.೧೧ |
| ರಾಸಾಯನಿಕ ಗೊಬ್ಬರಗಳ ಬಳಕೆ (ಎನ್.ಕೆ.ಪಿ.) (ಲಕ್ಷ ಟನ್‌ಗಳಲ್ಲಿ) | ೯.೦೫ | ೯.೩೬ | ೧೨.೯೪ | ೧೮.೦೬ |
| ಹಣ್ಣು ಬೆಳೆಗಳ ಸಾಗುವಳಿ ಪ್ರದೇಶ (ಲಕ್ಷ ಹೆಕ್ಟೇರುಗಳಲ್ಲಿ) | ೨.೫೧ | ೨.೮೪ | ೨.೬೧ | ೨.೪೩ |
| ಹಣ್ಣು ಬೆಳೆಗಳ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ) | ೪೩.೭೧ | ೫೧.೩೩ | ೪೧.೬೪ | ೩೮.೪೧ |

*ಮೂಲ : ಕರ್ನಾಟಕ ಸರ್ಕಾರ : ೨೦೦೬, ಆರ್ಥಿಕ ಸಮೀಕ್ಷೆ : ೨೦೦೫ – ೦೬*

ಈ ಅವಧಿಯಲ್ಲಿ ಆಹಾರದ ಉತ್ಪಾದನೆಯು ೧೦೦ ಲಕ್ಷ ಟನ್‌ಗಡಿ ದಾಟಿತು. ಆಹಾರ ಧಾನ್ಯ ಬೆಳೆಯುವ ನಿವ್ವಳ ಪ್ರದೇಶ ೬೯.೧೮ ಲಕ್ಷ ಹೆಕ್ಟೇರುಗಳಿಂದ ೭೪.೨೮ ಲಕ್ಷ ಹೆಕ್ಟೇರುಗಳಿಗೇರಿತು. ಅಧಿಕ ಇಳವರಿ ತಳಿಗಳ ಸಾಗುವಳಿ ಪ್ರದೇಶವು ೩೩.೪೪ ಲಕ್ಷ ಹೆಕ್ಟೇರುಗಳಿಂದ ೫೨.೧ ಲಕ್ಷ ಹೆಕ್ಟೇರುಗಳಿಗೇರಿತು. ಆದರೆ ಒಣಭೂಮಿ ಬೇಸಾಯಕ್ಕೆ ಸಂಬಂಧಿಸಿದಂತೆ ತೀವ್ರ ಬದಲಾವಣೆಗಳು ನಡೆಯಲಿಲ್ಲ. ಈ ಬಗ್ಗೆ ಮುಂದಿನ ಭಾಗದಲ್ಲಿ ಚರ್ಚೆ ಮಾಡಲಾಗಿದೆ.

**ಕೈಗಾರಿಕಾ ವಲಯದ ಬೆಳವಣಿಗೆ**

ಕೋಷ್ಟಕ – ೨೫ ರಲ್ಲಿ ೧೯೯೦ – ೯೧ ರಿಂದ ೨೦೦೫ – ೦೬ ರ ಅವಧಿಯಲ್ಲಿ ಕೈಗಾರಿಕಾ ವಲಯದಲ್ಲಿನ ಬೆಳವಣಿಗೆ ವಿವರಗಳನ್ನು ನೀಡಲಾಗಿದೆ.

**ಕೈಗಾರಿಕಾ ವಲಯದ ಬೆಳವಣಿಗೆ : ೧೯೯೦ – ೯೧ ರಿಂದ ೨೦೦೫ – ೦೬**

ಕೋಷ್ಟಕ – ೨೫

| **ವಿವರಗಳು** | **೧೯೯೦ – ೯೧** | **೨೦೦೦ – ೦೧** | **೨೦೦೪ – ೦೫** |
|---|---|---|---|
| ಗಣಿ ಕ್ಷೇತ್ರದ ಉತ್ಪಾದನೆಯ ವಾರ್ಷಿಕ ಬೆಳವಣಿಗೆ ಪ್ರಮಾಣ | ೯.೪೦ | ೮.೦೩ | ೨೪.೩೫ (೨೦೦೩ – ೦೪) |
| ತಯಾರಿಕಾ ವಲಯದ ಉತ್ಪಾದನೆಯ ವಾರ್ಷಿಕ ಬೆಳವಣಿಗೆ ಪ್ರಮಾಣ | ೬.೪೩ | ೩.೭೭ | ೭.೩೧ |
| ವಿದ್ಯುಚ್ಛಕ್ತಿ ಉತ್ಪಾದನೆ ವಾರ್ಷಿಕ ಬೆಳವಣಿಗೆ ಪ್ರಮಾಣ | ೮.೩೫ | ೧೨.೩೮ | ೩.೮೯ (೨೦೦೩ – ೦೪) |
| ಒಟ್ಟು ಕೈಗಾರಿಕಾ ವಲಯದ ವಾರ್ಷಿಕ ಬೆಳವಣಿಗೆ ಪ್ರಮಾಣ | ೬.೪೯ | ೪.೫೪ | ೬.೩೯ |
| ಮೂಲ ವಸ್ತುಗಳ ಉತ್ಪಾದನೆ ವಾರ್ಷಿಕ ಬೆಳವಣಿಗೆ ಪ್ರಮಾಣ | ೨.೩೫ | ೨.೬೯ | ೮.೭೨ |
| ಬಂಡವಾಳ ವಸ್ತುಗಳ ಉತ್ಪಾದನೆ ವಾರ್ಷಿಕ ಬೆಳವಣಿಗೆ ಪ್ರಮಾಣ | ೫.೬೩ | ೫.೭೬ | ೭.೭ |
| ಮಧ್ಯವರ್ತಿ ವಸ್ತುಗಳ ಉತ್ಪಾದನೆ ವಾರ್ಷಿಕ ಬೆಳವಣಿಗೆ ಪ್ರಮಾಣ | ೧೦.೪೫ | ೪.೮೧ | ೩.೮೯ |
| ಗ್ರಾಹಕ ವಸ್ತುಗಳ ಉತ್ಪಾದನೆ ವಾರ್ಷಿಕ ಬೆಳವಣಿಗೆ ಪ್ರಮಾಣ | ೭.೧೭ | ೨.೬೮ | ೯.೧೫ |

***ಮೂಲ :*** *ಕರ್ನಾಟಕ ಸರ್ಕಾರ: ೨೦೦೬, ಆರ್ಥಿಕ ಸಮೀಕ್ಷೆ: ೨೦೦೫ – ೦೬*

ಕಳೆದ ೧೫ ವರ್ಷಗಳ ಅವಧಿಯಲ್ಲಿ ಕೈಗಾರಿಕಾ ವಲಯದ ವಾರ್ಷಿಕ ಸರಾಸರಿ ಅಭಿವೃದ್ಧಿ ಪ್ರಮಾಣವು ಶೇ. ೫ಕ್ಕಿಂತ ಅಧಿಕವಿದೆ. ಅದರಲ್ಲೂ ಮೂಲವಸ್ತುಗಳ ಮತ್ತು ಬಂಡವಾಳ ವಸ್ತುಗಳ ಉತ್ಪಾದನೆಯ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇ. ೭ ದಾಟಿದೆ. ಇವೆಲ್ಲದರ ಪರಿಣಾಮವಾಗಿ ರಾಜ್ಯದ ವರಮಾನವು ಉನ್ನತ ಮಟ್ಟಕ್ಕೇರಿದೆ.

ಹತ್ತನೆಯ ಯೋಜನೆಯಲ್ಲಿ ಯೋಜನಾ ಆಯೋಗವು ವರಮಾನದ ಬೆಳವಣಿಗೆಗೆ ನಿಗದಿಪಡಿಸಿದ್ದ ಗುರಿ ವಾರ್ಷಿಕ ಶೇ. ೧೦.೧ ರಾಜ್ಯದ ಒಟ್ಟು ದೇಶೀಯ ಉತ್ಪನ್ನವು ೨೦೦೪ – ೦೫ನೆಯ ಸಾಲಿನಲ್ಲಿ ಶೇ. ೧೦.೨ ರಷ್ಟು ಬೆಳವಣಿಗೆ ಸಾಧಿಸಿತ್ತು. ಆದರೆ ೨೦೦೫ – ೦೬ರಲ್ಲಿ ಅದು ಶೇ. ೮.೭ಕ್ಕೆ ಇಳಿದಿದೆ. ಸರ್ಕಾರದ ವರದಿ ಪ್ರಕಾರ ೧೯೯೩ – ೯೪ರ ಬೆಲೆಗಳಲ್ಲಿ ರಾಜ್ಯದ ವರಮಾನವು ೧೯೯೩ – ೯೪ ರಿಂದ ೨೦೦೩ – ೦೪ರ ಅವಧಿಯಲ್ಲಿ ಸಾಧಿಸಿಕೊಂಡ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೬.೫ ಹಾಗೂ ಇದೇ ಅವಧಿಯಲ್ಲಿ ತಲಾ ವರಮಾನದ ಬೆಳವಣಿಗೆ ಪ್ರಮಾಣ ಶೇ.೪.೯.

**ವಿಕೇಂದ್ರೀಕೃತ ಯೋಜನೆ: ರಾಜ್ಯದ ಸಾಧನೆ**

ತಳಮಟ್ಟಕ್ಕೆ, ಅಂದರೆ ಗ್ರಾಮ ಮಟ್ಟಕ್ಕೆ ಅಧಿಕಾರವನ್ನು ಒಯ್ಯುಬೇಕೆಂಬ ಉದ್ದೇಶದಿಂದ ವಿನೂತನವಾದ ಪಂಚಾಯತ್ ರಾಜ್ ವ್ಯವಸ್ಥೆ ಕರ್ನಾಟಕದಲ್ಲಿ ೦೧.೦೪.೧೯೮೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ ಪಂಚಾಯಿತಿಗಳನ್ನು ಒಳಗೊಂಡ ವ್ಯವಸ್ಥೆ ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಯೋಜನಾ ಪ್ರಕ್ರಿಯೆಯ ಪ್ರಯತ್ನವು ೧೯೭೮ – ೭೯ರಲ್ಲೇ ಆರಂಭವಾಗಿತ್ತು. ಆದರೆ ಅಂದು ತಳಮಟ್ಟದಲ್ಲಿ ಚುನಾಯಿತ ಸಂಸ್ಥೆಗಳಿರಲಿಲ್ಲ.

ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆ ರೂಪಿಸಲು ಅಗತ್ಯವಾದ ಹಣಕಾಸನ್ನು ಒಂದು ಮೊತ್ತದಲ್ಲಿ ನೀಡುವ ಕ್ರಮವು ಜಾರಿಗೆ ಬಂದಿತು. ಈ ವಿಧಾನದಲ್ಲಿ ಕೆಲವೊಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸಲು ತೀರ್ಮಾನಿಸಲಾಯಿತು. ಜಿಲ್ಲಾ ಪಂಚಾಯಿತಿಗಳಿಗೆ ಹಣವನ್ನು ವಗಾರ್ಯಿಸಲು ಒಂದು ಸೂತ್ರವನ್ನು ರೂಪಿಸಲಾಯಿತು. ಇದರಿಂದಾಗಿ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಹಣಕಾಸು ದೊರೆಯುವಂತಾಯಿತು. ಅದೇ ರೀತಿ ಮಂಡಲ ಪಂಚಾಯಿತಿಗಳಿಗೆ ಹಣಕಾಸು ಸಂಪನ್ಮೂಲ ಒದಗಿಸಲು ಒಂದು ಸೂತ್ರವನ್ನು ರೂಪಿಸಲಾಯಿತು. ಜಿಲ್ಲಾ ಮಟ್ಟದಲ್ಲಿ ಯೋಜನೆ ರೂಪಿಸುವ ಕಾರ್ಯದ ಮೇಲುಸ್ತುವಾರಿಯನ್ನು ರಾಜ್ಯ ಯೋಜನಾ ಇಲಾಖೆಗೆ ವಹಿಸಲಾಯಿತು.

ಜಿಲ್ಲಾ ಪರಿಷತ್ತುಗಳು ಹಾಗೂ ಮಂಡಲ ಪಂಚಾಯಿತಿಗಳಿಗೆ ಹಣಕಾಸು ವಿನಿಯೋಜನೆ ನಿರ್ಧರಿಸಲು ೧೯೮೯ರಲ್ಲಿ ಸರ್ಕಾರವು ಹಣಕಾಸು ಆಯೋಗವನ್ನು ನೇಮಿಸಿತು. ಈ ಆಯೋಗವು ಮಾರ್ಚ್೧೯೮೯ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಸರ್ಕಾರವು ವಿಕೇಂದ್ರೀಕೃತ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ತಿಳಿದುಕೊಳ್ಳಲು ಡಾ. ಕೃಷ್ಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿತು. ಸಮಿತಿಯು ಅತ್ಯಂತ ಉತ್ತಮವಾದ ರೀತಿಯಲ್ಲಿ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳು ಕಾರ್ಯ ಮಾಡುತ್ತಿರುವ ರೀತಿಯನ್ನು ಗುರುತಿಸಿತು.

**ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಅಭಿವೃದ್ಧಿ ಯೋಜನೆಗಳು**

ಸಂವಿಧಾನದ ೭೩ನೆಯ ತಿದ್ದುಪಡಿಯನ್ವಯ ಕರ್ನಾಟಕ ಪಂಚಾಯತ್ ಅಧಿನಿಯಮ ೧೯೯೩ರ ಅನುಷ್ಠಾಣದ ಮೂಲಕ ವಿಕೇಂದ್ರೀಕೃತ ಆಡಳಿತ ಮತ್ತು ಅಭಿವೃದ್ಧಿ ಪದ್ಧತಿಯನ್ನು ಜಾರಿಗೆ ತರಲಾಗಿದೆ. ನಮ್ಮಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ನಿಯಮ ೩೦೯ರನ್ವಯ ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತ್‌ಗಳು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ನಿಯಮ ೩೧೦ರನ್ವಯ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿದೆ (ಹೊಸ ಜಿಲ್ಲೆಗಳಲ್ಲಿ ಅವುಗಳನ್ನು ರಚಿಸಬೇಕಾಗಿದೆ).

ಈ ಯೋಜನಾ ಸಮಿತಿಗಳು ತಮ್ಮ ತಮ್ಮ ಜಿಲ್ಲೆಗಳಿಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಂತೆ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿದೆ. ಅದಕ್ಕೆ ಸಂಬಂಧಿಸಿದ ಮಾರ್ಗ ಸೂಚಿಗಳನ್ನು ಹನ್ನೊಂದನೆಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ನೀಡಲಾಗಿದೆ. ನಮ್ಮ ರಾಜ್ಯದ ಜಿಲ್ಲಾ ಯೋಜನೆಗಳಿಗೆ ೧೯೯೦ – ೯೧ರಿಂದ ೨೦೦೯ – ೧೦ರ ವರಗಿನ ಅವಧಿಯಲ್ಲಿ ಒದಗಿಸಿದ ಅನುದಾನದ ವಿವರಗಳನ್ನು ಕೋಷ್ಟಕ ೨೬ರಲ್ಲಿ ನೀಡಲಾಗಿದೆ.

**ಪಂಚಾಯತ್‌ರಾಜ್ ಸಂಸ್ಥೆಗಳ ಯೋಜನಾ ಅನುದಾನ :೧೯೯೦ – ೯೧ ರಿಂದ ೨೦೦೯ – ೧೦**

**ಕೋಷ್ಟಕ – ೨೬** (ಕೋಟಿ ರೂಪಾಯಿಗಳಲ್ಲಿ)

| **ವರ್ಷಗಳು** | **ರಾಜ್ಯದ ಒಟ್ಟು ಯೋಜನಾ ವೆಚ್ಚ** | **ಜಿಲ್ಲಾ ಯೋಜನಾ ವೆಚ್ಚ** | **ರಾಜ್ಯ ಯೋಜನಾ ವೆಚ್ಚದಲ್ಲಿ ಜಿಲ್ಲಾ ಯೋಜನಾ ವೆಚ್ಚದ ಪಾಲು (ಶೇ)** |
|---|---|---|---|
| ೧೯೯೦ – ೯೧ | ೧೧೩೬ | ೫೪೫ | ಶೇ. ೪೦ |
| ೧೯೯೨ – ೯೩ | ೨೬೨೫ | ೬೭೦ | ಶೇ. ೨೫ |
| ೧೯೯೪ – ೯೫ | ೪೧೭೫ | ೯೭೩ | ಶೇ. ೨೩ |
| ೧೯೯೬ – ೯೭ | ೫೩೧೧ | ೧೨೭೩ | ಶೇ. ೨೪ |
| ೧೯೯೮ – ೯೯ | ೬೫೧೩ | ೧೪೪೭ | ಶೇ. ೨೨ |
| ೨೦೦೦ – ೦೧ | ೮೫೦೬ | ೧೬೯೭ | ಶೇ. ೨೦ |
| ೨೦೦೨ – ೦೩ | ೯೫೨೨ | ೧೨೪೧ | ಶೇ. ೧೩ |
| ೨೦೦೪ – ೦೫ | ೧೩೩೧೧ | ೧೬೬೮ | ಶೇ. ೧೩ |
| ೨೦೦೬ – ೦೭ | ೧೭೮೦೬ | ೩೪೩೨ | ಶೇ. ೧೯ |
| ೨೦೦೯ – ೧೦ | ೩೧೫೨೦ | ೪೭೩೭ | ಶೇ. ೧೫ |

***ಮೂಲ :*** *ಕರ್ನಾಟಕ ಸರ್ಕಾರ ೨೦೧೦, ಆರ್ಥಿಕ ಸಮೀಕ್ಷೆ ೨೦೦೯ – ೧೦, ಪು.ಎ.೮೪*

***ಟಿಪ್ಪಣಿ :*** *ರಾಜ್ಯ ವಲಯ ಮತ್ತು ಕೇಂದ್ರ ವಲಯಗಳನ್ನು ಕೂಡಿಸಿ ಮೊತ್ತವನ್ನು ನೀಡಲಾಗಿದೆ.*

ಈ ಕೋಷ್ಟಕದಲ್ಲಿ (೨೬) ತೋರಿಸಿರುವಂತೆ ರಾಜ್ಯ ಒಟ್ಟು ಯೋಜನಾ ವೆಚ್ಚದಲ್ಲಿ ಜಿಲ್ಲಾ ವಲಯದ ಪಾಲು ೧೯೯೦ – ೯೧ ರಲ್ಲಿ ಶೇ.೪೦ ರಷ್ಟಿದ್ದುದು ೨೦೦೯ – ೨೦೧೦ರಲ್ಲಿ ಅದು ಶೇ.೧೫ ಕ್ಕಿಳಿದಿದೆ. ರಾಜ್ಯ ಯೋಜನಾ ವೆಚ್ಚವು ೧೯೯೦ – ೧೯ ರಿಂದ ೨೦೦೯ – ೧೦ರ ಅವಧಿಯಲ್ಲಿ ವಾರ್ಷಿಕ ಶೇ. ೧೩೩.೭೩ ರಷ್ಟು ಬೆಳವಣಿಗೆಯಾಗಿದ್ದರೆ ಜಿಲ್ಲಾ ವಲಯದ ಯೋಜನಾ ವೆಚ್ಚವು ಇದೇ ಅವಧಿಯಲ್ಲಿ ವಾರ್ಷಿಕ ಶೇ. ೩೮.೪೬ ಬೆಳವಣಿಗೆ ಸಾಧಿಸಿಕೊಂಡಿದೆ. ಜಿಲ್ಲಾ ವಲಯಕ್ಕೆ ರಾಜ್ಯವು ಎಷ್ಟು ಅನುದಾನವನ್ನು ವರ್ಗಾಯಿಸಬೇಕಾಗಿತ್ತೋ ಅಷ್ಟನ್ನು ಇಲ್ಲಿ ವರ್ಗಾಯಿಸಲು ಸಾಧ್ಯವಾಗಿಲ್ಲ. ಒಂದು ಸೂಚಿಯ ಪ್ರಕಾರ ರಾಜ್ಯದ ಒಟ್ಟು ಯೋಜನಾ ವೆಚ್ಚದ ಶೇ. ೪೦ ರಷ್ಟನ್ನು ಜಿಲ್ಲಾ ವಲಯಕ್ಕೆ ವರ್ಗಾಯಿಸಬೇಕು. ಅದು ಇಲ್ಲಿ ಸಾಧ್ಯವಾಗಿಲ್ಲ. ಜಿಲ್ಲಾ ಮಟ್ಟದಲ್ಲಿ ಯೋಜನೆ ಯನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಕಾರ್ಯಕ್ಕೆ ಸರ್ಕಾರವು ಒತ್ತಾಸೆ ನೀಡುತ್ತಿಲ್ಲ. ಜಿಲ್ಲಾ ವಲಯವು ರಾಜ್ಯ ಸರ್ಕಾರದ ಯಜಮಾನ್ಯದಿಂದಾಗಿ ಸೊರಗುತ್ತಿದೆ.

**ತಲಾ ಯೋಜನಾ ವೆಚ್ಚ**

ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕದ ರಾಜ್ಯ ಯೋಜನಾ ವೆಚ್ಚಕ್ಕೆ ಸಂಬಂಧಿಸಿದಂತೆ ಎರಡು ಕಾಲಘಟ್ಟಕ್ಕೆ ತಲಾ ಯೋಜನಾ ವೆಚ್ಚವನ್ನು ಲೆಕ್ಕ ಹಾಕಲಾಗಿದೆ. ಅದೇ ರೀತಿಯಲ್ಲಿ ಜಲಿಲಾ ವಲಯದ ಯೋಜನಾ ವೆಚ್ಚಕ್ಕೂ ತಲಾ ಯೋಜನಾ ವೆಚ್ಚವನ್ನು ಎರಡು ಕಾಲಘಟ್ಟಕ್ಕೆ ಲೆಕ್ಕ ಹಾಕಲಾಗಿದೆ. ಈ ಲೆಕ್ಕಾಚಾರವನ್ನು ಸಂಬಂಧಿಸಿದ ವರ್ಷದ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಮಾಡಲಾಗಿದೆ. ರಾಜ್ಯ ಮಟ್ಟಕ್ಕೆ ಸಂಬಂಧಿಸಿದಂತೆ ೧೯೯೦ – ೯೧ ರಲ್ಲಿ ತಲಾ ಯೋಜನಾ ವೆಚ್ಚವು ರೂ. ೧೬೦೭ ರಷ್ಟಿದ್ದುದು ೨೦೦೯ – ೧೦ ರಲ್ಲಿ ರೂ. ೫೨೦೯ ಕ್ಕೇರಿದೆ.

ಇಲ್ಲಿನ ಬೆಳವಣಿಗೆ ಪ್ರಮಾಣ ಶೇ. ೨೨೪.೦೧. ಆದರೆ ಜಿಲ್ಲಾ ವಲಯಕ್ಕೆ ಸಂಬಂಧಿಸಿದಂತೆ ೧೯೯೦ – ೯೧ರಲ್ಲಿ ತಲಾ ಯೋಜನಾ ವೆಚ್ಚ ರೂ. ೩೨೦.೭೯ ರಷ್ಟಿದ್ದುದು ೨೦೦೯ – ೧೦ರಲ್ಲಿ ಅದು ರೂ. ೭೮೨.೯೭ ರಷ್ಟಾಗಿದೆ. ರಾಜ್ಯಮಟ್ಟದಲ್ಲಿ ಯೋಜನಾ ವೆಚ್ಚವು ಈ ೨೦ ವರ್ಷಗಳ ಅವಧಿಯಲ್ಲಿ ಶೇ. ೨೨೪.೦೧ ರಷ್ಟು ಏರಿಕೆಯಾಗಿದ್ದರೆ ಜಿಲ್ಲಾ ವಲಯದಲ್ಲಿ ಅದರ ಏರಿಕೆ ಪ್ರಮಾಣ ಶೇ. ೧೪೪.೦೭. ಈ ಲೆಕ್ಕಾಚಾರವು ಏನನ್ನು ತೋರಿಸುತ್ತಿದೆ? ರಾಜ್ಯ ಮಟ್ಟದಲ್ಲಿ ಯೋಜನಾ ವೆಚ್ಚವು ಯಾವ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆಯೋ ಆ ಗತಿಯಲ್ಲಿ ಜಿಲ್ಲಾ ವಲಯದ ಯೋಜನಾ ವೆಚ್ಚವು ಏರಿಕೆಯಾಗುತ್ತಿಲ್ಲ. ಇದು ಆತಂಕಕಾರಿಯಾದ ಸಂಗತಿಯಾಗಿದೆ. ತಳಮಟ್ಟದ ಯೋಜನೆ, ವಿಕೇಂದ್ರೀಕೃತ ಯೋಜನೆ, ಕೆಳಗಿನಿಂದ ಮೇಲೆ ಹರಿಯುವ ಯೋಜನೆ ಎಂಬ ಮಾತುಗಳೆಲ್ಲ ಅರ್ಥ ಕಳೆದು ಕೊಳ್ಳುತ್ತಿವೆ. ರಾಜ್ಯ ಸರ್ಕಾರಗಳು ಮತ್ತು ಅಲ್ಲಿನ ಜನಪ್ರತಿನಿಧಿಗಳು ಯೋಜನೆಗೆ ಸಂಬಂಧಿಸಿದಂತೆ ತಮ್ಮ ಅಧಿಕಾರವನ್ನು ಬಿಟ್ಟು ಕೊಡಲು ಸಿದ್ಧವಿಲ್ಲ. ಪಂಚಾಯತ್‌ರಾಜ್ ಸಂಸ್ಥೆಗಳು ಸ್ವಾಯತ್ತವಾಗಿ ಮತ್ತು ಸ್ವತಂತ್ರವಾಗಿ ತಳಮಟ್ಟದ ಯೋಜನೆಯನ್ನು ನಿರ್ಮಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರದಿಂದ ವಂಚಿತವಾಗಿವೆ. 'ಜಿಲ್ಲಾ ಉಸ್ತುವಾರಿ ಸಚಿವರು' ಎಂಬ ವ್ಯವಸ್ಥೆಯು ಪಂಚಾಯತ್‌ರಾಜ್ ವ್ಯವಸ್ಥೆಯು ದುರ್ಬಲವಾಗಲು ಪ್ರಮುಖ ಕಾರಣವಾಗಿದೆ. ಜಿಲ್ಲಾ ವಲಯದ ಯೋಜನೆಯನ್ನು ಕಳೆದ ೨೦ – ೨೪ ವರ್ಷಗಳಿಂದ ಸಬಲಗೊಳಿಸಲು ನಮಗೆ ಸಾಧ್ಯವಾಗಿಲ್ಲ.

ಈ ಸಮಸ್ಯೆಯನ್ನು ನಾವು ಶೀಘ್ರವಾಗಿ ನಿವಾರಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯು ಕುಸಿದು ಹೋಗುತ್ತದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ.

# ೧೦. ಕರ್ನಾಟಕದಲ್ಲಿ ಅಭಿವೃದ್ಧಿ ಯೋಜನೆಗಳು (೪)

ಭಾಗ ೪

**ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನ**

ಕರ್ನಾಟಕವು ಹತ್ತು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ೨೦೦೭ ರಿಂದ ಹನ್ನೊಂದನೆಯ ಯೋಜನೆಯನ್ನು ಆರಂಭಿಸಿದೆ. ಕಳೆದ ೫೦ ವರ್ಷಗಳಲ್ಲಿ ರಾಜ್ಯವು ಗಣನೀಯವಾದ ಅಭಿವೃದ್ಧಿಯನ್ನು ಸಾಧಿಸಿಕೊಂಡಿದೆ. ಸಾಮಾಜಿಕ - ರಾಜಕೀಯ ಬದಲಾವಣೆಗಳು ಸಂಭವಿಸಿವೆ. ಅದರ ವರಮಾನದ ವಾರ್ಷಿಕ ಬೆಳವಣಿಗೆ ಪ್ರಮಾಣವು ಎರಡಂಕಿ ಮುಟ್ಟುವ ಹಂತದಲ್ಲಿದೆ. ಕೃಷಿ, ಕೈಗಾರಿಕೆ, ಸಾರಿಗೆ, ಸಂಪರ್ಕ, ಬ್ಯಾಂಕಿಂಗ್, ವಿದ್ಯುತ್ತು, ನೀರಾವರಿ, ವ್ಯಾಪಾರ, ಶಿಕ್ಷಣ, ಆರೋಗ್ಯ - ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಅದು ಪ್ರಗತಿ ಸಾಧಿಸಿಕೊಂಡಿದೆ. ಈಗಾಗಲೆ ತಿಳಿಸಿರುವಂತೆ ಅವರ ಸಾಧನೆಯು ಕ್ರಾಂತಿಕಾರಕ ಅಥವಾ ಕಣ್ಣು ಕೋರೈಸುವಂತಹದ್ದಲ್ಲ. ಆದರೆ ಅದು ತಲೆತಗ್ಗಿಸು ವಂತಹದ್ದೂ ಅಲ್ಲ.

ಸಾಮಾಜಿಕ ಅಭಿವೃದ್ಧಿಯ ಹರವು ವಿಸ್ತೃತಗೊಂಡಿದೆ. ರಾಜ್ಯದಲ್ಲಿ ಕೃಷಿ ಅವಲಂಬನೆಯ ಪ್ರಮಾಣ ೧೯೯೧ರಲ್ಲಿ ಶೇ. ೬೩.೧೩ ರಷ್ಟಿದ್ದುದು ೨೦೦೧ ರಲ್ಲಿ ಶೇ. ೫೫.೮೮ ಕ್ಕಿಳಿದಿದೆ. ಅಂದರೆ ಕೃಷಿಯೇತರ ಚಟುವಟಿಕೆಗಳ ಪ್ರಮಾಣವು ಸಾಪೇಕ್ಷವಾಗಿ ಏರಿಕೆಯಾಗುತ್ತಿದೆ. ಈ ಬಗೆಯ ಬದಲಾವಣೆಯು ಮಂದಗತಿಯಲ್ಲಿ - ಮಧ್ಯಮಗತಿಯಲ್ಲಿ ನಡೆದಿದೆ. ಸಮಾಜದಲ್ಲಿ ವಂಚಿತ ವರ್ಗವು ಅಭಿವೃದ್ಧಿಯಲ್ಲಿ ಪಾಲು ಪಡೆಯ ತೊಡಗಿದೆ ಮತ್ತು ಫಲವನ್ನು ಒತ್ತಾಯಿಸುತ್ತಿದೆ. ಆರ್ಥಿಕವಾಗಿ ಸದೃಢವಾಗಿ ರಾಜ್ಯವು ಅಭಿವೃದ್ಧಿ ಸಾಧಿಸಿಕೊಂಡಿದೆ. ಆದರೆ ಆತಂಕದ ಸಂಗತಿಯೆಂದರೆ ವರಮಾನಕ್ಕೆ ಸಂಬಂಧಿಸಿದಂತೆ ಅಸಮಾನತೆಯು ತೀವ್ರವಾಗುತ್ತಿದೆ. ಉದಾಹರಣೆಗೆ ೧೯೬೦/೬೧ ರಲ್ಲಿ ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಶೇ. ೭೫ ರಷ್ಟು ಜನರು ರಾಜ್ಯದ ಒಟ್ಟು ವರಮಾನದಲ್ಲಿ ಶೇ. ೬೧ರಷ್ಟನ್ನು ಅನುಭವಿಸುತ್ತಿದ್ದರು. ಆದರೆ

೨೦೦೦ - ೦೧ ರಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇ. ೬೦ ರಷ್ಟು ಜನರು ರಾಜ್ಯದ ವರಮಾನದ ಕೇವಲ ಶೇ.೨೭ ರಷ್ಟನ್ನು ಮಾತ್ರ ಅನುಭವಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ೧೯೬೦/೬೧ರಲ್ಲಿ ಪ್ರಾಥಮಿಕೇತರ ವಲಯದ ಶೇ.೨೫ ರಷ್ಟು ದುಡಿಮೆಗಾರರು ವರಮಾನದ ಶೇ. ೩೯ ರಷ್ಟನ್ನು ಪಾಲು ಪಡೆದಿದ್ದರು. ಇದು ೨೦೦೦ - ೦೧ ರಲ್ಲಿ ತೀವ್ರ ಬದಲಾವಣೆಯಾಗಿದೆ. ಪ್ರಾಥಮಿಕೇತರ ವಲಯದ ಶೇ. ४೦ ರಷ್ಟು ದುಡಿಮೆಗಾರರು ವರಮಾನದ ಶೇ. ೭೩ ರಷ್ಟು ಪಾಲು ಅನುಭವಿಸುತ್ತಿದ್ದಾರೆ. ಈ ಸಂಗತಿಯು ಸ್ಥೂಲವಾಗಿ ರಾಜ್ಯದಲ್ಲಿ ಅಸಮಾನತೆಯು ತೀವ್ರವಾಗಿ ಏರಿಕೆಯಾಗಿರುವುದನ್ನು ಸೂಚಿಸುತ್ತದೆ. ಕರ್ನಾಟಕ ರಾಜ್ಯದ ತಲಾ ವರಮಾನವು ೧೯೬४ - ೬೫ ರಲ್ಲಿ ರಾಷ್ಟ್ರಮಟ್ಟದ ತಲಾವರಮಾನದ ಶೇ. ೯೧.೬೬ ರಷ್ಟಿದ್ದುದು ೨೦೦೨ - ೦೩ ರಲ್ಲಿ ಅದು ಶೇ. ೯೭.೨೭ ರಷ್ಟಾಗಿದೆ. ರಾಜ್ಯದ ಒಟ್ಟು ಸಾಕ್ಷರತೆಯು ೧೯೬೧ ರಲ್ಲಿ ದೇಶದಲ್ಲಿನ ಸಾಕ್ಷರತೆಯ ಶೇ.೮೮.೩४ ರಷ್ಟಿದ್ದುದು ೨೦೦೧ ಅದು ಶೇ. ೧೦೩.೯೨ ರಷ್ಟಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಸಾಕ್ಷರತೆಯು ೧೯೯೧ ರಲ್ಲಿ ಒಟ್ಟು ಜನಸಂಖ್ಯೆಯ ಸಾಕ್ಷರತೆಯ ಶೇ. ೬೭.೯೧ ರಷ್ಟಿದ್ದುದು ೨೦೦೧ರಲ್ಲಿ ಅದು ಶೇ. ೭೮.೯೧ ರಷ್ಟಾಗಿದೆ. ಮಹಿಳೆಯರ ಸಾಕ್ಷರತೆಯು ೧೯೬೧ ರಲ್ಲಿ ಪುರುಷರ ಸಾಕ್ಷರತೆಯ ಶೇ. ೩೯.४೯ ರಷ್ಟಿದ್ದುದು ೨೦೦೧ ರಲ್ಲಿ ಅದು ಶೇ. ೭४.೭೧ ರಷ್ಟಾಗಿದೆ.

ಹೀಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅದರ ಪ್ರಗತಿಯು ಉತ್ತೇಜನಕಾರಿಯಾಗಿದೆ. ಪ್ರಾಕೃತಿಕ ಸಂಪನ್ಮೂಲದ ದೃಷ್ಟಿಯಿಂದ ಅನನುಕೂಲ ಸ್ಥಿತಿಯಲ್ಲಿರುವ ರಾಜ್ಯವು ಕಳೆದ ೫೦ ವರ್ಷಗಳಲ್ಲಿ ಸಾಧಿಸಿಕೊಂಡಿರುವ ಸಾಧನೆಯು ಕಡಿಮೆಯಾದುದೇನಲ್ಲ. ಜನಸಂಖ್ಯೆಯ ಬೆಳವಣಿಗೆಯನ್ನು ಅದು ಸಮರ್ಥವಾಗಿ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದೆ. ಇಡೀ ದೇಶದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ೦ - ೬ ವಯೋಮಾನದ ಮಕ್ಕಳ ಪ್ರಮಾಣವು ೨೦೦೧ ರಲ್ಲಿ ಶೇ. ೧೫.೩೭ ರಷ್ಟಿದ್ದರೆ ಕರ್ನಾಟಕದಲ್ಲಿ ಅವರ ಪ್ರಮಾಣ ಶೇ. ೧೩.೫೯. ವಾರ್ಷಿಕ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ೧೯೯೧ - ೨೦೦೧ ರಲ್ಲಿ ರಾಷ್ಟ್ರಮಟ್ಟದಲ್ಲಿ ಶೇ. ೨.೧೩ರಷ್ಟಿದ್ದರೆ ಕರ್ನಾಟಕದಲ್ಲಿ ಅದು ೧.೭೨ ರಷ್ಟಿದೆ.

ಕೃಷಿಗೆ ಸಂಬಂಧಿಸಿದಂತೆ ರಾಜ್ಯವು ಇಂದು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಬಿಕ್ಕಟ್ಟು ಕೇವಲ ರೈತರ ಆತ್ಮಹತ್ಯೆಗೆ ಸಂಬಂಧಿಸಿದುದಲ್ಲ. ಅದು ನಮ್ಮ ಒಟ್ಟಾರೆ ಆರ್ಥಿಕ ನೀತಿಗೆ ಸಂಬಂಧಿಸಿದ ಸಂಗತಿಯಾಗಿದೆ. ಕರ್ನಾಟಕದಲ್ಲಿ ಇಂದು ೧೩೧ ಲಕ್ಷ ದುಡಿಮೆಗಾರರು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ಇದರಲ್ಲಿ ದಿನಗೂಲಿ ದುಡಿಮೆಗಾರರ ಸಂಖ್ಯೆ ೬೨ ರಲ್ಲಿ. ಈ ೬೨ ಲಕ್ಷ ದುಡಿಮೆಗಾರರ ದಿನಗೂಲಿ ಸರಾಸರಿ ರೂ. ೫೦ ರಿಂದ ರೂ. ೭೦ ದಾಟುವುದಿಲ್ಲ. ಈ ೬೨ ಲಕ್ಷ ದಿನಗೂಲಿ ಸರಾಸರಿ ರೂ. ೫೦ ರಿಂದ ರೂ. ೭೦ ದಾಟುವುದಿಲ್ಲ. ಈ ೬೨ ಲಕ್ಷ ದಿನಗೂಲಿ ಕೃಷಿ ದುಡಿಮೆಗಾರರಲ್ಲಿ ಮಹಿಳೆಯರ ಸಂಖ್ಯೆ ೩೬ (ಶೇ.೫೮). ಇವರ ಬದುಕು ಅತ್ಯಂತ ದುಸ್ಥಿತಿಯಲ್ಲಿದೆ. ಇವರೆಲ್ಲರೂ ಆಹಾರ ಅಭದ್ರತೆಯಿಂದ ನರಳುತ್ತಿದ್ದಾರೆ. ಆರೋಗ್ಯ ಮತ್ತು ಶಿಕ್ಷಣಗಳಿಂದ ಇದು ವಂಚಿತವಾದ ವರ್ಗವಾಗಿದೆ.

ಇದಕ್ಕಿಂತ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದಂತೆ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಂಗತಿಯೆಂದರೆ ಒಣಭೂಮಿ ಬೇಸಾಯ. ಸುಮಾರು ೭೫ ಲಕ್ಷ ಹೆಕ್ಟೇರು ಭೂಮಿ ರಾಜ್ಯದಲ್ಲಿ ಮಳೆಯನ್ನು ಆಶ್ರಯಿಸಿಕೊಂಡಿದೆ. ಆದರೆ ಒಣಭೂಮಿ ಬೇಸಾಯದ ಮೇಲೆ ಸರ್ಕಾರವು ತೊಡಗಿಸುತ್ತಿರುವ ಬಂಡವಾಳ ನಿಕೃಷ್ಟವಾದುದು. ಅನೇಕ ರಾಷ್ಟ್ರ ಮಟ್ಟದ ಅಧ್ಯಯನಗಳು ತೋರಿಸಿರುವಂತೆ ಬಡತನದ ಪ್ರಮಾಣವನ್ನು ಕಡಿಮೆ ಮಾಡಲು ಇರುವ ಪರಿಣಾಮಕಾರಿ ಮಾರ್ಗವೆಂದರೆ ಕೃಷಿ ಕ್ಷೇತ್ರದಲ್ಲಿ ತೀವ್ರ ಬೆಳವಣಿಗೆ ಸಾಧಿಸಿಕೊಳ್ಳುವುದಾಗಿದೆ (ವಿವರಗಳಿಗೆ ನೋಡಿ : ಮಾರ್ಟಿನ್ ರಾವೇಲಿಯನ್ : ೨೦೦೦, ಶೆನ್‌ಗೆನ್‌ಪಾನ್, ಪೀಟರ್ ಹಾಜೆಲ್ : ೨೦೦೦).

ಕೃಷಿ ಕ್ಷೇತ್ರವನ್ನು ಅವಲಂಬಿಸಿಕೊಂಡಿರುವ ದಿನಗೂಲಿಗಳ ಆರೋಗ್ಯದ ಮಟ್ಟ ಹಾಗೂ ಶಿಕ್ಷಣದ ಮಟ್ಟವನ್ನು ಸುಧಾರಿಸುವುದರಿಂದಲೂ ಬಡತನದ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ. ಏಕೆಂದರೆ ಅಮರ್ತ್ಯಸೇನ್, ಮೆಹಬೂಬ್ ಉಲ್‌ಹಕ್ ಮುಂತಾದವರ ಪ್ರಕಾರ

ಜನರ ಧಾರಣ ಸಾಮರ್ಥ್ಯವನ್ನು ನಿರ್ಧರಿಸುವ ಬಹುಮುಖ್ಯ ಚಲಗಳೆಂದರೆ ಶಿಕ್ಷಣ ಮತ್ತು ಆರೋಗ್ಯ. ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕ ಸರ್ಕಾರವು ಕೆಳಕಂಡ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು.

೧. ಕೃಷಿಯ ಮೇಲೆ, ಅದರಲ್ಲೂ ಒಣಭೂಮಿ ಬೇಸಾಯದ ಮೇಲೆ ತೊಡಗಿಸುವ ಬಂಡವಾಳವನ್ನು ಅಧಿಕಗೊಳಿಸಬೇಕು. ಕೃಷಿಕ್ಷೇತ್ರದಲ್ಲಿ ಉನ್ನತ ಮಟ್ಟದ ಬೆಳವಣಿಗೆ ಸಾಧಿಸಿಕೊಳ್ಳದೆ ಮತ್ತು ಅದರಲ್ಲಿದ ದೃಢತೆಯನ್ನು ಸಾಧಿಸಿಕೊಳ್ಳದೆ ಬಡತನವನ್ನು ಕಡಿಮೆ ಮಾಡುವುದು ಸಾಧ್ಯವಾಗುವುದಿಲ್ಲ.

೨. ಕೃಷಿಯೇತರ ಕ್ಷೇತ್ರಗಳ ವಿಸ್ತರಣೆಯ ಲಾಭವನ್ನು ರಾಜ್ಯದ ಬಡವರ್ಗ ಪಡೆದುಕೊಳ್ಳಬೇಕಾದರೆ ಧಾರಣ ಸಾಮರ್ಥ್ಯವನ್ನು ಉತ್ತಮಪಡಿಸಬೇಕಾಗುತ್ತದೆ. ಅದಕ್ಕಾಗಿ ಸರ್ಕಾರವು ಮುಂದಿನ ಯೋಜನೆಗಳಲ್ಲಿ ಅತ್ಯಂತ ದುಸ್ಥಿತಿಯಲ್ಲಿರುವ ಗ್ರಾಮೀಣ ಆರೋಗ್ಯ ವ್ಯವಸ್ಥೆಯನ್ನು ಹಾಗೂ ಪ್ರಾಥಮಿಕ ಶಿಕ್ಷಣವನ್ನು ತುಂಬಾ ಸುಧಾರಿಸ ಬೇಕಾಗುತ್ತದೆ.

ರಾಜ್ಯವು ಸಾಧಿಸಿಕೊಂಡ ಅಭಿವೃದ್ಧಿಯ ಫಲವು ವಂಚಿತ ವರ್ಗಕ್ಕೆ ದೊರೆಯ ಬೇಕಾದರೆ ಅವರ ಧಾರಣ ಶಕ್ತಿ ಉತ್ತಮವಾಗಬೇಕು. ಅದಕ್ಕಾಗಿ ಮಾನವ ಅಭಿವೃದ್ಧಿಯ ಸೂಚಿಗಳ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸಬೇಕಾಗುತ್ತದೆ. ರಾಜ್ಯದಲ್ಲಿ ಒಣಭೂಮಿ ಬೇಸಾಯದ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸುವುದು ಮತ್ತು ಗ್ರಾಮೀಣ ಪ್ರಾಥಮಿಕ ಆರೋಗ್ಯ ಹಾಗೂ ಪ್ರಾಥಮಿಕ ಶಿಕ್ಷಣದ ಮೇಲೆ ಹಣ ತೊಡಗಿಸುವುದೆಂದರೆ ರಾಜ್ಯದ ಹಿಂದುಳಿದ ಪ್ರದೇಶಗಳ ಮೇಲೆ ಬಂಡವಾಳ ತೊಡಗಿಸಿದಂತೆ ಲೆಕ್ಕ. ಇಂತಹ ಕ್ರಮಗಳಿಂದ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಬಹುದಾಗಿದೆ.

**ಲಿಂಗ ಸಂಬಂಧಿ ಅಭಿವೃದ್ಧಿ**

ರಾಜ್ಯದ ಪಂಚವಾರ್ಷಿಕ ಯೋಜನೆಗಳ ಬಹುದೊಡ್ಡ ಲೋಪದ ಸಂಗತಿಯೆಂದರೆ ಲಿಂಗ ಸಂಬಂಧಿ ಅಭಿವೃದ್ಧಿಯ ನಿರ್ಲಕ್ಷ್ಯ. ಜನಪ್ರಿಯ ಮಟ್ಟದಲ್ಲಿ ಮಹಿಳೆಯರ ಅಭಿವೃದ್ಧಿ ಕುರಿತಂತೆ ಸರ್ಕಾರವು ತೀವ್ರ ಸ್ವರೂಪದ ಲಿಂಗ ಸ್ಪಂದಿ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಆದರೆ ಅವು ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಈಡೇರಿಸಬಲ್ಲವೇ ವಿನಾ ಅವರ ಸಂಘರ್ಷಣಾತ್ಮಕ ಹಿತಾಸಕ್ತಿಗಳನ್ನು ಹಿಡಿದಿಡಲಾರವು. ಮಹಿಳೆಯರ ಸ್ಥಿತಿಗತಿ ಉತ್ತಮಪಡಿಸುವ ಉದ್ದೇಶದ ಹತ್ತಾರು ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಜಾರಿಗೊಳಿಸಲಾದೆ. ಆದರೆ ಅವು ಎಷ್ಟರಮಟ್ಟಿಗೆ ಮಹಿಳಾ ಸ್ವಾಯತ್ತತೆಯನ್ನು ಸಬಲೀಕರಣವನ್ನು ಸಾಧಿಸಿವೆ ಎಂಬುದು ಅನುಮಾನಾಸ್ಪದವಾದ ಸಂಗತಿಯಾಗಿದೆ.

ಸ್ತ್ರೀಶಕ್ತಿ, ಸ್ವಶಕ್ತಿ, ಯಶಸ್ವಿನಿ, ನಮ್ಮ ಮಕ್ಕಳು - ನಮ್ಮ ಭಾಗ್ಯ ಮುಂತಾದ ರಂಜನೀಯ ವಾದ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೊಳಿಸಿದೆ. ಆದರೆ ಅವು ಮೂಲಭೂತವಾಗಿ 'ಸುಧಾರಣಾವಾದಿ' ಕ್ರಮಗಳಾಗಿವೆ. ಇವು ಪರಿವರ್ತನಾವಾದಿ ಕ್ರಮಗಳಲ್ಲ. ಉದಾಹರಣೆಗೆ ಕೆಳಗಿನ ಸಂಗತಿಗಳನ್ನು ನೋಡಬಹುದು (ಕೋಷ್ಟಕ ೨೮).

**ಲಿಂಗ ಸಂಬಂಧಿ ಸೂಚಿಗಳು**

**ಕೋಷ್ಟಕ – ೨೮**

| ವಿವರಗಳು | **ವರ್ಷಗಳು** | | |
|---|---|---|---|
| | ೧೯೮೧ | ೧೯೯೧ | ೨೦೦೧ |
| ಜನಸಂಖ್ಯೆಯಲ್ಲಿ ಮಹಿಳೆಯ ಪ್ರಮಾಣ | ಶೇ. ೪೯.೦೪ | ೪೮.೯೭ | ೪೯.೦೮ |

| | | | |
|---|---|---|---|
| ಒಟ್ಟು ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ | ಶೇ. ೩೦.೮೭ | ೩೪.೨೭ | ೩೫.೦೭ |
| ಕೃಷಿ ಕೂಲಿಕಾರರಲ್ಲಿ ಮಹಿಳೆಯರ ಪ್ರಮಾಣ | ಶೇ. ೪೬.೯೪ | ೪೯.೭೫ | ೫೮.೧೯ |
| ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ | ಶೇ. ೩೫.೧೫ | ೪೧.೭೦ | ೪೨.೧೦ |
| ಅನಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ | ಶೇ. ೬೦.೮೫ | ೬೨.೦೦ | ೬೩.೪೦ |

***ಮೂಲ :*** *ಜನಗಣತಿ ವರದಿಗಳು*

ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವೇನು, ಪಾತ್ರವೆಷ್ಟು ಎಂಬುದನ್ನು ಮೇಲಿನ ಸಂಗತಿಗಳು ಸೂಚಿಸುತ್ತವೆ. ಆದರೆ ಪಂಚವಾರ್ಷಿಕ ಯೋಜನೆಗಳಲ್ಲಿ ನಿರ್ದಿಷ್ಟವಾಗಿ ದುಡಿಯುವ ಮಹಿಳೆಯರ ಅಭಿವೃದ್ಧಿಗಾಗಿ ಪರಿವರ್ತನಾವಾದಿ - ಸಂಘರ್ಷಣಾವಾದಿ ಕಾರ್ಯಕ್ರಮಗಳು ಕಂಡುಬರುವುದಿಲ್ಲ.

ಅಭಿವೃದ್ಧಿ ಕೊಡಮಾಡುವ ಫಲಗಳಲ್ಲಿ ಮಹಿಳೆಯರ ಪಾಲು ಕಡಿಮೆ. ಆದರೆ ದುಸ್ಥಿತಿಯಲ್ಲಿ ಅವರ ಪಾಲು ಅಧಿಕ. ಇದಕ್ಕೆ ರಾಜ್ಯದಲ್ಲಿನ ಕೃಷಿ ಅವಲಂಬನೆಯನ್ನು ನೋಡಬಹುದು (ಕೋಷ್ಟಕ - ೨೭).

**ಕೃಷಿ ಅವಲಂಬನೆಯ ಲಿಂಗ ಸಂಬಂಧಿ ಸ್ವರೂಪ**

**ಕೋಷ್ಟಕ – ೨೭** (ಲಕ್ಷಗಳಲ್ಲಿ)

| ವಿವರಗಳು | ೧೯೯೧ | | | ೨೦೦೧ | | |
|---|---|---|---|---|---|---|
| | **ಗಂಡು** | **ಹೆಣ್ಣು** | **ಒಟ್ಟು** | **ಗಂಡು** | **ಹೆಣ್ಣು** | **ಒಟ್ಟು** |
| **ಕೃಷಿ ಸಾಗುವಳಿದಾರರು** | ೪೬.೨೮ | ೧೨.೮೮ | ೫೯.೧೬ | ೪೮.೩೩ | ೨೦.೫೧ | ೬೮.೮೪ |
| **ಕೃಷಿ ದಿನಗೂಲಿಗಳು** | ೨೫.೧೨ | ೨೪.೮೭ | ೪೯.೯೯ | ೨೬.೨೦ | ೩೬.೦೫ | ೬೨.೨೫ |
| **ಒಟ್ಟು ಕೃಷಿ ಅವಲಂಬಿತರು** | ೭೧.೪೦<br>(೫೨.೧೨) | ೩೭.೭೫<br>(೭೫.೩೯) | ೧೦೯.೧೫<br>(೬೩.೧೨) | ೭೪.೫೩<br>(೪೮.೯೨) | ೫೬.೫೬<br>(೬೮.೧೫) | ೧೩೧.೦೯<br>(೫೫.೭೦) |
| **ಒಟ್ಟು ದುಡಿಮೆಗಾರರು** | ೧೨೨.೮೫ | ೫೦.೦೭ | ೧೭೨.೯೨ | ೧೫೨.೩೫ | ೮೨.೯೯ | ೨೩೫.೩೪ |

***ಟಿಪ್ಪಣಿ :*** *ಆವರಣದಲ್ಲಿ ಅಂಕಿಗಳು ಒಟ್ಟು ಮೊತ್ತದ ಶೇಕಡ ಪ್ರಮಾಣ ತೋರಿಸುತ್ತವೆ.*

***ಮೂಲ :*** *ಜನಗಣತಿ ವರದಿಗಳು : ೧೯೯೧ ಮತ್ತು ೨೦೦೧.*

ಕೃಷಿಯ ಅವಲಂಬನೆಯು ಪುರುಷ ದುಡಿಮೆಗಾರರಿಗಿಂತ ಮಹಿಳಾ ದುಡಿಮೆಗಾರರಲ್ಲಿ ಅಧಿಕವಾಗಿದೆ. ಒಟ್ಟು ಕೃಷಿ ಅವಲಂಬನೆ ಶೇ. ೫೫ ರಷ್ಟಿದ್ದರೆ ಮಹಿಳೆಯರ ಕೃಷಿ ಅವಲಂಬನೆ ಶೇ.೬೮ ರಷ್ಟಿದೆ. ಆದರೆ ಪುರುಷ ದುಡಿಮೆಗಾರರ ಕೃಷಿ ಅವಲಂಬನೆಯು ಕೇವಲ ಶೇ. ೪೮.೯೨ (೨೦೦೧). ಯಾವ ವೃತ್ತಿಯಲ್ಲಿ ಕೂಲಿ ಕಡಿಮೆಯಿರುತ್ತದೋ ಮತ್ತು ಯಾವುದು ಹಂಗಾಮಿಯಾಗಿರುವುದೋ ಅಲ್ಲಿ ಮಹಿಳೆಯರು ಅಧಿಕವಾಗಿರುತ್ತಾರೆ.

- ಕೃಷಿ ಕೂಲಿಕಾರರಲ್ಲಿ ಮಹಿಳೆಯರ ಪ್ರಮಾಣವು ೧೯೯೧ರಲ್ಲಿ ಸರಿಸುಮಾರು ಶೇ. ೫೦ ರಷ್ಟಿದ್ದರೆ ೨೦೦೧ರಲ್ಲಿ ಅವರ ಪ್ರಮಾಣವು ಶೇ. ೫೭.೯೧ ಕ್ಕೇರಿದೆ.

- ಅಕ್ಷರಸ್ಥರಲ್ಲಿ ಪುರುಷರ ಪ್ರಮಾಣ ಅಧಿಕವಾಗಿದ್ದರೆ ಅನಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿದೆ.

ಈ ಬಗೆಯಲ್ಲಿ ಅಭಿವೃದ್ಧಿಯು ಮಹಿಳೆಯರಿಗೆ ಪ್ರತಿಕೂಲವಾಗಿದೆ. ಆದರೆ ಪಂಚ ವಾರ್ಷಿಕ ಯೋಜನೆಗಳಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಮಹತ್ವದ್ದೆನ್ನಬಹುದಾದ ಕಾರ್ಯಯೋಜನೆ ಕಂಡುಬರುವುದಿಲ್ಲ. ಅಭಿವೃದ್ಧಿಯು ರಾಜ್ಯದಲ್ಲಿ ಪುರುಷಶಾಹಿಯಿಂದ ಮೆರೆಯುತ್ತಿದೆ ಎಂಬುದಕ್ಕೆ ೨೦೦೯ರಲ್ಲಿ ರಾಜ್ಯದ ಸಚಿವಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿಲ್ಲದಿರುವುದು ನಿದರ್ಶನವಾಗಿದೆ. ಮಹಿಳೆಯರು ರಾಜ್ಯದಲ್ಲಿ ಎಂತಹ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ ಎಂದರೆ ರಾಜ್ಯ ಮಹಿಳಾ ಆಯೋಗವು ಮುಖ್ಯಸ್ಥರಿಲ್ಲದೆ ನಡೆದಿದೆ (೨೦೦೭ - ೨೦೧೦). ಇದು ಕೇವಲ ತಾತ್ಕಾಲಿಕವಾದ ಒಂದು ಅಪವಾದವೆಂದು ಯಾರಾದರೂ ಹೇಳಬಹುದು. ಆದರೆ ಇಂತಹ ಸೂಕ್ಷ್ಮಸಂಗತಿಗಳು ಆಡಳಿತ - ಅಭಿವೃದ್ಧಿಯ ಮೂಲದಲ್ಲಿ ಕೆಲಸ ಮಾಡುತ್ತಿರುವವರ ಮನೋಭಾವವನ್ನು ಸೂಚಿಸುತ್ತವೆ. ಲಿಂಗ ಸಮಾನತೆ ಅಥವಾ ಮಹಿಳೆಯರ ಸಬಲೀಕರಣವೆಂಬುದು ಅಭಿವೃದ್ಧಿಯೊಂದಿಗೆ ಸಹಜವಾಗಿ ಸಂಭವಿಸುವ ಸಂಗತಿಗಳಲ್ಲ. ಅದನ್ನು ನಾವು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಯೋಚಿಸಬೇಕಾಗುತ್ತದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕನಿಷ್ಠ ಶೇ.೩೩ ರಷ್ಟು ಬಂಡವಾಳವನ್ನು ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೀಡಲಿಡಬೇಕಾಗುತ್ತದೆ.

ಸರ್ಕಾರವು ಜಾರಿಗೊಳಿಸುವ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಿಂದ ಮಹಿಳೆಯರ ಸ್ಥಿತಿಗತಿ ಉತ್ತಮವಾಗಬಹುದು. ಆದರೆ ಸಮಾಜದಲ್ಲಿ ಮತ್ತು ಪುರುಷರಿಗೆ ಸಾಪೇಕ್ಷವಾಗಿ ಮಹಿಳೆಯರ ಸ್ಥಾನಮಾನವು ಉತ್ತಮವಾಗಲಿಕ್ಕಿಲ್ಲ. ಏಕೆಂದರೆ ಸ್ಥಿತಿಗತಿಯೆನ್ನುವುದು ಸಾಪೇಕ್ಷವಾದುದು. ಆದರೆ ಸ್ಥಾನಮಾನವೆನ್ನುವುದು ಸಂಬಂಧವಾದಿ ಸಂಗತಿಯಾಗಿದೆ. ಇದು ಅಧಿಕಾರಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ಉದಾಹರಣೆಗೆ ಮಹಳೆಯರಿಗೆ ಶಿಕ್ಷಣ ಮುಖ್ಯ. ಆದರೆ ಶಿಕ್ಷಣದಿಂದ ಲಿಂಗಸಮಾನತೆ ಅಥವಾ ಮಹಿಳೆಯರ ಸ್ವಾಯತ್ತತೆ ಸಾಧ್ಯವಾಗುವುದಿಲ್ಲ. ಮನೆಯ ಹೊರಗೆ ಉದ್ಯೋಗ ದೊರೆತು ಬಿಟ್ಟರೆ ಮಹಿಳೆಗೆ ವಿಮೋಚನೆ ದೊರೆಯುತ್ತದೆ ಎಂಬುದೂ ಸರಿಯಲ್ಲ. ಮಹಿಳೆಯರು ಮತ್ತು ಪುರುಷರ ನಡುವಿನ ಅಧಿಕಾರ ಸಂಬಂಧವನ್ನು ಬದಲಾಯಿಸುವ ದಿಶೆಯಲ್ಲಿ ತೆಗೆದುಕೊಳ್ಳುವ ಕ್ರಮಗಳು ತುಂಬಾ ಮುಖ್ಯವಾಗುತ್ತವೆ. ಉದಾಹರಣೆಗೆ ಆಸ್ತಿ ಹಕ್ಕು, ಕುಟುಂಬದಲ್ಲಿ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಹಭಾಗಿತ್ವ, ಗೃಹವಾರ್ತೆಯನ್ನು ಪುರುಷರೊಂದಿಗೆ ಹಂಚಿಕೊಳ್ಳುವುದು, ಲಿಂಗ ಸಂಬಂಧಿ ಶ್ರಮ ವಿಭಜನೆಯನ್ನು ತಿರಸ್ಕರಿಸುವುದು ಮುಂತಾದವು ಮಹಿಳೆಯರ ಬದುಕಿನ ದೃಷ್ಟಿಯಿಂದ ಮುಖ್ಯವಾಗುತ್ತವೆ.

ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯರ ಸಂಘರ್ಷಣಾತ್ಮಕ ಸಂಗತಿಗಳು ಬಗ್ಗೆ ಯಾವುದೇ ಚಿಂತನೆ ನಡೆಲಿಲ್ಲ. ಲಿಂಗ ಸಂಬಂಧಗಳ ದೃಷ್ಟಿಯಿಂದ ನಮ್ಮ ಯೋಜನೆಗಳು ಲಿಂಗ ನಿರಪೇಕ್ಷವಾಗಿವೆ. ಅವುಗಳನ್ನು ಲಿಂಗ ಸ್ಪಂದಿಯನ್ನಾಗಿ ಮಾಡುವುದರ ಬಗ್ಗೆ ನಾವು ಯೋಚಿಸಬೇಕಾಗಿದೆ.

**ಮಾನವ ಅಭಿವೃದ್ಧಿ ವೈಫಲ್ಯಗಳು**

ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳಲ್ಲಿ ಅಗತ್ಯವಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯಗಳ ವರ್ಧನೆಯನ್ನು ಅಮರ್ತಸೆನ್ ಅಭಿವೃದ್ಧಿಯೆಂದು ನಿರ್ವಚಿಸಿದ್ದಾರೆ. ಕರ್ನಾಟಕದಲ್ಲಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯದಿಂದ ವಂಚಿತವಾದ ೬೨ ಲಕ್ಷ ಭೂರಹಿತ ಕೃಷಿ ಕೂಲಿಕಾರರಿದ್ದಾರೆ. ಇವರ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತ ಎಲ್ಲವೂ ಆತಂಕಕಾರಿ ಸ್ಥಿತಿಯಲ್ಲಿವೆ. ಈ ೬೨ ಲಕ್ಷ ಭೂರಹಿತ ಕೃಷಿಕೂಲಿಕಾರರಲ್ಲಿ ಪರಿಶಿಷ್ಟ ಜಾತಿಯವರ ಜಾತಿಯವರ ಪ್ರಮಾಣ ಶೇ. ೨೭.೮೯ ಮತ್ತು ಪರಿಶಿಷ್ಟ ಪಂಗಡದವರ ಪ್ರಮಾಣ ಶೇ. ೧೧.೮೩. ರಾಜ್ಯದ ಜನಸಂಖ್ಯೆಯಲ್ಲಿ ಒಟ್ಟು ಪರಿಶಿಷ್ಟರ (ಪ.ಜಾ.+ಪ.ಪಂ) ಪ್ರಮಾಣ ಶೇ. ೨೨.೯೧ ರಷ್ಟಾದರೆ ಕೂಲಿಕಾರರಲ್ಲಿ ಅವರ ಪ್ರಮಾಣ ಶೇ. ૩૯.૭૦.

ಮಾನವ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವವರೆಂದರೆ ಪರಿಶಿಷ್ಟರಾಗಿದ್ದಾರೆ (ಪ.ಜಾ.+ಪ.ಪಂ.) ರಾಜ್ಯದಲ್ಲಿ ಒಟ್ಟು ಕೂಲಿಕಾರರ ಸಂಖ್ಯೆ ೬೨ ಲಕ್ಷವಾದರೆ ಪರಿಶಿಷ್ಟ ಕೂಲಿಕಾರರ ಸಂಖ್ಯೆ ೧೪.೭೪ ಲಕ್ಷ. ಇವರಿಗೆ ಹೊಟ್ಟೆ ಬಟ್ಟೆ ಬದುಕೇ ಕಷ್ಟಕರವಾಗಿರುವುದರಿಂದ ಅವರು ಶಿಕ್ಷಣ ಪಡದುಕೊಳ್ಳುವಲ್ಲಿ ತೀವ್ರ ಹಿಂದುಳಿದಿದ್ದಾರೆ ಮತ್ತು ಆರೋಗ್ಯದ ಬಗ್ಗೆ ಅವರಿಗೆ ಚಿಂತಿಸಲೂ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾರೆ.

ರಾಜ್ಯದ ೬೨ ಲಕ್ಷ ದಿನಗೂಲಿ ದುಡಿಮೆಗಾರರು ಆಹಾರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಆರೋಗ್ಯ ಕಾರ್ಯಕ್ರಮವು ರೋಗ ನಿರ್ದಿಷ್ಟವಾಗುತ್ತಿರುವುದರಿಂದ ಸಾರ್ವತ್ರಿಕ ಪ್ರಾಥಮಿಕ ಆರೋಗ್ಯ ಸೇವೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಒಂದೊಂದು ರೋಗಕ್ಕೆ ಒಂದೊಂದು ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ. ಇದು ಬೇಕು. ಆದರೆ ಏಕೀಕೃತವಾದ ಆರೋಗ್ಯ ಸೇವೆಯನ್ನು ಒಂದು ನೆಲೆಯಲ್ಲಿ ಕೊಡುವುದರಿಂದ ಬಡವರಿಗೆ ಅನುಕೂಲವಾಗುತ್ತದೆ. ಯೋಜನೆಗಳಲ್ಲಿ ಮಾನವ ಅಭಿವೃದ್ಧಿ ಸೂಚಿಗಳ ನಿರ್ವಹಣೆಗೆ ಹೆಚ್ಚಿನ ಗಮನ ನೀಡಬೇಕಾಗಿದೆ.

**ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನ**

ಆರಂಭದ ಪಂಚವಾರ್ಷಿಕ ಯೋಜನೆಯಿಂದಲೂ ಪ್ರಾದೇಶಿಕವಾಗಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಮತೋಲನವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಾ ಬರಲಾಗಿದೆ. ಹಿಂದುಳಿದ ಪ್ರದೇಶ / ಜಿಲ್ಲೆಗಳ ಅಭಿವೃದ್ಧಿಗಾಗಿ ವಿಶೇಷ ಮಂಡಳಿಗಳನ್ನು ಸರ್ಕಾರವು ರಚಿಸಿದೆ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಹಣಕಾಸು ವಿನಿಯೋಗವು ಜಿಲ್ಲೆಗಳ ಹಿಂದುಳಿದಿರುವಿಕೆಯನ್ನು ಆಧರಿಸಿ ನೀಡಲಾಗುತ್ತಿದೆ. ಈ ಸಮಸ್ಯೆಯ ಅಧ್ಯಯನಕ್ಕಾಗಿ ಸರ್ಕಾರವು ನೇಮಿಸಿದ್ದ ಸಮಿತಿಯು ೨೦೦೨ ರಲ್ಲಿ ತನ್ನ ಬೃಹತ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಪ್ರಾದೇಶಿಕ ಅಸಮಾನತೆಯೆನ್ನುವುದು ಕರ್ನಾಟಕ ರಾಜ್ಯದ ಹುಟ್ಟಿನೊಂದಿಗೆ ಬೆಳೆದು ಕೊಂಡು ಬರುತ್ತಿರುವ ಬಾಲಗ್ರಹ ಪೀಡೆಯಾಗಿದೆ. ರಾಜ್ಯದ ೨೭ ಜಿಲ್ಲೆಗಳ ಪೈಕಿ ಗುಲಬರ್ಗಾ ವಿಭಾಗದ ಐದು ಹಾಗೂ ಬೆಳಗಾವಿ ವಿಭಾಗದ ಎರಡು - ಒಟ್ಟು ಏಳು ಜಿಲ್ಲೆಗಳು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿರುವುದನ್ನು ಅನೇಕ ಅಧ್ಯಯನಗಳು ಹಾಗೂ ಸರ್ಕಾರದ ವರದಿಗಳು ದೃಢಪಡಿಸಿವೆ.

ಪಂಚವಾರ್ಷಿಕ ಯೋಜನೆಗಳಲ್ಲಿ ತೀವ್ರ ಪ್ರಯತ್ನ ನಡೆದರೂ ಅಸಮಾನತೆಯು ಮುಂದುವರಿದಿದೆ. ಈ ಬಗ್ಗೆ ತುಂಬಾ ಗಂಭೀರವಾಗಿ ಯೋಜಿಸಬೇಕಾಗಿದೆ. ಏಕೀಕರಣಕ್ಕಾಗಿ ಹೋರಾಟ ನಡೆಯುವ ಸಂದರ್ಭದಲ್ಲಿ ಇಂತಹ ಸಮಸ್ಯೆಯನ್ನು ವಿದ್ವಾಂಸರು ಗುರುತಿಸಿದ್ದರು.

ಹೈದರಾಬಾದ್ - ಕರ್ನಾಟಕ ಪ್ರದೇಶದ ಬೀದರ್, ಕಲಬುರ್ಗಿ, ರಾಯಚೂರು ಮತ್ತು ಕೊಪ್ಪಳ, ಬೆಳಗಾವಿ ವಿಭಾಗದ ಬಾಗಲಕೋಟೆ ಮತ್ತು ಬಿಜಾಪುರ ಹಾಗೂ ಹಿಂದಿನ ಮದರಾಸು ಪ್ರಾಂತದ ಭಾಗವಾಗಿದ್ದ ಬಳ್ಳಾರಿ - ಇವು ಅತ್ಯಂತ ಹಿಂದುಳಿದಿರುವ ಜಿಲ್ಲೆಗಳು. ಈ ಜಿಲ್ಲೆಗಳ ಹಿಂದುಳಿದಿರುವಿಕೆಗೆ ಅನೇಕ ಕಾರಣಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಮಲತಾಯಿ ಧೋರಣೆಯನ್ನು ಇದಕ್ಕೆ ಕಾರಣವನ್ನಾಗಿ ಮಾಡಲಾಗುತ್ತಿದೆ. ಇದರಲ್ಲಿ ಹುರುಳಿದೆಯೆಂದು ಹೇಳಲು ಸಾಧ್ಯವಿಲ್ಲ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು. ಬಡವರು, ದುರ್ಬಲರು, ದಲಿತರು, ಹಿಂದುಳಿದ ಪ್ರದೇಶ - ಇವುಗಳ ಬಗ್ಗೆ ಸರ್ಕಾರಗಳು ಆದ್ಯತೆ ನೀಡುವುದು ಕಡಿಮೆ. ಏಕೆಂದರೆ ಸರ್ಕಾರಕ್ಕೆ ಎದ್ದು ಕಾಣುವಂತಹ ಫಲಿತಾಂಶ ನೀಡಬಲ್ಲ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಆಸಕ್ತಿ ಇರುತ್ತದೆ. ಹಿಂದುಳಿದ ಪ್ರದೇಶಗಳ ಮೇಲೆ ಬಂಡವಾಳ ತೊಡಗಿಸುವುದರಿಂದ ತಕ್ಷಣದ ಪ್ರತಿಫಲ ಸಾಧ್ಯವಿಲ್ಲ. ಈ ಕಾರಣದಿಂದ ಸರ್ಕಾರಗಳು ಈ ವಿಷಯಗಳಲ್ಲಿ ಒಂದು ಬಗೆಯ ಔದಾಸೀನ್ಯ ಭಾವ ತಳೆಯುತ್ತವೆ.

ಆದರೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಆಶ್ವಾಸನೆಗಳ, ಭರವಸೆಗಳ ಮಹಾಪುರ ಹರಿಯುತ್ತದೆ. ಡಾ. ಡಿ.ಎಂ. ನಂಜುಂಡಪ್ಪ ವರದಿಯನ್ನು ಜಪದಂತೆ ಜಪಿಸಲಾಗುತ್ತಿದೆ. ಆದರೆ ನಿರ್ದಿಷ್ಟವಾಗಿ ಒಂದೇ ಒಂದು ಕಾರ್ಯಕ್ರಮವನ್ನು ಸರ್ಕಾರವು ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಬಡವರ ನೆಲೆಯಿಂದ ಜಾರಿಗೊಳಿಸಲಿಲ್ಲ.

ಅಕ್ಷರ ದಾಸೋಹ ಕಾರ್ಯಕ್ರಮವನ್ನು ಮೊದಲು ಹಿಂದುಳಿದ ಜಿಲ್ಲೆಗಳಲ್ಲಿ ಆರಂಭಿಸಲಾಯಿತು. ಅದರ ಯಶಸ್ವಿನಿಂದ ಪ್ರಭಾವಿತಗೊಂಡ ಸರ್ಕಾರವು ಅದೇ ಯೋಜನೆಯನ್ನು ರಾಜ್ಯದ ಎಲ್ಲ ಭಾಗಗಳಿಗೂ ವಿಸ್ತರಿಸಿತು. ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ, ಶೇ. ೫೦ ರಷ್ಟು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿರುವ ಜಿಲ್ಲೆಗಳಲ್ಲಿ, ಸಾಕ್ಷರತೆ ಶೇ. ೪೫ ದಾಟದಿರುವ ತಾಲ್ಲೂಕುಗಳಲ್ಲಿ ಅದನ್ನು ಹೆಚ್ಚು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಬೇಕೆಂಬ ಜ್ಞಾನ ಸರ್ಕಾರಕ್ಕೆ ಹೊಳೆಯಲಿಲ್ಲ. ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಶೇ.೧೦ ರಷ್ಟಿರುವ ಭಾಗಗಳಲ್ಲಿ ಮಧ್ಯಾಹ್ನದ ಊಟದ ಸೌಲಭ್ಯವಿದೆ. ಅದೇ ಸೌಲಭ್ಯ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಶೇ. ೫೦ ರಷ್ಟಿರುವ ಭಾಗದಲ್ಲೂ ಆಚರಣೆಯಲ್ಲಿದೆ. ಹಿಂದುಳಿದ ಜಿಲ್ಲೆ - ತಾಲ್ಲೂಕುಗಳಲ್ಲಿ ಎರಡು ಹೊತ್ತು ಊಟ ಒದಗಿಸುವ ಬಗ್ಗೆ ಸರ್ಕಾರವು ಯೋಚಿಸಬಹುದಿತ್ತು.

**ಕೃಷಿ ಕೂಲಿಕಾರರು**

ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಕೂಲಿಕಾರರ ಪ್ರಮಾಣ ಶೇ. ೨೬.೪೫. ಆದರೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಅದು ಶೇ. ೧೯.೩೭ ರಷ್ಟಿದೆ. ಕಲಬುರ್ಗಿ ವಿಭಾಗದಲ್ಲಿ ಅದರ ಪ್ರಮಾಣ ಶೇ.೪೦.೫೯.

ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಸಾಗುವಳಿದಾರರ ಸಂಖ್ಯೆಯು ಕೂಲಿಕಾರರ ಸಂಖ್ಯೆಗಿಂತ ಅಧಿಕವಿದೆ. ಆದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಇದು ತಿರುವು ಮುರುವಾಗಿದೆ.

ಭೂರಹಿತ ಕೃಷಿ ಕೂಲಿಕಾರರು ಒಂದು ಪ್ರದೇಶದಲ್ಲಿ ಅಗಾಧವಾಗಿರುವುದಕ್ಕೂ ಮತ್ತು ಅಲ್ಲಿ ಸಾಕ್ಷರತೆ ಕೆಳಮಟ್ಟದಲ್ಲಿರುವುದಕ್ಕೂ ಸಂಬಂಧವಿರುತ್ತದೆ. ಇಂತಹ ಪ್ರದೇಶಗಳು ಸಹಜವಾಗಿ ವಲಸೆ ಪ್ರವೃತ್ತಿ ಹೊಂದಿರುತ್ತವೆ. ಅಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಅಧಿಕವಾಗಿರುತ್ತದೆ. ಈ ಪ್ರದೇಶಗಳು ಸಾಮಾನ್ಯವಾಗಿ ಒಣಭೂಮಿ ಬೇಸಾಯ ಹೊಂದಿರುತ್ತವೆ.

ಆದ್ದರಿಂದ ಬಡವರನ್ನು, ದಲಿತರನ್ನು, ಮಹಿಳೆಯರನ್ನು ಮುಖ್ಯಧಾತುವನ್ನಾಗಿ ಮಾಡಿಕೊಂಡು ಅಭಿವೃದ್ಧಿಯನ್ನು ನಿರ್ವಹಿಸಿದಾಗ ಮಾತ್ರ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವುದು ಸಾಧ್ಯ. ನಂಜುಂಡಪ್ಪ ವರದಿಯನ್ನು ಜಪ ಮಾಡಿಬಿಟ್ಟರೆ ಪ್ರಾದೇಶಿಕ ಅಸಮಾನತೆ ಬಗೆಹರಿಯುವುದಿಲ್ಲ.

ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಆದರೆ ಅದರ ಪರಿಹಾರಕ್ಕೆ ಸಮರ್ಪಕ ಕಾರ್ಯಕ್ರಮಗಳನ್ನು ಯೋಜನೆಗಳಲ್ಲಿ ರೂಪಿಸುವುದು ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಅಭಿವೃದ್ಧಿ ಯೋಜನೆಗಳ ಬಹುದೊಡ್ಡ ವೈಫಲ್ಯವೆಂದರೆ ಇದಾಗಿದೆ. ಈ ಬಗ್ಗೆ ತುಂಬಾ ಗಂಭೀರವಾಗಿ ಆಲೋಚಿಸುವ ಅಗತ್ಯವಿದೆ. ಈ ಸಮಸ್ಯೆಯನ್ನು ೫೦ ವರ್ಷಗಳ ನಂತರವೂ ಬಗೆಹರಿಸಿಕೊಂಡಿಲ್ಲವೆಂದರೆ ಸಮಸ್ಯೆ ಸಂಕೀರ್ಣತೆಯನ್ನು ಊಹಿಸಿಕೊಳ್ಳಬಹುದು.

**ಸಂಗ್ರಹ**

ಈ ಭಾಗದಲ್ಲಿ ಎರಡು ಸಂಗತಿಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಮೊದಲು ಇಲ್ಲಿ ಅಧ್ಯಯನದ ಮುಖ್ಯ ತಥ್ಯಗಳನ್ನು ಗುರುತಿಸಲಾಗಿದೆ. ಕೊನೆಯ ಭಾಗದಲ್ಲಿ ಅಭಿವೃದ್ಧಿಯ ಹಾಗೂ ಯೋಜನೆಯ ಮುನ್ನೋಟವನ್ನು ಕುರಿತಂತೆ ಕೆಲವು ಸಂಗತಿಗಳನ್ನು ಚರ್ಚಿಸಲಾಗಿದೆ. ಕರ್ನಾಟಕದ ಮುಂದಿನ ಅಭಿವೃದ್ಧಿಯ ಪಥವನ್ನು ಗುರಿತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

**ಮುಖ್ಯ ತಥ್ಯಗಳು**

೧ ಕರ್ನಾಟಕದ ಅಭಿವೃದ್ಧಿಯ ಅಧ್ಯಯನದಿಂದ ರೂಪಿಸಬಹುದಾದೊಂದು ಪ್ರಮೇಯವೆಂದರೆ ಅದು ಎಂ.ಎನ್.ಶ್ರೀನಿವಾಸ್, ಜೇಮ್ಸ್ ಮೇನರ್ ಮುಂತಾದವರು ಗುರುತಿಸಿರುವ 'ಮಧ್ಯಮ ಗತಿ' - 'ಮಧ್ಯಮ ಸ್ಥಿತಿ' ಸ್ವರೂಪಕ್ಕೆ ಅನುಗುಣವಾಗಿ ಅಲ್ಲಿ ಅಭಿವೃದ್ಧಿ ನಡೆದಿದೆ ಎಂಬುದಾಗಿದೆ. 'ಆರಕ್ಕೆ ಏಳಲಿಲ್ಲ - ಮೂರಕ್ಕೆ ಬೀಳಲಿಲ್ಲ' ಎಂಬಂತೆ ಅದರ ಅಭಿವೃದ್ಧಿ ನಡೆದಿದೆ.

೨. ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಅದು ಯಶಸ್ವಿಯಾಗಿದೆ. ಕೇರಳ, ತಮಿಳುನಾಡುಗಳ ನಂತರ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕವು ಮೂರನೆಯ ಸ್ಥಾನ ಪಡೆಯಬಲ್ಲದಾಗಿದೆ.

೩. ಕರ್ನಾಟಕದ ಅಭಿವೃದ್ಧಿಯ ಅತ್ಯಂತ ದುರ್ಬಲವಾದ ಅಂಶವೆಂದರೆ ಕೃಷಿ ವಲಯ. ಈ ವಲಯವನ್ನು ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಶೇ. ೫೫ ರಷ್ಟು (೧೩೧ ಲಕ್ಷ) ಇದನ್ನು ಅವಲಂಬಿಸಿಕೊಂಡಿದ್ದಾರೆ. ಆದರೆ ಅದನ್ನು ಸದೃಢವಾದ ನೆಲೆಯಲ್ಲಿ ಅಭಿವೃದ್ಧಿಪಿಸುವುದು ನಮಗೆ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಒಣಭೂಮಿ ಬೇಸಾಯವನ್ನು ನಾವು ಅಲಕ್ಷ್ಯ ಮಾಡಿದ್ದು ಎಂದು ಹೇಳಬಹುದು. ನೀರಾವರಿ ಯೋಜನೆಗಳ ಮೇಲೆ ತೊಡಗಿಸಿದ ಬಂಡವಾಳದಲ್ಲಿ ಅರ್ಧದಷ್ಟಾನ್ನಾದರೂ ಒಣಭೂಮಿ ಬೇಸಾಯದ ಮೇಲೆ ತೊಡಗಿಸಿದ್ದರೆ ನಮ್ಮ ಕೃಷಿ ಕ್ಷೇತ್ರದ ಚಿತ್ರವು ಬೇರೆಯೇ ಆಗಿಬಿಡುತ್ತಿತ್ತು. ಹಣ್ಣು, ಹೂವು, ತರಕಾರಿ ಮುಂತಾದವುಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದರ ಬಗ್ಗೆ ಯೋಜನೆಗಳಲ್ಲಿ ಪ್ರಯತ್ನ ನಡೆಯಲಿಲ್ಲ. ಈ ದಿಶೆಯಲ್ಲಿ ನಾವು ಯೋಚಿಸ ಬೇಕಾಗಿದೆ.

೪. ಮೊದಲ ಮೂರು - ನಾಲ್ಕು ಯೋಜನೆಗಳಲ್ಲಿ 'ಸಾಮಾಜಿಕ ಸೇವೆ'ಯನ್ನು ನಿರ್ಲಕ್ಷಿಸಲಾಗಿತ್ತು. ಆದರೆ ೬ - ೭ನೆಯ ಯೋಜನೆಗಳು ನಂತರ ಸಾಮಾಜಿಕ ಸೇವೆಗೆ ಆದ್ಯತೆ ದೊರೆಯತೊಡಗಿತು. ಕರ್ನಾಟಕದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಇದೊಂದು ಮಹತ್ವ ಬದಲಾವಣೆಯೆಂದು ಹೇಳಬಹುದು.

೫. ರಾಜ್ಯವು ೧೯೮೭ರ ನಂತರ ವಿಕೇಂದ್ರೀಕೃತ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಆರಂಭಿಸಿತು. ಎಂಬತ್ತು ಮತ್ತು ತೊಂಬತ್ತರ ದಶಕಗಳಲ್ಲಿ ರಾಜ್ಯವು ಕ್ರಾಂತಿಕಾರಕವಾದ ರೀತಿಯಲ್ಲಿ ಅಭಿವೃದ್ಧಿಯನ್ನು ತಳಮಟ್ಟದಿಂದ ರೂಪಿಸುವ ಕ್ರಿಯೆಗೆ ಮೂರ್ತ ರೂಪ ನೀಡಲಾಯಿತು. ದುರದೃಷ್ಟದ ಸಂಗತಿಯೆಂದರೆ ಇಂದು ಪಂಚಾಯತ್‌ರಾಜ್‌ವ್ಯವಸ್ಥೆಯು ರಾಜ್ಯದಲ್ಲಿ ಒಂದು ರೀತಿಯ 'ಹಿನ್ನಡೆ'ಗೆ ಒಳಗಾಗಿದೆ. ರಾಜ್ಯ - ರಾಷ್ಟ್ರಮಟ್ಟದ ಉನ್ನತ ಸಂಸ್ಥೆಗಳ ಜನಪ್ರತಿನಿಧಿಗಳು ಅಟ್ಟಹಾಸವು ಜೋರಿನಿಂದ ನಡೆಸಿದೆ.

೬. ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕದ ಸಾಧನೆಯು ಕೇರಳ ಮತ್ತು ತಮಿಳು ನಾಡುಗಳಿಗೆ ಹೋಲಿಸಿದರೆ ತೀರಾ ದುರ್ಬಲವಾಗಿದೆ. ಅದೇ ರೀತಿ ಲಿಂಗ ಸಂಬಂಧಗಳನ್ನು ಕುರಿತಂತೆಯೂ ರಾಜ್ಯದ ಸಾಧನೆ ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇಂದು ೨೦೦೬ ರಲ್ಲಿ ರಾಜ್ಯದ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿಲ್ಲ. ರಾಜ್ಯ ಮಹಿಳಾ ಆಯೋಗದ ಮುಖ್ಯಸ್ಥರ ಸ್ಥಾನ ಖಾಲಿ ಇದೆ. ಮಾನವ ಅಭಿವೃದ್ಧಿ ಮತ್ತು ಲಿಂಗ ಸಂಬಂಧಗಳ ಬಗ್ಗೆ ಹೆಚ್ಚಿನ ಗಮನನೀಡುವ ಅಗತ್ಯವಿದೆ.

೭. ಪ್ರಾದೇಶಿಕ ಅಸಮಾನತೆ ಬಗ್ಗೆ ಜನಜಾಗೃತಿ ಉಂಟಾಗಿದೆ. ಸರ್ಕಾರವು ಅದನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಇಷ್ಟಾದರೂ ಬೆಂಗಳೂರು ಬ್ರಹ್ಮರಾಕ್ಷಸನಂತೆ ಇಡೀ ರಾಜ್ಯವನ್ನೆ ನುಂಗುವಂತೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದರಿಂದಾಗಿ ರಾಜ್ಯದ ಒಳನಾಡು ರೋಗಗ್ರಸ್ಥವಾಗಿ ಬಿಟ್ಟಿದೆ.

**ಮುನ್ನೋಟ**

ಕರ್ನಾಟಕವು ಇನ್ನು ಮುಂದೆಯೂ ತನ್ನ ಮಧ್ಯಮಗತಿ ಸ್ಥಾನದಲ್ಲೇ ಮುಂದುವರಿಯುವ ಸಾಧ್ಯತೆಯಿದೆ. ಅದರ ಮಧ್ಯಮ ಸ್ಥಿತಿಗೆ ಯಾವುದೇ ಬಗೆಯದಕ್ಕೆ ಬರುವ ಸಾಧ್ಯತೆಯಿಲ್ಲ. ಅದು ಕಳೆದ ೫೦ ವರ್ಷಗಳಲ್ಲಿ ಸಾಧಿಸಿದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಹೇಳುವುದಾದರೆ ಅದಕ್ಕೆ ಮಧ್ಯಮಗತಿಯನ್ನು ಮೀರಿ ಬೆಳೆಯುವುದು ಸಾಧ್ಯವಾಗಿಲ್ಲ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಪ್ರಾಕೃತಿಕ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಇರುವ ಅನಾನುಕೂಲತೆ. ಮಧ್ಯಮಗತಿ ಅಭಿವೃದ್ಧಿಗೆ ತನ್ನದೇ ಆದ ಕೆಲವು ಅನುಕೂಲ ಗಳಿರುತ್ತವೆ. ಬಹಳ ಮುಖ್ಯವಾಗಿ ಅದರಿಂದ ಪರಿಸರದ ಸಮತೋಲನವು ತೀವ್ರ ಹದಗೆಡುವುದಿಲ್ಲ.

ಇನ್ನು ಮುಂದೆ ರಾಜ್ಯದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಿಂದ ಮಾತ್ರ ಕರ್ನಾಟಕವು ಉನ್ನತ ಅಭಿವೃದ್ಧಿ ಸಾಧಿಸಿಕೊಳ್ಳಬಹುದು. ಪ್ರಾದೇಶಿಕ ಅಸಮತೋಲನವನ್ನು ರಾಜ್ಯವು ಮುಂದೆ ಸರಿಪಡಿಸಿಕೊಳ್ಳಬೇಕಾಗುತ್ತದೆ. ಇದು ರಾಜ್ಯದ ಅಭಿವೃದ್ಧಿ ಮೇಲೆ ತೀವ್ರ ಪರಿಣಾಮ ಬೀರುವ ಸಾಧ್ಯತೆಯಿದೆ.

ಲಿಂಗ ಸಂಬಂಧಗಳನ್ನು ಕುರಿತಂತೆಯೂ ಮುಂದೆ ರಾಜ್ಯವು ಹೆಚ್ಚಿನ ಸಾಧನೆಯನ್ನು ತೋರಬಹುದಾಗಿದೆ. ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ, ದುಡಿಮೆಗಾರರಲ್ಲಿ ೧/೩ ರಷ್ಟಿರುವ ಮಹಿಳೆಯರ ಕೊಡುಗೆ ರಾಜ್ಯದ ಅಭಿವೃದ್ಧಿಗೆ ಅಧಿಕಗೊಳ್ಳುವ ಸಾಧ್ಯತೆಯಿದೆ.

ವಿಕೇಂದ್ರೀಕೃತ ಯೋಜನೆಯು ತಾತ್ಕಾಲಿಕವಾಗಿ ಹಿನ್ನಡೆ ಅನುಭವಿಸುತ್ತಿದ್ದರೂ ಮುಂದೆ ಅದು ಸಬಲವಾಗುತ್ತದೆ. ಪ್ರತಿಯೊಂದು ಗ್ರಾಮವೂ ಅಭಿವೃದ್ಧಿಯ ಘಟಕವಾಗುವ ಸಾಧ್ಯತೆಯಿದೆ.

**ಆಕರ ಸೂಚಿ**


೧. ಕರ್ನಾಟಕ ಸರ್ಕಾರ ೨೦೦೫, **ಆರ್ಥಿಕ ಸಮೀಕ್ಷೆ** : ೨೦೦೪ - ೦೫, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

೨. ಕರ್ನಾಟಕ ಸರ್ಕಾರ ೨೦೦೬, **ಆರ್ಥಿಕ ಸಮೀಕ್ಷೆ** : ೨೦೦೪ - ೦೫, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

೩. ಗೌವರ್ನಮೆಂಟ್ ಆಫ್ ಮೈಸೂರು : ೧೯೭೦, **ಎಕಾನಾಮಿಕ್ ಡೆವಲಪ್‌ಮೆಂಟ್ ಆಫ್ ಮೈಸೂರು : ೧೯೫೬ – ೧೯೬೯**, ಬ್ಯೂರೋ ಆಫ್ ಇಕಾನಾಮಿಕ್ಸ್ ಆಂಡ್ ಸ್ಟಾಟಿಸ್ಟಿಕ್ಸ್, ಬೆಂಗಳೂರು.

೪. ಗೌವರ್ನಮೆಂಟ್ ಆಫ್ ಮೈಸೂರು : ೧೯೮೦, **ಡ್ರಾಫ್ಟ್ ಸಿಕ್ಸ್ಥ್ ಫೈ ಇಯರ್ ಪ್ಲಾನ್ : ೧೯೮೦ – ೧೯೫೮**, ಯೋಜನಾ ಇಲಾಖೆ, ಬೆಂಗಳೂರು.

೫. ಗೌವರ್ನಮೆಂಟ್ ಆಫ್ ಮೈಸೂರು : ೧೯೯೦, **ಡ್ರಾಫ್ಟ್ ಸಿಕ್ಸ್ಥ್ ಫೈ ಇಯರ್ ಪ್ಲಾನ್ : ೧೯೯೦ – ೧೯೯೫**, ಯೋಜನಾ ಇಲಾಖೆ, ಬೆಂಗಳೂರು.

೬. ಗೌವರ್ನಮೆಂಟ್ ಆಫ್ ಕರ್ನಾಟಕ : ೧೯೯೭, **ನೈನ್ಥ್ ಪ್ಲಾನ್: ೧೯೯೭ – ೨೦೦೨**, ಯೋಜನಾ ಇಲಾಖೆ, ಬೆಂಗಳೂರು.

೭. ಜೇಮ್ಸ್‌ಮೇನರ್, ೧೯೯೭ 'ಕರ್ನಾಟಕ : ಕಾಸ್ಟ್, ಕ್ಲಾಸ್, ಡಾಮಿನೆನ್ಸ್‌ಆಂಡ್ ಪಾಲಿಟಿಕ್ಸ್ ಇನ್ ಎ ಕೊಹೆಸಿವ್‌ಸೊಸೈಟಿ' ಇಲ್ಲಿ ಸುದಿಪ್ತ ಕವಿರಾಜ್ (ಸಂ.) **ಪಾಲಿಟಿಕ್ಸ್ ಇನ್ ಇಂಡಿಯಾ**, ಆರ್ಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು. ೨೬೨ - ೨೭೩

೮. ಮಾರ್ಟಿನ್‌ರವೇಲಿಯನ್, ೨೦೦೦ 'ವಾಟ್‌ಇಸ್ ನೀಡೆಡ್ ಫಾರ್ ಎ ಮೋರ್ ಪ್ರೊ ಪೂರ್ ಗ್ರೋಥ್ ಪ್ರೊಸಸ್ ಇನ್ ಇಂಡಿಯಾ?', **ಎಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕಿ,** ಮಾರ್ಚ್೨೫.

೯. ಮಿಹಿರ್ ಶಹಾ ಮತ್ತ ಇತರರು, ೧೯೯೮, **ಇಂಡಿಯಾಸ್ ಡ್ರೈ ಲ್ಯಾಂಡ್ಸ್,** ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

೧೦. ವಿನೋದ್ ವ್ಯಾಸುಲು ೧೯೯೧, **ಫ್ಯಾಸೆಟ್ಸ್ ಆಫ್ ಡೆವಲಪ್‌ಮೆಂಟ್ : ಸ್ಟಡೀಸ್ ಇನ್ ಕರ್ನಾಟಕ,** ರಾವತ್ ಪಬ್ಲಿಕೇಶನ್ಸ್, ಜೈಪುರ್

೧೧. ಶೆನ್‌ಗೆನ್ ಫ್ಯಾನ್, ಪೀಟರ್ ಹೆಜೆಲ್ ೨೦೦೦, 'ಶುಡ್ ಡೆವಲಪಿಂಗ್ ಕಂಟ್ರೀಸ್ ಇನ್ ವೆಸ್ಟ್ ಮೋರ್ ಇನ್ ಲೆಸ್ ಫೇವರ್ಡ್ ಏರಿಯಾಸ್? : ಆನ್ ಎಂಫೆರಿಕಲ್ ಅನಾಲಿಸಿಸ್ ಆಫ್ ರೂರಲ್ ಇಂಡಿಡಯಾ', **ಎಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,** ಏಪ್ರಿಲ್ ೨೨.

೧೨. ಶ್ರೀನಿವಾಸ್ ಎಂ.ಎನ್., ಪಾನಿನಿ ಎಂ.ಎನ್., ೧೯೪೪, 'ಪಾಲಿಟಿಕ್ಸ್‌ಆಂಡ್ ಸೊಸೈಟಿ ಇನ್ ಕರ್ನಾಟಕ', **ಎಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,** ಜನವರಿ ೧೪, ಪುಟ.೬೯ - ೭೫

೧೩. ಸೆನ್ಸ್‌ಸ್ ಆಫ್ ಇಂಡಿಯಾ : ೧೯೯೧, ಸೀರಿಸ್ - ೧೧, ಕರ್ನಾಟಕ ಪಾರ್ಟ್ - ೧೧ಬಿ **ಪ್ರೈಮರಿ ಸೆನ್ಸ್‌ಸ್ ಅಬ್‌ಸ್ಟ್ರಾಕ್ಟ್:** ಜನರಲ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸ್‌ಸ್ ಆಫರೇಶನ್, ಕರ್ನಾಟಕ

೧೪. ಸೆನ್ಸ್‌ಸ್ ಆಫ್ ಇಂಡಿಯಾ : ೧೯೯೧, ಸೀರಿಸ್ - ೧೧, ಕರ್ನಾಟಕ ಪಾರ್ಟ್ - ೧೧ಬಿ **ಪ್ರೈಮರಿ ಸೆನ್ಸ್‌ಸ್ ಅಬ್‌ಸ್ಟ್ರಾಕ್ಟ್:** ಜನರಲ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸ್‌ಸ್ ಆಫರೇಶನ್, ಕರ್ನಾಟಕ

೧೫. ಸೆನ್ಸ್‌ಸ್ ಆಫ್ ಇಂಡಿಯಾ : ೧೯೯೧, ಸೀರಿಸ್ - ೩೦, ಕರ್ನಾಟಕ **ಪ್ರೈಮರಿ ಸೆನ್ಸ್‌ಸ್ ಅಬ್‌ಸ್ಟ್ರಾಕ್ಟ್:** ಜನರಲ್ ಪಾಪುಲೇಶನ್, ಡೈರೆಕ್ಟರೇಟ್ ಆಫ್ ಸೆನ್ಸ್‌ಸ್ ಆಫರೇಶನ್, ಕರ್ನಾಟಕ

***